ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೧೨

ಉದ್ಯೋಗಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷ್ಮಾಲಂಕಾರದೊಂದಿಗೆ

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೧೨

ಉದ್ಯೋಗಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ

ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ಪಿ. ಎಸ್. ಶೇಷಗಿರಿ ಆಚಾರ್ಯ, ಮೈಸೂರು.

ಪ್ರಕಾಶಕರು :

ತತ್ತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ಉದ್ಯೋಗಪರ್ವ -ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ಉದ್ಯೋಗಪರ್ವ

© ತತ್ತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-81807-68-2

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	XII + 542 = 554
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 425/-**
ಅನುವಾದಕರು	-	ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.
ಪ್ರಕಾಶಕರು	-	ತತ್ತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಸಂಸ್ಕೃತ ಶ್ಲೋಕ ಲಿಪ್ಯಂತರ	-	ಶ್ರೀ ಸುಬ್ಬಣ್ಣ ಬೆಂಗಳೂರು
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಎಂ. ಶರತ್ ಚಂದ್ರ, ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಮೈಸೂರು. ಮೊ : 7899779255
ಮುದ್ರಕರು	-	ವಾಗರ್ಥ, ಬೆಂಗಳೂರು
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್



ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಮನೀನ್ಮುಃ

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ-೧೨

ಉದ್ಯೋಗಪರ್ವ

ಅಧ್ಯಾಯ ಸಂ.		ಪುಟ ಸಂ.
48.	ಪಾಂಡವರ ವಚನವನ್ನು ಕೇಳಲು ಧೃತರಾಷ್ಟ್ರಾದಿಗಳ ಸಭಾಪ್ರವೇಶ. ಸಂಜಯನಿಂದ ಧೃತರಾಷ್ಟ್ರಾದಿಗಳಿಗೆ ಪಾಂಡವರ ಪ್ರತಿಸಂದೇಶದ ಕಥನ	1
49.	ಸಂಜಯನಿಂದ ಕೃಷ್ಣನ ಸಂದೇಶಕಥನ	5
50.	ಸಂಜಯನಿಂದ ಧೃತರಾಷ್ಟ್ರನನ್ನು ಕುರಿತು ಅರ್ಜುನಾದಿಗಳ ಸಂದೇಶದ ಕಥನ	11
51.	ಭೀಷ್ಮದ್ರೋಣರ ಸನ್ನಿಧಿಯಲ್ಲಿ ಧೃತರಾಷ್ಟ್ರನ ಪ್ರಶ್ನೆ. ಕರ್ಣನ ನಿಂದೆ ಮತ್ತು ಕುರುಗಳ ನಿರಾಶೆ	45
52.	ಸಂಜಯನಿಂದ ಪಾಂಡವರ ರಣೋದ್ಯೋಗಕ್ಕೆ ಮೂಲವಾದ ಬಲದ ಕಥನ	56
53.	ಭೀಮಸೇನನ ಪ್ರತಾಪವನ್ನು ನೆನೆದು ಸಂಜಯನ ಎದುರಿಗೆ ಧೃತರಾಷ್ಟ್ರನ ಪರಿಶೋಚನೆ	67
54.	ಅರ್ಜುನಾದಿಗಳ ಪ್ರತಾಪವನ್ನು ವರ್ಣಿಸಿ ಧೃತರಾಷ್ಟ್ರನಿಂದ ಸಂಧಿಗಾಗಿ ಒತ್ತಾಯ	80
55.	ಪಾಂಡವರ ಸೈನ್ಯದ ಪ್ರಾಬಲ್ಯವನ್ನು ಚಿಂತಿಸಿ ಧೃತರಾಷ್ಟ್ರನ ಶೋಕ	85
56.	ಸಂಜಯನಿಂದ ನೇರವಾಗಿ ಧೃತರಾಷ್ಟ್ರನ ನಿಂದನೆ	88
57.	ಧೃತರಾಷ್ಟ್ರನನ್ನು ಕುರಿತು ದುರ್ಯೋಧನನ ಸಮಾಧಾನವಚನಗಳು	93
58.	ಸಂಜಯನಿಂದ ದುರ್ಯೋಧನನಿಗೆ ಪಾಂಡವರ ರಣೋತ್ಸಾಹದ ವರ್ಣನೆ	107
59.	ಸಂಜಯನಿಂದ ಪಾಂಡವಸೈನ್ಯದ ಬಲಕಥನ. ಅದನ್ನು ಆಕ್ಷೇಪಿಸಿ ದುರ್ಯೋಧನನಿಂದ ತನ್ನ ಸೈನ್ಯದ ಪ್ರಶಂಸೆ	112
60.	ಧೃತರಾಷ್ಟ್ರನ ಮಾತುಗಳನ್ನು ನಿರಾಕರಿಸಿ, ದುರ್ಯೋಧನನಿಂದ ಕರ್ಣ-ದುಶ್ಶಾಸನರ ಜೊತೆಯಲ್ಲಿ ತನ್ನ ಯುದ್ಧೋತ್ಸಾಹದ ಕಥನ	125

61. ಸಂಧಿಗಾಗಿ ಹೋಗಿದ್ದ ಸಂಜಯನಿಂದ, ಧೃತರಾಷ್ಟ್ರನನ್ನು ಕುರಿತು ಉಪಪ್ಲಾವ್ಯದಲ್ಲಿ ನಡೆದ ಘಟನೆಗಳ ವರ್ಣನೆ 132

62. ದೈವಸಹಾಯವುಳ್ಳ ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳುವುದಕ್ಕೆ ಧೃತರಾಷ್ಟ್ರನ ಒತ್ತಾಯ. ದುರ್ಯೋಧನನಿಂದ ಅದನ್ನು ನಿರಾಕರಿಸಿ, ತನಗಿರುವ ದೈವಸಹಾಯದ ಮತ್ತು ಮಂತ್ರಬಲದ ಕಥನ 142

63. ಧೃತರಾಷ್ಟ್ರನನ್ನು ತಿರಸ್ಕರಿಸಿ, ಕರ್ಣನಿಂದ ಪಾಂಡವವಧೆಯ ಪ್ರತಿಜ್ಞೆ. ಭೀಷ್ಮರಿಂದ ನಿಂದಿತನಾದ ಅವನಿಂದ ಶಸ್ತ್ರನ್ಯಾಸ ಮತ್ತು ಸಭಾತ್ಯಾಗ 153

64. ಭೀಷ್ಮರು ಹೇಳಿದ ಪಾಂಡವರ ಶ್ರೇಷ್ಠತೆಯನ್ನು ಖಂಡಿಸಿದ ದುರ್ಯೋಧನನಿಂದ ಕರ್ಣಾದಿಗಳ ಸಹಾಯದಿಂದ ತಾನೊಬ್ಬನೇ ಯುದ್ಧಮಾಡುವುದಾಗಿ ಕಥನ 159

65. ಅರ್ಜುನನು ಕೃಷ್ಣನಿಂದ ರಕ್ಷಿತನಾಗಿರುವುದರಿಂದ ದುರ್ಜಯನೆಂದು ಹೇಳಿ ಧೃತರಾಷ್ಟ್ರನಿಂದ ದುರ್ಯೋಧನನಿಗೆ ಸಂಧಿಮಾಡಿಕೊಳ್ಳುವಂತೆ ಒತ್ತಾಯ 170

66. ದುರ್ಯೋಧನನ ಔದ್ಧತ್ಯದಿಂದ ರಾಜರ ನಿರ್ಗಮನ. ಸಂಜಯ ಮತ್ತು ವ್ಯಾಸರಿಂದ ಸೈನ್ಯಗಳ ಬಲಾಬಲಕಥನ 174

67. ಕೃಷ್ಣನ ಮಹಿಮೆಯನ್ನು ಹೇಳಿ, ಅವನಿಗೆ ಶರಣಾಗತನಾಗುವಂತೆ ಸಂಜಯನ ಒತ್ತಾಯ. ದುರ್ಯೋಧನನಿಂದ ಅದರ ನಿರಾಕರಣೆ ಮತ್ತು ಗಾಂಧಾರಿಯ ಉಗ್ರವಚನಗಳು 180

68. ಧೃತರಾಷ್ಟ್ರನನ್ನು ಕುರಿತು ಸಂಜಯನಿಂದ ಕೃಷ್ಣನ ನಾಮಗಳ ನಿರ್ವಚನ 185

69. ಕೃಷ್ಣನ ಆಗಮನ ವಾರ್ತೆಯನ್ನು ಕೇಳಿ ಧೃತರಾಷ್ಟ್ರನ ಹರ್ಷವಚನಗಳು 189

70. ಕೃಷ್ಣನನ್ನು ಕುರಿತು ಯುಧಿಷ್ಠಿರನಿಂದ ಯುದ್ಧಪರಿಣಾಮಗಳ ವರ್ಣನೆ 193

71. ಸಂಧಿಯನ್ನು ಸಂಪಾದಿಸಲು ಹಸ್ತಿನಪುರಕ್ಕೆ ಹೋಗಲು ಕೃಷ್ಣನ ನಿರ್ಧಾರ 212

72. ಯುಧಿಷ್ಠಿರನಿಗೆ ಯುದ್ಧಪಕ್ವವನ್ನು ಸ್ಥಿರಮಾಡಿ, ಲೋಕಸಂಶಯನಿರಾಕರಣೆ ಮಾಡಲು ಸಂಧಿಗಾಗಿ ಪ್ರಯತ್ನ ಮಾಡುವಂತೆ ಕೃಷ್ಣನ ಕಥನ 216

73. ದುರ್ಯೋಧನನ ದುರಾರಾಧ್ಯತ್ವವನ್ನು ಹೇಳಿ, ಭೀಮಸೇನನಿಂದ ಕೃಷ್ಣನನ್ನು ಕುರಿತು ಹೇಗಾದರೂ ಸಂಧಿಯನ್ನು ಸಾಧಿಸುವಂತೆ ಪ್ರಾರ್ಥನೆ 226

74. ಭೀಮಸೇನನನ್ನು ಕುರಿತು ಕೃಷ್ಣನ ಯುದ್ಧಪ್ರೋತ್ಸಾಹವಚನ 231

75. ಕೃಷ್ಣನ ಗೂಢವಾದ ಮಾತುಗಳಿಗೆ ಉತ್ತರವನ್ನು ಹೇಳಿ,
ಭೀಮಸೇನನಿಂದ ತನ್ನ ಸಾಮರ್ಥ್ಯದ ಕಥನ. 236

76. ಕೃಷ್ಣನಿಂದ ಭೀಮಸೇನನ ಮಾತುಗಳ ಅನುಮೋದನೆ 241

77. ಅರ್ಜುನನಿಂದ ಸಂಧಿ-ಯುದ್ಧಗಳೆರಡನ್ನೂ ಪ್ರಸ್ತಾಪಿಸಿ,
ಕೃಷ್ಣನ ಮನಸ್ಸಿಗೆ ತೋರಿದಂತೆ ಮಾಡಬೇಕಾಗಿ ಪ್ರಾರ್ಥನೆ 247

78. ಸುಯೋಧನನ ಜೊತೆಯಲ್ಲಿ ಸಂಧಿಯು ದುರ್ಲಭವಾದರೂ
ಯುಧಿಷ್ಠಿರನ ಮಾತಿನಂತೆ ಸಂಧಿಗಾಗಿ ತಾನು ಪ್ರಯತ್ನಪಡುವಂತೆ
ಅರ್ಜುನನನ್ನು ಕುರಿತು ಕೃಷ್ಣನ ಉತ್ತರ 252

79. ನಕುಲ-ಸಹದೇವ ಮತ್ತು ಸಾತ್ಯಕಿಯರಿಂದ ಸಂಧಿಯ
ವಿಷಯದಲ್ಲಿ ತಮ್ಮ ತಮ್ಮ ಅಭಿಪ್ರಾಯಗಳ ಕಥನ 257

80. ದ್ರೌಪದಿಯನ್ನು ಸಮಾಧಾನ ಮಾಡಿ,
ಕೃಷ್ಣನಿಂದ ದುರ್ಯೋಧನಾದಿಗಳ ವಧೆಯ ಪ್ರತಿಜ್ಞೆ 263

81. ಯುಧಿಷ್ಠಿರನ ಸಂದೇಶದೊಂದಿಗೆ ಹಸ್ತಿನಪುರಕ್ಕೆ ಕೃಷ್ಣನ ಪ್ರಯಾಣ.
ಮಾರ್ಗಮಧ್ಯದಲ್ಲಿ ಋಷಿಗಳ ಜೊತೆಯಲ್ಲಿ ಸಂವಾದ 274

82. ಕುಶಸ್ಥಲದಲ್ಲಿ ಕೃಷ್ಣನ ವಿಶ್ರಾಂತಿ. ಗ್ರಾಮಸ್ಥ ಬ್ರಾಹ್ಮಣರಿಂದ ಅವನ ಪೂಜೆ 291

83. ಧೃತರಾಷ್ಟ್ರನ ಆದೇಶದಂತೆ ಕೃಷ್ಣನು ಬರುವ ಮಾರ್ಗದಲ್ಲಿ
ದುರ್ಯೋಧನನಿಂದ ವಿಚಿತ್ರ ಸಭೆಗಳ ನಿರ್ಮಾಣ.
ಅವುಗಳನ್ನು ನೋಡದೆ ಕೃಷ್ಣನಿಂದ ಕುರುರಾಜ್ಯಪ್ರವೇಶ 296

84. ಧೃತರಾಷ್ಟ್ರನಿಂದ ಕೃಷ್ಣನಿಗೆ ತಾನು ಮಾಡುವ ಪೂಜೆಯ
ಪ್ರಕಾರದ ಕಥನ. ಅದಕ್ಕೆ ವಿದುರನ ಉತ್ತರ 301

85. ಧೃತರಾಷ್ಟ್ರನನ್ನು ಕುರಿತು ವಿದುರನ ಮಾತುಗಳು 307

86. ದುರ್ಯೋಧನನ ಕೃಷ್ಣಬಂಧನ ಸಂಕಲ್ಪ. ಭೀಷ್ಮರ ಸಭಾತ್ಯಾಗ 309

87. ಕೌರವರ ಅರಮನೆಯನ್ನು ಪ್ರವೇಶಿಸಿ, ಯಥೋಚಿತಸತ್ಕಾರವನ್ನು ಸ್ವೀಕರಿಸಿ,
ಕೃಷ್ಣನ ವಿದುರಗೃಹಗಮನ. ವಿದುರನಿಂದ ಅವನ ಪೂಜೆ 314

88. ಕೃಷ್ಣನ ಮುಂದೆ ಕುಂತಿಯ ವಿಲಾಪ 320

89. ಕೃಷ್ಣನಿಂದ ಕುಂತಿಯ ಸಮಾಶ್ವಾಸನೆ 339

90. ದುರ್ಯೋಧನನ ಮನೆಯ ಭೋಜನವನ್ನು ನಿರಾಕರಿಸಿದ ಕೃಷ್ಣನಿಗೆ ವಿದುರನ ಮನೆಯಲ್ಲಿ ಸತ್ಕಾರ 345

91. ಉದ್ಧತನಾದ ದುರ್ಯೋಧನನ ಬಳಿಗೆ ಸಂಧಿಗಾಗಿ ಹೋಗದಿರುವಂತೆ ಕೃಷ್ಣನ ಬಳಿ ವಿದುರನ ಒತ್ತಾಯ 355

92. ವಿದುರನ ಮಾತುಗಳಿಗೆ ಕೃಷ್ಣನ ಉತ್ತರ 362

93. ಕೃಷ್ಣನ ಧೃತರಾಷ್ಟ್ರಸಭಾಪ್ರವೇಶ 368

94. ಧೃತರಾಷ್ಟ್ರನನ್ನು ಕುರಿತು ಕೃಷ್ಣನಿಂದ ಸಂಧಿಯ ಗುಣಗಳ ಮತ್ತು ಯುದ್ಧದ ದೋಷಗಳ ಉಪದೇಶ 382

95. ಪರಶುರಾಮರು ದಂಭೋದ್ಭವ ಕಥೆಯನ್ನು ಹೇಳಿ, ಕೃಷ್ಣಾರ್ಜುನರು ನರ-ನಾರಾಯಣರೆಂದು ನಿರೂಪಣ ಮಾಡುವರು 395

96. ಕಣ್ವೋಪದೇಶ. ಮಾತಲಿಕನ್ಯಾಕಥಾ 406

97. ನಾರದರಿಂದ ವರುಣಲೋಕದಲ್ಲಿ ಮಾತಲಿಗೆ ಅನೇಕ ವಸ್ತುಗಳ ಪರಿಚಯ 411

98. ಮಾತಲಿಯನ್ನು ಪಾತಾಳಕ್ಕೆ ಕರೆದುಕೊಂಡು ಹೋಗಿ, ಅಲ್ಲಿದ್ದ ವಸ್ತುಗಳನ್ನು ತೋರಿಸಿ, ನಾರದರಿಂದ ಅವುಗಳ ಗುಣನಿರೂಪಣೆ 416

99. ನಾರದರಿಂದ ಮಾತಲಿಗೆ ಹಿರಣ್ಯಪುರ ದರ್ಶನ. ಮಾತಲಿಯಿಂದ ಅಲ್ಲಿ ವರಾನ್ವೇಷಣೆಯ ನಿರಾಕರಣೆ 422

100. ನಾರದರು ಮಾತಲಿಯನ್ನು ಸುಪರ್ಣಲೋಕಕ್ಕೆ ಕರೆದುಕೊಂಡು ಹೋಗಿ, ಅಲ್ಲಿಂದ ಬೇರೆಯ ಲೋಕಕ್ಕೆ ಗಮನ 426

101. ಮಾತಲಿಯನ್ನು ರಸಾತಲಲೋಕಕ್ಕೆ ಕರೆದುಕೊಂಡು ಹೋಗಿ, ನಾರದರಿಂದ ಸುರಭಿಸಂತತಿಯ ಪ್ರಶಂಸೆ 429

102. ನಾರದರಿಂದ ಮಾತಲಿಯನ್ನು ಭೋಗವತಿಗೆ ಕರೆದುಕೊಂಡು ಹೋಗಿ ಸರ್ಪಗಳ ಪರಿಚಯ. ಮಾತಲಿಯಿಂದ ಸುಮುಖನ ದರ್ಶನ 432

103. ಸುಮುಖನಿಗೆ ಗರುಡನಿಂದ ಒದಗಲಿರುವ ಪ್ರಾಣಭಯವನ್ನು ತಿಳಿದು ವಿಷ್ಣುಪ್ರೇರಣೆಯಂತೆ ಇಂದ್ರನಿಂದ ಅವನಿಗೆ ದೀರ್ಘಾಯುಷ್ಯ ವರದಾನ ಮತ್ತು ಸುಮುಖ-ಗುಣಕೇಶಿಯರ ವಿವಾಹ 437

104. ಸುಮುಖನ ನಿವೃತ್ತಿಯಿಂದ ಗರುಡನ ಮಾನಭಂಗವನ್ನು ಹೇಳಿ, ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳುವಂತೆ ಕಣ್ವರ ಪ್ರೇರಣೆ, ದುರ್ಯೋಧನನು ತೊಡೆಯನ್ನು ತಟ್ಟುತ್ತಿರಲು ಊರುಭಂಗ ಶಾಪದಾನ 444

105. ಹಠವು ಅನರ್ಥಕಾರಿ ಎಂದು ತೋರಿಸಲು ನಾರದರಿಂದ ವಿಶ್ವಾಮಿತ್ರ ಮತ್ತು ಗಾಲವರ ಕಥೆಯ ನಿರೂಪಣೆ 453

106. ಅಶ್ವಗಳನ್ನು ಪಡೆಯುವ ಉಪಾಯವನ್ನು ಕಾಣದೆ ಗಾಲವರಿಂದ ವಿಷ್ಣುವಿನ ಉಪಾಸನೆಯನ್ನು ಮಾಡಲು ನಿರ್ಧಾರ. ಸ್ನೇಹಿತನಾದ ಗರುಡನಿಂದ ಅವರ ಅಭಿಮತದೇಶಪ್ರಾಪ್ತಿ 459

107. ಗರುಡನಿಂದ ಗಾಲವರಿಗೆ ಪೂರ್ವದಿಕ್ಕಿನ ಗುಣವರ್ಣನೆ 464

108. ಗರುಡನಿಂದ ಗಾಲವರಿಗೆ ದಕ್ಷಿಣ ದಿಕ್ಕಿನ ಗುಣವರ್ಣನೆ 468

109. ಗರುಡನಿಂದ ಗಾಲವರಿಗೆ ಪಶ್ಚಿಮ ದಿಕ್ಕಿನ ಗುಣವರ್ಣನೆ 473

110. ಗರುಡನಿಂದ ಗಾಲವರಿಗೆ ಉತ್ತರ ದಿಕ್ಕಿನ ಗುಣವರ್ಣನೆ ಮತ್ತು ಇಷ್ಟವಾದ ದಿಕ್ಕಿಗೆ ಹೋಗಲು ತನ್ನ ಬೆನ್ನಿನ ಮೇಲೆ ಕುಳಿತುಕೊಳ್ಳುವಂತೆ ಆಹ್ವಾನ 477

111. ಗರುಡನ ವೇಗವನ್ನು ಸಹಿಸಲಾರದೆ ಗಾಲವರಿಂದ ಹಿಂದಿರುಗುವಂತೆ ಪ್ರಾರ್ಥನೆ. ವೃಷಭಾಚಲದಲ್ಲಿ ವಿಶ್ರಮಿಸಿ ಹಾಗೆ ಮಾಡುವಂತೆ ಗರುಡನ ಸಮ್ಮತಿ 482

112. ಋಷಭಾಚಲದಲ್ಲಿ ಶಾಂಡಿಲಿಯ ಜೊತೆಯಲ್ಲಿ ಸಂಭಾಷಣೆ 487

113. ಗರುಡನು ಯಯಾತಿಯ ಬಳಿಗೆ ಗಾಲವರನ್ನು ಕರೆದುಕೊಂಡು ಹೋಗಿ ಗುರುದಕ್ಷಿಣೆಯ ಯಾಚನೆ 492

114. ನಿರ್ಧನನಾದ ಯಯಾತಿಯಿಂದ ತನ್ನ ಮಗಳಾದ ಮಾಧವಿಯ ಸಮರ್ಪಣೆ. ಗಾಲವರಿಂದ ಅವಳನ್ನು ಕರೆದುಕೊಂಡು ಹರ್ಯಶ್ವನ ಬಳಿಗೆ ಗಮನ 497

115. ಹರ್ಯಶ್ವನಿಂದ ಮಾಧವಿಯಲ್ಲಿ ವಸುಮನನ ಉತ್ಪತ್ತಿ ಮಾಧವಿಯನ್ನು ಕರೆದುಕೊಂಡು ಗಾಲವರಿಂದ ದಿವೋದಾಸನ ಬಳಿಗೆ ಗಮನ 501

116. ಹಾಗೆಯೇ ದಿವೋದಾಸನು ಮಾಧವಿಯಲ್ಲಿ ಒಬ್ಬ ಪುತ್ರನನ್ನು ಪಡೆದು ಗಾಲವರಿಗೆ ಕನ್ಯೆಯ ಅರ್ಪಣೆ 506

117. ಕನ್ಯೆಯನ್ನು ಸ್ವೀಕರಿಸಿದ ಉಶೀನರನಿಂದ ಶಿಬಿಯ ಉತ್ಪತ್ತಿ ಮತ್ತು ಗಾಲವರಿಗೆ ಪುನಃ ಕನ್ಯಾಸಮರ್ಪಣೆ 511

118. ವಿಶ್ವಾಮಿತ್ರರಿಗೆ ಗುರುದಕ್ಷಿಣೆಯನ್ನು ಕೊಟ್ಟು ಯಯಾತಿಗೆ ಮಾಧವಿಯನ್ನು ಹಿಂದಿರುಗಿಸಿ ಗಾಲವರ ವನಗಮನ 515

119. ಸ್ವಯಂವರದಲ್ಲಿ ಎಲ್ಲ ವರರನ್ನೂ ಮೀರಿ ಮಾಧವಿಯಿಂದ ವನದ ವರಣ, ತಪೋನುಷ್ಠಾನ. ಸ್ವರ್ಗಸ್ಥನಾದ ಯಯಾತಿಯಿಂದ ಋಷಿಗಳ ಅವಮಾನ 521

120. ಸ್ವರ್ಗದಿಂದ ಯಯಾತಿಯ ಪತನ. ದೌಹಿತ್ರಪ್ರಭಾವದಿಂದ ಮತ್ತು ಮಾಧವಿಯ ತಪಸ್ಸಿನ ಪ್ರಭಾವದಿಂದ ಪುನಃ ಸ್ವರ್ಗಾರೋಹಣ 525

121. ತನ್ನ ದೌಹಿತ್ರರು ಕೊಟ್ಟ ಪುಣ್ಯಫಲ ಪ್ರಭಾವದಿಂದ ಯಯಾತಿಯ ಸ್ವರ್ಗಗಮನ 531

122. ಯಯಾತಿ-ಚತುರ್ಮುಖರ ಸಂವಾದವನ್ನು ಹೇಳಿ, ದುರ್ಯೋಧನನಿಗೆ ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳಲು ನಾರದರ ಒತ್ತಾಯ 536

★ ★ ★ ★ ★

ಮಹಾಭಾರತ

ಉದ್ಯೋಗಪರ್ವ

೫. ವ್ಯಾಸಾಭಿಗಮನಪರ್ವ

ನಲವತ್ತೆಂಟನೆಯ ಅಧ್ಯಾಯ

ಪಾಂಡವರ ವಚನವನ್ನು ಕೇಳಲು ಧೃತರಾಷ್ಟ್ರಾದಿಗಳ ಸಭಾಪ್ರವೇಶ.
ಸಂಜಯನಿಂದ ಧೃತರಾಷ್ಟ್ರಾದಿಗಳಿಗೆ ಪಾಂಡವರ ಪ್ರತಿಸಂದೇಶದ ಕಥನ.

ವೈಶಂಪಾಯನಃ

ಏವಂ ಸನತ್ಸುಜಾತೇನ ವಿದುರೇಣ ಚ ಧೀಮತಾ ।
ಸಾರ್ಧಂ ಕಥಯತೋ ರಾಜ್ಞಃ ಸಾ ವ್ಯತೀತಾಯ ಶರ್ವರೀ ॥೧॥

ವೈಶಂಪಾಯನ– ಹೀಗೆ ಸನತ್ಸುಜಾತ ಮತ್ತು ವಿದುರನ ಜೊತೆಯಲ್ಲಿ ಮಾತನಾಡುತ್ತಿದ್ದ ಮೇಧಾವಿಯಾದ ಧೃತರಾಷ್ಟ್ರ ರಾಜನಿಗೆ ಆ ರಾತ್ರಿಯು ಕಳೆಯಿತು.

ತಸ್ಯಾಂ ರಜನ್ಯಾಂ ವ್ಯುಷ್ಟಾಯಾಂ ರಾಜಾನಃ ಸರ್ವಪಾರ್ಥಿವಾಃ ।
ಸಭಾಮಾವಿವಿಶುರ್ಹೃಷ್ಟಾಃ ಸೂತಸ್ಯೋಪದಿದೃಕ್ಷಯಾ ॥೨॥

ಆ ರಾತ್ರಿಯು ಕಳೆದ ಮೇಲೆ ಬೇರೆ ಬೇರೆ ಭೂಭಾಗದ ಎಲ್ಲ ರಾಜರೂ ಸಂಜಯನನ್ನು ಹತ್ತಿರದಿಂದ ನೋಡುವ ಆಸೆಯಿಂದ ಸಭೆಯನ್ನು ಸಂತೋಷದಿಂದ ಪ್ರವೇಶಿಸಿದರು.

ಶುಶ್ರೂಷಮಾಣಾಃ ಪಾರ್ಥಾನಾಂ ವಾಚೋ ಧರ್ಮಾರ್ಥಸಂಹಿತಾಃ ।
ಧೃತರಾಷ್ಟ್ರಪ್ರಮುಖಾಃ ಸರ್ವೇ ಯಯೂ ರಾಜನ್ ಸಭಾಂ ಶುಭಾಮ್॥

ಸುಧಾವದಾತಾಂ ಸಂಪೂರ್ಣಕನಕಾಜಿರಭೂಷಣಾಮ್ ।
ಚಂದ್ರಪ್ರಭಾಂ ಸುರುಚಿರಾಂ ಸಿಕ್ತಾಂ ಚಂದನವಾರಿಣಾ ॥೪॥

ರುಚಿರೈರಾಸನೈಃ ತೀರ್ಣಾಂ ಕಾಂಚನೈರ್ದಾರವೈರಪಿ ।
ಅಶ್ಮಸಾರಮಯೈರ್ದಾಂತೈಃ ಸಾಸ್ತೀರ್ಣೈಃ ಸೋತ್ತರಚ್ಛದೈಃ ॥೫॥

ಎಲೈ ರಾಜನೇ, ಪಾಂಡವರ ಧರ್ಮಾರ್ಥಯುಕ್ತವಾದ ಮಾತುಗಳನ್ನು ಕೇಳಲು ಬಯಸಿ ಧೃತರಾಷ್ಟ್ರ ಮೊದಲಾದವರೆಲ್ಲರೂ ಸುಣ್ಣದ ಲೇಪವನ್ನು ಹೊಂದಿದ್ದ, ಕನಕಭೂಷಿತವಾದ ಅಂಗಳಗಳನ್ನುಳ್ಳ, ಮನೋಹರವಾದ ಚಂದ್ರಪ್ರಭೆಯುಳ್ಳ, ಸುಗಂಧಯುಕ್ತವಾದ ಜಲದಿಂದ ಚಿಮುಕಿಸಲ್ಪಟ್ಟ, ಸುವರ್ಣಮಯವಾದ, ದಾರುಮಯವಾದ, ಶಿಲಾಮಯವಾದ ಮತ್ತು ದಂತಮಯವಾದ, ಒಳ್ಳೆಯ ಹಾಸುಗಳನ್ನು ಹಾಸಿದ ಸುಂದರವಾದ ಆಸನಗಳುಳ್ಳ ಆ ಶುಭವಾದ ಸಭೆಯನ್ನು ಪ್ರವೇಶಿಸಿದರು.

ಭೀಷ್ಮೋ ದ್ರೋಣಃ ಕೃಪಃ ಶಲ್ಯಃ ಕೃತವರ್ಮಾ ಜಯದ್ರಥಃ ।
ಅಶ್ವತ್ಥಾಮಾ ವಿಕರ್ಣಶ್ಚ ಸೋಮದತ್ತಶ್ಚ ಬಾಹ್ಲಿಕಃ ॥೬॥

ವಿದುರಶ್ಚ ಮಹಾಪ್ರಾಜ್ಞೋ ಯುಯುತ್ಸುಶ್ಚ ಮಹಾರಥಃ ।
ಸರ್ವೇ ಚ ಸಹಿತಾಃ ಶೂರಾಃ ಪಾರ್ಥಿವಾ ಭರತರ್ಷಭ ॥೭॥

ಧೃತರಾಷ್ಟ್ರಂ ಪುರಸ್ಕೃತ್ಯ ವಿವಿಶುಸ್ತಾಂ ಸಭಾಂ ಶುಭಾಮ್ ॥೮॥

ಎಲೈ ಭರತರ್ಷಭನೇ, ಭೀಷ್ಮ, ದ್ರೋಣ, ಕೃಪ, ಶಲ್ಯ, ಕೃತವರ್ಮಾ, ಜಯದ್ರಥ, ಅಶ್ವತ್ಥಾಮಾ, ವಿಕರ್ಣ, ಸೋಮದತ್ತ, ಬಾಹ್ಲಿಕ, ಮಹಾಪ್ರಾಜ್ಞನಾದ ವಿದುರ,

ಮಹಾರಥನಾದ ಯುಯುತ್ಸು ಈ ಎಲ್ಲ ಶೂರರೂ ಒಟ್ಟಾಗಿ ಧೃತರಾಷ್ಟ್ರನನ್ನು ಮುಂದೆ ಮಾಡಿಕೊಂಡು ಶುಭವಾದ ಸಭೆಯನ್ನು ಪ್ರವೇಶಿಸಿದರು.

ದುಃಶಾಸನಶ್ಚಿತ್ರಸೇನಃ ಶಕುನಿಶ್ಚಾಪಿ ಸೌಬಲಃ ।
ದುರ್ಮುಖೋ ದುಃಸಹಃ ಕರ್ಣ ಉಲೂಕೋಽಥ ವಿವಿಂಶತಿಃ ॥೯॥

ಏತೇ ಚಾನ್ಯೇ ಚ ಬಹವಃ ಪಾರ್ಥಿವಾ ಭರತರ್ಷಭ ।
ಕುರುರಾಜಂ ಪುರಸ್ಕೃತ್ಯ ದುರ್ಯೋಧನಮಮರ್ಷಣಮ್ ॥೧೦॥

ವಿವಿಶುಸ್ತಾಂ ಸಭಾಂ ರಾಜನ್ ಸುರಾಃ ಶಕ್ರಸದೋ ಯಥಾ ॥೧೧॥

ಎಲೈ ಭರತರ್ಷಭನೇ, ರಾಜನೇ, ದುಶ್ಶಾಸನ, ಚಿತ್ರಸೇನ, ಸೌಬಲನಾದ ಶಕುನಿ, ದುರ್ಮುಖ, ದುಃಸಹ, ಕರ್ಣ, ಉಲೂಕ ಮತ್ತು ವಿವಿಂಶತಿ ಇವರೇ ಮೊದಲಾದ ಅನೇಕ ರಾಜರು ಕೋಪಶೀಲನಾದ, ಕುರುರಾಜನಾದ ದುರ್ಯೋಧನನನ್ನು ಮುಂದೆ ಮಾಡಿಕೊಂಡು ದೇವತೆಗಳು ಇಂದ್ರನ ಸಭೆಯನ್ನು ಪ್ರವೇಶಿಸಿದಂತೆ ಆ ಸಭೆಯನ್ನು ಪ್ರವೇಶಿಸಿದರು.

ಆವಿಶದ್ಭಿಸ್ತಥಾ ರಾಜನ್ ಶೂರೈಃ ಪರಿಘಬಾಹುಭಿಃ ।
ಶುಶುಭೇ ಸಾ ಸಭಾ ರಾಜನ್ ಸಿಂಹೈರಿವ ಗಿರೇರ್ಗುಹಾ ॥೧೨॥

ಎಲೈ ರಾಜನೇ, ಒನಕೆಯಂತಹ ಬಾಹುಗಳುಳ್ಳ ಆ ರಾಜರು ಸಭೆಯನ್ನು ಪ್ರವೇಶಿಸುವಾಗ ಆ ಸಭೆಯು ಸಿಂಹಗಳಿಂದ ಕೂಡಿದ ಪರ್ವತದ ಗುಹೆಯಂತೆ ಶೋಭಿಸಿತು.

ತೇ ಪ್ರವಿಶ್ಯ ಮಹೇಷ್ವಾಸಾಃ ಸಭಾಂ ಸರ್ವೇ ಮಹೌಜಸಃ ।
ಆಸನಾನಿ ವಿಚಿತ್ರಾಣಿ ಭೇಜಿರೇ ಸೂರ್ಯವರ್ಚಸಃ ॥೧೩॥

ಮಹಾಧನುರ್ಧಾರಿಗಳೂ, ಮಹಾಬಲರೂ, ಸೂರ್ಯನ ಸಮಾನವಾದ ಕಾಂತಿಯುಳ್ಳವರೂ ಆದ ಅವರೆಲ್ಲರೂ ಸಭೆಯನ್ನು ಪ್ರವೇಶಿಸಿ ವಿಚಿತ್ರವಾದ ಆಸನಗಳಲ್ಲಿ ಕುಳಿತುಕೊಂಡರು.

ಆಸನಸ್ಥೇಷು ಸರ್ವೇಷು ತೇಷು ರಾಜಸು ಭಾರತ ।
ದ್ವಾಸ್ಥೋ ನಿವೇದಯಾಮಾಸ ಸೂತಪುತ್ರಮುಪಸ್ಥಿತಮ್ ॥೧೪॥

ಅಯಂ ಸ ರಥ ಆಯಾತಿ ಯೋಽಯಾಸೀತ್ ಪಾಂಡವಾನ್ ಪ್ರತಿ ।
ದೂತೋ ನಸ್ತೂರ್ಣಮಾಯಾತಃ ಸೈಂಧವೈಃ ಸಾಧುವಾಹಿಭಿಃ ॥೧೫॥

ಎಲೈ ಭಾರತನೇ, ಆ ಎಲ್ಲ ರಾಜರೂ ಸಭೆಯಲ್ಲಿ ಕುಳಿತುಕೊಳ್ಳುತ್ತಿರಲು ದ್ವಾರಪಾಲಕನು ಸಮೀಪದಲ್ಲಿ ಬರುತ್ತಿದ್ದ ಸೂತಪುತ್ರನಾದ ಸಂಜಯನನ್ನು ನೋಡಿ, ಪಾಂಡವರ ಬಳಿಗೆ ಹೋದ ಆ ರಥವು ಹಿಂದಿರುಗುತ್ತಿದೆ. ನಮ್ಮ ದೂತನಾದ ಸಂಜಯನು ಚೆನ್ನಾಗಿ ರಥವನ್ನು ಹೊರುವ, ಸಿಂಧುದೇಶದ ಅಶ್ವಗಳನ್ನು ಹೂಡಿದ ರಥದಲ್ಲಿ ಶೀಘ್ರವಾಗಿ ಬರುತ್ತಿದ್ದಾನೆ ಎಂದು ನಿವೇದಿಸಿದನು.

ಉಪೇಯಾಯ ಸ ತು ಕ್ಷಿಪ್ರಂ ರಥಾತ್ ಪ್ರಸ್ಕಂದ್ಯ ಕುಂಡಲೀ ।
ಪ್ರವಿವೇಶ ಸಭಾಂ ಪೂರ್ಣಾಂ ಮಹೀಪಾಲೈರ್ಮಹಾತ್ಮಭಿಃ ॥೧೬॥

ಕುಂಡಲಗಳನ್ನು ಧರಿಸಿದ್ದ ಸಂಜಯನು ರಥದಿಂದ ಇಳಿದು ಶೀಘ್ರವಾಗಿ ಸಭೆಯನ್ನು ಸಮೀಪಿಸಿ ಮಹಾತ್ಮರಾದ ರಾಜರಿಂದ ತುಂಬಿದ್ದ ಆ ಸಭೆಯನ್ನು ಪ್ರವೇಶಿಸಿದನು.

ಸಂಜಯಃ

ಪ್ರಾಪ್ತೋಽಸ್ಮಿ ಪಾಂಡವಾನ್ ಗತ್ವಾ ಮಾಂ ವಿಜಾನೀತ ಕೌರವಾಃ ।
ಯಥಾವಯಃ ಕುರೂನ್ ಸರ್ವಾನ್ ಪ್ರತಿನಂದಂತಿ ಪಾಂಡವಾಃ ॥೧೭॥

ಸಂಜಯ– ಎಲೈ ಕೌರವರೇ, ನಾನು ಪಾಂಡವರ ಸಮೀಪಕ್ಕೆ ಹೋಗಿ ಹಿಂದಿರುಗಿದ್ದೇನೆ ಎಂದು ತಿಳಿಯಿರಿ. ಪಾಂಡವರು ಎಲ್ಲ ಕುರುಗಳನ್ನೂ ಅವರವರ ವಯಸ್ಸಿಗೆ ಉಚಿತವಾದ ರೀತಿಯಲ್ಲಿ ಅಭಿನಂದಿಸುತ್ತಾರೆ.

ಅಭಿವಾದಯಂತಿ ವೃದ್ಧಾಂಶ್ಚ ವಯಸ್ಯಾಂಶ್ಚ ವಯಸ್ಯವತ್ ।
ಪುನಶ್ಚಾಭ್ಯವದನ್ ಪಾರ್ಥಾಃ ಪ್ರತಿಪೂಜ್ಯ ಯಥಾವಯಃ ॥೧೮॥

ಹಿರಿಯರಿಗೆ ನಮಸ್ಕಾರವನ್ನು ಮಾಡುತ್ತಾರೆ. ಸ್ನೇಹಿತರಲ್ಲಿ ಸ್ನೇಹಿತರಂತೆ ನಡೆದುಕೊಳ್ಳುತ್ತಾರೆ ಮತ್ತು ವಯಸ್ಸಿಗೆ ಅನುಗುಣವಾಗಿ ಹೀಗೆ ಪೂಜೆಯನ್ನು ಸಲ್ಲಿಸಿ ಪಾಂಡವರು ಮಾತನಾಡಿದರು.

ಯಥಾऽಹಂ ಧೃತರಾಷ್ಟ್ರೇಣ ಶಿಷ್ಟಃ ಪೂರ್ವಮಿತೋ ಗತಃ ।
ಅಬ್ರುವಂ ಪಾಂಡವಾನ್ ಗತ್ವಾ ತಂ ನಿಬೋಧತ ಪಾರ್ಥಿವಾಃ ॥೧೯॥

ಅಬ್ರೂತಾಂ ತತ್ರ ಧರ್ಮೇಣ ವಾಸುದೇವಧನಂಜಯೌ ॥೨೦॥

ಎಲೈ ರಾಜರೇ, ನಾನು ಧೃತರಾಷ್ಟ್ರನ ಆದೇಶವನ್ನು ಸ್ವೀಕರಿಸಿ ಮೊದಲು ಇಲ್ಲಿಂದ ಹೋಗಿ ಪಾಂಡವರಿಗೆ ಏನು ಹೇಳಿದೆ ಎಂಬುದನ್ನು ತಿಳಿಯಿರಿ. ಅನಂತರ ಕೃಷ್ಣಮತ್ತು ಅರ್ಜುನರಿಬ್ಬರೂ ಧರ್ಮಯುಕ್ತವಾದ ಮಾತುಗಳನ್ನು ಆಡಿದರು (ಅದನ್ನೂ ಕೇಳಿ).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಅಷ್ಟಚತ್ವಾರಿಂಶೋऽಧ್ಯಾಯಃ ॥

॥ ವ್ಯಾಸಾಭಿಗಮನಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನಲವತ್ತೆಂಟನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೊಂಬತ್ತನೆಯ ಅಧ್ಯಾಯ

ಸಂಜಯನಿಂದ ಕೃಷ್ಣನ ಸಂದೇಶಕಥನ.

ಧೃತರಾಷ್ಟ್ರಃ

ಪೃಚ್ಛಾಮಿ ತ್ವಾಂ ಸಂಜಯ ರಾಜಮಧ್ಯೇ
ಯದಬ್ರವೀದ್ ವಾಕ್ಯಮದೀನಸತ್ವಃ ।
ಜನಾರ್ದನಸ್ತಾತ ಯುಧಾಂ ಪ್ರಣೇತಾ
ದುರಾತ್ಮನಾಂ ಜೀವಿತಚ್ಛಿನ್ ಮಹಾತ್ಮಾ ॥೧॥

ಧೃತರಾಷ್ಟ್ರ– ಪ್ರೀತಿಪಾತ್ರನಾದ ಸಂಜಯನೇ, ಮಹಾತ್ಮನೂ, ದುರಾತ್ಮರ ಪ್ರಾಣಾಪಹಾರಿಯೂ, ಅಧೀನಧೈರ್ಯವುಳ್ಳವನೂ, ಪಾಂಡವರ ಯುದ್ಧನಾಯಕನೂ ಆದ ಜನಾರ್ದನನು ರಾಜರ ಮಧ್ಯದಲ್ಲಿ ಯಾವ ಮಾತುಗಳನ್ನು ಆಡಿದನೆಂದು ನಿನ್ನನ್ನು ಕೇಳುತ್ತಿದ್ದೇನೆ.

ಸಂಜಯಃ

ಆಗುಲ್ಫೇಭ್ಯೋಽಪಿ ಸಂವೀತಃ ಸರ್ವತ್ತೋಽಹಂ ಕೃತಾಂಜಲಿಃ ।
ಶುದ್ಧಾಂತಂ ಪ್ರಾವಿಶಂ ರಾಜನ್ನಾಖ್ಯಾತೋ ನರಸಿಂಹಯೋಃ ॥೨॥

ಸಂಜಯ– ರಾಜನೇ, ನಾನು ಪಾದದ ಗಂಟಿನವರೆಗೂ ಚೆನ್ನಾಗಿ ವಸ್ತ್ರವನ್ನು ಧರಿಸಿ ಕೈಗಳನ್ನು ಮುಗಿದು ದ್ವಾರಪಾಲಕನಿಂದ ತಿಳಿಸಲ್ಪಟ್ಟು ಆ ಇಬ್ಬರು ನರಶ್ರೇಷ್ಠರಿದ್ದ ಅಂತಃಪುರವನ್ನು ಪ್ರವೇಶಿಸಿದೆನು.

ನ ಚಾಭಿಮನ್ಯುರ್ನ ಯಮೌ ತಂ ದೇಶಮಭಿಜಗ್ಮತುಃ ।
ಯತ್ರ ಕೃಷ್ಣೌ ಚ ಕೃಷ್ಣಾ ಚ ಸತ್ಯಭಾಮಾ ಚ ಭಾಮಿನೀ ॥೩॥

ಎಲ್ಲಿ ಕೃಷ್ಣಾರ್ಜುನರು, ದ್ರೌಪದಿಯು ಮತ್ತು ಭಾಮಿನಿಯಾದ ಸತ್ಯಭಾಮೆಯು ಇದ್ದರೋ ಅಲ್ಲಿಗೆ ಅಭಿಮನ್ಯುವಾಗಲೀ, ನಕುಲ-ಸಹದೇವರಾಗಲೀ ಬರಲಿಲ್ಲ.

ಉಭೌ ಮಧ್ವಾಸವಕ್ಷೀಬೌ ವರಚಂದನರೂಷಿತೌ ।
ಸ್ರಗ್ವಿಣೌ ವರವಸ್ತ್ರಾಂಗೌ ವರಾಭರಣಭೂಷಿತೌ ॥೪॥

ಇಬ್ಬರೂ ಮಧುಪಾನವನ್ನು ಮಾಡಿ, ಶ್ರೇಷ್ಠವಾದ ಚಂದನಲೇಪಿತರಾಗಿ, ಪುಷ್ಪಮಾಲೆಗಳನ್ನು ಧರಿಸಿ, ಶ್ರೇಷ್ಠವಸ್ತ್ರವನ್ನು ಧರಿಸಿ, ಶ್ರೇಷ್ಠವಾದ ಆಭರಣಗಳಿಂದ ಭೂಷಿತರಾಗಿದ್ದರು.

ನೈಕರತ್ನವಿಚಿತ್ರಂ ಚ ಕಾಂಚನಂ ಚ ವರಾಸನಮ್ ।
ನಾನಾಸ್ತರಣಸಂಸ್ತೀರ್ಣಂ ಯತ್ರಾಸ್ತಾಂ ತೌ ನರರ್ಷಭೌ ॥೫॥

ಆ ನರಶ್ರೇಷ್ಠರಿದ್ದ ಶ್ರೇಷ್ಠವಾದ ಆಸನವು ಅನೇಕ ರತ್ನಗಳಿಂದ ಕೂಡಿದ ಸುವರ್ಣದಿಂದ ನಿರ್ಮಿತವಾಗಿದ್ದು ಅನೇಕ ಹೊದಿಕೆಗಳು ಹಾಸಲ್ಪಟ್ಟು ಶೋಭಿಸುತ್ತಿದ್ದಿತು.

ಸತ್ಯಾಂಕಮುಪಧಾನಂ ತು ಕೃತ್ವಾ ಶೇತೇ ಜನಾರ್ದನಃ ।
ಅರ್ಜುನಾಂಕಗತೌ ಪಾದೌ ಕೇಶವಸ್ಯೋಪಲಕ್ಷಯೇ ॥೬॥

ಅರ್ಜುನಸ್ಯ ಚ ಕೃಷ್ಣಾಯಾಃ ಶುಭಾಯಾಶ್ಚಾಂಗಗಾವುಭೌ ॥೭॥

ಜನಾರ್ದನನು ಸತ್ಯಭಾಮೆಯ ತೊಡೆಯನ್ನು ದಿಂಬು ಮಾಡಿಕೊಂಡು ಮಲಗಿದ್ದನು. ಕೃಷ್ಣನ ಪಾದಗಳು ಅರ್ಜುನನ ತೊಡೆಯಲ್ಲಿದ್ದುದನ್ನು ನಾನು ಗಮನಿಸಿದೆ. ಅರ್ಜುನನ ಪಾದಗಳಾದರೂ ಮಂಚದ ಸಮೀಪದಲ್ಲಿ ಕೆಳಗೆ ಸುವರ್ಣಮಯ ಪೀಠದಲ್ಲಿ ಕುಳಿತಿದ್ದ ಪವಿತ್ರಳಾದ ದ್ರೌಪದಿಯ ತೊಡೆಯ ಮೇಲಿದ್ದವು.

ಕಾಂಚನಂ ಪಾದಪೀಠಂ ತು ಪಾರ್ಥೋ ಮೇ ಪ್ರಾದಿಶನ್ಮುದಾ ।
ದಾಸೀಭ್ಯಾಮಾಹೃತಂ ಮಹ್ಯಂ ಸ್ಪೃಷ್ಟ್ವಾ ಭೂಮಾವುಪಾವಿಶಮ್ ॥೮॥

ಅರ್ಜುನನು ದಾಸಿಯರಿಂದ ತರಲ್ಪಟ್ಟ ಸುವರ್ಣಮಯವಾದ ಪಾದಪೀಠವನ್ನು ನನಗೆ ನೀಡಿದನು. ನಾನು ಅದನ್ನು ಮುಟ್ಟಿ ನೆಲದ ಮೇಲೆ ಕುಳಿತೆನು.

ಊರ್ಧ್ವರೇಖಾಂಕಿತೌ ಪಾದೌ ಪಾರ್ಥಸ್ಯ ಶುಭಲಕ್ಷಣೌ ।
ಪಾದಪೀಠಾದಪಹೃತೌ ಧಾರಯೇತಾಂ ವರಸ್ತ್ರಿಯೌ ॥೯॥

ಅರ್ಜುನನ ಶುಭಲಕ್ಷಣಗಳನ್ನುಳ್ಳ, ಊರ್ಧ್ವರೇಖಾಂಕಿತವಾದ ಪಾದಗಳನ್ನು ಪಾದಪೀಠದಿಂದ ಅವನು ತೆಗೆದಮೇಲೆ ಶ್ರೇಷ್ಠ ಸ್ತ್ರೀಯರು ಧರಿಸಿದರು.

ನ ನೂನಂ ಕಲ್ಮಷಂ ಕಿಂಚಿನ್ಮಮ ಕರ್ಮಸು ವಿದ್ಯತೇ ।
ಸ್ತ್ರೀರತ್ನಾಭ್ಯಾಂ ಸಮೇತೌ ಯನ್ಮಿಥೋ ಮಾಮಭ್ಯಭಾಷತಾಮ್ ॥೧೦॥

ಸ್ತ್ರೀರತ್ನಗಳಿಂದ ಕೂಡಿದ ಅವರಿಬ್ಬರೂ ನನ್ನ ಜೊತೆಯಲ್ಲಿ ಮಾತನಾಡುವುದಕ್ಕೆ ಮುಖ್ಯನಿಮಿತ್ತವೆಂದರೆ ನನ್ನ ಮನಸ್ಸಿನಲ್ಲಾಗಲೀ ಅಥವಾ ಕ್ರಿಯೆಯಲ್ಲಾಗಲೀ ಯಾವ ಕಲ್ಮಷವೂ ಇರುವುದಿಲ್ಲ.

ವಿಸ್ಮಯೋ ಮೇ ಮಹಾನಾಸೀದ್ ಆಸ್ಯಂ ಮೇ ಬಹುಸಂಗತಮ್ ।
ಹೃಷ್ಟಾನಿ ಚೈವ ರೋಮಾಣಿ ದೃಷ್ಟ್ವಾ ತೌ ಸಹಿತಾವುಭೌ ॥೧೧॥

ಆ ಇಬ್ಬರು ಕೃಷ್ಣಾರ್ಜುನರು ಒಟ್ಟಿಗೆ ಇರುವುದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ರೋಮಾಂಚವೂ ಆಯಿತು.

ಶ್ಯಾಮೌ ಬೃಹಂತೌ ತರುಣೌ ನಾಗಾವಿವ ಸಮುಚ್ಛ್ರಿತೌ ।
ಏಕಶಯ್ಯಾಗತೌ ದೃಷ್ಟ್ವಾ ಭಯಂ ಮೇ ಮಹದಾವಿಶತ್ ॥೧೨॥

ಶ್ಯಾಮವರ್ಣದವರೂ, ಬೃಹತ್ಕಾಯರೂ, ತರುಣರೂ, ಗಜಗಳಂತೆ ಎತ್ತರವಾದವರೂ, ಒಂದೇ ಶಯ್ಯೆಯಲ್ಲಿ ಕುಳಿತವರೂ ಆದ ಅವರನ್ನು ನೋಡಿ ನನಗೆ ಬಹಳ ಭಯವಾಯಿತು.

ತತೋ ಹ್ಯಚಿಂತಯಂ ತತ್ರ ದೃಷ್ಟ್ವಾ ತೌ ಪುರುಷರ್ಷಭೌ ॥೧೩॥

ಸಂಕಲ್ಪೋ ಧರ್ಮರಾಜಸ್ಯ ನಾನವಾಪ್ಯೋಽಸ್ತಿ ಕಶ್ಚನ ।
ನಿರ್ದೇಶಗಾವಿಮೌ ಯಸ್ಯ ನರನಾರಾಯಣಾವುಭೌ ॥೧೪॥

ಆ ಪುರುಷಶ್ರೇಷ್ಠರನ್ನು ನೋಡಿ ನಾನು ಯಾವ ಧರ್ಮರಾಜನ ಶಾಸನವನ್ನು ನರ-ನಾರಾಯಣರಾದ ಇವರಿಬ್ಬರೂ ಪಾಲಿಸುತ್ತಾರೆಯೋ ಅಂತಹ ಧರ್ಮರಾಜನ ಯಾವ ಸಂಕಲ್ಪವೂ ಸಿದ್ಧಿಸದೆ ಇರುವುದಿಲ್ಲ ಎಂದು ಚಿಂತಿಸಿದೆನು.

ಸತ್ಕೃತಶ್ಚಾನ್ನಪಾನಾಭ್ಯಾಮಹಂ ವೈ ಲಬ್ಧಸತ್ಕ್ರಿಯಃ ।
ಅಂಜಲಿಂ ಮೂರ್ಧ್ನಿ ಸಂಧಾಯ ಸಂದೇಶಂ ಚಾಭ್ಯಚೋದಯಮ್ ॥

ಅನ್ನ-ಪಾನಗಳಿಂದ ಸತ್ಕೃತನಾಗಿ ಯೋಗ್ಯವಾದ ಗೌರವವನ್ನು ಸ್ವೀಕರಿಸಿದ ನಾನು ನನ್ನ ತಲೆಯ ಮೇಲೆ ಕೈಗಳನ್ನು ಮುಗಿದು ನಿನ್ನ ಸಂದೇಶವನ್ನು ತಿಳಿಸಿದೆನು.

ಧನುರ್ಧರೋಚಿತೇನಾಥ ಪಾಣಿನೈಕಂ ಸುಲಕ್ಷಣಮ್ ।
ಪಾದಮಾನಾಯಯತ್ ಪಾರ್ಥ ಕೇಶವಸ್ಯ ಯಶಸ್ವಿನಃ ॥೧೬॥

ಆಗ ಅರ್ಜುನನು ಧನುಸ್ಸನ್ನು ಹಿಡಿಯಲು ಯೋಗ್ಯವಾದ ತನ್ನ ಶುಭಲಕ್ಷಣವುಳ್ಳ ಹಸ್ತದಿಂದ ಕೀರ್ತಿವಂತನಾದ ಕೃಷ್ಣನ ಪಾದವನ್ನು ಕೆಳಗಿಳಿಸಿದನು.

ಇಂದ್ರಕೇತುರಿವೋತ್ಥಾಯ ದಿವ್ಯಾಭರಣಭೂಷಿತಃ ।
ಇಂದ್ರವೀರ್ಯೋಪಮಃ ಕೃಷ್ಣಃ ಸಂವಿಷ್ಟೋ ಮಾಂ ಹ್ಯಭಾಷತ ॥೧೭॥

ಇಂದ್ರನ ವೀರ್ಯಕ್ಕೆ ಸಮನಾದ ವೀರ್ಯವುಳ್ಳ, ದಿವ್ಯಾಭರಣಭೂಷಿತನಾದ ಕೃಷ್ಣನು ಇಂದ್ರಧ್ವಜದಂತೆ ಎದ್ದು ಕುಳಿತು ನನ್ನನ್ನು ಕುರಿತು ಮಾತನಾಡಿದನು.

ಸ ವಾಚಂ ವದತಾಂ ಶ್ರೇಷ್ಠ ಆದದೇ ವಚನಕ್ಷಮಾಮ್ ।
ದೀಪನೀಂ ಧಾರ್ತರಾಷ್ಟ್ರಾಣಾಂ ಮೃದುಪೂರ್ವಾಂ ಸುದಾರುಣಾಮ್ ॥

ಮಾತನಾಡುವವರಲ್ಲಿ ಅಗ್ರಗಣ್ಯನಾದ ಅವನು ಆ ಕಾಲದಲ್ಲಿ ಆಡಲು ಯೋಗ್ಯವಾದ, ಧೃತರಾಷ್ಟ್ರಪುತ್ರರನ್ನು ತಪ್ತರನ್ನಾಗಿ ಮಾಡುವ, ಮೃದುಪೂರ್ವವಾದ, ದಾರುಣಾಂತವಾದ ಮಾತುಗಳನ್ನು ಆಡಿದನು.

ಬಹಿಶ್ಚರಸ್ಯ ಪ್ರಾಣಸ್ಯ ಪ್ರಿಯಸ್ಯ ಪ್ರಿಯಕಾರಿಣಃ ।
ಮತಿಮಾನ್ ಮತಿಮಾಸ್ಥಾಯ ಕೇಶವಃ ಸಂದಧೇ ವಚಃ ॥೧೯॥

ತನ್ನ ಬಹಿಶ್ಚರ ಪ್ರಾಣದಂತಿರುವ ಅರ್ಜುನನಿಗೆ ಪ್ರಿಯನೂ ಮತ್ತು ಪ್ರಿಯಕಾರಿಯೂ ಆದ ಕೃಷ್ಣನು ಅರ್ಜುನನ ಬುದ್ಧಿಯನ್ನೇ ಅವಲಂಬಿಸಿ ಮಾತನಾಡಿದನು.

ವಚನಂ ವಚನಜ್ಞಸ್ಯ ಶಿಕ್ಷಾಕ್ಷರಸಮನ್ವಿತಮ್ ।
ಮನಃಪ್ರಹ್ಲಾದಮಶ್ರೌಷಂ ಪಶ್ಚಾದ್ ಹೃದಯತಾಪನಮ್ ॥೨೦॥

ಮಾತನಾಡಲು ಬಲ್ಲ ಅವನ ಶಿಕ್ಷಾಶಾಸ್ತ್ರಸಮ್ಮತವಾದ, ಮನಸ್ಸಿಗೆ ಸಂತೋಷ ಉಂಟುಮಾಡುವ, ಕೊನೆಗೆ ಕ್ಲೇಶವನ್ನುಂಟು ಮಾಡುವ ಮಾತುಗಳನ್ನು ನಾನು ಕೇಳಿದೆನು.

ಶ್ರೀಭಗವಾನ್

ಸಂಜಯೈತದ್ ವಚೋ ಬ್ರೂಯಾಃ ಪ್ರಾಪ್ಯ ಕ್ಷತ್ರಿಯಸಂಸದಮ್ ।
ಭೀಷ್ಮತಃ ಕುರುವೃದ್ಧಸ್ಯ ಆಚಾರ್ಯಸ್ಯ ಚ ಧೀಮತಃ ॥೨೧॥

ಶ್ರೀಭಗವಾನ್– ಸಂಜಯನೇ, ಕ್ಷತ್ರಿಯರ ಸಭೆಗೆ ಹೋಗಿ ನಿನ್ನ ಇಚ್ಛಾನುಸಾರವಾಗಿ ಕುರುವೃದ್ಧನಾದ ಭೀಷ್ಮನಿಗೂ ಮತ್ತು ಮೇಧಾವಿಯಾದ ದ್ರೋಣರಿಗೂ ಕೇಳುವಂತೆ ಈ ಮಾತುಗಳನ್ನು ಆಡು.

ಅರ್ಥಾಂಸ್ಯಜತ ಪಾತ್ರೇಷು ಸುಖಮಾಪ್ನುತ ಕಾಮಜಮ್ ।
ಪ್ರಿಯಂ ಪ್ರಿಯೇಭ್ಯಶ್ಚರತ ರಾಜಾ ಹಿ ತ್ವರತೇ ಜಯೇ ॥೨೨॥

ಪಾತ್ರರಲ್ಲಿ ದಾನವನ್ನು ಮಾಡಿ; ಬಯಸಿದ ಸುಖಗಳನ್ನು ಅನುಭವಿಸಿ; ಪ್ರಿಯರಿಗೆ ಮಾಡಬೇಕಾದ ಪ್ರಿಯಗಳನ್ನು ಮಾಡಿ; ಏಕೆಂದರೆ ಧರ್ಮರಾಜನು ಜಯವನ್ನು ಪಡೆಯಲು ತ್ವರೆ ಮಾಡುತ್ತಿದ್ದಾನೆ.

ಯಜಧ್ವಂ ವಿವಿಧೈರ್ಯಜ್ಞೈರ್ದಕ್ಷಿಣಾಶ್ಚ ಪ್ರಯಚ್ಛತ ।
ಪುತ್ರೈರ್ದಾರೈಶ್ಚ ಮೋದಧ್ವಮಾಗತಂ ವೋ ಮಹದ್ಭಯಮ್ ॥೨೩॥

ಅನೇಕ ಯಜ್ಞಗಳನ್ನು ಮಾಡಿ; ದಕ್ಷಿಣೆಗಳನ್ನು ನೀಡಿ; ಪತ್ನೀ-ಪುತ್ರರ ಜೊತೆಯಲ್ಲಿ ಸಂತೋಷವನ್ನು ಪಡಿ; ನಿಮಗೆ ದೊಡ್ಡ ಭಯವು ಬಂದೊದಗಿದೆ.

ಗೋವಿಂದೇತಿ ಯದಾಕ್ರಂದತ್ ಕೃಷ್ಣಾ ಮಾಂ ದೂರವಾಸಿನಮ್ ।
ಋಣಂ ಪ್ರವೃದ್ಧಮಿವ ಮೇ ಹೃದಯಾನ್ನಪಸರ್ಪತಿ ॥೨೪॥

ದೂರದಲ್ಲಿದ್ದ ನನ್ನನ್ನು ದ್ರೌಪದಿಯು ಗೋವಿಂದ ಎಂದು ಕರೆದು ಏನು ಋಣ ಉಂಟಾಗಿದೆಯೋ ಅದು ಬೆಳೆದು ನನ್ನ ಮನಸ್ಸಿನಿಂದ ಎಂದೂ ಹೋಗುವುದಿಲ್ಲ.

ತೇಜೋಮಯಂ ದುರಾಧರ್ಷಂ ಬಿಭ್ರತಾ ಗಾಂಡಿವಂ ಧನುಃ ।
ಮದ್ದ್ವಿತೀಯೇನ ಪಾರ್ಥೇನ ವೈರಂ ವಃ ಪ್ರತ್ಯುಪಸ್ಥಿತಮ್ ॥೨೫॥

ತೇಜೋಮಯವಾದ, ಸೋಲಿಸಲು ಅಸಾಧ್ಯವಾದ ಗಾಂಡೀವ ಧನುಸ್ಸನ್ನು ಹೊಂದಿದ ನನ್ನ ಸಹಾಯವುಳ್ಳ ಅರ್ಜುನನ ಜೊತೆಯಲ್ಲಿ ನೀವು ವೈರವನ್ನು ಕಟ್ಟಿಕೊಂಡಿದ್ದೀರಿ.

ಸಂಜಯಃ

ಕೃಷ್ಣಸ್ಯೈತದ್ ವಚಃ ಶ್ರುತ್ವಾ ಭಯಂ ಮೇ ಮಹದಾವಿಶತ್ ।
ತವ ಪುತ್ರಸ್ಯ ಲೋಭಂ ಚ ವರ್ಧಮಾನಂ ಪ್ರಪಶ್ಯತಃ ॥೨೬॥

ಸಂಜಯ– ಕೃಷ್ಣನ ಈ ಮಾತುಗಳನ್ನು ಕೇಳಿ ನಿನ್ನ ಪುತ್ರನಿಗೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಲೋಭವನ್ನೂ ನೋಡಿ ನನಗೆ ದೊಡ್ಡ ಭಯವುಂಟಾಯಿತು.

ಸೋಽಯಮಿಂದ್ರಸಮೌ ವೀರೌ ತೌ ಮಂದೋ ನಾವಬುದ್ಧ್ಯತೇ ।
ಭೀಷ್ಮದ್ರೋಣಾಶ್ರಯಾಚ್ಚೈವ ಕರ್ಣಸ್ಯ ಚ ವಿಕತ್ಥನಾತ್ ॥೨೭॥

ಕೃಷ್ಣಾರ್ಜುನರು ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ವೀರರು. ಈ ಮಂದನಾದ ದುರ್ಯೋಧನನು ಭೀಷ್ಮ-ದ್ರೋಣರನ್ನು ಆಶ್ರಯಿಸಿರುವುದರಿಂದಲೂ ಮತ್ತು ಕರ್ಣನ ಹೊಗಳಿಕೆಯ ಮಾತುಗಳಿಂದಲೂ ಅದನ್ನು ತಿಳಿಯುತ್ತಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕೋನಪಂಚಾಶೋಽಧ್ಯಾಯಃ ॥

॥ ವ್ಯಾಸಾಭಿಗಮನಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನಲವತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತನೆಯ ಅಧ್ಯಾಯ

ಸಂಜಯನಿಂದ ಧೃತರಾಷ್ಟ್ರನನ್ನು ಕುರಿತು ಅರ್ಜುನಾದಿಗಳ ಸಂದೇಶದ ಕಥನ.

ಧೃತರಾಷ್ಟ್ರಃ

ಪೃಚ್ಛಾಮಿ ತ್ವಾಂ ಸಂಜಯ ರಾಜಮಧ್ಯೇ
ಯದಬ್ರವೀದ್ ವಾಕ್ಯಮದೀನಸತ್ತ್ವಃ ।
ಧನಂಜಯಸ್ತಾತ ಯುಧಾಂ ಪ್ರಣೇತಾ
ದುರಾತ್ಮನಾಂ ಜೀವಿತಚ್ಛಿನ್ ಮಹಾತ್ಮಾ ॥೧॥

ಧೃತರಾಷ್ಟ್ರ- ಎಲೈ ಪ್ರೀತಿಪಾತ್ರನಾದ ಸಂಜಯನೇ, ಮಹಾಧೈರ್ಯಶಾಲಿಯೂ, ದುಷ್ಟರನ್ನು ಸಂಹರಿಸುವವನೂ, ಪಾಂಡವರ ಯುದ್ಧನಾಯಕನೂ, ಮಹಾತ್ಮನೂ ಆದ ಅರ್ಜುನನು ಏನು ಹೇಳಿದನೆಂದು ನಿನ್ನನ್ನು ರಾಜರ ಮಧ್ಯದಲ್ಲಿ ಕೇಳುತ್ತಿದ್ದೇನೆ.

ಸಂಜಯಃ

ದುರ್ಯೋಧನೋ ವಾಚಮಿಮಾಂ ಶೃಣೋತು
ಯದಬ್ರವೀದರ್ಜುನೋ ಯೋತ್ಸ್ಯಮಾನಃ ।
ಯುಧಿಷ್ಠಿರಸ್ಯಾನುಮತೇ ಮಹಾತ್ಮಾ
ಧನಂಜಯಃ ಶೃಣ್ವತಃ ಕೇಶವಸ್ಯ ॥೨॥

ಸಂಜಯ– ಯುದ್ಧವನ್ನು ಮಾಡಲು ಬಯಸಿದ ಮಹಾತ್ಮನಾದ ಅರ್ಜುನನು ಯುಧಿಷ್ಠಿರನ ಅನುಮತಿಯನ್ನು ಪಡೆದು, ಕೃಷ್ಣನ ಸಮ್ಮುಖದಲ್ಲಿ ಏನನ್ನು ಮಾತನಾಡಿದನೋ ಅದನ್ನು ದುರ್ಯೋಧನನು ಕೇಳಲಿ.

ಅವಿತ್ರಸ್ತೋ ಬಾಹುವೀರ್ಯಂ ವಿಜಾನನ್
ಉಪಹರ್ತೇ ವಾಸುದೇವಸ್ಯ ವೀರಃ ।
ಅವೋಚನ್ಮಾಂ ಯೋತ್ಸ್ಯಮಾನಃ ಕಿರೀಟೀ
ಮಧ್ಯೇ ಬ್ರೂಯಾ ಧಾರ್ತರಾಷ್ಟ್ರಂ ಕುರೂಣಾಮ್ ॥೩॥

ತನ್ನ ಬಾಹುಬಲವನ್ನು ತಿಳಿದ ವೀರನಾದ ಯುದ್ಧವನ್ನು ಬಯಸುವ ಅರ್ಜುನನು ಯಾವ ಹೆದರಿಕೆಯೂ ಇಲ್ಲದೆ ಕೃಷ್ಣನ ಜೊತೆಯಲ್ಲಿ ಏಕಾಂತದಲ್ಲಿದ್ದವನಾಗಿ ನನ್ನನ್ನು ಕುರಿತು ಕುರುಗಳ ಮಧ್ಯದಲ್ಲಿರುವ ದುರ್ಯೋಧನನಿಗೆ ಈ ಮಾತುಗಳನ್ನು ಹೇಳು ಎಂದು ಹೇಳಿದನು.

ಸಂಶೃಣ್ವತಸ್ತಸ್ಯ ದುರ್ಭಾಷಿಣೋ ವೈ
ದುರಾತ್ಮನಃ ಸೂತಪುತ್ರಸ್ಯ ಸೂತ ।
ಯೋ ಯೋದ್ಧುಮಾಶಂಸತೇ ಮಾಂ ಸದೈವ
ಮಂದಪ್ರಜ್ಞಃ ಕಾಲಪಕ್ವೋಽತಿಮೂಢಃ ॥೪॥

ಎಲೈ ಸೂತನೇ, ದುಷ್ಟವಚನಗಳನ್ನು ಮಾತನಾಡುವ ದುರಾತ್ಮನಾದ ಸೂತಪುತ್ರನಾದ ಯಾವ ಕರ್ಣನು ಮಂದಪ್ರಜ್ಞೆಯುಳ್ಳವನಾಗಿ, ಅತಿಮೂಢನಾಗಿ, ಸನ್ನಿಹಿತ ಮೃತ್ಯುವಾಗಿ ನನ್ನ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸುತ್ತಾನೆಯೋ ಅವನೂ ಕೇಳುವಂತೆ ಹೇಳು.

ಯೇ ವೈ ರಾಜಾನಃ ಪಾಂಡವಾಯೋಧನಾಯ
ಸಮಾನೀತಾಃ ಶೃಣ್ವತಾಂ ಚಾಪಿ ತೇಷಾಮ್ ।
ಯಥಾ ಸಮಗ್ರಂ ವಚನಂ ಮಯೋಕ್ತಂ
ಸಹಾಮಾತ್ಯಂ ಶ್ರಾವಯೇಥಾ ನೃಪಂ ತತ್ ॥೫॥

ಪಾಂಡವರಾದ ನಮ್ಮ ಜೊತೆಯಲ್ಲಿ ಯುದ್ಧವನ್ನು ಮಾಡಲು ಯಾವ ರಾಜರು ದುರ್ಯೋಧನನಿಂದ ಕರೆತರಲ್ಪಟ್ಟಿದ್ದಾರೆಯೋ ಅವರೂ ಕೇಳುವಂತೆ ನನ್ನ ಸಮಗ್ರವಾದ

ಮಾತುಗಳನ್ನು ಅಮಾತ್ಯರಿಂದ ಕೂಡಿದ ದುರ್ಯೋಧನನಿಗೆ ಕೇಳಿಸುವವನಾಗು (ಎಂದು ಹೇಳಿದನು).

ಯಥಾ ಗಿರಂ ದೇವರಾಜಸ್ಯ ದೇವಾಃ
ಶುಶ್ರೂಷಂತೇ ವಜ್ರಹಸ್ತಸ್ಯ ಸರ್ವೇ ।
ತಥಾಽಶೃಣ್ವನ್ ಪಾಂಡವಾಃ ಸೃಂಜಯಾಶ್ಚ
ಕಿರೀಟಿನಾ ವಾಚಮುಕ್ತಾಂ ಸಮರ್ಥಾಮ್ ॥೬॥

ಹೇಗೆ ವಜ್ರಹಸ್ತನಾದ ದೇವರಾಜನಾದ ಇಂದ್ರನ ಮಾತುಗಳನ್ನು ಎಲ್ಲಾ ದೇವತೆಗಳೂ ಕೇಳಲು ಬಯಸುತ್ತಾರೆಯೋ ಅದರಂತೆ ಪಾಂಡವರು ಮತ್ತು ಸೃಂಜಯರು ಅರ್ಜುನನು ಆಡಿದ ಸಮರ್ಥವಾದ ಮಾತುಗಳನ್ನು ಆಲಿಸಿದರು.

ನ ಚೇದ್ ರಾಜ್ಯಂ ಮುಂಚತಿ ಧಾರ್ತರಾಷ್ಟ್ರೋ
ಯುಧಿಷ್ಠಿರಸ್ಯಾಜಮೀಢಸ್ಯ ರಾಜ್ಞಃ ॥೭॥

ಅಸ್ತಿ ನೂನಂ ಕರ್ಮ ಕೃತಂ ಪುರಸ್ತಾದ್
ಅನಿರ್ವಿಷ್ಟಂ ಪಾಪಕಂ ಧಾರ್ತರಾಷ್ಟ್ರೈಃ ।
ಯೇಷಾಂ ಯುದ್ಧಂ ಭೀಮಸೇನಾರ್ಜುನಾಭ್ಯಾಂ
ತಥಾಽಶ್ವಿಭ್ಯಾಂ ವಾಸುದೇವೇನ ಚೈವ ॥೮॥

ಅಜಮೀಢನಾದ ಯುಧಿಷ್ಠಿರ ರಾಜನಿಗೆ ದುರ್ಯೋಧನನು ರಾಜ್ಯವನ್ನು ಕೊಡದಿದ್ದರೆ ಹಿಂದೆ ದುರ್ಯೋಧನಾದಿಗಳು ಮಾಡಿದ ಪಾಪಕೃತ್ಯಗಳಿಗೆ ಪ್ರತೀಕಾರವನ್ನು ಮಾಡದೆ ಅವು ಹಾಗೆಯೇ ಉಳಿದಿವೆ. ಅದರಿಂದ ಅವರಿಗೆ ಭೀಮಸೇನಾರ್ಜುನರಿಂದಲೂ, ನಕುಲ-ಸಹದೇವರಿಂದಲೂ, ಕೃಷ್ಣನಿಂದಲೂ ಯುದ್ಧವು ಪ್ರಾಪ್ತವಾಗಿದೆ.

ಶೈನೇಯೇನ ಧ್ರುವಮಾತ್ತಾಯುಧೇನ
ಧೃಷ್ಟದ್ಯುಮ್ನೇನಾಥ ಶಿಖಂಡಿನಾ ಚ ।
ಯುಧಿಷ್ಠಿರೇಣೇಂದ್ರಕಲ್ಪೇನ ಚೈವ
ಯೋಽವಧ್ಯಾನಾನ್ನಿರ್ದಹೇದ್ ಗಾಂ ದಿವಂ ಚ ॥೯॥

ಆಯುಧವನ್ನು ಧರಿಸಿದ ಸಾತ್ಯಕಿಯಿಂದಲೂ, ಧೃಷ್ಟದ್ಯುಮ್ನನಿಂದಲೂ ಮತ್ತು ಶಿಖಂಡಿಯಿಂದಲೂ ಅದರಂತೆಯೇ ಇಂದ್ರಸಮಾನನಾದ ಯಾವನು ಕೋಪಪೂರ್ವಕವಾದ ತನ್ನ ಅವಜ್ಞಾನದಿಂದಲೇ ಭೂಮಿಯನ್ನೂ ಮತ್ತು ಅಂತರಿಕ್ಷವನ್ನೂ ಸುಡಬಲ್ಲನೋ ಅಂತಹ ಯುಧಿಷ್ಠಿರನ ಜೊತೆಯಲ್ಲಿಯೂ (ಯುದ್ಧವು) ಪ್ರಾಪ್ತವಾಗಿದೆ.

ತೈಶ್ಚೇದ್ ಯೋದ್ಧುಂ ಮನ್ಯತೇ ಧಾರ್ತರಾಷ್ಟ್ರೋ
ನಿರ್ವೃತ್ತೋಽರ್ಥಃ ಸಕಲಃ ಪಾಂಡವಾನಾಮ್ ।
ಮಾ ತತ್ ಕಾರ್ಷೀಃ ಪಾಂಡವಸ್ಯಾರ್ಥಹೇತೋಃ
ಅಪೈಹಿ ಯುದ್ಧಂ ಯದಿ ಮನ್ಯಸೇ ತ್ವಮ್ ॥೧೦॥

ದುರ್ಯೋಧನನು ಅವರ ಜೊತೆಯಲ್ಲಿ ಯುದ್ಧಮಾಡುವುದನ್ನು ನಿಶ್ಚಯಿಸಿದರೆ ಪಾಂಡವರಿಗೆ ಸಕಲಾಭೀಷ್ಟಗಳೂ ಸಿದ್ಧವಾದಂತೆಯೇ. ಪಾಂಡವರ ದ್ರವ್ಯವನ್ನು ಸಂಪಾದಿಸುವುದಕ್ಕಾಗಿ ಯುದ್ಧವನ್ನು ಮಾಡಬೇಡ. ನಿನಗೆ ವಿವೇಕವಿರುವುದಾದರೆ ಯುದ್ಧದಿಂದ ಹಿಂದೆ ಸರಿ.

ಯಾಂ ತಾಂ ವನೇ ದುಃಖಶಯ್ಯಾಮವಾತ್ಸೀತ್
ಪ್ರವ್ರಾಜಿತಃ ಪಾಂಡವೋ ಧರ್ಮಚಾರೀ ।
ಆಶ್ಲಿಷ್ಯತೇ ದುಃಖತರಾಮನಾಥಾಮ್
ಅಂತ್ಯಾಂ ಶಯ್ಯಾಂ ಧಾರ್ತರಾಷ್ಟ್ರಃ ಪರಾಸುಃ ॥೧೧॥

ಧರ್ಮಾಚರಣೆಯನ್ನು ಮಾಡುವ ಪಾಂಡುಪುತ್ರನಾದ ಧರ್ಮರಾಜನು ಕಾಡಿಗೆ ಹೋಗಿ ಯಾವ ದುಃಖಶಯನಗಳನ್ನು ಕಳೆದನೋ, ಧೃತರಾಷ್ಟ್ರಪುತ್ರನಾದ ದುರ್ಯೋಧನನು ಪ್ರಾಣಗಳನ್ನು ಕಳೆದುಕೊಂಡು ಅದಕ್ಕಿಂತಲೂ ದುಃಖತರವಾದ ಅನಾಥವಾದ ಅಂತ್ಯಶಯ್ಯೆಯನ್ನು ಪಡೆಯುವನು.

ಮಾಯಾಪದಂ ಪ್ರಣಿಧಾನಾರ್ಜವಾಭ್ಯಾಂ
ತಪೋದಮಾಭ್ಯಾಂ ಧರ್ಮಗುಪ್ತ್ಯಾ ಬಲೇನ ।
ಸತ್ಯಂ ಬ್ರುವನ್ ಪ್ರತಿಪನ್ನೋ ನೃಪೋ ನಃ
ತಿತಿಕ್ಷಮಾಣಃ ಕ್ಲಿಶ್ಯಮಾನೋಽತಿವೇಲಮ್ ॥೧೨॥

ಯದಾ ಜ್ಯೇಷ್ಠಃ ಪಾಂಡವಃ ಸಂಶಿತಾತ್ಮಾ
ಕ್ರೋಧಂ ಯಚ್ಛನ್ ವರ್ಷಪೂಗಾನ್ ಸುಘೋರಮ್ ।
ಅವಸ್ರಷ್ಟಾ ಕುರುಷೂದ್ವೃತ್ತಚೇತಾಃ
ತದಾ ಯುದ್ಧಂ ಧಾರ್ತರಾಷ್ಟ್ರೋಽನು ಪಶ್ಯೇತ್ ॥೧೩॥

ನಮ್ಮ ರಾಜನಾದ ಯಾವ ಯುಧಿಷ್ಠಿರನು ನಿನ್ನ ಕಪಟದಿಂದ ನಮಗೆ ಉಂಟಾದ ಆಪತ್ತುಗಳನ್ನು ತನ್ನ ಅವಧಾನ ಮತ್ತು ಆರ್ಜವಗಳಿಂದಲೂ, ತಪಸ್ಸು ಮತ್ತು ಇಂದ್ರಿಯ ನಿಗ್ರಹದಿಂದಲೂ, ಧರ್ಮರಕ್ಷಣೆ ಮತ್ತು ಬಲದಿಂದಲೂ, ಸತ್ಯವಚನಗಳಿಂದಲೂ ಸಹನೆ ಮಾಡುತ್ತಾ ಬಹಳ ಕ್ಲೇಶಕ್ಕೆ ಒಳಗಾಗಿದ್ದಾನೆಯೋ ಅಂತಹ ನಮ್ಮ ಜ್ಯೇಷ್ಠನಾದ, ಮನೋನಿಗ್ರಹವುಳ್ಳ, ಘೋರವಾದ ಕ್ರೋಧವನ್ನು ಬಹಳ ಕಾಲದಿಂದ ತಡೆದುಕೊಂಡಿರುವ ಧರ್ಮರಾಜನು ಕುರುಗಳ ಮೇಲೆ ಮನಸ್ಸಿನಲ್ಲಿ ಕೋಪವನ್ನು ತಂದುಕೊಂಡು, ಅದನ್ನು ದುರ್ಯೋಧನನ ಮೇಲೆ ತಿರುಗಿಸಿದರೆ ಆಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪ ಪಡಬೇಕಾದೀತು.

ಕೃಷ್ಣವರ್ತ್ಮೇವ ಜ್ವಲಿತಃ ಸಮಿದ್ಧೋ
ಯಥಾ ದಹೇತ್ ಕಕ್ಷಮಗ್ನಿರ್ನಿದಾಘೇ ।
ಏವಂ ದಗ್ಧ್ವಾ ಧಾರ್ತರಾಷ್ಟ್ರಸ್ಯ ಸೇನಾಂ
ಯುಧಿಷ್ಠಿರಃ ಕ್ರೋಧದೀಪ್ತೋಽನ್ವವೇಕ್ಷ್ಯ ॥೧೪॥

ಬೇಸಿಗೆಯ ಕಾಲದಲ್ಲಿ ಹೊತ್ತಿಸಿದ ಅಗ್ನಿಯು ಚೆನ್ನಾಗಿ ಬೆಳೆದು ಜ್ವಾಲೆಗಳಿಂದ ಕೂಡಿ ಹುಲ್ಲುಗಾವಲನ್ನು ಹೇಗೆ ಸುಡುವುದೋ ಅದರಂತೆ ಕ್ರೋಧದೀಪ್ತನಾದ ಯುಧಿಷ್ಠಿರನು ದುರ್ಯೋಧನ ಸೇನೆಯನ್ನು ನೋಡಿ ಸುಡುವವನಾಗುತ್ತಾನೆ.

ಯದಾ ದ್ರಷ್ಟಾ ಭೀಮಸೇನಂ ರಥಸ್ಥಂ
ಗದಾಹಸ್ತಂ ಕ್ರೋಧವಿಷಂ ವಮಂತಮ್ ।
ದುರ್ಮರ್ಷಣಂ ಪಾಂಡವಂ ಭೀಮವೇಗಂ
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೧೫॥

ಯಾವಾಗ ರಥದಲ್ಲಿ ಕುಳಿತು ಕೈಯಲ್ಲಿ ಗದೆಯನ್ನು ಹಿಡಿದು ಕ್ರೋಧವಿಷವನ್ನು ಉಗುಳುವ ಭಯಂಕರ ವೇಗವುಳ್ಳ ಸಹನೆ ಇಲ್ಲದಿರುವ ಪಾಂಡುಪುತ್ರನಾದ ಭೀಮನನ್ನು ದುರ್ಯೋಧನನು ನೋಡುವನೋ ಆಗ ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಸೇನಾಗ್ರಗಂ ದಂಸಿತಂ ಭೀಮಸೇನಂ
ಲಕ್ಷಣ್ಯವಂತಂ ವೀರಹಣಂ ಪರೇಷಾಮ್ ।
ಘ್ನಂತಂ ಚಮೂಮಂತಕಸನ್ನಿಕಾಶಂ
ತದಾ ಸ್ಮರ್ತಾ ವಚನಸ್ಯಾತಿಮಾನೀ ॥೧೬॥

ಸೇನೆಯ ಮುಂಭಾಗದಲ್ಲಿ ಕವಚವನ್ನು ಧರಿಸಿದ, ದಿವ್ಯಲಕ್ಷಣಗಳಿಂದ ಕೂಡಿದ, ಶತ್ರುಗಳ ವೀರರನ್ನು ಸಂಹರಿಸುವ, ಯಮನಂತೆ ಕಾಂತಿಯನ್ನು ಹೊಂದಿ ಶತ್ರುಸೈನ್ಯವನ್ನು ಸಂಹರಿಸುವ, ಭೀಮಸೇನನನ್ನು ನೋಡಿದಾಗ ಬಹಳ ಗರ್ವವುಳ್ಳ ದುರ್ಯೋಧನನು ನನ್ನ ಮಾತುಗಳನ್ನು ಸ್ಮರಿಸುವನು.

ಯದಾ ದ್ರಷ್ಟಾ ಭೀಮಸೇನೇನ ನಾಗಾನ್
ನಿಪಾತಿತಾನ್ ಗಿರಿಕೂಟಪ್ರಕಾಶಾನ್ ।
ಕುಂಭೈರಿವಾಸೃಗ್ವಮತೋ ಭಿನ್ನಕುಂಭಾನ್
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೧೭॥

ಪರ್ವತಶಿಖರಗಳಂತೆ ಇರುವ, ಹೊಡೆದು ಉರುಳಿಸಲ್ಪಟ್ಟ, ಕುಂಭಸ್ಥಲದಿಂದ ಕೊಡಗಳಿಂದ ರಕ್ತವನ್ನು ಸುರಿಯುವಂತೆ ರಕ್ತವನ್ನು ಸುರಿಸುತ್ತಿರುವ ಕುಂಭಸ್ಥಲವು ಒಡೆದ ಭೀಮಸೇನನಿಂದ ಹತವಾದ ಗಜಗಳನ್ನು ದುರ್ಯೋಧನನು ಯಾವಾಗ ನೋಡುವನೋ ಆಗ ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಮಹಾಸಿಂಹೋ ಗಾ ಇವ ಸಂಪ್ರವಿಶ್ಯ
ಗದಾಪಾಣಿರ್ಧಾರ್ತರಾಷ್ಟ್ರಾನುಪೇತ್ಯ ।
ಯದಾ ಭೀಮೋ ಭೀಮರೂಪೋ ನಿಹಂತಾ
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೧೮॥

ದೊಡ್ಡ ಸಿಂಹವು ಗೋವುಗಳ ಹಿಂಡನ್ನು ಪ್ರವೇಶಿಸಿದಂತೆ ಭಯಂಕರ ರೂಪವುಳ್ಳ ಶತ್ರುಸಂಹಾರಕನಾದ ಗದಾಪಾಣಿಯಾದ ಭೀಮಸೇನನು ಯಾವಾಗ ದುರ್ಯೋಧನನ

ಸೈನ್ಯವನ್ನು ಪ್ರವೇಶಿಸುತ್ತಾನೆಯೋ ಆಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪ ಪಡುವನು.

ಮಹಾಭಯೇ ವೀತಭಯಃ ಕೃತಾಸ್ತ್ರ
ಸಮಾಗಮೇ ಶತ್ರುಬಲಾವಮರ್ದೀ ।
ಸಕೃದ್ರಥೇನ ಪ್ರತಿಯಾನ್ ರಥೌಘಾನ್
ಪದಾತಿಸಂಘಾನ್ ಗದಯಾ ವಿನಿಘ್ನನ್ ॥೧೯॥

ಸೈನ್ಯಾನನೇಕಾಂಸ್ತರಸಾ ವಿಮೃದ್ನನ್
ಯದಾ ಚೈತ್ತಾ ಧಾರ್ತರಾಷ್ಟ್ರಸ್ಯ ಸೈನ್ಯಮ್ ।
ಛಿಂದನ್ ವನಂ ಪರಶುನೇವ ಕೃತ್ಸ್ನಂ
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೨೦॥

ಮಹಾಭಯಂಕರವಾದ ಯುದ್ಧದಲ್ಲಿ ತಾನು ನಿರ್ಭಯನಾಗಿ ಅಸ್ತ್ರನಿಪುಣನಾದ, ಶತ್ರುಸೈನ್ಯವನ್ನು ಮರ್ದನ ಮಾಡುವ, ಭೀಮಸೇನನು ಒಮ್ಮೆ ರಥದಿಂದ ಶತ್ರುಗಳ ರಥಸಮೂಹವನ್ನು ಸಮೀಪಿಸಿ ಗದೆಯಿಂದ ಪದಾತಿಗಳ ಸಮೂಹವನ್ನು ಸಂಹರಿಸುತ್ತಾ ಅನೇಕ ಸೈನ್ಯಗಳನ್ನು ತನ್ನ ವೇಗದಿಂದ ಮರ್ದಿಸುತ್ತಾ, ದುರ್ಯೋಧನನ ಸೈನ್ಯವನ್ನು ಕೊಡಲಿಯಿಂದ ವನವನ್ನು ನಾಶಮಾಡಿದಂತೆ ಯಾವಾಗ ನಾಶಮಾಡುವನೋ, ಆಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ತೃಣಪ್ರಾಯಂ ಜ್ವಲನೇನೇವ ದಗ್ಧಂ
ಗ್ರಾಮಂ ಯಥಾ ಧಾರ್ತರಾಷ್ಟ್ರಾನ್ ಸಮೀಕ್ಷ್ಯ ।
ಪಕ್ವಂ ಸಸ್ಯಂ ವೈದ್ಯುತೇನೇವ ದಗ್ಧಂ
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೨೧॥

ತೃಣಕ್ಕೆ ಸಮಾನವಾದ ವಸ್ತುಗಳು ಅಗ್ನಿಯಿಂದ ಸುಡಲ್ಪಡುವಂತೆ ತಪೋವನದ ಫಲಭರಿತ ಸಸ್ಯಗಳು ಸಿಡಿಲಿನಿಂದ ಸುಡಲ್ಪಟ್ಟಂತೆ ಯಾವಾಗ ಭೀಮಸೇನನು ಧೃತರಾಷ್ಟ್ರ ಪುತ್ರರನ್ನು ನೋಡಿ ವ್ಯವಹರಿಸುತ್ತಾನೆಯೋ ಆಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಪರಾಜಿತಂ ವಿಪುಲಂ ಸ್ವಂ ಬಲೌಘಂ
ಹತಪ್ರವೀರಂ ವಿಮುಖಂ ಭಯಾರ್ತಮ್ ।
ಪರಾಙ್ಮುಖಂ ಪ್ರಾಯಶೋ ನಷ್ಟಯೋಧಂ
ಶಸ್ತ್ರಾರ್ಚಿಷಾ ಭೀಮಸೇನೇನ ದಗ್ಧಂ
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೨೨॥

ಯಾವಾಗ ತನ್ನ ವಿಪುಲವಾದ ಸೈನ್ಯಪ್ರವಾಹವು ವೀರರನ್ನು ಕಳೆದುಕೊಂಡು ಭಯಾರ್ತವಾಗಿ, ಯುದ್ಧಕ್ಕೆ ವಿಮುಖವಾಗಿ ಯೋಧರನ್ನು ಹೆಚ್ಚಾಗಿ ಕಳೆದುಕೊಂಡು ಭೀಮಸೇನನ ಶಸ್ತ್ರಾಗ್ನಿಯಿಂದ ದಗ್ಧವಾಗಿ ಪರಾಜಿತವಾಗುತ್ತದೆಯೋ ಆಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಉಪಾಸಂಗಾದುದ್ಧರನ್ ದಕ್ಷಿಣೇನ
ವರಂ ಶರಂ ನಕುಲಶ್ಚಿತ್ರಯೋಧೀ ।
ಯದಾ ರಥಾಗ್ರ್ಯಾನ್ ರಥಿನಃ ಪ್ರವೇಪ್ತಾ
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೨೩॥

ಚಿತ್ರಯೋಧಿಯಾದ ನಕುಲನು ಬಲಗೈಯಿಂದ ಬತ್ತಳಿಕೆಯಿಂದ ಬಾಣಗಳನ್ನು ತೆಗೆದು ರಥಶ್ರೇಷ್ಠರಾದ ರಥಿಕರನ್ನು ಯಾವಾಗ ಕತ್ತರಿಸುತ್ತಾನೆಯೋ ಆಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಸುಖೋಚಿತೋ ದುಃಖಶಯ್ಯಾಂ ವನೇಷು
ದೀರ್ಘಂ ಕಾಲಂ ನಕುಲೋ ಯಾಮಶೇತ ।
ಆಶೀವಿಷಃ ಕ್ರುದ್ಧ ಇವಾಚರೇದ್ ಯದಾ
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೨೪॥

ಸುಖೋಚಿತವಾದ ನಕುಲನು ಕಾಡುಗಳಲ್ಲಿ ಬಹುಕಾಲದವರೆಗೆ ಯಾವ ದುಃಖಶಯ್ಯೆಯನ್ನು ಅನುಭವಿಸಿದನೋ ಅದಕ್ಕೆ ಪ್ರತಿಯಾಗಿ ಅವನು ಕೋಪಗೊಂಡ ಸರ್ಪದಂತೆ ಯುದ್ಧಭೂಮಿಯಲ್ಲಿ ಯಾವಾಗ ಎಲ್ಲಾ ಕಡೆಯಲ್ಲಿಯೂ ಸಂಚರಿಸುತ್ತಾನೆಯೋ ಆಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ತ್ಯಕ್ತಾತ್ಮಾನಃ ಪಾರ್ಥಿವಾಯೋಧನಾಯ
ಸಮಾದಿಷ್ಟಾ ಧಾರ್ತರಾಷ್ಟ್ರೇಣ ಸೂತ ।
ಛಿನ್ನಾಃ ಛಿನ್ನಾಃ ಸಹಸೈನ್ಯಾ ದ್ರವಂತಿ
ದೃಷ್ಟ್ವಾ ಪಶ್ಚಾತ್ ತಪ್ಸ್ಯತೇ ಧಾರ್ತರಾಷ್ಟ್ರಃ ॥೨೫॥

ಎಲೈ ಸೂತನೇ, ನಮ್ಮ ಪಕ್ಷದ ರಾಜರ ಜೊತೆಯಲ್ಲಿ ಯುದ್ಧವನ್ನು ಮಾಡಲು ದುರ್ಯೋಧನನಿಂದ ಆದಿಷ್ಟರಾಗಿ ತಮ್ಮ ಪ್ರಾಣಗಳ ಮೇಲಿನ ಆಸೆಯನ್ನು ತೊರೆದು ಬಂದ ಸೈನ್ಯಾಧಿಪತಿಗಳಾದ ರಾಜರು ಛಿನ್ನಭಿನ್ನರಾಗಿ ಓಡಿಹೋಗುತ್ತಾರೆ. ಅವರನ್ನು ನೋಡಿ ದುರ್ಯೋಧನನು ಪಶ್ಚಾತ್ತಾಪಪಡುವನು.

ಶಿಶೂನ್ ಮೃಧೇ ತಾನಶಿಶುಪ್ರಕಾಶಾನ್
ಯದಾ ದ್ರಷ್ಟಾ ಕೌರವಃ ಪಂಚ ಶೂರಾನ್ ।
ತ್ಯಕ್ತ್ವಾ ಪ್ರಾಣಾನ್ ಕೌರವಾನಾದ್ರವಂತಃ
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೨೬॥

ಚಿಕ್ಕವರಾದರೂ ದೊಡ್ಡವರಂತೆ ಯುದ್ಧದಲ್ಲಿ ವರ್ತಿಸುವ ತಮ್ಮ ಪ್ರಾಣಗಳ ಹಂಗನ್ನು ತೊರೆದು ಕೌರವರ ಮೇಲೆ ಆಕ್ರಮಣ ಮಾಡುವ ದ್ರೌಪದಿಯ ಐದುಮಕ್ಕಳನ್ನು ನೋಡಿದಾಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಯಥಾ ಶಕ್ರೋ ದಾನವಾನಾಂ ಜಯಾರ್ಥಂ
ಸುವರ್ಣಭಾರಂ ರಥಮುತ್ತಮಾಶ್ವೈಃ ।
ದಾಂತೈರ್ಯುಕ್ತಂ ಸಹದೇವೋಽಧಿರೂಢಃ
ಶಿರಾಂಸಿ ರಾಜ್ಞಾಂ ಛೇತ್ಸ್ಯತೇ ಮಾರ್ಗಣೌಘೈಃ ॥೨೭॥

ಮಹಾಭಯೇ ಸಂಪ್ರವೃತ್ತೇ ರಥಸ್ಥಂ
ವಿವರ್ತಮಾನಂ ಸಮರೇ ಕೃತಾಸ್ತ್ರಮ್ ।
ಸರ್ವಾ ದಿಶಃ ಸಂಪತಂತಂ ಸಮೀಕ್ಷ್ಯ
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೨೮॥

ಹೇಗೆ ದಾನವರನ್ನು ಜಯಿಸಲು ಇಂದ್ರನು ಪಳಗಿದ ಉತ್ತಮಾಶ್ವಗಳಿಂದ ಕೂಡಿದ ಸುವರ್ಣಮಯವಾದ ರಥವನ್ನು ಏರುತ್ತಾನೆಯೋ ಅದರಂತೆ ಶ್ರೇಷ್ಠವಾದ ರಥವನ್ನು ಏರಿದ ಸಹದೇವನು ತನ್ನ ಬಾಣಗಳ ಸಮೂಹದಿಂದ ಯಾವಾಗ ಶತ್ರುಗಳ ಶಿರಸ್ಸನ್ನು ಛೇದಿಸುತ್ತಾನೆಯೋ; ಯುದ್ಧದಲ್ಲಿ ಮಹಾಭಯವುಂಟಾದಾಗ ರಥದಲ್ಲಿ ಕುಳಿತು ಎಲ್ಲಾ ರಣರಂಗದಲ್ಲಿಯೂ ಸಂಚರಿಸಿ ಅಸ್ತ್ರಪಾರಂಗತನಾದ ಅವನು ಎಲ್ಲ ದಿಕ್ಕುಗಳಲ್ಲಿಯೂ ಶತ್ರುಗಳ ಮೇಲೆ ಎರಗುತ್ತಾನೆಯೋ ಆಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಹ್ರೀನಿಷೇಧೋ ನಿಪುಣಃ ಸತ್ಯವಾದೀ
ಮಹಾಬಲಃ ಸರ್ವಧರ್ಮೋಪಪನ್ನಃ ।
ಗಾಂಧಾರಿಮಾರ್ಗಂಸ್ತುಮುಲೇ ಕ್ಷಿಪ್ರಕಾರೀ
ಕ್ಷೇಪ್ತಾ ಜನಾನ್ ಸಹದೇವಃ ಸಪತ್ನಾನ್ ॥೨೯॥

ದಾಕ್ಷಿಣ್ಯಸ್ವಭಾವದವನೂ, ನಿಪುಣನೂ, ಸತ್ಯವಚನನೂ, ಮಹಾಬಲನೂ, ಸರ್ವಧರ್ಮಗಳಿಂದ ಕೂಡಿದವನೂ, ಬಹಳ ವೇಗವುಳ್ಳವನೂ ಆದ ಸಹದೇವನು ದುರ್ಯೋಧನನನ್ನು ಘೋರವಾದ ಯುದ್ಧದಲ್ಲಿ ಸಮೀಪಿಸಿ ಅವನ ಸೈನ್ಯದ ಯೋಧರನ್ನು ಯಾವಾಗ ಎಸೆಯುತ್ತಾನೆಯೋ ಆಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಯದಾ ದ್ರಷ್ಟಾ ದ್ರೌಪದೇಯಾನ್ ಮಹೇಷೂನ್
ಶೂರಾನ್ ಕೃತಾಸ್ತ್ರಾನ್ ರಥಯುದ್ಧಕೋವಿದಾನ್ ।
ಆಶೀವಿಷಾನ್ ಘೋರವಿಷಾನಿವಾಗತಾನ್
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೩೦॥

ಯಾವಾಗ ರಥಯುದ್ಧದಲ್ಲಿ ಕೋವಿದರೂ, ಅಸ್ತ್ರಪಾರಂಗತರೂ, ಶೂರರೂ, ಮಹಾಬಾಣಗಳನ್ನು ಹೊಂದಿದವರೂ ಆದ ದ್ರೌಪದಿಯ ಪುತ್ರರು ಘೋರವಿಷವುಳ್ಳ ಸರ್ಪಗಳಂತೆ ಯುದ್ಧಕ್ಕೆ ಬಂದ ಶತ್ರುಗಳ ಮೇಲೆ ಎರಗುತ್ತಾರೆಯೋ ಆಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಯದಾಽಭಿಮನ್ಯುಃ ಪರವೀರಹಂತಾ
ಶರೈಃ ಪರಾನ್ ಮೇಘ ಇವಾಭಿವರ್ಷನ್ ।
ವಿಗಾಹಿತಾ ಕೃಷ್ಣಸಮಃ ಕೃತಾಸ್ತ್ರೋ
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೩೧॥

ಪರವೀರಹಂತಕನಾದ ಕೃಷ್ಣನಿಗೆ ಸಮಾನನಾದ, ಅಸ್ತ್ರಪಾರಂಗತನಾದ ಅಭಿಮನ್ಯುವು ಮೋಡವು ಮಳೆಯನ್ನು ಸುರಿಸಿದಂತೆ ಬಾಣಗಳ ಮಳೆಯನ್ನು ಸುರಿಸುತ್ತಾ ಶತ್ರುಸೈನ್ಯದಲ್ಲಿ ಮುನ್ನುಗ್ಗುತ್ತಾನೆಯೋ ಆಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಯದಾ ದ್ರಷ್ಟಾ ಬಾಲಮಬಾಲವೀರ್ಯಂ
ದ್ವಿಷಚ್ಚಮೂಂ ಮೃತ್ಯುಮಿವೋತ್ಪತಂತಮ್ ।
ಸೌಭದ್ರಮಿಂದ್ರಪ್ರತಿಮಂ ಕೃತಾಸ್ತ್ರಂ
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೩೨॥

ಬಾಲನಾದರೂ ದೊಡ್ಡವರ ಪರಾಕ್ರಮವುಳ್ಳ, ಇಂದ್ರನಿಗೆ ಸಮಾನನಾದ, ಅಸ್ತ್ರಪಾರಂಗತನಾದ, ಸುಭದ್ರೆಯ ಮಗನಾದ ಅಭಿಮನ್ಯುವು ಮೃತ್ಯುವಿನಂತೆ ಶತ್ರುಗಳ ಸೈನ್ಯವನ್ನು ಉದ್ದೇಶಿಸಿ ಎರಗುವಾಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಪ್ರಭದ್ರಕಾಃ ಶೀಘ್ರತರಾ ಯುವಾನೋ
ವಿಶಾರದಾಃ ಸಿಂಹಸಮಾನವೀರ್ಯಾಃ ।
ಯದಾ ಕ್ಷೇಪ್ತಾರೋ ಧಾರ್ತರಾಷ್ಟ್ರಾನ್ ಸಸೈನ್ಯಾನ್
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೩೩॥

ಬಹಳ ವೇಗವುಳ್ಳವರೂ, ಯುವಕರೂ, ವಿಶಾರದರೂ, ಸಿಂಹಪರಾಕ್ರಮ ಉಳ್ಳವರೂ ಆದ ಪ್ರಭದ್ರಕರು ತಮ್ಮ ಸೈನ್ಯದಿಂದ ಕೂಡಿದ ಧೃತರಾಷ್ಟ್ರಪುತ್ರರಲ್ಲಿ ಯಾವಾಗ ತಮ್ಮ ಬಾಣಗಳನ್ನು ಎಸೆಯುವರೋ ಆಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ವೃದ್ಧೌ ವಿರಾಟದ್ರುಪದೌ ಮಹಾರಥೌ
ಪೃಥಕ್ಚಮೂಭ್ಯಾಮಭಿವರ್ತಮಾನೌ ।
ಯದಾ ದ್ರಷ್ಟಾರೌ ಧಾರ್ತರಾಷ್ಟ್ರಾನ್ ಸಸೈನ್ಯಾನ್
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೩೪॥

ವೃದ್ಧರೂ, ಮಹಾರಥರೂ, ಬೇರೆ ಬೇರೆ ಅಕ್ಷೋಹಿಣಿ ಸೈನ್ಯಗಳ ಜೊತೆಯಲ್ಲಿ ಪಾಂಡವರನ್ನು ಬಂದು ಸೇರಿದವರೂ ಆದ ವಿರಾಟ, ದ್ರುಪದರು ದುರ್ಯೋಧನನನ್ನೂ, ಅವನ ಸೈನ್ಯವನ್ನೂ ನೋಡುವಾಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಯದಾ ಕೃತಾಸ್ತ್ರೌ ದ್ರುಪದಃ ಪ್ರಚಿನ್ವನ್
ಶಿರಾಂಸಿ ಯೂನಾಂ ಸಮರೇ ರಥಸ್ಥಃ ।
ಕ್ರುದ್ಧಃ ಶರೈಶ್ಛೇತ್ಸ್ಯತಿ ಚಾಪಮುಕ್ತೈಃ
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೩೫॥

ಯಾವಾಗ ಅಸ್ತ್ರಪರಿಣತನಾದ ದ್ರುಪದನು ರಥದಲ್ಲಿ ಕುಳಿತು ಯುದ್ಧದಲ್ಲಿ ಯುವಕರಾದ ಶತ್ರುಗಳ ತಲೆಯನ್ನು ಆರಿಸಿ ಆರಿಸಿ ಕ್ರುದ್ಧನಾಗಿ ಧನುಸ್ಸಿನಿಂದ ಹೊಮ್ಮಿದ ತನ್ನ ಬಾಣಗಳಿಂದ ಛೇದಿಸುವನೋ ಆಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಯದಾ ವಿರಾಟಃ ಪರವೀರಘಾತೀ
ರಣಾಜಿರೇ ಶತ್ರುಚಮೂಂ ಪ್ರವೇಷ್ಟಾ ।
ಮತ್ಸ್ಯೈಃ ಸಾರ್ಧಮನೃಶಂಸರೂಪೈಃ
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೩೬॥

ಪರವೀರಘಾತಕನಾದ ವಿರಾಟನು ರಣರಂಗದಲ್ಲಿ ಕ್ರೂರರಾದ ತನ್ನ ಸೈನಿಕರೊಂದಿಗೆ ಶತ್ರುಸೈನ್ಯವನ್ನು ಯಾವಾಗ ಪ್ರವೇಶಿಸುವನೋ ಆಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪ ಪಡುವನು.

ಜ್ಯೇಷ್ಠಂ ಮಾತ್ಸ್ಯಮನೃಶಂಸಮಾರ್ಯರೂಪಂ
ವಿರಾಟಪುತ್ರಂ ರಥಿನಂ ಪುರಸ್ತಾತ್ ।

ಯದಾ ದ್ರಷ್ಟಾ ದಂಸಿತಂ ಪಾಂಡವಾರ್ಥೇ
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೩೭॥

ಆರ್ಯರೂಪವನ್ನು ಧರಿಸಿದವನೂ, ಉಗ್ರನೂ ಆದ ವಿರಾಟರಾಜನ ಜ್ಯೇಷ್ಠ ಪುತ್ರನು ಕವಚವನ್ನು ಧರಿಸಿ ಪಾಂಡವರ ಸಲುವಾಗಿ ಯುದ್ಧವನ್ನು ಮಾಡಲು ರಥದಲ್ಲಿ ಮುಂದೆ ಕುಳಿತಿರುವುದನ್ನು ಯಾವಾಗ ನೋಡುವನೋ ಆಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ರಣೇ ಹತೇ ಕೌರವಾಣಾಂ ಪ್ರವೀರೇ
ಶಿಖಂಡಿನಾ ಸತ್ತಮೇ ಶಂತನೂಜೇ ।
ನ ಜಾತು ನಃ ಶತ್ರವೋ ಧಾರಯೇಯುಃ
ಅಸಂಶಯಂ ಸತ್ಯಮೇತದ್ ಬ್ರವೀಮಿ ॥೩೮॥

ಕೌರವರ ಮಹಾವೀರನೂ, ಶಂತನು ಪುತ್ರನೂ, ಸಜ್ಜನರಲ್ಲಿ ಅಗ್ರಗಣ್ಯನೂ ಆದ ಭೀಷ್ಮನು ಯುದ್ಧದಲ್ಲಿ ಶಿಖಂಡಿಯಿಂದ ಹತನಾದ ಮೇಲೆ ಶತ್ರುಗಳು ಎಂದೂ ನಮ್ಮನ್ನು ತಡೆಯಲಾರರು. ಈ ವಿಷಯದಲ್ಲಿ ಸಂಶಯವಿಲ್ಲ. ನಾನು ಇದನ್ನು ಸತ್ಯವಾಗಿ ಹೇಳುತ್ತಿದ್ದೇನೆ.

ಯದಾ ಶಿಖಂಡೀ ರಥಿನಃ ಪ್ರಚಿನ್ವನ್
ಭೀಷ್ಮಂ ರಥೇನಾಭಿಯಾತಾ ಪ್ರಮಾಥೀ ।
ದಿವ್ಯೈರ್ಹಯೈರವಮೃದ್ನನ್ ರಥೌಘಾನ್
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೩೯॥

ಯಾವಾಗ ಶತ್ರುಗಳನ್ನು ಮರ್ದಿಸುವ ಶಿಖಂಡಿಯು ರಥದಲ್ಲಿ ಕುಳಿತು ರಥಿಕರನ್ನು ಆರಿಸುತ್ತಾ, ದಿವ್ಯ ಅಶ್ವಗಳನ್ನು ಹೂಡಿದ ತನ್ನ ರಥದಿಂದ ಶತ್ರುಗಳ ರಥಸಮೂಹಗಳನ್ನು ಮರ್ದಿಸುತ್ತಾ ಭೀಷ್ಮನಿಗೆ ಎದುರಾಗಿ ಹೋಗುತ್ತಾನೆಯೋ ಆಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಯದಾ ದ್ರಷ್ಟಾ ಸೃಂಜಯಾನಾಮನೀಕೇ
ಧೃಷ್ಟದ್ಯುಮ್ನಂ ಪ್ರಮುಖೇ ರೋಚಮಾನಮ್ ।

ಅಸ್ತ್ರಂ ಯಸ್ಮೈ ಗುಹ್ಯಮುವಾಚ ಧೀಮಾನ್
ದ್ರೋಣಸ್ತದಾ ತಪ್ಸ್ಯತಿ ಧಾರ್ತರಾಷ್ಟ್ರಃ ॥೪೦॥

ಯಾವ ಧೃಷ್ಟದ್ಯುಮ್ನನಿಗೆ ಮೇಧಾವಿಗಳಾದ ದ್ರೋಣರು ರಹಸ್ಯವಾದ ಅಸ್ತ್ರಗಳನ್ನು ಉಪದೇಶ ಮಾಡಿದರೋ ಅಂತಹ ಧೃಷ್ಟದ್ಯುಮ್ನನು ಸೃಂಜಯರ ಸೈನ್ಯದ ಮುಂಭಾಗದಲ್ಲಿ ಶೋಭಿಸುತ್ತಿರುವುದನ್ನು ಯಾವಾಗ ನೋಡುವನೋ ಆಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಯದಾ ಸ ಸೇನಾಪತಿರಪ್ರಮೇಯಃ
ಪರಾಮೃದ್ನನ್ನಿಷುಭಿರ್ಧಾರ್ತರಾಷ್ಟ್ರಾನ್ ।
ದ್ರೋಣಂ ರಣೇ ಶತ್ರುಸಹೋಽಭಿಯಾತಾ
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೪೧॥

ಅಪ್ರಮೇಯ ಶಕ್ತಿಯುಳ್ಳ ಸೇನಾಧಿಪತಿಯಾದ ಧೃಷ್ಟದ್ಯುಮ್ನನು ತನ್ನ ಬಾಣಗಳಿಂದ ಧೃತರಾಷ್ಟ್ರ ಪುತ್ರರನ್ನು ಮರ್ದಿಸುತ್ತಾ ಶತ್ರುಸಹನಾದ ಅವನು ಯುದ್ಧದಲ್ಲಿ ಯಾವಾಗ ದ್ರೋಣರಿಗೆ ಎದುರಾಗುತ್ತಾನೆಯೋ ಆಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಹ್ರೀಮಾನ್ ಮನಸ್ವೀ ಬಲವಾನ್ ಮನೀಷೀ
ಸ ಲಕ್ಷ್ಮೀವಾನ್ ಸೋಮಕಾನಾಂ ಪ್ರಬರ್ಹಃ ।
ನ ಜಾತು ತಂ ಶತ್ರವೋಽನ್ಯೇ ಸಹೇರನ್
ಯೇಷಾಂ ಸ ಸ್ಯಾದಗ್ರಣೀರ್ವೃಷ್ಣಿಸಿಂಹಃ ॥೪೨॥

ನಾಚಿಕೆಯ ಸ್ವಭಾವವುಳ್ಳವನೂ, ಧೈರ್ಯಶಾಲಿಯೂ, ಬಲಿಷ್ಠನೂ, ಮೇಧಾವಿಯೂ, ಕಾಂತಿವಂತನೂ, ಸೋಮಕರಲ್ಲಿ ಶ್ರೇಷ್ಠನಾದವನೂ ಆದ ವೃಷ್ಣಿಸಿಂಹನಾದ ಸಾತ್ಯಕಿಯು ಯಾರಿಗೆ ನಾಯಕನಾಗಿರುತ್ತಾನೆಯೋ ಅಂತಹ ಸೈನ್ಯವನ್ನು ಶತ್ರುಗಳು ಎಂದೂ ಸಹಿಸಲಾರರು.

ಬ್ರೂಯಾಚ್ಚ ಮಾಂ ಪ್ರವೃಣೀಷ್ವೇತಿ ಲೋಕೇ
ಯುದ್ಧೇಽದ್ವಿತೀಯಂ ಸಚಿವಂ ರಥಸ್ಥಮ್ ।

ಶಿನೇರ್ನಪ್ತಾರಂ ಪ್ರವೃಣೇಮ ಸಾತ್ಯಕಿಂ
ಮಹಾಬಲಂ ವೀತಭಯಂ ಕೃತಾಸ್ತ್ರಮ್ ॥೪೩॥

ಯಾವ ಸಾತ್ಯಕಿಯು ನನ್ನನ್ನು ಸ್ವೀಕರಿಸಿ ಎಂದು ಕೇಳಿಕೊಳ್ಳುತ್ತಾನೆಯೋ, ಯಾವನು ರಥಸ್ಥನಾಗಿ ಯುದ್ಧದಲ್ಲಿ ಅದ್ವಿತೀಯ ಸಚಿವನಾಗುತ್ತಾನೆಯೋ ಅಂತಹ ಮಹಾಬಲವುಳ್ಳ ನಿರ್ಭಯನಾದ, ಅಸಜ್ಜನಾದ, ಶಿನಿಯ ಮೊಮ್ಮಗನಾದ ಸಾತ್ಯಕಿಯನ್ನು ನಾವು ಸ್ವೀಕರಿಸಿದ್ದೇವೆ.

ಯದಾ ಶಿನೀನಾಮಧಿಪೋ ಮಯೋಕ್ತಃ
ಶರೈಃ ಪರಾನ್ ಮೇಘ ಇವ ಪ್ರವರ್ಷನ್ ।
ಪ್ರಚ್ಛಾದಯಿಷ್ಯತ್ಯರಿಹಾ ಯೋಧಮುಖ್ಯಾನ್
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೪೪॥

ನಾನು ಹೇಳಿದ ಶಿನಿಪ್ರವೀರನಾದ, ಶತ್ರುಸಂಹಾರಕನಾದ ಸಾತ್ಯಕಿಯು ಮೋಡಗಳಂತೆ ಶತ್ರುಗಳ ಮೇಲೆ ಬಾಣಗಳ ಮಳೆಯನ್ನು ಸುರಿಸುತ್ತಾ, ಅವರ ಮುಖ್ಯರಾದ ಯೋಧರನ್ನು ತನ್ನ ಬಾಣಗಳಿಂದ ಮುಚ್ಚುತ್ತಾನೆಯೋ ಆಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಯದಾ ಧೃತಿಂ ಕುರುತೇ ಯೋತ್ಸ್ಯಮಾನಃ
ಸ ದೀರ್ಘಬಾಹುರ್ದೃಢಚಾಪೋ ಮಹಾತ್ಮಾ ।
ಸಿಂಹಸ್ಯೇವ ಗಂಧಮಾಘ್ರಾಯ ಗಾವಃ
ಸಂವೇಷ್ಟಂತೇ ಶತ್ರವೋಽಸ್ಮಾದ್ ಯಥಾಽಗ್ನೇಃ ॥೪೫॥

ಯುದ್ಧಮಾಡಲು ಇಚ್ಛಿಸುವ ದೀರ್ಘಬಾಹುವೂ, ದೃಢವಾದ ಬಿಲ್ಲನ್ನು ಉಳ್ಳವನೂ ಮತ್ತು ಮಹಾತ್ಮನೂ ಆದ ಸಾತ್ಯಕಿಯು ಧೈರ್ಯವನ್ನು ಅವಲಂಬಿಸುತ್ತಾನೆಯೋ ಆಗ ಸಿಂಹದ ಗಂಧವನ್ನು ಆಘ್ರಾಣಿಸಿದ ಗೋವುಗಳಂತೆ, ಅಗ್ನಿಯ ಎದುರಿಗೆ ಪದಾರ್ಥಗಳು ಮುದುಡಿ ಹೋಗುವಂತೆ ಶತ್ರುಗಳು ಅವನ ಎದುರಿನಲ್ಲಿ ಮುದುಡಿ ಹೋಗುತ್ತಾರೆ.

ಸ ದೀರ್ಘಬಾಹುರ್ದೃಢಧನ್ವಾ ಮಹಾತ್ಮಾ
ಭಿಂದ್ಯಾತ್ ಗಿರೀನ್ ಸಂಹರೇತ್ ಸರ್ವಲೋಕಾನ್ ।

ಅಸ್ತ್ರೇ ಕೃತೀ ನಿಪುಣಃ ಕ್ಷಿಪ್ರಹಸ್ತೋ
ದಿವಿ ಸ್ಥಿತಃ ಸೂರ್ಯ ಇವಾವಭಾತಿ ॥೪೬॥

ದೀರ್ಘಬಾಹುವೂ, ದೃಢವಾದ ಧನುಸ್ಸುಳ್ಳವನೂ, ಕ್ಷಿಪ್ರಹಸ್ತನೂ, ಅಸ್ತ್ರದಲ್ಲಿಯೂ ಮತ್ತು ಅಭ್ಯಾಸದಲ್ಲಿಯೂ ನಿಪುಣನಾದವನೂ ಮತ್ತು ಮಹಾತ್ಮನೂ ಆದ ಅವನು ಪರ್ವತಗಳನ್ನು ಭೇದಿಸಿಯಾನು, ಎಲ್ಲ ಲೋಕಗಳನ್ನೂ ನಾಶ ಮಾಡಿಯಾನು, ಆಕಾಶದಲ್ಲಿರುವ ಸೂರ್ಯನಂತೆ ಅವನು ಶೋಭಿಸುತ್ತಾನೆ.

ಚಿತ್ರಃ ಸೂಕ್ಷ್ಮಃ ಸುಕೃತೋ ಯಾದವಸ್ಯ
ಅಸ್ತ್ರೇ ಯೋಗೋ ವೃಷ್ಣಿಸಿಂಹಸ್ಯ ಯೋಽಭೂತ್ ।
ಯಥಾವಿಧಂ ಯೋಗಮಾಹುಃ ಪ್ರಶಸ್ತಂ
ಸರ್ವೈರ್ಗುಣೈಃ ಸಾತ್ಯಕಿಸ್ತೈರುಪೇತಃ ॥೪೭॥

ಯದುಕುಲದಲ್ಲಿ ಜನಿಸಿದ ವೃಷ್ಣಿಸಿಂಹನಾದ ಕೃಷ್ಣನಿಗೆ ಎಂತಹ ವಿಚಿತ್ರವಾದ ಸೂಕ್ಷ್ಮವಾದ ಅಸ್ತ್ರಗಳ ಯೋಗವಿದ್ದಿತೋ ಅಂತಹದೇ ಪ್ರಶಸ್ತವಾದ ಸರ್ವಗುಣಗಳಿಂದ ಕೂಡಿದ ಅಸ್ತ್ರಗಳ ಸಂಯೋಗವನ್ನು ಸಾತ್ಯಕಿಯು ಹೊಂದಿದ್ದಾನೆ.

ಹಿರಣ್ಮಯಂ ಶ್ವೇತಹಯೈಶ್ಚತುರ್ಭಿಃ
ಯದಾ ಯುಕ್ತಂ ಸ್ಯಂದನಂ ಮಾಧವಸ್ಯ ।
ದೃಷ್ಟ್ವಾ ಯುದ್ಧೇ ಸಾತ್ಯಕೇರ್ದಾರ್ತರಾಷ್ಟ್ರಃ
ತದಾ ತಪ್ಸ್ಯತ್ಯಕೃತಾತ್ಮಾ ಸ ಮಂದಃ ॥೪೮॥

ಮಧುಕುಲದಲ್ಲಿ ಜನಿಸಿದ ಸಾತ್ಯಕಿಯ ನಾಲ್ಕು ಕುದುರೆಗಳನ್ನು ಹೂಡಿದ ಸುವರ್ಣಮಯವಾದ ರಥವನ್ನು ಯುದ್ಧದಲ್ಲಿ ಯಾವಾಗ ನೋಡುವನೋ ಆಗ ಅಕೃತಾತ್ಮನಾದ, ಮಂದನಾದ ದುರ್ಯೋಧನನು ಪಶ್ಚಾತ್ತಾಪ ಪಡುವನು.

ಯದಾ ರಥಂ ಹೇಮಮಣಿಪ್ರಕಾಶಂ
ಶ್ವೇತಾಶ್ವಯುಕ್ತಂ ವಾನರಕೇತುಮುಗ್ರಮ್ ।
ದೃಷ್ಟ್ವಾ ಮಯಾಪ್ಯಾಸ್ಥಿತಂ ಕೇಶವೇನ
ತದಾ ತಪ್ಸ್ಯತ್ಯಕೃತಾತ್ಮಾ ಸ ಮಂದಃ ॥೪೯॥

ಯಾವಾಗ ಸುವರ್ಣಗಳಿಂದ ಮತ್ತು ರತ್ನಗಳಿಂದ ಪ್ರಕಾಶಿಸುವ, ಶ್ವೇತಾಶ್ವಗಳನ್ನು ಹೂಡಿದ ವಾನರ ಧ್ವಜವುಳ್ಳ ನನ್ನಿಂದ ಮತ್ತು ಕೃಷ್ಣನಿಂದ ಅಧಿಷ್ಠಿತವಾದ ಉಗ್ರವಾದ ರಥವನ್ನು ಅಕೃತಾತ್ಮನಾದ, ಮಂದನಾದ ದುರ್ಯೋಧನನು ನೋಡುವನೋ ಆಗ ಪಶ್ಚಾತ್ತಾಪಪಡುವನು.

ಯದಾ ಮೌರ್ವ್ಯಾಸ್ತಳನಿಷ್ಪೇಷಮುಗ್ರಂ
ಮಹಾಶಬ್ದಂ ವಜ್ರನಿಷ್ಪೇಷತುಲ್ಯಮ್ ।
ವಿಧೂಯಮಾನಸ್ಯ ಮಹಾರಣೇ ಮಯಾ
ಸ ಗಾಂಡೀವಸ್ಯ ಶ್ರೋಷ್ಯತಿ ಮಂದಬುದ್ಧಿಃ ॥೫೦॥

ತದಾ ಮೂಢೋ ಧೃತರಾಷ್ಟ್ರಸ್ಯ ಪುತ್ರಃ
ತಪ್ತಾ ಯುದ್ಧೇ ದುರ್ಮತಿರ್ದುಃಸಹಾಯಃ ।
ದೃಷ್ಟ್ವಾ ಸೈನ್ಯಂ ಬಾಣವರ್ಷಾಂಧಕಾರೇ
ಪ್ರಭಜ್ಯಂತಂ ಗೋಕುಲವದ್ ರಣಾಗ್ರೇ ॥೫೧॥

ಮಂದಬುದ್ಧಿಯಾದ ಅವನು ನಾನು ಮಹಾಯುದ್ಧದಲ್ಲಿ ಗಾಂಡೀವದ ಹೆದೆಯನ್ನು ಎಳೆದು ಬಿಡುವ, ವಜ್ರದ ಬಡಿತಕ್ಕೆ ಸಮಾನವಾದ ಭಯಂಕರವಾದ ಗಾಂಡೀವದ ಮಹಾಶಬ್ದವನ್ನು ಕೇಳುತ್ತಾನೆಯೋ ಆಗ ರಣರಂಗದಲ್ಲಿ ಬಾಣದ ಮಳೆಯಿಂದ ಉಂಟಾದ ಅಂಧಕಾರದಲ್ಲಿ ಗೋವುಗಳ ಸಮೂಹದಂತೆ ಭಗ್ನಗೊಳ್ಳುವ ತನ್ನ ಸೈನ್ಯವನ್ನು ನೋಡಿ ದುರ್ಮತಿಯೂ, ಸಹಾಯರಹಿತನೂ, ಮೂಢನೂ ಆದ ಧೃತರಾಷ್ಟ್ರಪುತ್ರನು ಪಶ್ಚಾತ್ತಾಪ ಪಡುವನು.

ಬಲಾಹಕಾದುಚ್ಚರತಃ ಸುಭೀಮಾನ್
ವಿದ್ಯುತ್‌ಸ್ಫುಲಿಂಗಾನಿವ ಘೋರರೂಪಾನ್ ।
ಸಹಸ್ರಘ್ನಾನ್ ದ್ವಿಷತಾಂ ಸಂಗರೇಷು
ಅಸ್ಥಿಚ್ಛಿದೋ ಮರ್ಮಭಿದಃ ಸುಪುಂಖಾನ್ ॥೫೨॥

ಸ ಚ ಸ್ರಷ್ಟಾ ಜ್ಯಾಮುಖಾದ್ ಬಾಣಸಂಘಾನ್
ಗಾಂಡೀವಮುಕ್ತಾನಾಪತತಃ ಶಿತಾಗ್ರಾನ್ ।

ಹಯಾನ್ ಗಜಾನ್ ವರ್ಮಿಣಶ್ಚಾದದಾನಃ
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೫೩॥

ಅರ್ಜುನನಾದ ನಾನು ಮೋಡದಿಂದ ಹೊರಹೊಮ್ಮುವ, ಭಯಂಕರವಾದ ಸಿಡಿಲಿನ ಕಣಗಳಂತಿರುವ ಘೋರರೂಪವನ್ನು ಧರಿಸಿದ, ಯುದ್ಧದಲ್ಲಿ ಒಂದೇ ಬಾರಿ ಸಹಸ್ರ ಯೋಧರನ್ನು ಕೊಲ್ಲುವ, ಅಸ್ಥಿಗಳನ್ನು ಕತ್ತರಿಸಿ ಮರ್ಮಗಳನ್ನು ಭೇದಿಸುವ, ಒಳ್ಳೆಯ ಪುಂಖಗಳನ್ನು ಹೊಂದಿದ, ನನ್ನ ಗಾಂಡೀವ ಧನುಸ್ಸಿನಿಂದ ಹೊರಹೊಮ್ಮುವ, ಹರಿತವಾದ ತುದಿಗಳನ್ನು ಹೊಂದಿರುವ, ಅರ್ಜುನನಾದ ನನ್ನ ಬಾಣಸಮೂಹಗಳು ಅಶ್ವಗಳನ್ನೂ, ಗಜಗಳನ್ನೂ, ಕವಚವನ್ನು ಧರಿಸಿದ ಯೋಧರನ್ನು ನುಂಗುವಾಗ ಧೃತರಾಷ್ಟ್ರಪುತ್ರನಾದ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಯದಾ ಮಂದಃ ಪರಬಾಣಾನ್ ವಿಮುಕ್ತಾನ್
ಮಹೇಷುಭಿಃ ಕ್ರಿಯಮಾಣಾನ್ ಪ್ರತೀಪಮ್ ।
ತಿರ್ಯಗ್‌ವಿಧಾನ್ ಚ್ಛಿದ್ಯಮಾನಾನ್ ಕ್ಷುರಾಗ್ರೈಃ
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೫೪॥

ಯಾವಾಗ ಮಂದನಾದ ದುರ್ಯೋಧನನು ನಾವು ಪ್ರಯೋಗಿಸಿದ ಬಾಣಗಳಿಗೆ ಪ್ರತಿಯಾಗಿ ದೊಡ್ಡ ಬಾಣಗಳನ್ನು ಪ್ರಯೋಗಿಸಿ ಅವು ನಮ್ಮ ಕ್ಷುರದಂತಿರುವ ಬಾಣಗಳ ತುದಿಯಿಂದ ಕತ್ತರಿಸಲ್ಪಟ್ಟು ತಲೆಕೆಳಗಾಗಿ ಬೀಳುವುದನ್ನು ನೋಡುವನೋ ಆಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಯದಾ ವಿಪಾಠಾ ಭುಜವಿಪ್ರಮುಕ್ತಾ
ದ್ವಿಜಾಃ ಫಲಾನೀವ ಮಹೀರುಹಾಗ್ರಾತ್ ।
ಪ್ರಚ್ಛೇತ್ತಾರ ಉತ್ತಮಾಂಗಾನಿ ಯೂನಾಂ
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೫೫॥

ಯಾವಾಗ ನಮ್ಮ ಭುಜದಿಂದ ಪ್ರಯೋಗಿಸಲ್ಪಟ್ಟ ವಿಪಾಠಗಳು, ಪಕ್ಷಿಗಳು ಮರದ ಮೇಲಿನ ಹಣ್ಣುಗಳನ್ನು ಉದುರಿಸುವಂತೆ ಎಲ್ಲ ಯೋಧರ ಶಿರಸ್ಸುಗಳನ್ನು ಕತ್ತರಿಸುವುವೋ ಆಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಯದಾ ದ್ರಷ್ಟಾ ಪತತಃ ಸ್ಯಂದನೇಭ್ಯೋ
ಮಹಾಗಜೇಭ್ಯೋಽಶ್ವಗತಾನ್ ಸುಯೋಧಾನ್ ।
ಶಸ್ತ್ರೈರ್ಹತಾನ್ ಪತಿತಾನೇವ ರಂಗೇ
ತದಾ ಯುದ್ಧಂ ಧಾರ್ತರಾಷ್ಟ್ರೋಽನ್ವತಪ್ಸ್ಯತ್ ॥೫೬॥

ಯಾವಾಗ ರಥದಿಂದಲೂ, ಮಹಾಗಜಗಳಿಂದಲೂ, ಅಶ್ವಗಳಿಂದಲೂ ಶ್ರೇಷ್ಠರಾದ ಯೋಧರು ಶಸ್ತ್ರಹತರಾಗಿ ರಣರಂಗದಲ್ಲಿ ಬೀಳುವುದನ್ನು ನೋಡುತ್ತಾನೆಯೋ ಆಗ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಪದಾತಿಸಂಘಾನ್ ರಥಸಂಘಾನ್ ಸಮಂತಾದ್
ವ್ಯಾತ್ತಾನನಃ ಕಾಲ ಇವಾಗತೇ ತು ।
ಪ್ರಣೋತ್ಸ್ಯಮಿ ಜ್ವಲಿತೈರ್ಬಾಣವರ್ಷೈಃ
ಶತ್ರೂಂಸ್ತದಾ ತಪ್ಸ್ಯತಿ ಮಂದಬುದ್ಧಿಃ ॥೫೭॥

ನಾನು ಪದಾತಿಗಳ ಸಮೂಹವನ್ನೂ, ರಥಗಳ ಸಮೂಹವನ್ನೂ, ಮೃತ್ಯುಕಾಲವು ಸನ್ನಿಹಿತವಾದ ಬಾಯಿ ತೆರೆದ ಮೃತ್ಯುವಿನಂತೆ ಎಲ್ಲ ಕಡೆಯಲ್ಲಿಯೂ ನನ್ನ ಜ್ವಲಿಸುವ ಬಾಣಗಳ ಮಳೆಯಿಂದ ಶತ್ರುಗಳನ್ನು ಹಿಂಸಿಸುತ್ತೇನೆ. ಆಗ ಮಂದಬುದ್ಧಿಯುಳ್ಳ ಅವನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಸರ್ವಾ ದಿಶಃ ಸಂಪತತಾ ರಥೇನ
ರಥಾನ್ ಧ್ವಸ್ತಾನ್ ಗಾಂಡಿವೇನಾಪಕೃತ್ತಾನ್ ।
ಯದಾ ದ್ರಷ್ಟಾ ಸ್ವಬಲಂ ಸಂಪ್ರಮೂಢಂ
ತದಾ ಪಶ್ಚಾತ್ ತಪ್ಸ್ಯತಿ ಮಂದಬುದ್ಧಿಃ ॥೫೮॥

ಎಲ್ಲ ದಿಕ್ಕುಗಳಲ್ಲಿಯೂ ವೇಗವಾಗಿ ಸಂಚರಿಸುವ ರಥದಿಂದ ಕೂಡಿದ ನಾನು ಗಾಂಡೀವ ಧನುಸ್ಸಿನಿಂದ ಕತ್ತರಿಸಿ ನಾಶಮಾಡಿದ ರಥಗಳನ್ನೂ, ತನ್ನ ಬಲವು ದಿಗ್ಭ್ರಾಂತವಾದುದನ್ನೂ ಯಾವಾಗ ನೋಡುವನೋ ಆಗ ಮಂದಬುದ್ಧಿಯುಳ್ಳ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಕ್ವಚಿತ್ ಸೃತಂ ಛಿನ್ನಗಾತ್ರಂ ವಿಸಂಜ್ಞಂ
ದುರ್ಯೋಧನೋ ದ್ರಕ್ಷ್ಯತಿ ಸರ್ವಸೈನ್ಯಮ್ ।

ಹತಾಶ್ವಪಾದಾತವರೂಥಕುಂಜರಂ
ಪಿಪಾಸಿತಂ ಶ್ರಾಂತಪದಂ ಭಯಾರ್ತಮ್ ॥೫೯॥

ತಮ್ಮ ಶರೀರವೆಲ್ಲವೂ ವ್ರಣಮಯವಾಗಿ, ಮೈಮೇಲೆ ಎಚ್ಚರಿಕೆ ಇಲ್ಲದೆ ಎಲ್ಲಿಯೋ ಓಡಿಹೋದ ರಥ-ಪದಾತಿ-ಅಶ್ವ-ಗಜಗಳುಳ್ಳ ದಣಿದ, ಬಾಯಾರಿದ ಭಯಗ್ರಸ್ತವಾದ ತನ್ನ ಸೈನ್ಯವನ್ನು ದುರ್ಯೋಧನನು ನೋಡುವನು.

ಆರ್ತಸ್ವರಂ ಹನ್ಯಮಾನಂ ಹತಂ ಚ
ವಿಕೀರ್ಣಕೇಶಾಸ್ಥಿಕಪಾಲಸಂಘಮ್ ।
ಕಾಲಸ್ಯೇವ ಕರ್ಮ ಯಥಾऽರ್ಥನಿಷ್ಠುರಂ
ತದಾ ದೃಷ್ಟ್ವಾ ತಪ್ಸ್ಯತಿ ಮಂದಬುದ್ಧಿಃ ॥೬೦॥

ಹತವಾಗುತ್ತಿರುವ, ಆರ್ತಸ್ವರವನ್ನು ಮಾಡುವ, ಅಸ್ಥಿಕೇಶಕಪಾಲಗಳು ಎಲ್ಲ ಕಡೆಯಲ್ಲಿಯೂ ಹರಡಿರುವ, ಮೃತ್ಯುವಿನ ಕರ್ಮದಂತೆ ಅತಿ ಭಯಂಕರವಾಗಿ ಕಾಣುವ ಯುದ್ಧಭೂಮಿಯನ್ನು ಯಾವಾಗ ನೋಡುವನೋ ಆಗ ಮಂದಬುದ್ಧಿಯುಳ್ಳ ದುರ್ಯೋಧನನು ಯುದ್ಧಕ್ಕಾಗಿ ಪಶ್ಚಾತ್ತಾಪಪಡುವನು.

ಯದಾ ರಥೇ ಗಾಂಡಿವಂ ವಾಸುದೇವಂ
ದಿವ್ಯಂ ಶಾರ್ಙ್ಗಂ ಪಾಂಚಜನ್ಯಂ ಹಯಾಂಶ್ಚ ।
ತೂಷ್ಣಾವಕ್ಷಯ್ಯೌ ದೇವದತ್ತಂ ಚ ಶಂಖಂ
ದ್ರಷ್ಟಾ ಯುದ್ಧೇ ಧಾರ್ತರಾಷ್ಟ್ರಃ ಸಮೇತಾನ್ ॥೬೧॥

ಯಾವಾಗ ರಥದಲ್ಲಿ ಗಾಂಡೀವ ಧನುಸ್ಸನ್ನೂ ವಾಸುದೇವನನ್ನೂ ದಿವ್ಯವಾದ ಶಾರ್ಙ್ಗ ಧನುಸ್ಸನ್ನೂ, ಪಾಂಚಜನ್ಯ ಶಂಖವನ್ನೂ, ಅಶ್ವಗಳನ್ನೂ, ಅಕ್ಷಯಬತ್ತಳಿಕೆಗಳನ್ನೂ, ದೇವದತ್ತ ಶಂಖವನ್ನೂ ಒಟ್ಟಿಗೆ ಇರುವುದನ್ನು ಯುದ್ಧದಲ್ಲಿ ನೋಡುವನೋ ಆಗ ದುರ್ಯೋಧನನು ಪಶ್ಚಾತ್ತಾಪಪಡುವನು.

ಉದ್ವರ್ತಯನ್ ದಸ್ಯುಸಂಘಾನ್ ಸಮೇತಾನ್
ಪ್ರಾವರ್ತಯಿಷ್ಯನ್ ಯುಗಪದ್ ಯುಗಾಂತಮ್ ।
ಯದಾ ಧಕ್ಷ್ಯಮ್ಯಗ್ನಿವತ್ ಕೌರವೇಯಾನ್
ತದಾ ತಪ್ಯೇದ್ ಧೃತರಾಷ್ಟ್ರಃ ಸಪುತ್ರಃ ॥೬೨॥

ಒಟ್ಟುಗೂಡಿದ ದಸ್ಯುಸಮೂಹಗಳನ್ನು ಶೋಷಣೆ ಮಾಡುತ್ತಾ, ಒಮ್ಮೆಲೇ ಯುಗಾಂತ ಪ್ರಳಯವನ್ನು ಪ್ರವರ್ತಿಸುತ್ತಾ ನಾನು ಕೌರವರನ್ನು ಅಗ್ನಿಯಂತೆ ಸುಡುವಾಗ ಪುತ್ರಸಹಿತನಾದ ಧೃತರಾಷ್ಟ್ರನು ಪಶ್ಚಾತ್ತಾಪಪಡುವನು.

ಸಭ್ರಾತಾ ವೈ ಸಹಸೈನ್ಯಃ ಸಭೃತ್ಯೋ
ಭ್ರಷ್ಟೈಶ್ವರ್ಯಃ ಕ್ರೋಧವಶೋಽಲ್ಪಚೇತಾಃ ।
ದರ್ಪಸ್ಯಾಂತೇ ನಿಹತೋ ವೇಪಮಾನಃ
ಪಶ್ಚಾನ್ಮಂದಸ್ತಪ್ಸ್ಯತಿ ಧಾರ್ತರಾಷ್ಟ್ರಃ ॥೬೩॥

ತಮ್ಮಂದಿರಿಂದಲೂ ಮತ್ತು ಸೈನ್ಯದಿಂದಲೂ ಮತ್ತು ಸೇವಕರಿಂದಲೂ ಸಹಿತನಾದ ಕ್ರೋಧವಶನೂ, ಅಲ್ಪಚೇತನನೂ ಆದ ದುರ್ಯೋಧನನು ಐಶ್ವರ್ಯವನ್ನು ಕಳೆದುಕೊಂಡು, ದರ್ಪವನ್ನು ಕಳೆದುಕೊಂಡು, ನಡುಗುತ್ತಾ ಹತನಾಗಿ ಮಂದನಾದ ಅವನು ಪಶ್ಚಾತ್ತಾಪವನ್ನು ಪಡುವನು.

ಪೂರ್ವಾಹ್ಣೇ ಮಾಂ ಕೃತಜಪ್ಯಂ ಕದಾಚಿದ್
ವಿಪ್ರಃ ಪ್ರೋವಾಚೋದಕಾಂತೇ ಮನೋಜ್ಞಮ್ ।
ಕರ್ತವ್ಯಂ ತೇ ದುಷ್ಕರಂ ಕರ್ಮ ಪಾರ್ಥ
ಯೋದ್ಧವ್ಯಂ ತೇ ಶತ್ರುಭಿಃ ಸವ್ಯಸಾಚಿನ್ ॥೬೪॥

ಈ ದಿನ ಪ್ರಾತಃಕಾಲದಲ್ಲಿ ನನ್ನ ಆಹ್ನಿಕವನ್ನು ಮುಗಿಸಿದ ಮೇಲೆ ಒಬ್ಬ ವಿಪ್ರನು ಜಲಸಮಿಪದಲ್ಲಿ ನನ್ನನ್ನು ಕುರಿತು ಹೀಗೆ ಮಾತನಾಡಿದನು– ಪಾರ್ಥನೇ, ನೀನು ದುಷ್ಕರವಾದ ಕರ್ಮವನ್ನು ಮಾಡಬೇಕು. ಸವ್ಯಸಾಚಿಯೇ, ನೀನು ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡಬೇಕು.

ರುದ್ರೋ ವಾ ತೇ ಹರಿವಾನ್ ವಜ್ರಹಸ್ತಃ
ಪುರಸ್ತಾದ್ ಯಾತು ಸಮರೇಽರೀನ್ ವಿನಿಘ್ನನ್ ।
ಸುಗ್ರೀವಯುಕ್ತೇನ ರಥೇನ ವಾ ತೇ
ಪಶ್ಚಾತ್ ಕೃಷ್ಣೋ ರಕ್ಷತು ವಾಸುದೇವಃ ॥೬೫॥

ನಿನ್ನ ಮುಂಭಾಗದಲ್ಲಿ ವಜ್ರಹಸ್ತನಾದ ಇಂದ್ರನಾಗಲೀ ಅಥವಾ ರುದ್ರನಾಗಲೀ ಯುದ್ಧದಲ್ಲಿ ಶತ್ರುಗಳನ್ನು ಸಂಹರಿಸುತ್ತಾ ಮುಂದೆ ಸಾಗಲಿ. ವಾಸುದೇವನಾದ ಕೃಷ್ಣನು ಸುಗ್ರೀವಾದಿ ಅಶ್ವಗಳಿಂದ ಯುಕ್ತವಾದ ರಥದಲ್ಲಿ ಪ್ರತ್ಯಕ್ಷವಾಗಿ ಅಥವಾ ಅದೃಶ್ಯನಾಗಿ ನಿನ್ನ ಹಿಂಭಾಗದಿಂದ ನಿನ್ನನ್ನು ರಕ್ಷಿಸಲಿ (ಎಂದು ಹೇಳಿದನು).

ವವ್ರೇ ಚಾಹಂ ವಜ್ರಹಸ್ತಾನ್ಮಹೇಂದ್ರಾದ್
ಅಸ್ಮಿನ್ ಯುದ್ಧೇ ವಾಸುದೇವಂ ಸಹಾಯಮ್ ।
ಸ ಮೇ ಲಬ್ಧೋ ದಸ್ಯುವಧಾಯ ಕೃಷ್ಣೋ
ಮನ್ಯೇಽಪ್ಯೇತದ್ ವಿಹಿತಂ ದೈವತೈರ್ಮೇ ॥೬೬॥

ನಾನು ವಜ್ರಹಸ್ತನಾದ ಮಹೇಂದ್ರನಿಗಿಂತಲೂ ವಾಸುದೇವನ ಸಹಾಯವನ್ನು ಈ ಯುದ್ಧದಲ್ಲಿ ಬಯಸಿದ್ದೇನೆ. ನನಗೆ ದೈತ್ಯವಧೆಗಾಗಿ ಕೃಷ್ಣನು ಸಹಾಯನಾಗಿ ಲಬ್ಧನಾಗಿದ್ದಾನೆ. ಇದು ದೇವತೆಗಳು ನನಗೆ ಮಾಡಿದ ಅನುಗ್ರಹವೆಂದು ನಾನು ಭಾವಿಸಿದ್ದೇನೆ.

ಅಯುದ್ಧ್ಯಮಾನೋ ಮನಸಾಽಪಿ ಯಸ್ಯ
ಜಯಂ ಕೃಷ್ಣಃ ಪುರುಷಸ್ಯಾಭಿನಂದೇತ್ ।
ಧ್ರುವಂ ಸರ್ವಾನ್ ಸೋಽಭ್ಯತೀಯಾದಮಿತ್ರಾನ್
ಸೇಂದ್ರಾನ್ ದೇವಾನ್ ಮಾನುಷೇ ನಾಸ್ತಿ ಚಿಂತಾ ॥೬೭॥

ತಾನು ಯುದ್ಧವನ್ನು ಮಾಡದಿದ್ದರೂ ಕೃಷ್ಣನು ಯಾವ ಪುರುಷನಿಗೆ ಜಯವನ್ನು ಆಶಿಸುತ್ತಾನೆಯೋ ಅಂತಹ ಪುರುಷನು ಇಂದ್ರ ಸಹಿತರಾದ ದೇವತೆಗಳನ್ನೂ ಮತ್ತು ಎಲ್ಲಾ ಶತ್ರುಗಳನ್ನೂ ನಿಶ್ಚಿತವಾಗಿ ಮೀರುತ್ತಾನೆ. ಇನ್ನು ಮನುಷ್ಯ ಶತ್ರುಗಳ ವಿಷಯದಲ್ಲಿ ಚಿಂತೆ ಮಾಡುವುದೇನಿದೆ?

ಸ ಬಾಹುಭ್ಯಾಂ ಸಾಗರಮುತ್ತಿತೀರ್ಷನ್
ಮಹೋದಧಿಂ ಸಲಿಲಸ್ಯಾಪ್ರಮೇಯಮ್ ।
ತೇಜಸ್ವಿನಂ ಕೃಷ್ಣಮತ್ಯಂತಶೂರಂ
ಯುದ್ಧೇನ ಯೋ ವಾಸುದೇವಂ ಜಿಗೀಷೇತ್ ॥೬೮॥

ಯಾವನು ಯುದ್ಧದಲ್ಲಿ ತೇಜಸ್ವಿಯೂ, ಅತ್ಯಂತ ಶೂರನೂ ಆದ ಕೃಷ್ಣನನ್ನು ಜಯಿಸಲು ಬಯಸುತ್ತಾನೆಯೋ ಅವನು ತನ್ನ ಬಾಹುಗಳಿಂದಲೇ ಅಪಾರವಾದ ಸಲಿಲರಾಶಿಯಾದ ಸಮುದ್ರವನ್ನು ದಾಟಲು ಬಯಸುತ್ತಾನೆ.

ಗಿರಿಂ ಯ ಇಚ್ಛೇತ್ ತು ತಳೇನ ಭೇತ್ತುಂ
ಶಿಲೋಚ್ಚಯಂ ಶ್ವೇತಮತಿಪ್ರಮಾಣಮ್ ।
ತಸ್ಯೈವ ಪಾಣಿಃ ಸನಖೋ ವಿಶೀರ್ಯೇತ್
ನ ಚಾಪಿ ಕಿಂಚಿತ್ ಸ ಗಿರೇಸ್ತು ಕುರ್ಯಾತ್ ॥೬೯॥

ಯಾವನು ಅತಿದೊಡ್ಡ ಪ್ರಮಾಣದ ಶ್ವೇತಪರ್ವತವನ್ನು ತನ್ನ ಹಸ್ತತಳದಿಂದಲೇ ಭೇದಿಸಲು ಬಯಸುತ್ತಾನೆಯೋ ಅವನ ನಖದಿಂದ ಕೂಡಿದ ಹಸ್ತವೇ ಹರಿದು ಹೋದೀತು. ಅವನು ಪರ್ವತಕ್ಕೆ ಏನನ್ನೂ ಮಾಡಲಾರ.

ಅಗ್ನಿಂ ಸಮಿದ್ಧಂ ಶಮಯೇದ್ ಭುಜಾಭ್ಯಾಂ
ಚಂದ್ರಂ ಚ ಸೂರ್ಯಂ ಚ ನಿಪಾತಯೇತ ।
ಹರೇದ್ ದೇವಾನಾಮಮೃತಂ ಪ್ರಸಹ್ಯ
ಯುದ್ಧೇನ ಯೋ ವಾಸುದೇವಂ ಜಿಗೀಷೇತ್ ॥೭೦॥

ಯಾವನು ಯುದ್ಧದಲ್ಲಿ ಕೃಷ್ಣನನ್ನು ಜಯಿಸಲು ಬಯಸುತ್ತಾನೆಯೋ ಅವನು ಜ್ವಲಿಸುವ ಅಗ್ನಿಯನ್ನು ತನ್ನ ಭುಜಗಳಿಂದ ಶಾಂತಗೊಳಿಸಿಯಾನು. ಸೂರ್ಯ-ಚಂದ್ರರನ್ನು ಆಕಾಶದಿಂದ ಬೀಳಿಸಿಯಾನು. ದೇವತೆಗಳ ಅಮೃತವನ್ನು ತನ್ನ ಬಲದಿಂದ ಅಪಹರಿಸಿಯಾನು.

ಯೋ ರುಗ್ಮಿಣೀಮೇಕರಥೇನ ಭೋಜಾನ್
ಉಚ್ಚಿದ್ಯ ರಾಜ್ಞಃ ಸಮರೇ ಪ್ರಸಹ್ಯ ।
ಉವಾಹ ಭಾರ್ಯಾಂ ಯಶಸಾಂ ಜ್ವಲಂತೀಂ
ಯಸ್ಯಾಂ ಜಜ್ಞೇ ರೌಗ್ಮಿಣೇಯೋ ಮಹಾತ್ಮಾ ॥೭೧॥

ಅವನು ಏಕರಥದಲ್ಲಿ ಕುಳಿತು ಯುದ್ಧದಲ್ಲಿ ತನ್ನ ಬಲದಿಂದ ಭೋಜರಾಜರನ್ನೆಲ್ಲಾ ವಿನಾಶಗೊಳಿಸಿ, ಕೀರ್ತಿಯಿಂದ ಬೆಳಗುವ ರುಗ್ಮಿಣಿಯನ್ನು ಪತ್ನಿಯಾಗಿ ಸ್ವೀಕರಿಸಿದನು. ಅವಳಲ್ಲಿ ಮಹಾತ್ಮನಾದ ಪ್ರದ್ಯುಮ್ನನು ಜನಿಸಿದನು.

ಅಯಂ ಗಾಂಧಾರಾಂಸ್ತರಸಾ ಸಂಪ್ರಮಥ್ಯ
ಜಿತ್ವಾ ಪುತ್ರಾನ್ ನಗ್ನಜಿತಃ ಸಮಗ್ರಾನ್ ।
ಬದ್ಧಂ ಮುಮೋಚ ನಿನದಂತಂ ಪ್ರಗೃಹ್ಯ
ಸುದರ್ಶನೀಯೋ ದೇವತಾನಾಂ ಲಲಾಮಃ ॥೭೨॥

ಈ ಅತ್ಯಂತ ಸುಂದರನೂ ಮತ್ತು ದೇವಶ್ರೇಷ್ಠನೂ ಆದ ಕೃಷ್ಣನು ಗಾಂಧಾರ ರಾಜರ ಸೈನ್ಯವನ್ನು ತನ್ನ ಬಲದಿಂದ ಮರ್ದಿಸಿ, ನಗ್ನಜಿತನ ಎಲ್ಲ ಮಕ್ಕಳನ್ನೂ ಜಯಿಸಿ, ಗರ್ಜಿಸುತ್ತಿದ್ದ ಗೂಳಿಗಳನ್ನು ಹಿಡಿದು ಅವುಗಳನ್ನು ಬಿಡಿಸಿದನು.

ಅಯಂ ಕವಾಟೇ ನಿಜಘಾನ ಪಾಂಡ್ಯಂ
ತಥಾ ಕಳಿಂಗಾನ್ ದಂತವಕ್ರಂ ಮಮರ್ದ ।
ಅನೇನ ದಗ್ಧಾ ವರ್ಷಪೂಗಾನ್ ವಿನಾಥಾ
ವಾರಾಣಸೀ ನಗರೀ ಸಂಬಭೂವ ॥೭೩॥

ಇವನು ಕವಾಟ ಎಂಬ ಪ್ರದೇಶದಲ್ಲಿ ಪಾಂಡ್ಯರಾಜನನ್ನು ಸಂಹರಿಸಿದನು. ಅದರಂತೆಯೇ ಕಳಿಂಗರನ್ನೂ ಮತ್ತು ದಂತವಕ್ರನನ್ನೂ ಮರ್ದಿಸಿದನು. ಇವನು ದಹಿಸಿದ ವಾರಣಾಸಿ ಪಟ್ಟಣವು ಅನೇಕ ವರ್ಷಗಳವರೆಗೆ ಅನಾಥವಾಗಿದ್ದಿತು.

ಅಯಂ ಸ್ಮ ಯುದ್ಧೇ ಮನ್ಯತೇಽನ್ಯೈರಜೇಯಂ
ತಮೇಕಲವ್ಯಂ ನಾಮ ನಿಷಾದರಾಜಮ್ ।
ವೇಗೇನೈವ ಶೈಲಮಭಿಹತ್ಯ ಜಂಭಃ
ಶೇತೇ ಸ ಕೃಷ್ಣೇನ ಹತಃ ಪರಾಸುಃ ॥೭೪॥

ಈ ದುರ್ಯೋಧನನು ನಿಷಾದರಾಜನಾದ ಏಕಲವ್ಯನು ಯುದ್ಧದಲ್ಲಿ ಅಜೇಯನಾದವನು ಎಂದು ತಿಳಿದಿದ್ದಾನೆ. ಜಂಭಾಸುರನು ವೇಗದಿಂದ ಶೈಲವನ್ನು ಗುದ್ದಿ ಹತನಾದಂತೆ ಏಕಲವ್ಯನು ಕೃಷ್ಣನಿಂದ ಹತನಾಗಿ ಪ್ರಾಣವನ್ನು ಬಿಡುತ್ತಾನೆ.

ತಥೋಗ್ರಸೇನಸ್ಯ ಸುತಂ ಸುದುಷ್ಟಂ
ವೃಷ್ಣ್ಯಂಧಕಾನಾಂ ಮಧ್ಯಗತಂ ಸಭಾಸ್ಥಮ್ ।
ಅಪಾತಯದ್ ಬಲದೇವದ್ವಿತೀಯೋ
ಹತ್ವಾ ದದೌ ಚೋಗ್ರಸೇನಾಯ ರಾಜ್ಯಮ್ ॥೭೫॥

ಹಾಗೆಯೇ ವೃಷ್ಣ್ಯಂಧಕರ ಮಧ್ಯದಲ್ಲಿ ಸಭೆಯಲ್ಲಿ ಕುಳಿತಿದ್ದ ಅತ್ಯಂತ ದುಷ್ಟನಾದ, ಉಗ್ರಸೇನನ ಪುತ್ರನಾದ ಕಂಸನನ್ನು, ಬಲರಾಮನ ಜೊತೆಯಲ್ಲಿ ಹೋಗಿ ಅವನನ್ನು ನೆಲಕ್ಕೆ ಎಳೆದು ಸಂಹರಿಸಿ ಉಗ್ರಸೇನನಿಗೆ ರಾಜ್ಯವನ್ನು ಕೊಟ್ಟನು.

ಅಯಂ ಸೌಭಂ ಯೋಧಯಾಮಾಸ ಖಸ್ಥಂ
ವಿಭೀಷಣಂ ಮಾಯಯಾ ಸಾಲ್ವರಾಜಮ್ ।
ಸೌಭದ್ವಾರಿ ಪ್ರತ್ಯಗೃಹ್ಣಾಚ್ಛತಘ್ನೀಂ
ದೋರ್ಭ್ಯಾಂ ಕ ಏನಂ ವಿಷಹೇತ ಮರ್ತ್ಯಃ ॥೭೬॥

ಇವನು ಅಂತರಿಕ್ಷದಲ್ಲಿ ತನ್ನ ವಿಮಾನದಲ್ಲಿ ಕುಳಿತು ತನ್ನ ಮಾಯೆಯಿಂದ ಹೆದರಿಸುತ್ತಿದ್ದ ಸಾಲ್ವರಾಜನ ಜೊತೆಯಲ್ಲಿ ಯುದ್ಧ ಮಾಡಿದನು. ಸೌಭದ ಮುಖದಿಂದ ಪ್ರಯೋಗಿಸಿದ ಶತಘ್ನಿಯನ್ನು ಭುಜಗಳಲ್ಲಿ ಹಿಡಿದನು. ಯಾವ ಮನುಷ್ಯನು ಇವನನ್ನು ತಡೆದಾನು?

ಪ್ರಾಗ್ಜ್ಯೋತಿಷಂ ನಾಮ ಬಭೂವ ದುರ್ಗಂ
ಪುರಂ ಘೋರಮಸುರಾಣಾಮಪ್ರಧೃಷ್ಯಮ್ ।
ಮಹಾಬಲೋ ನರಕಸ್ತತ್ರ ಭೌಮೋ
ಜಹಾರಾದಿತ್ಯಾ ಮಣಿಕುಂಡಲೇ ಶುಭೇ ॥೭೭॥

ಪ್ರಾಗ್ಜ್ಯೋತಿಷವೆಂಬ ಅಭೇದ್ಯವಾದ ಮತ್ತು ಭಯಂಕರವಾದ ಅಸುರರ ದುರ್ಗವಿದ್ದಿತು. ಅಲ್ಲಿ ಮಹಾಬಲನಾದ ಭೂಮಿಪುತ್ರನಾದ ನರಕಾಸುರನು ಅದಿತಿಯ ಸುಂದರವಾದ ಮಣಿಕುಂಡಲಗಳನ್ನು ಅಪಹರಿಸಿದ್ದನು.

ನ ತಂ ದೇವಾಃ ಸಹ ಶಕ್ರೇಣ ಶೇಕುಃ
ಸಮಾಗತಾ ಯುಧಿ ಮೃತ್ಯೋರಭೀತಾಃ ॥೭೮॥

ಮೃತ್ಯುವಿಗೆ ಹೆದರದ, ಇಂದ್ರನಿಂದ ಕೂಡಿದ ದೇವತೆಗಳೂ ಸಹ ಅವನನ್ನು ಸೋಲಿಸಲು ಸಾಧ್ಯವಾಗಲಿಲ್ಲ.

ದೃಷ್ಟ್ವಾ ಚ ತಂ ವಿಕ್ರಮಂ ಕೇಶವಸ್ಯ
ಬಲಂ ತಥೈವಾಸ್ತ್ರಮವಾರಣೀಯಮ್ ।

ಜಾನಂತೋಽಸ್ಯ ಪ್ರಕೃತಿಂ ಕೇಶವಸ್ಯ
ನ್ಯಯೋಜಯತ್ ದಸ್ಯುವಧಾಯ ಕೃಷ್ಣಮ್ ॥೭೯॥

ಸ ತತ್ ಕರ್ಮ ಪ್ರತಿಶುಶ್ರಾವ ದುಷ್ಕರಮ್
ಐಶ್ವರ್ಯವಾನ್ ಸಿದ್ಧಿಷು ವಾಸುದೇವಃ ॥೮೦॥

ದೇವತೆಗಳು ಕೃಷ್ಣನ ಸ್ವಭಾವವನ್ನು ತಿಳಿದವರಾಗಿ, ಅವನ ವಿಕ್ರಮವನ್ನು ನೋಡಿ ಅವನನ್ನು ನಿವಾರಣೆ ಮಾಡಲು ಸಾಧ್ಯವಿಲ್ಲದ ಅವನ ಅಸ್ತ್ರವನ್ನು ಮತ್ತು ಬಲವನ್ನು ನೋಡಿ, ಆ ಶತ್ರುವನ್ನು ವಧೆ ಮಾಡಲು ಕೃಷ್ಣನನ್ನು ನಿಯೋಜಿಸಿದರು. ಎಲ್ಲಸಿದ್ಧಿಗಳ ಒಡೆಯನಾದ ಕೃಷ್ಣನು ಆ ದುಷ್ಕರವಾದ ಕಾರ್ಯವನ್ನು ಮಾಡುವುದಾಗಿ ಪ್ರತಿಜ್ಞೆ ಮಾಡಿದನು.

ನಿರ್ಮೋಚನೇ ಷಟ್ ಸಹಸ್ರಾಣಿ ಹತ್ವಾ
ಸಂಛಿದ್ಯ ಪಾಶಾನ್ ಸಹಸಾ ಕ್ಷುರಾಂತಾನ್ ।
ಮುರಂ ಹತ್ವಾ ವಿನಿಹತ್ಯೌಘರಕ್ಷೋ
ನಿರ್ಮೋಚನಂ ಚಾಪಿ ಜಗಾಮ ವೀರಃ ॥೮೧॥

ಆ ಸಮಯದಲ್ಲಿ ಪಾಶಗಳನ್ನು ಕತ್ತರಿಸುವಾಗ ಆರು ಸಹಸ್ರ ಯೋಧರನ್ನು ಕೊಂದು, ಕತ್ತಿಯ ಅಲುಗಿನಂತೆ ಹರಿತವಾದ ಪಾಶಗಳನ್ನು ಕತ್ತರಿಸಿ, ಮುರನನ್ನು ಸಂಹರಿಸಿ, ದೇವತೆಗಳ ಸಮೂಹವನ್ನು ರಕ್ಷಿಸುವ ವೀರನಾದ ಇವನು ಪಾಶಗಳನ್ನೂ ನಾಶಮಾಡಿದನು (ಲಕ್ಷಾಲಂಕಾರ).

ತತ್ರೈವ ತೇನಾಸ್ಯ ಬಭೂವ ಯುದ್ಧಂ
ಮಹಾಬಲೇನಾತಿಬಲಸ್ಯ ವಿಷ್ಣೋಃ ।
ಶೇತೇ ಸ ಕೃಷ್ಣೇನ ಹತಃ ಪರಾಸುಃ
ವಾತೇನೇವ ಮಥಿತಃ ಕರ್ಣಿಕಾರಃ ॥೮೨॥

ಅಲ್ಲಿಯೇ ಅತಿಬಲನಾದ ವಿಷ್ಣುವಾದ ಕೃಷ್ಣನಿಗೆ ಮಹಾಬಲವುಳ್ಳ ನರಕಾಸುರನ ಜೊತೆಯಲ್ಲಿ ಯುದ್ಧವು ನಡೆಯಿತು. ಅವನು ಕೃಷ್ಣನಿಂದ ಹತನಾಗಿ ಬಿರುಗಾಳಿಯಿಂದ ಮಥಿತವಾದ ಕರ್ಣಿಕಾರ ವೃಕ್ಷದಂತೆ ಪ್ರಾಣಗಳನ್ನು ಕಳೆದುಕೊಂಡು ಬಿದ್ದನು.

ಆಹೃತ್ಯ ಕೃಷ್ಣೋ ಮಣಿಕುಂಡಲೇ ತೇ
ಹತ್ವಾ ಚ ಭೌಮಂ ನರಕಂ ಮುರಂ ಚ ।
ಶ್ರಿಯಾ ವೃತೋ ಯಶಸಾ ಚೈವ ವಿದ್ವಾನ್
ಪ್ರತ್ಯಾಜಗಾಮಾಪ್ರತಿಮಪ್ರಭಾವಃ ॥೮೩॥

ಕೃಷ್ಣನು ಭೂಮಿಪುತ್ರನಾದ ನರಕನನ್ನೂ ಮತ್ತು ಮುರನನ್ನೂ ಸಂಹರಿಸಿ ಆ ಎರಡು ಮಣಿಕುಂಡಲಗಳನ್ನು ತಂದು ಕೀರ್ತಿಯಿಂದಲೂ ಮತ್ತು ಕಾಂತಿಯಿಂದಲೂ ಬೆಳಗುತ್ತಾ ಜ್ಞಾನಿಯೂ, ಅಪ್ರತಿಮ ಪ್ರಭಾವವುಳ್ಳವನೂ ಆದ ಅವನು ಅದಿತಿಗೆ ಹಿಂದಿರುಗಿಸಿದನು.

ಅಸ್ಮೈ ವರಾನ್ಯದದುಸ್ತತ್ರ ದೇವಾ
ದೃಷ್ಟ್ವಾ ಭೀಮಂ ಕರ್ಮ ಕೃತಂ ರಣೇ ತತ್ ।
ಶ್ರಮಶ್ಚ ತೇ ಯುಧ್ಯಮಾನಸ್ಯ ನ ಸ್ಯಾದ್
ಆಕಾಶೇ ಚಾಪ್ಯಪ್ಸು ಚ ತೇ ಕ್ರಮಃ ಸ್ಯಾತ್ ॥೮೪॥

ಶಸ್ತ್ರಾಣಿ ಗಾತ್ರೇ ನ ಚ ತೇ ಕ್ರಮೇರನ್
ನಿತ್ಯಂ ಚ ಕೃಷ್ಣಶ್ಚ ತತಃ ಕೃತಾರ್ಥಃ ।
ಏವಂರೂಪೇ ವಾಸುದೇವೇऽಪ್ರಮೇಯೇ
ಮಹಾಬಲೇ ಗುಣಸಂಪತ್ ಸದೈವ ॥೮೫॥

ಆಗ ದೇವತೆಗಳು ಯುದ್ಧವನ್ನು ಮಾಡಿದ ಅವನ ಭಯಂಕರ ಕಾರ್ಯವನ್ನು ನೋಡಿ ಯುದ್ಧವನ್ನು ಮಾಡುವಾಗ ನಿನಗೆ ಶ್ರಮವಾಗದಿರಲಿ. ಆಕಾಶದಲ್ಲಿಯೂ ಮತ್ತು ಜಲದಲ್ಲಿಯೂ ನಿನ್ನ ಪಾದವಿಕ್ಷೇಪವು ಸಾಧ್ಯವಾಗಲಿ. ನಿನ್ನ ಶರೀರದಲ್ಲಿ ಯಾವ ಶಸ್ತ್ರಗಳೂ ಯಾವಾಗಲೂ ಪ್ರವೇಶಿಸದಿರಲಿ ಎಂದು ಅವನಿಗೆ ವರಗಳನ್ನು ಕೊಟ್ಟರು. ನಿತ್ಯವೂ ಕೃತಾರ್ಥನಾದ ಕೃಷ್ಣನು ದೇವತೆಗಳ ವರದಿಂದಲೂ ಕೃತಾರ್ಥನಾದನು. ಇಂತಹ ಅಪ್ರಮೇಯನಾದ, ಮಹಾಬಲನಾದ, ವಸುದೇವ ಸುತನಾದ ಕೃಷ್ಣನು ಯಾವಾಗಲೂ ಗುಣಪೂರ್ಣನಾದವನು.

ತಮಸಹ್ಯಂ ವಿಷ್ಣುಮನಂತವೀರ್ಯಮ್
ಆಶಂಸತೇ ಧಾರ್ತರಾಷ್ಟ್ರೋ ವಿಜೇತುಮ್ ।

ಸದಾ ಹ್ಯೇನಂ ತರ್ಕಯತೇ ದುರಾತ್ಮಾ
ತಚ್ಚಾಪ್ಯಯಂ ಸಹತೇಽಸ್ಮಾನ್ ಸಮೀಕ್ಷ್ಯ ॥೮೬॥

ದುರ್ಯೋಧನನು ಅನಂತವೀರ್ಯನಾದ, ಸಹಿಸಲು ಅಸಾಧ್ಯನಾದ ಅಂತಹ ವಿಷ್ಣುವನ್ನು ಜಯಿಸಲು ಬಯಸುತ್ತಾನೆ. ಆ ದುರಾತ್ಮನು ಯಾವಾಗಲೂ ಹೀಗೆಯೇ ಯೋಚಿಸುತ್ತಾನೆ. ಕೃಷ್ಣನಾದರೂ ನಮ್ಮನ್ನು ನೋಡಿ ಅದನ್ನು ಸಹಿಸಿಕೊಂಡಿದ್ದಾನೆ.

ಪರ್ಯಾಗತಂ ಮಮ ಕೃಷ್ಣಸ್ಯ ಚೈವಂ
ಯೋ ಮನ್ಯತೇ ಕಲಹಂ ಸಂಪ್ರಸಹ್ಯ ।
ಶಕ್ಯಂ ಹರ್ತುಂ ಪಾಂಡವಾನಾಂ ಚ ಸತ್ವಂ
ತದ್ ವೇದಿತಾ ಸಂಯುಗಂ ತತ್ರ ಗತ್ವಾ ॥೮೭॥

ಯಾವ ದುರ್ಯೋಧನನು ನನಗೂ ಮತ್ತು ಕೃಷ್ಣನಿಗೂ ಕಲಹವನ್ನು ಉಂಟುಮಾಡಿ ತನ್ನ ಬಲದಿಂದ ಪಾಂಡವರ ಬಲವನ್ನು ಸೋಲಿಸಲು ಸಾಧ್ಯವೆಂದು ತಿಳಿದಿದ್ದಾನೆಯೋ ಅವನು ಯುದ್ಧಭೂಮಿಗೆ ಹೋಗಿ ಅದರ ಸತ್ಯಾಂಶವೇನೆಂದು ತಿಳಿಯಲಿ.

ನಮಸೃತ್ವಾ ಶಾಂತನವಾಯ ರಾಜ್ಞೇ
ದ್ರೋಣಾಯಾಥೋ ಸಹಪುತ್ರಾಯ ಚೈವ ।
ಶಾರದ್ವತಾಯಾಪ್ರತಿದ್ವಂದ್ವಿನೇ ಚ
ಯೋತ್ಸ್ಯಾಮ್ಯಹಂ ರಾಜ್ಯಮಭೀಪ್ಸಮಾನಃ ॥೮೮॥

ನಾನು ಶಂತನುಪುತ್ರನಾದ ಭೀಷ್ಮನಿಗೂ, ಧೃತರಾಷ್ಟ್ರರಾಜನಿಗೂ, ಅಶ್ವತ್ಥಾಮರಿಂದೊಡಗೂಡಿದ ದ್ರೋಣರಿಗೂ, ಅಪ್ರತಿದ್ವಂದ್ವಿಗಳಾದ ಕೃಪರಿಗೂ ನಮಸ್ಕಾರವನ್ನು ಮಾಡಿ ರಾಜ್ಯವನ್ನು ಬಯಸಿ ಯುದ್ಧವನ್ನು ಮಾಡುವೆನು.

ಧರ್ಮೇಣಾಪ್ತಂ ನಿಧನಂ ತಸ್ಯ ಮನ್ಯೇ
ಯೋ ಯೋತ್ಸ್ಯತೇ ಪಾಂಡವೈರ್ಧರ್ಮಚಾರೀ ।
ಮಿಥ್ಯಾಗ್ಲಹೇ ನಿರ್ಜಿತಾ ವೈ ನೃಶಂಸೈಃ
ಸಂವತ್ಸರಾನ್ ವೈ ದ್ವಾದಶ ರಾಜಪುತ್ರಾಃ ॥೮೯॥

ಯಾವ ಧರ್ಮಾಚರಣೆಯನ್ನು ಮಾಡುವ ಯೋಧನು ಪಾಂಡವರ ಪರವಾಗಿ ಯುದ್ಧವನ್ನು ಮಾಡಿ ನಿಧನವನ್ನು ಹೊಂದಿದರೆ ಅದು ಧರ್ಮದಿಂದ ಉಂಟಾದ

ನಿಧನವೆಂದು ಭಾವಿಸುತ್ತೇನೆ. ಕ್ರೂರರಾದ ದುರ್ಯೋಧನಾದಿಗಳಿಂದ, ಮೋಸದ ದ್ಯೂತದಿಂದ ನಿರ್ಜಿತರಾದ ರಾಜಪುತ್ರರಾದ ನಾವು ಹನ್ನೆರಡು ವರ್ಷಗಳನ್ನು ಕಳೆದೆವು.

ವಾಸಃ ಕೃತ್ಸ್ನೋ ವಿಹಿತಶ್ಚಾಪ್ಯರಣ್ಯೇ
ದೀರ್ಘಂ ಕಾಲಂ ಚೈಕಮಜ್ಞಾತವರ್ಷಮ್ ।
ತೇ ಹ್ಯಸ್ಮಾಕಂ ಜೀವಿತಂ ಪಾಂಡವಾನಾಂ
ನ ಮೃಷ್ಯಂತೇ ಧಾರ್ತರಾಷ್ಟ್ರಾಃ ಪದಸ್ಥಾಃ ॥೯೦॥

ನಾವು ಪೂರ್ಣವಾಗಿ ಹನ್ನೆರಡು ವರ್ಷಗಳ ದೀರ್ಘಕಾಲವನ್ನು ಅರಣ್ಯದಲ್ಲಿ ವಾಸಮಾಡಿ ಕಳೆದು ಒಂದು ವರ್ಷದ ಕಾಲ ಅಜ್ಞಾತವಾಸವನ್ನೂ ಮಾಡಿದೆವು. ಅಧಿಕಾರದಲ್ಲಿರುವ ಧೃತರಾಷ್ಟ್ರ ಪುತ್ರರು ಪಾಂಡವರಾದ ನಾವು ಬದುಕಿರುವುದನ್ನೂ ಸಹಿಸುವುದಿಲ್ಲ.

ತೇ ಚೇದಸ್ಮಾನ್ ಯುಧ್ಯಮಾನಾನ್ ಜಯೇಯುಃ
ದೇವೈರ್ಮಹೇಂದ್ರಪ್ರಮುಖೈಃ ಸಹಾಯೈಃ ।
ಧರ್ಮಾದಧರ್ಮಶ್ಚರಿತೋ ಗರೀಯಾನ್
ತತೋ ಧ್ರುವಂ ನಾಸ್ತಿ ಕೃತಂ ಚ ಸಾಧು ॥೯೧॥

ಅವರು ಒಂದುಪಕ್ಷ ಇಂದ್ರ ಮೊದಲಾದ ದೇವತೆಗಳ ಸಹಾಯದಿಂದ ಯುದ್ಧ ಮಾಡಿ ನಮ್ಮನ್ನು ಗೆಲ್ಲುವುದಾದರೆ ಧರ್ಮಾಚರಣೆಗಿಂತ ಅಧರ್ಮಾಚರಣೆಯೇ ಶ್ರೇಷ್ಠವಾಗುತ್ತದೆ. ಯಾವ ಸತ್ಕರ್ಮಕ್ಕೂ ಫಲವಿಲ್ಲವೆಂದಾಗುತ್ತದೆ.

ನ ಚೇದಿದಮಪಜಯಂ ಕರ್ಮಬಂಧಂ
ನ ಚೇದಸ್ಮಾನ್ ಮನ್ಯತೇऽಸೌ ವಿಶಿಷ್ಟಾನ್ ।
ಆಶಂಸೇऽಹಂ ವಾಸುದೇವದ್ವಿತೀಯೋ
ದುರ್ಯೋಧನಂ ಸಾನುಬಂಧಂ ನಿಹಂತುಮ್ ॥೯೨॥

ನಮಗೆ ಒದಗಿದ ಅಪಜಯವು ತನ್ನ ದುರ್ದ್ಯೂತದ ನಿಮಿತ್ತದಿಂದ ಎಂದು ಅವನು ತಿಳಿಯದಿದ್ದರೆ ಮತ್ತು ನಾವು ಅವರಿಗಿಂತ ಶ್ರೇಷ್ಠರೆಂದು ತಿಳಿಯದಿದ್ದರೆ ನಾನು ಕೃಷ್ಣನ

ಸಹಾಯದಿಂದ ದುರ್ಯೋಧನನನ್ನು ಅವನ ಪರಿವಾರ ಸಹಿತವಾಗಿ ಕೊಲ್ಲಲು ಬಯಸುತ್ತೇನೆ (ಲಕ್ಷಾಲಂಕಾರ).

ನ ಚೇದಿದಂ ಕರ್ಮ ನರೇಷು ವಂಧ್ಯಂ
ನ ಚೇದ್ಭವೇತ್ ಸುಕೃತಂ ನಿಷ್ಫಲಂ ವಾ ।
ಇದಂ ಚ ತಚ್ಚಾಪಿ ಸಮೀಕ್ಷ್ಯ ನೂನಂ
ಪರಾಜಯೋ ಧಾರ್ತರಾಷ್ಟ್ರಸ್ಯ ಸಾಧುಃ ॥೯೩॥

ಮನುಷ್ಯರು ಮಾಡಿದ ಕರ್ಮವು ವ್ಯರ್ಥವಾಗದಿದ್ದರೆ, ಸತ್ಕರ್ಮವು ನಿಷ್ಫಲವಾಗದಿದ್ದರೆ ನಾನು ಈ ವಿಷಯವನ್ನು ಚೆನ್ನಾಗಿ ಆಲೋಚಿಸಿ ದುರ್ಯೋಧನನಿಗೆ ಪರಾಜಯವಾಗುವುದೇ ಶ್ರೇಷ್ಠವೆಂದು ತಿಳಿಯುತ್ತೇನೆ.

ಪ್ರತ್ಯಕ್ಷಂ ವಃ ಕುರವೋ ಯದ್ ಬ್ರವೀಮಿ
ಯುದ್ಧ್ಯಮಾನಾ ಧಾರ್ತರಾಷ್ಟ್ರಾ ನ ಸಂತಿ ।
ಅನ್ಯತ್ರ ಯುದ್ಧಾತ್ ಕುರವೋ ಯದಿ ಸ್ಯುಃ
ನ ಯುದ್ಧೇ ವೈ ಶೇಷ ಇಹಾಸ್ತಿ ಕಶ್ಚಿತ್ ॥೯೪॥

ಎಲೈ ಕುರುಗಳೇ, ನಾನು ನೇರವಾಗಿ ನಿಮಗೆ ಹೇಳುತ್ತಿದ್ದೇನೆ. ನೀವು ಯುದ್ಧವನ್ನು ಮಾಡಿದರೆ ಧೃತರಾಷ್ಟ್ರಪುತ್ರರು ಯಾರೂ ಉಳಿಯುವುದಿಲ್ಲ. ಯುದ್ಧವನ್ನು ಮಾಡದೆ ಒಂದುಪಕ್ಷ ಜೀವಿಸಬಹುದು. ಆದರೆ ಯುದ್ಧವನ್ನು ಮಾಡಿದರೆ ಯಾವ ಶೇಷವೂ ಉಳಿಯುವುದಿಲ್ಲ.

ಹತ್ವಾ ತ್ವಹಂ ಧಾರ್ತರಾಷ್ಟ್ರಾನ್ ಸಕರ್ಣಾನ್
ರಾಜ್ಯಂ ಕುರೂಣಾಮಪಿ ಜೇತಾ ಸಮಗ್ರಮ್ ।
ಯುದ್ಧಂ ಕಾರ್ಯಂ ತತ್ ಕುರುಧ್ವಂ ಯಥಾಸ್ವಮ್
ಇಷ್ಟಾನ್ ದಾರಾನಾತ್ಮಭೋಗಾನ್ ಭಜಧ್ವಮ್ ॥೯೫॥

ನಾನು ಕರ್ಣಸಹಿತರಾದ ಧೃತರಾಷ್ಟ್ರಪುತ್ರರೆಲ್ಲರನ್ನೂ ಕೊಂದು, ಸಮಗ್ರವಾದ ಕುರುರಾಜ್ಯವನ್ನು ಜಯಿಸುವೆನು. ಯುದ್ಧವನ್ನು ಮಾಡಲೇಬೇಕು. ನೀವು ಯುದ್ಧವನ್ನು ಮಾಡಿ. ನಿಮಗೆ ಶಕ್ತಿ ಇದ್ದಷ್ಟು ಇಷ್ಟವಾದ ಭೋಗಗಳನ್ನೂ ಮತ್ತು ಪತ್ನಿಯರನ್ನೂ ಸೇವಿಸುವವರಾಗಿ.

ಅಪ್ಯೇವಂ ನೋ ಬ್ರಾಹ್ಮಣಾಃ ಸಂತಿ ವೃದ್ಧಾ
ಬಹುಶ್ರುತಾಃ ಶೀಲವಂತಃ ಕುಲೀನಾಃ ।
ಸಾಂವತ್ಸರಾ ಜ್ಯೋತಿಷಿ ಚಾಭಿಯುಕ್ತಾ
ನಕ್ಷತ್ರಯೋಗೇಷು ಚ ನಿಶ್ಚಯಜ್ಞಾಃ ॥೯೬॥

ನಮ್ಮ ಪಕ್ಷದಲ್ಲಿ ಬಹುಶ್ರುತರೂ, ಶೀಲವಂತರೂ, ಕುಲೀನರೂ, ವೃದ್ಧರೂ ಆದ ಬ್ರಾಹ್ಮಣರಿದ್ದಾರೆ. ಅವರು ನಕ್ಷತ್ರ-ಯೋಗಗಳಲ್ಲಿಯೂ, ಸಂವತ್ಸರ ಫಲಗಳಲ್ಲಿಯೂ, ಜ್ಯೌತಿಷಶಾಸ್ತ್ರದಲ್ಲಿಯೂ ಪರಿಣತರಾದವರು.

ಉಚ್ಚಾವಚಂ ದೈವಯುಕ್ತಂ ರಹಸ್ಯಂ
ದೈವಪ್ರಜ್ಞಾ ಗ್ರಹಚರ್ಯಾ ಮುಹೂರ್ತಾಃ ।
ಕ್ಷಯಂ ಮಹಾಂತಂ ಕುರುಸೃಂಜಯಾನಾಂ
ನಿವೇದಯಂತೇ ಪಾಂಡವಾನಾಂ ಜಯಂ ಚ ॥೯೭॥

ಶ್ರೇಷ್ಠ ಮತ್ತು ಕನಿಷ್ಠವಾದ ವಿಧಿಯುಕ್ತವಾದ ರಹಸ್ಯಗಳನ್ನೂ, ಗ್ರಹಚರ್ಯಗಳನ್ನೂ ಮತ್ತು ಮುಹೂರ್ತಗಳನ್ನೂ ಅವರು ದೈವಬಲದಿಂದ ಚೆನ್ನಾಗಿ ತಿಳಿದಿದ್ದಾರೆ. ಅವರು ಕುರುಸೃಂಜಯರಿಗೆ ದೊಡ್ಡ ಅಪಜಯವನ್ನೂ ಮತ್ತು ಪಾಂಡವರ ಜಯವನ್ನೂ ನಿವೇದಿಸುತ್ತಾರೆ.

ಯಥಾ ಹಿ ನೋ ಮನ್ಯತೇऽಜಾತಶತ್ರುಃ
ಸಂಸಿದ್ಧಾರ್ಥೋ ದ್ವಿಷತಾಂ ನಿಗ್ರಹಾಯ ।
ಜನಾರ್ದನಶ್ಚಾಪ್ಯಪರೋಕ್ಷವಿದ್ಯೋ
ನ ಸಂಶಯಂ ಪಶ್ಯತಿ ವೃಷ್ಣಿಸಿಂಹಃ ॥೯೮॥

ಅಜಾತಶತ್ರುವಾದ ಯುಧಿಷ್ಠಿರನು ಶತ್ರುಗಳ ನಿಗ್ರಹವನ್ನು ಮಾಡಿ ನಾವು ಕೃತಕೃತ್ಯರಾಗಿದ್ದೇವೆಂದು ಹೇಗೆ ತಿಳಿದಿದ್ದಾನೆಯೋ, ಸರ್ವಾಪರೋಕ್ಷಿಯಾದ ವೃಷ್ಣಿಸಿಂಹನಾದ ಜನಾರ್ದನನು ನಿಸ್ಸಂಶಯವಾಗಿ ಹಾಗೆಯೇ ತಿಳಿದಿದ್ದಾನೆ.

ಭವಿಷ್ಯಂತಿ ವೈ ಪೂರ್ವರೂಪಾಣಿ ಯುಕ್ತ್ಯಾ
ಪಶ್ಯಾಮಿ ಬುದ್ಧ್ಯಾ ಸ್ವಯಮಪ್ರಮತ್ತಃ ।

ದೃಷ್ಟಿಶ್ಚ ಮೇ ನ ವ್ಯಥತೇ ಪುರಾಣೀ
ಸಂಯುಧ್ಯಮಾನಾ ಧಾರ್ತರಾಷ್ಟ್ರಾ ನ ಸಂತಿ ॥೯೯॥

ನಮಗೆ ಮೊದಲಿನ ರಾಜ್ಯಾರ್ಹವಾದ ರೂಪಗಳು ಪುನಃ ಉಂಟಾಗುವುವು ಎಂದು ನಾನು ಎಚ್ಚರಿಕೆಯಿಂದ ಕೂಡಿದ ಬುದ್ಧಿಯಿಂದ ಆಲೋಚಿಸಿ ಕಾಣುತ್ತಿದ್ದೇನೆ. ನನ್ನ ಪ್ರಾಚೀನಜ್ಞಾನವು ನಾಶವನ್ನು ಹೊಂದಿಲ್ಲ. ಯುದ್ಧವನ್ನು ಮಾಡುವ ಧೃತರಾಷ್ಟ್ರಪುತ್ರರು ಉಳಿಯುವುದಿಲ್ಲ.

ಅನಾಲಬ್ಧಂ ಜೃಂಭತಿ ಗಾಂಡಿವಂ ಧನುಃ
ಅನಾಹತಾ ಕಂಪತಿ ಮೇ ಧನುರ್ಜ್ಯಾ ।
ಬಾಣಾಶ್ಚ ತೂಣೀರಮುಖಾದ್ ವಿಸೃತ್ಯ
ಮುಹುರ್ಮುಹುರ್ಗಂತುಮುಶಂತಿ ಚೈವ ॥೧೦೦॥

ಕೈಯಲ್ಲಿ ಹಿಡಿಯದಿದ್ದರೂ ಗಾಂಡೀವ ಧನುಸ್ಸು ಜೃಂಭಿಸುತ್ತಿದೆ (ನೇರವಾಗುತ್ತಿದೆ). ಧನುಸ್ಸಿನ ಹೆದೆಯನ್ನು ಎಳೆಯದಿದ್ದರೂ ಅದು ಕಂಪಿಸುತ್ತಿದೆ. ಬಾಣಗಳು ಬತ್ತಳಿಕೆಯ ಬಾಯಿಂದ ಪುನಃ ಪುನಃ ತಾವಾಗಿಯೇ ಮೇಲೆ ಬರಲು ಬಯಸುತ್ತಿವೆ.

ಶೈಕ್ಯಃ ಕೋಶಾನ್ನಿಸರತಿ ಪ್ರಸನ್ನೋ
ಹಿತ್ವೇವ ಜೀರ್ಣಾಮುರಗಸ್ತ್ವಚಂ ಸ್ವಾಮ್ ।
ಧ್ವಜೇ ವಾಚೋ ರೌದ್ರರೂಪಾ ಭವಂತಿ
ಕದಾ ರಥೋ ಯೋಕ್ಷ್ಯತೇ ತೇ ಕಿರೀಟಿನ್ ॥೧೦೧॥

ಸರ್ಪವು ತನ್ನ ಜೀರ್ಣವಾದ ಪೊರೆಯಿಂದ ಹೊರಗೆ ಬಂದಂತೆ ಖಡ್ಗವು ತನ್ನ ನಿಲುವಿನ ಕೋಶದಿಂದ ಪ್ರಸನ್ನವಾಗಿ ಹೊರಗೆ ಬರುತ್ತಿದೆ. ಅರ್ಜುನನೇ, ಯಾವಾಗ ರಥವನ್ನು ಹೂಡುತ್ತೀಯೆ ಎಂಬ ಭಯಂಕರವಾದ ಮಾತುಗಳು ಧ್ವಜದಿಂದ ಕೇಳಿ ಬರುತ್ತಿವೆ.

ಗೋಮಾಯುಸಂಘಾಶ್ಚ ನದಂತಿ ರಾತ್ರೌ
ರಕ್ಷ್ಯಾಂಸ್ಯಥೋ ನಿಷ್ಪತಂತ್ಯಂತರಿಕ್ಷಾತ್ ।
ಬಕಾಃ ಸೃಗಾಲಾಃ ಶಿತಿಕಂಠಾಶ್ಚ ಕಾಕಾ
ಗೃಧ್ರಾ ಮೃಗಾಶ್ಚೈವ ತರಕ್ಷವಶ್ಚ ॥೧೦೨॥

ರಾತ್ರಿಯ ಕಾಲದಲ್ಲಿ ನರಿಗಳು ಕೂಗುತ್ತಿವೆ. ಅಂತರಿಕ್ಷದಿಂದ ರಾಕ್ಷಸರು ಬೀಳುತ್ತಿದ್ದಾರೆ. ಆಹಾರವನ್ನು ಹುಡುಕುವ ಬಕಗಳೂ, ನರಿಗಳೂ, ಹದ್ದುಗಳೂ, ಕಾಗೆಗಳೂ ಮತ್ತು ಹುಲಿಗಳೂ ಎಲ್ಲೆಡೆಯಲ್ಲಿಯೂ ತಿರುಗಾಡುತ್ತಿವೆ.

ಸುವರ್ಣಪತ್ರಾಶ್ಚ ಪತಂತಿ ಪಶ್ಚಾದ್
ದೃಷ್ಟ್ವಾ ರಥಂ ಶ್ವೇತಹಯಪ್ರಯುಕ್ತಮ್ ।
ಅಹಂ ಹ್ಯೇಕಃ ಪಾರ್ಥಿವಾನ್ ಸರ್ವಯೋಧಾನ್
ಶರಾನ್ ವರ್ಷನ್ ಮೃತ್ಯುಲೋಕಂ ನಯೇಯಮ್ ॥೧೦೩॥

ಸಮಾದದಾನಃ ಪೃಥಗಸ್ತ್ರಮಾರ್ಗಾನ್
ಯಥಾಗ್ನಿರಿದ್ಧೋ ಗಹನಂ ನಿದಾಘೇ ।
ಸ್ಥೂಣಾಕರ್ಣಂ ಪಾಶುಪತಂ ಮಹಾಸ್ತ್ರಂ
ಬ್ರಾಹ್ಮಂ ಚಾಸ್ತ್ರಂ ಯಚ್ಚ ಶಕ್ರೋಽದದಾನ್ಮೇ ॥೧೦೪॥

ಸುವರ್ಣಮಯವಾದ ರೆಕ್ಕೆಗಳುಳ್ಳ ಪಕ್ಷಿಗಳು ಶ್ವೇತಹಯಗಳಿಂದ ಕೂಡಿದ ನನ್ನ ರಥಗಳನ್ನು ನೋಡಿ ನನ್ನ ಹಿಂದೆ ಬರುತ್ತಿವೆ. ನಾನೊಬ್ಬನೇ ಬಾಣಗಳ ಮಳೆಯನ್ನು ಸುರಿಸಿ ರಾಜರನ್ನೂ ಮತ್ತು ಸೈನಿಕರನ್ನೂ ಮೃತ್ಯುಲೋಕಕ್ಕೆ ಕಳುಹಿಸುವೆನು. ಬೇರೆ ಬೇರೆ ಅಸ್ತ್ರಮಾರ್ಗಗಳನ್ನು ಅವಲಂಬಿಸಿ ಸ್ಥೂಣಾಕರ್ಣಾಸ್ತ್ರ, ಪಾಶುಪತಮಹಾಸ್ತ್ರ, ಬ್ರಹ್ಮಾಸ್ತ್ರ ಮತ್ತು ಇಂದ್ರನು ಕೊಟ್ಟ ಅಸ್ತ್ರ ಇವುಗಳನ್ನು ತೆಗೆದುಕೊಂಡು ಬೇಸಿಗೆಯ ಕಾಲದಲ್ಲಿ ಅಗ್ನಿಯು ಕಾಡನ್ನು ಸುಡುವಂತೆ (ಶತ್ರುಗಳನ್ನು ನಾಶಮಾಡಿ ಮೃತ್ಯುಲೋಕಕ್ಕೆ ಕಳುಹಿಸುವೆನು).

ವಧೇ ಧೃತೋ ವೇಗವತಃ ಪ್ರಮುಂಚನ್
ನಾಹಂ ಪ್ರಜಾಃ ಕಿಂಚಿದಿಹಾವಶಿಷ್ಯೇ ।
ಶಾಂತಿಂ ಲಪ್ಸ್ಯೇ ಪರಮೋ ಹ್ಯೇಷ ಭಾವಃ
ಸ್ಥಿರೋ ಮಮ ಬ್ರೂಹಿ ಗಾವಲ್ಗಣೇ ತಾನ್ ॥೧೦೫॥

ಶತ್ರುಗಳ ವಧೆಯಲ್ಲಿ ನಿರತನಾದ ನಾನು ವೇಗವುಳ್ಳ ಬಾಣಗಳನ್ನು ಪ್ರಯೋಗಿಸುತ್ತಾ ಶತ್ರುಸೈನ್ಯದ ಯಾವ ಪ್ರಜೆಗಳನ್ನೂ ಉಳಿಸುವುದಿಲ್ಲ. ಆ ಕಾರ್ಯವನ್ನು ಮಾಡಿ ನಾನು

ಶಾಂತಿಯನ್ನು ಹೊಂದುವೆನು. ಇದು ನನ್ನ ಸುದೃಢವಾದ ಅಭಿಪ್ರಾಯ. ಗಾವಲ್ಗಣಿಯೇ, ನೀನು ನಿರ್ಭಯವಾಗಿ ಈ ನನ್ನ ಅಭಿಪ್ರಾಯವನ್ನು ಅವರಿಗೆ (ಕೌರವರಿಗೆ) ಹೇಳು.

ನಿತ್ಯಂ ಪುನಃ ಸಚಿವೈರ್ಯಾನವೋಚತ್
ದೇವಾನಪೀಂದ್ರಪ್ರಮುಖಾನ್ ಸಮೇತಾನ್ ।
ತೈರ್ಮನ್ಯತೇ ಕಲಹಂ ಸಂಪ್ರಯುಜ್ಯ
ಸ ಧಾರ್ತರಾಷ್ಟ್ರಃ ಪಶ್ಯತು ಮೋಹಮಸ್ಯ ॥೧೦೬॥

ದುರ್ಯೋಧನನು ದೇವತೆಗಳ ಜೊತೆಯಲ್ಲಿಯೂ ವಿರೋಧವನ್ನು ಮಾಡಿ, ಇಂದ್ರನಿಂದ ಸಹಿತನಾದ ಎಲ್ಲಾ ದೇವತೆಗಳನ್ನೂ ತಾನು ಗೆಲ್ಲುವೆನೆಂದು ತನ್ನ ಸಹಚರರ ಮುಂದೆ ಯಾವಾಗಲೂ ಹೇಳುತ್ತಾನೆ. ಎಲೈ ಸಂಜಯನೇ, ಅವನ ಮೋಹವನ್ನು ನೋಡು.

ವೃದ್ಧೋ ಭೀಷ್ಮಃ ಶಾಂತನವಃ ಕೃಪಶ್ಚ
ದ್ರೋಣಃ ಸಪುತ್ರೋ ವಿದುರಶ್ಚ ಧೀಮಾನ್
ಏತೇ ಸರ್ವೇ ಯದ್ ವದೇಯುಸ್ತದಸ್ತು
ಆಯುಷ್ಮತಃ ಕುರವಃ ಸಂತು ಸರ್ವೇ ॥೧೦೭॥

ಶಂತನು ಪುತ್ರರಾದ ಭೀಷ್ಮರೂ, ಕೃಪರೂ, ಪುತ್ರಸಹಿತರಾದ ದ್ರೋಣರೂ ಮತ್ತು ಮೇಧಾವಿಯಾದ ವಿದುರ ಎಲ್ಲರೂ ದೊಡ್ಡವರು. ಇವರೆಲ್ಲರೂ ಏನು ಹೇಳುತ್ತಾರೋ ಅದರಂತೆ ಆಗಲಿ. ಎಲ್ಲ ಕುರುಗಳೂ ಆಯುಷ್ಯವನ್ನು ಹೊಂದಿದವರಾಗಲಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪಂಚಾಶೋಽಧ್ಯಾಯಃ ॥

॥ ವ್ಯಾಸಾಭಿಗಮನಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಐವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೊಂದನೆಯ ಅಧ್ಯಾಯ

ಭೀಷ್ಮದ್ರೋಣರ ಸನ್ನಿಧಿಯಲ್ಲಿ ಧೃತರಾಷ್ಟ್ರನ ಪ್ರಶ್ನೆ.
ಕರ್ಣನ ನಿಂದೆ ಮತ್ತು ಕುರುಗಳ ನಿರಾಶೆ.

ವೈಶಂಪಾಯನಃ

ಸಮವೇತೇಷು ಸರ್ವೇಷು ತೇಷು ರಾಜಸು ಭಾರತ ।
ದುರ್ಯೋಧನಮಿದಂ ವಾಕ್ಯಂ ಭೀಷ್ಮಃ ಶಾಂತನವೋಽಬ್ರವೀತ್ ॥೧॥

ವೈಶಂಪಾಯನ– ಎಲೈ ಭಾರತನೇ, ಆ ರಾಜರೆಲ್ಲರೂ ಒಟ್ಟಿಗೆ ಸೇರಿರಲು ಶಂತನು ಪುತ್ರನಾದ ಭೀಷ್ಮನು ದುರ್ಯೋಧನನನ್ನು ಕುರಿತು ಈ ಮಾತನ್ನು ಆಡಿದನು.

ಬೃಹಸ್ಪತಿಶ್ಚೋಶನಾ ಚ ಬ್ರಹ್ಮಾಣಂ ಪರ್ಯುಪಸ್ಥಿತೌ ।
ಮರುತಶ್ಚ ಸಹೇಂದ್ರೇಣ ವಸವಶ್ಚಾಗ್ನಿನಾ ಸಹ ॥೨॥

ಬೃಹಸ್ಪತಿ ಶುಕ್ರಾಚಾರ್ಯರು, ಇಂದ್ರನಿಂದ ಕೂಡಿದ ಮರುತ್ತುಗಳು, ಅಗ್ನಿಯಿಂದ ಕೂಡಿದ ವಸುಗಳೂ ಸಹ ಬ್ರಹ್ಮದೇವರ ಬಳಿಗೆ ಹೋದರು.

ಆದಿತ್ಯಾಶ್ಚೈವ ಸಾಧ್ಯಾಶ್ಚ ಯೇ ಚ ಸಪ್ತರ್ಷಯೋ ದಿವಿ ।
ವಿಶ್ವಾವಸುಶ್ಚ ಗಂಧರ್ವಃ ಸರ್ವೇ ಚಾಪ್ಸರಸಾಂ ಗಣಾಃ ॥೩॥

ನಮಸ್ಕೃತ್ಯೋಪಜಗ್ಮುಸ್ತೇ ಲೋಕವೃದ್ಧಂ ಪಿತಾಮಹಮ್ ॥೪॥

ಪರಿವಾರ್ಯ ಚ ವಿಶ್ವೇಶಂ ಪರ್ಯಾಸತ ದಿವೌಕಸಃ ॥೫॥

ಆದಿತ್ಯರೂ ಮತ್ತು ಸ್ವರ್ಗದಲ್ಲಿರುವ ಸಪ್ತರ್ಷಿಗಳೂ, ವಿಶ್ವಾವಸು ಗಂಧರ್ವರೂ, ಅಪ್ಸರೆಯರೂ, ಲೋಕವೃದ್ಧರಾದ ಪಿತಾಮಹರಾದ ಬ್ರಹ್ಮದೇವರನ್ನು ನಮಸ್ಕರಿಸಿ ಅವರ ಸಮೀಪಕ್ಕೆ ಹೋದರು. ದೇವತೆಗಳೆಲ್ಲರೂ ವಿಶ್ವೇಶರಾದ ಅವರನ್ನು ಸುತ್ತುವರಿದು ಕುಳಿತರು.

ತೇಷಾಂ ಮನಶ್ಚ ತೇಜಶ್ಚಾಪ್ಯಾದದಾನಾವಿವೌಜಸಾ ।
ಪೂರ್ವದೇವೌ ವ್ಯತಿಕ್ರಾಂತೌ ನರನಾರಾಯಣಾವೃಷೀ ॥೬॥

ತಮ್ಮ ತೇಜಸ್ಸಿನಿಂದ ಆ ದೇವತೆಗಳ ಮನಸ್ಸನ್ನು ಮತ್ತು ತೇಜಸ್ಸನ್ನು ಅಪಹರಿಸುವವರಂತೆ ಪೂರ್ವದೇವತೆಗಳಾದ ನರ-ನಾರಾಯಣ ಋಷಿಗಳು ಆ ಸ್ಥಳದಲ್ಲಿ ಹಾದು ಹೋದರು.

ಬೃಹಸ್ಪತಿಶ್ಚ ಪಪ್ರಚ್ಛ ಬ್ರಹ್ಮಾಣಂ ಕಾವಿಮಾವಿತಿ ।
ಭವಂತಂ ನೋಪತಿಷ್ಠೇತೇ ತೌ ನಃ ಶಂಸ ಪಿತಾಮಹ ॥೭॥

ಬೃಹಸ್ಪತಿಗಳು ಬ್ರಹ್ಮದೇವರನ್ನು ಕುರಿತು ಇವರಿಬ್ಬರು ಯಾರು? ನಿಮ್ಮನ್ನು ಗೌರವಿಸುತ್ತಿಲ್ಲ. ಪಿತಾಮಹರೇ, ಅವರು ಯಾರು ಎಂದು ನಮಗೆ ತಿಳಿಸಿ ಎಂದು ಕೇಳಿದರು.

ಬ್ರಹ್ಮಾ

ಯಾವೇತೌ ಪೃಥಿವೀಂ ದ್ಯಾಂ ಚ ಭಾಸಯಂತೌ ತಪಸ್ವಿನೌ ।
ಜ್ವಲಂತೌ ರೋಚಮಾನೌ ಚ ವ್ಯಾಪ್ಯಾತೀತೌ ಮಹಾಬಲೌ ॥೮॥

ನರನಾರಾಯಣಾವೇತೌ ಲೋಕಾಲ್ಲೋಕಂ ಸಮಾಶ್ರಿತೌ ।
ಊರ್ಜಿತೌ ಸ್ವೇನ ತಪಸಾ ಮಹಾಸತ್ವಪರಾಕ್ರಮೌ ॥೯॥

ಬ್ರಹ್ಮಾ– ತಪಸ್ವಿಗಳೂ, ಭೂಮಿಯನ್ನು ಮತ್ತು ಸ್ವರ್ಗವನ್ನು ತಮ್ಮ ಕಾಂತಿಯಿಂದ ಬೆಳಗುವವರೂ, ತಮ್ಮ ತೇಜಸ್ಸಿನಿಂದ ಜ್ವಲಿಸುವವರೂ ಮತ್ತು ಸುಂದರವಾಗಿರುವವರೂ, ಮಹಾಬಲಿಷ್ಠರೂ ಆದ ನಮ್ಮನ್ನು ದಾಟಿಹೋದ ಇವರಿಬ್ಬರೂ ನರನಾರಾಯಣ ಋಷಿಗಳು. ಒಂದು ಲೋಕದಿಂದ ಇನ್ನೊಂದು ಲೋಕಕ್ಕೆ ಹೋಗುವವರು. ಮಹಾಸತ್ವ ಮತ್ತು ಪರಾಕ್ರಮವನ್ನು ಹೊಂದಿದ ಇವರು ತಮ್ಮ ತಪಸ್ಸಿನಿಂದಲೇ ಸಮೃದ್ಧರಾಗಿದ್ದಾರೆ.

ಏತೌ ಹಿ ಕರ್ಮಣಾ ಲೋಕಂ ನಂದಯಾಮಾಸತುರ್ಧ್ರುವೌ ॥೧೦॥

ದ್ವಿಧಾಭೂತೌ ಮಹಾಪ್ರಾಜ್ಞೌ ವಿದ್ಧಿ ಬ್ರಹ್ಮ ಪರಂತಪೌ ।
ಅಸುರಾಣಾಂ ವಿನಾಶಾಯ ದೇವಗಂಧರ್ವಪೂಜಿತೌ ॥೧೧॥

ಇವರು ತಮ್ಮ ಕರ್ಮಗಳಿಂದ ಲೋಕಗಳಿಗೆ ಆನಂದವನ್ನು ನೀಡಿದರು. ಪರಂತಪರೂ, ಮಹಾಪ್ರಾಜ್ಞರೂ ಆದ ಇವರಿಬ್ಬರನ್ನು ಪರಬ್ರಹ್ಮನ ಎರಡು ಶಾಶ್ವತವಾದ

ರೂಪವೆಂದು ತಿಳಿ. ಅಸುರರ ವಿನಾಶಕ್ಕಾಗಿ ಇವರು ದೇವ-ಗಂಧರ್ವರಿಂದ ಪೂಜಿಸಲ್ಪಡುತ್ತಾರೆ.

ಭೀಷ್ಮಃ

ಜಗಾಮ ಶಕ್ರಸ್ತಚ್ಛ್ರುತ್ವಾ ಯತ್ರ ತೌ ತೇಪತುಸ್ತಪಃ ।
ಸಾರ್ಧಂ ದೇವಗಣೈಃ ಸರ್ವೈಃ ಸಹಸ್ರಾಕ್ಷಃ ಸಮಾವೃತಃ ॥೧೨॥

ಭೀಷ್ಮ– ಸಹಸ್ರಾಕ್ಷನಾದ ಇಂದ್ರನು ದೇವಗಣಗಳಿಂದ ಕೂಡಿದವನಾಗಿ ಅವರ ಜೊತೆಯಲ್ಲಿ ನರ-ನಾರಾಯಣರು ತಪಸ್ಸು ಮಾಡುವ ಸ್ಥಳಕ್ಕೆ ಹೋದನು.

ತಸ್ಮಿನ್ ದೇವಾಸುರೇ ಯುದ್ಧೇ ಭಯೇ ಜಾತೇ ದಿವೌಕಸಾಮ್ ।
ಅಯಾಚತ ಮಹಾತ್ಮಾನೌ ನರನಾರಾಯಣೌ ವರಮ್ ॥೧೩॥

ಆ ದೇವಾಸುರ ಯುದ್ಧದಲ್ಲಿ ದೇವತೆಗಳಿಗೆ ಭಯ ಉಂಟಾಗುತ್ತಿರಲು ಅವನು ಮಹಾತ್ಮರಾದ ನರ-ನಾರಾಯಣರನ್ನು ವರವನ್ನು ಬೇಡಿದನು.

ತಾವಬ್ರೂತಾಂ ವೃಣೀಷ್ವೇತಿ ತದಾ ಭರತಸತ್ತಮ ।
ಅಥೈತಾವಬ್ರವೀಚ್ಛಕ್ರಃ ಸಾಹ್ಯಂ ನಃ ಕ್ರಿಯತಾಮಿತಿ ॥೧೪॥

ಎಲೈ ಭರತಸತ್ತಮನೇ, ಆಗ ಅವರು ವರವನ್ನು ಕೇಳು ಎಂದು ಹೇಳಿದರು. ಆಗ ಇಂದ್ರನು ಅವರನ್ನು ಕುರಿತು ನನಗೆ ಸಹಾಯವನ್ನು ಮಾಡಿ ಎಂದು ಕೇಳಿದನು.

ತತಸ್ತೌ ಶಕ್ರಮಬ್ರೂತಾಂ ಕರಿಷ್ಯಾವೋ ಯದಿಚ್ಛಸಿ ।
ತಾಭ್ಯಾಂ ಚ ಸಹಿತಃ ಶಕ್ರೋ ವಿಜಿಗ್ಯೇ ದೈತ್ಯದಾನವಾನ್ ॥೧೫॥

ಅವರಿಬ್ಬರೂ ಇಂದ್ರನನ್ನು ಕುರಿತು ನೀನು ಬಯಸಿದಂತೆ ಮಾಡುತ್ತೇವೆ ಎಂದು ಹೇಳಿದರು. ಅವರಿಂದ ಸಹಿತನಾಗಿ ಇಂದ್ರನು ದೈತ್ಯ-ದಾನವರನ್ನು ಗೆದ್ದನು.

ನರ ಇಂದ್ರಸ್ಯ ಸಂಗ್ರಾಮೇ ಹತ್ವಾ ಶತ್ರೂನ್ ಪರಂತಪಃ ।
ಪೌಲೋಮಾನ್ ಕಾಲಕೇಯಾಂಶ್ಚ ಸಹಸ್ರಾಣಿ ಶತಾನಿ ಚ ॥೧೬॥

ಏಷೋಽಭ್ರಾಂತೋ ರಥೇ ತಿಷ್ಠನ್ ಭಲ್ಲೇನಾಪಹರಚ್ಛಿರಃ ।
ಜಂಭಸ್ಯ ಗ್ರಸಮಾನಸ್ಯ ತಥಾ ಹ್ಯರ್ಜುನ ಆಹವೇ ॥೧೭॥

ಪರಂತಪನಾದ ನರನು ಇಂದ್ರನ ಆ ಯುದ್ಧದಲ್ಲಿ ಶತ್ರುಗಳನ್ನು ಕೊಂದು ಪೌಲೋಮರನ್ನೂ ಮತ್ತು ಕಾಲಕೇಯರನ್ನೂ ಸಹಸ್ರ ಸಂಖ್ಯೆಯಲ್ಲಿ, ಶತಸಂಖ್ಯೆಯಲ್ಲಿ ಕೊಂದು ಯಾವ ಪ್ರಮಾದವೂ ಇಲ್ಲದೆ ರಥದಲ್ಲಿ ಕುಳಿತು ಎಲ್ಲವನ್ನೂ ನುಂಗುತ್ತಿದ್ದ ಜಂಭಾಸುರನ ಶಿರಸ್ಸನ್ನು ಭಲ್ಲದಿಂದ ಕತ್ತರಿಸಿದನು. ಆ ನರನೇ ಅರ್ಜುನನಾಗಿ ಯುದ್ಧದಲ್ಲಿ ಹಾಗೆಯೇ ನಡೆದುಕೊಳ್ಳುತ್ತಾನೆ.

ಏಷ ಪಾರೇ ಸಮುದ್ರಸ್ಯ ಹಿರಣ್ಯಪುರಮಾರುಜತ್ ।
ಹತ್ವಾ ಷಷ್ಟಿಸಹಸ್ರಾಣಿ ನಿವಾತಕವಚಾನ್ ರಣೇ ॥೧೮॥

ಈ ನರನು ಸಮುದ್ರ ತೀರದಲ್ಲಿ ಅರವತ್ತು ಸಾವಿರ ನಿವಾತಕವಚರನ್ನು ಯುದ್ಧದಲ್ಲಿ ಕೊಂದು ಹಿರಣ್ಯಪುರವನ್ನು ಮರ್ದಿಸಿದನು.

ಏಷ ದೇವಾನ್ ಸಹೇಂದ್ರೇಣ ಜಿತ್ವಾ ಪರಪುರಂಜಯಃ ।
ಅತರ್ಪಯನ್ ಮಹಾಬಾಹುರರ್ಜುನೋ ಜಾತವೇದಸಮ್ ॥೧೯॥

ನಾರಾಯಣಸ್ತಥೈವಾತ್ರ ಭೂಯಸೋಽನ್ಯಾನ್ ಜಘಾನ ಹ ॥೨೦॥

ಪರಪುರಂಜಯನಾದ ಈ ನರನು ಮಹಾಬಾಹುವಾದ ಅರ್ಜುನನಾಗಿ ಇಂದ್ರನಿಂದ ಸಹಿತರಾದ ದೇವತೆಗಳನ್ನು ಗೆದ್ದು, ಅಗ್ನಿಗೆ ತೃಪ್ತಿಯನ್ನು ಉಂಟು ಮಾಡಿದನು. ಹಾಗೆಯೇ ನಾರಾಯಣನೂ ಸಹ ಆ ದೇವಾಸುರ ಯುದ್ಧದಲ್ಲಿ ಬಹಳ ಅಸುರರನ್ನು ಸಂಹಾರ ಮಾಡಿದನು.

ಏವಮೇತೌ ಮಹಾವೀರ್ಯೌ ತೌ ಪಶ್ಯತ ಸಮಾಗತೌ ।
ವಾಸುದೇವಾರ್ಜುನೌ ವೀರೌ ಸಮವೇತೌ ಮಹಾರಥೌ ॥೨೧॥

ಹೀಗೆಯೇ ಇವರಿಬ್ಬರೂ ಮಹಾಪರಾಕ್ರಮವುಳ್ಳವರು. ಅವರಿಬ್ಬರೂ ಒಟ್ಟಿಗೆ ಇರುವುದನ್ನು ನೋಡಿ. ಮಹಾರಥರಾದ ಕೃಷ್ಣಾರ್ಜುನರೇ ಒಟ್ಟಿಗೆ ಇರುವ ಆ ವೀರರು.

ನರನಾರಾಯಣೌ ದೇವೌ ಪೂರ್ವದೇವಾವಿತಿ ಶ್ರುತಿಃ ।
ಅಜೇಯೌ ಮಾನುಷೇ ಲೋಕೇ ಸೇಂದ್ರೈರಪಿ ಸುರಾಸುರೈಃ ॥೨೨॥

ಶ್ರುತಿಗಳಲ್ಲಿ ನರನಾರಾಯಣರೆಂದು ಕರೆಸಿಕೊಳ್ಳಲ್ಪಡುವ ಈ ದೇವತೆಗಳು ಇಂದ್ರನಿಂದ ಕೂಡಿದ ಸುರಾಸುರರಿಂದಲೂ ಮನುಷ್ಯಲೋಕದಲ್ಲಿ ಅಜೇಯರಾದವರು.

ಏಷ ನಾರಾಯಣಃ ಕೃಷ್ಣಃ ಫಲ್ಗುನಶ್ಚ ನರಃ ಸ್ಮೃತಃ ॥೨೩॥

ನಾರಾಯಣೋ ನರಶ್ಚೈವ ಸತ್ತ್ವಮೇಕಂ ದ್ವಿಧಾ ಕೃತಮ್ ॥೨೪॥

ಈ ಕೃಷ್ಣನೇ ನಾರಾಯಣ ಮತ್ತು ಅರ್ಜುನನೇ ನರ ಎಂದು ಹೇಳಲ್ಪಡುತ್ತದೆ. ನರ-ನಾರಾಯಣರೆಂದರೆ ಒಂದೇ ಸಾಮರ್ಥ್ಯವೇ ಎರಡು ಭಾಗವಾದಂತೆ.

ಏತೌ ಹಿ ಕರ್ಮಣಾ ಲೋಕಾನಶ್ನುವಾತೇऽಕ್ಷಯಾನ್ ಧ್ರುವಾನ್ ।
ತತ್ರ ತತ್ರೈವ ಜಾಯೇತೇ ಯುದ್ಧಕಾಲೇ ಪುನಃ ಪುನಃ ॥೨೫॥

ಇವರಿಬ್ಬರೂ ತಮ್ಮ ಶ್ರೇಷ್ಠವಾದ ಕರ್ಮಗಳಿಂದ ಅಕ್ಷಯವೂ, ಶಾಶ್ವತವೂ ಆದ ಲೋಕಗಳನ್ನು ಹೊಂದುತ್ತಾರೆ. ಯುದ್ಧಕಾಲದಲ್ಲಿ ಅಲ್ಲಲ್ಲಿ ಪುನಃ ಪುನಃ ಅವತರಿಸುತ್ತಾರೆ.

ತಸ್ಮಾತ್ ಕರ್ಮೈವ ಕರ್ತವ್ಯಮಿತಿ ಹೋವಾಚ ನಾರದಃ ।
ಏತದ್ಧಿ ಸರ್ವಮಾಚಷ್ಟ ವೃಷ್ಣಿಚಕ್ರಸ್ಯ ವೇದವಿತ್ ॥೨೬॥

ಆದ್ದರಿಂದ ನಾರದರು ಸಂಧಿಯನ್ನೇ ಮಾಡಿಕೊಳ್ಳಬೇಕೆಂದು ಹೇಳಿದರು. ವೇದಜ್ಞರಾದ ಅವರು ವೃಷ್ಣಿಸಮೂಹದ ಮುಂದೆ ಈ ಎಲ್ಲಾ ವಿಷಯವನ್ನೂ ಹೇಳಿದರು.

ಶಂಖಿಚಕ್ರಗದಾಹಸ್ತಂ ಯದಾ ದ್ರಕ್ಷ್ಯಸಿ ಕೇಶವಮ್ ।
ಪರ್ಯಾದದಾನಂ ಚಾಸ್ತ್ರಾಣಿ ಭೀಮಧನ್ವಾನಮರ್ಜುನಮ್ ॥೨೭॥

ಸನಾತನೌ ಮಹಾತ್ಮಾನೌ ಕೃಷ್ಣಾವೇಕರಥೇ ಸ್ಥಿತೌ ।
ದುರ್ಯೋಧನ ತದಾ ತಾತ ಸ್ಮರ್ತಾಸಿ ವಚನಂ ಮಮ ॥೨೮॥

ನ ಚೇದಯಮಭಾವಃ ಸ್ಯಾತ್ ಕುರೂಣಾಂ ಪ್ರತ್ಯುಪಸ್ಥಿತಃ ॥೨೯॥

ಎಲೈ ಪ್ರೀತಿಪಾತ್ರನಾದ ದುರ್ಯೋಧನನೇ, ಶಂಖಿಚಕ್ರಗದಾಧಾರಿಯಾದ ಕೃಷ್ಣನನ್ನೂ ಮತ್ತು ಭಯಂಕರ ಧನುಸ್ಸನ್ನೂ ಮತ್ತು ಅಸ್ತ್ರಗಳನ್ನೂ ಕೈಗೆ ತೆಗೆದುಕೊಳ್ಳುವ

ಅರ್ಜುನನನ್ನೂ - ಈ ಇಬ್ಬರು ಮಹಾತ್ಮರಾದ ಕೃಷ್ಣರು ಒಂದೇ ರಥದಲ್ಲಿ ಕುಳಿತಿರುವುದನ್ನೂ ನೋಡಿದಾಗ ಕುರುಗಳಾದ ನಮಗೆ ವಿನಾಶಕಾಲವೇ ಸಮೀಪಿಸಿದ್ದರೆ ನನ್ನ ಮಾತನ್ನು ಸ್ಮರಿಸುವಿ.

ಅರ್ಥಾಚ್ಚ ತಾತ ಧರ್ಮಾಚ್ಚ ತವ ಬುದ್ಧಿರುಪಪ್ಲುತಾ ।
ನ ಚೇದ್ ಗ್ರಹೀಷ್ಯಸೇ ವಾಕ್ಯಂ ಶ್ರೋತಾಸಿ ಸುಬಹೂನ್ ಹತಾನ್ ॥

ಎಲೈ ಪ್ರೀತಿಪಾತ್ರನೇ, ನಿನ್ನ ಬುದ್ಧಿಯು ಅರ್ಥದಿಂದಲೂ ಮತ್ತು ಧರ್ಮದಿಂದಲೂ ಸರಿದು ಕಲುಷಿತವಾಗಿದೆ. ನನ್ನ ಮಾತನ್ನು ಕೇಳದಿದ್ದರೆ ಬಹಳ ಜನರು ಹತರಾದ ವಾರ್ತೆಯನ್ನು ಕೇಳುವಿ.

ತವೈವ ಹಿ ಮತಿಂ ಸರ್ವೇ ಕುರವಃ ಪರ್ಯುಪಾಸತೇ ।
ತ್ರಯಾಣಾಮೇವ ಚ ಮತಂ ತತ್ ತ್ವಮೇಕೋऽನುಮನ್ಯಸೇ ॥೩೧॥

ನಿನ್ನ ಅಭಿಪ್ರಾಯವನ್ನೇ ಎಲ್ಲ ಕುರುಗಳೂ ಅನುಸರಿಸುತ್ತಾರೆ. ಈ ಮೂರು ಜನರ ಅಭಿಪ್ರಾಯವನ್ನು ನೀನೊಬ್ಬನೇ ಸನ್ಮಾನಿಸುತ್ತೀಯೆ.

ರಾಮೇಣ ಚೈವ ಶಪ್ತಸ್ಯ ಕರ್ಣಸ್ಯ ಭರತರ್ಷಭ ।
ದುರ್ಜಾತೇಃ ಸೂತಪುತ್ರಸ್ಯ ಶಕುನೇಃ ಸೌಬಲಸ್ಯ ಚ ॥೩೨॥

ತಥಾ ಕ್ಷುದ್ರಸ್ಯ ಪಾಪಸ್ಯ ಭ್ರಾತುರ್ದುಃಶಾಸನಸ್ಯ ಚ ॥೩೩॥

ಎಲೈ ಭರತರ್ಷಭನೇ, ಪರಶುರಾಮರಿಂದ ಶಾಪಕ್ಕೆ ಒಳಗಾದ, ನೀಚಜಾತಿಯಲ್ಲಿ ಹುಟ್ಟಿದ ಸೂತಪುತ್ರನಾದ ಕರ್ಣ, ಸುಬಲಪುತ್ರನಾದ ಶಕುನಿ ಮತ್ತು ಕ್ಷುದ್ರನೂ, ಪಾಪಾತ್ಮನೂ ಆದ ನಿನ್ನ ತಮ್ಮನಾದ ದುಶ್ಶಾಸನ (ಇವರೇ ಆ ಮೂವರು).

ಕರ್ಣಃ

ನೈವಮಾಯುಷ್ಮತಾ ವಾಚ್ಯಂ ಯನ್ಮಾಮಾತ್ಥ ಪಿತಾಮಹ ।
ಕ್ಷತ್ರಧರ್ಮೇ ಸ್ಥಿತೋ ಹ್ಯಸ್ಮಿನ್ ಸ್ವಧರ್ಮಾದನಪೇಯಿವಾನ್ ॥೩೪॥

ಕರ್ಣ– ಪಿತಾಮಹನಾದ ಭೀಷ್ಮನೇ, ನನಗೆ ಹೇಳಿದಂತೆ ಹಿರಿಯನಾದ ನೀನು ಮಾತನಾಡಬಾರದು. ನಾನು ಕ್ಷತ್ರಧರ್ಮದಲ್ಲಿ ನಿಂತು ಎಂದೂ ಸ್ವಧರ್ಮದಿಂದ ದೂರ ಸರಿದಿಲ್ಲ.

ಕಿಂಚಾನ್ಯನ್ಮಯಿ ದುರ್ವೃತ್ತಂ ಯೇನ ಮಾಂ ಪರಿಗರ್ಹಸೇ ।
ನ ಹಿ ಮೇ ವ್ರಜಿನಂ ಕಿಂಚಿದ್ ಧಾರ್ತರಾಷ್ಟ್ರಾ ವಿದುಃ ಕ್ವಚಿತ್ ॥೩೫॥

ನೀನು ನನ್ನನ್ನು ನಿಂದಿಸಲು ಕಾರಣವಾದ ಕೆಟ್ಟನಡತೆಯಾದರೂ ನನ್ನಲ್ಲಿ ಯಾವುದಿದೆ? ಧೃತರಾಷ್ಟ್ರಪುತ್ರರು ತಿಳಿದಂತೆ ನಾನು ಯಾವ ಅಪರಾಧವನ್ನೂ ಮಾಡಿಲ್ಲ.

ನಾಚರಂ ವ್ರಜಿನಂ ಕಿಂಚಿದ್ ಧಾರ್ತರಾಷ್ಟ್ರಸ್ಯ ನಿತ್ಯಶಃ ।
ಅಹಂ ಹಿ ಪಾಂಡವಾನ್ ಸರ್ವಾನ್ ಹನಿಷ್ಯಾಮಿ ರಣೇ ಸ್ಥಿತಾನ್ ॥
ಪ್ರಾಗ್‌ವಿರುದ್ಧೈಃ ಶಮಃ ಸದ್ಭಿಃ ಕಥಂ ವಾ ಕ್ರಿಯತೇ ಪುನಃ ॥೩೭॥

ದುರ್ಯೋಧನನಿಗಂತೂ ಯಾವಾಗಲೂ ಯಾವ ಅಪರಾಧವನ್ನೂ ಮಾಡಿಲ್ಲ. ನಾನು ಯುದ್ಧದಲ್ಲಿ ನನ್ನ ಎದುರಿಗೆ ನಿಲ್ಲುವ ಪಾಂಡವರೆಲ್ಲರನ್ನೂ ಕೊಲ್ಲುವೆನು. ಮೊದಲು ವಿರೋಧವನ್ನು ಮಾಡಿದವರ ಜೊತೆಯಲ್ಲಿ ಸಜ್ಜನರು ಪುನಃ ಹೇಗೆ ಸಂಧಿಯನ್ನು ಮಾಡಿಕೊಳ್ಳುತ್ತಾರೆ?

ರಾಜ್ಞೋ ಹಿ ಧೃತರಾಷ್ಟ್ರಸ್ಯ ಸರ್ವಂ ಕಾರ್ಯಂ ಪ್ರಿಯಂ ಮಯಾ ।
ತಥಾ ದುರ್ಯೋಧನಸ್ಯಾಪಿ ಸ ಹಿ ರಾಜ್ಯೇ ಸಮಾಹಿತಃ ॥೩೮॥

ಧೃತರಾಷ್ಟ್ರರಾಜನಿಗೆ ನಾನು ಎಲ್ಲ ರೀತಿಯಿಂದಲೂ ಪ್ರಿಯವಾದುದನ್ನೇ ಮಾಡಬೇಕು. ಅದರಂತೆ ದುರ್ಯೋಧನನಿಗೂ ಸಹ. ಏಕೆಂದರೆ ಅವನೇ ರಾಜ್ಯದಲ್ಲಿ ಪ್ರತಿಷ್ಠಿತನಾಗಿದ್ದಾನಷ್ಟೆ?

ವೈಶಂಪಾಯನಃ

ಕರ್ಣಸ್ಯ ತು ವಚಃ ಶ್ರುತ್ವಾ ಭೀಷ್ಮಃ ಶಾಂತನವಃ ಪುನಃ ।
ಧೃತರಾಷ್ಟ್ರಂ ಮಹಾರಾಜಮಾಭಾಷ್ಯೇದಂ ವಚೋಽಬ್ರವೀತ್ ॥೩೯॥

ವೈಶಂಪಾಯನ– ಕರ್ಣನ ಮಾತುಗಳನ್ನು ಕೇಳಿ ಶಂತನುಪುತ್ರನಾದ ಭೀಷ್ಮನು ಮಹಾರಾಜನಾದ ಧೃತರಾಷ್ಟ್ರನನ್ನು ಸಂಬೋಧಿಸಿ ಪುನಃ ಈ ಮಾತುಗಳನ್ನು ಆಡಿದನು.

ಯದಯಂ ಕತ್ಥತೇ ನಿತ್ಯಂ ಹಂತಾऽಹಂ ಪಾಂಡವಾನಿತಿ ।
ನಾಯಂ ಕಲಾऽಪಿ ಸಂಪೂರ್ಣಾ ಪಾಂಡವಾನಾಂ ಮಹಾತ್ಮನಾಮ್ ॥

ಈ ಕರ್ಣನು ಯಾವಾಗಲೂ ನಾನು ಪಾಂಡವರನ್ನು ಕೊಲ್ಲುವೆನು ಎಂದು ಹೊಗಳಿಕೊಳ್ಳುತ್ತಿದ್ದಾನಷ್ಟೆ? ಇವನು ಮಹಾತ್ಮರಾದ ಪಾಂಡವರ ಒಂದು ಕಲೆಗೂ ಪೂರ್ಣವಾಗಿ ಸಮನಾಗುವುದಿಲ್ಲ.

ಅನಯೋ ಯೋऽಯಮಾಗಂತಾ ಪುತ್ರಾಣಾಂ ತೇ ದುರಾತ್ಮನಾಮ್ ।
ತದಸ್ಯ ಕರ್ಮ ಜಾನೀಹಿ ಸೂತಪುತ್ರಸ್ಯ ದುರ್ಮತೇಃ ॥೪೧॥

ನಿನ್ನ ಪುತ್ರರಿಗೆ ಯಾವ ವಿಪತ್ತು ಪ್ರಾಪ್ತವಾಗಲಿದೆಯೋ ಅದನ್ನು ಈ ದುರ್ಮತಿಯಾದ ಸೂತಪುತ್ರನ ಕರ್ಮವೆಂದು ತಿಳಿ.

ಏತಮಾಶ್ರಿತ್ಯ ಪುತ್ರಸ್ತೇ ಮಂದಬುದ್ಧಿಃ ಸುಯೋಧನಃ ।
ಅವಮನ್ಯತಿ ತಾನ್ ವೀರಾನ್ ದೇವಪುತ್ರಾನರಿಂದಮಾನ್ ॥೪೨॥

ನಿನ್ನ ಪುತ್ರನಾದ ಮಂದಬುದ್ಧಿಯುಳ್ಳ ಸುಯೋಧನನು ಇವನನ್ನು ಆಶ್ರಯಿಸಿ, ದೇವಪುತ್ರರಾದ ಅರಿಂದಮರಾದ ವೀರರಾದ ಪಾಂಡವರನ್ನು ಅವಮಾನಿಸುತ್ತಿದ್ದಾನೆ.

ಕಿಂಚಾಪ್ಯೇತೇನ ತತ್ ಕರ್ಮ ಕೃತಂ ಪೂರ್ವಂ ನ ದುಷ್ಕರಮ್ ।
ತೈರ್ಯಥಾ ಪಾಂಡವೈಃ ಸರ್ವೈರೇಕೈಕೇನ ಕೃತಂ ಪುರಾ ॥೪೩॥

ಅಲ್ಲದೆ ಹಿಂದೆ ಪಾಂಡವರು ಒಬ್ಬೊಬ್ಬರೂ ಎಂತಹ ದುಷ್ಕರವಾದ ಕರ್ಮವನ್ನು ಮಾಡಿದ್ದಾರೆಯೋ ಅದರಂತೆ ಇವನು ಹಿಂದೆ ಯಾವ ದುಷ್ಕರವಾದ ಕರ್ಮವನ್ನೂ ಮಾಡಿಲ್ಲ.

ದೃಷ್ಟ್ವಾ ವಿರಾಟನಗರೇ ಭ್ರಾತರಂ ನಿಹತಂ ಪ್ರಿಯಮ್ ।
ಧನಂಜಯೇನ ವಿಕ್ರಮ್ಯ ಕಿಮನೇನ ತದಾ ಕೃತಮ್ ॥೪೪॥

ವಿರಾಟನಗರದಲ್ಲಿ ಅರ್ಜುನನಿಂದ ತನ್ನ ಪ್ರಿಯನಾದ ಸಹೋದರನು ಪರಾಕ್ರಮಿಸಿ ಕೊಲ್ಲಲ್ಪಟ್ಟಾಗ ಇವನು ಏನನ್ನು ಮಾಡಿದನು?

ಸರ್ವೇ ಹ್ಯಸ್ತ್ರವಿದಃ ಶೂರಾಃ ಸರ್ವೇ ಪ್ರಾಪ್ತಾ ಮಹದ್ಯಶಃ ।
ಅಪಿ ಸರ್ವಾಮರೈಶ್ವರ್ಯಂ ತ್ಯಜೇಯುರ್ನ ಪುನರ್ಜಯಮ್ ॥೪೫॥

ಪಾಂಡವರೆಲ್ಲರೂ ಅಸ್ತ್ರಜ್ಞರು, ಶೂರರು, ಮಹಾಕೀರ್ತಿಯನ್ನು ಪಡೆದವರು. ದೇವತೆಗಳ ಐಶ್ವರ್ಯವನ್ನೆಲ್ಲಾ ತ್ಯಜಿಸಿಯಾರು, ಆದರೆ ಜಯವನ್ನು ಮಾತ್ರ ಬಿಡುವುದಿಲ್ಲ.

ಸಹಿತಾನ್ ಹಿ ಕುರೂನ್ ಸರ್ವಾನ್ ಅಭಿಯಾತೋ ಧನಂಜಯಃ ।
ಪ್ರಮಥ್ಯ ಚಾಚ್ಛಿನದ್ ವಾಸಃ ಕಿಮಯಂ ಪ್ರೋಷಿತಸ್ತದಾ ॥೪೬॥

ಅರ್ಜುನನು ಎಲ್ಲಾ ಕುರುಗಳು ಒಟ್ಟಿಗೆ ಇದ್ದಾಗಲೇ ಅವರ ವಿರುದ್ಧವಾಗಿ ಯುದ್ಧವನ್ನು ಮಾಡಿ, ತನ್ನ ಬಲದಿಂದ ಅವರ ವಸ್ತ್ರಗಳನ್ನು ಅಪಹರಿಸಿದನು. ಆಗ ಈ ಕರ್ಣನು ಎಲ್ಲಿಗೆ ಪ್ರಯಾಣ ಮಾಡಿದನು?

ಗಂಧರ್ವೈರ್ಘೋಷಯಾತ್ರಾಯಾಂ ಹ್ರಿಯತೇ ಯತ್ ಸುತಸ್ತವ ।
ಕ್ವ ತದಾ ಸೂತಪುತ್ರೋಽಸೌ ಯ ಇದಾನೀಂ ವೃಷಾಯತೇ ॥೪೭॥

ಘೋಷಯಾತ್ರೆಯಲ್ಲಿ ಗಂಧರ್ವರು ನಿನ್ನ ಪುತ್ರರನ್ನು ಎಳೆದುಕೊಂಡು ಹೋಗುವಾಗ ಈಗ ಗಂಡಸಾಗಿ ಮಾತನಾಡುವ ಈ ಕರ್ಣನು ಆಗ ಎಲ್ಲಿಗೆ ಹೋಗಿದ್ದನು?

ನನು ತತ್ರಾಪಿ ಭೀಮೇನ ಪಾರ್ಥೇನ ಚ ಮಹಾತ್ಮನಾ ।
ಯಮಾಭ್ಯಾಮೇವ ಸಂಗಮ್ಯ ಗಂಧರ್ವಾಸ್ತೇ ಪರಾಜಿತಾಃ ॥೪೮॥

ಆಗಲೂ ಸಹ ಮಹಾತ್ಮರಾದ ಭೀಮಾರ್ಜುನರು ಮತ್ತು ನಕುಲ-ಸಹದೇವರು ಗಂಧರ್ವರ ಜೊತೆಯಲ್ಲಿ ಯುದ್ಧವನ್ನು ಮಾಡಿ ಅವರನ್ನು ಸೋಲಿಸಿದರಷ್ಟೆ?

ಏತಾನ್ಯಸ್ಯ ಮೃಷೋಕ್ತಾನಿ ಬಹೂನಿ ಭರತರ್ಷಭ ।
ವೈಕರ್ತನಸ್ಯ ಭದ್ರಂ ತೇ ಸದಾ ಧರ್ಮಾರ್ಥಲೋಪಿನಃ ॥೪೯॥

ಆದ್ದರಿಂದ ಎಲೈ ಭರತರ್ಷಭನೇ, ಇವನು ಆಡಿದ ಬಹಳ ಮಾತುಗಳು ಸುಳ್ಳು. ನಿನಗೆ ಮಂಗಳವಾಗಲಿ, ಈ ಕರ್ಣನು ಯಾವಾಗಲೂ ಧರ್ಮಾರ್ಥಗಳನ್ನು ಲೋಪ ಮಾಡುವವನು.

ವೈಶಂಪಾಯನಃ

ಭೀಷ್ಮಸ್ಯ ವಚನಂ ಶ್ರುತ್ವಾ ಭಾರದ್ವಾಜೋ ಮಹಾಮನಾಃ ।
ಧೃತರಾಷ್ಟ್ರಮುವಾಚೇದಂ ರಾಜಮಧ್ಯೇऽಭಿಪೂಜಯನ್ ॥೫೦॥

ವೈಶಂಪಾಯನ– ಭೀಷ್ಮರ ಮಾತುಗಳನ್ನು ಕೇಳಿ ಉದಾರಿಗಳಾದ ದ್ರೋಣರು, ರಾಜರ ಮಧ್ಯದಲ್ಲಿ ಧೃತರಾಷ್ಟ್ರನನ್ನು ಗೌರವಿಸುತ್ತಾ ಈ ಮಾತುಗಳನ್ನು ಆಡಿದರು.

ಯದಾಹ ಭರತಶ್ರೇಷ್ಠೋ ಭೀಷ್ಮಸ್ತತ್ ಕ್ರಿಯತಾಂ ನೃಪ ।
ನ ಕಾಮಮವಲಿಪ್ತಾನಾಂ ವಚನಂ ಕರ್ತುಮರ್ಹಸಿ ॥೫೧॥

ಪುರಾ ಯುದ್ಧಾತ್ ಸಾಧು ಮನ್ಯೇ ಪಾಂಡವೈಃ ಸಹ ಸಂಗತಮ್ ॥೫೨॥

ಎಲೈ ರಾಜನೇ, ಭರತಶ್ರೇಷ್ಠರಾದ ಭೀಷ್ಮರು ಹೇಳಿದಂತೆ ನಡೆದುಕೊ. ದುರಹಂಕಾರಿಗಳು ಮನಸ್ಸಿಗೆ ಬಂದಂತೆ ಆಡಿದ ಮಾತುಗಳನ್ನು ನೀನು ಕೇಳಬೇಡ. ಯುದ್ಧಪ್ರಾರಂಭವಾಗುವುದಕ್ಕಿಂತ ಮೊದಲೇ ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳುವುದು ಯೋಗ್ಯವೆಂದು ನಾನು ಭಾವಿಸುತ್ತೇನೆ.

ಯದ್ವಾಕ್ಯಮರ್ಜುನೇನೋಕ್ತಂ ಸಂಜಯೇನ ನಿವೇದಿತಮ್ ।
ಸರ್ವಂ ತದಭಿಜಾನಾಮಿ ಕರಿಷ್ಯತಿ ಚ ಪಾಂಡವಃ ॥೫೩॥

ಅರ್ಜುನನು ಆಡಿದ ಯಾವ ಮಾತುಗಳನ್ನು ಸಂಜಯನು ನಿನಗೆ ನಿವೇದಿಸಿದ್ದಾನೆಯೋ ಅದೆಲ್ಲವನ್ನೂ ನಾನು ಅನುಮೋದಿಸುತ್ತೇನೆ. ಪಾಂಡುಪುತ್ರನಾದ ಅರ್ಜುನನು ಹಾಗೆಯೇ ಮಾಡುವನು.

ವಧೇ ನೂನಂ ಭವೇಚ್ಛಾಂತಿಃ ತವ ವಾ ಫಲ್ಗುನಸ್ಯ ವಾ ।
ನ ತು ಜೇತಾऽರ್ಜುನಸ್ಯಾಸ್ತಿ ಹಂತಾ ವಾऽಸ್ಯ ನ ವಿದ್ಯತೇ ॥೫೪॥

ನಿನ್ನ ಅಥವಾ ಅರ್ಜುನನ ವಧೆಯಾದರೆ ಶಾಂತಿ ಉಂಟಾಗುತ್ತದೆ. ಆದರೆ ಅರ್ಜುನನು ಗೆಲ್ಲುವವನಾಗಲೀ ಅಥವಾ ಕೊಲ್ಲುವವನಾಗಲೀ ಯಾವನೂ ಇಲ್ಲ.

ಮನ್ಯುಸ್ತಸ್ಯ ಕಥಂ ಶಾಮ್ಯೇನ್ಮಂದಾನ್ ಪ್ರತಿ ಯ ಉತ್ಥಿತಃ ।
ಅನ್ಯೇऽಪ್ಯಸ್ತ್ರಾಣಿ ಜಾನಂತಿ ಯುಧ್ಯಂತಿ ವಿಜಯಂತಿ ಚ ॥೫೫॥

ಅಯಂ ಹಿ ವಿಜಯಸ್ತ್ವೇವ ಶ್ರೂಯತೇ ಫಲ್ಗುನಸ್ಯ ಚ ।
ತ್ರಯಸ್ತ್ರಿಂಶತ್ಸಹೇಂದ್ರೇಣ ಖಾಂಡವೇऽಗ್ನಿಮತರ್ಪಯತ್ ॥೫೬॥

ನಿನ್ನ ಮಂದರಾದ ಮಕ್ಕಳ ಮೇಲೆ ಅವನಿಗೆ ಉಂಟಾಗಿರುವ ಕೋಪವು ಹೇಗೆ ಶಮನವನ್ನು ಹೊಂದೀತು? ಬೇರೆಯವರೂ ಅಸ್ತ್ರಗಳನ್ನು ತಿಳಿದಿದ್ದಾರೆ, ಯುದ್ಧವನ್ನು ಮಾಡುತ್ತಾರೆ ಮತ್ತು ಗೆಲ್ಲುತ್ತಾರೆ. ಆದರೆ ಅರ್ಜುನನ ವಿಷಯದಲ್ಲಿ ಮಾತ್ರ ನಿಯಮೇನ ಗೆಲ್ಲುವನೆಂಬ ಅವನ ವಿಜಯವು ಕೇಳಿ ಬರುತ್ತದೆ. ಖಾಂಡವವನದಲ್ಲಿ ಮೂವತ್ಮೂರು ದೇವತೆಗಳಿಂದ ಸಹಿತನಾದ ಇಂದ್ರನನ್ನು ಸೋಲಿಸಿ ಅವನು ಅಗ್ನಿಯನ್ನು ತೃಪ್ತಿಪಡಿಸಿದನು.

ವಿಜಿಗಾಯ ಸುರಾನ್ ಸರ್ವಾನ್ ನಾಸ್ಯ ವೇದ್ಮಿ ಪರಾಜಯಮ್ ।
ಯಸ್ಯ ಯಂತಾ ಹೃಷೀಕೇಶಃ ಶೀಲವೃತ್ತಸಮೋ ಯುಧಿ ॥೫೭॥

ನ ಹ್ಯಸ್ಯ ತ್ರಿಷು ಲೋಕೇಷು ಸದೃಶೋऽಸ್ತಿ ಧನುರ್ಧರಃ ॥೫೮॥

ಯಾವನಿಗೆ ತನಗೆ ಸಮಾನವಾದ ಶೀಲವೃತ್ತವುಳ್ಳ ಕೃಷ್ಣನು ಯುದ್ಧದಲ್ಲಿ ಸಾರಥಿಯಾಗಿದ್ದಾನೆಯೋ ಅವನು ಎಲ್ಲ ದೇವತೆಗಳನ್ನೂ ಗೆದ್ದಿದ್ದಾನೆ. ಅವನಿಗೆ ಪರಾಜಯವಾಗುವುದೆಂದು ನಾನು ತಿಳಿಯುವುದಿಲ್ಲ. ಅವನಿಗೆ ಸಮನಾದ ಧನುರ್ಧರರು ಮೂರುಲೋಕಗಳಲ್ಲಿಯೂ ಇಲ್ಲ.

ವೈಶಂಪಾಯನಃ

ಅನಾದೃತ್ಯ ತು ತದ್ವಾಕ್ಯಮರ್ಥವದ್ ದ್ರೋಣಭೀಷ್ಮಯೋಃ ।
ತತಃ ಸ ಸಂಜಯಂ ರಾಜಾ ಪರ್ಯಪೃಚ್ಛತ ಪಾಂಡವಾನ್ ॥೪೯॥

ವೈಶಂಪಾಯನ– ದ್ರೋಣ-ಭೀಷ್ಮರ ಅರ್ಥವತ್ತಾದ ಆ ಮಾತುಗಳನ್ನು ತಿರಸ್ಕರಿಸಿ ಧೃತರಾಷ್ಟ್ರನು ಸಂಜಯನನ್ನು ಕುರಿತು ಪಾಂಡವರ ವಿಷಯದಲ್ಲಿ ಪ್ರಶ್ನೆಯನ್ನು ಮಾಡಿದನು.

ತದೈವ ಕುರವಃ ಸರ್ವೇ ನಿರಾಶಾ ಜೀವಿತೇऽಭವನ್ ।
ಭೀಷ್ಮದ್ರೋಣೌ ಯದಾ ರಾಜಾ ನ ಸಮ್ಯಗನುಭಾಷತೇ ॥೬೦॥

ಯಾವಾಗ ಭೀಷ್ಮ-ದ್ರೋಣರನ್ನು ಕುರಿತು ಸರಿಯಾಗಿ ಮಾತನಾಡಲಿಲ್ಲವೋ ಆಗಲೇ ಕುರುಗಳೆಲ್ಲರೂ ತಮ್ಮ ಜೀವನದ ಆಸೆಯನ್ನು ತೊರೆದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕಪಂಚಾಶೋಽಧ್ಯಾಯಃ ॥

॥ ವ್ಯಾಸಾಭಿಗಮನಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಐವತ್ತೊಂದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೆರಡನೆಯ ಅಧ್ಯಾಯ

ಸಂಜಯನಿಂದ ಪಾಂಡವರ ರಣೋದ್ಯೋಗಕ್ಕೆ ಮೂಲವಾದ ಬಲದ ಕಥನ.

ಧೃತರಾಷ್ಟ್ರಃ

ಕಿಮಸೌ ಪಾಂಡವೋ ರಾಜಾ ಧರ್ಮಪುತ್ರೋಽಭ್ಯಭಾಷತ ।
ಶ್ರುತ್ವೈತದ್ ಬಹುಲಾಃ ಸೇನಾಃ ಪ್ರೀತ್ಯರ್ಥೇ ನಃ ಸಮಾಗತಾಃ ॥೧॥

ಧೃತರಾಷ್ಟ್ರ- ಯಾವ ಧರ್ಮರಾಜನ ಮಾತುಗಳನ್ನು ಕೇಳಿ ನಮ್ಮ ಮೇಲಿನ ಪ್ರೀತಿಯಿಂದ ಬಹಳ ಸೈನ್ಯಗಳು ನಮ್ಮನ್ನು ಬಂದು ಸೇರಿವೆಯೋ ಅಂತಹ ಧರ್ಮಪುತ್ರನಾದ, ಪಾಂಡವನಾದ ಆ ಧರ್ಮರಾಜನು ಏನು ಮಾತನಾಡಿದನು?

ಕಿಮಸೌ ಚೇಷ್ಟತೇ ಸೂತ ಯೋತ್ಸ್ಯಮಾನೋ ಯುಧಿಷ್ಠಿರಃ ।
ಕೇ ವಾಽಸ್ಮದ್‌ಭ್ರಾತೃಪುತ್ರಾಣಾಂ ಪಶ್ಯಂತ್ಯಾಜ್ಞೇಪ್ಸವೋ ಮುಖಮ್ ॥೨॥

ಎಲೈ ಸೂತನೇ, ಯುದ್ಧವನ್ನು ಮಾಡಲು ಬಯಸುವ ಯುಧಿಷ್ಠಿರನು ಏನು ಕಾರ್ಯವನ್ನು ಮಾಡುತ್ತಿದ್ದಾನೆ ಮತ್ತು ಅವರಿಂದ ಆದೇಶವನ್ನು ನಿರೀಕ್ಷಿಸಲು ನನ್ನ ತಮ್ಮನ ಪುತ್ರನ ಮುಖವನ್ನು ಯಾರು ನೋಡುತ್ತಾರೆ?

ಕೇ ಸ್ವಿದೇನಂ ವಾರಯಂತಿ ಯುದ್ಧಾಚ್ಛಾಮ್ಯೇತಿ ವಾ ಪುನಃ ।
ನಿಕೃತ್ಯಾ ಕೋಪಿತಂ ಮಂದೈರ್ಧರ್ಮಜ್ಞಂ ಧರ್ಮಚಾರಿಣಮ್ ॥೩॥

ಅಲ್ಪಪ್ರಜ್ಞರಾದ ನನ್ನ ಮಕ್ಕಳ ಮೋಸದಿಂದ ಕೋಪಗೊಂಡ ಧರ್ಮಜ್ಞನೂ, ಧರ್ಮವನ್ನು ಆಚರಿಸುವವನೂ ಆದ ಅವನನ್ನು ಯಾರು ಸಂಧಿಯನ್ನು ಮಾಡಿಕೊ ಎಂದು ಹೇಳಿ ಯುದ್ಧದಿಂದ ನಿವಾರಿಸುತ್ತಾರೆ?

ಸಂಜಯಃ

ರಾಜ್ಞೋ ಮುಖಮುದೀಕ್ಷಂತೇ ಪಾಂಚಾಲಾಃ ಪಾಂಡವೈಃ ಸಹ ।
ಯುಧಿಷ್ಠಿರಸ್ಯ ಭದ್ರಂ ತೇ ಸ ಸರ್ವಾನನುಶಾಸ್ತಿ ಚ ॥೪॥

ಸಂಜಯ– ಎಲೈ ರಾಜನೇ, ನಿನಗೆ ಮಂಗಳವಾಗಲಿ. ಪಾಂಚಾಲರು ಮತ್ತು ಪಾಂಡವರು ರಾಜನಾದ ಯುಧಿಷ್ಠಿರನ ಮುಖವನ್ನು ನೋಡುತ್ತಾರೆ. ಅವನು ಎಲ್ಲರಿಗೂ ಆಜ್ಞೆಯನ್ನು ನೀಡುತ್ತಾನೆ.

ಪೃಥಗ್ಭೂತಾಃ ಪಾಂಡವಾನಾಂ ಪಾಂಚಾಲಾನಾಂ ರಥವ್ರಜಾಃ ।
ಆಯಾಂತಮಭಿನಂದಂತಿ ಕುಂತೀಪುತ್ರಂ ಯುಧಿಷ್ಠಿರಮ್ ॥೫॥

ಪಾಂಚಾಲರ ಮತ್ತು ಪಾಂಡವರ ರಥಸಮೂಹಗಳು ಬೇರೆ ಬೇರೆಯಾಗಿ ನಿಂತು ಕುಂತೀಪುತ್ರನಾದ ಯುಧಿಷ್ಠಿರನು ಬರುವಾಗ ಅವನನ್ನು ಅಭಿನಂದಿಸುತ್ತವೆ.

ನಭಃ ಸೂರ್ಯಮಿವೋದ್ಯಂತಂ ಯಜ್ಞಮಾಶ್ವಿನಶಂಸಿನಮ್ ।
ಪಾಂಚಾಲಾಃ ಪ್ರತಿನಂದಂತಿ ತೇಜೋರಾಶಿಮಿವೋದಿತಮ್ ॥೬॥

ಆಕಾಶವು ಸೂರ್ಯೋದಯವನ್ನು ಅಭಿನಂದಿಸಿದಂತೆ ಉದಯಿಸುವ ತೇಜೋರಾಶಿಯಂತಿರುವ, ಸಹದೇವನನ್ನು ಕುರಿತು ಪಂಚಯಜ್ಞವನ್ನು ಮಾಡು ಎಂದು ಹೇಳುವ ಧರ್ಮರಾಜನನ್ನು ಪಾಂಚಾಲರು ಅಭಿನಂದಿಸುತ್ತಾರೆ (ಲಕ್ಷಾಲಂಕಾರ).

ಆಗೋಪಾಲಾವಿಪಾಲಾಶ್ಚ ನಂದಮಾನಾ ಯುಧಿಷ್ಠಿರಮ್ ।
ಪಾಂಚಾಲಾಃ ಕೇಕಯಾ ಮತ್ಸ್ಯಾಃ ಪ್ರತಿನಂದಂತಿ ಪಾಂಡವಮ್ ॥೭॥

ಪಾಂಚಾಲದೇಶದ, ಕೇಕಯ ದೇಶದ ಮತ್ತು ಮತ್ಸ್ಯದೇಶದ ಗೋಪಾಲ ಮೇಷಪಾಲರಿಂದ ಹಿಡಿದು ಎಲ್ಲರೂ ಸಂತೋಷದಿಂದ ಪಾಂಡುಪುತ್ರನಾದ ಯುಧಿಷ್ಠಿರನನ್ನು ಅಭಿನಂದಿಸುತ್ತಾರೆ.

ಯಾವಾಗ ಭೀಷ್ಮ-ದ್ರೋಣರನ್ನು ಕುರಿತು ಸರಿಯಾಗಿ ಮಾತನಾಡಲಿಲ್ಲವೋ ಆಗಲೇ ಕುರುಗಳೆಲ್ಲರೂ ತಮ್ಮ ಜೀವನದ ಆಸೆಯನ್ನು ತೊರೆದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಉದ್ಯೋಗಪರ್ವಣಿ ಏಕಪಂಚಾಶೋಽಧ್ಯಾಯಃ ॥

॥ ವ್ಯಾಸಾಭಿಗಮನಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಐವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೆರಡನೆಯ ಅಧ್ಯಾಯ

ಸಂಜಯನಿಂದ ಪಾಂಡವರ ರಣೋದ್ಯೋಗಕ್ಕೆ ಮೂಲವಾದ ಬಲದ ಕಥನ.

ಧೃತರಾಷ್ಟ್ರಃ

ಕಿಮಸೌ ಪಾಂಡವೋ ರಾಜಾ ಧರ್ಮಪುತ್ರೋಽಭ್ಯಭಾಷತ ।
ಶ್ರುತ್ವೈತದ್ ಬಹುಲಾಃ ಸೇನಾಃ ಪ್ರೀತ್ಯರ್ಥೇ ನಃ ಸಮಾಗತಾಃ ॥೧॥

ಧೃತರಾಷ್ಟ್ರ- ಯಾವ ಧರ್ಮರಾಜನ ಮಾತುಗಳನ್ನು ಕೇಳಿ ನಮ್ಮ ಮೇಲಿನ ಪ್ರೀತಿಯಿಂದ ಬಹಳ ಸೈನ್ಯಗಳು ನಮ್ಮನ್ನು ಬಂದು ಸೇರಿವೆಯೋ ಅಂತಹ ಧರ್ಮಪುತ್ರನಾದ, ಪಾಂಡವನಾದ ಆ ಧರ್ಮರಾಜನು ಏನು ಮಾತನಾಡಿದನು?

ಕಿಮಸೌ ಚೇಷ್ಟತೇ ಸೂತ ಯೋತ್ಸ್ಯಮಾನೋ ಯುಧಿಷ್ಠಿರಃ ।
ಕೇ ವಾಽಸ್ಮದ್‌ಭ್ರಾತೃಪುತ್ರಾಣಾಂ ಪಶ್ಯಂತ್ಯಾಜ್ಞೇಪ್ಸವೋ ಮುಖಮ್ ॥೨॥

ಎಲೈ ಸೂತನೇ, ಯುದ್ಧವನ್ನು ಮಾಡಲು ಬಯಸುವ ಯುಧಿಷ್ಠಿರನು ಏನು ಕಾರ್ಯವನ್ನು ಮಾಡುತ್ತಿದ್ದಾನೆ ಮತ್ತು ಅವರಿಂದ ಆದೇಶವನ್ನು ನಿರೀಕ್ಷಿಸಲು ನನ್ನ ತಮ್ಮನ ಪುತ್ರನ ಮುಖವನ್ನು ಯಾರು ನೋಡುತ್ತಾರೆ?

ಕೇ ಸ್ವಿದೇನಂ ವಾರಯಂತಿ ಯುದ್ಧಾಚ್ಚಾಮ್ಯೇತಿ ವಾ ಪುನಃ ।
ನಿಕೃತ್ಯಾ ಕೋಪಿತಂ ಮಂದೈರ್ಧರ್ಮಜ್ಞಂ ಧರ್ಮಚಾರಿಣಮ್ ॥೩॥

ಅಲ್ಪಪ್ರಜ್ಞರಾದ ನನ್ನ ಮಕ್ಕಳ ಮೋಸದಿಂದ ಕೋಪಗೊಂಡ ಧರ್ಮಜ್ಞನೂ, ಧರ್ಮವನ್ನು ಆಚರಿಸುವವನೂ ಆದ ಅವನನ್ನು ಯಾರು ಸಂಧಿಯನ್ನು ಮಾಡಿಕೊ ಎಂದು ಹೇಳಿ ಯುದ್ಧದಿಂದ ನಿವಾರಿಸುತ್ತಾರೆ?

ಸಂಜಯಃ

ರಾಜ್ಞೋ ಮುಖಮುದೀಕ್ಷಂತೇ ಪಾಂಚಾಲಾಃ ಪಾಂಡವೈಃ ಸಹ ।
ಯುಧಿಷ್ಠಿರಸ್ಯ ಭದ್ರಂ ತೇ ಸ ಸರ್ವಾನನುಶಾಸ್ತಿ ಚ ॥೪॥

ಸಂಜಯ– ಎಲೈ ರಾಜನೇ, ನಿನಗೆ ಮಂಗಳವಾಗಲಿ. ಪಾಂಚಾಲರು ಮತ್ತು ಪಾಂಡವರು ರಾಜನಾದ ಯುಧಿಷ್ಠಿರನ ಮುಖವನ್ನು ನೋಡುತ್ತಾರೆ. ಅವನು ಎಲ್ಲರಿಗೂ ಆಜ್ಞೆಯನ್ನು ನೀಡುತ್ತಾನೆ.

ಪೃಥಗ್ಭೂತಾಃ ಪಾಂಡವಾನಾಂ ಪಾಂಚಾಲಾನಾಂ ರಥವ್ರಜಾಃ ।
ಆಯಾಂತಮಭಿನಂದಂತಿ ಕುಂತೀಪುತ್ರಂ ಯುಧಿಷ್ಠಿರಮ್ ॥೫॥

ಪಾಂಚಾಲರ ಮತ್ತು ಪಾಂಡವರ ರಥಸಮೂಹಗಳು ಬೇರೆ ಬೇರೆಯಾಗಿ ನಿಂತು ಕುಂತೀಪುತ್ರನಾದ ಯುಧಿಷ್ಠಿರನು ಬರುವಾಗ ಅವನನ್ನು ಅಭಿನಂದಿಸುತ್ತವೆ.

ನಭಃ ಸೂರ್ಯಮಿವೋದ್ಯಂತಂ ಯಜ್ಞಮಾಶ್ವಿನಶಂಸಿನಮ್ ।
ಪಾಂಚಾಲಾಃ ಪ್ರತಿನಂದಂತಿ ತೇಜೋರಾಶಿಮಿವೋದಿತಮ್ ॥೬॥

ಆಕಾಶವು ಸೂರ್ಯೋದಯವನ್ನು ಅಭಿನಂದಿಸಿದಂತೆ ಉದಯಿಸುವ ತೇಜೋರಾಶಿಯಂತಿರುವ, ಸಹದೇವನನ್ನು ಕುರಿತು ಪಂಚಯಜ್ಞವನ್ನು ಮಾಡು ಎಂದು ಹೇಳುವ ಧರ್ಮರಾಜನನ್ನು ಪಾಂಚಾಲರು ಅಭಿನಂದಿಸುತ್ತಾರೆ (ಲಕ್ಷಾಲಂಕಾರ).

ಆಗೋಪಾಲಾವಿಪಾಲಾಶ್ಚ ನಂದಮಾನಾ ಯುಧಿಷ್ಠಿರಮ್ ।
ಪಾಂಚಾಲಾಃ ಕೇಕಯಾ ಮತ್ಸ್ಯಾಃ ಪ್ರತಿನಂದಂತಿ ಪಾಂಡವಮ್ ॥೭॥

ಪಾಂಚಾಲದೇಶದ, ಕೇಕಯ ದೇಶದ ಮತ್ತು ಮತ್ಸ್ಯದೇಶದ ಗೋಪಾಲ ಮೇಷಪಾಲರಿಂದ ಹಿಡಿದು ಎಲ್ಲರೂ ಸಂತೋಷದಿಂದ ಪಾಂಡುಪುತ್ರನಾದ ಯುಧಿಷ್ಠಿರನನ್ನು ಅಭಿನಂದಿಸುತ್ತಾರೆ.

ಬ್ರಾಹ್ಮಣೋ ರಾಜಪುತ್ರ್ಯಶ್ಚ ವಿಶಾಂ ದುಹಿತರಶ್ಚ ಯಾಃ ।
ಕ್ರೀಡಂತ್ಯೋಽಭಿಸಮಾಯಾಂತಿ ಪಾರ್ಥಂ ಸನ್ನದ್ಧಮೀಕ್ಷಿತುಮ್ ॥೮॥

ಬ್ರಾಹ್ಮಣಪುತ್ರರೂ, ರಾಜಪುತ್ರಿಯರೂ ಮತ್ತು ವೈಶ್ಯಪುತ್ರಿಯರೂ ಸಹ ಆಟವನ್ನು ಆಡುತ್ತಾ ಯುದ್ಧಸನ್ನಾಹವನ್ನು ಮಾಡುತ್ತಿರುವ ಪಾರ್ಥನನ್ನು ನೋಡಲು ಬರುತ್ತಾರೆ.

ಧೃತರಾಷ್ಟ್ರಃ

ಸಂಜಯಾಚಕ್ಷ್ವ ಕೇನಾಸ್ಮಾನ್ ಪಾಂಡವಾ ಅಭ್ಯಯುಂಜತ ।
ಧೃಷ್ಟದ್ಯುಮ್ನಸ್ಯ ಸೈನ್ಯೇನ ಸೋಮಕಾನಾಂ ಬಲೇನ ಚ ॥೯॥

ಧೃತರಾಷ್ಟ್ರ– ಎಲೈ ಸಂಜಯನೇ, ಧೃಷ್ಟದ್ಯುಮ್ನ ಸೈನ್ಯದಿಂದಲೂ ಮತ್ತು ಸೋಮಕರ ಬಲದಿಂದಲೂ ಕೂಡಿದವರಾಗಿ ಪಾಂಡವರು ಯಾವ ಬಲದಿಂದ ನಮ್ಮ ಮೇಲೆ ಯುದ್ಧವನ್ನು ಹೂಡಿದ್ದಾರೆ ಎಂದು ಹೇಳು.

ವೈಶಂಪಾಯನಃ

ಗಾವಲ್ಗಣಿಸ್ತು ತತ್ಪ್ರಶ್ನಃ ಸಭಾಯಾಂ ಕುರುಸಂಸದಿ ।
ನಿಃಶ್ವಸ್ಯ ಸುಭೃಶಂ ದೀರ್ಘಂ ಮುಹುಃ ಸಂಚಿಂತಯನ್ನಿವ ॥೧೦॥

ವೈಶಂಪಾಯನ– ಗವಲ್ಗನರ ಪುತ್ರನಾದ ಸಂಜಯನು ಕುರುಗಳ ಆ ಸಭೆಯಲ್ಲಿ ಹೀಗೆ ಪ್ರಶ್ನೆಮಾಡಲ್ಪಟ್ಟವನಾಗಿ ಬಹಳ ಕಾಲ ಯೋಚನೆಯನ್ನು ಮಾಡುವವನಂತೆ ಪುನಃ ಪುನಃ ನಿಟ್ಟುಸಿರನ್ನು ಬಿಟ್ಟನು.

ತತ್ರಾನಿಮಿತ್ತತೋ ದೈವಾತ್ ಸೂತಂ ಕಶ್ಮಲಮಾವಿಶತ್ ।
ತದಾಽಽಚಚಕ್ಷೇ ವಿದುರಃ ಸಭಾಯಾಂ ರಾಜಸಂಸದಿ ॥೧೧॥

ಅಲ್ಲಿ ದೈವಪ್ರೇರಣೆಯಂತೆ ಇದ್ದಕ್ಕಿದ್ದಂತೆಯೇ ಸೂತನಾದ ಅವನಿಗೆ ಮನೋವಿಷಾದ ಉಂಟಾಯಿತು. ರಾಜರು ನೆರೆದಿದ್ದ ಆ ಸಭೆಯಲ್ಲಿ ವಿದುರನು ಧೃತರಾಷ್ಟ್ರನಿಗೆ ಅದನ್ನು ಹೇಳಿದನು.

ಸಂಜಯೋಽಯಂ ಮಹಾರಾಜ ಮೂರ್ಚ್ಛಿತಃ ಪತಿತೋ ಭುವಿ ।
ವಾಚಂ ನ ಸೃಜತೇ ಕಾಂಚಿದ್ದೀನಪ್ರಜ್ಞೋ ವಿಚೇತನಃ ॥೧೨॥

ಎಲೈ ಮಹಾರಾಜನೇ, ಈ ಸಂಜಯನು ಮೂರ್ಛಿತನಾಗಿ ನೆಲದ ಮೇಲೆ ಬಿದ್ದಿದ್ದಾನೆ. ಯಾವ ಮಾತನ್ನೂ ಆಡುವುದಿಲ್ಲ. ಪ್ರಜ್ಞೆಯನ್ನು ಕಳೆದುಕೊಂಡು ವಿಚೇತನನಾಗಿದ್ದಾನೆ.

ಧೃತರಾಷ್ಟ್ರಃ

ಅಪಶ್ಯತ್ ಸಂಜಯೋ ನೂನಂ ಕುಂತೀಪುತ್ರಾನ್ ಮಹಾರಥಾನ್ ।
ತೈರಸ್ಯ ಪುರುಷವ್ಯಾಘ್ರೈರ್ಭೃಶಮುದ್ವೇಜಿತಂ ಮನಃ ॥೧೩॥

ಧೃತರಾಷ್ಟ್ರ– ಸಂಜಯನು ಮಹಾರಥರಾದ ಕುಂತೀಪುತ್ರರನ್ನು ಈಗತಾನೇ ನೋಡಿದ್ದಾನೆ. ಪುರುಷವ್ಯಾಘ್ರರಾದ ಅವರಿಂದ ಇವನ ಮನಸ್ಸಿಗೆ ಉದ್ವೇಗವು ಉಂಟಾಗಿದೆ.

ವೈಶಂಪಾಯನಃ

ಸಂಜಯಶ್ಚೇತನಾಂ ಲಬ್ಧ್ವಾ ಪ್ರತ್ಯಾಶ್ವಸ್ಯೇದಮಬ್ರವೀತ್ ।
ಧೃತರಾಷ್ಟ್ರಂ ಮಹಾರಾಜ ಸಭಾಯಾಂ ಕುರುಸಂಸದಿ ॥೧೪॥

ವೈಶಂಪಾಯನ– ಎಲೈ ಜನಮೇಜಯ ಮಹಾರಾಜನೇ, ಸಂಜಯನು ಸ್ವಲ್ಪ ಸುಧಾರಿಸಿಕೊಂಡು ಪುನಃ ಪ್ರಜ್ಞೆಯನ್ನು ಪಡೆದು, ಕೌರವರು ನೆರೆದಿದ್ದ ಸಭೆಯಲ್ಲಿ ಧೃತರಾಷ್ಟ್ರನನ್ನು ಕುರಿತು ಹೀಗೆ ಮಾತನಾಡಿದನು.

ದೃಷ್ಟವಾನಸ್ಮಿ ರಾಜೇಂದ್ರ ಕುಂತೀಪುತ್ರಾನ್ ಮಹಾರಥಾನ್ ।
ಮತ್ಸ್ಯರಾಜಗೃಹಾವಾಸನಿರೋಧೇನಾವಕರ್ಶಿತಾನ್ ॥೧೫॥

ರಾಜೇಂದ್ರನೇ, ಮತ್ಸ್ಯರಾಜನಾದ ವಿರಾಟನ ಮನೆಯಲ್ಲಿ ವಾಸ ಮಾಡುವುದರಿಂದ ಬಳಲಿದ ಮಹಾರಥರಾದ ಕುಂತೀಪುತ್ರರನ್ನು ನೋಡಿದ್ದೇನೆ.

ಶೃಣು ಯೈರ್ಹಿ ಮಹಾರಾಜ ಪಾಂಡವಾ ಅಭ್ಯಯುಂಜತ ।
ಯಶ್ಚ ತಾನ್ ಪಾಂಡವಾನ್ ಸರ್ವಾನ್ ಸಂಗತಾನ್ ವಾರಣಾವತೇ ॥

ದಾಹತೋ ಮೋಚಯಾಮಾಸ ಕುಂತೀಪುತ್ರೋ ವೃಕೋದರಃ ।
ತೇನ ವೋ ಭೀಮಸೇನೇನ ಪಾಂಡವಾ ಅಭ್ಯಯುಂಜತ ॥೧೭॥

ಧೃಷ್ಟದ್ಯುಮ್ನೇನ ವೀರೇಣ ಯುದ್ಧೇ ವಸ್ತೇऽಭ್ಯಯುಂಜತ ॥೧೮॥

ಮಹಾರಾಜನೇ, ಯಾರ ಬಲದಿಂದ ಪಾಂಡವರು ಯುದ್ಧವನ್ನು ಹೂಡಿದ್ದಾರೆ ಎಂದು ಹೇಳುತ್ತೇನೆ, ಕೇಳು. ಯಾವ ಭೀಮಸೇನನು ವಾರಣಾವತದಲ್ಲಿ ಎಲ್ಲ ಪಾಂಡವರನ್ನು ಒಟ್ಟಿಗೆ ಅಗ್ನಿದಾಹದಿಂದ ವಿಮೋಚನೆಗೊಳಿಸಿದನೋ ಅಂತಹ ಕುಂತೀಪುತ್ರನಾದ ವೃಕೋದರನ ಬಲದಿಂದ ಪಾಂಡವರು ನಿಮ್ಮ ಮೇಲೆ ಯುದ್ಧವನ್ನು ಹೂಡಿದ್ದಾರೆ. ವೀರನಾದ ಧೃಷ್ಟದ್ಯುಮ್ನನ ಬಲದಿಂದ ಅವರು ನಿಮ್ಮ ಮೇಲೆ ಯುದ್ಧವನ್ನು ಹೂಡಿದ್ದಾರೆ.

ಯೋ ವೈ(ನ) ರೋಷಾನ್ನ ಭಯಾನ್ನ ಲೋಭಾನ್ನಾರ್ಥಕಾರಣಾತ್ ।
ನ ಹೇತುವಾದಾದ್ ಧರ್ಮಾತ್ಮಾ ಸತ್ಯಂ ಜಹ್ಯಾತ್ ಕದಾಚನ ॥೧೯॥

ಯಃ ಪ್ರಮಾಣಂ ಮಹಾರಾಜ ಧರ್ಮೇ ಧರ್ಮಭೃತಾಂ ವರಃ ।
ಅಜಾತಶತ್ರುಣಾ ತೇನ ಪಾಂಡವಾ ಅಭ್ಯಯುಂಜತ ॥೨೦॥

ಯಾವ ಧರ್ಮಾತ್ಮನಾದ ಯುಧಿಷ್ಠಿರನು ರೋಷದಿಂದಲಾಗಲೀ, ಭಯದಿಂದಲಾಗಲೀ, ಧನಲೋಭದಿಂದಾಗಲೀ, ಅರ್ಥದ ನೆಪಗಳಿಂದಾಗಲೀ ಅಥವಾ ಬೇರೆ ಯಾವ ಕಾರಣದ ನಿಮಿತ್ತದಿಂದಾಗಲೀ ಎಂದೂ ಸತ್ಯವನ್ನು ಬಿಡುವುದಿಲ್ಲವೋ, ಧರ್ಮಾಚರಣೆಯನ್ನು ಮಾಡುವವರಲ್ಲಿ ಶ್ರೇಷ್ಠನಾದ ಯಾವನು ಧರ್ಮದ ವಿಷಯದಲ್ಲಿ ಪ್ರಮಾಣಭೂತನಾಗಿದ್ದಾನೆಯೋ, ಎಲೈ ಮಹಾರಾಜನೇ, ಅಂತಹ ಯುಧಿಷ್ಠಿರನ ಬಲದಿಂದ ಪಾಂಡವರು ಯುದ್ಧವನ್ನು ಹೂಡಿದ್ದಾರೆ.

ಯಸ್ಯ ಬಾಹುಬಲೇ ವೀರಃ ಪೃಥಿವ್ಯಾಂ ನಾಸ್ತಿ ಕಶ್ಚನ ।
ಯೋ ವೈ ಸರ್ವಾನ್ ಮಹೀಪಾಲಾನ್ ವಶೇ ಚಕ್ರೇ ಧನುರ್ಧರಃ ॥

ಯಃ ಕಾಶೀನಂಗಮಗಧಾನ್ ಕಳಿಂಗಾಂಶ್ಚ ಯುಧಾऽಜಯತ್ ।
ತೇನ ವೈ ಭೀಮಸೇನೇನ ಪಾಂಡವಾ ಅಭ್ಯಯುಂಜತ ॥೨೨॥

ಯಾವನ ಬಾಹುಬಲಕ್ಕೆ ಸಮನಾದ ವೀರನು ಭೂಮಿಯಲ್ಲಿ ಯಾವನೂ ಇಲ್ಲವೋ, ಯಾವನು ಧನುರ್ಧಾರಿಯಾಗಿ ಎಲ್ಲರನ್ನೂ ವಶಪಡಿಸಿಕೊಂಡನೋ,

ಯಾವನು ಯುದ್ಧದಲ್ಲಿ ಕಾಶಿ, ಅಂಗ, ಮಗಧ, ಕಳಿಂಗ ದೇಶಗಳನ್ನು ಗೆದ್ದನೋ ಆ ಭೀಮಸೇನನ ಬಲದಿಂದ ಪಾಂಡವರು ಯುದ್ಧವನ್ನು ಹೂಡಿದ್ದಾರೆ.

ಯಸ್ಯ ವೀರ್ಯೇಣ ಸಹಸಾ ಚತ್ವಾರೋ ಯುಧಿ ಮಾನವಾಃ ।
ನಿಃಸೃತಾ ಜತುಗೇಹಾದ್ವೈ ಹಿಡಿಂಬಾತ್ ಪುರುಷಾದಕಾತ್ ॥೨೩॥

ಯಶ್ಚೈಷಾಮಭವದ್ ದ್ವೀಪಃ ಕುಂತೀಪುತ್ರೋ ವೃಕೋದರಃ ॥೨೪॥

ಯಾವನ ಪರಾಕ್ರಮ ಮತ್ತು ಸಾಹಸ ಶಕ್ತಿಯಿಂದ ನಾಲ್ಕುಜನರೂ ಜತು (ಅರಗಿನ) ಗೃಹದಿಂದ ಹೊರಗೆ ಬಂದರೋ, ನರಭಕ್ಷಕನಾದ ಹಿಡಿಂಬನಿಂದ ಯುದ್ಧದಲ್ಲಿ ಪಾರಾದರೋ, ಯಾವ ಕುಂತೀಪುತ್ರನಾದ ವೃಕೋದರನು ಆಪತ್ತುಗಳಲ್ಲಿ ಅವರಿಗೆ ದ್ವೀಪದಂತೆ ರಕ್ಷಕನಾಗಿದ್ದಾನೆಯೋ ಅವನ ಬಲದಿಂದ ಪಾಂಡವರು ಯುದ್ಧವನ್ನು ಹೂಡಿದ್ದಾರೆ.

ಯಾಜ್ಞಸೇನೀಮಥೋ ಯತ್ರ ಸಿಂಧುರಾಜೋಽಪಕೃಷ್ಟವಾನ್ ।
ತತ್ರೈಷಾಮಭವದ್ ದ್ವೀಪಃ ಕುಂತೀಪುತ್ರೋ ವೃಕೋದರಃ ॥೨೫॥

ಸೈಂಧವನು ಯಾಜ್ಞಸೇನಿಯಾದ ದ್ರೌಪದಿಯನ್ನು ಅಪಹರಿಸಿದಾಗಲೂ ಕುಂತೀಪುತ್ರನಾದ ವೃಕೋದರನು ಪಾಂಡವರಿಗೆ ರಕ್ಷಕನಾದನು.

ಯಶ್ಚ ತಾನ್ ಸಂಗತಾನ್ ಸರ್ವಾನ್ ಪಾಂಡವಾನ್ ವಾರಣಾವತೇ ।
ದಹ್ಯತೋ ಮೋಚಯಾಮಾಸ ಕುಂತೀಪುತ್ರೋ ವೃಕೋದರಃ ॥೨೬॥

ತೇನ ವೋ ಭೀಮಸೇನೇನ ಪಾಂಡವಾ ಅಭ್ಯಯುಂಜತ ॥೨೭॥

ಯಾವ ಕುಂತೀಪುತ್ರನಾದ ವೃಕೋದರನು ವಾರಣಾವತದಲ್ಲಿ ಎಲ್ಲ ಪಾಂಡವರನ್ನೂ ಅಗ್ನಿದಾಹದಿಂದ ಮೋಚನೆಯನ್ನು ಮಾಡಿದನೋ ಅಂತಹ ಭೀಮಸೇನನ ಬಲದಿಂದ ಪಾಂಡವರು ಯುದ್ಧವನ್ನು ಹೂಡಿದ್ದಾರೆ.

ಕೃಷ್ಣಾಯಾಶ್ಚರತಾ ಪ್ರೀತಿಂ ಯೇನ ಕ್ರೋಧವಶಾ ಹತಾಃ ।
ಪ್ರವಿಶ್ಯ ವಿಷಮಂ ಘೋರಂ ಪರ್ವತಂ ಗಂಧಮಾದನಮ್ ॥೨೮॥

ಯಸ್ಯ ನಾಗಾಯುತೈರ್ವೀರ್ಯಂ ಭುಜಯೋಃ ಸಾರಮರ್ಪಿತಮ್ ।
ತೇನ ವೋ ಭೀಮಸೇನೇನ ಪಾಂಡವಾ ಅಭ್ಯಯುಂಜತ ॥೨೯॥

ದ್ರೌಪದಿಗೆ ಸಂತೋಷವನ್ನು ಉಂಟುಮಾಡುತ್ತಾ ಘೋರವೂ ಮತ್ತು ವಿಷಮವೂ ಆದ ಗಂಧಮಾದನ ಪರ್ವತವನ್ನು ಪ್ರವೇಶಿಸಿ, ಯಾವನು ಕ್ರೋಧವಶ ದೈತ್ಯರನ್ನು ಕೊಂದನೋ, ಯಾವನ ಭುಜದಲ್ಲಿ ಹತ್ತುಸಾವಿರ ಆನೆಗಳ ಪರಾಕ್ರಮವು ಮತ್ತು ಬಲವೂ ಆಶ್ರಯಿಸಿದೆಯೋ ಅಂತಹ ಭೀಮಸೇನನ ಬಲದಿಂದ ಪಾಂಡವರು ಯುದ್ಧವನ್ನು ಹೂಡಿದ್ದಾರೆ.

ಕೃಷ್ಣದ್ವಿತೀಯೋ ವಿಕ್ರಮ್ಯ ತುಷ್ಟ್ಯರ್ಥಂ ಜಾತವೇದಸಃ ।
ಅಜಯದ್ ಯಃ ಪುರಾ ವೀರೋ ಯುಧ್ಯಮಾನಂ ಪುರಂದರಮ್ ॥

ಯಃ ಸ ಸಾಕ್ಷಾನ್ಮಹಾದೇವಂ ಗಿರಿಶಂ ಶೂಲಪಾಣಿನಮ್ ।
ತೋಷಯಾಮಾಸ ಯುದ್ಧೇನ ದೇವದೇವಮುಮಾಪತಿಮ್ ॥೩೦॥

ಯಶ್ಚ ಸರ್ವಾನ್ ವಶೇ ಚಕ್ರೇ ಲೋಕಪಾಲಾನ್ ಧನುರ್ಧರಃ ।
ತೇನ ವೋ ವಿಜಯೇನಾಜೌ ಪಾಂಡವಾ ಅಭ್ಯಯುಂಜತ ॥೩೨॥

ಯಾವ ವೀರನು ಕೃಷ್ಣಸಹಿತನಾಗಿ ಅಗ್ನಿಯನ್ನು ತೃಪ್ತಿಪಡಿಸಲು ಹಿಂದೆ ತನ್ನ ವಿಕ್ರಮವನ್ನು ತೋರಿಸಿ ಯುದ್ಧವನ್ನು ಮಾಡುವ ಇಂದ್ರನನ್ನು ಜಯಿಸಿದನೋ, ಯಾವನು ದೇವದೇವನೂ, ಮಹಾದೇವನೂ, ಗಿರಿಶನೂ, ಶೂಲಪಾಣಿಯೂ ಆದ ಸಾಕ್ಷಾತ್ ಉಮಾಪತಿಯನ್ನು ಸಂತೋಷಪಡಿಸಿದನೋ, ಯಾವ ಧನುರ್ಧಾರಿಯು ಎಲ್ಲ ಲೋಕಪಾಲಕರನ್ನೂ ವಶಪಡಿಸಿಕೊಂಡನೋ, ಅಂತಹ ಅರ್ಜುನನ ಬಲದಿಂದ ಪಾಂಡವರು ನಿಮ್ಮ ಮೇಲೆ ಯುದ್ಧವನ್ನು ಹೂಡಿದ್ದಾರೆ.

ಯಃ ಪ್ರತೀಚೀಂ ದಿಶಂ ಚಕ್ರೇ ವಶೇ ಮ್ಲೇಚ್ಛಗಣಾಯುತಾಮ್ ।
ಸ ತತ್ರ ನಕುಲೋ ಯೋದ್ಧಾ ಚಿತ್ರಯೋಧೀ ವ್ಯವಸ್ಥಿತಃ ॥೩೩॥

ತೇನ ವೋ ದರ್ಶನೀಯೇನ ವೀರೇಣಾತಿಧನುರ್ಭೃತಾ ।
ಮಾದ್ರೀಪುತ್ರೇಣ ಕೌರವ್ಯ ಪಾಂಡವಾ ಅಭ್ಯಯುಂಜತ ॥೩೪॥

ಯಾವ ಚಿತ್ರಯೋಧಿಯಾಗಿ ನಿಂತ ನಕುಲನು ಮ್ಲೇಚ್ಛಗಣಗಳಿಂದ ಕೂಡಿದ ಪಶ್ಚಿಮ ದಿಕ್ಕನ್ನು ವಶಪಡಿಸಿಕೊಂಡನೋ ಅಂತಹ ಸುಂದರನೂ, ವೀರನೂ ಮತ್ತು ಧನುರ್ಧಾರಿಯೂ ಆದ ಮಾದ್ರೀಪುತ್ರನಾದ ನಕುಲನ ಬಲದಿಂದ ಎಲೈ ಧೃತರಾಷ್ಟ್ರನೇ ಪಾಂಡವರು ನಿಮ್ಮ ಮೇಲೆ ಯುದ್ಧವನ್ನು ಹೂಡಿದ್ದಾರೆ.

ಯಃ ಕಾಶೀನಂಗಮಗಧಾನ್ ಕಳಿಂಗಾಂಶ್ಚ ಯುಧಾऽಜಯತ್ ।
ತೇನ ವಃ ಸಹದೇವೇನ ಪಾಂಡವಾ ಅಭ್ಯಯುಂಜತ ॥೩೫॥

ಯಾವ ಸಹದೇವನು ಕಾಶಿ, ಅಂಗ, ಮಗಧ, ಕಳಿಂಗ ದೇಶಗಳನ್ನು ಯುದ್ಧದಲ್ಲಿ ಜಯಿಸಿದನೋ ಅಂತಹ ಅವನ ಬಲದಿಂದ ಪಾಂಡವರು ನಿಮ್ಮ ಮೇಲೆ ಯುದ್ಧವನ್ನು ಹೂಡಿದ್ದಾರೆ.

ಯಸ್ಯ ವೀರ್ಯೇಣ ಸದೃಶಾಃ ಚತ್ವಾರೋ ಯುಧಿ ಮಾನವಾಃ ।
ಅಶ್ವತ್ಥಾಮಾ ಧೃಷ್ಟಕೇತೂ ರುಗ್ಮೀ ಪ್ರದ್ಯುಮ್ನ ಏವ ಚ ॥೩೬॥

ತೇನ ವಃ ಸಹದೇವೇನ ಪಾಂಡವಾ ಅಭ್ಯಯುಂಜತ ॥೩೭॥

ಯವೀಯಸಾ ನೃವೀರೇಣ ಮಾದ್ರೀನಂದಕರೇಣ ಚ ॥೩೮॥

ಯಾವನ ಪರಾಕ್ರಮಕ್ಕೆ ಅಶ್ವತ್ಥಾಮ, ಧೃಷ್ಟಕೇತು, ರುಗ್ಮಿ ಮತ್ತು ಪ್ರದ್ಯುಮ್ನ ಈ ನಾಲ್ವರು (ಸೇರಿ) ಯುದ್ಧದಲ್ಲಿ ಸಮನಾಗಿದ್ದಾರೆಯೋ ಅಂತಹ ಮಾದ್ರಿಗೆ ಸಂತೋಷವನ್ನುಂಟು ಮಾಡುವ, ಮಾದ್ರೀಪುತ್ರರಲ್ಲಿ ಚಿಕ್ಕವನಾದ ವೀರನಾದ ಸಹದೇವನ ಬಲದಿಂದ ಪಾಂಡವರು ನಿಮ್ಮ ಮೇಲೆ ಯುದ್ಧವನ್ನು ಹೂಡಿದ್ದಾರೆ.

ತಪಶ್ಚಚಾರ ಯಾ ಘೋರಂ ಕಾಶಿಕನ್ಯಾ ಪುರಾ ಸತೀ ।
ಭೀಷ್ಮಸ್ಯ ವಧಮಿಚ್ಛಂತೀ ಪ್ರೇತ್ಯಾಪಿ ಭರತರ್ಷಭ ॥೩೯॥

ಪಾಂಚಾಲಸ್ಯ ಸುತಾ ಜಜ್ಞೇ ದೈವಾಚ್ಚ ಸ ಪುನಃ ಪುಮಾನ್ ।
ಸ್ತ್ರೀಪುಂಸೋಃ ಪುರುಷವ್ಯಾಘ್ರ ಯಃ ಸ ವೇದ ಗುಣಾಗುಣಾನ್ ॥೪೦॥

ಯಃ ಕಳಿಂಗಾನ್ ಸಮಾಪೇದೇ ಪಾಂಚಾಲ್ಯೋ ಯುದ್ಧದುರ್ಮದಃ ।
ಶಿಖಂಡಿನಾ ವಃ ಕುರವಃ ಕೃತಾಸ್ತ್ರೇಣಾಭ್ಯಯುಂಜತ ॥೪೧॥

ಎಲೈ ಭರತರ್ಷಭನೇ, ಯಾವ ಕಾಶಿರಾಜಕುಮಾರಿಯಾದ ಅಂಬೆಯು ಮರಣ ಹೊಂದಿಯಾದರೂ ಭೀಷ್ಮನ ವಧೆಯನ್ನು ಬಯಸಿ ಹಿಂದೆ ತಪಸ್ಸನ್ನು ಮಾಡಿ ಪಾಂಚಾಲ ರಾಜನ ಕುಮಾರಿಯಾಗಿ ಜನಿಸಿ, ದೈವಬಲದಿಂದ ಪುನಃ ಪುರುಷನಾದನೋ ಎಲೈ ಪುರುಷವ್ಯಾಘ್ರನೇ, ಅವನು ಸ್ತ್ರೀಯರ ಮತ್ತು ಪುರುಷರ ಗುಣ-ದೋಷಗಳನ್ನು ತಿಳಿದಿದ್ದಾನೆ. ಯಾವ ಪಾಂಚಾಲರಾಜ ಕುಮಾರನಾದ ಅವನು ಯುದ್ಧದುರ್ಮದನಾಗಿ ಕಳಿಂಗದೇಶವನ್ನು ವಶಪಡಿಸಿಕೊಂಡನೋ, ಅಸ್ತ್ರಜ್ಞನಾದ ಅಂತಹ ಶಿಖಂಡಿಯ ಬಲದಿಂದ ಪಾಂಡವರು ನಿಮ್ಮ ಮೇಲೆ ಯುದ್ಧವನ್ನು ಹೂಡಿದ್ದಾರೆ.

ಯಂ ಯಕ್ಷಃ ಪುರುಷಂ ಚಕ್ರೇ ಭೀಷ್ಮಸ್ಯ ನಿಧನೇಚ್ಛಯಾ ।
ಮಹೇಷ್ವಾಸೇನ ರೌದ್ರೇಣ ಪಾಂಡವಾ ಅಭ್ಯಯುಂಜತ ॥೪೨॥

ಭೀಷ್ಮರ ವಧೆಯನ್ನು ಬಯಸಿದ ಯಾವನನ್ನು ಯಕ್ಷನು ಪುರುಷನನ್ನಾಗಿ ಮಾಡಿದನೋ ಅಂತಹ ಮಹಾಧನುರ್ಧಾರಿಯೂ, ಭಯಂಕರನೂ ಆದ ಶಿಖಂಡಿಯ ಬಲದಿಂದ ಪಾಂಡವರು ನಿಮ್ಮ ಮೇಲೆ ಯುದ್ಧವನ್ನು ಹೂಡಿದ್ದಾರೆ.

ಮಹೇಷ್ವಾಸಾ ರಾಜಪುತ್ರಾ ಭ್ರಾತರಃ ಪಂಚ ಕೇಕಯಾಃ ।
ಆಮುಕ್ತಕವಚಾಃ ಶೂರಾಃ ತೈಶ್ಚ ವಸ್ತೇऽಭ್ಯಯುಂಜತ ॥೪೩॥

ಕೇಕಯ ದೇಶದ ಐದುಜನ ಸಹೋದರರಾದ ರಾಜಕುಮಾರರು ಮಹಾಧನುರ್ಧಾರಿಗಳೂ, ಕವಚವನ್ನು ಧರಿಸಿದವರೂ ಮತ್ತು ಶೂರರು. ಅವರ ಬಲದಿಂದ ನಿಮ್ಮ ಮೇಲೆ ಯುದ್ಧವನ್ನು ಹೂಡಿದ್ದಾರೆ.

ಯೋ ದೀರ್ಘಬಾಹುಃ ಕ್ಷಿಪ್ರಾಸ್ತ್ರೋ ಧೃತಿಮಾನ್ ಸತ್ಯವಿಕ್ರಮಃ ।
ತೇನ ವೋ ವೃಷ್ಣಿವೀರೇಣ ಯುಯುಧಾನೇನ ಸಂಗರಃ ॥೪೪॥

ಯಾವನು ದೀರ್ಘಬಾಹುವೂ, ಶೀಘ್ರವಾಗಿ ಅಸ್ತ್ರಪ್ರಯೋಗವನ್ನು ಮಾಡುವವನೂ, ಧೈರ್ಯಶಾಲಿಯೂ ಮತ್ತು ಸತ್ಯವಾದ ವಿಕ್ರಮವುಳ್ಳವನೂ ಆಗಿದ್ದಾನೆಯೋ ಅಂತಹ ವೃಷ್ಣಿವೀರನಾದ ಯುಯುಧಾನನಿಂದ (ಸಾತ್ಯಕಿಯಿಂದ) ನಿಮಗೆ ಯುದ್ಧವು ಪ್ರಾಪ್ತವಾಗಿದೆ.

ಯ ಆಸೀಚ್ಚರಣಂ ಕಾಲೇ ಪಾಂಡವಾನಾಂ ಮಹಾತ್ಮನಾಮ್ ।
ರಣೇ ತೇನ ವಿರಾಟೇನ ಪಾಂಡವಾ ಅಭ್ಯಯುಂಜತ ॥೪೫॥

ಮಹಾತ್ಮರಾದ ಪಾಂಡವರಿಗೆ ಆಪತ್ಕಾಲದಲ್ಲಿ ಯಾವನು ಆಶ್ರಯನಾದನೋ ಅಂತಹ ವಿರಾಟನ ಬಲದಿಂದ ಪಾಂಡವರು ನಿಮ್ಮ ಮೇಲೆ ಯುದ್ಧವನ್ನು ಹೂಡಿದ್ದಾರೆ.

ಯಸ್ತು ಕಾಶಿಪತೀ ರಾಜಾ ವಾರಾಣಸ್ಯಾಂ ಮಹಾಬಲಃ ।
ಸ ತೇಷಾಮಭವದ್ ಯೋದ್ಧಾ ತೇನ ವಸ್ತೇऽಭ್ಯಯುಂಜತ ॥೪೬॥

ಕಾಶಿದೇಶದಲ್ಲಿರುವ, ವಾರಣಾಸಿಯಲ್ಲಿರುವ ಮಹಾಬಲನಾದ ಯಾವ ರಾಜನು ಪಾಂಡವರಿಗೆ ಯೋಧನಾಗಿದ್ದಾನೆಯೋ ಅವನ ಬಲದಿಂದ ನಿಮ್ಮ ಮೇಲೆ ಯುದ್ಧವನ್ನು ಹೂಡಿದ್ದಾರೆ.

ಶಿಶುಭಿರ್ದುರ್ಜಯೈಃ ಸಂಖೇ ದ್ರೌಪದೇಯೈರ್ಮಹಾತ್ಮಭಿಃ ।
ಆಶೀವಿಷಸಮಸ್ಪರ್ಶೈಃ ಪಾಂಡವಾ ಅಭ್ಯಯುಂಜತ ॥೪೭॥

ಚಿಕ್ಕಮಕ್ಕಳೂ, ಯುದ್ಧದಲ್ಲಿ ದುರ್ಜಯರೂ, ಮಹಾತ್ಮರೂ, ಸರ್ಪಕ್ಕೆ ಸಮವಾದ ತೀಕ್ಷ್ಣಸ್ಪರ್ಶವುಳ್ಳವರೂ ಆದ ದ್ರೌಪದಿಯರ ಐದು ಪುತ್ರರ ಬಲದಿಂದ ಪಾಂಡವರು ನಿಮ್ಮ ಮೇಲೆ ಯುದ್ಧವನ್ನು ಹೂಡಿದ್ದಾರೆ.

ಯಃ ಕೃಷ್ಣಸದೃಶೋ ವೀರ್ಯೇ ಯುಧಿಷ್ಠಿರಸಮೋ ದಮೇ ।
ತೇನಾಭಿಮನ್ಯುನಾ ಸಂಖೇ ಪಾಂಡವಾ ಅಭ್ಯಯುಂಜತ ॥೪೮॥

ಯಾವನು ಪರಾಕ್ರಮದಲ್ಲಿ ಕೃಷ್ಣನಿಗೂ, ಇಂದ್ರಿಯನಿಗ್ರಹದಲ್ಲಿ ಯುಧಿಷ್ಠಿರನಿಗೂ ಸಮಾನನಾಗಿದ್ದಾನೆಯೋ ಅಂತಹ ಅಭಿಮನ್ಯುವಿನ ಬಲದಿಂದ ಪಾಂಡವರು ನಿಮ್ಮ ಮೇಲೆ ಯುದ್ಧವನ್ನು ಹೂಡಿದ್ದಾರೆ.

ಯಶ್ಚೈವಾಪ್ರತಿಮೋ ವೀರ್ಯೇ ಧೃಷ್ಟಕೇತುರ್ಮಹಾಯಶಾಃ ।
ದುಃಸಹಃ ಸಮರೇ ಕ್ರುದ್ಧಃ ಶೈಶುಪಾಲಿರ್ಮಹಾರಥಃ ॥೪೯॥

ತೇನ ವಶ್ಚೇದಿರಾಜೇನ ಪಾಂಡವಾ ಅಭ್ಯಯುಂಜತ ॥೫೦॥

ಯಾವ ಮಹಾಕೀರ್ತಿವಂತನಾದ, ಮಹಾರಥನಾದ, ಶಿಶುಪಾಲನ ಪುತ್ರನಾದ ಧೃಷ್ಟಕೇತುವು ಪರಾಕ್ರಮದಲ್ಲಿ ಅಸದೃಶನೋ, ಕ್ರುದ್ಧನಾದ ಯಾವನನ್ನು ಶತ್ರುಗಳು ಯುದ್ಧದಲ್ಲಿ ತಡೆಯಲು ಸಾಧ್ಯವಿಲ್ಲವೋ ಅಂತಹ ಚೇದಿರಾಜನಾದ ಧೃಷ್ಟಕೇತುವಿನ ಬಲದಿಂದ ಪಾಂಡವರು ನಿಮ್ಮ ಮೇಲೆ ಯುದ್ಧವನ್ನು ಹೂಡಿದ್ದಾರೆ.

ಅಕ್ಷೌಹಿಣ್ಯಾ ಪರಿವೃತಃ ಪಾಂಡವಾನ್ ಯೋಽಭಿಸಂವೃತಃ ॥೫೧॥

ಯಃ ಸಂಶ್ರಯಃ ಪಾಂಡವಾನಾಂ ದೇವಾನಾಮಿವ ವಾಸವಃ ।
ತೇನ ವೋ ವಾಸುದೇವೇನ ಪಾಂಡವಾ ಅಭ್ಯಯುಂಜತ ॥೫೨॥

ಯಾವನು ಒಂದು ಅಕ್ಷೌಹಿಣಿ ಸೈನ್ಯದ ಜೊತೆಯಲ್ಲಿ ಪಾಂಡವರ ಸಮೀಪಕ್ಕೆ ಬಂದಿದ್ದಾನೆಯೋ, ಯಾವನು ದೇವತೆಗಳಿಗೆ ಇಂದ್ರನಂತೆ ಪಾಂಡವರಿಗೆ ಆಶ್ರಯನಾಗಿದ್ದಾನೆಯೋ ಅಂತಹ ವಾಸುದೇವನ ಬಲದಿಂದ ಪಾಂಡವರು ನಿಮ್ಮ ಮೇಲೆ ಯುದ್ಧವನ್ನು ಹೂಡಿದ್ದಾರೆ.

ತಥಾ ಚೇದಿಪತೇರ್ಭ್ರಾತಾ ಶರಭೋ ಭರತರ್ಷಭ ।
ಶರವರ್ಷೇಣ ಸಹಿತಃ ತಾಭ್ಯಾಂ ವಸ್ತೇಽಭ್ಯಯುಂಜತ ॥೫೩॥

ಎಲೈ ಭರತರ್ಷಭನೇ, ಅದರಂತೆಯೇ ಚೇದಿಪತಿಯಾದ ಧೃಷ್ಟಕೇತುವಿನ ತಮ್ಮನು, ಶರವರ್ಷನೆಂಬ ತಮ್ಮನಿಂದ ಸಹಿತನಾಗಿದ್ದಾನೆ. ಅವರಿಬ್ಬರ ಬಲದಿಂದ ಪಾಂಡವರು ನಿಮ್ಮ ಮೇಲೆ ಯುದ್ಧವನ್ನು ಹೂಡಿದ್ದಾರೆ.

ಜಾರಾಸಂಧಿಃ ಸಹದೇವೋ ಜಯತ್ಸೇನಶ್ಚ ತಾವುಭೌ ।
ಯುದ್ಧೇಽಪ್ರತಿರಥೌ ವೀರೌ ಪಾಂಡವಾರ್ಥೇ ವ್ಯವಸ್ಥಿತೌ ॥೫೪॥

ಜರಾಸಂಧನ ಮಗನಾದ ಸಹದೇವನೂ ಮತ್ತು ಜಯತ್ಸೇನನೂ ಯುದ್ಧದಲ್ಲಿ ಶ್ರೇಷ್ಠರಥವುಳ್ಳ ವೀರರು. ಅವರು ಪಾಂಡವರ ಸಲುವಾಗಿ ಯುದ್ಧಮಾಡಲು ಸಿದ್ಧರಾಗಿದ್ದಾರೆ.

ದ್ರುಪದಶ್ಚ ಮಹಾತೇಜಾ ಬಲೇನ ಮಹತಾ ವೃತಃ ।
ತ್ಯಕ್ತಾತ್ಮಾ ಪಾಂಡವಾರ್ಥಾಯ ಯೋತ್ಸ್ಯಮಾನೋ ವ್ಯವಸ್ಥಿತಃ ॥೫೫॥

ಮಹಾತೇಜಸ್ವಿಯಾದ ದ್ರುಪದನು ದೊಡ್ಡ ಸೈನ್ಯದಿಂದ ಕೂಡಿದವನಾಗಿ ಪ್ರಾಣದ ಮೇಲಿನ ಹಂಗನ್ನು ತೊರೆದು ಪಾಂಡವರ ಸಲುವಾಗಿ ಯುದ್ಧವನ್ನು ಮಾಡಲು ಬಯಸಿ ಸನ್ನದ್ಧನಾಗಿದ್ದಾನೆ.

ಏತೇ ಚಾನ್ಯೇ ಚ ಬಹವಃ ಪ್ರಾಚ್ಯೋದೀಚ್ಯಾ ಮಹೀಕ್ಷಿತಃ ।
ಶತಶೋ ಯಾನುಪಾಶ್ರಿತ್ಯ ಧರ್ಮರಾಜೋ ವ್ಯವಸ್ಥಿತಃ ॥೫೬॥

ಇವರೂ ಮತ್ತು ಇನ್ನೂ ಅನೇಕ ಪೂರ್ವದಿಕ್ಕು ಮತ್ತು ಉತ್ತರದಿಕ್ಕಿನ ರಾಜರೂ ನೂರಾರು ಸಂಖ್ಯೆಯಲ್ಲಿ ಇದ್ದಾರೆ. ಅವರನ್ನು ಆಶ್ರಯಿಸಿ ಧರ್ಮರಾಜನು ಯುದ್ಧ ಮಾಡಲು ಸನ್ನದ್ಧನಾಗಿದ್ದಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ದ್ವಿಪಂಚಾಶೋऽಧ್ಯಾಯಃ ॥

॥ ವ್ಯಾಸಾಭಿಗಮನಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಐವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ಮೂರನೆಯ ಅಧ್ಯಾಯ

ಭೀಮಸೇನನ ಪ್ರತಾಪವನ್ನು ನೆನೆದು ಸಂಜಯನ ಎದುರಿಗೆ
ಧೃತರಾಷ್ಟ್ರನ ಪರಿಶೋಚನೆ.

ಧೃತರಾಷ್ಟ್ರಃ

ಸರ್ವ ಏತೇ ಮಹೇಷ್ವಾಸಾ ಯೇ ತ್ವಯಾ ಪರಿಕೀರ್ತಿತಾಃ ।
ಏಕತಸ್ತೇ ತ್ವೇವ ತೇ ಸರ್ವೇ ಸಮೇತಾ ಭೀಮ ಏಕತಃ ॥೧॥

ಧೃತರಾಷ್ಟ್ರ– ನೀನು ಹೇಳಿದ ವೀರರೆಲ್ಲರೂ ಮಹಾಧನುರ್ಧಾರಿಗಳೇ. ಅವರೆಲ್ಲರೂ ಸೇರಿ ಒಂದು ಕಡೆಯಾದರೆ ಭೀಮಸೇನನೊಬ್ಬನೇ ಇನ್ನೊಂದು ಕಡೆ.

ಭೀಮಸೇನಾದ್ಧಿ ಮೇ ಭೂಯೋ ಭಯಂ ಸಂಜಾಯತೇ ಮಹತ್ ।
ಕ್ರುದ್ಧಾದಮರ್ಷಣಾತ್ ತಾತ ವ್ಯಾಘ್ರಾದಿವ ಮಹಾರುರೋಃ ॥೨॥

ಪ್ರೀತಿಪಾತ್ರನೇ, ಮಹಾರುರು ವ್ಯಾಘ್ರಕ್ಕೆ ಅಂಜಿದಂತೆ ಕ್ರುದ್ಧನೂ, ರೋಷ ಸ್ವಭಾವವುಳ್ಳವನೂ ಆದ ಭೀಮಸೇನನಿಂದ ನನಗೆ ಪುನಃ ದೊಡ್ಡ ಭಯವುಂಟಾಗಿದೆ.

ಜಾಗರ್ಮಿ ರಾತ್ರಯಃ ಸರ್ವಾ ದೀರ್ಘಮುಷ್ಣಂ ಚ ನಿಃಶ್ವಸನ್ ।
ಭೀತೋ ವೃಕೋದರಾತ್ ತಾತ ಸಿಂಹಾತ್ ಪಶುರಿವಾಪರಃ ॥೩॥

ಪ್ರೀತಿಪಾತ್ರನೇ, ನಾನು ವೃಕೋದರನಿಗೆ ಹೆದರಿ, ಸಿಂಹಕ್ಕೆ ಹೆದರಿದ ಇತರ ಪಶುಗಳಂತೆ ರಾತ್ರಿಯೆಲ್ಲಾ ದೀರ್ಘವಾದ ಬಿಸಿಯಾದ ನಿಟ್ಟುಸಿರನ್ನು ಬಿಡುತ್ತಾ ಎಚ್ಚರದಿಂದಿರುತ್ತೇನೆ.

ನ ಹಿ ತಸ್ಯ ಮಹಾಬಾಹೋಃ ಶಕ್ರಪ್ರತಿಮತೇಜಸಃ ।
ಸೈನ್ಯೇಽಸ್ಮಿನ್ ಪ್ರತಿಪಶ್ಯಾಮಿ ಯ ಏನಂ ವಿಷಹೇದ್ ಯುಧಿ ॥೪॥

ಇಂದ್ರನಿಗೆ ಸಮಾನವಾದ ತೇಜಸ್ಸುಳ್ಳವನೂ ಮತ್ತು ಮಹಾಬಾಹುವೂ ಆದ ಅವನನ್ನು ಯುದ್ಧದಲ್ಲಿ ಎದುರಿಸಿ ಸಹಿಸುವಂತಹ ಯಾವೊಬ್ಬನನ್ನೂ ನನ್ನ ಸೈನ್ಯದಲ್ಲಿ ಕಾಣುತ್ತಿಲ್ಲ.

ಅಮರ್ಷಣಶ್ಚ ಕೌಂತೇಯೋ ದೃಢವೈರಶ್ಚ ಪಾಂಡವಃ ।
ಅನರ್ಮಹಾಸೀ ಸೋನ್ಮಾದಃ ತಿರ್ಯಕ್ಪ್ರೇಕ್ಷೀ ಮಹಾಸ್ವನಃ ॥೫॥

ಪಾಂಡುಪುತ್ರನಾದ ಭೀಮಸೇನನು ರೋಷಸ್ವಭಾವದವನೂ, ದೃಢವಾದ ವೈರವನ್ನು ಹೊಂದಿದವನೂ, ವಿನೋದವನ್ನಾಗಲೀ, ಹಾಸವನ್ನಾಗಲೀ ಮಾಡದವನೂ, ಹುಚ್ಚನಂತೆ ಇರುವವನೂ, ವಕ್ರದೃಷ್ಟಿಯಿಂದ ನೋಡುವವನೂ ಮತ್ತು ಮಹಾನಾದವನ್ನು ಮಾಡುವವನು.

ಮಹಾವೇಗೋ ಮಹೋತ್ಸಾಹೋ ಮಹಾಬಾಹುರ್ಮಹಾಬಲಃ ।
ಮಂದಾನಾಂ ಮಮ ಪುತ್ರಾಣಾಂ ಯುದ್ಧೇನಾಂತಂ ಕರಿಷ್ಯತಿ ॥೬॥

ಋಷಭಗ್ರಹಗೃಹೀತಾಂ ತಾಂ ಗದಾಂ ಬಿಭ್ರತ್ ವೃಕೋದರಃ ।
ಕುರೂಣಾಮೃಷಭೋ ಯುದ್ಧೇ ದಂಡಪಾಣಿರಿವಾಂತಕಃ ॥೭॥

ಮಹಾವೇಗವುಳ್ಳವನೂ, ಮಹಾಉತ್ಸಾಹವುಳ್ಳವನೂ, ಮಹಾಬಾಹುವೂ, ಮಹಾಬಲನೂ, ಕುರುಶ್ರೇಷ್ಠನೂ ಆದ ವೃಕೋದರನು ಕೈಯಲ್ಲಿ ದಂಡವನ್ನು ಹಿಡಿದ ಯಮನಂತೆ ಯುದ್ಧದಲ್ಲಿ, ಕೈವರ್ತರು (ಮೀನನ್ನು ಹಿಡಿಯುವವರು) ಧರಿಸುವಂತಹ ಭಾರವಾದ ಗದೆಯನ್ನು ಧರಿಸಿ ಮಂದರಾದ ನನ್ನ ಪುತ್ರರ ವಿನಾಶವನ್ನು ಮಾಡುವನು.

ಅಷ್ಟಾಶ್ರಮಾಯಸೀಂ ಘೋರಾಂ ಗದಾಂ ಕಾಂಚನಭೂಷಣಾಮ್ ।
ಮನಸಾऽಹಂ ಪ್ರಪಶ್ಯಾಮಿ ಬ್ರಹ್ಮದಂಡಮಿವೋದ್ಯತಮ್ ॥೮॥

ಬ್ರಹ್ಮದಂಡದಂತೆ ಸನ್ನದ್ಧವಾದ, ಎಂಟು ಅಂಚುಗಳಿರುವ, ಸುವರ್ಣಭೂಷಿತವಾದ ಅವನ ಘೋರವಾದ ಗದೆಯನ್ನು ನಾನು ಮನಸ್ಸಿನಿಂದಲೇ ನೋಡುತ್ತಿದ್ದೇನೆ.

ಯಥಾ ಮೃಗಾಣಾಂ ಯೂಥೇಷು ಸಿಂಹೋ ಜಾತಬಲಶ್ಚರೇತ್ ।
ಮಾಮಕೇಷು ತಥಾ ಭೀಮೋ ಬಲೇಷು ವಿಚರಿಷ್ಯತಿ ॥೯॥

ಜಿಂಕೆಗಳ ಮಧ್ಯದಲ್ಲಿ ಬಲಿಷ್ಠವಾದ ಸಿಂಹವು ಸಂಚರಿಸಿದಂತೆ ಭೀಮಸೇನನು ನನ್ನ ಸೈನ್ಯದಲ್ಲಿ ಸಂಚರಿಸುವನು.

ಸರ್ವೇಷಾಂ ಮಮ ಪುತ್ರಾಣಾಂ ಸ ಏವ ಕ್ರೂರವಿಕ್ರಮಃ ।
ಬಹ್ವಶೀ ವಿಪ್ರತೀಪಶ್ಚ ಬಾಲ್ಯೇऽಪಿ ರಭಸಃ ಸದಾ ॥೧೦॥

ನನ್ನ ಎಲ್ಲ ಪುತ್ರರಲ್ಲಿ ಅವನೇ ಕ್ರೂರ ಪರಾಕ್ರಮವುಳ್ಳವನು. ಬಹುಭೋಜಿ, ಪ್ರತೀಕಾರವನ್ನು ಮಾಡುವವನು ಮತ್ತು ಬಾಲ್ಯದಲ್ಲಿಯೂ ಸಹ ಯಾವಾಗಲೂ ಸಾಹಸದ ಕೆಲಸವನ್ನು ಮಾಡಿದವನು.

ಉದ್ವೇಪತೇ ಮೇ ಹೃದಯಂ ಯದಾ ದುರ್ಯೋಧನಾದಯಃ ।
ಬಾಲ್ಯೇऽಪಿ ತೇನ ಯುದ್ಧ್ಯಂತೋ ವಾರಣೇನೇವ ಮರ್ದಿತಾಃ ॥೧೧॥

ಬಾಲ್ಯದಲ್ಲಿಯೂ ಕೂಡ ಅವನ ಜೊತೆಯಲ್ಲಿ ಯುದ್ಧವನ್ನು ಮಾಡುವ (ಹೋರಾಡುವ) ದುರ್ಯೋಧನಾದಿಗಳು ಗಜದಿಂದಲೋ ಎಂಬಂತೆ ಮರ್ದಿತರಾದುದನ್ನು ನೆನೆದು ನನ್ನ ಹೃದಯವು ನಡುಗುತ್ತದೆ.

ತಸ್ಯ ವೀರ್ಯೇಣ ಸಂಕ್ಲಿಷ್ಟಾ ನಿತ್ಯಮೇವ ಸುತಾ ಮಮ ।
ಸ ಏವ ಹೇತುರ್ಭೇದಸ್ಯ ಭೀಮೋ ಭೀಮಪರಾಕ್ರಮಃ ॥೧೨॥

ನನ್ನ ಮಕ್ಕಳು ಅವನ ಪರಾಕ್ರಮದಿಂದ ಯಾವಾಗಲೂ ಬಹಳ ಕ್ಲೇಶಕ್ಕೆ ಒಳಗಾಗಿದ್ದಾರೆ. ಭಯಂಕರ ಪರಾಕ್ರಮವುಳ್ಳ ಭೀಮನೇ ಈ ವೈರಕ್ಕೆ ಮೂಲ ಕಾರಣನಾದವನು.

ಗ್ರಸಮಾನಮನೀಕಾನಿ ರಥವಾರಣವಾಜಿನಾಮ್ ।
ಪಶ್ಯಾಮೀವಾಗ್ರತೋ ಭೀಮಂ ಕ್ರೋಧಮೂರ್ಚ್ಛಿತಮಾಹವೇ ॥೧೩॥

ಗಜಾಶ್ವರಥಗಳಿಂದ ಕೂಡಿದ ಸೈನ್ಯವನ್ನು ನುಂಗುತ್ತಾ, ಕ್ರೋಧದಿಂದ ಮೂರ್ಛಿತನಾಗಿ ಯುದ್ಧದಲ್ಲಿ ಮುನ್ನುಗ್ಗುವ ಭೀಮನನ್ನು ನಾನು ನೋಡುತ್ತಿದ್ದೇನೆಯೋ ಎನಿಸುತ್ತದೆ.

ಅಸ್ತ್ರೇ ದ್ರೋಣಾರ್ಜುನಸಮಂ ವಾಯುವೇಗಸಮಂ ಜವೇ ।
ಮಹೇಶ್ವರಸಮಂ ಕ್ರೋಧೇ ಕೋ ಹನ್ಯಾದ್ ಭೀಮಮಾಹವೇ ॥೧೪॥

ಅಸ್ತ್ರಪ್ರಯೋಗದಲ್ಲಿ ದ್ರೋಣಾರ್ಜುನರಿಗೆ ಸಮನಾದವನೂ, ವೇಗದಲ್ಲಿ ವಾಯುವೇಗಕ್ಕೆ ಸಮನಾದವನೂ, ಕ್ರೋಧದಲ್ಲಿ ರುದ್ರದೇವನಿಗೆ ಸಮನಾದವನೂ ಆದ ಭೀಮನನ್ನು ಯುದ್ಧದಲ್ಲಿ ಯಾರು ಕೊಂದಾರು?

ಸಂಜಯಾಚಕ್ಷ್ವ ಮೇ ಶೂರಂ ಭೀಮಸೇನಮಮರ್ಷಣಮ್ ॥೧೫॥

ಸಂಜಯನೇ, ಆ ರೋಷಸ್ವಭಾವದ ಶೂರನಾದ ಭೀಮಸೇನನ ವಿಷಯಗಳನ್ನು ಇನ್ನೂ ನನಗೆ ಹೇಳು.

ಅತಿಲಾಭಂ ತು ಮನ್ಯೇऽಹಂ ಯತ್ ತೇನ ರಿಪುಘಾತಿನಾ ।
ತದೈವ ನ ಹತಾಃ ಸರ್ವೇ ಪುತ್ರಾ ಮಮ ಮನಸ್ವಿನಾ ॥೧೬॥

ಶತ್ರುಘಾತಕನೂ, ಧೈರ್ಯಶಾಲಿಯೂ ಆದ ಅವನು ನನ್ನ ಪುತ್ರರನ್ನು ಹಿಂದೆಯೇ ಕೊಲ್ಲಲಿಲ್ಲ ಎಂಬುದೇ ನಾನು ದೊಡ್ಡಲಾಭವೆಂದು ಭಾವಿಸುತ್ತೇನೆ.

ಯೇನ ಭೀಮಬಲಾ ಯಕ್ಷಾ ರಾಕ್ಷಸಾಶ್ಚ ಪುರಾ ಹತಾಃ ।
ಕಥಂ ತಸ್ಯ ರಣೇ ವೇಗಂ ಮಾನುಷಃ ಪ್ರಸಹಿಷ್ಯತಿ ॥೧೭॥

ಭಯಂಕರ ಬಲವುಳ್ಳ ಯಕ್ಷರೂ ಮತ್ತು ರಾಕ್ಷಸರೂ ಸಹ ಯಾವ ಭೀಮನಿಂದ ಹಿಂದೆ ಹತರಾದರೋ ಅಂತಹ ಭೀಮನ ವೇಗವನ್ನು ಯುದ್ಧದಲ್ಲಿ ಯಾವ ಮನುಷ್ಯನು ತಾನೇ ಸಹಿಸುವನು?

ನ ಸ ಜಾತು ವಶೇ ತಸ್ಥೌ ಮಮ ಬಾಲ್ಯೇಽಪಿ ಸಂಜಯ ।
ಕಿಂ ಪುನರ್ಮಮ ದುಷ್ಪುತ್ರೈಃ ಕ್ಲಿಷ್ಟಃ ಸಂಪ್ರತಿ ಪಾಂಡವಃ ॥೧೮॥

ಎಲೈ ಸಂಜಯನೇ, ಬಾಲ್ಯದಲ್ಲಿಯೂ ಕೂಡ ನನಗೆ ಅವನು ಯಾವಾಗಲೂ ವಶವರ್ತಿಯಾಗಿರಲಿಲ್ಲ. ಇನ್ನು ನನ್ನ ಕೆಟ್ಟ ಮಕ್ಕಳಿಂದ ಇಷ್ಟು ಕ್ಲೇಶಕ್ಕೆ ಒಳಗಾದ ಪಾಂಡುಪುತ್ರನಾದ ಅವನು ಈ ದಿನ ವಶನಾಗುತ್ತಾನೆಯೇ?

ನಿಷ್ಠುರೋ ರೋಷಣೋಽತ್ಯರ್ಥಂ ಭಜ್ಯೇತಾಪಿ ನ ಸನ್ನಮೇತ್ ।
ತಿರ್ಯಕ್ಪ್ರೇಕ್ಷೀ ಸಂಹತಭ್ರೂಃ ಕಥಂ ಶಾಮ್ಯೇದ್ ವೃಕೋದರಃ ॥೧೯॥

ನಿಷ್ಠುರಭಾಷಿಯೂ, ರೋಷಸ್ವಭಾವದವನೂ ಆದ ಅವನು ಮುರಿಯಬಹುದೇ ಹೊರತು ಬಾಗಲಾರ. ವಕ್ರದೃಷ್ಟಿಯುಳ್ಳವನೂ, ಕೂಡಿದ ಹುಬ್ಬುಳ್ಳವನೂ ಆದ ವೃಕೋದರನು ಹೇಗೆ ಶಾಂತನಾದಾನು?

ಶೂರಸ್ತಥಾಽಪ್ರತಿಬಲೋ ಗೌರಸ್ತಾಳ ಇವೋನ್ನತಃ ।
ಪ್ರಮಾಣತೋ ಭೀಮಸೇನಃ ಪ್ರಾದೇಶೇನಾಧಿಕೋಽರ್ಜುನಾತ್ ॥೨೦॥

ಜವೇನ ವಾಜಿನೋಽತ್ಯೇತಿ ಬಲೇನಾತ್ಯೇತಿ ಕುಂಜರಾನ್ ।
ಅವ್ಯಕ್ತಜಲ್ಪೀ ಮಧ್ವಕ್ಷೋ ಮಧ್ಯಮಃ ಪಾಂಡವೋ ಬಲೀ ॥೨೧॥

ಅವನು ಶೂರನಾದವನು, ಅಸದೃಶಬಲವುಳ್ಳವನು, ಗೌರವರ್ಣದವನು, ತಾಳೆ ಮರದಂತೆ ಎತ್ತರವಾಗಿರುವವನು. ಭೀಮಸೇನನು ಅರ್ಜುನನಿಗಿಂತ ಪ್ರಮಾಣದಲ್ಲಿ ಒಂದುಗೇಣು ಎತ್ತರವುಳ್ಳವನಾಗಿದ್ದಾನೆ. ವೇಗದಲ್ಲಿ ಅವನು ಅಶ್ವಗಳನ್ನು ಮೀರಿಸುತ್ತಾನೆ. ಬಲದಲ್ಲಿ ಅವನು ಗಜಗಳನ್ನು ಮೀರುತ್ತಾನೆ. ಅಸ್ಪಷ್ಟವಾಗಿ ಮಾತನಾಡುವ ಜೇನುಬಣ್ಣದ

ಕಣ್ಣುಳ್ಳವನೂ, ಪಾಂಡುಪುತ್ರರಲ್ಲಿ ಮಧ್ಯಮನೂ ಆದ ಅವನು ಬಹಳ ಬಲಿಷ್ಠನಾದವನು.

ಇತಿ ಬಾಲ್ಯೇ ಶ್ರುತಃ ಪೂರ್ವಂ ಮಯಾ ವ್ಯಾಸಮುಖಾತ್ ಪುರಾ ।
ರೂಪತೋ ವೀರ್ಯತಶ್ಚೈವ ಯಾಥಾತಥ್ಯೇನ ಪಾಂಡವಃ ॥೨೨॥

ಹೀಗೆ ಹಿಂದೆ ವ್ಯಾಸರ ಮುಖದಿಂದ, ಪಾಂಡುಪುತ್ರನಾದ ಭೀಮಸೇನನ ಗುಣಗಳನ್ನು ಯಥಾವತ್ತಾಗಿ ಅವನ ರೂಪ ಮತ್ತು ಪರಾಕ್ರಮಗಳ ದೃಷ್ಟಿಯಿಂದ ಅವನ ಬಾಲ್ಯದಲ್ಲಿಯೇ ನಾನು ಕೇಳಿದ್ದೇನೆ.

ಆಯಸೇನ ಸ ದಂಡೇನ ರಥಾನ್ ನಾಗಾನ್ ಹಯಾನ್ ನರಾನ್ ।
ಹನಿಷ್ಯತಿ ರಣೇ ಕ್ರುದ್ಧೋ ರೌದ್ರಃ ಕ್ರೂರಪರಾಕ್ರಮಃ ॥೨೩॥

ಭಯಂಕರನೂ, ಕ್ರೂರಪರಾಕ್ರಮವುಳ್ಳವನೂ ಆದ ಅವನು ಕ್ರೋಧಗೊಂಡು ಯುದ್ಧದಲ್ಲಿ ತನ್ನ ಕಬ್ಬಿಣದ ಗದೆಯಿಂದ ರಥಗಳನ್ನೂ, ಗಜಗಳನ್ನೂ, ಅಶ್ವಗಳನ್ನೂ ಮತ್ತು ಪದಾತಿಗಳನ್ನು ಕೊಲ್ಲುವನು.

ಅಮರ್ಷೀ ನಿತ್ಯಸಂರಬ್ಧೋ ಭೀಮಃ ಪ್ರಹರತಾಂ ವರಃ ।
ಮಯಾ ತಾತ ಪ್ರತೀಪಾನಿ ಕುರ್ವನ್ ಪೂರ್ವಂ ವಿಮಾನಿತಃ ॥೨೪॥

ಪ್ರೀತಿಪಾತ್ರನೇ, ರೋಷಸ್ವಭಾವದವನೂ, ನಿತ್ಯವೂ ಕ್ರುದ್ಧನೂ ಮತ್ತು ಪ್ರಹಾರ ಮಾಡುವವರಲ್ಲಿ ಶ್ರೇಷ್ಠನೂ ಆದ ಭೀಮಸೇನನು ಹಿಂದೆ ನನಗೆ ವಿರೋಧವನ್ನು ಮಾಡಿದಾಗ ನಮ್ಮಿಂದ ಅವಮಾನಗೊಳಿಸಲ್ಪಟ್ಟಿದ್ದಾನೆ.

ನಿಷ್ಕರ್ಣಾಮಾಯಸೀಂ ಸ್ಥೂಲಾಂ ಸುಪಾರ್ಶ್ವಾಂ ಕಾಂಚನೀಂ ಗದಾಮ್ ।
ಶತಘ್ನೀಂ ಶತನಿರ್ಹ್ರಾದಾಂ ಕಥಂ ಶಕ್ಷ್ಯಂತಿ ಮೇ ಸುತಾಃ ॥೨೫॥

ನಿಷ್ಕರ್ಣವಾದ, ದೊಡ್ಡದಾದ, ಒಳ್ಳೆಯ ಅಂಚುಗಳನ್ನುಳ್ಳ, ನೂರು ಯೋಧರನ್ನು ಕೊಲ್ಲುವ, ಸಿಡಿಲಿನಂತೆ ಶಬ್ದವನ್ನು ಮಾಡುವ, ಸುವರ್ಣಾಲಂಕೃತವಾದ ಅವನ ಕಬ್ಬಿಣದ ಗದೆಯನ್ನು ನನ್ನ ಮಕ್ಕಳು ಹೇಗೆ ಸಹಿಸುತ್ತಾರೆ?

ಅಪಾರಮಪ್ಲವಾಗಾಧಂ ಸಮುದ್ರಂ ಶರವೇಗಿತಮ್ ।
ಭೀಮಸೇನಮಯಂ ದುರ್ಗಂ ತಾತ ಮಂದಾಸ್ತಿತೀರ್ಷವಃ ॥೨೬॥

ಎಲ್ಲೆಯೇ ಇಲ್ಲದ, ನಾವೆಯಿಲ್ಲದ, ಶರವೇಗವುಳ್ಳ, ಭೀಮಸೇನಾತ್ಮಕವಾದ ಸಮುದ್ರಮಯವಾದ ಜಲದುರ್ಗವನ್ನು ಮಂದರಾದ ನನ್ನ ಪುತ್ರರು ದಾಟಲು ಬಯಸುತ್ತಾರೆ.

ಕ್ರೋಶತೋ ಮೇ ನ ಶೃಣ್ವಂತಿ ಬಾಲಾಃ ಪಂಡಿತಮಾನಿನಃ ।
ವಿಷಮಂ ನಾವಬುಧ್ಯ್ಯಂತೇ ಪ್ರಪಾತಂ ಮಧುದರ್ಶಿನಃ ॥೨೭॥

ಸಂಯುಗಂ ಯೇ ಗಮಿಷ್ಯಂತಿ ನರರೂಪೇಣ ಮೃತ್ಯುನಾ ।
ನಿಯತಂ ಚೋದಿತಾ ಧಾತ್ರಾ ಸಿಂಹೇನೇವ ಮಹಾಮೃಗಾಃ ॥೨೮॥

ವಿಧಿಯಿಂದ ಪ್ರೇರಿತರಾಗಿ ಸಿಂಹದ ಜೊತೆಯಲ್ಲಿ ದೊಡ್ಡ ಮೃಗಗಳು ಹೊಡೆದಾಡಿದಂತೆ ಯಾವ ನನ್ನ ಪುತ್ರರು ಮನುಷ್ಯರೂಪವನ್ನು ಧರಿಸಿದ ಮೃತ್ಯುವಾದ ಅವನ ಜೊತೆಯಲ್ಲಿ ಯುದ್ಧವನ್ನು ಮಾಡಲು ಹೊರಡುವರೋ ಅಂತಹ ಬಾಲರಾದ ನನ್ನ ಮಕ್ಕಳು, ತಮ್ಮನ್ನು ಪಂಡಿತರೆಂದು ತಿಳಿದಿದ್ದಾರೆ. ಹಳ್ಳದಲ್ಲಿರುವ ಜೇನನ್ನು ಅವರು ನೋಡುತ್ತಿದ್ದಾರೆ, ಹಳ್ಳವು ಅವರ ಕಣ್ಣಿಗೆ ಕಾಣಿಸುತ್ತಿಲ್ಲ. ನಾನು ಕಿರುಚುತ್ತಿದ್ದರೂ ನನ್ನ ಮಾತುಗಳನ್ನು ಕೇಳುವುದಿಲ್ಲ.

ಶೈಕ್ಯಾಂ ತಾತ ಚತುಷ್ಕಿಷ್ಕುಂ ಷಡಶ್ರಾಮಮಿತೌಜಸಮ್ ।
ಪ್ರಹಿತಾಂ ದುಃಖಸಂಸ್ಪರ್ಶಾಂ ಕಥಂ ಶಕ್ಷ್ಯಂತಿ ಮೇ ಸುತಾಃ ॥೨೯॥

ಎಲೈ ಪ್ರೀತಿಪಾತ್ರನೇ, ಯಾವ ಅವರ ನೆಲುವಿನಲ್ಲಿರುವ ಆರು ಅಂಚುಗಳಿಂದ ಕೂಡಿದ ಅಮಿತಸಾಮರ್ಥ್ಯವುಳ್ಳ ದುಃಖಮಯವಾದ ಸಂಸ್ಪರ್ಶವನ್ನು ಉಂಟುಮಾಡುವ ನಾಲ್ಕು ಕಿಷ್ಕು ಉದ್ದವಾದ ಆ ಗದೆಯನ್ನು ನನ್ನ ಪುತ್ರರು ಹೇಗೆ ಸಹಿಸುತ್ತಾರೆ?

ಗದಾಂ ಭ್ರಾಮಯತಸ್ತಸ್ಯ ಭಿಂದತೋ ಹಸ್ತಿಮಸ್ತಕಾನ್ ।
ಸೃಕ್ವಿಣೀ ಲೇಲಿಹಾನಸ್ಯ ಬಾಷ್ಪಮುತ್ಸೃಜತಾ ಮುಹುಃ ॥೩೦॥

ಉದ್ದಿಶ್ಯ ನಾಗಾನ್ ಪತತಃ ಕುರ್ವತೋ ಭೈರವಾನ್ ರವಾನ್ ।
ಪ್ರತೀಪಂ ಪತತೋ ಮತ್ತಾನ್ ಪ್ರತಿ ಭಂಜ್ಯ ಚ ಗರ್ಜತಃ ॥೩೧॥

ವಿಗಾಹ್ಯ ರಥಮಾರ್ಗೇಷು ಯೋಧಾನುದ್ದಿಶ್ಯ ನಿಘ್ನತಃ ।
ಅಗ್ನೇಃ ಪ್ರಜ್ವಲಿತಸ್ಯೇವ ಅಪಿ ಮುಚ್ಯೇತ ಮೇ ಪ್ರಜಾಃ ॥೩೨॥

ಗದೆಯನ್ನು ತಿರುಗಿಸುವ, ಗಜಮಸ್ತಕಗಳನ್ನು ಭೇದಿಸುವ, ಕಟಬಾಯಿಯನ್ನು ನಾಲಿಗೆಯಿಂದ ಸವರಿಕೊಳ್ಳುವ, ಹವೆಯಂತಿರುವ ನಿಟ್ಟುಸಿರನ್ನು ಬಿಡುವ, ಗಜಗಳನ್ನು ಉದ್ದೇಶಿಸಿ ಮುನ್ನುಗ್ಗುವ, ಭೈರವನಾದಗಳನ್ನು ಮಾಡುವ, ಮತ್ತರಾದವರನ್ನು ಮತ್ತು ತನ್ನ ವಿರೋಧವನ್ನು ಮಾಡುವವರನ್ನು ಮುರಿದು ಗರ್ಜಿಸುವ, ರಥಮಾರ್ಗಗಳಲ್ಲಿ ತನ್ನ ಇಚ್ಛೆಯಂತೆ ಪ್ರವೇಶಮಾಡಿ ಯೋಧರನ್ನು ಉದ್ದೇಶಿಸಿ ಕೊಲ್ಲುವ, ಪ್ರಜ್ವಲಿತವಾದ ಅಗ್ನಿಯಂತಿರುವ ಆ ಭೀಮಸೇನನಿಂದ ನನ್ನ ಮಕ್ಕಳು ಏನಾದರೂ ಪಾರಾಗುತ್ತಾರೆಯೇ?

ವೀಥೀಂ ಕುರ್ವನ್ ಮಹಾಬಾಹುಃ ದ್ರಾವಯನ್ ಮಮ ವಾಹಿನೀಮ್।
ನೃತ್ಯನ್ನಿವ ಗದಾಪಾಣಿರ್ಯುಗಾಂತಂ ದರ್ಶಯಿಷ್ಯತಿ ॥೩೩॥

ಮಹಾಬಾಹುವಾದ ಅವನು ರಣರಂಗದಲ್ಲಿ ಸಂಚಾರಗಳಿಂದ ವೀಥಿಗಳನ್ನು ಮಾಡುತ್ತಾ, ನನ್ನ ಸೈನ್ಯಗಳನ್ನು ಓಡಿಸುತ್ತಾ, ಕೈಯಲ್ಲಿ ಗದೆಯನ್ನು ಹಿಡಿದು ನರ್ತಿಸುವಂತೆ ತೋರುವ ಅವನು ಯುಗಾಂತಕಾಲೀನವಾದ ಪ್ರಳಯವನ್ನೇ ತೋರಿಸುವನು.

ಪ್ರಭಿನ್ನ ಇವ ಮಾತಂಗಃ ಪ್ರಭಂಜನ್ ಪುಷ್ಪಿತಾನ್ ದ್ರುಮಾನ್ ।
ಪ್ರವೇಕ್ಷ್ಯತಿ ರಣೇ ಸೇನಾಂ ಪುತ್ರಾಣಾಂ ಮೇ ವೃಕೋದರಃ ॥೩೪॥

ಮದಗಜವು ಪುಷ್ಪಸಹಿತವಾದ ವೃಕ್ಷಗಳನ್ನು ಮುರಿದು ಮುನ್ನುಗ್ಗುವಂತೆ ವೃಕೋದರನು ಯುದ್ಧದಲ್ಲಿ ನನ್ನ ಪುತ್ರರ ಸೈನ್ಯವನ್ನು ಪ್ರವೇಶಿಸುವನು.

ಕುರ್ವನ್ ರಥಾನ್ ವಿಪುರುಷಾನ್ ವಿಸಾರಥಿಹಯಧ್ವಜಾನ್ ।
ಆರುಜನ್ ಪುರುಷವ್ಯಾಘ್ರೋ ರಥಿನಃ ಸಾದಿನಸ್ತಥಾ ॥೩೫॥

ಗಾಂಗವೇಗ ಇವಾನೂಪಾನ್ ತೀರಜಾನ್ ವಿವಿಧಾನ್ ದ್ರುಮಾನ್ ।
ಪ್ರಭಂಕ್ಷ್ಯತಿ ರಣೇ ಸೇನಾಂ ಪುತ್ರಾಣಾಂ ಮಮ ಸಂಜಯ ॥೩೬॥

ರಥಗಳನ್ನು ರಥಿಕ, ಸಾರಥಿ, ಅಶ್ವ, ಧ್ವಜಗಳಿಂದ ರಹಿತವನ್ನಾಗಿ ಮಾಡುತ್ತಾ, ಪುರುಷವ್ಯಾಘ್ರನಾದ ಅವನು ರಥಿಕರನ್ನೂ ಮತ್ತು ಅಶ್ವಾರೋಹಿಗಳನ್ನು ಮರ್ದಿಸುತ್ತಾ

ಗಂಗಾನದಿಯ ಪ್ರವಾಹವು ತೀರದಲ್ಲಿ ಬೆಳೆದ ಅನೇಕವಿಧವಾದ ವೃಕ್ಷಗಳನ್ನು ಮುರಿದಂತೆ ಎಲೈ ಸಂಜಯನೇ, ನನ್ನ ಪುತ್ರರ ಸೈನ್ಯವನ್ನು ನಾಶಗೊಳಿಸುವನು.

ವಧಂ ನೂನಂ ಗಮಿಷ್ಯಂತಿ ಭೀಮಸೇನಬಲಾರ್ದಿತಾಃ ।
ಮಮ ಪುತ್ರಾಶ್ಚ ಭೃತ್ಯಾಶ್ಚ ರಾಜಾನಶ್ಚೈವ ಸಂಜಯ ॥೩೭॥

ಎಲೈ ಸಂಜಯನೇ, ಭೀಮಸೇನನ ಬಲದಿಂದ ಪೀಡಿತರಾಗಿ ನನ್ನ ಮಕ್ಕಳೂ, ಭೃತ್ಯರೂ ಮತ್ತು ಉಳಿದ ರಾಜರೂ ಸಹ ಖಂಡಿತವಾಗಿ ವಧೆಯನ್ನು ಹೊಂದುವರು.

ಯೇನ ರಾಜಾ ಮಹಾವೀರ್ಯಃ ಪ್ರವಿಶ್ಯಾಂತಃಪುರಂ ಪುರಾ ।
ವಾಸುದೇವಸಹಾಯೇನ ಜರಾಸಂಧೋ ನಿಪಾತಿತಃ ॥೩೮॥

ಕೃತ್ಸ್ನೇಯಂ ಪೃಥಿವೀ ದೇವೀ ಜರಾಸಂಧೇನ ಧೀಮತಾ ।
ಮಗಧೇಂದ್ರೇಣ ಬಲಿನಾ ವಶೇ ಕೃತ್ವಾ ಪ್ರತಾಪಿನಾ ॥೩೯॥

ಭೀಷ್ಮಪ್ರತಾಪಾತ್ ಕುರವೋ ನಯೇನಾಂಧಕವೃಷ್ಣಯಃ ।
ಯನ್ನ ತಸ್ಯ ವಶೇ ಜಗ್ಮುಃ ಕೇವಲಂ ದೈವಮೇವ ತತ್ ॥೪೦॥

ಯಾವ ಮಹಾವೀರ್ಯವುಳ್ಳ ಭೀಮಸೇನನು ಕೃಷ್ಣನ ಜೊತೆಯಲ್ಲಿ ಹಿಂದೆ ಜರಾಸಂಧನ ಅಂತಃಪುರಕ್ಕೆ ಹೋಗಿ ಅವನನ್ನು ಕೆಡವಿದನೋ - ಮೇಧಾವಿಯಾದ ಮಗಧೇಂದ್ರನಾದ ಬಲಿಷ್ಠನಾದ ಜರಾಸಂಧನಾದರೂ ತನ್ನ ಪ್ರತಾಪದಿಂದ ಸಮಗ್ರವಾದ ಪೃಥಿವಿಯನ್ನು ತನ್ನ ವಶಪಡಿಸಿಕೊಂಡಿದ್ದವನು. ಭೀಷ್ಮಪ್ರತಾಪದಿಂದ ಕುರುಗಳು ಮತ್ತು ಕೃಷ್ಣನ ನೀತಿಯಿಂದ ಅಂಧಕವೃಷ್ಣಿಗಳು ಅವನ ವಶರಾಗಲಿಲ್ಲ ಎಂಬುದು ಕೇವಲ ದೈವವೇ ಸರಿ.

ಸ ಗತ್ವಾ ಪಾಂಡುಪುತ್ರೇಣ ತರಸಾ ಬಾಹುಶಾಲಿನಾ ।
ಅನಾಯುಧೇನ ವೀರೇಣ ನಿಹತಃ ಕಿಂ ತತೋಽಧಿಕಮ್ ॥೪೧॥

ಬಾಹುಶಾಲಿಯಾದ, ವೀರನಾದ ಪಾಂಡುಪುತ್ರನಾದ ಭೀಮಸೇನನು ನಿರಾಯುಧನಾಗಿ ಅಂತಹ ಜರಾಸಂಧನ ಅಂತಃಪುರಕ್ಕೆ ಹೋಗಿ ಅವನನ್ನು ಸಂಹಾರ ಮಾಡಿದನು. ಇದಕ್ಕಿಂತ ದೊಡ್ಡ ನಿದರ್ಶನವು ಏನು ಬೇಕಾಗಿದೆ?

ದೀರ್ಘಕಾಲೇನ ಸಂಸಿದ್ಧಂ ವಿಷಮಾಶೀವಿಷೋ ಯಥಾ ।
ಸ ಮೋಕ್ಷ್ಯತಿ ರಣೇ ತೇಜೋ ಮಮ ಪುತ್ರೇಷು ಸಂಜಯ ॥೪೨॥

ಸಂಜಯನೇ, ಸರ್ಪವು ದೀರ್ಘಕಾಲದಿಂದ ಕೂಡಿಟ್ಟ ವಿಷವನ್ನು ಕಾರುವಂತೆ ಭೀಮಸೇನನು ಯುದ್ಧದಲ್ಲಿ ನನ್ನ ಪುತ್ರರ ಮೆಲೆ ಅಂತಹ ಕ್ರೋಧವನ್ನು ಕಾರುವನು.

ಮಹೇಂದ್ರ ಇವ ವಜ್ರೇಣ ದಾನವಾನ್ ದೇವಸತ್ತಮಃ ।
ಭೀಮಸೇನೋ ಗದಾಪಾಣಿಃ ಸೂದಯಿಷ್ಯತಿ ಮೇ ಸುತಾನ್ ॥೪೩॥

ದೇವಶ್ರೇಷ್ಠನಾದ ಮಹೇಂದ್ರನು ವಜ್ರಾಯುಧದಿಂದ ದಾನವರನ್ನು ಸಂಹರಿಸಿದಂತೆ ಗದಾಪಾಣಿಯಾದ ಭೀಮಸೇನನು ನನ್ನ ಪುತ್ರರನ್ನು ಸಂಹರಿಸುವನು.

ಅವಿಷಹ್ಯಮನಾವಾರ್ಯಂ ತೀವ್ರವೇಗಪರಾಕ್ರಮಮ್ ।
ಪಶ್ಯಾಮೀವಾತಿತಾಮ್ರಾಕ್ಷಮಾಪತಂತಂ ವೃಕೋದರಮ್ ॥೪೪॥

ತಡೆಯಲು ಅಸಾಧ್ಯನಾದವನೂ, ನಿವಾರಣೆ ಮಾಡಲು ಅಸಾಧ್ಯನಾದವನೂ, ತೀವ್ರವೇಗ ಮತ್ತು ಪರಾಕ್ರಮವುಳ್ಳವನೂ, ರಕ್ತಾಕ್ಷನೂ ಆದ ವೃಕೋದರನು ಮುನ್ನುಗ್ಗುತ್ತಿರುವುದನ್ನು ನಾನು ನೋಡುತ್ತಿದ್ದೇನೆ ಎನಿಸುತ್ತದೆ.

ಅಗದಸ್ಯಾಪ್ಯಧನುಷೋ ವಿರಥಸ್ಯ ವಿವರ್ಮಣಃ ।
ಬಾಹುಭ್ಯಾಂ ಯುಧ್ಯಮಾನಸ್ಯ ಕಸ್ತಿಷ್ಠೇದಗ್ರತಃ ಪುಮಾನ್ ॥೪೫॥

ಗದೆ ಇಲ್ಲದೆ, ಧನುಸ್ಸಿಲ್ಲದೆ, ರಥವಿಲ್ಲದೆ, ಕವಚವಿಲ್ಲದೆ ಕೇವಲ ಬಾಹುಗಳಿಂದ ಯುದ್ಧವನ್ನು ಮಾಡಿದರೂ ಅವನ ಎದುರಿಗೆ ಯಾವ ಪುರುಷನು ನಿಂತಾನು?

ಭೀಷ್ಮೋ ದ್ರೋಣಶ್ಚ ವಿಪ್ರೋಽಯಂ ಕೃಪಃ ಶಾರದ್ವತಸ್ತಥಾ ।
ಜಾನಂತ್ಯೇತೇ ಯಥೈವಾಹಂ ವೀರ್ಯಜ್ಞಾಸ್ತಸ್ಯ ಧೀಮತಃ ॥೪೬॥

ಭೀಷ್ಮರೂ, ಬ್ರಾಹ್ಮಣರಾದ ದ್ರೋಣರೂ ಮತ್ತು ಶರದ್ವಂತರ ಪುತ್ರರಾದ ಕೃಪರೂ ಸಹ ನಾನು ತಿಳಿದಂತೆ ಮೇಧಾವಿಯಾದ ಆ ಭೀಮಸೇನನ ಪರಾಕ್ರಮವನ್ನು ತಿಳಿದಿದ್ದಾರೆ.

ಆರ್ಯವೃತ್ತಂ ತು ಜಾನಂತಃ ಸಂಗರಾಂತಂ ವಿಧಿತ್ಸವಃ ।
ಸೇನಾಮುಖೇಷು ಸ್ಥಾಸ್ಯಂತಿ ಮಾಮಕಾನಾಂ ನರರ್ಷಭಾಃ ॥೪೭॥

ನರಶ್ರೇಷ್ಠರಾದ ಅವರು ದೊಡ್ಡ ನಡತೆಯನ್ನು ತಿಳಿದವರಾಗಿ ಯುದ್ಧವನ್ನು ಕೊನೆಗಾಣಿಸಲು ಇಚ್ಛಿಸಿ ನನ್ನ ಮಕ್ಕಳ ಸೈನ್ಯದ ಮುಂಭಾಗದಲ್ಲಿ ನಿಲ್ಲುವರು.

ಬಲೀಯಸ್ತು ಭವೇತ್ ದಿಷ್ಟಂ ಪುರುಷಸ್ಯ ವಿಶೇಷತಃ ।
ಪಶ್ಯನ್ನಪಿ ಜಯಂ ತೇಷಾಂ ನ ನಿಯಚ್ಛಾಮಿ ಯತ್ ಸುತಾನ್ ॥೪೮॥

ಪುರುಷನಿಗೆ ವಿಧಿಯು ಬಹಳ ಪ್ರಬಲವಾದುದು ಎನಿಸುತ್ತದೆ. ಏಕೆಂದರೆ ಪಾಂಡವರ ಜಯವನ್ನು ನಾನು ಕಾಣುತ್ತಿದ್ದರೂ ನನ್ನ ಪುತ್ರರನ್ನು ನಾನು ನಿಯಂತ್ರಿಸುತ್ತಿಲ್ಲ.

ಅವಿಷಹ್ಯಂ ಮಹೇಷ್ವಾಸಾ ಮಾರ್ಗಮೈಂದ್ರಂ ಸಮಾಸ್ಥಿತಾಃ ।
ತ್ಯಕ್ಷ್ಯಂತಿ ತುಮುಲೇ ಪ್ರಾಣಾನ್ ರಕ್ಷಂತಃ ಪಾರ್ಥಿವಂ ಯಶಃ ॥೪೯॥

ಮಹಾಧನುರ್ಧಾರಿಗಳಾದ ಈ ಮೂವರು, ತಡೆಯಲು ಅಸಾಧ್ಯನಾದ ಆ ಭೀಮನನ್ನು ಎದುರಿಸಿ ರಾಜರ ಕೀರ್ತಿಯನ್ನು ಕಾಪಾಡುತ್ತಾ ಇಂದ್ರಲೋಕದ ಮಾರ್ಗದಲ್ಲಿ ಹೋಗುವವರಾಗಿ ಘೋರವಾದ ಯುದ್ಧದಲ್ಲಿ ತಮ್ಮ ಪ್ರಾಣಗಳನ್ನು ತ್ಯಜಿಸುವರು.

ಯಥೈಷಾಂ ಮಾಮಕಾಸ್ತಾತ ತಥೈಷಾಂ ಪಾಂಡವಾ ಅಪಿ ।
ಪೌತ್ರಾ ಭೀಷ್ಮಸ್ಯ ಶಿಷ್ಯಾಶ್ಚ ದ್ರೋಣಸ್ಯ ಚ ಕೃಪಸ್ಯ ಚ ॥೫೦॥

ಪ್ರೀತಿಪಾತ್ರನೇ, ಈ ದೊಡ್ಡವರಿಗೆ ನನ್ನ ಮಕ್ಕಳು ಹೇಗೋ ಪಾಂಡವರೂ ಹಾಗೆಯೇ. ಎಲ್ಲರೂ ಭೀಷ್ಮರ ಮೊಮ್ಮಕ್ಕಳು ಮತ್ತು ದ್ರೋಣ ಮತ್ತು ಕೃಪರ ಶಿಷ್ಯರು.

ಯತ್ತ ಸ್ವದಾಶ್ರಯಾತ್ ಕಿಂಚಿದ್ ದತ್ತಮಿಚ್ಛಂತಿ ಸಂಜಯ ।
ತಸ್ಯಾಪಚಿತಿಮಾರ್ಯತ್ವಾತ್ ಕರ್ತಾರಃ ಸ್ಥವಿರಾಸ್ತ್ರಯಃ ॥೫೧॥

ಸಂಜಯನೇ, ಅವರು ಉದಾತ್ತ ನಡತೆಯುಳ್ಳವರಾದ್ದರಿಂದ ಈ ಮೂವರು ವೃದ್ಧರೂ ಸಹ ನಮ್ಮನ್ನು ಅವಲಂಬಿಸಿದ ಕಾರಣದಿಂದ ನಮ್ಮಿಂದ ಪಡೆದುದಕ್ಕೆ ಪ್ರತ್ಯುಪಕಾರವನ್ನು ಮಾಡುವವರಾಗುವರು.

ಆದದಾನಸ್ಯ ಶಸ್ತ್ರಂ ಹಿ ಕ್ಷತ್ರಧರ್ಮಂ ಪರೀಪ್ಸತಃ ।
ನಿಧನಂ ಕ್ಷತ್ರಿಯಸ್ಯಾಜೌ ವರಮೇವಾಹುರುತ್ತಮಮ್ ॥೫೨॥

ಕ್ಷತ್ರಿಯಧರ್ಮವನ್ನು ಪಾಲಿಸುತ್ತಾ, ಕೈಯಲ್ಲಿ ಶಸ್ತ್ರವನ್ನು ಹಿಡಿದು ಯುದ್ಧದಲ್ಲಿ ಕ್ಷತ್ರಿಯನು ಮೃತನಾದರೆ ಅದು ಅವನಿಗೆ ಶ್ರೇಷ್ಠವಾದ ಮರಣವೆಂದು ಹೇಳುತ್ತಾರೆ.

ಸ ವೈ ಶೋಚಾಮಿ ಸರ್ವಾನ್ ವೈ ಯೇ ಯುಯುತ್ಸಂತಿ ಪಾಂಡವೈಃ ।
ವಿಕ್ರುಷ್ಟಂ ವಿದುರೇಣಾದೌ ತದೇತದ್ ಭಯಮಾಗತಮ್ ॥೫೩॥

ಅಂತಹ ನಾನು ಪಾಂಡವರನ್ನು ಎದುರಿಸಿ ಯುದ್ಧವನ್ನು ಮಾಡುವ ಎಲ್ಲರನ್ನೂ ಕುರಿತು ಶೋಕಪಡುತ್ತಿದ್ದೇನೆ. ವಿದುರನು ಮೊದಲೇ ಏನನ್ನು ಕಿರುಚಿ ಹೇಳಿದ್ದನೋ ಆ ಭಯವು ಈಗ ಪ್ರಾಪ್ತವಾಗಿದೆ.

ನ ತು ಮನ್ಯೇ ವಿಘಾತಾಯ ಜ್ಞಾನಂ ದುಃಖಸ್ಯ ಸಂಜಯ ।
ಭವತ್ಯತಿಬಲಂ ಹ್ಯೇತಜ್ಜ್ಞಾನಸ್ಯಾಪ್ಯುಪಘಾತಕಮ್ ॥೫೪॥

ಸಂಜಯನೇ, ಜ್ಞಾನವು ದುಃಖದ ವಿನಾಶಕ್ಕೆ ಕಾರಣವಾಗುತ್ತದೆ ಎಂದು ನಾನು ಭಾವಿಸುವುದಿಲ್ಲ. ದುಃಖವು ಪ್ರಬಲವಾದುದು. ಅದೇ ಜ್ಞಾನವನ್ನು ವಿನಾಶ ಮಾಡುತ್ತದೆ.

ಋಷಯೋ ಹ್ಯಪಿ ನಿರ್ಮುಕ್ತಾಃ ಪಶ್ಯಂತೋ ಲೋಕಸಂಗ್ರಹಾತ್ ।
ಸುಖೇ ಭವಂತಿ ಸುಖಿನಃ ತಥಾ ದುಃಖೇನ ದುಃಖಿತಾಃ ॥೫೫॥

ರಾಗಾದಿಗಳಿಂದ ನಿರ್ಮುಕ್ತರಾದ ಋಷಿಗಳೂ ಸಹ ಲೋಕದ ಸುಖ-ದುಃಖಗಳನ್ನು ನೋಡಿ ಲೋಕಸಂಗ್ರಹಕ್ಕಾಗಿ ಸುಖವನ್ನು ನೋಡಿ ಸುಖಿಗಳೂ, ದುಃಖವನ್ನು ನೋಡಿ ದುಃಖಿಗಳೂ ಆಗುತ್ತಾರೆ.

ಕಿಂ ಪುನರ್ಮೋಹಮಾಸಕ್ತಃ ತತ್ರ ತತ್ರ ಸಹಸ್ರಧಾ ।
ಪುತ್ರೇಷು ರಾಜ್ಯದಾರೇಷು ಪೌತ್ರೇಷ್ವಪಿ ಚ ಬಂಧುಷು ॥೫೬॥

ಹೀಗಿರುವಾಗ ಪುತ್ರರಲ್ಲಿ, ರಾಜ್ಯದಲ್ಲಿ, ಪತ್ನಿಯರಲ್ಲಿ, ಪೌತ್ರರಲ್ಲಿ, ಬಂಧುಗಳಲ್ಲಿ, ಅಲ್ಲಲ್ಲಿ ಸಹಸ್ರಾರು ರೀತಿಯಿಂದ ಮೋಹವನ್ನು ಹೊಂದಿದ ನನ್ನಂತಹವನ ವಿಷಯದಲ್ಲಿ ಹೇಳುವುದೇನಿದೆ?

ಸಂಶಯೇ ತು ಮಹತ್ಯಸ್ಮಿನ್ ಕಿಂ ನು ಮೇ ಕ್ಷೇಮಮುತ್ತಮಮ್ ।
ವಿನಾಶಂ ಹ್ಯೇವ ಪಶ್ಯಾಮಿ ಕುರೂಣಾಮನುಚಿಂತಯನ್ ॥೫೭॥

ಈ ದೊಡ್ಡ ಸಂಶಯವು ಪ್ರಾಪ್ತವಾದಾಗ ನನಗೆ ಯಾವುದರಿಂದ ಶ್ರೇಷ್ಠವಾದ ಕ್ಷೇಮವು ದೊರೆಯುತ್ತದೆ? ಎಷ್ಟು ಯೋಚನೆಯನ್ನು ಮಾಡಿದರೂ ಕುರುಗಳ ವಿನಾಶವೇ ನನಗೆ ಕಾಣುತ್ತಿದೆ.

ದ್ಯೂತಪ್ರಮುಖಮಾಭಾತಿ ಕುರೂಣಾಂ ವ್ಯಸನಂ ಮಹತ್ ।
ಮಂದೇನೈಶ್ವರ್ಯಕಾಮೇನ ಲೋಭಾತ್ ಪಾಪಮಿದಂ ಕೃತಮ್ ॥೫೮॥

ಕುರುಗಳಿಗೆ ಬಂದೊದಗಿದ ಈ ದೊಡ್ಡಸಂಕಟವು ದ್ಯೂತದ ಸಲುವಾಗಿ ಬಂದಿದೆ ಎಂದು ತೋರುತ್ತದೆ. ಐಶ್ವರ್ಯಕಾಮುಕನಾದ ಮಂದನಾದ ನನ್ನ ಪುತ್ರನು ಲೋಭದಿಂದ ಈ ಪಾಪಕಾರ್ಯವನ್ನು ಮಾಡಿದನು.

ಮನ್ಯೇ ಪರ್ಯಾಯಧರ್ಮೋಽಯಂ ಕಾಲಸ್ಯಾತ್ಯಂತಗಾಮಿನಃ ।
ಚಕ್ರೇ ಪ್ರಧಿರಿವಾಸಕ್ತೋ ನಾಸ್ಯ ಶಕ್ಯಂ ಪಲಾಯಿತುಮ್ ॥೫೯॥

ಅತ್ಯಂತ ಶೀಘ್ರವಾಗಿ ಚಲಿಸುವ ಕಾಲದ ಪರ್ಯಾಯ ಧರ್ಮವೆಂದು ಇದು ನನಗೆ ತೋರುತ್ತಿದೆ. ಚಕ್ರಕ್ಕೆ ಜೋಡಿಸಿದ ಅಂಚಿನಂತೆ ಇದರಿಂದ ಬಿಡಿಸಿಕೊಂಡು ಓಡಲು ಸಾಧ್ಯವಿಲ್ಲ.

ಕಿಂ ನು ಕುರ್ಯಾಂ ಕಥಂ ಕುರ್ಯಾಂ ಕ್ವ ನು ಗಚ್ಛಾಮಿ ಸಂಜಯ ।
ಏತೇ ನಶ್ಯಂತಿ ಕುರವೋ ಮಂದಾಃ ಕ್ರೋಧವಶಂ ಗತಾಃ ॥೬೦॥

ಸಂಜಯನೇ, ನಾನು ಏನು ಮಾಡಲಿ? ಹೇಗೆ ಮಾಡಲಿ? ಎಲ್ಲಿಗೆ ಹೋಗಲಿ? ಕ್ರೋಧವಶರಾದ, ಮಂದರಾದ ಈ ಕುರುಗಳು ನಾಶವನ್ನು ಹೊಂದುತ್ತಾರೆ.

ಅವಶೋಽಹಂ ತದಾ ತಾತ ಪುತ್ರಾಣಾಂ ನಿಹತೇ ಶತೇ ।
ಶ್ರೋಷ್ಯಾಮಿ ನಿನದಂ ಸ್ತ್ರೀಣಾಂ ಕಥಂ ಮಾಂ ಮರಣಂ ಸ್ಪೃಶೇತ್ ॥

ಪ್ರೀತಿಪಾತ್ರನೇ, ನನ್ನ ನೂರುಮಕ್ಕಳು ಹತರಾದರೆ ಆಗ ನಾನು ಅವಶನಾಗುತ್ತೇನೆ. ಆ ಸೊಸೆಯರ ಆಕ್ರಂದನವನ್ನು ಕೇಳುವವನಾಗುವೆನು. ನನಗೆ ಮರಣವು ಹೇಗೆ ಉಂಟಾದೀತು?

ಯಥಾ ನಿದಾಘೇ ಜ್ವಲನಃ ಸಮಿದ್ಧೋ
ದಹೇತ್ ಕಕ್ಷಂ ವಾಯುನಾ ಚೋದ್ಯಮಾನಃ ।
ಗದಾಹಸ್ತಃ ಪಾಂಡವೋ ವೈ ತಥೈವ
ಹಂತಾ ಮದೀಯಾನ್ ಸಹಿತೋಽರ್ಜುನೇನ ॥೬೨॥

ಹೇಗೆ ಬೇಸಿಗೆ ಕಾಲದಲ್ಲಿ ಜ್ವಲಿಸುವ ಅಗ್ನಿಯು ವಾಯುವಿನಿಂದ ಪ್ರೇರಿತವಾಗಿ ಹುಲ್ಲುಗಾವಲನ್ನು ಸುಡುವುದೋ ಅದರಂತೆಯೇ ಕೈಯಲ್ಲಿ ಗದೆಯನ್ನು ಹಿಡಿದ ಪಾಂಡುಪುತ್ರನಾದ ಭೀಮಸೇನನು ಅರ್ಜುನನಿಂದ ಸಹಿತನಾಗಿ ನನ್ನವರನ್ನು ಕೊಲ್ಲುವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ತ್ರಿಪಂಚಾಶೋಽಧ್ಯಾಯಃ ॥

॥ ವ್ಯಾಸಾಭಿಗಮನಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಐವತ್ಮೂರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ನಾಲ್ಕನೆಯ ಅಧ್ಯಾಯ

ಅರ್ಜುನಾದಿಗಳ ಪ್ರತಾಪವನ್ನು ವರ್ಣಿಸಿ ಧೃತರಾಷ್ಟ್ರನಿಂದ ಸಂಧಿಗಾಗಿ ಒತ್ತಾಯ.

ಧೃತರಾಷ್ಟ್ರಃ

ಯಸ್ಯ ವೈ ನಾನೃತಾ ವಾಚಃ ಕದಾಚಿದನುಶುಶ್ರುಮ ।
ತ್ರೈಲೋಕ್ಯಮಪಿ ತಸ್ಯ ಸ್ಯಾದ್ ಯೋದ್ಧಾ ಯಸ್ಯ ಧನಂಜಯಃ ॥೧॥

ಧೃತರಾಷ್ಟ್ರ- ಯಾವನ ಮಾತು ಒಮ್ಮೆಯೂ ಸುಳ್ಳಾಗುವುದಿಲ್ಲ ಎಂದು ನಾವು ಕೇಳುತ್ತೇವೆಯೋ ಮತ್ತು ಯಾವ ಯುಧಿಷ್ಠಿರನ ಪರವಾಗಿ ಧನಂಜಯನು ಯುದ್ಧ ಮಾಡುತ್ತಾನೆಯೋ ಅವನಿಗೆ ಮೂರುಲೋಕವೂ ವಶವಾದೀತು.

ತಸ್ಯೈವ ಚ ನ ಪಶ್ಯಾಮಿ ಯುಧಿ ಗಾಂಡೀವಧನ್ವನಃ ।
ಅನಿಶಂ ಚಿಂತಯಾನೋಽಪಿ ಯಃ ಪ್ರತೀಯಾದ್ ರಥೇನ ತಮ್ ॥೨॥

ಸತತವಾಗಿ ಯೋಚಿಸಿದರೂ ಸಹ ಯುದ್ಧದಲ್ಲಿ ಗಾಂಡೀವ ಧನುಸ್ಸನ್ನುಳ್ಳ ಅರ್ಜುನನ ಎದುರಾಗಿ ರಥದಲ್ಲಿ ಯಾರೂ ಹೋಗುವುದು ಕಾಣುವುದಿಲ್ಲ.

ಅಸ್ಯತಃ ಕರ್ಣಿನಾಲೀಕಾನ್ ಮಾರ್ಗಣಾನ್ ಹೃದಯಚ್ಛಿದಃ ।
ಪ್ರತ್ಯೇತಾ ನ ಸಮಃ ಕಶ್ಚಿತ್ ವಿದ್ಯತೇ ಸವ್ಯಸಾಚಿನಾ ॥೩॥

ಕರ್ಣಿ, ನಾಲೀಕ, ಮಾರ್ಗಣ ಮೊದಲಾದ ಹೃದಯಭೇದಕವಾದ ಬಾಣಗಳನ್ನು ಪ್ರಯೋಗಿಸುವ ಅರ್ಜುನನಿಗೆ ಸಮನಾಗಿ ಎದುರಿಸುವವನು ಯಾವನೂ ಇಲ್ಲ.

ದ್ರೋಣಕರ್ಣೌ ಪ್ರತೀಯಾತಾಂ ಯದಿ ವೀರೌ ನರರ್ಷಭೌ ।
ಕೃತಾಸ್ತ್ರೌ ಬಲಿನಾಂ ಶ್ರೇಷ್ಠೌ ಸಮರೇಷ್ವಪರಾಜಿತೌ ॥೪॥

ವೀರರೂ, ಪುರುಷಶ್ರೇಷ್ಠರೂ ಆದ ದ್ರೋಣ ಮತ್ತು ಕರ್ಣರು ಅವನನ್ನು ಎದುರಿಸಬಹುದು. ಅವರಿಬ್ಬರೂ ಬಲಿಷ್ಠರಲ್ಲಿ ಶ್ರೇಷ್ಠರೂ, ಯುದ್ಧಗಳಲ್ಲಿ ಅಪರಾಜಿತರೂ ಮತ್ತು ಒಳ್ಳೆಯ ಅಸ್ತ್ರಗಳನ್ನು ಪಡೆದವರು.

ಉಭಾಭ್ಯಾಂ ಸಂಶಯೋ ಲೋಕೇ ನ ತ್ವಸ್ತಿ ವಿಜಯಾರ್ಜನಃ ।
ಮಾನೀ ಕರ್ಣಃ ಪ್ರಮಾದೀ ಚ ಆಚಾರ್ಯಃ ಸ್ಥವಿರೋ ಗುರುಃ ॥೫॥

ಇಬ್ಬರೂ ಸೇರಿ ಒಟ್ಟಿಗೆ ಅರ್ಜುನನನ್ನು ಎದುರಿಸಿದರೂ ಜಯದ ವಿಷಯದಲ್ಲಿ ಲೋಕದಲ್ಲಿ ಸಂಶಯವುಂಟಾಗುತ್ತದೆ. ಅರ್ಜುನನನ್ನು ಮರ್ದಿಸುವವನು ಯಾವನೂ ಇಲ್ಲ. ಕರ್ಣನು ಅಹಂಕಾರಿ ಮತ್ತು ವಿಸ್ಮರಣಶೀಲ. ದ್ರೋಣಾಚಾರ್ಯರು ವೃದ್ಧರು ಮತ್ತು ಗುರುಗಳು.

ಸಮರ್ಥೋ ಬಲವಾನ್ ಪಾರ್ಥೋ ದೃಢಧನ್ವಾ ಜಿತಕ್ಲಮಃ ।
ಭವೇತ್ ಸುತುಮುಲಂ ಯುದ್ಧಂ ಸರ್ವಶೋಽಪ್ಯಪರಾಜಯಃ ॥೬॥

ಅರ್ಜುನನಾದರೂ ಸಮರ್ಥನಾಗಿದ್ದಾನೆ, ಬಲಿಷ್ಠನಾಗಿದ್ದಾನೆ, ದೃಢವಾದ ಧನುಸ್ಸನ್ನು ಹೊಂದಿದವನು ಮತ್ತು ದಣಿವಿಲ್ಲದವನೂ ಆಗಿದ್ದಾನೆ. ಘೋರವಾದ ಯುದ್ಧವು ನಡೆದೀತು. ಯಾವ ರೀತಿಯಿಂದಲೂ ಅರ್ಜುನನಿಗೆ ಪರಾಜಯ ಉಂಟಾಗಲಾರದು.

ಸರ್ವೇ ಹ್ಯಸ್ತ್ರವಿದಃ ಶೂರಾಃ ಸರ್ವೇ ಪ್ರಾಪ್ತಾ ಮಹದ್ಯಶಃ ।
ಅಪಿ ಸರ್ವಾಮರೈಶ್ವರ್ಯಂ ತ್ಯಜೇಯುರ್ನ ಪುನರ್ಜಯಮ್ ॥೭॥

ಎಲ್ಲರೂ ಅಸ್ತ್ರವೇತ್ತರು, ಎಲ್ಲರೂ ಶೂರರು, ಎಲ್ಲರೂ ಮಹಾಕೀರ್ತಿಯನ್ನು ಪಡೆದವರು. ದೇವತೆಗಳ ಐಶ್ವರ್ಯವನ್ನಾದರೂ ಬಿಟ್ಟಾರು, ಆದರೆ (ಪಾಂಡವರು ಜಯವನ್ನು ತೊರೆಯುವವರಲ್ಲ).

ವಧೇ ನೂನಂ ಭವೇಚ್ಛಾಂತಿಃ ತಯೋರ್ವಾ ಫಲ್ಗುನಸ್ಯ ವಾ ।
ನ ತು ಜೇತಾऽರ್ಜುನಸ್ಯಾಸ್ತಿ ಹಂತಾ ಚಾಸ್ಯ ನ ವಿದ್ಯತೇ ॥೮॥

ದ್ರೋಣ, ಕರ್ಣ ಇವರಿಬ್ಬರ ಅಥವಾ ಅರ್ಜುನನ ವಧೆ ಉಂಟಾದರೆ ಶಾಂತಿಯಾದೀತು. ಆದರೆ ಅರ್ಜುನನನ್ನು ಜಯಿಸುವವನೂ ಯಾವನೂ ಇಲ್ಲ, ಅವನನ್ನು ಕೊಲ್ಲುವವನೂ ಇಲ್ಲ.

ಮನ್ಯುಸ್ತಸ್ಯ ಕಥಂ ಶಾಮ್ಯೇನ್ಮಂದಾನ್ ಪ್ರತಿ ಯ ಉತ್ಥಿತಃ ॥೯॥
ತಚ್ಚ ಮಂದಾ ನ ಜಾನಂತಿ ದುರ್ಯೋಧನವಶಾನುಗಾಃ ॥೧೦॥

ಮಂದರಾದ ನನ್ನ ಪುತ್ರರ ಮೇಲೆ ಅವನಿಗೆ ಉಂಟಾಗಿರುವ ಕೋಪವು ಹೇಗೆ ಶಾಂತವಾದೀತು? ಮಂದರಾದ ನನ್ನ ಪುತ್ರರು ದುರ್ಯೋಧನನ ವಶವರ್ತಿಗಳಾಗಿ ಅದನ್ನು ತಿಳಿಯುತ್ತಿಲ್ಲ.

ಶೇಷಯೇದಶನಿರ್ದೀಪ್ತೋ ನಿಷ್ಪತನ್ ಮೂರ್ಧ್ನಿ ಸಂಜಯ ।
ನ ತು ಶೇಷಂ ಶರಾಸ್ತಾತ ಕುರ್ಯುರಸ್ತಾಃ ಕಿರೀಟಿನಾ ॥೧೧॥

ಸಂಜಯನೇ, ತಲೆಯ ಮೇಲೆ ಬಿದ್ದ ಸಿಡಿಲು ಪ್ರಾಣವನ್ನು ಉಳಿಸಬಹುದು. ಆದರೆ ಅರ್ಜುನನಿಂದ ಪ್ರಯೋಗಿಸಲ್ಪಟ್ಟ ಬಾಣಗಳು ಯಾರನ್ನೂ ಉಳಿಸುವುದಿಲ್ಲ.

ಅನ್ಯೇऽಪ್ಯಸ್ತ್ರಾಣಿ ಜಾನಂತಿ ಜೇಯಂತೇ ಚ ಜಯಂತಿ ಚ ।
ಏಕಾಂತವಿಜಯಸ್ತ್ವೇವ ಶ್ರೂಯತೇ ಫಲ್ಗುನಸ್ಯ ಹ ॥೧೨॥

ಬೇರೆಯವರೂ ಅಸ್ತ್ರಗಳನ್ನು ತಿಳಿದಿದ್ದಾರೆ, ಜಯವನ್ನೂ ಹೊಂದುತ್ತಾರೆ ಮತ್ತು ಪರಾಜಯವನ್ನೂ ಹೊಂದುತ್ತಾರೆ. ಅರ್ಜುನನು ಮಾತ್ರ ಯಾವಾಗಲೂ ಜಯವನ್ನು ಹೊಂದುವವನು ಎಂದೇ ಕೇಳಿಬರುತ್ತದೆ.

ಯಸ್ಯ ಯಂತಾ ಹೃಷೀಕೇಶಃ ಶೀಲವೃತ್ತಸಮೋ ಯುಧಿ ।
ಧ್ರುವಸ್ತಸ್ಯ ಜಯಸ್ತಾತ ಯಥೇಂದ್ರಸ್ಯ ಜಯಸ್ತಥಾ ॥೧೩॥

ಎಲೈ ಪ್ರೀತಿಪಾತ್ರನೇ, ಯಾವನಿಗೆ ತನ್ನ ಶೀಲವೃತ್ತಿಗಳಿಂದ ಸಮಾನನಾದ ಕೃಷ್ಣನು ಯುದ್ಧದಲ್ಲಿ ಸಾರಥಿಯಾಗುತ್ತಾನೆಯೋ ಅವನಿಗೆ ಇಂದ್ರನಿಗೆ ಜಯವು ನಿಶ್ಚಿತವಾದಂತೆ ಜಯವು ನಿಶ್ಚಿತವಾದುದು.

ಕೃಷ್ಣಾವೇಕರಥೇ ಯತ್ತಾವಧಿಜ್ಯಂ ಗಾಂಡಿವಂ ಧನುಃ ।
ಯುಗಪತ್ ತ್ರೀಣಿ ತೇಜಾಂಸಿ ಸಮೇತಾನ್ಯನುಶುಶ್ರುಮ ॥೧೪॥

ನೈವಾಸ್ತಿ ನೋ ಧನುಸ್ತಾದೃಙ್ ನ ಯೋದ್ಧಾ ನ ಚ ಸಾರಥಿಃ ॥೧೫॥

ಒಂದೇ ರಥದಲ್ಲಿ ಕುಳಿತ ಪ್ರಯತ್ನಶೀಲರಾದ ಕೃಷ್ಣಾರ್ಜುನರು ಮತ್ತು ಹೆದೆ ಏರಿಸಿದ ಗಾಂಡೀವ ಧನುಸ್ಸು, ಈ ಮೂರುತೇಜಸ್ಸುಗಳು ಒಂದುಗೂಡಿವೆ ಎಂದು ನಾವು ಕೇಳುತ್ತೇವೆ. ನಮಗಾದರೂ ಅಂತಹ ಧನುಸ್ಸಾಗಲೀ, ಅಂತಹ ಯೋಧನಾಗಲೀ, ಅಂತಹ ಸಾರಥಿಯಾಗಲೀ ಇಲ್ಲ.

ಅಪಿ ಚಾಸ್ಯನ್ನಿವಾಭಾತಿ ವಿನಿಘ್ನನ್ನಿವ ಫಲ್ಗುನಃ ।
ಉದ್ಧರನ್ನಿವ ಕಾಯೇಭ್ಯಃ ಶಿರಾಂಸಿ ಶರವೃಷ್ಟಿಭಿಃ ॥೧೬॥

ಅರ್ಜುನನು ಬಾಣಗಳನ್ನು ಪ್ರಯೋಗಿಸುತ್ತಿರುವವನಂತೆ, ಶತ್ರುಗಳನ್ನು ಕೊಲ್ಲುತ್ತಿರುವವನಂತೆ, ಬಾಣಗಳ ಮಳೆಯಿಂದ ಶತ್ರುಗಳ ದೇಹದಿಂದ ಶಿರಸ್ಸನ್ನು ಉರುಳಿಸುವವನಂತೆ ಕಾಣುತ್ತಿದ್ದಾನೆ.

ಅಪಿ ಬಾಣಮಯಂ ತೇಜಃ ಪ್ರದೀಪ್ತಮಿವ ಸರ್ವತಃ ।
ಗಾಂಡೀವೋತ್ಥಂ ದಹೇದಾಜೌ ಪುತ್ರಾಣಾಂ ಮಮ ವಾಹಿನೀಮ್ ॥

ಮತ್ತು ಗಾಂಡೀವ ಧನುಸ್ಸಿನಿಂದ ಹೊಮ್ಮಿದ, ಎಲ್ಲ ಕಡೆಯಲ್ಲಿಯೂ ಜ್ವಲಿಸುವ ಬಾಣಮಯವಾದ ತೇಜಸ್ಸು ಯುದ್ಧದಲ್ಲಿ ನನ್ನ ಪುತ್ರರ ಸೈನ್ಯವನ್ನು ದಹಿಸೀತು.

ಅಪಿ ಸಾ ರಥಘೋಷೇಣ ಭಯಾರ್ತಾ ಸವ್ಯಸಾಚಿನಃ ।
ವಿತ್ರಸ್ತಾ ಬಹುಲಾ ಸೇನಾ ಭಾರತೀ ಪ್ರತಿಭಾತಿ ಮೇ ॥೧೮॥

ಮತ್ತು ಅರ್ಜುನನ ರಥದ ಘೋಷದಿಂದ ನಮ್ಮ ದೊಡ್ಡ ಭಾರತಸೈನ್ಯವು ಭಯದಿಂದ ಪೀಡಿತವಾಗಿ ನಡುಗುತ್ತಿರುವಂತೆ ನನಗೆ ಕಾಣುತ್ತಿದೆ.

ಯಥಾ ಕಕ್ಷಂ ಮಹಾನಗ್ನಿಃ ಪ್ರವೃದ್ಧಃ ಸರ್ವತಶ್ಚರನ್ ।
ಮಹಾರ್ಚಿರನಿಲೋದ್ಧೂತಃ ತದ್ವದ್ ಧಕ್ಷ್ಯತಿ ಮಾಮಕಾನ್ ॥೧೯॥

ದೊಡ್ಡ ಅಗ್ನಿಯು ಅಭಿವೃದ್ಧಿಯನ್ನು ಹೊಂದಿ, ಎಲ್ಲ ಕಡೆಯಲ್ಲಿಯೂ ತಿರುಗುತ್ತಾ ದೊಡ್ಡ ಜ್ವಾಲೆಗಳಿಂದ ಕೂಡಿ ವಾಯುವಿನಿಂದ ವೃದ್ಧಿಯನ್ನು ಹೊಂದಿ ಹುಲ್ಲುಗಾವಲನ್ನು ಸುಡುವಂತೆ ಅರ್ಜುನನು ನನ್ನವರನ್ನು ಸುಡುವನು.

ಯತೋಽಬ್ರವೀತ್ ನಿಶಿತಾನ್ ಬಾಣಸಂಘಾನ್
ಯದಾऽऽತತಾಯೀ ಸಮರೇ ಸವ್ಯಸಾಚೀ ।
ಸೃಷ್ಟೋऽಂತಕಃ ಸರ್ವಹರೋ ವಿಧಾತ್ರಾ
ಯಥಾ ಭವೇತ್ ತದ್ವದವಾರಣೀಯಃ ॥೨೦॥

ಸವ್ಯಸಾಚಿಯು ಯುದ್ಧದಲ್ಲಿ ಶಸ್ತ್ರಧಾರಿಯಾಗಿ ಹರಿತವಾದ ಬಾಣಸಮೂಹವನ್ನು ಪ್ರಯೋಗಿಸುವಾಗ ಜನರು ಯಮನು ಹೇಗೆ ನಿವಾರಿಸಲ್ಪಡಲು ಸಾಧ್ಯವಿಲ್ಲವೋ ಅದರಂತೆ ನಿವಾರಿಸಲು ಸಾಧ್ಯವಿಲ್ಲದ ಸರ್ವಪ್ರಾಣಹರನಾಗಿ ಅರ್ಜುನನು ಬ್ರಹ್ಮನಿಂದ ಸೃಷ್ಟಿಸಲ್ಪಟ್ಟಿದ್ದಾನೆ ಎಂದು ಮಾತನಾಡಿದುದರಿಂದ ಅರ್ಜುನನನ್ನು ತಡೆಯುವವರು ನನ್ನ ಸೈನ್ಯದಲ್ಲಿ ಯಾರೂ ಇಲ್ಲ.

ಯದಾ ಹ್ಯಭೀಕ್ಷ್ಣಂ ಸುಬಹೂನ್ ಪ್ರಣಾದಾನ್
ಶ್ರೋತಾಸ್ಮಿ ತಾನಾವಸಥೇ ಕುರೂಣಾಮ್ ।
ತೇಷಾಂ ಸಮಂತಾಚ್ಚ ತಥಾ ರಣಾಗ್ರೇ
ಕ್ಷಯಃ ಕಿಲಾಯಂ ಭರತಾನುಪೈತಿ ॥೨೧॥

ಯಾವಾಗ ನಾನು ಕುರುಗಳ ನಿವಾಸದಲ್ಲಿ ಸತತವಾಗಿ ಅನೇಕ ವಿಧವಾದ ಪ್ರಣಾದಗಳನ್ನು ಕೇಳುವೆನೋ ಆಗ ಶ್ರೇಷ್ಠವಾದ ಯುದ್ಧದಲ್ಲಿ ಎಲ್ಲ ಕಡೆಗಳಲ್ಲಿಯೂ ಭರತರಿಗೆ ಈ ವಿನಾಶವು ಉಂಟಾಗುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಚತುಃಪಂಚಾಶೋಽಧ್ಯಾಯಃ ॥

॥ ವ್ಯಾಸಾಭಿಗಮನಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಐವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೈದನೆಯ ಅಧ್ಯಾಯ

ಪಾಂಡವರ ಸೈನ್ಯದ ಪ್ರಾಬಲ್ಯವನ್ನು ಚಿಂತಿಸಿ ಧೃತರಾಷ್ಟ್ರನ ಶೋಕ.

ಧೃತರಾಷ್ಟ್ರಃ

ಯಥೈವ ಪಾಂಡವಾಃ ಸರ್ವೇ ಪರಾಕ್ರಾಂತಾ ಜಿಗೀಷವಃ ।
ತಥೈವಾಭಿಸರಾಸ್ತೇಷಾಂ ತ್ಯಕ್ತಾತ್ಮಾನೋ ಜಯೇ ಧೃತಾಃ ॥೧॥

ಧೃತರಾಷ್ಟ್ರ– ಹೇಗೆ ಪಾಂಡವರೆಲ್ಲರೂ ಜಯಿಸುವ ಇಚ್ಛೆಯುಳ್ಳವರಾಗಿ ಪರಾಕ್ರಮವನ್ನು ಮಾಡುವವರೋ, ಅದರಂತೆ ಅವರ ಭಟರೂ ಸಹ ಪ್ರಾಣವನ್ನಾದರೂ ಬಿಟ್ಟು ಜಯವನ್ನು ಸಾಧಿಸುವುದರಲ್ಲಿ ನಿರತರಾಗಿದ್ದಾರೆ.

ತ್ವಮೇವ ಹಿ ಪರಾಕ್ರಾಂತಾನ್
ಆಚಕ್ಷೀಥಾಃ ಪರಾನ್ ಮಮ ।
ಪಾಂಚಾಲಾನ್ ಕೇಕಯಾನ್
ಮತ್ಸ್ಯಾನ್ ಮಗಧಾನ್ ವತ್ಸಭೂಮಿಪಾನ್ ॥೨॥

ಪಾಂಚಾಲರು, ಕೇಕಯರು, ಮತ್ಸ್ಯರು, ಮಗಧರು ಮತ್ತು ವತ್ಸದೇಶದ ಸೈನಿಕರು ಎಲ್ಲರೂ ಪರಾಕ್ರಮಶಾಲಿಗಳಾಗಿ ಉದ್ಯುಕ್ತರಾಗಿದ್ದಾರೆ ಎಂದು ನೀನೇ ನನಗೆ ತಿಳಿಸಿದ್ದೀಯೆ.

ಯಶ್ಚ ಸೇಂದ್ರಾನಿಮಾನ್ ಲೋಕಾನ್
ಇಚ್ಛನ್ ಕುರ್ಯಾದ್ ವಶೇ ಬಲೀ ।
ಸ ಕೃಷ್ಣೋ ಜಗತಃ ಸ್ರಷ್ಟಾ
ಪಾಂಡವಾನಾಂ ಜಯೇ ಧೃತಃ ॥೩॥

ಯಾವನು ಇಂದ್ರಸಹಿತನಾದ ಮೂರುಲೋಕಗಳನ್ನು ಕೇವಲ ತನ್ನ ಇಚ್ಛೆಯಿಂದಲೇ ವಶಪಡಿಸಿಕೊಳ್ಳುವನೋ, ಅಂತಹ ಬಲಿಷ್ಠನೂ, ಜಗತ್ತಿನ ಸೃಷ್ಟಿಕರ್ತನೂ ಆದ ಕೃಷ್ಣನು ಪಾಂಡವರ ಜಯದಲ್ಲಿ ತಾತ್ಪರ್ಯವುಳ್ಳವನಾಗಿದ್ದಾನೆ.

ಸಮಸ್ತಾಮರ್ಜುನಾದ್ ವಿದ್ಯಾಂ ಸಾತ್ಯಕಿಃ ಕ್ಷಿಪ್ರಮಾಪ್ತವಾನ್ ।
ಶೈನೇಯಃ ಸಮರೇ ಸ್ಥಾತಾ ಬೀಜವತ್ ಪ್ರವಪನ್ ಶರಾನ್ ॥೪॥

ಸಾತ್ಯಕಿಯು ಅರ್ಜುನನಿಂದ ಸಮಗ್ರವಾದ ಅಸ್ತ್ರವಿದ್ಯೆಯನ್ನು ಶೀಘ್ರವಾಗಿ ಕಲಿತಿದ್ದಾನೆ. ಶಿನಿಯ ಪುತ್ರನಾದ ಅವನು ಯುದ್ಧದಲ್ಲಿ ಬೀಜಗಳಂತೆ ಬಾಣಗಳನ್ನು ಚೆಲ್ಲುತ್ತಾ ಸ್ಥಿರವಾಗಿ ನಿಲ್ಲುವವನು.

ಧೃಷ್ಟದ್ಯುಮ್ನಶ್ಚ ಪಾಂಚಾಲ್ಯಃ ಕ್ರೂರಕರ್ಮಾ ಮಹಾರಥಃ ।
ಮಾಮಕೇಷು ರಣಂ ಕರ್ತಾ ಬಲೇಷು ಪರಮಾಸ್ತ್ರವಿತ್ ॥೫॥

ಪಾಂಚಾಲದೇಶದ ಧೃಷ್ಟದ್ಯುಮ್ನನೂ ಕೂಡ ಕ್ರೂರಕರ್ಮವುಳ್ಳವನು ಮತ್ತು ಮಹಾರಥನಾದವನು. ಪರಮಾಸ್ತ್ರವೇತ್ತನಾದ ಅವನು ನನ್ನ ಸೈನ್ಯದ ಜೊತೆಯಲ್ಲಿ ಯುದ್ಧವನ್ನು ಮಾಡುವನು.

ಯುಧಿಷ್ಠಿರಸ್ಯ ಚ ಕ್ರೋಧಾದ್ ಅರ್ಜುನಸ್ಯ ಚ ವಿಕ್ರಮಾತ್ ।
ಯಮಾಭ್ಯಾಂ ಭೀಮಸೇನಾಚ್ಚ ಭಯಂ ಮೇ ತಾತ ಜಾಯತೇ ॥೬॥

ಎಲೈ ಪ್ರೀತಿಪಾತ್ರನೇ, ಯುಧಿಷ್ಠಿರನ ಕ್ರೋಧದಿಂದ, ಅರ್ಜುನನ ಪರಾಕ್ರಮದಿಂದ ಹಾಗೆಯೇ ನಕುಲ-ಸಹದೇವರಿಂದ ಮತ್ತು ಭೀಮನಿಂದ ನನಗೆ ಬಹಳ ಹೆದರಿಕೆ ಉಂಟಾಗುತ್ತಿದೆ.

ಅಮಾನುಷಂ ಮನುಷ್ಯೇಂದ್ರೈರ್ಜಾಲಂ ವಿತತಮಂತರಾ ।
ನ ಮೇ ಸೈನ್ಯಾಸ್ತರಿಷ್ಯಂತಿ ತತಃ ಕ್ರೋಶಾಮಿ ಸಂಜಯ ॥೭॥

ಮನುಷ್ಯಶ್ರೇಷ್ಠರಾದ ಅವರು (ಪಾಂಡವರು) ಅಮಾನುಷವಾದ, ವಿಸ್ತಾರವಾದ ಬಲೆಯನ್ನು ಮಧ್ಯದಲ್ಲಿ ಬೀಸಿದ್ದಾರೆ. ನನ್ನ ಸೈನ್ಯಗಳು ಆ ಬಲೆಯನ್ನು ದಾಟುವುದಿಲ್ಲ. ಸಂಜಯನೇ, ಆದ್ದರಿಂದ ವಿಲಾಪವನ್ನು ಮಾಡುತ್ತಿದ್ದೇನೆ.

ದರ್ಶನೀಯೋ ಮನಸ್ವೀ ಚ ಲಕ್ಷ್ಮೀವಾನ್ ಬ್ರಹ್ಮವರ್ಚಸೀ ।
ಮೇಧಾವೀ ಸುಕೃತಪ್ರಜ್ಞೋ ಧರ್ಮಾತ್ಮಾ ಪಾಂಡುನಂದನಃ ॥೮॥

ಪಾಂಡುಪುತ್ರನಾದ ಯುಧಿಷ್ಠಿರನು ಸುಂದರನೂ, ಧೈರ್ಯಶಾಲಿಯೂ, ಕಾಂತಿಯುಕ್ತನೂ, ಬ್ರಹ್ಮವರ್ಚಸ್ವಿಯೂ, ಮೇಧಾವಿಯೂ, ಒಳ್ಳೆಯ ಪ್ರಜ್ಞೆಯುಳ್ಳವನೂ ಮತ್ತು ಧರ್ಮಾತ್ಮನೂ ಆಗಿದ್ದಾನೆ.

ನ ತು ನಃ ಕ್ಲಿಶ್ಯಮಾನಾನಾಮುಪೇಕ್ಷೇತ ಯುಧಿಷ್ಠಿರಃ ।
ಜುಗುಪ್ಸತಿ ಹ್ಯಧರ್ಮೇಣ ಮಾಮೇವೋದ್ದಿಶ್ಯ ಕಾರಣಮ್ ॥೯॥

ಯುಧಿಷ್ಠಿರನು ಸಂಕಟಕ್ಕೆ ಸಿಲುಕಿರುವ ನಮ್ಮನ್ನು ಉದಾಸೀನ ಮಾಡುವುದಿಲ್ಲ. ಅವನು ಅಧರ್ಮವನ್ನು ಮಾಡುವುದಕ್ಕೆ ಹೇಸುತ್ತಾನೆ ಮತ್ತು ಇಷ್ಟು ಸಂಕಟಗಳಿಗೆ ನಾನು ಮಾಡಿದ ಅಧರ್ಮವೇ ಕಾರಣವೆಂದು ಅವನು ತಿಳಿದಿದ್ದಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪಂಚಪಂಚಾಶೋऽಧ್ಯಾಯಃ ॥

॥ ವ್ಯಾಸಾಭಿಗಮನಪರ್ವಣಿ ಅಷ್ಟಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಐವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ಸ ಆಗತ್ಯಾವದತ್ ತತ್ವಂ ವಿಷ್ಣೋರ್ಮಾಯಾವಿನಃ ಶುಭಾ ।
ನ ಗತಿಶ್ಚೇತ್ಯಥ ಪ್ರಾತಃ ಸಂಜಯಃ ಪಾಂಡವೋದಿತಮ್ ।
ಅವದದ್ ಧೃತರಾಷ್ಟ್ರಾಯ ಸಭಾಯಾಂ ಕುರುಸನ್ನಿಧೌ ॥೪೫॥

ಸನತ್ಕುಮಾರ ಬಂದು ವಿಷ್ಣುವಿನ ಸ್ವರೂಪವನ್ನು ಉಪದೇಶಿಸಿದ. ಕಪಟಿಗೆ ಸದ್ಗತಿ ಇಲ್ಲವೆಂದೂ ಹೇಳಿದ. ಮರುದಿನ ಬೆಳಿಗ್ಗೆ ಸಭೆಯಲ್ಲಿ ಕೌರವರ ಉಪಸ್ಥಿತಿಯಲ್ಲಿ ಸಂಜಯನು ಧೃತರಾಷ್ಟ್ರನಿಗೆ ಧರ್ಮರಾಜನ ಸಂದೇಶವನ್ನು ತಿಳಿಸಿದ.

ತಚ್ಚುತ್ವಾ ಸ ತು ಭೀತೋಽಪಿ ಪುತ್ರಸ್ನೇಹಾನುಗೋ ನೃಪಃ ।
ರಾಜ್ಯಂ ನಾದಾತ್ ಪಾಂಡವಾನಾಂ ತತೋ ಧರ್ಮಸುತೋ ನೃಪಃ ॥

ಅದನ್ನು ಕೇಳಿದ ಧೃತರಾಷ್ಟ್ರ ಭೀತನಾದರೂ ಪುತ್ರಮೋಹಕ್ಕೆ ವಶನಾಗಿ ಪಾಂಡವರಿಗೆ ರಾಜ್ಯ ಕೊಡಲಿಲ್ಲ.

★ ★ ★ ★ ★

ಐವತ್ತಾರನೆಯ ಅಧ್ಯಾಯ

ಸಂಜಯನಿಂದ ನೇರವಾಗಿ ಧೃತರಾಷ್ಟ್ರನ ನಿಂದನೆ.

ಸಂಜಯಃ

ಏವಮೇತನ್ಮಹಾರಾಜ ಯಥಾ ವದಸಿ ಭಾರತ ।
ಯುದ್ಧೇ ವಿನಾಶಃ ಕ್ಷತ್ರಸ್ಯ ಗಾಂಡೀವೇನ ಪ್ರದೃಶ್ಯತೇ ॥೧॥

ಸಂಜಯ– ಎಲೈ ಮಹಾರಾಜನೇ, ಎಲೈ ಭಾರತನೇ, ನೀನು ಹೇಳುವಂತೆ ಎಲ್ಲವೂ ಸರಿ. ಯುದ್ಧದಲ್ಲಿ ಗಾಂಡೀವ ಧನುಸ್ಸಿನಿಂದ ಶತ್ರುಗಳ ವಿನಾಶವು ಕಂಡುಬರುತ್ತಿದೆ.

ಇದಂ ತು ನಾಭಿಜಾನಾಮಿ ತವ ಧೀರಸ್ಯ ಧೀಮತಃ ।
ಯತ್ ಪುತ್ರವಶಮಾಗಚ್ಛೇಃ ತತ್ವಜ್ಞಃ ಸವ್ಯಸಾಚಿನಃ ॥೨॥

ಧೀರನೂ, ಮೇಧಾವಿಯೂ ಆದ ನೀನು ಅರ್ಜುನನ ಸಾಮರ್ಥ್ಯವನ್ನು ತಿಳಿದರೂ ಕೂಡ ಮಗನ ವಶವರ್ತಿಯಾಗಿದ್ದೀಯೆ ಎಂಬುದು ನನಗೆ ಅರ್ಥವಾಗುತ್ತಿಲ್ಲ.

ನೈಷ ಕಾಲೋ ಮಹಾರಾಜ ತವ ಶಶ್ವತ್ ಕೃತಾಗಸಃ ।
ತ್ವಯಾ ಹ್ಯೇಪಾದಿತಃ ಪಾರ್ಥಾ ನಿಕೃತಾ ಭರತರ್ಷಭ ॥೩॥

ಮಹಾರಾಜನೇ, ಯಾವಾಗಲೂ ಅಪರಾಧವನ್ನು ಮಾಡಿದ ನಿನಗೆ ಇದು ಒಳ್ಳೆಯ ಕಾಲವಲ್ಲ. ಭರತರ್ಷಭನೇ, ನೀನು ಮೊದಲಿನಿಂದಲೂ ಪಾಂಡವರಿಗೆ ಅಪಚಾರವನ್ನು ಮಾಡಿದ್ದೀಯೆ.

ಸ್ವೀಕೃತಾಸ್ತೈರ್ಜನಪದಾಃ ಕುರವಸ್ತೇ ಸಜಾಂಗಲಾಃ ।
ಕಥಂ ವೀರೈರ್ಜಿತಾಂ ಭೂಮಿಮಖಿಲಾಂ ಪ್ರತಿಪದ್ಯಥಾಃ ॥೪॥

ವೀರರಾದ ಅವರು ಕುರುಜಾಂಗಲದೇಶಗಳನ್ನು ಜಯಿಸಿದರು. ಅವರು ಜಯಿಸಿದ ಭೂಮಿಯನ್ನು ಸಮಗ್ರವಾಗಿ ನೀನು ಹೇಗೆ ಪಡೆದೆ?

ಪಿತಾ ಶ್ರೇಷ್ಠಃ ಸುಹೃದ್ ಯಶ್ಚ ಸಮ್ಯಕ್ ಪ್ರಣಿಹಿತಾತ್ಮವಾನ್ ।
ಆಸ್ಥೇಯಂ ಹಿ ಹಿತಂ ತೇನ ನ ದ್ರೋಗ್ಧಾ ಗುರುರುಚ್ಯತೇ ॥೫॥

ಯಾವನು ಸಮಾಧಾನವುಳ್ಳ ಚಿತ್ತವುಳ್ಳವನೋ ಅಂತಹ ತಂದೆಯು ಉತ್ತಮನಾದ ಸುಹೃದ್ ಎನಿಸುತ್ತಾನೆ. ಅಂತಹವನು ಆಶ್ರಿತರಿಗೆ ಹಿತವನ್ನೇ ಮಾಡಬೇಕು. ದ್ರೋಹವನ್ನು ಮಾಡುವವನು ಗುರುವೆಂದು (ಹಿರಿಯನೆಂದು) ಕರೆಸಿಕೊಳ್ಳುವುದಿಲ್ಲ.

ಇದಂ ಜಿತಮಿದಂ ಲಬ್ಧಮಿತಿ ಶ್ರುತ್ವಾ ಪರಾಜಿತಾನ್ ।
ದ್ಯೂತಕಾಲೇ ಮಹಾರಾಜ ಸ್ಮಯಸೇ ಸ್ಮ ಕುಮಾರವತ್ ॥೬॥

ಮಹಾರಾಜನೇ, ದ್ಯೂತಕಾಲದಲ್ಲಿ ಪಾಂಡವರು ಪರಾಜಿತರಾಗುತ್ತಿರುವುದನ್ನು ಕೇಳಿ ಇದನ್ನು ಗೆದ್ದೆ, ಇದನ್ನು ಪಡೆದೆ ಎಂದು ಬಾಲಕನಂತೆ ನೀನು ನಗುತ್ತಿದ್ದೆ.

ಪರುಷಾಣ್ಯುಚ್ಯಮಾನಾಂಶ್ಚ ಪುರಾ ಪಾರ್ಥಾನುಪೇಕ್ಷಸೇ ।
ಕೃತ್ಸ್ನಂ ರಾಜ್ಯಂ ಜಯಂತೀತಿ ಪ್ರಪಾತಂ ನಾನುಪಶ್ಯಸಿ ॥೭॥

ಅವರಿಗೆ ಉಗ್ರವಾದ ಮಾತುಗಳನ್ನು ಆಡಿದರೂ ನೀನು ಹಿಂದೆ ಅದನ್ನು ಉಪೇಕ್ಷೆ ಮಾಡಿದೆ. ಎಲ್ಲ ರಾಜ್ಯವನ್ನೂ ಗೆಲ್ಲುತ್ತಾರೆ ಎಂಬ ಭಾವನೆಯಿಂದ ಮುಂದಿರುವ ಪ್ರಪಾತವನ್ನು ಗಮನಿಸುತ್ತಿಲ್ಲ.

ಪಿತ್ರ್ಯಂ ರಾಜ್ಯಂ ಮಹಾರಾಜ ಕುರವಸ್ತೇ ಸಜಾಂಗಲಾಃ ।
ಕಥಂ ವೀರಾರ್ಜಿತಾಮುರ್ವೀಮಖಿಲಾಂ ಪ್ರತಿಪದ್ಯಥಾಃ ॥೮॥

ಮಹಾರಾಜನೇ, ಕುರು ಮತ್ತು ಜಾಂಗಲ ಪ್ರದೇಶಗಳು ಪಿತ್ರಾರ್ಜಿತವಾದ ರಾಜ್ಯ. ವೀರರಾದ ಅವರು ಸಂಪಾದಿಸಿದ ಆ ಎಲ್ಲಾ ಭೂಮಿಯನ್ನು ನೀನೊಬ್ಬನೇ ಹೇಗೆ ಪಡೆದೆ?

ಬಾಹುವೀರ್ಯ್ಯಾರ್ಜಿತಾ ಭೂಮಿಸ್ತವ ಪಾರ್ಥೈರ್ನಿವೇದಿತಾ ।
ಮಯೇದಂ ಕೃತಮಿತ್ಯೇವ ಮನ್ಯಸೇ ರಾಜಸತ್ತಮ ॥೯॥

ಎಲೈ ರಾಜಶ್ರೇಷ್ಠನೇ, ಪಾಂಡವರು ತಮ್ಮ ಬಾಹುಬಲದಿಂದ ಭೂಮಿಯನ್ನು ಗೆದ್ದು ನಿನಗೆ ನಿವೇದಿಸಿದರು. ನೀನು ನಾನೇ ಭೂಮಿಯನ್ನು ಸಂಪಾದಿಸಿದೆ ಎಂದು ತಿಳಿದಿದ್ದೀಯೆ.

ಗ್ರಸ್ತಾನ್ ಗಂಧರ್ವರಾಜೇನ ಮಜ್ಜತೋ ಹ್ಯಪ್ಲವೇऽಂಭಸಿ ।
ಆನಿನಾಯ ಪುನಃ ಪಾರ್ಥಃ ಪುತ್ರಾಂಸ್ತೇ ರಾಜಸತ್ತಮ ॥೧೦॥

ಎಲೈ ರಾಜಶ್ರೇಷ್ಠನೇ, ಗಂಧರ್ವರಾಜನಾದ ಚಿತ್ರಸೇನನಿಗೆ ಸಿಲುಕಿ ನಾವೆಯಿಲ್ಲದ ನೀರಿನಲ್ಲಿ ಮುಳುಗುತ್ತಿದ್ದ ನಿನ್ನ ಪುತ್ರರನ್ನು ಅರ್ಜುನನು ಪುನಃ ಕರೆತಂದನು.

ಕುಮಾರವಚ್ಚ ಸ್ಮಯಸೇ ಋತೇ ವಿನಿಕೃತೇಷು ಯತ್ ।
ಪಾಂಡವೇಷು ವನೇ ರಾಜನ್ ಪ್ರವ್ರಜತ್ಸು ಪುನಃ ಪುನಃ ॥೧೧॥

ಎಲೈ ರಾಜನೇ, ಸತ್ಯವನ್ನು ದೂರಮಾಡಿ, ಪಾಂಡವರಿಗೆ ಅಪಚಾರವನ್ನು ಮಾಡಿ, ಅವರು ಕಾಡಿಗೆ ಹೊರಡುವಾಗ ನೀನು ಪುನಃ ಪುನಃ ಬಾಲಕನಂತೆ ನಗುತ್ತಿದ್ದೆ.

ಪ್ರವರ್ಷತಃ ಶರವ್ರಾತಾನ್ ಅರ್ಜುನಸ್ಯ ಶಿತಾನ್ ಬಹೂನ್ ।
ಅಪ್ಯರ್ಣವಾ ವಿಶುಷ್ಯೇಯುಃ ಕಿಂ ಪುನರ್ಮಾಂಸಯೋನಯಃ ॥೧೨॥

ಅರ್ಜುನನು ಪ್ರಯೋಗಿಸುವ ಹರಿತವಾದ ಅನೇಕವಾದ ಬಾಣಸಮೂಹಗಳಿಗೆ ಸಮುದ್ರಗಳೂ ಬತ್ತಿಹೋದಾವು. ಇನ್ನು ಮಾಂಸಯೋನಿಗಳಾದ ಮನುಷ್ಯರ ಪಾಡೇನು?

ಅಸ್ಯತಾಂ ಫಲ್ಗುನಃ ಶ್ರೇಷ್ಠೋ ಗಾಂಡೀವಂ ಧನುಷಾಂ ವರಮ್ ।
ಕೇಶವಃ ಸರ್ವಭೂತಾನಾಮಾಯುಧಾನಾಂ ಸುದರ್ಶನಮ್ ॥೧೩॥

ವಾನರೋ ರೋಚಮಾನಶ್ಚ ಕೇತುಃ ಕೇತುಮತಾಂ ವರಃ ॥೧೪॥

ಬಾಣವನ್ನು ಪ್ರಯೋಗಿಸುವವರಲ್ಲಿ ಅರ್ಜುನನು ಶ್ರೇಷ್ಠನಾದವನು. ಧನುಸ್ಸುಗಳಲ್ಲಿ ಗಾಂಡೀವವು ಶ್ರೇಷ್ಠವಾದುದು. ಎಲ್ಲ ಜಡಚೇತನಗಳಲ್ಲಿ ಕೇಶವನು ಶ್ರೇಷ್ಠನಾದವನು.

ಎಲ್ಲ ಆಯುಧಗಳಲ್ಲಿ ಸುದರ್ಶನವು ಶ್ರೇಷ್ಠವಾದುದು. ಪ್ರಕಾಶಮಾನನಾದ ವಾನರನು ಧ್ವಜಗಳಲ್ಲಿ ಶ್ರೇಷ್ಠವಾದ ಧ್ವಜ.

ಏವಮೇತಾನಿ ಸ ರಥೋ ವಹನ್ ಶ್ವೇತಹಯೋ ರಣೇ ।
ಕ್ಷಪಯಿಷ್ಯತಿ ನೋ ರಾಜನ್ ಕಾಲಚಕ್ರಮಿವೋದ್ಯತಮ್ ॥೧೫॥

ಎಲೈ ರಾಜನೇ, ಇಂತಹ ಸಲಕರಣೆಗಳನ್ನು ಧರಿಸಿದ, ಶ್ವೇತಹಯಗಳನ್ನು ಹೂಡಿದ ಆ ರಥವು ಯುದ್ಧದಲ್ಲಿ ಉದ್ಯತವಾದ ಕಾಲಚಕ್ರದಂತೆ ನಮ್ಮನ್ನು ನಾಶಮಾಡುವುದು.

ತಸ್ಯಾದ್ಯ ವಸುಧಾ ರಾಜನ್ ನಿಖಿಲಾ ಭರತರ್ಷಭ ।
ಯಸ್ಯ ಭೀಮಾರ್ಜುನೌ ಯೋಧೌ ಸ ರಾಜಾ ರಾಜಸತ್ತಮಃ ॥೧೬॥

ಎಲೈ ರಾಜನೇ, ಎಲೈ ಭರತರ್ಷಭನೇ, ಯಾವನಿಗೆ ಭೀಮಾರ್ಜುನರು ಯೋಧರಾಗಿದ್ದಾರೆಯೋ ಈ ದಿನ ಈ ಭೂಮಿಯು ಅವನಿಗೇ ಸೇರಿದುದು. ಅವನೇ ಶ್ರೇಷ್ಠನಾದ ರಾಜ.

ತಥಾ ಭೀಮಹತಪ್ರಾಯಾಂ ಮಜ್ಜಂತೀಂ ತವ ವಾಹಿನೀಮ್ ।
ದುರ್ಯೋಧನಮುಖಾ ದೃಷ್ಟ್ವಾ ಕ್ಷಯಂ ಯಾಸ್ಯಂತಿ ಕೌರವಾಃ ॥೧೭॥

ಅದರಂತೆ ಭೀಮನಿಂದ ಹತಪ್ರಾಯವಾಗಿ ಮುಳುಗಿಹೋಗುತ್ತಿರುವ ನಿನ್ನ ಸೈನ್ಯವನ್ನು ನೋಡಿ ದುರ್ಯೋಧನನೇ ಮೊದಲಾದ ಕೌರವರು ವಿನಾಶವನ್ನು ಹೊಂದುವರು.

ನ ಭೀಮಾರ್ಜುನಯೋರ್ಭೀತಾ ಲಪ್ಸ್ಯಂತೇ ವಿಜಯಂ ಪ್ರಭೋ ।
ತವ ಪುತ್ರಾ ಮಹಾರಾಜ ರಾಜಾನಶ್ಚಾನುಸಾರಿಣಃ ॥೧೮॥

ಎಲೈ ಮಹಾರಾಜನೇ, ಎಲೈ ಪ್ರಭುವೇ, ನಿನ್ನ ಮಕ್ಕಳು ಮತ್ತು ಅವರನ್ನು ಅನುಸರಿಸಿರುವ ರಾಜರೂ ಸಹ ಭೀಮಾರ್ಜುನರಿಗೆ ಹೆದರಿದ್ದಾರೆ. ಪ್ರಭುವೇ, ಅವರು ವಿಜಯವನ್ನು ಹೊಂದುವುದಿಲ್ಲ.

ಮತ್ಸ್ಯಾಸ್ತ್ವಾಮದ್ಯ ನಾರ್ಚಂತಿ ಪಾಂಚಾಲಾಶ್ಚ ಸಕೇಕಯಾಃ ।
ಸಾಲ್ವೇಯಾಃ ಶೂರಸೇನಾಶ್ಚ ಸರ್ವೇ ತ್ವಾಮವಜಾನತೇ ॥೧೯॥

ಈ ದಿನ ಮತ್ಸ್ಯರೂ, ಪಾಂಚಾಲರೂ ಮತ್ತು ಕೇಕಯರೂ ನಿನ್ನನ್ನು ಗೌರವಿಸುವುದಿಲ್ಲ. ಸಾಲ್ವದೇಶದವರೂ ಮತ್ತು ಶೂರಸೇನದೇಶದವರೆಲ್ಲರೂ ನಿನಗೆ ಅವಮಾನವನ್ನು ಮಾಡುತ್ತಾರೆ.

ಪಾರ್ಥಂ ಹ್ಯೇತೇ ಗತಾಃ ಸರ್ವೇ ವೀರ್ಯಜ್ಞಾಸ್ತಸ್ಯ ಧೀಮತಃ ॥೨೦॥

ಪುತ್ರಸ್ಯ ತವ ದೋಷೇಣ ನಾನುಶೋಚಿತುಮರ್ಹಸಿ ।
ಭಕ್ತಾ ಅಪಿ ವಿರುದ್ಧ್ಯಂತೇ ತವ ಪುತ್ರೈಃ ಸದೈವ ತೇ ॥೨೧॥

ಮೇಧಾವಿಯಾದ ಅರ್ಜುನನ ಪರಾಕ್ರಮವನ್ನು ತಿಳಿದು ಅವರೆಲ್ಲರೂ ನಿನ್ನ ಮಗನ ದೋಷದಿಂದಲೂ ಸಹ ಅರ್ಜುನನ ಕಡೆಗೆ ಹೋಗಿದ್ದಾರೆ. ನೀನು ಅದಕ್ಕೆ ಶೋಕಪಡಬೇಡ. ನಿನ್ನಲ್ಲಿ ಅನುರಾಗವುಳ್ಳವರೂ ಸಹ ಯಾವಾಗಲೂ ನಿನ್ನ ಪುತ್ರವಿರೋಧವನ್ನು ಮಾಡುತ್ತಾರೆ.

ಅನರ್ಹಾನೇವ ತು ವನೇ ಧರ್ಮಯುಕ್ತಾನ್ ವಿಕರ್ಮಣಾ ।
ಯೋಽಕ್ಲೇಶಯತ್ ಪಾಂಡುಪುತ್ರಾನ್ ಯೋ ವಿದ್ವೇಷ್ಟ್ಯಧುನಾಽಪಿ ವಾ॥

ಸರ್ವೋಪಾಯೈರ್ನಿಯಂತವ್ಯಃ ಸಾನುಗಃ ಪಾಪಪೂರುಷಃ ।
ತವ ಪುತ್ರೋ ಮಹಾರಾಜ ನಾನುಶೋಚಿತುಮರ್ಹಸಿ ॥೨೩॥

ಎಲೈ ಮಹಾರಾಜನೇ, ಯಾವನು ಧರ್ಮಯುಕ್ತರಾದ ಮತ್ತು ಕ್ಲೇಶಕ್ಕೆ ಅನರ್ಹರಾದ ಪಾಂಡವರನ್ನು ಮೋಸದ ಕರ್ಮಗಳಿಂದ ಕ್ಲೇಶಗೊಳಿಸಿದನೋ, ಯಾವನು ಈಗಲೂ ಅವರನ್ನು ದ್ವೇಷಿಸುತ್ತಾನೆಯೋ ಅಂತಹ ಪಾಪಪುರುಷನಾದ ನಿನ್ನ ಪುತ್ರನನ್ನೂ ಮತ್ತು ಅವನ ಅನುಚರರನ್ನೂ ಸರ್ವೋಪಾಯಗಳಿಂದ ನಿಯಂತ್ರಿಸಬೇಕು. ನೀನು ಶೋಕಪಡಬೇಡ.

ಅಪರೋಕ್ಷಂ ಮಹಾರಾಜ ಸಾಕ್ಷಾಚ್ಚೈನಂ ಬ್ರವೀಮ್ಯಹಮ್ ।
ದ್ಯೂತಕಾಲೇ ಮಯಾ ಚೋಕ್ತಂ ವಿದುರೇಣ ಚ ಧೀಮತಾ ॥೨೪॥

ಮಹಾರಾಜನೇ, ಇದನ್ನು ನಾನು ಪ್ರತ್ಯಕ್ಷವಾಗಿ ಅವನನ್ನೇ ಉದ್ದೇಶಿಸಿ ಹೇಳುತ್ತೇನೆ. ದ್ಯೂತಕಾಲದಲ್ಲಿಯೇ ನಾನು ಇದನ್ನು ಹೇಳಿದೆ ಮತ್ತು ಮೇಧಾವಿಯಾದ ವಿದುರನೂ ಹೇಳಿದನು.

ಯದಿದಂ ತೇ ವಿಲಪಿತಂ ಪಾಂಡವಾನ್ ಪ್ರತಿ ಭಾರತ ।
ಅನೀಶೇನೈವ ರಾಜೇಂದ್ರ ಸರ್ವಮೇತನ್ನಿರರ್ಥಕಮ್ ॥೨೭॥

ಎಲೈ ಭಾರತನೇ, ರಾಜೇಂದ್ರನೇ, ಅಸಮರ್ಥನಾದ ನೀನು ಪಾಂಡವರನ್ನು ಕುರಿತು ಈ ಯಾವ ವಿಲಾಪವನ್ನು ಮಾಡುತ್ತಿದ್ದೀಯೋ ಅವೆಲ್ಲವೂ ವ್ಯರ್ಥವಾದುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಷಟ್‌ಪಂಚಾಶೋಽಧ್ಯಾಯಃ ॥

॥ ವ್ಯಾಸಾಭಿಗಮನಪರ್ವಣಿ ನವಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಐವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೇಳನೆಯ ಅಧ್ಯಾಯ

ಧೃತರಾಷ್ಟ್ರನನ್ನು ಕುರಿತು ದುರ್ಯೋಧನನ ಸಮಾಧಾನವಚನಗಳು.

ದುರ್ಯೋಧನಃ

ನ ಭೇತವ್ಯಂ ಮಹಾರಾಜ ನ ಶೋಚ್ಯಾ ಭವತಾ ವಯಮ್ ।
ಸಮರ್ಥಾಃ ಸ್ಮ ಪರಾನ್ ಜೇತುಂ ಬಲಿನಃ ಸಮರೇ ವಿಭೋ ॥೧॥

ದುರ್ಯೋಧನ– ಮಹಾರಾಜನೇ, ಹೆದರಬೇಡ. ನಮ್ಮನ್ನು ಕುರಿತು ನೀನು ಶೋಕಪಡುವ ಕಾರಣವಿಲ್ಲ. ವಿಭುವೇ, ಯುದ್ಧದಲ್ಲಿ ನಾವು ಬಲಿಷ್ಠರಾದ ಪಾಂಡವರನ್ನು ಸೋಲಿಸಲು ಸಮರ್ಥರಾಗಿದ್ದೇವೆ.

ವನೇ ಪ್ರವ್ರಾಜಿತಾನ್ ಪಾರ್ಥಾನ್ ಯದಾಯಾನ್ಮಧುಸೂದನಃ ।
ಮಹತಾ ಬಲಚಕ್ರೇಣ ಪರರಾಷ್ಟ್ರಾವಮರ್ದಿನಾ ॥೨॥

ಕೇಕಯಾ ಧೃಷ್ಟಕೇತುಶ್ಚ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ರಾಜಾನಶ್ಚಾನ್ವಯುಃ ಪಾರ್ಥಾನ್ ಬಹವೋಽನ್ಯೇಽನುಯಾಯಿನಃ ॥೩॥

ವನವಾಸವನ್ನು ಮಾಡುವ ಪಾಂಡವರ ಬಳಿಗೆ ಕಾಡಿನಲ್ಲಿ ಪರರಾಷ್ಟ್ರವನ್ನು ಮರ್ದಿಸುವ ದೊಡ್ಡ ಸೈನ್ಯದ ಜೊತೆಯಲ್ಲಿ ಮಧುಸೂದನನು ಬಂದಾಗ ಕೇಕಯರೂ,

ದ್ರುಪದನ ಮಗನಾದ ಧೃಷ್ಟದ್ಯುಮ್ನನೂ, ಇನ್ನೂ ಪಾಂಡವರನ್ನು ಅನುಸರಿಸುವ ಅನೇಕ ರಾಜರೂ ಸಹ ಪಾಂಡವರ ಬಳಿಗೆ ಬಂದರು.

ಇಂದ್ರಪ್ರಸ್ಥಸ್ಯ ಚಾದೂರಾತ್ ಸಮಾಜಗ್ಮುರ್ಮಹಾರಥಾಃ ।
ವ್ಯಗರ್ಹಯಂಶ್ಚ ಸಂಗಮ್ಯ ಭವಂತಂ ಕುರುಭಿಃ ಸಹ ॥೪॥

ಆ ಮಹಾರಥರು ಇಂದ್ರಪ್ರಸ್ಥದ ಸಮೀಪದಲ್ಲಿ ಪಾಂಡವರ ಜೊತೆಯಲ್ಲಿ ಸಮಾಗಮವನ್ನು ಹೊಂದಿ ನಿನ್ನನ್ನೂ ಮತ್ತು ಕುರುಗಳನ್ನೂ ನಿಂದಿಸಿದರು.

ತೇ ಯುಧಿಷ್ಠಿರಮಾಸೀನಮಜಿನೈಃ ಪರಿವಾರಿತಮ್ ।
ಕೃಷ್ಣಪ್ರಧಾನಾಃ ಸಂಹತ್ಯ ಪರ್ಯುಪಾಸತ ಭಾರತ ॥೫॥

ಎಲೈ ಭಾರತನೇ, ಕೃಷ್ಣನನ್ನು ಮುಂದೆ ಮಾಡಿಕೊಂಡ ಅವರು ಅಜಿನ (ಚರ್ಮ)ಗಳನ್ನು ಧರಿಸಿದ್ದ ಯುಧಿಷ್ಠಿರನ ಬಳಿ ಒಟ್ಟಿಗೆ ಸುತ್ತುವರಿದು ಕುಳಿತರು (ಒಟ್ಟಿಗೆ ಓಲೈಸಿದರು).

ಪ್ರತ್ಯಾದಾನಂ ಚ ರಾಜ್ಯಸ್ಯ ಕಾರ್ಯಮೂಚುರ್ನರಾಧಿಪಾಃ ।
ಭವತಃ ಸಾನುಬಂಧಸ್ಯ ಸಮುಚ್ಛೇದಂ ಚಿಕೀರ್ಷವಃ ॥೬॥

ಆ ರಾಜರು ಪರಿವಾರಸಹಿತನಾದ ನಿನ್ನ ವಿನಾಶವನ್ನು ಮಾಡಲು ಬಯಸಿದವರಾಗಿ ರಾಜ್ಯವನ್ನು ಹಿಂದೆ ಪಡೆಯಬೇಕೆಂದು ಮಾತನಾಡಿದರು.

ಶ್ರುತ್ವಾ ಚೈತನ್ಮಯೋಕ್ತಾಸ್ತು ಭೀಷ್ಮದ್ರೋಣಕೃಪಾಸ್ತಥಾ ।
ಜ್ಞಾತಿಕ್ಷಯಭಯಾದ್ ರಾಜನ್ ಭೀತೇನ ಭರತರ್ಷಭ ॥೭॥

ಪಾಂಡವರ ಸೈನಿಕರು ಆಡಿದ ಈ ಮಾತುಗಳನ್ನು ಕೇಳಿ ಎಲೈ ರಾಜನೇ, ಭರತಶ್ರೇಷ್ಠನೇ, ಬಂಧುಗಳ ವಿನಾಶಕ್ಕೆ ಹೆದರಿ ನಾನು ಭೀಷ್ಮ-ದ್ರೋಣ-ಕೃಪರ ಜೊತೆಯಲ್ಲಿ ಮಾತನಾಡಿದೆನು.

ನ ಚ ಸ್ಥಾಸ್ಯಂತಿ ಸಮಯೇ ಪಾಂಡವಾ ಇತಿ ಮೇ ಮತಿಃ ।
ಸಮುಚ್ಛೇದಂ ಹಿ ನಃ ಕೃತ್ಸ್ನಂ ವಾಸುದೇವಶ್ಚಿಕೀರ್ಷತಿ ॥೮॥

ಪಾಂಡವರು ತಮ್ಮ ಪ್ರತಿಜ್ಞೆಯನ್ನು ಪಾಲಿಸುವುದಿಲ್ಲ ಎಂದು ನನ್ನ ಅಭಿಪ್ರಾಯ. ಕೃಷ್ಣನು ನಮ್ಮೆಲ್ಲರ ವಿನಾಶವನ್ನು ಪೂರ್ಣವಾಗಿ ಮಾಡಲು ಬಯಸುತ್ತಾನೆ.

ಋತೇ ಚ ವಿದುರಾತ್ ಸರ್ವೇ ಯೂಯಂ ವಧ್ಯಾ ಮತಾ ಮಮ ।
ಧೃತರಾಷ್ಟ್ರಸ್ತು ಧರ್ಮಜ್ಞೋ ನ ವಧ್ಯಃ ಕುರುಸತ್ತಮಃ ॥೯॥

ವಿದುರನನ್ನು ಬಿಟ್ಟು ನೀವೆಲ್ಲರೂ ಅವನಿಗೆ ವಧ್ಯರಾದವರು. ಧರ್ಮಜ್ಞನಾದ ಕುರುಶ್ರೇಷ್ಠನಾದ ಧೃತರಾಷ್ಟ್ರನು ಮಾತ್ರ ಅವನಿಗೆ ವಧ್ಯನಲ್ಲ ಎಂದು ನನ್ನ ಅಭಿಪ್ರಾಯ.

ಸಮುಚ್ಛೇದಂ ಚ ಕೃತ್ಸ್ನಂ ನಃ ಕೃತ್ವಾ ತಾತ ಜನಾರ್ದನಃ ।
ಏಕರಾಜ್ಯಂ ಕುರೂಣಾಂ ಸ್ಮ ಚಿಕೀರ್ಷತಿ ಯುಧಿಷ್ಠಿರೇ ॥೧೦॥

ತಂದೆಯೇ, ಜನಾರ್ದನನು ನಮ್ಮ ಸಂಪೂರ್ಣ ನಾಶವನ್ನು ಮಾಡಿ ಅಖಂಡವಾದ ನಮ್ಮ ರಾಜ್ಯವನ್ನು ಯುಧಿಷ್ಠಿರನಿಗೆ ಒಪ್ಪಿಸುತ್ತಾನೆ.

ತತ್ರ ಕಿಂ ಪ್ರಾಪ್ತಕಾಲಂ ನಃ ಪ್ರಣಿಪಾತಃ ಪಲಾಯನಮ್ ।
ಪ್ರಾಣಾನ್ ವಾ ಸಂಪರಿತ್ಯಜ್ಯ ಪ್ರತಿಯುಧ್ಯಾಮಹೇ ಪರಾನ್ ॥೧೧॥

ಈಗ ನಾವು ಮಾಡಬೇಕಾದುದೇನು? ಶರಣಾಗತಿ, ಪಲಾಯನ ಅಥವಾ ಪ್ರಾಣವನ್ನು ಲೆಕ್ಕಿಸದೇ ಶತ್ರುಗಳಾದ ಪಾಂಡವರ ಜೊತೆಯಲ್ಲಿ ಪ್ರತಿಯುದ್ಧವನ್ನು ಮಾಡುವುದು!

ಪ್ರತಿಯುದ್ಧೇ ತು ನಿಯತಃ ಸ್ಯಾದಸ್ಮಾಕಂ ಪರಾಜಯಃ ।
ಯುಧಿಷ್ಠಿರಸ್ಯ ಸರ್ವೇ ಹಿ ಪಾರ್ಥಿವಾ ವಶವರ್ತಿನಃ ॥೧೨॥

ಪ್ರತಿಯುದ್ಧವನ್ನು ಮಾಡಿದರೆ ನಮ್ಮ ಪರಾಜಯವು ನಿಶ್ಚಿತವಾದುದು. ಏಕೆಂದರೆ ಎಲ್ಲಾ ರಾಜರೂ ಯುಧಿಷ್ಠಿರನ ವಶವರ್ತಿಗಳಾಗಿದ್ದಾರೆ.

ವಿರಕ್ತರಾಷ್ಟ್ರಾಶ್ಚ ವಯಂ ಮಿತ್ರಾಣಿ ಕುಪಿತಾನಿ ನಃ ।
ಧಿಕೃತಾಃ ಪಾರ್ಥಿವೈಃ ಸರ್ವೈಃ ಸ್ವಜನೇನ ಚ ಸರ್ವಶಃ ॥೧೩॥

ನಮ್ಮ ರಾಷ್ಟ್ರವು ನಮ್ಮಲ್ಲಿ ಸ್ನೇಹರಹಿತವಾಗಿದೆ. ಮಿತ್ರರು ನಮ್ಮ ಮೇಲೆ ಕೋಪಗೊಂಡಿದ್ದಾರೆ. ನಾವು ಎಲ್ಲಾ ರಾಜರ ಮತ್ತು ಸ್ವಜನರ ಧಿಕ್ಕಾರಕ್ಕೆ ಪಾತ್ರರಾಗಿದ್ದೇವೆ.

ಪ್ರಣಿಪಾತೇ ನ ದೋಷೋಽಸ್ತಿ ಸಂಧಿರ್ನಃ ಶಾಶ್ವತೀಃ ಸಮಾಃ ।
ಪಿತರಂ ತ್ವೇವ ಶೋಚಾಮಿ ಪ್ರಜ್ಞಾನೇತ್ರಂ ಜನಾಧಿಪಮ್ ॥೧೪॥

ಮತ್ಕೃತೇ ದುಃಖಮಾಪನ್ನಂ ಕ್ಲೇಶಂ ಪ್ರಾಪ್ತಮನುತ್ತಮಮ್ ॥೧೫॥

ಶರಣಾಗತರಾದರೆ ದೋಷವಿಲ್ಲ. ಬಹುಕಾಲದವರೆಗೆ ಸಂಧಿಯುಂಟಾಗುತ್ತದೆ. ಆದರೆ ನನ್ನ ಸಲುವಾಗಿ ಬಹಳ ದುಃಖವನ್ನು ಹೊಂದಿದ ಪ್ರಜ್ಞಾನೇತ್ರನಾದ ಜನಾಧಿಪನಾದ ನಿನ್ನನ್ನು ಕುರಿತು ದುಃಖಪಡುತ್ತೇನೆ.

ಕೃತಂ ಹಿ ತವ ಪುತ್ರೈಶ್ಚ ಪರೇಷಾಮವರೋಧನಮ್ ।
ಮತ್ಪ್ರಿಯಾರ್ಥಂ ಪುರೈವೈತದ್ ವಿದಿತಂ ತೇ ನರೋತ್ತಮ ॥೧೬॥

ಎಲೈ ನರೋತ್ತಮನೇ, ನಿನ್ನ ಪುತ್ರರು ನನಗೆ ಪ್ರಿಯವನ್ನುಂಟುಮಾಡಲು ಪರರಿಗೆ ಉಪದ್ರವವನ್ನು ಉಂಟುಮಾಡಿದ್ದಾರೆ ಎಂದು ಮೊದಲೇ ನಿನಗೆ ತಿಳಿದಿದೆ.

ತೇ ರಾಜ್ಞೋ ಧೃತರಾಷ್ಟ್ರಸ್ಯ ಸಾಮಾತ್ಯಸ್ಯ ಮಹಾರಥಾಃ ।
ವೈರಂ ಪ್ರತಿಕರಿಷ್ಯಂತಿ ಕುಲೋಚ್ಛೇದೇನ ಪಾಂಡವಾಃ ॥೧೭॥

ಅಂತಹ ಮಹಾರಥರಾದ ಪಾಂಡವರು ಮಂತ್ರಿಗಳಿಂದ ಕೂಡಿದ ಧೃತರಾಷ್ಟ್ರ ರಾಜನಿಗೆ ಕುಲವಿನಾಶವನ್ನು ಮಾಡಿ ಆ ವೈರವನ್ನು ಹಿಂದಿರುಗಿಸುತ್ತಾರೆ.

ತತೋ ದ್ರೋಣೋಽಬ್ರವೀದ್ ಭೀಷ್ಮಃ ಕೃಪೋ ದ್ರೌಣಿಶ್ಚ ಭಾರತ ।
ಮತ್ವಾ ಮಾಂ ಮಹತೀಂ ಚಿಂತಾಮಾಸ್ಥಿತಂ ವ್ಯಥಿತೇಂದ್ರಿಯಮ್ ॥

ಅಭಿದುಗ್ಧಾಃ ಪರೇ ಚೇನ್ನೋ ನ ಭೇತವ್ಯಂ ಪರಂತಪ ।
ಅಸಮರ್ಥಾಃ ಪರೇ ಜೇತುಮಸ್ಮಾನ್ ಯುಧಿ ಸಮಾಸ್ಥಿತಾನ್ ॥೧೯॥

ಏಕೈಕಶಃ ಸಮರ್ಥಾಃ ಸ್ಮೋ ವಿಜೇತುಂ ಸರ್ವಪಾರ್ಥಿವಾನ್ ।
ಆಗಚ್ಛಂತು ವಿನೇಷ್ಯಾಮೋ ದರ್ಪಮೇಷಾಂ ಶಿತೈಃ ಶರೈಃ ॥೨೦॥

ಎಲೈ ಭಾರತನೇ, ಆಗ ನಾನು ದೊಡ್ಡಚಿಂತೆಗೆ ಒಳಗಾಗಿ, ದುಃಖಪೂರಿತವಾದ ಇಂದ್ರಿಯಗಳನ್ನು ಹೊಂದಿರುವೆನೆಂದು ತಿಳಿದು ದ್ರೋಣ, ಭೀಷ್ಮ, ಕೃಪ ಮತ್ತು ಅಶ್ವತ್ಥಾಮರು ಪರಂತಪನೇ, ಪಾಂಡವರಿಗೆ ದ್ರೋಹವನ್ನು ಎಸಗಿದ್ದರೆ

ಹೆದರಬೇಕಾದುದಿಲ್ಲ. ಯುದ್ಧದಲ್ಲಿ ನಿಂತ ನಮ್ಮನ್ನು ಗೆಲ್ಲಲು ಅವರು ಅಸಮರ್ಥರಾದವರು. ನಮ್ಮಲ್ಲಿ ಒಬ್ಬೊಬ್ಬರೂ ಸಹ ಎಲ್ಲಾ ರಾಜರನ್ನೂ ಗೆಲ್ಲಲು ಸಮರ್ಥರಾಗಿದ್ದೇವೆ. ಅವರು ಯುದ್ಧಕ್ಕೆ ಬರಲಿ, ಹರಿತವಾದ ಬಾಣಗಳಿಂದ ಅವರ ದರ್ಪವನ್ನು ಇಳಿಸುತ್ತೇವೆ ಎಂದು ಹೇಳಿದರು.

ಪುರೈಕೇನ ಹಿ ಭೀಷ್ಮೇಣ ವಿಜಿತಾಃ ಸರ್ವಪಾರ್ಥಿವಾಃ ॥೨೧॥

ಮೃತೇ ಪಿತರ್ಯತಿಕ್ರುದ್ಧೋ ರಥೇನೈಕೇನ ಭಾರತ ।
ಜಘಾನ ಸುಬಹೂಂಸ್ತೇಷಾಂ ಸಂರಬ್ಧಃ ಕುರುಸತ್ತಮಃ ॥೨೨॥

ತತಸ್ತೇ ಶರಣಂ ಜಗ್ಮುರ್ದೇವವ್ರತಮಿಮಂ ಭಯಾತ್ ॥೨೩॥

ಎಲೈ ಭಾರತನೇ, ಹಿಂದೆ ತನ್ನ ತಂದೆಯು ಮೃತನಾದಾಗ ಭೀಷ್ಮನು ಬಹಳ ಕೋಪಗೊಂಡು ಒಂದು ರಥದಲ್ಲಿ ತಾನೊಬ್ಬನೇ ಎಲ್ಲ ರಾಜರನ್ನೂ ಜಯಿಸಿದನು. ಕೋಪಗೊಂಡ ಆ ಕುರುಶ್ರೇಷ್ಠನು ಅವರಲ್ಲಿ ಅನೇಕ ರಾಜರನ್ನು ಸಂಹರಿಸಿದನು. ಆಗ ಉಳಿದ ರಾಜರು ಭಯದಿಂದ ಅವನಿಗೆ ಶರಣಾಗತರಾದರು.

ಸ ಭೀಷ್ಮಃ ಸುಸಮರ್ಥೋಽಯಮಸ್ಮಾಭಿಃ ಸಹಿತೋ ರಣೇ ।
ಪರಾನ್ ವಿಜೇತುಂ ತಸ್ಮಾತ್ ತೇ ವ್ಯೇತು ಭೀರ್ಭರತರ್ಷಭ ॥೨೪॥

ಎಲೈ ಭರತರ್ಷಭನೇ, ನಮ್ಮಿಂದ ಸಹಿತನಾದ ಭೀಷ್ಮನು ಯುದ್ಧದಲ್ಲಿ ಶತ್ರುಗಳನ್ನು ಜಯಿಸಲು ಸಮರ್ಥನಾಗಿದ್ದಾನೆ. ಆದ್ದರಿಂದ ನಿನ್ನ ಭಯವು ದೂರವಾಗಲಿ.

ಇತ್ಯೇಷಾಂ ನಿಶ್ಚಯೋ ಹ್ಯಾಸೀತ್ ತತ್ಕಾಲೇಽಮಿತತೇಜಸಾಮ್ ।
ಪುರಾ ಪರೇಷಾಂ ಪೃಥಿವೀ ಕೃತ್ಸ್ನಾSSಸೀದ್ ವಶವರ್ತಿನೀ ॥೨೫॥

ಅಸ್ಮಾನ್ ಪುನರಮೀ ನಾದ್ಯ ಸಮರ್ಥಾ ಜೇತುಮಾಹವೇ ।
ಛಿನ್ನಪಕ್ಷಾಃ ಪರೇ ಹ್ಯದ್ಯ ವೀರ್ಯಹೀನಾಶ್ಚ ಪಾಂಡವಾಃ ॥೨೬॥

ಹೀಗೆ ಅಮಿತತೇಜಸ್ವಿಗಳಾದ ದ್ರೋಣ-ಭೀಷ್ಮಾದಿಗಳ ಅಭಿಪ್ರಾಯವು ಆ ಕಾಲದಲ್ಲಿ ಇದ್ದಿತು. ಮೊದಲು ಸಮಗ್ರವಾದ ಭೂಮಿಯು ಶತ್ರುಗಳಾದ ಪಾಂಡವರಿಗೆ ವಶವಾಗಿದ್ದಿತು. ಈಗ ಮಾತ್ರ ಅವರು ನಮ್ಮನ್ನು ಯುದ್ಧದಲ್ಲಿ ಗೆಲ್ಲಲಾರರು. ಈಗ ಪಾಂಡವರು ರೆಕ್ಕೆಗಳನ್ನು ಕತ್ತರಿಸಿದ ಪಕ್ಷಿಗಳಂತೆ ಸಾಮರ್ಥ್ಯಹೀನರಾಗಿದ್ದಾರೆ.

ಅಸ್ಮತ್ಸಂಸ್ಥಾ ಚ ಪೃಥಿವೀ ವರ್ತತೇ ಭರತರ್ಷಭ ।
ಏಕಾರ್ಥಾಃ ಸುಖದುಃಖೇಷು ಸಮಾನೀತಾಶ್ಚ ಪಾರ್ಥಿವಾಃ ॥೨೭॥

ಭರತರ್ಷಭನೇ, ಈ ದಿನ ಭೂಮಿಯು ನಮ್ಮ ವಶದಲ್ಲಿದೆ. ನಮಗೆ ಸಮಾನವಾದ ಸುಖ-ದುಃಖವುಳ್ಳ ರಾಜರು ಕರೆತರಲ್ಪಟ್ಟಿದ್ದಾರೆ.

ಅಪ್ಯಗ್ನಿಂ ಪ್ರವಿಶೇಯುಸ್ತೇ ಸಮುದ್ರಂ ವಾ ಪರಂತಪ ।
ಮದರ್ಥಂ ಪಾರ್ಥಿವಾಃ ಸರ್ವೇ ತದ್ ವಿದ್ಧಿ ಕುರುಸತ್ತಮ ॥೨೮॥

ಪರಂತಪನೇ, ಆ ಎಲ್ಲ ರಾಜರೂ ನನ್ನ ಸಲುವಾಗಿ ಅಗ್ನಿಯನ್ನೂ ಪ್ರವೇಶಿಸಿಯಾರು ಅಥವಾ ಸಮುದ್ರವನ್ನೂ ಪ್ರವೇಶಿಸಿಯಾರು. ಎಲೈ ಕುರುಸತ್ತಮನೇ, ಅದನ್ನು ತಿಳಿ.

ಉನ್ಮತ್ತಮಿವ ಚಾಪಿ ತ್ವಾಂ ಪ್ರಹಸಂತೀಹ ದುಃಖಿತಮ್ ।
ವಿಲಪಂತಂ ಬಹುವಿಧಂ ಭೀತಂ ಪರವಿಕತ್ಥನೇ ॥೨೯॥

ಹುಚ್ಚನನ್ನು ನೋಡಿದಂತೆ ದುಃಖಿತನಾದ ನಿನ್ನನ್ನು ನೋಡಿ, ಹಾಗೆಯೇ ಪಾಂಡವರನ್ನು ಹೊಗಳಿದಾಗ ಭೀತನಾಗಿ, ಅನೇಕ ವಿಧವಾಗಿ ಪ್ರಲಾಪವನ್ನು ಮಾಡುವ ನಿನ್ನನ್ನು ನೋಡಿ ಹಾಸ್ಯ ಮಾಡುತ್ತಾರೆ.

ಏಷಾಂ ಹ್ಯೇಕೈಕಶೋ ರಾಜ್ಞಾಂ ಸಮರ್ಥಃ ಪಾಂಡವಾನ್ ಪ್ರತಿ ।
ಆತ್ಮಾನಂ ಮನ್ಯತೇ ಸರ್ವೋ ವ್ಯೇತು ತೇ ಭಯಮಾಗತಮ್ ॥೩೦॥

ನಮ್ಮ ಜೊತೆಗೆ ಬಂದ ಒಬ್ಬೊಬ್ಬ ರಾಜರೂ ಸಹ ಪಾಂಡವರನ್ನು ಗೆಲ್ಲಲು ತಾವು ಸಮರ್ಥರಾಗಿದ್ದೇವೆ ಎಂದು ತಿಳಿದಿದ್ದಾರೆ. ನಿನಗೆ ಒದಗಿರುವ ಭಯವು ದೂರವಾಗಲಿ.

ಜೇತುಂ ಸಮಗ್ರಾಂ ಸೇನಾಂ ಮೇ ವಾಸವೋಽಪಿ ನ ಶಕ್ನುಯಾತ್ ।
ಹಂತುಮಕ್ಷಯ್ಯರೂಪೇಯಂ ಬ್ರಹ್ಮಣೋಽಪಿ ಸ್ವಯಂಭುವಃ ॥೩೧॥

ನನ್ನ ಸಮಗ್ರವಾದ ಸೈನ್ಯವನ್ನು ಗೆಲ್ಲಲು ಇಂದ್ರನೂ ಸಮರ್ಥನಾಗಲಾರ. ಅಕ್ಷಯವಾದ ಈ ನನ್ನ ಸೈನ್ಯವನ್ನು ಸ್ವಯಂಭುವಾದ ಬ್ರಹ್ಮನೂ ಕೊಲ್ಲಲಾರ.

ಯುಧಿಷ್ಠಿರಃ ಪುರಂ ಹಿತ್ವಾ ಪಂಚ ಗ್ರಾಮಾನ್ ಪ್ರಯಾಚತೇ ।
ಭೀತೋ ಹಿ ಮಾಮಕಾತ್ ಸೈನ್ಯಾತ್ ಪ್ರಭಾವಾಚ್ಚೈವ ಮೇ ವಿಭೋ ॥

ಎಲೈ ವಿಭುವೇ, ಯುಧಿಷ್ಠಿರನು ನನ್ನ ಸೈನ್ಯಕ್ಕೂ ಮತ್ತು ನನ್ನ ಸಾಮರ್ಥ್ಯಕ್ಕೂ ಹೆದರಿ ನಗರವನ್ನು ಬಿಟ್ಟು ಐದುಗ್ರಾಮಗಳನ್ನು ಬೇಡುತ್ತಿದ್ದಾನೆ.

ಸಮರ್ಥಂ ಮನ್ಯಸೇ ಯಚ್ಚ ಕುಂತೀಪುತ್ರಂ ವೃಕೋದರಮ್ ।
ತನ್ಮಿಥ್ಯಾ ನ ಹಿ ಮೇ ಕೃತ್ಸ್ನಂ ಪ್ರಭಾವಂ ವೇತ್ಸಿ ಭಾರತ ॥೩೩॥

ಎಲೈ ಭಾರತನೇ, ಕುಂತೀಪುತ್ರನಾದ ವೃಕೋದರನು ಬಹಳ ಬಲಿಷ್ಠನೆಂದು ನೀನು ತಿಳಿದಿರುವುದು ಸುಳ್ಳು. ನಿನಗೆ ನನ್ನ ಪೂರ್ಣಸಾಮರ್ಥ್ಯವು ತಿಳಿದಿಲ್ಲ.

ಮತ್ಸಮೋ ಹಿ ಗದಾಯುದ್ಧೇ ಪೃಥಿವ್ಯಾಂ ನಾಸ್ತಿ ಕಶ್ಚನ ।
ನಾಸೀತ್ ಕಶ್ಚಿದತಿಕ್ರಾಂತೋ ಭವಿತಾ ನ ಚ ಕಶ್ಚನ ॥೩೪॥

ಗದಾಯುದ್ಧದಲ್ಲಿ ನನಗೆ ಸಮನಾದವನು ಭೂಮಿಯಲ್ಲಿ ಯಾರೂ ಇಲ್ಲ, ಹಿಂದೆ ಇರಲಿಲ್ಲ, ಮತ್ತು ಮುಂದೆ ಉಂಟಾಗುವುದಿಲ್ಲ.

ಯುಕ್ತೋ ದುಃಖೋಷಿತಶ್ಚಾಹಂ ವಿದ್ಯಾಪಾರಗತಸ್ತಥಾ ।
ತಸ್ಮಾನ್ನ ಭೀಮಾನ್ನಾನ್ಯೇಭ್ಯೋ ಭಯಂ ಮೇ ವಿದ್ಯತೇ ಕ್ವಚಿತ್ ॥೩೫॥

ಬಹಳ ಕಷ್ಟದಲ್ಲಿ ಬೆಳೆದವನೂ ಮತ್ತು ವಿದ್ಯಾಪಾರಂಗತನೂ ಆದ ನಾನು ಬಹಳ ಎಚ್ಚರಿಕೆಯಿಂದ ಇದ್ದೇನೆ. ಆದ್ದರಿಂದ ಭೀಮನಿಂದಾಗಲೀ ಅಥವಾ ಬೇರೆ ಇನ್ನೊಬ್ಬರಿಂದಾಗಲೀ ನನಗೆ ಭಯವಿಲ್ಲ.

ದುರ್ಯೋಧನಸಮೋ ನಾಸ್ತಿ ಗದಾಯಾಮಿತಿ ನಿಶ್ಚಯಃ ।
ಸಂಕರ್ಷಣಸ್ಯ ಭವನೇ ಯತ್ತದೈನಮುಪಾವಸಮ್ ॥೩೬॥

ಬಲರಾಮನ ನಿವಾಸದಲ್ಲಿ ನಾನು ಅವನ ಶಿಷ್ಯನಾಗಿದ್ದಾಗ, ಗದಾಯುದ್ಧದಲ್ಲಿ ದುರ್ಯೋಧನನಿಗೆ ಸಮನಾದವನು ಯಾವನೂ ಇಲ್ಲ ಎಂದು ಎಲ್ಲರ ನಿಶ್ಚಯವಾಗಿದ್ದಿತು.

ಯುದ್ಧೇ ಸಂಕರ್ಷಣಸಮೋ ಬಲೇ ನಾಸ್ಯಧಿಕೋ ಭುವಿ ।
ಗದಾಪ್ರಹಾರಂ ಭೀಮೋ ಮೇ ನ ಜಾತು ವಿಷಹೇದ್ ಯುಧಿ ॥೩೭॥

ಯುದ್ಧದಲ್ಲಿ ಮತ್ತು ಬಲದಲ್ಲಿ ಬಲರಾಮನಿಗೆ ಸಮನಾದವನು ಅಥವಾ ಅಧಿಕನಾದವನು ಭೂಮಿಯಲ್ಲಿ ಯಾವನೂ ಇಲ್ಲ. ಯುದ್ಧದಲ್ಲಿ ನನ್ನ ಗದಾಪ್ರಹಾರವನ್ನು ಭೀಮಸೇನನು ಎಂದೂ ತಡೆದುಕೊಳ್ಳಲಾರ.

ಏಕಂ ಪ್ರಹಾರಂ ಯಂ ದದ್ಯಾಂ ಭೀಮಾಯ ರುಷಿತೋ ನೃಪ ।
ಸ ಏವೈನಂ ನಯೇದ್ ಘೋರಃ ಕ್ಷಿಪ್ರಂ ವೈವಸ್ವತಕ್ಷಯಮ್ ॥೩೮॥

ಎಲೈ ರಾಜನೇ, ಕ್ರುದ್ಧನಾಗಿ ನಾನು ಭೀಮಸೇನನಿಗೆ ಕೊಡುವ ಒಂದು ಘೋರವಾದ ಗದಾಪ್ರಹಾರವೇ ಶೀಘ್ರವಾಗಿ ಅವನನ್ನು ಯಮಲೋಕಕ್ಕೆ ಕಳುಹಿಸೀತು.

ಇಚ್ಛೇಯಂ ಚ ಗದಾಹಸ್ತಂ ರಾಜನ್ ದ್ರಷ್ಟುಂ ವೃಕೋದರಮ್ ।
ಸುಚಿರಂ ಪ್ರಾರ್ಥಿತೋ ಹ್ಯೇಷ ಮಮ ನಿತ್ಯಂ ಮನೋರಥಃ ॥೩೯॥

ಎಲೈ ರಾಜನೇ, ನಾನು ಗದಾಪಾಣಿಯಾದ ವೃಕೋದರನನ್ನು ನೋಡಲು ಬಯಸುತ್ತೇನೆ. ಇದು ನಾನು ಬಹಳ ಕಾಲದಿಂದ ಯಾವಾಗಲೂ ಅಪೇಕ್ಷಿಸಿದ ನನ್ನ ಮನೋರಥ.

ಗದಯಾ ನಿಹತೋ ಹ್ಯಾಜೌ ಮಯಾ ಪಾರ್ಥೋ ವೃಕೋದರಃ ।
ವಿಶೀರ್ಣಗಾತ್ರಃ ಪೃಥಿವೀಂ ಪರಾಸುಃ ಪ್ರಪತಿಷ್ಯತಿ ॥೪೦॥

ನನ್ನ ಗದಾಪ್ರಹಾರದಿಂದ ಹತನಾದ ಪಾಂಡವನಾದ, ವೃಕೋದರನು ತನ್ನ ಶರೀರವು ಬಿರಿದು ಭೂಮಿಯ ಮೇಲೆ ಬಿದ್ದು ಅಸುವನ್ನು ನೀಗುವನು.

ಗದಾಪ್ರಹಾರಾಭಿಹತೋ ಹಿಮವಾನಪಿ ಪರ್ವತಃ ।
ಸಕೃನ್ಮಯಾ ವಿದೀರ್ಯೇತ ಗಿರಿಃ ಶತಸಹಸ್ರಧಾ ॥೪೧॥

ನನ್ನ ಒಂದು ಗದಾಪ್ರಹಾರಕ್ಕೆ ಹಿಮಾಲಯಪರ್ವತವೂ ಸಹ ಬಿರಿದು, ನೂರಾರು ಅಥವಾ ಸಾವಿರಾರು ಭಾಗಗಳಾಗುತ್ತದೆ.

ಸ ಚಾಪ್ಯೇತದ್ ವಿಜಾನಾತಿ ವಾಸುದೇವಾರ್ಜುನೌ ತಥಾ ।
ದುರ್ಯೋಧನಸಮೋ ನಾಸ್ತಿ ಗದಾಯಾಮಿತಿ ನಿಶ್ಚಯಃ ॥೪೨॥

ಭೀಮಸೇನನೂ ಈ ವಿಷಯವನ್ನು ತಿಳಿದಿದ್ದಾನೆ. ಹಾಗೆಯೇ ಕೃಷ್ಣಾರ್ಜುನರೂ ತಿಳಿದಿದ್ದಾರೆ. ಗದಾಯುದ್ಧದಲ್ಲಿ ದುರ್ಯೋಧನನಿಗೆ ಸಮರಾದವರು ಇಲ್ಲವೆಂಬುದು ನಿಶ್ಚಿತವಾದುದು.

ತತ್ ತೇ ವೃಕೋದರಮಯಂ ಭಯಂ ವ್ಯೇತು ಮಹಾಹವೇ ।
ವ್ಯಪನೇಷ್ಯಾಮ್ಯಹಂ ಹ್ಯೇನಂ ಮಾ ರಾಜನ್ ವಿಮನಾ ಭವ ॥೪೩॥

ಆದ್ದರಿಂದ ವೃಕೋದರನ ಸಲುವಾಗಿ ಯುದ್ಧದಲ್ಲಿ ನಿನಗೆ ಉಂಟಾಗಿರುವ ಭಯವು ದೂರವಾಗಲಿ. ರಾಜನೇ, ನಾನು ಅವನನ್ನು ಸಂಹರಿಸುತ್ತೇನೆ. ನೀನು ವಿಷಾದ ಪಡಬೇಡ.

ತಸ್ಮಿನ್ ಮಯಾ ಹತೇ ಕ್ಷಿಪ್ರಮರ್ಜುನಂ ಬಹವೋ ರಥಾಃ ।
ತುಲ್ಯರೂಪಾ ವಿಶಿಷ್ಟಾಶ್ಚ ಕ್ಷೇಪ್ಸ್ಯಂತಿ ಭರತರ್ಷಭ ॥೪೪॥

ಎಲೈ ಭರತರ್ಷಭನೇ, ನನ್ನಿಂದ ಭೀಮನು ಹತನಾಗುತ್ತಿರಲು ಅರ್ಜುನನಿಗೆ ಸಮಾನರಾದ ಅಥವಾ ಅರ್ಜುನನಿಗಿಂತಲೂ ಅಧಿಕರಾದ ಅನೇಕ ಮಹಾರಥರು ಅರ್ಜುನನನ್ನು ಶೀಘ್ರವಾಗಿ ಎತ್ತಿ ಎಸೆಯುವರು.

ಭೀಷ್ಮೋ ದ್ರೋಣಃ ಕೃಪೋ ದ್ರೌಣಿಃ ಕರ್ಣೋ ಭೂರಿಶ್ರವಾಸ್ತಥಾ ।
ಪ್ರಾಗ್ಜ್ಯೋತಿಷಾಧಿಪಃ ಶಲ್ಯಃ ಸಿಂಧುರಾಜೋ ಜಯದ್ರಥಃ ॥೪೫॥

ಏಕೈಕ ಏಷಾಂ ಶಕ್ತಸ್ತು ಹಂತುಂ ಭಾರತ ಪಾಂಡವಾನ್ ।
ಸಮೇತಾಸ್ತು ಕ್ಷಣೇನೈತಾನ್ ನೇಷ್ಯಂತಿ ಯಮಸಾದನಮ್ ॥೪೬॥

ಭೀಷ್ಮ, ದ್ರೋಣ, ಕೃಪ, ಅಶ್ವತ್ಥಾಮ, ಕರ್ಣ, ಭೂರಿಶ್ರವ, ಪ್ರಾಜ್ಯೋತಿಷಾಧಿಪತಿಯಾದ ಭಗದತ್ತ, ಶಲ್ಯ, ಸಿಂಧುರಾಜನಾದ ಜಯದ್ರಥ ಇವರಲ್ಲಿ ಒಬ್ಬೊಬ್ಬರೂ ಪಾಂಡವರನ್ನು ಕೊಲ್ಲಲು ಸಮರ್ಥರಾಗಿದ್ದಾರೆ. ಎಲ್ಲರೂ ಒಟ್ಟಿಗೆ ಸೇರಿದರೆ ಒಂದುಕ್ಷಣದಲ್ಲಿ ಪಾಂಡವರನ್ನು ಯಮಲೋಕಕ್ಕೆ ಕಳುಹಿಸುವರು.

ಸಮಗ್ರಾ ಪಾರ್ಥಿವೀ ಸೇನಾ ಪಾರ್ಥಿವಾನಾಂ ಧನಂಜಯಮ್ ।
ಕಸ್ಮಾದಶಕ್ತಾ ನಿರ್ಜೇತುಮಿತಿ ಹೇತುರ್ನ ವಿದ್ಯತೇ ॥೪೭॥

ರಾಜರ ಸಮಗ್ರವಾದ ಸೈನ್ಯಗಳು ಅರ್ಜುನನನ್ನು ಜಯಿಸಲು ಅಸಮರ್ಥವಾಗುತ್ತವೆ ಎಂದು ತಿಳಿಯಲು ಏನೂ ಕಾರಣವಿಲ್ಲ.

ಶರವ್ರಾತೈಸ್ತು ಭೀಷ್ಮೇಣ ಶತಶೋಽಥ ಸಹಸ್ರಶಃ ।
ದ್ರೋಣದ್ರೌಣಿಕೃಪೈಶ್ಚೈವ ಗಂತಾ ಪಾರ್ಥೋ ಯಮಕ್ಷಯಮ್ ॥೪೮॥

ಭೀಷ್ಮರ ಮತ್ತು ದ್ರೋಣ-ದ್ರೌಣಿ-ಕೃಪರ ನೂರಾರು, ಸಾವಿರಾರು ಸಂಖ್ಯೆಯ ಬಾಣಗಳ ಸಮೂಹದಿಂದ ಅರ್ಜುನನು ಯಮಲೋಕಕ್ಕೆ ಹೋಗುವವನಾಗುತ್ತಾನೆ.

ಪಿತಾಮಹೋಽಪಿ ಗಾಂಗೇಯಃ ಶಂತನೋ ರಥಿನಾಂ ವರಃ ।
ಬ್ರಹ್ಮರ್ಷಿಸದೃಶೋ ಜಜ್ಞೇ ದೇವೈರಪಿ ಸುದುಃಸಹಃ ॥೪೯॥

ಪಿತಾಮಹನೂ, ರಥಿಶ್ರೇಷ್ಠನೂ ಆದ ಗಾಂಗೇಯನಾದ ಭೀಷ್ಮನು, ಬ್ರಹ್ಮರ್ಷಿ ಸದೃಶನಾಗಿ ದೇವತೆಗಳಿಂದಲೂ ಸೋಲಿಸಲು ಅಸಾಧ್ಯನಾಗಿ, ಶಂತನುವಿನ ಪುತ್ರನಾಗಿ ಜನಿಸಿದ್ದಾನೆ.

ನ ಹಂತಾ ವಿದ್ಯತೇ ಚಾಪಿ ರಾಜನ್ ಭೀಷ್ಮಸ್ಯ ಕಶ್ಚನ ।
ಪಿತ್ರಾಽಪ್ಯುಕ್ತಃ ಪ್ರಸನ್ನೇನ ನಾಕಾಮಸ್ತ್ವಂ ಮರಿಷ್ಯಸಿ ॥೫೦॥

ಎಲೈ ರಾಜನೇ, ಯುದ್ಧದಲ್ಲಿ ಭೀಷ್ಮನನ್ನು ಕೊಲ್ಲುವವನು ಯಾವನೂ ಇಲ್ಲ. ಪ್ರಸನ್ನನಾದ ಅವನ ತಂದೆಯು ಅವನಿಗೆ ಇಚ್ಛಾಮರಣರೂಪವಾದ ವರವನ್ನೂ ಕೊಟ್ಟಿದ್ದಾನೆ.

ಬ್ರಹ್ಮರ್ಷೇಶ್ಚ ಭರದ್ವಾಜಾದ್ ದ್ರೋಣೋ ದ್ರೋಣ್ಯಾಮಜಾಯತ ।
ದ್ರೋಣಾಜ್ಜಜ್ಞೇ ಮಹಾರಾಜ ದ್ರೌಣಿಶ್ಚ ಪರಮಾಸ್ತ್ರವಿತ್ ॥೫೧॥

ಬ್ರಹ್ಮರ್ಷಿಗಳಾದ ಭರದ್ವಾಜರಿಂದ ದ್ರೋಣರು ಕಮಂಡಲುವಿನಲ್ಲಿ ಜನಿಸಿದ್ದಾರೆ. ಮಹಾರಾಜನೇ, ಪರಮಾಸ್ತ್ರವೇತ್ತರಾದ ಅಶ್ವತ್ಥಾಮರು ದ್ರೋಣರಿಂದ ಜನಿಸಿದ್ದಾರೆ.

ಕೃಪಶ್ಚಾಚಾರ್ಯಮುಖ್ಯೋಽಯಂ ಮಹರ್ಷೇರ್ಗೌತಮಾದಪಿ ।
ಶರಸ್ತಂಬೋದ್ಭವಃ ಶ್ರೀಮಾನವಧ್ಯ ಇತಿ ಮೇ ಮತಿಃ ॥೫೨॥

ಆಚಾರ್ಯಶ್ರೇಷ್ಠರಾದ ಈ ಕೃಪರು ಮಹರ್ಷಿಗಳಾದ ಗೌತಮರಿಂದ ಶರಸ್ತಂಬದಿಂದ ಜನಿಸಿದ್ದಾರೆ. ಕಾಂತಿಯುಕ್ತರಾದ ಅವರು ಅವಧ್ಯರು ಎಂದು ನನ್ನ ಅಭಿಪ್ರಾಯ.

ಅಯೋನಿಜಾಸ್ತ್ರಯೋ ಹ್ಯೇತೇ ಪಿತಾ ಮಾತಾ ಚ ಮಾತುಲಃ ॥೫೩॥

ಅಶ್ವತ್ಥಾಮಾ ಮಹಾರಾಜ ಸ ಚ ಶೂರಃ ಸ್ಥಿತೋ ಮಮ ॥೫೪॥

ಅವನ ತಂದೆ, ತಾಯಿ ಮತ್ತು ಸೋದರಮಾವ ಈ ಮೂವರು ಅಯೋನಿಜರಾದವರು. ಎಲೈ ಮಹಾರಾಜನೇ, ಅಂತಹ ಶೂರನಾದ ಅಶ್ವತ್ಥಾಮನು ನನ್ನ ಪಕ್ಷದಲ್ಲಿದ್ದಾನೆ.

ಸರ್ವ ಏತೇ ಮಹಾರಾಜ ದೇವಕಲ್ಪಾ ಮಹಾರಥಾಃ ।
ಶಕ್ರಸ್ಯಾಪಿ ವ್ಯಥಾಂ ಕುರ್ಯುಃ ಸಂಯುಗೇ ಭರತರ್ಷಭ ॥೫೫॥

ಎಲೈ ಮಹಾರಾಜನೇ, ಈ ಎಲ್ಲಾ ಮಹಾರಥರೂ ದೇವತೆಗಳಿಗೆ ಸಮಾನರಾದವರು. ಭರತರ್ಷಭನೇ, ಯುದ್ಧದಲ್ಲಿ ಅವರು ಇಂದ್ರನಿಗೂ ವ್ಯಥೆಯನ್ನು ಮಾಡಿಯಾರು.

ನೈತೇಷಾಮರ್ಜುನಃ ಶಕ್ತ ಏಕೈಕಂ ಪ್ರತಿವೀಕ್ಷಿತುಮ್ ।
ಸಹಿತಾಸ್ತು ನರವ್ಯಾಘ್ರಾ ಹನಿಷ್ಯಂತಿ ಧನಂಜಯಮ್ ॥೫೬॥

ಅರ್ಜುನನು ಇವರಲ್ಲಿ ಒಬ್ಬೊಬ್ಬರನ್ನೂ ದೃಷ್ಟಿಯಿಂದ ನೋಡಲೂ ಸಾಧ್ಯವಿಲ್ಲ. ಒಟ್ಟುಗೂಡಿದ ಈ ನರವ್ಯಾಘ್ರರು ಧನಂಜಯನನ್ನು ಕೊಲ್ಲುವರು.

ಭೀಷ್ಮದ್ರೋಣಕೃಪಾಣಾಂ ಚ ತುಲ್ಯಃ ಕರ್ಣೋ ಮತೋ ಮಮ ।
ಅನುಜ್ಞಾತಶ್ಚ ರಾಮೇಣ ಮತ್ಸಮೋಽಸೀತಿ ಭಾರತ ॥೫೭॥

ಕರ್ಣನು ಭೀಷ್ಮ-ದ್ರೋಣ-ಕೃಪರಿಗೆ ಸಮನಾದವನು ಎಂದು ನನ್ನ ಅಭಿಪ್ರಾಯ. ಅಲ್ಲದೆ ಎಲೈ ಭಾರತನೇ, ಪರಶುರಾಮನು ನೀನು ನನಗೆ ಸಮಾನನಾಗಿದ್ದೀಯೆ ಎಂದು ಸಮ್ಮತಿಯನ್ನು ಕೊಟ್ಟಿದ್ದಾನೆ.

ರಾಜರ ಸಮಗ್ರವಾದ ಸೈನ್ಯಗಳು ಅರ್ಜುನನನ್ನು ಜಯಿಸಲು ಅಸಮರ್ಥವಾಗುತ್ತವೆ ಎಂದು ತಿಳಿಯಲು ಏನೂ ಕಾರಣವಿಲ್ಲ.

ಶರವ್ರಾತೈಸ್ತು ಭೀಷ್ಮೇಣ ಶತಶೋಽಥ ಸಹಸ್ರಶಃ ।
ದ್ರೋಣದ್ರೌಣಿಕೃಪೈಶ್ಚೈವ ಗಂತಾ ಪಾರ್ಥೋ ಯಮಕ್ಷಯಮ್ ॥೪೮॥

ಭೀಷ್ಮರ ಮತ್ತು ದ್ರೋಣ-ದ್ರೌಣಿ-ಕೃಪರ ನೂರಾರು, ಸಾವಿರಾರು ಸಂಖ್ಯೆಯ ಬಾಣಗಳ ಸಮೂಹದಿಂದ ಅರ್ಜುನನು ಯಮಲೋಕಕ್ಕೆ ಹೋಗುವವನಾಗುತ್ತಾನೆ.

ಪಿತಾಮಹೋಽಪಿ ಗಾಂಗೇಯಃ ಶಂತನೋ ರಥಿನಾಂ ವರಃ ।
ಬ್ರಹ್ಮರ್ಷಿಸದೃಶೋ ಜಜ್ಞೇ ದೇವೈರಪಿ ಸುದುಃಸಹಃ ॥೪೯॥

ಪಿತಾಮಹನೂ, ರಥಿಶ್ರೇಷ್ಠನೂ ಆದ ಗಾಂಗೇಯನಾದ ಭೀಷ್ಮನು, ಬ್ರಹ್ಮರ್ಷಿ ಸದೃಶನಾಗಿ ದೇವತೆಗಳಿಂದಲೂ ಸೋಲಿಸಲು ಅಸಾಧ್ಯನಾಗಿ, ಶಂತನುವಿನ ಪುತ್ರನಾಗಿ ಜನಿಸಿದ್ದಾನೆ.

ನ ಹಂತಾ ವಿದ್ಯತೇ ಚಾಪಿ ರಾಜನ್ ಭೀಷ್ಮಸ್ಯ ಕಶ್ಚನ ।
ಪಿತ್ರಾಽಪ್ಯುಕ್ತಃ ಪ್ರಸನ್ನೇನ ನಾಕಾಮಸ್ತ್ವಂ ಮರಿಷ್ಯಸಿ ॥೫೦॥

ಎಲೈ ರಾಜನೇ, ಯುದ್ಧದಲ್ಲಿ ಭೀಷ್ಮನನ್ನು ಕೊಲ್ಲುವವನು ಯಾವನೂ ಇಲ್ಲ. ಪ್ರಸನ್ನನಾದ ಅವನ ತಂದೆಯು ಅವನಿಗೆ ಇಚ್ಛಾಮರಣರೂಪವಾದ ವರವನ್ನೂ ಕೊಟ್ಟಿದ್ದಾನೆ.

ಬ್ರಹ್ಮರ್ಷೇಶ್ಚ ಭರದ್ವಾಜಾದ್ ದ್ರೋಣೋ ದ್ರೋಣ್ಯಾಮಜಾಯತ ।
ದ್ರೋಣಾಜ್ಜಜ್ಞೇ ಮಹಾರಾಜ ದ್ರೌಣಿಶ್ಚ ಪರಮಾಸ್ತ್ರವಿತ್ ॥೫೧॥

ಬ್ರಹ್ಮರ್ಷಿಗಳಾದ ಭರದ್ವಾಜರಿಂದ ದ್ರೋಣರು ಕಮಂಡಲುವಿನಲ್ಲಿ ಜನಿಸಿದ್ದಾರೆ. ಮಹಾರಾಜನೇ, ಪರಮಾಸ್ತ್ರವೇತ್ತರಾದ ಅಶ್ವತ್ಥಾಮರು ದ್ರೋಣರಿಂದ ಜನಿಸಿದ್ದಾರೆ.

ಕೃಪಶ್ಚಾಚಾರ್ಯಮುಖ್ಯೋಽಯಂ ಮಹರ್ಷೇರ್ಗೌತಮಾದಪಿ ।
ಶರಸ್ತಂಬೋದ್ಭವಃ ಶ್ರೀಮಾನವಧ್ಯ ಇತಿ ಮೇ ಮತಿಃ ॥೫೨॥

ಆಚಾರ್ಯಶ್ರೇಷ್ಠರಾದ ಈ ಕೃಪರು ಮಹರ್ಷಿಗಳಾದ ಗೌತಮರಿಂದ ಶರಸ್ತಂಬದಿಂದ ಜನಿಸಿದ್ದಾರೆ. ಕಾಂತಿಯುಕ್ತರಾದ ಅವರು ಅವಧ್ಯರು ಎಂದು ನನ್ನ ಅಭಿಪ್ರಾಯ.

ಅಯೋನಿಜಾಸ್ತ್ರಯೋ ಹ್ಯೇತೇ ಪಿತಾ ಮಾತಾ ಚ ಮಾತುಲಃ ॥೫೩॥

ಅಶ್ವತ್ಥಾಮಾ ಮಹಾರಾಜ ಸ ಚ ಶೂರಃ ಸ್ಥಿತೋ ಮಮ ॥೫೪॥

ಅವನ ತಂದೆ, ತಾಯಿ ಮತ್ತು ಸೋದರಮಾವ ಈ ಮೂವರು ಅಯೋನಿಜರಾದವರು. ಎಲೈ ಮಹಾರಾಜನೇ, ಅಂತಹ ಶೂರನಾದ ಅಶ್ವತ್ಥಾಮನು ನನ್ನ ಪಕ್ಷದಲ್ಲಿದ್ದಾನೆ.

ಸರ್ವ ಏತೇ ಮಹಾರಾಜ ದೇವಕಲ್ಪಾ ಮಹಾರಥಾಃ ।
ಶಕ್ರಸ್ಯಾಪಿ ವ್ಯಥಾಂ ಕುರ್ಯುಃ ಸಂಯುಗೇ ಭರತರ್ಷಭ ॥೫೫॥

ಎಲೈ ಮಹಾರಾಜನೇ, ಈ ಎಲ್ಲಾ ಮಹಾರಥರೂ ದೇವತೆಗಳಿಗೆ ಸಮಾನರಾದವರು. ಭರತರ್ಷಭನೇ, ಯುದ್ಧದಲ್ಲಿ ಅವರು ಇಂದ್ರನಿಗೂ ವ್ಯಥೆಯನ್ನು ಮಾಡಿಯಾರು.

ನೈತೇಷಾಮರ್ಜುನಃ ಶಕ್ತ ಏಕೈಕಂ ಪ್ರತಿವೀಕ್ಷಿತುಮ್ ।
ಸಹಿತಾಸ್ತು ನರವ್ಯಾಘ್ರಾ ಹನಿಷ್ಯಂತಿ ಧನಂಜಯಮ್ ॥೫೬॥

ಅರ್ಜುನನು ಇವರಲ್ಲಿ ಒಬ್ಬೊಬ್ಬರನ್ನೂ ದೃಷ್ಟಿಯಿಂದ ನೋಡಲೂ ಸಾಧ್ಯವಿಲ್ಲ. ಒಟ್ಟುಗೂಡಿದ ಈ ನರವ್ಯಾಘ್ರರು ಧನಂಜಯನನ್ನು ಕೊಲ್ಲುವರು.

ಭೀಷ್ಮದ್ರೋಣಕೃಪಾಣಾಂ ಚ ತುಲ್ಯಃ ಕರ್ಣೋ ಮತೋ ಮಮ ।
ಅನುಜ್ಞಾತಶ್ಚ ರಾಮೇಣ ಮತ್ಸಮೋಽಸೀತಿ ಭಾರತ ॥೫೭॥

ಕರ್ಣನು ಭೀಷ್ಮ-ದ್ರೋಣ-ಕೃಪರಿಗೆ ಸಮನಾದವನು ಎಂದು ನನ್ನ ಅಭಿಪ್ರಾಯ. ಅಲ್ಲದೆ ಎಲೈ ಭಾರತನೇ, ಪರಶುರಾಮನು ನೀನು ನನಗೆ ಸಮಾನನಾಗಿದ್ದೀಯೆ ಎಂದು ಸಮ್ಮತಿಯನ್ನು ಕೊಟ್ಟಿದ್ದಾನೆ.

ಕುಂಡಲೇ ರುಚಿರೇ ಚಾಸ್ತಾಂ ಕರ್ಣಸ್ಯ ಸಹಜೇ ಶುಭೇ ।
ತೇ ಶಕ್ಯರ್ಥೇ ಮಹೇಂದ್ರೇಣ ಯಾಚಿತಃ ಸ ಪರಂತಪಃ ॥೫೮॥

ಹಿಂದೆ ಕರ್ಣನಲ್ಲಿ ಸಹಜವಾದ, ಸುಂದರವಾದ, ಶುಭವಾದ ಕರ್ಣಕುಂಡಲಗಳಿದ್ದವು. ಪರಂತಪನಾದ ಕರ್ಣನು ಇಂದ್ರನಿಂದ ಯಾಚಿಸಲ್ಪಟ್ಟು ಅವುಗಳ ಬದಲಾಗಿ ಶಕ್ತ್ಯಾಯುಧವನ್ನು ಪಡೆದಿದ್ದಾನೆ.

ಅಮೋಘಯಾ ಮಹಾರಾಜ ಶಕ್ತ್ಯಾ ಪರಮಭೀಮಯಾ ।
ತಸ್ಯ ಶಕ್ತ್ಯೋಪಗೂಢಸ್ಯ ಕಸ್ಮಾಜ್ಜೀವೇದ್ ಧನಂಜಯಃ ॥೫೯॥

ಮಹಾರಾಜನೇ, ಅಮೋಘವಾದ ಮತ್ತು ಭಯಂಕರವಾದ ಶಕ್ತ್ಯಾಯುಧದಿಂದ ಸಹಿತನಾದ ಕರ್ಣನ ಎದುರಿಗೆ ಧನಂಜಯನು ಹೇಗೆ ಜೀವಿಸುತ್ತಾನೆ?

ವಿಜಯೋ ಮೇ ಧ್ರುವಂ ರಾಜನ್ ಫಲಂ ಪಾಣಾವಿವಾಹಿತಮ್ ।
ಅಭಿವ್ಯಕ್ತಃ ಪರೇಷಾಂ ಚ ಕೃತ್ಸ್ನೋ ಭುವಿ ಪರಾಜಯಃ ॥೬೦॥

ರಾಜನೇ, ನನ್ನ ವಿಜಯವು ಅಂಗೈಯಲ್ಲಿರುವ ಹಣ್ಣಿನಂತೆ ಸ್ಪಷ್ಟವಾಗಿದೆ. ಭೂಮಿಯಲ್ಲಿ ಶತ್ರುಗಳ ಸಮಗ್ರವಾದ ಪರಾಜಯವೂ ಸಹ ಅಷ್ಟೇ ಸ್ಪಷ್ಟವಾಗಿ ತೋರುತ್ತಿದೆ.

ಅಹ್ನಾ ಹ್ಯೇಕೇನ ಭೀಷ್ಮೋಽಯಂ ಪ್ರಯುತಂ ಹಂತಿ ಭಾರತ ।
ತತ್ಸಮಾಶ್ಚ ಮಹೇಷ್ವಾಸಾ ದ್ರೋಣದ್ರೌಣಿಕೃಪಾ ಅಪಿ ॥೬೧॥

ಎಲೈ ಭಾರತನೇ, ಭೀಷ್ಮನು ಒಂದು ದಿನದಲ್ಲಿ ಹತ್ತುಸಹಸ್ರ ಯೋಧರನ್ನು ಕೊಲ್ಲುತ್ತಾನೆ. ಮಹಾಧನುರ್ಧಾರಿಗಳಾದ ದ್ರೋಣ-ದ್ರೌಣಿ-ಕೃಪರೂ ಸಹ ಅವನಿಗೆ ಸಮಾನರಾದವರು.

ಸಂಶಪ್ತಕಾನಾಂ ವೃಂದಾನಿ ಕ್ಷತ್ರಿಯಾಣಾಂ ಪರಂತಪ ।
ಅರ್ಜುನಂ ವಯಮಸ್ಮಾನ್ ವಾ ನಿಹನ್ಯಾತ್ ಕಪಿಕೇತನಃ ॥೬೨॥

ಎಲೈ ಪರಂತಪನೇ, ಕ್ಷತ್ರಿಯರಾದ ಸಂಶಪ್ತಕರ ಸಮೂಹಗಳು ಅರ್ಜುನನನ್ನು ನಾವು ಕೊಲ್ಲುತ್ತೇವೆ ಅಥವಾ ಕಪಿಧ್ವಜನಾದ ಅರ್ಜುನನು ನಮ್ಮನ್ನು ಕೊಂದಾನು ಎಂಬ ನಿಶ್ಚಯದಲ್ಲಿದ್ದಾರೆ.

ತಾಂಶ್ಚಾಲಮಿತಿ ಮನ್ಯಂತೇ ಸವ್ಯಸಾಚಿವಧೇ ಧೃತಾಃ ।
ಪಾರ್ಥಿವಾಃ ಸ ಭವಾಂಸ್ತೇಭ್ಯೋ ಹ್ಯಕಸ್ಮಾದ್ ವ್ಯಥತೇ ಕಥಮ್ ॥೬೩॥

ಸವ್ಯಸಾಚಿಯಾದ ಅರ್ಜುನನ ವಧೆಯಲ್ಲಿ ಆಸಕ್ತರಾದ ರಾಜರು ಅರ್ಜುನನನ್ನು ಕೊಲ್ಲಲು ಸಂಶಪ್ತಕರು ಸಮರ್ಥರಾಗಿದ್ದಾರೆ ಎಂದು ತಿಳಿದಿದ್ದಾರೆ. ಆದ್ದರಿಂದ ನೀನು ಪಾಂಡವರಿಗೆ ನಿಷ್ಕಾರಣವಾಗಿ ಏಕೆ ಹೆದರುತ್ತಿದ್ದೀಯೆ?

ಭೀಮಸೇನೇ ಚ ನಿಹತೇ ಕೋಽನ್ಯೋ ಯುಧ್ಯೇತ ಭಾರತ ।
ಪಾಂಚಾಲೇಷು ಚ ಭಗ್ನೇಷು ಕೋ ನು ಸ್ಥಾತುಮಿಹಾರ್ಹತಿ ॥೬೪॥

ಪರೇಷಾಂ ತನ್ಮಮಾಚಕ್ಷ್ವ ಯದಿ ವೇತ್ಥ ಪರಂತಪ ॥೬೫॥

ಎಲೈ ಭಾರತನೇ, ಪರಂತಪನೇ, ಭೀಮಸೇನನು ಹತನಾದರೆ ಬೇರೆ ಯಾವನು ಯುದ್ಧವನ್ನು ಮಾಡಿಯಾನು? ಪಾಂಚಾಲರು ಭಗ್ನರಾದರೆ ನಮ್ಮ ಎದುರಿಗೆ ಶತ್ರುಸೈನ್ಯದಲ್ಲಿ ಬೇರೆ ಯಾವನು ನಿಲ್ಲುತ್ತಾನೆ ಎಂದು ನಿನಗೆ ತಿಳಿದಿದ್ದರೆ ಅದನ್ನು ನನಗೆ ಹೇಳು.

ಪಂಚ ತೇ ಭ್ರಾತರಃ ಸರ್ವೇ ಧೃಷ್ಟದ್ಯುಮ್ನೋಽಥ ಸಾತ್ಯಕಿಃ ।
ಪರೇಷಾಂ ಸಪ್ತ ಯೇ ರಾಜನ್ ಯೋಧಾಃ ಸಾರಂ ಬಲಂ ಮತಮ್ ॥

ಪಾಂಡವರು ಐದುಮಂದಿ, ಧೃಷ್ಟದ್ಯುಮ್ನ ಮತ್ತು ಸಾತ್ಯಕಿ. ಎಲೈ ರಾಜನೇ, ಈ ಏಳು ಯೋಧರು ಶತ್ರುಸೈನ್ಯದಲ್ಲಿ ಸಾರರೂಪರಾದವರು ಎಂದು ನನ್ನ ಅಭಿಪ್ರಾಯ.

ಅಸ್ಮಾಕಂ ತು ವಿಶಿಷ್ಟಾ ಯೇ ಭೀಷ್ಮದ್ರೋಣಕೃಪಾದಯಃ ।
ದ್ರೌಣಿರ್ವೈಕರ್ತನಃ ಕರ್ಣಃ ಬಾಹ್ಲಿಕಶ್ಚ ಬೃಹದ್ರಥಃ ॥೬೭॥

ಪ್ರಾಗ್‌ಜ್ಯೋತಿಷಾಧಿಪಃ ಶಲ್ಯ ಆವಂತ್ಯೋಽಥ ಜಯದ್ರಥಃ ।
ದುಃಶಾಸನೋ ದುರ್ಮುಖಶ್ಚೈವ ದುಃಸಹಶ್ಚ ವಿಶಾಂಪತೇ ॥೬೮॥

ಶ್ರುತಾಯುಶ್ಚಿತ್ರಸೇನಶ್ಚ ಪುರುಮಿತ್ರೋ ವಿವಿಂಶತಿಃ ।
ಶಲೋ ಭೂರಿಶ್ರವಾಶ್ಚೈವ ವಿಕರ್ಣಶ್ಚ ತವಾತ್ಮಜಃ ॥೬೯॥

ಎಲೈ ರಾಜನೇ, ನಮ್ಮ ಸೈನ್ಯದಲ್ಲಿ ಸಾರರೂಪರಾದವರೆಂದರೆ ಭೀಷ್ಮ-ದ್ರೋಣ-ಕೃಪಾದಿಗಳು, ಅಶ್ವತ್ಥಾಮ, ವೈಕರ್ತನನಾದ ಕರ್ಣ, ಬಾಹ್ಲಿಕ ದೇಶದ ಭಾಗಕ್ಕೆ ಅಧಿಪತಿಯಾದ ಬೃಹದ್ರಥ, ಪ್ರಾಗ್‌ಜ್ಯೋತಿಷಾಧಿಪತಿಯಾದ ಭಗದತ್ತ, ಶಲ್ಯ, ಅವಂತಿಗೆ ಅಧಿಪತಿಯಾದ ಜಯದ್ರಥ, ದುಃಶಾಸನ, ದುರ್ಮುಖ, ದುಃಸಹ, ಶ್ರುತಾಯು, ಚಿತ್ರಸೇನ, ಪುರುಮಿತ್ರ, ವಿವಿಂಶತಿ, ಶಲ, ಭೂರಿಶ್ರವ ಮತ್ತು ನಿನ್ನ ಪುತ್ರನಾದ ವಿಕರ್ಣ.

ಅಕ್ಷೌಹಿಣ್ಯೋಽಪಿ ಮೇ ರಾಜನ್ ದಶೈಕಾ ಚ ಸಮಾಶ್ರಿತಾಃ ।
ನ್ಯೂನಾಃ ಪರೇಷಾಂ ಸಪ್ತೈವ ಕಸ್ಮಾನ್ಮೇ ಸ್ಯಾತ್ ಪರಾಜಯಃ ॥೭೦॥

ರಾಜನೇ, ನನ್ನ ಬಳಿ ಹನ್ನೊಂದು ಅಕ್ಷೌಹಿಣಿ ಸೈನ್ಯವಿದೆ. ಶತ್ರುಗಳ ಬಳಿ ಏಳು ಅಕ್ಷೌಹಿಣಿಯ ಕಡಿಮೆ ಸೈನ್ಯವಿದೆ. ನನಗೆ ಏಕೆ ಪರಾಜಯವುಂಟಾಗುತ್ತದೆ?

ಬಲಂ ತ್ರಿಗುಣತೋ ಹೀನಂ ಯೋಧ್ಯಂ ಪ್ರಾಹ ಬೃಹಸ್ಪತಿಃ ।
ಪರೇಭ್ಯಸ್ತ್ರಿಗುಣಾ ಚೇಯಂ ಮಮ ರಾಜನ್ನನೀಕಿನೀ ॥೭೧॥

ಮೂರುಪಟ್ಟು ಬಲದಿಂದ ಹೀನವಾದ ಶತ್ರುಸೈನ್ಯದ ಜೊತೆಯಲ್ಲಿ ಯುದ್ಧವನ್ನು ಮಾಡಬೇಕೆಂದು ಬೃಹಸ್ಪತಿಗಳು ಹೇಳಿದ್ದಾರೆ. ರಾಜನೇ, ನನ್ನ ಸೈನ್ಯವು ಬಲದಲ್ಲಿ ಶತ್ರುಸೈನ್ಯಕ್ಕಿಂತ ಮೂರುಪಟ್ಟು ಅಧಿಕವಾದುದು.

ಗುಣಹೀನಂ ಪರೇಷಾಂ ಚ ಬಹು ಪಶ್ಯಾಮಿ ಭಾರತ ।
ಗುಣೋದಯಂ ಬಹುಗುಣಮಾತ್ಮನಶ್ಚ ವಿಶಾಂಪತೇ ॥೭೨॥

ಎಲೈ ಭಾರತನೇ, ಶತ್ರುಸೈನ್ಯವು ಬಹುವಿಧವಾಗಿ ಗುಣಹೀನವಾಗಿದೆ ಎಂದು ನಾನು ಭಾವಿಸಿದ್ದೇನೆ. ರಾಜನೇ, ನಮ್ಮ ಸೈನ್ಯವು ಅನೇಕ ಗುಣವುಳ್ಳದ್ದೆಂದೂ, ಅಭಿವೃದ್ಧಿ ಹೊಂದುತ್ತಿರುವ ಗುಣವುಳ್ಳದ್ದೆಂದೂ ನಾನು ಕಾಣುತ್ತಿದ್ದೇನೆ.

ಏತತ್ಸರ್ವಂ ಸಮಾಜ್ಞಾಯ ಬಲಾಗ್ರ್ಯಂ ಮಮ ಭಾರತ ।
ನ್ಯೂನತಾಂ ಪಾಂಡವಾನಾಂ ಚ ನ ಮೋಹಂ ಗಂತುಮರ್ಹಸಿ ॥೭೩॥

ಎಲೈ ಭಾರತನೇ, ಪಾಂಡವರ ನ್ಯೂನತೆ ಮತ್ತು ನನ್ನ ಸೈನ್ಯದ ಬಲಜ್ಯೇಷ್ಠತೆ ಇವೆಲ್ಲವನ್ನೂ ಚೆನ್ನಾಗಿ ತಿಳಿದು ನೀನು ಮೋಹವನ್ನು ಪಡುವ ಅವಶ್ಯಕತೆ ಇಲ್ಲ.

ವೈಶಂಪಾಯನಃ

ಇತ್ಯುಕ್ತ್ವಾ ಸಂಜಯಂ ಭೂಯಃ ಪರ್ಯಪೃಚ್ಛತ ಭಾರತ ।
ವಿವಿತ್ಸುಃ ಪ್ರಾಪ್ತಕಾಲಾನಿ ಜ್ಞಾತ್ವಾ ಪರಪುರಂಜಯಃ ॥೭೪॥

ವೈಶಂಪಾಯನ– ಎಲೈ ಭಾರತನೇ, ಇಷ್ಟು ಹೇಳಿ ಪರಪುರಂಜಯನಾದ ದುರ್ಯೋಧನನು ಪಾಂಡವರ ವಿಷಯವನ್ನು ತಿಳಿದು, ಯೋಗ್ಯವಾದ ಸಿದ್ಧತೆಯನ್ನು ಮಾಡಲು ಸಂಜಯನನ್ನು ಕುರಿತು ಪುನಃ ಪ್ರಶ್ನೆಯನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಸಪ್ತಪಂಚಾಶೋऽಧ್ಯಾಯಃ ॥

॥ ವ್ಯಾಸಾಭಿಗಮನಪರ್ವಣಿ ದಶಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಐವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೆಂಟನೆಯ ಅಧ್ಯಾಯ

ಸಂಜಯನಿಂದ ದುರ್ಯೋಧನನಿಗೆ ಪಾಂಡವರ ರಣೋತ್ಸಾಹದ ವರ್ಣನೆ.

ದುರ್ಯೋಧನಃ

ಅಕ್ಷೌಹಿಣೀಃ ಸಪ್ತ ಲಬ್ಧ್ವಾ ರಾಜಭಿಃ ಸಹ ಸಂಜಯ ।
ಕಿಂಸ್ವಿದಿಚ್ಛತಿ ಕೌಂತೇಯೋ ಯುದ್ಧಪ್ರೇಪ್ಸುರ್ಯುಧಿಷ್ಠಿರಃ ॥೧॥

ದುರ್ಯೋಧನ– ಎಲೈ ಸಂಜಯನೇ, ರಾಜರಿಂದ ಸಹಿತವಾದ ಏಳು ಅಕ್ಷೌಹಿಣಿ ಸೈನ್ಯವನ್ನು ಹೊಂದಿ ಯುದ್ಧವನ್ನು ಬಯಸುವ ಕುಂತೀಪುತ್ರನಾದ ಯುಧಿಷ್ಠಿರನು ಏನನ್ನು ಮಾಡಲು ಇಚ್ಛಿಸುತ್ತಾನೆ?

ಸಂಜಯಃ

ಅತೀವ ಮುದಿತೋ ರಾಜನ್ ಯುದ್ಧಪ್ರೇಪ್ಸುರ್ಯುಧಿಷ್ಠಿರಃ ।
ಭೀಮಸೇನಾರ್ಜುನೌ ಚೋಭೌ ಯಮಾವಪಿ ನ ಬಿಭ್ಯತಃ ॥೨॥

ಸಂಜಯ– ರಾಜನೇ, ಯುದ್ಧವನ್ನು ಬಯಸುವ ಯುಧಿಷ್ಠಿರನು ಬಹಳ ಸಂತೋಷದಲ್ಲಿದ್ದಾನೆ. ಭೀಮಸೇನಾರ್ಜುನರು ಮತ್ತು ಅವಳಿ ಮಕ್ಕಳಾದ ನಕುಲ ಸಹದೇವರು ಸಹ ಯುದ್ಧಕ್ಕೆ ಹೆದರುವುದಿಲ್ಲ.

ರಥಂ ತು ದಿವ್ಯಂ ಕೌಂತೇಯಃ ಸರ್ವಾ ವಿಭ್ರಾಜಯನ್ ದಿಶಃ ।
ಮಂತ್ರಂ ಜಿಜ್ಞಾಸಮಾನಃ ಸನ್ ಬೀಭತ್ಸೋಃ ಸಮಯೋಜಯತ್ ॥೩॥

ತಮಪಶ್ಯಾಮ ಸನ್ನದ್ಧಂ ಮೇಘಂ ವಿದ್ಯುದ್ಯುತಂ ಯಥಾ ॥೪॥

ನನ್ನಿಂದ ನಿನ್ನ ಮಂತ್ರಾಲೋಚನೆಯನ್ನು ತಿಳಿಯುವ ಸಲುವಾಗಿ ಅರ್ಜುನನು ಎಲ್ಲ ದಿಕ್ಕುಗಳನ್ನು ಬೆಳಗುವ ದಿವ್ಯವಾದ ರಥವನ್ನು ಹೂಡಿದನು. ಮಿಂಚಿನಿಂದ ಕೂಡಿರುವ, ಮೇಘದಂತಿದ್ದ, ಸನ್ನದ್ಧವಾದ ಅವನ ರಥವನ್ನು ನೋಡಿದೆನು.

ಸಮಂತಾತ್ ಸಮಭಿಧ್ಯಾಯನ್ ಹೃಷ್ಯಮಾಣೋಽಭ್ಯಭಾಷತ ।
ಪೂರ್ವರೂಪಮಿದಂ ಪಶ್ಯ ವಯಂ ಜೇಷ್ಯಾಮ ಸಂಜಯ ॥೫॥

ಬೀಭತ್ಸುರ್ಮಾಂ ಯಥೋವಾಚ ತಥಾಽವೈಮ್ಯಹಮಪ್ಯುತ ॥೬॥

ಅವನು ಸುತ್ತಲೂ ನೋಡುತ್ತಾ, ರೋಮಾಂಚಿತನಾಗಿ ಚಿಂತಿಸುತ್ತಾ, ನನ್ನನ್ನು ಕುರಿತು ಸಂಜಯನೇ, ಯುದ್ಧಕ್ಕಿಂತ ಮೊದಲಿನ ನಮ್ಮ ಈ ರೂಪವನ್ನು ನೋಡು, ನಾವು ಗೆಲ್ಲುವೆವು ಎಂದು ಹೇಳಿದನು. ಅರ್ಜುನನು ಹೇಗೆ ಹೇಳಿದನೋ ನಾನೂ ಸಹ ಅದನ್ನು ಹಾಗೆಯೇ ತಿಳಿಯುತ್ತೇನೆ.

ದುರ್ಯೋಧನಃ

ಪ್ರಶಂಸಸ್ಯಭಿನಂದಂಸ್ತಾನ್ ಪಾರ್ಥಾನಕ್ಷಪರಾಜಿತಾನ್ ।
ಅರ್ಜುನಸ್ಯ ರಥೇ ಬ್ರೂಹಿ ಕಥಮಶ್ವಾಃ ಕಥಂ ಧ್ವಜಾಃ ॥೭॥

ದುರ್ಯೋಧನ– ನೀನು ಅಕ್ಷಪರಾಜಿತರಾದ ಪಾಂಡವರನ್ನು ಅಭಿನಂದಿಸುತ್ತಾ ಅವರನ್ನು ಹೊಗಳುತ್ತಿದ್ದೀಯೆ. ಅರ್ಜುನನ ರಥದಲ್ಲಿ ಅಶ್ವಗಳು ಹೇಗಿವೆ ಮತ್ತು ಧ್ವಜಗಳು ಹೇಗಿವೆ ಎಂಬುದನ್ನು ಹೇಳು.

ಸಂಜಯಃ

ಭೌವನಃ ಸಹ ಶಕ್ರೇಣ ಬಹುಚಿತ್ರಂ ವಿಶಾಂಪತೇ ।
ರೂಪಾಣಿ ಕಲ್ಪಯಾಮಾಸ ತ್ವಷ್ಟಾ ಧಾತ್ರಾ ವಿಶಾಂಪತೇ ॥೮॥

ಸಂಜಯ– ಎಲೈ ರಾಜನೇ, ಬ್ರಹ್ಮದೇವರ ಆದೇಶದಂತೆ ಇಂದ್ರನಿಂದ ಕೂಡಿಕೊಂಡು ದೇವತೆಗಳ ಬಡಗಿಯಾದ ವಿಶ್ವಕರ್ಮನು ವಿಚಿತ್ರವಾದ ರೂಪವುಳ್ಳ ರಥವನ್ನು ನಿರ್ಮಿಸಿದ್ದಾನೆ.

ಧ್ವಜೇ ಹಿ ತಸ್ಮಿನ್ ರೂಪಾಣಿ ಚಕ್ರುಸ್ತೇ ದೇವಮಾಯಯಾ ।
ಮಹಾಧನಾನಿ ದಿವ್ಯಾನಿ ಮಹಾಂತಿ ಚ ಲಘೂನಿ ಚ ॥೯॥

ಆ ಧ್ವಜದಲ್ಲಿ ಅವರು ದೇವಮಾಯೆಯಿಂದ ಬೆಲೆಬಾಳುವ ದಿವ್ಯವಾದ ದೊಡ್ಡದಾದ ಮತ್ತು ಚಿಕ್ಕದಾದ ಅನೇಕ ಆಕೃತಿಗಳನ್ನು ರಚಿಸಿದ್ದಾರೆ.

ಭೀಮಸೇನಾನುರೋಧಾಯ ಹನೂಮಾನ್ ಮಾರುತಾತ್ಮಜಃ ।
ಆತ್ಮಪ್ರತಿಕೃತಿಂ ತಸ್ಯ ಧ್ವಜ ಆರೋಪಯಿಷ್ಯತಿ ॥೧೦॥

ಭೀಮಸೇನನನ್ನು ಸಂತೋಷಪಡಿಸಲು ಮಾರುತಾತ್ಮಜನಾದ ಹನುಮಂತನು ತನ್ನ ಪ್ರತಿಕೃತಿಯನ್ನು ಆ ಧ್ವಜದ ಮೇಲೆ ಸ್ಥಾಪಿಸುವನು.

ಸರ್ವಾ ದಿಶೋ ಯೋಜನಮಾತ್ರಮಂತರಂ
ಸ ತಿರ್ಯಗೂರ್ಧ್ವಂ ನ ರುರೋಧ ವೈ ಧ್ವಜಃ ।
ನ ಸಂಸಜ್ಜೇತ್ ತರುಭಿಃ ಸಂವೃತೋऽಪಿ
ತಥಾ ಹಿ ಮಾಯಾ ವಿಹಿತಾ ಭೌವನೇನ ॥೧೧॥

ಆ ಧ್ವಜಕ್ಕೆ ಸುತ್ತಲೂ ಒಂದುಯೋಜನದವರೆಗೆ ಯಾವ ದಿಕ್ಕುಗಳಲ್ಲಾಗಲೀ ಅಥವಾ ಕೆಳಗೆ ಅಥವಾ ಮೇಲ್ಭಾಗದಲ್ಲಾಗಲೀ ಯಾವ ತಡೆಯೂ ಇರುವುದಿಲ್ಲ. ವೃಕ್ಷಗಳ ಮಧ್ಯದಲ್ಲಿದ್ದರೂ ಅದು ಯಾವ ವೃಕ್ಷಕ್ಕೂ ತಾಕುವುದಿಲ್ಲ. ವಿಶ್ವಕರ್ಮನು ಅಂತಹ ಸಾಮರ್ಥ್ಯವುಳ್ಳದ್ದಾಗಿ ಆ ರಥವನ್ನು ಮಾಡಿದ್ದಾನೆ.

ಯಥಾऽऽಕಾಶೇ ಶಕ್ರಧನುಃ ಪ್ರಕಾಶತೇ
ನ ಚೈಕವರ್ಣಂ ನ ಚ ವಿದ್ಮ ಕಿಂ ನು ತತ್ ।
ತಥಾ ಧ್ವಜೋ ವಿಹಿತೋ ಭೌವನೇನ
ಬಹ್ವಾಕಾರಂ ದೃಶ್ಯತೇ ರೂಪಮಸ್ಯ ॥೧೨॥

ಆಕಾಶದಲ್ಲಿ ಕಾಮನಬಿಲ್ಲು ಕಾಣುತ್ತದೆ. ಅದಕ್ಕೆ ಒಂದೇ ವರ್ಣವಿಲ್ಲ. ಅದು ಏನೆಂದು ಯಾರಿಗೂ ತಿಳಿಯುವುದೂ ಇಲ್ಲ. ಅದರಂತೆ ವಿಶ್ವಕರ್ಮನು ನಿರ್ಮಿಸಿದ ಆ ಧ್ವಜವು ಅನೇಕ ವರ್ಣಗಳಿಂದ ಕೂಡಿದುದಾಗಿ ಕಂಡುಬರುತ್ತದೆ.

ಯಥಾऽಗ್ನಿಧೂಮೋ ದಿವಮೇತಿ ರುದ್ಧ್ವಾ
ವರ್ಣಾನ್ ಬಿಭ್ರತ್ ತೈಜಸಾಂಶ್ಚಿತ್ರರೂಪಾನ್ ।
ತಥಾ ಧ್ವಜೋ ವಿಹಿತೋ ಭೌವನೇನ
ನ ಚೇದ್ ಭಾರೋ ಭವಿತಾ ನೋತ ಬಾಧಾ ॥೧೩॥

ಹೇಗೆ ಅಗ್ನಿಯಿಂದ ಉಂಟಾದ ಧೂಮವು ತೈಜಸವಾದ, ವಿಚಿತ್ರವಾದ ಅನೇಕ ರೂಪಗಳನ್ನು ಧರಿಸಿ ಎಲ್ಲ ದಿಕ್ಕುಗಳನ್ನೂ ವ್ಯಾಪಿಸಿ ಅಂತರಿಕ್ಷಕ್ಕೆ ಏರುತ್ತದೆಯೋ ಅದರಂತೆ ವಿಶ್ವಕರ್ಮನು ಧ್ವಜವನ್ನು ನಿರ್ಮಿಸಿದ್ದಾನೆ. ಅದರಿಂದ ಭಾರವಾಗಲೀ ಅಥವಾ ಬಾಧೆಯಾಗಲೀ ಇರುವುದಿಲ್ಲ.

ಶ್ವೇತಾಸ್ತಸ್ಮಿನ್ ವಾತವೇಗಾಃ ಸದಶ್ವಾ
ದಿವ್ಯಾ ಯುಕ್ತಾಶ್ಚಿತ್ರರಥೇನ ದತ್ತಾಃ ।
ಭುವ್ಯಂತರಿಕ್ಷೇ ದಿವಿ ವಾ ನರೇಂದ್ರ
ಯೇಷಾಂ ಗತಿರ್ಹ್ಯಯತೇ ನಾತ್ರ ಸರ್ವಾ ॥೧೪॥

ಆ ರಥದಲ್ಲಿ ವಾಯುವೇಗವುಳ್ಳ, ದಿವ್ಯವಾದ, ಗುಣಯುಕ್ತವಾದ, ಚಿತ್ರರಥ ಗಂಧರ್ವನಿಂದ ಕೊಡಲ್ಪಟ್ಟ ಶ್ವೇತಾಶ್ವಗಳು ಹೂಡಲ್ಪಟ್ಟಿವೆ. ಎಲೈ ರಾಜನೇ, ಭೂಮಿಯಲ್ಲಾಗಲೀ, ಅಂತರಿಕ್ಷದಲ್ಲಾಗಲೀ ಅಥವಾ ಸ್ವರ್ಗದಲ್ಲಾಗಲೀ ಅವುಗಳ ಗತಿಗೆ ತಡೆ ಇರುವುದಿಲ್ಲ.

ಶತಂ ತತ್ ಪೂರ್ಯತೇ ನಿತ್ಯಕಾಲಂ
ಹತಂ ಹತಂ ದತ್ತವರಂ ಪುರಸ್ತಾತ್ ।
ತಥಾ ರಾಜ್ಞೋ ದತ್ತವರಾ ಬೃಹಂತೋ
ರಥೇ ಯುಕ್ತಾ ಭಾಂತಿ ತದ್ವೀರ್ಯತುಲ್ಯಾಃ ॥೧೫॥

ಆ ರಥದಲ್ಲಿ ಯಾವಾಗಲೂ ಅಂತಹ ನೂರು ಅಶ್ವಗಳು ಇರುತ್ತವೆ. ಯಾವುದಾದರೂ ಅಶ್ವವು ಹತವಾದರೆ ಆ ಕ್ಷಣದಲ್ಲಿಯೇ ಇನ್ನೊಂದು ಅಶ್ವವು ಬಂದು ನೂರರ ಸಂಖ್ಯೆಯನ್ನು ಪೂರ್ಣಗೊಳಿಸುತ್ತದೆ. ಅಂತಹ ವರವನ್ನುಳ್ಳ ಬೃಹದಾಕಾರದ ಅಶ್ವಗಳು, ರಾಜನಿಂದ ಅಂತಹ ವರಗಳನ್ನು ಹೊಂದಿದವುಗಳಾಗಿ ಅವನಿಗೆ ಸಮಾನವಾದ ಪರಾಕ್ರಮವನ್ನು ಹೊಂದಿ ರಥದಲ್ಲಿ ಹೂಡಲ್ಪಟ್ಟು ಶೋಭಿಸುತ್ತಿವೆ.

ಋಷ್ಯಪ್ರಖ್ಯಾ ಭೀಮಸೇನಸ್ಯ ವಾಹಾ
ರಥೇ ವಾಯೋಸ್ತುಲ್ಯವೇಗಾ ಬಭೂವುಃ ॥೧೬॥

ಭೀಮಸೇನನ ರಥದಲ್ಲಿ ಜಿಂಕೆಗಳಂತೆ ಕಾಣುವ, ವಾಯುವೇಗಕ್ಕೆ ಸಮವಾದ ವೇಗವುಳ್ಳ ಅಶ್ವಗಳು ಇರುತ್ತವೆ.

ಕಲ್ಮಾಷಾಂಗಾಸ್ತಿತ್ತಿರಿಚಿತ್ರಪೃಷ್ಠಾ
ಭ್ರಾತ್ರಾ ದತ್ತಾಃ ಪ್ರೀಯತಾ ಫಲ್ಗುನೇನ ।
ಭ್ರಾತುರ್ವೀರಸ್ಯ ಸ್ವೈಸ್ತುರಗೈರ್ವಿಶಿಷ್ಟಾ
ಮುದಾ ಯುಕ್ತಾಃ ಸಹದೇವಂ ವಹಂತಿ ॥೧೭॥

ಕೃಷ್ಣಪಿಂಗಲವರ್ಣದ ಮತ್ತು ತಿತ್ತಿರಿಪಕ್ಷಿಯಂತೆ ಬೆನ್ನುಳ್ಳ ಅಶ್ವಗಳು ಸಂತೋಷದಿಂದ ಅರ್ಜುನನಿಂದ ವೀರನಾದ ತಮ್ಮನಾದ ಸಹದೇವನಿಗೆ ಕೊಡಲ್ಪಟ್ಟಿವೆ. ಅರ್ಜುನನ ಅಶ್ವಗಳಿಗಿಂತ ಶ್ರೇಷ್ಠವಾದ ಅಂತಹ ಅಶ್ವಗಳು ರಥದಲ್ಲಿ ಹೂಡಲ್ಪಟ್ಟು ಸಹದೇವನನ್ನು ಕರೆದುಕೊಂಡು ಹೋಗುತ್ತವೆ.

ಮಾದ್ರೀಪುತ್ರಂ ನಕುಲಂ ತ್ವಾಜಮೀಢಂ
ಮಹೇಂದ್ರದತ್ತಾ ಹರಯೋ ವಾಜಿಮುಖ್ಯಾಃ ।
ಸಮಾ ವಾಯೋರ್ಬಲವಂತಸ್ತರಸ್ವಿನೋ
ಮಹಾಜವಾಶ್ಚಿತ್ರರೂಪಾಃ ಸದಶ್ವಾಃ ॥೧೮॥

ಮಹೇಂದ್ರದತ್ತವಾದ, ವಾಯುವಿಗೆ ಸಮವಾದ ಬಲ ಮತ್ತು ಶೀಘ್ರತೆಯುಳ್ಳ, ಮಹಾಜವವುಳ್ಳ, ಚಿತ್ರರೂಪವನ್ನುಳ್ಳ ಒಳ್ಳೆಯ ಕುದುರೆಗಳು ಮಾದ್ರೀಪುತ್ರನಾದ ಆಜಮೀಢನಾದ ನಕುಲನನ್ನು ಹೊರುತ್ತವೆ.

ಸೌಭದ್ರಾದೀನ್ ದ್ರೌಪದೇಯಾನ್ ಕುಮಾರಾನ್
ವಹಂತ್ಯಶ್ವಾ ದೇವದತ್ತಾ ಬೃಹಂತಃ ॥೧೯॥

ಅಭಿಮನ್ಯು ಮೊದಲಾದವರನ್ನು ಮತ್ತು ದ್ರೌಪದಿಯ ಪುತ್ರರನ್ನು ದೇವತೆಗಳು ಕೊಟ್ಟ ದೊಡ್ಡ ಅಶ್ವಗಳು ಹೊರುತ್ತವೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಅಷ್ಟಪಂಚಾಶೋಽಧ್ಯಾಯಃ ॥

॥ ವ್ಯಾಸಾಭಿಗಮನಪರ್ವಣಿ ಏಕಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಐವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೊಂಬತ್ತನೆಯ ಅಧ್ಯಾಯ

ಸಂಜಯನಿಂದ ಪಾಂಡವಸೈನ್ಯದ ಬಲಕಥನ. ಅದನ್ನು ಆಕ್ಷೇಪಿಸಿ ದುರ್ಯೋಧನನಿಂದ ತನ್ನ ಸೈನ್ಯದ ಪ್ರಶಂಸೆ.

ಧೃತರಾಷ್ಟ್ರಃ

ಕಾಂಸ್ತತ್ರ ಸಂಜಯಾಪಶ್ಯಃ ಪ್ರೀತ್ಯರ್ಥೇನ ಸಮಾಗತಾನ್ ।
ಯೇ ಯೋತ್ಸ್ಯಂತೇ ಪಾಂಡವಾರ್ಥೇ ಪುತ್ರಸ್ಯ ಮಮ ವಾಹಿನೀಮ್ ॥

ಧೃತರಾಷ್ಟ್ರ– ಎಲೈ ಸಂಜಯನೇ, ಪಾಂಡವರ ಮೇಲಿನ ಪ್ರೀತಿಯಿಂದ, ಅವರ ಜೊತೆಯಲ್ಲಿ ನನ್ನ ಮಗನ ಸೈನ್ಯದ ವಿರುದ್ಧವಾಗಿ ಯುದ್ಧ ಮಾಡುವ ಯಾರನ್ನು ನೀನು ಅಲ್ಲಿ ನೋಡಿದೆ?

ಸಂಜಯಃ

ಮುಖಿಮಂಧಕವೃಷ್ಣೀನಾಮಪಶ್ಯಂ ಕೃಷ್ಣಮಾಗತಮ್ ।
ಚೇಕಿತಾನಂ ಚ ತತ್ರೈವ ಯುಯುಧಾನಂ ಚ ಸಾತ್ಯಕಿಮ್ ॥೨॥

ಸಂಜಯ– ಅಂಧಕವೃಷ್ಣಿಗಳಲ್ಲಿ ಪ್ರಧಾನನಾದ ಕೃಷ್ಣನು ಅಲ್ಲಿಗೆ ಬಂದುದನ್ನು ನೋಡಿದೆನು. ಅಲ್ಲಿ ಚೇಕಿತಾನನನ್ನೂ ಮತ್ತು ಸತ್ಯಕನ ಮಗನಾದ ಯುಯುಧಾನನನ್ನೂ ನೋಡಿದೆನು.

ಪೃಥಗಕ್ಷೌಹಿಣೀಭ್ಯಾಂ ತು ಪಾಂಡವಾನಭಿಸಂಶ್ರಿತೌ ।
ಮಹಾರಥೌ ಸಮಾಖ್ಯಾತಾವುಭೌ ಪುರುಷಮಾನಿನೌ ॥೩॥

ಮಹಾರಥರೂ ಮತ್ತು ಪುರುಷಮಾನಿಗಳೂ (ತಮ್ಮ ಪೌರುಷದಲ್ಲಿ ನಂಬಿಕೆ ಉಳ್ಳವರು) ಆದ ಚೇಕಿತಾನ ಮತ್ತು ಯುಯುಧಾನರಿಬ್ಬರೂ ಬೇರೆ ಬೇರೆ ಅಕ್ಷೌಹಿಣಿ ಸೈನ್ಯದಿಂದ ಬಂದು ಪಾಂಡವರನ್ನು ಸೇರಿದ್ದಾರೆ.

ಅಕ್ಷೌಹಿಣ್ಯಾऽಥ ಪಾಂಚಾಲ್ಯೋ ದಶಭಿಸ್ತನಯೈರ್ವೃತಃ ।
ಸತ್ಯಜಿತ್ ಪ್ರಮುಖೈರ್ವೀರೈರ್ಧೃಷ್ಟದ್ಯುಮ್ನಪುರೋಗಮೈಃ ॥೪॥

ಪಾಂಚಾಲರಾಜನಾದ ದ್ರುಪದನು ಸತ್ಯಜಿತ್ ಮೊದಲಾದ ವೀರರಾದ, ಧೃಷ್ಟದ್ಯುಮ್ನ ಪ್ರಧಾನರಾದ ತನ್ನ ಹತ್ತು ಮಕ್ಕಳಿಂದ ಕೂಡಿಕೊಂಡು ಒಂದು ಅಕ್ಷೌಹಿಣಿ ಸೈನ್ಯದ ಜೊತೆಯಲ್ಲಿ ಬಂದು ಸೇರಿದ್ದಾನೆ.

ದ್ರುಪದೋ ವರ್ಧಯನ್ ಮಾನಂ ಶಿಖಂಡಿಪರಿವಾರಿತಃ ।
ಉಪಾಯಾತ್ ಸರ್ವಸೈನ್ಯಾನಾಂ ಪ್ರತಿಚ್ಛಾದ್ಯ ಮಹೀಂ ತದಾ ॥೫॥

ದ್ರುಪದನು ಶಿಖಂಡಿಯ ಜೊತೆಯಲ್ಲಿ ಕೂಡಿ, ಪಾಂಡವರ ಸೈನ್ಯದ ಬಲವನ್ನು ವರ್ಧಿಸುತ್ತಾ, ಭೂಮಿಯನ್ನು ಆವರಿಸಿ, ತನ್ನ ಎಲ್ಲ ಸೈನ್ಯವನ್ನೂ ತೆಗೆದುಕೊಂಡು ಬಂದಿದ್ದಾನೆ.

ವಿರಾಟಃ ಸಹ ಪುತ್ರಾಭ್ಯಾಂ ಶಂಖೈನೈವೋತ್ತರೇಣ ಚ ।
ಸೂರ್ಯದತ್ತಾದಿಭಿರ್ವೀರೈರ್ಮದಿರಾಶ್ವಪುರೋಗಮೈಃ ॥೬॥

ಸಹಿತಃ ಪೃಥಿವೀಪಾಲೋ ಭ್ರಾತೃಭಿಃ ತನಯೈಸ್ತಥಾ ।
ಅಕ್ಷೌಹಿಣ್ಯೈವ ಸೈನ್ಯಾನಾಂ ವೃತಃ ಪಾರ್ಥಂ ಸಮಾಶ್ರಿತಃ ॥೭॥

ವಿರಾಟನು ತನ್ನ ಪುತ್ರರಾದ, ಶಂಖ ಮತ್ತು ಉತ್ತರರಿಂದಲೂ, ಮದಿರಾಶ್ವನೇ ಮುಂದಿರುವ ಸೂರ್ಯದತ್ತ ಮೊದಲಾದ ವೀರರಿಂದಲೂ ತನ್ನ ಸಹೋದರರಿಂದಲೂ ಸಹಿತನಾಗಿ ಒಂದು ಅಕ್ಷೋಹಿಣಿ ಸೈನ್ಯವನ್ನು ತೆಗೆದುಕೊಂಡು ಬಂದು ಯುಧಿಷ್ಠಿರನನ್ನು ಸೇರಿದ್ದಾನೆ.

ಜಾರಾಸಂಧಿರ್ಮಾಗಧಶ್ಚ ಧೃಷ್ಟಕೇತುಶ್ಚ ಚೇದಿರಾಟ್ ।
ಪೃಥಕ್‌ಪೃಥಗನುಪ್ರಾಪ್ತೌ ಪೃಥಗಕ್ಷೋಹಿಣೀವೃತೌ ॥೮॥

ಜರಾಸಂಧನ ಪುತ್ರನಾದ ಮಗಧಾದಿಪತಿಯಾದ ಸಹದೇವನೂ, ಚೇದಿಪತಿಯಾದ ಶಿಶುಪಾಲನ ಪುತ್ರನಾದ ಧೃಷ್ಟಕೇತುವೂ ಒಂದೊಂದು ಅಕ್ಷೋಹಿಣಿ ಸೈನ್ಯವನ್ನು ತೆಗೆದುಕೊಂಡು ಬೇರೆ ಬೇರೆಯಾಗಿ ಬಂದಿದ್ದಾರೆ.

ಕೇಕಯಾ ಭ್ರಾತರಃ ಪಂಚ ಸರ್ವೇ ಲೋಹಿತಕಧ್ವಜಾಃ ।
ಅಕ್ಷೋಹಿಣೀಪರಿವೃತಾಃ ಪಾಂಡವಾನಭಿಸಂಶ್ರಿತಾಃ ॥೯॥

ರಕ್ತವರ್ಣದ ಧ್ವಜವುಳ್ಳ ಪಂಚಕೇಕಯ ಸಹೋದರರು ಒಂದು ಅಕ್ಷೋಹಿಣಿ ಸೈನ್ಯದ ಜೊತೆಯಲ್ಲಿ ಬಂದು ಪಾಂಡವರನ್ನು ಆಶ್ರಯಿಸಿದ್ದಾರೆ.

ಏತಾನೇತಾವತಸ್ತತ್ರ ತಾನಪಶ್ಯಂ ಸಮಾಗತಾನ್ ।
ಯೇ ಪಾಂಡವಾರ್ಥೇ ಯೋತ್ಸ್ಯಂತಿ ಧಾರ್ತರಾಷ್ಟ್ರಸ್ಯ ವಾಹಿನೀಮ್ ॥

ಪಾಂಡವರ ಪರವಾಗಿ ದುರ್ಯೋಧನನ ಸೈನ್ಯವನ್ನು ಎದುರಿಸಿ ಯುದ್ಧವನ್ನು ಮಾಡುವಂತಹ ಅಲ್ಲಿಗೆ ಬಂದು ಸೇರಿದ ಇಷ್ಟು ಜನರನ್ನು ನಾನು ನೋಡಿದೆನು.

ಯೋ ವೇದ ಮಾನುಷಂ ವ್ಯೂಹಂ ದೈವಂ ಗಾಂಧರ್ವಮಾಸುರಮ್ ।
ಸ ತತ್ರ ಸೇನಾಪ್ರಮುಖೇ ಧೃಷ್ಟದ್ಯುಮ್ನೋ ಮಹಾರಥಃ ॥೧೧॥

ಮಾನುಷವ್ಯೂಹವನ್ನೂ, ದೇವ-ಗಂಧರ್ವ-ಅಸುರವ್ಯೂಹಗಳನ್ನೂ ತಿಳಿದಿರುವ ಮಹಾರಥನಾದ ಧೃಷ್ಟದ್ಯುಮ್ನನು ಅಲ್ಲಿ ಸೇನಾನಾಯಕನಾಗಿದ್ದಾನೆ.

ಭೀಷ್ಮಃ ಶಾಂತನವೋ ರಾಜನ್ ಭಾಗಃ ಕ್ಲೃಪ್ತಃ ಶಿಖಂಡಿನಃ ।
ತಂ ವಿರಾಟೋಽನುಸಂಯಾತಾ ಸಾರ್ಧಂ ಮತ್ಸ್ಯೈಃ ಪ್ರಹಾರಿಭಿಃ॥೧೨॥

ಎಲೈ ರಾಜನೇ, ಶಂತನು ಪುತ್ರನಾದ ಭೀಷ್ಮನು ಶಿಖಂಡಿಯ ಭಾಗವೆಂದು ಕ್ಲುಪ್ತನಾಗಿದ್ದಾನೆ. ಆ ಶಿಖಂಡಿಯನ್ನು ಮತ್ಸ್ಯಸೈನ್ಯದ ಜೊತೆಯಲ್ಲಿ ವಿರಾಟನು ಹಿಂಬಾಲಿಸುತ್ತಾನೆ.

ಜ್ಯೇಷ್ಠಸ್ಯ ಪಾಂಡುಪುತ್ರಸ್ಯ ಭಾಗೋ ಮದ್ರಾಧಿಪೋ ಬಲೀ ।
ತೌ ತು ತತ್ರಾಬ್ರುವನ್ ಕೇಚಿದ್ ವಿಷಮೌ ನೋ ಮತಾವಿತಿ ॥೧೩॥

ಬಲಿಷ್ಠನಾದ ಮದ್ರರಾಜನಾದ ಶಲ್ಯನು ಪಾಂಡುಪುತ್ರರಲ್ಲಿ ಜ್ಯೇಷ್ಠರಾದ ಯುಧಿಷ್ಠಿರನ ಭಾಗವೆಂದು ಕ್ಲೃಪ್ತನಾಗಿದ್ದಾನೆ. ಅಲ್ಲಿದ್ದ ಕೆಲವರು ಇದು ವಿಷಮವಾದ ಜೋಡಿ ಎಂದು ಹೇಳುತ್ತಿದ್ದರು.

ದುರ್ಯೋಧನಃ ಸಹಸುತಃ ಸಾರ್ಧಂ ಭ್ರಾತೃಶತೇನ ಚ ।
ಪ್ರಾಚ್ಯಾಶ್ಚ ದಾಕ್ಷಿಣಾತ್ಯಾಶ್ಚ ಭೀಮಸೇನಸ್ಯ ಭಾಗತಃ ॥೧೪॥

ದುರ್ಯೋಧನ, ಅವನ ಮಕ್ಕಳು, ಅವನ ನೂರು ಜನ ತಮ್ಮಂದಿರು, ಪೂರ್ವದಿಕ್ಕಿನ ಮತ್ತು ದಕ್ಷಿಣ ದಿಕ್ಕಿನ ರಾಜರು, ಎಲ್ಲರೂ ಭೀಮಸೇನನ ಭಾಗದಲ್ಲಿದ್ದಾರೆ.

ಅರ್ಜುನಸ್ಯ ತು ಭಾಗೇನ ಕರ್ಣೋ ವೈಕರ್ತನೋ ಮತಃ ।
ಅಶ್ವತ್ಥಾಮಾ ವಿಕರ್ಣಶ್ಚ ಸೈಂಧವಶ್ಚ ಜಯದ್ರಥಃ ॥೧೫॥

ಅರ್ಜುನನ ಭಾಗದಲ್ಲಿ ವೈಕರ್ತನನಾದ ಕರ್ಣನಿದ್ದಾನೆ. ಅಶ್ವತ್ಥಾಮ, ವಿಕರ್ಣ, ಸಿಂಧುರಾಜನಾದ ಜಯದ್ರಥ ಇವರೂ ಅರ್ಜುನನ ಭಾಗವಾಗಿದ್ದಾರೆ.

ಅಶಕ್ಯಾಶ್ಚೈವ ಯೇ ಕೇಚಿತ್ ಪೃಥಿವ್ಯಾಂ ಶೂರಮಾನಿನಃ ।
ಸರ್ವಾಂಸ್ತಾನರ್ಜುನಃ ಪಾರ್ಥಃ ಕಲ್ಪಯಾಮಾಸ ಭಾಗತಃ ॥೧೬॥

ಭೂಮಿಯಲ್ಲಿ ಇರುವ ತಾವು ಶೂರರೆಂದು ತಿಳಿದಿರುವ, ಇನ್ನೊಬ್ಬರಿಂದ ಸೋಲಿಸಲು ಅಸಾಧ್ಯರಾದ ವೀರರೆಲ್ಲರನ್ನೂ ಅರ್ಜುನನು ತನ್ನ ಭಾಗವೆಂದು ಕಲ್ಪಿಸಿದ್ದಾನೆ.

ಮಹೇಷ್ವಾಸಾ ರಾಜಪುತ್ರಾಃ ಭ್ರಾತರಃ ಪಂಚ ಕೇಕಯಾಃ ।
ಕೇಕಯಾನೇವ ಭಾಗೇನ ಕೃತ್ವಾ ಯೋತ್ಸ್ಯಂತಿ ಸಂಯುಗೇ ॥೧೭॥

ದೊಡ್ಡಧನುಸ್ಸನ್ನು ಧರಿಸಿದ ಅಣ್ಣತಮ್ಮಂದಿರಾದ ಕೇಕಯ ದೇಶದ ಐವರು ರಾಜಪುತ್ರರು ಕೇಕಯ ದೇಶದ ಇನ್ನೊಂದು ಭಾಗದ ರಾಜರನ್ನು ಗುರಿಮಾಡಿಕೊಂಡು ಯುದ್ಧಮಾಡುತ್ತಾರೆ.

ತೇಷಾಮೇವ ಕೃತೋ ಭಾಗೋ ಮಾಲವಾಃ ಸಾಲ್ವಕಾಸ್ತಥಾ ।
ತ್ರಿಗರ್ತಾನಾಂ ಚ ವೈ ಮುಖ್ಯೌ ಯೌ ತೌ ಸಂಶಪ್ತಕಾವಿತಿ ॥೧೮॥

ಮಾಲವರೂ ಸಾಲ್ವಕರೂ ತ್ರಿಗರ್ತರಲ್ಲಿ ಮುಖ್ಯರಾದ ಇಬ್ಬರು ಸಂಶಪ್ತಕರು ಇವರೂ ಕೇಕಯ ದೇಶದ ರಾಜಪುತ್ರರ ಭಾಗವಾಗಿ ಕಲ್ಪಿಸಲ್ಪಟ್ಟಿದ್ದಾರೆ.

ದುರ್ಯೋಧನಸುತಾಃ ಸರ್ವೇ ತಥಾ ದುಃಶಾಸನಸ್ಯ ಚ ।
ಸೌಭದ್ರೇಣ ಕೃತೋ ಭಾಗೋ ರಾಜಾ ಚೈವ ಬೃಹದ್ಬಲಃ ॥೧೯॥

ದುರ್ಯೋಧನನ ಮತ್ತು ದುಶ್ಶಾಸನನ ಎಲ್ಲಾ ಮಕ್ಕಳೂ ಬೃಹದ್ಬಲ ರಾಜನೂ ಸಹ ಅಭಿಮನ್ಯುವಿನ ಭಾಗವಾಗಿ ಮಾಡಲ್ಪಟ್ಟಿದ್ದಾರೆ.

ದ್ರೌಪದೇಯಾ ಮಹೇಷ್ವಾಸಾಃ ಸುವರ್ಣವಿಕೃತಧ್ವಜಾಃ ।
ಧೃಷ್ಟದ್ಯುಮ್ನಮುಖಾ ದ್ರೋಣಮಭಿಯಾಸ್ಯಂತಿ ಭಾರತ ॥೨೦॥

ಎಲೈ ಭಾರತನೇ, ಮಹಾಧನುರ್ಧಾರಿಗಳಾದ, ಸುವರ್ಣಾಲಂಕೃತ ರಥವುಳ್ಳ ದ್ರೌಪದಿಯ ಕುಮಾರರಾದ ಪಂಚ ಉಪಪಾಂಡವರೂ ಮತ್ತು ಧೃಷ್ಟದ್ಯುಮ್ನನೂ ದ್ರೋಣರ ಮೇಲೆ ಎರಗುತ್ತಾರೆ.

ಚೇಕಿತಾನಃ ಸೋಮದತ್ತಂ ದ್ವೈರಥೇ ಯೋದ್ಧುಮಿಚ್ಛತಿ ।
ಭೋಜಂ ತು ಕೃತವರ್ಮಾಣಂ ಯುಯುಧಾನೋ ಯುಯುತ್ಸತಿ॥೨೧॥

ಚೇಕಿತಾನನು ದ್ವಂದ್ವರಥ ಯುದ್ಧದಲ್ಲಿ ಸೋಮದತ್ತನ ಜೊತೆಯಲ್ಲಿ ಯುದ್ಧ ಮಾಡುತ್ತಾನೆ. ಸಾತ್ಯಕಿಯು ಭೋಜವಂಶದವನಾದ ಕೃತವರ್ಮನನ್ನು ಎದುರಿಸುತ್ತಾನೆ.

ಸಹದೇವಸ್ತು ಮಾದ್ರೇಯಃ ಶೂರಃ ಸಂಕ್ರಂದನೋ ಯುಧಿ ।
ಸ್ವಮಂಶಂ ಕಲ್ಪಯಾಮಾಸ ಸ್ಯಾಲಂ ತೇ ಸುಬಲಾತ್ಮಜಮ್ ॥೨೨॥

ಶೂರನೂ ಶತ್ರುಗಳನ್ನು ರೋದನಕ್ಕೆ ವಶಪಡಿಸುವವನೂ ಆದ ಸಹದೇವನು ದುರ್ಯೋಧನನ ಭಾವಮೈದುನನಾದ ಶಕುನಿಯನ್ನು ತನ್ನ ಭಾಗವಾಗಿ ಕಲ್ಪಿಸಿಕೊಂಡಿದ್ದಾನೆ.

ಉಲೂಕಂ ಚೈವ ಕೈತವ್ಯಂ ಯೇ ಚ ಸಾರಸ್ವತಾ ಗಣಾಃ ।
ನಕುಲಃ ಕಲ್ಪಯಾಮಾಸ ಭಾಗಂ ಮಾದ್ರವತೀಸುತಃ ॥೨೩॥

ಮಾದ್ರಿಯ ಪುತ್ರನಾದ ನಕುಲನು ಮೋಸಗಾರನಾದ ಉಲೂಕನನ್ನೂ ಮತ್ತು ಸರಸ್ವತೀ ನದೀತೀರದಲ್ಲಿ ವಾಸಮಾಡುವ ಯೋಧರನ್ನೂ ತನ್ನ ಭಾಗವಾಗಿ ಕಲ್ಪಿಸಿಕೊಂಡಿದ್ದಾನೆ.

ಯೇ ಚಾನ್ಯೇ ಪಾರ್ಥಿವಾ ರಾಜನ್ ಪ್ರತ್ಯುದ್ಯಾಸ್ಯಂತಿ ಸಂಗರೇ ।
ಸಮಾಹ್ವಾನೇನ ತಾಂಶ್ಚಾಪಿ ಪಾಂಡುಪುತ್ರಾ ಅಕಲ್ಪಯನ್ ॥೨೪॥

ಎಲೈ ರಾಜನೇ, ಬೇರೆ ಯಾವ ರಾಜರು ಯುದ್ಧದಲ್ಲಿ ತಮ್ಮನ್ನು ಎದುರಿಸುತ್ತಾರೆಯೋ ಅವರನ್ನೂ ಆಹ್ವಾನ ಮಾಡಿ ಪಾಂಡವರು ತಮ್ಮ ಭಾಗವಾಗಿ ಕಲ್ಪಿಸಿಕೊಂಡಿದ್ದಾರೆ.

ಏವಮೇಷಾಮನೀಕಾನಿ ಪ್ರವಿಭಕ್ತಾನಿ ಭಾಗಶಃ ।
ಯತ್ ತೇ ಕಾರ್ಯಂ ಸಪುತ್ರಸ್ಯ ಕ್ರಿಯತಾಂ ತದಕಾಲಿಕಮ್ ॥೨೫॥

ಹೀಗೆ ಪಾಂಡವರ ಸೈನ್ಯಗಳು ತಮ್ಮ ಗುರಿಗಳನ್ನು ಹಂಚಿಕೊಂಡಿವೆ. ನೀನು ನಿನ್ನ ಮಗನ ಜೊತೆಯಲ್ಲಿ ಏನು ಮಾಡಬಹುದೋ ಅದನ್ನು ಶೀಘ್ರವಾಗಿ ಮಾಡು.

ಧೃತರಾಷ್ಟ್ರಃ

ನ ಸಂತಿ ಸರ್ವೇ ಪುತ್ರಾ ಮೇ ಮೂಢಾಃ ದುರ್ದ್ಯೂತದೇವಿನಃ ।
ಯೇಷಾಂ ಯುದ್ಧಂ ಬಲವತಾ ಭೀಮೇನ ರಣಮೂರ್ಧನಿ ॥೨೬॥

ಧೃತರಾಷ್ಟ್ರ– ಘೋರ ಸಂಗ್ರಾಮದಲ್ಲಿ ಬಲಿಷ್ಠನಾದ ಭೀಮನ ಜೊತೆಯಲ್ಲಿ ಯುದ್ಧವನ್ನು ಹವಣಿಸಿಕೊಂಡಿರುವ ಮೂಢರೂ, ಕೆಟ್ಟದ್ಯೂತವನ್ನು ಆಡುವವರೂ ಆದ ನನ್ನ ಪುತ್ರರು ನಾಶ ಹೊಂದಿದ್ದಾರೆ.

ರಾಜಾನಃ ಪಾರ್ಥಿವಾಃ ಸರ್ವೇ ಪ್ರೋಕ್ಷಿತಾಃ ಕಾಲಧರ್ಮಣಾ ।
ಗಾಂಡೀವಾಗ್ನಿಂ ಪ್ರವೇಕ್ಷ್ಯಂತಿ ಪತಂಗಾ ಇವ ಪಾವಕಮ್ ॥೨೭॥

ಭೂಮಿಯ ಮೇಲಿರುವ ರಾಜರೆಲ್ಲರೂ ಕಾಲಧರ್ಮದಿಂದ ಪ್ರೋಕ್ಷಿತ ಪಶುಗಳಂತಿದ್ದು ಪತಂಗಗಳು ಅಗ್ನಿಯನ್ನು ಪ್ರವೇಶಿಸುವಂತೆ ಗಾಂಡೀವಾಗ್ನಿಯನ್ನು ಪ್ರವೇಶಿಸುವರು.

ವಿದ್ರುತಾಂ ವಾಹಿನೀಂ ಮನ್ಯೇ ಕೃತವೈರೈರ್ಮಹಾತ್ಮಭಿಃ ।
ತಾಂ ರಣೇ ಕೇಽನುಯಾಸ್ಯಂತಿ ಪ್ರಭಗ್ನಾಂ ಪಾಂಡವೈರ್ಯುಧಿ ॥೨೮॥

ವೈರವನ್ನು ಹೊಂದಿದ ಮಹಾತ್ಮರಾದ ಪಾಂಡವರಿಂದ ನಮ್ಮ ಸೈನ್ಯವು ಓಡಿಸಲ್ಪಟ್ಟಿದೆ ಎಂದು ಭಾವಿಸುತ್ತೇನೆ. ಯುದ್ಧದಲ್ಲಿ ಪಾಂಡವರಿಂದ ಭಗ್ನವಾದ ನಮ್ಮ ಸೈನ್ಯವನ್ನು ಯಾರು ಹಿಂಬಾಲಿಸುತ್ತಾರೆ?

ಸರ್ವೇ ಹ್ಯತಿರಥಾಃ ಶೂರಾಃ ಕೀರ್ತಿಮಂತಃ ಪ್ರತಾಪಿನಃ ।
ಸೂರ್ಯಪಾವಕಯೋಸ್ತುಲ್ಯಾಃ ತೇಜಸಾ ಸಮಿತಿಂಜಯಾಃ ॥೨೯॥

ಪಾಂಡವರೆಲ್ಲರೂ ಅತಿರಥರು, ಶೂರರು, ತೇಜಸ್ಸಿನಲ್ಲಿ ಸೂರ್ಯಾಗ್ನಿಗಳಿಗೆ ಸಮಾನರಾದವರು, ಯುದ್ಧದಲ್ಲಿ ಗೆಲ್ಲುವವರು.

ಯೇಷಾಂ ಯುಧಿಷ್ಠಿರೋ ನೇತಾ ಗೋಪ್ತಾ ಚ ಮಧುಸೂದನಃ ।
ಯೋಧೌ ಚ ಪಾಂಡವೌ ವೀರೌ ಸವ್ಯಸಾಚಿವೃಕೋದರೌ ॥೩೦॥

ನಕುಲಃ ಸಹದೇವಶ್ಚ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ಸಾತ್ಯಕಿರ್ದ್ರುಪದಶ್ಚೈವ ಧೃಷ್ಟದ್ಯುಮ್ನಶ್ಚ ಚಾತ್ಮಜಾಃ ॥೩೧॥

ಉತ್ತಮೌಜಾಶ್ಚ ಪಾಂಚಾಲೋ ಯುಧಾಮನ್ಯುಶ್ಚ ದುರ್ಜಯಃ ॥೩೨॥

ಶಿಖಂಡೀ ಕ್ಷತ್ರದೇವಶ್ಚ ತಥಾ ವೈರಾಟಿರುತ್ತರಃ ।
ಕಾಶಯಶ್ಚೇದಯಶ್ಚೈವ ಮತ್ಸ್ಯಾಃ ಸರ್ವೇ ಚ ಸೃಂಜಯಾಃ ॥೩೩॥

ವಿರಾಟಪುತ್ರೋ ಬಭ್ರುಶ್ಚ ಪಾಂಚಾಲಾಶ್ಚ ಪ್ರಭದ್ರಕಾಃ ।
ತೇಷಾಮಿಂದ್ರೋಽಪ್ಯಕಾಮಾನಾಂ ನ ಹರೇತ್ ಪೃಥಿವೀಮಿಮಾಮ್ ॥

ವೀರಾಣಾಂ ರಣಧೀರಾಣಾಂ ಯೇ ಭಿಂದ್ಯುಃ ಪರ್ವತಾನಪಿ ॥೩೫॥

ಯಾರಿಗೆ ಯುಧಿಷ್ಠಿರನು ನಾಯಕನಾಗಿದ್ದಾನೆಯೋ, ಮಧುಸೂದನನು ರಕ್ಷಕನಾಗಿದ್ದಾನೆಯೋ, ವೀರರಾದ ಪಾಂಡುಪುತ್ರರಾದ ಭೀಮಾರ್ಜುನರೂ, ನಕುಲ-ಸಹದೇವರೂ, ಪಾರ್ಷತನಾದ ಧೃಷ್ಟದ್ಯುಮ್ನನೂ, ಸಾತ್ಯಕಿ-ದ್ರುಪದ ಮತ್ತು ಧೃಷ್ಟದ್ಯುಮ್ನನ ಪುತ್ರರೂ, ಪಾಂಚಾಲದೇಶದ ಉತ್ತಮೌಜ ಮತ್ತು ದುರ್ಜಯನಾದ ಯುಧಾಮನ್ಯುವೂ, ಶಿಖಂಡಿ, ಕ್ಷತ್ರದೇವ ಮತ್ತು ವಿರಾಟಪುತ್ರನಾದ ಉತ್ತರನೂ, ಕಾಶಿ, ಚೇದಿ, ಮತ್ಸ್ಯ, ಸೃಂಜಯ ದೇಶದ ಸೈನಿಕರೂ, ವಿರಾಟಪುತ್ರನಾದ ಬಭ್ರುವೂ, ಪಾಂಚಾಲದೇಶದ ಪ್ರಭದ್ರಕರೂ ಯೋಧರಾಗಿದ್ದಾರೆಯೋ, ಅಂತಹ ವೀರರೂ ರಣಧೀರರೂ ಪರ್ವತವನ್ನೇ ಭೇದಿಸುವವರೂ ಆದ ಯೋಧರ ಅನುಮತಿ ಇಲ್ಲದೆ ಇಂದ್ರನೂ ಈ ಭೂಮಿಯನ್ನು ಜಯಿಸಲಾರ.

ತಾನ್ ಸರ್ವಗುಣಸಂಪನ್ನಾನ್ ಅಮನುಷ್ಯಪ್ರತಾಪಿನಃ ।
ಕ್ರೋಶತೋ ಮಮ ದುಷ್ಪುತ್ರೋ ಯೋದ್ಧುಮಿಚ್ಛತಿ ಸಂಜಯ ॥೩೬॥

ಎಲೈ ಸಂಜಯನೇ, ನನ್ನ ದುಷ್ಟಪುತ್ರನು ನಾನು ಬೇಡವೆಂದು ಕಿರುಚುತ್ತಿದ್ದರೂ ಸರ್ವಗುಣಸಂಪನ್ನರಾದ, ಮನುಷ್ಯರಿಗೆ ಮೀರಿದ ಪ್ರಕಾಶವುಳ್ಳ ಪಾಂಡವರ ಜೊತೆಯಲ್ಲಿ ಯುದ್ಧ ಮಾಡಲು ಬಯಸುತ್ತಿದ್ದಾನೆ.

ದುರ್ಯೋಧನಃ

ಉಭೌ ಸ್ಮ ಏಕಜಾತೀಯೌ ತಥೋಭೌ ಭೂಮಿಗೋಚರೌ ।
ಅಥ ಕಸ್ಮಾತ್ ಪಾಂಡವಾನಾಮೇಕತೋ ಮನ್ಯಸೇ ಜಯಮ್ ॥೩೭॥

ದುರ್ಯೋಧನ– ಇಬ್ಬರೂ ಒಂದೇ ಕ್ಷತ್ರಿಯ ಜಾತಿಗೆ ಸೇರಿದವರು. ಇಬ್ಬರೂ ಭೂಮಿಯ ಮೇಲೆ ವಾಸಿಸುವವರು. ಹೀಗಿರುವಾಗ ಪಾಂಡವರಿಗೇ ಜಯವಾಗುವುದೆಂದು ನೀನು ಹೇಗೆ ಭಾವಿಸುತ್ತೀಯೆ?

ಪಿತಾಮಹಂ ಚ ದ್ರೋಣಂ ಚ ಕೃಪಂ ಕರ್ಣಂ ಚ ದುರ್ಜಯಮ್ ।
ಜಯದ್ರಥಂ ಸೋಮದತ್ತಮಶ್ವತ್ಥಾಮಾನಮೇವ ಚ ॥೩೮॥

ಸುತೇಜಸೋ ಮಹೇಷ್ವಾಸಾನ್ ಇಂದ್ರೋಽಪಿ ಸಹಿತೋಽಮರೈಃ ।
ಅಶಕ್ತಃ ಸಮರೇ ಜೇತುಂ ಕಿಂ ಪುನಸ್ತಾತ ಪಾಂಡವಾಃ ॥೩೯॥

ಪಿತಾಮಹರಾದ ಭೀಷ್ಮ, ದ್ರೋಣ, ಕೃಪ, ದುರ್ಜಯನಾದ ಕರ್ಣ, ಜಯದ್ರಥ, ಸೋಮದತ್ತ, ಅಶ್ವತ್ಥಾಮ ಈ ಮಹಾಧನುರ್ಧಾರಿಗಳು ತೀವ್ರ ಪರಾಕ್ರಮಿಗಳು. ದೇವತೆಗಳಿಂದ ಸಹಿತನಾದ ಇಂದ್ರನೂ ಸಹ ಯುದ್ಧದಲ್ಲಿ ಅವರನ್ನು ಗೆಲ್ಲಲಾರ. ತಂದೆಯೇ, ಇನ್ನು ಪಾಂಡವರು ಗೆಲ್ಲುವುದು ಹೇಗೆ?

ಸರ್ವೇ ಚ ಪೃಥಿವೀಪಾಲಾ ಮದರ್ಥೇ ತಾತ ಪಾಂಡವಾನ್ ।
ಆರ್ಯಾಃ ಶಸ್ತ್ರಭೃತಃ ಶೂರಾಃ ಸಮರ್ಥಾಃ ಪ್ರತಿಬಾಧಿತುಮ್ ॥೪೦॥

ಎಲೈ ತಂದೆಯೇ, ಉದಾತ್ತವಾದ ನಡತೆಯುಳ್ಳ, ಶಸ್ತ್ರಧಾರಿಗಳಾದ, ಶೂರರಾದ ರಾಜರೆಲ್ಲರೂ ನನ್ನ ಸಲುವಾಗಿ ಪಾಂಡವರನ್ನು ಬಾಧಿಸಲು ಸಮರ್ಥರಾಗಿದ್ದಾರೆ.

ನ ಮಾಮಕಾನ್ ಪಾಂಡವಾಸ್ತೇ ಸಮರ್ಥಾಃ ಪ್ರತಿವೀಕ್ಷಿತುಮ್ ।
ಪರಾಕ್ರಾಂತೋ ಹ್ಯಹಂ ಪಾಂಡೂನ್ ಸಪುತ್ರಾನ್ ಯೋದ್ಧುಮಾಹವೇ ॥

ಆದರೆ ನನ್ನವರನ್ನು ಮಾತ್ರ ಪಾಂಡವರು ನೋಡಲೂ ಸಾಧ್ಯವಿಲ್ಲ. ನಾನು ಪಾಂಡವರನ್ನು, ಅವರ ಪುತ್ರರನ್ನು ಯುದ್ಧದಲ್ಲಿ ಎದುರಿಸಲು ಸನ್ನದ್ಧನಾಗಿದ್ದೇನೆ.

ಮತ್ಪ್ರಿಯಂ ಪಾರ್ಥಿವಾಃ ಸರ್ವೇ ಯೇ ಚಿಕೀರ್ಷಂತಿ ಭಾರತ ।
ತೇ ತಾನಾವಾರಯಿಷ್ಯಂತಿ ಐಣೇಯಾನಿವ ತಂತುನಾ ॥೪೨॥

ಎಲೈ ಭಾರತನೇ, ನನ್ನ ಪ್ರಿಯವನ್ನು ಉಂಟುಮಾಡಲು ಬಂದಿರುವ ರಾಜರೆಲ್ಲರೂ ಜಿಂಕೆಯ ಮರಿಗಳನ್ನು ಬಲೆಯಿಂದ ಹಿಡಿದಂತೆ ಆ ಪಾಂಡವರನ್ನು ತಡೆಯುವರು.

ಮಹತಾ ರಥವಂಶೇನ ಶರಜಾಲೈಶ್ಚ ಮಾಮಕೈಃ ।
ಅಭಿದ್ರುತಾ ಭವಿಷ್ಯಂತಿ ಪಾಂಚಾಲಾಃ ಪಾಂಡವೈಃ ಸಹ ॥೪೩॥

ನನ್ನ ದೊಡ್ಡ ರಥಸಮೂಹದಿಂದ ಮತ್ತು ಬಾಣಗಳ ಸಮೂಹದಿಂದ ಹಿಂಬಾಲಿಸಲ್ಪಟ್ಟು ಪಾಂಡವರ ಜೊತೆಯಲ್ಲಿ ಪಾಂಚಾಲರೂ ಸಹ ಯುದ್ಧಭೂಮಿಯಿಂದ ಓಡಿಹೋಗುವರು.

ಧೃತರಾಷ್ಟ್ರಃ

ಉನ್ಮತ್ತ ಇವ ಮೇ ಪುತ್ರೋ ವಿಲಪತ್ಯೇಷ ಸಂಜಯ ।
ನ ಹಿ ಶಕ್ತೋ ಯುಧಾ ಜೇತುಂ ಧರ್ಮರಾಜಂ ಯುಧಿಷ್ಠಿರಮ್ ॥೪೪॥

ಧೃತರಾಷ್ಟ್ರ– ಸಂಜಯನೇ, ಈ ನನ್ನ ಪುತ್ರನು ಹುಚ್ಚನಂತೆ ಮಾತನಾಡುತ್ತಿದ್ದಾನೆ. ಯುದ್ಧದಲ್ಲಿ ಧರ್ಮರಾಜನಾದ ಯುಧಿಷ್ಠಿರನನ್ನು ಗೆಲ್ಲಲು ಇವನು ಸಮರ್ಥನಲ್ಲ.

ಜಾನಾತಿ ಹಿ ಯಥಾ ಭೀಷ್ಮಃ ಪಾಂಡವಾನಾಂ ಯಶಸ್ವಿನಾಮ್ ।
ಬಲವತ್ತಾಂ ಸಪುತ್ರಾಣಾಂ ಧರ್ಮಜ್ಞಾನಾಂ ಮಹಾತ್ಮನಾಮ್ ॥೪೫॥

ಯತೋ ನಾರೋಚಯದಯಂ ವಿಗ್ರಹಂ ತೈರ್ಮಹಾತ್ಮಭಿಃ ।
ಕಿಂತು ಸಂಜಯ ಮೇ ಬ್ರೂಹಿ ಪುನಸ್ತೇಷಾಂ ವಿಚೇಷ್ಟಿತಮ್ ॥೪೬॥

ಕೀರ್ತಿವಂತರಾದ, ಪುತ್ರಸಹಿತರಾದ, ಧರ್ಮಜ್ಞರಾದ, ಮಹಾತ್ಮರಾದ ಪಾಂಡವರ ಬಲವನ್ನು ಭೀಷ್ಮನು ಸರಿಯಾಗಿ ತಿಳಿದಿದ್ದಾನೆ. ಆದ್ದರಿಂದಲೇ ಅವನು ಮಹಾತ್ಮರಾದ ಅವರ ಜೊತೆಯಲ್ಲಿ ವೈರವನ್ನು ಅನುಮೋದಿಸಲಿಲ್ಲ. ಆದರೆ ಸಂಜಯನೇ, ನನಗೆ ಪುನಃ ಪಾಂಡವರ ಚೇಷ್ಟೆಯನ್ನು (ಯುದ್ಧಕ್ರಿಯೆಗಳನ್ನು) ಕುರಿತು ಹೇಳುವವನಾಗು.

ಕಸ್ತಾಂಸ್ತರಸ್ವಿನೋ ಭೂಯಃ ಸಂದೀಪಯತಿ ಪಾಂಡವಾನ್ ।
ಅರ್ಚಿಷ್ಮತೋ ಮಹೇಷ್ವಾಸಾನ್ ಹವಿಷಾ ಪಾವಕಾನಿವ ॥೪೭॥

ಕಿಡಿಯನ್ನು ಕಾರುವ ಅಗ್ನಿಯನ್ನು ಹವಿಸ್ಸಿನಿಂದ ಉದ್ದೀಪನಗೊಳಿಸಿದಂತೆ ಮಹಾಧನುರ್ಧಾರಿಗಳಾದ, ವೇಗವಂತರಾದ ಆ ಪಾಂಡವರನ್ನು ಯಾರು ಉದ್ದೀಪನಗೊಳಿಸುತ್ತಿದ್ದಾರೆ?

ಸಂಜಯಃ

ಧೃಷ್ಟದ್ಯುಮ್ನಃ ಸದೈವೈತಾನ್ ಸಂದೀಪಯತಿ ಭಾರತ ॥೪೮॥

ಸಂಜಯ– ಎಲೈ ಭಾರತನೇ, ಧೃಷ್ಟದ್ಯುಮ್ನನು ಯಾವಾಗಲೂ ಅವರನ್ನು ಉದ್ದೀಪನಗೊಳಿಸುತ್ತಿದ್ದಾನೆ.

ಯುದ್ಧ್ಯಧ್ವಮಿತಿ ಮಾ ಭೈಷ್ಟ ಯುದ್ಧಾದ್ ಭರತಸತ್ತಮಾಃ ॥೪೯॥

ಯೇ ಕೇಚಿತ್ ಪಾರ್ಥಿವಾಸ್ತತ್ರ ಧಾರ್ತರಾಷ್ಟ್ರೇಣ ಸಂವೃತಾಃ ।
ಯುದ್ಧೇ ಸಮಾಗಮಿಷ್ಯಂತಿ ತುಮುಲೇ ಶಸ್ತ್ರಸಂಕುಲೇ ॥೫೦॥

ತಾನ್ ಸರ್ವಾನಾಹವೇ ಕ್ರುದ್ಧಾನ್ ಸಾನುಬಂಧಾನ್ ಸಮಾಗತಾನ್ ।
ಅಹಮೇಕಃ ಸಮಾದಾಸ್ಯೇ ತಿಮಿರ್ಮತ್ಸ್ಯಾನಿವೌದಕಾತ್ ॥೫೧॥

ಎಲೈ ಭರತಸತ್ತಮರೇ, ಯುದ್ಧಕ್ಕೆ ಹೆದರಬೇಡಿ, ಯುದ್ಧವನ್ನು ಮಾಡಿ. ಯಾವ ರಾಜರು ದುರ್ಯೋಧನನಿಂದ ಸಹಿತರಾಗಿ ಶಸ್ತ್ರನಿಬಿಡವಾದ ಘೋರವಾದ ಯುದ್ಧದಲ್ಲಿ ಬಂದು ಸೇರುವರೋ ಅಂತಹ ಕ್ರುದ್ಧರಾದ, ಸಮಾಗತರಾದ ರಾಜರನ್ನೆಲ್ಲಾ ಅವರ ಪರಿವಾರಸಹಿತವಾಗಿ ನಾನೊಬ್ಬನೇ ತಿಮಿಂಗಿಲವು ಮತ್ಸ್ಯವನ್ನು ನುಂಗಿದಂತೆ ನುಂಗುವೆನು (ಸಂಹರಿಸುವೆನು).

ಭೀಷ್ಮಂ ದ್ರೋಣಂ ಕೃಪಂ ಕರ್ಣಂ ದ್ರೌಣಿಂ ಶಲ್ಯಂ ಸುಯೋಧನಮ್ ।
ಏತಾಂಶ್ಚಾಪಿ ನಿರೋತ್ಸ್ಯಾಮಿ ವೇಲೇವ ಮಕರಾಲಯಮ್ ॥೫೨॥

ಭೀಷ್ಮ, ದ್ರೋಣ, ಕೃಪ, ಕರ್ಣ, ಅಶ್ವತ್ಥಾಮ, ಶಲ್ಯ ಮತ್ತು ಸುಯೋಧನ ಇವರನ್ನು ನಾನು ತೀರವು ಸಮುದ್ರವನ್ನು ತಡೆದಂತೆ ತಡೆಯುವೆನು.

ಸಂಜಯಃ

ತಥಾ ಬ್ರುವಂತಂ ಧರ್ಮಾತ್ಮಾ ಪ್ರಾಹ ರಾಜಾ ಯುಧಿಷ್ಠಿರಃ ॥೫೩॥

ಸಂಜಯ– ಹಾಗೆ ಹೇಳುತ್ತಿದ್ದ ಧೃಷ್ಟದ್ಯುಮ್ನನನ್ನು ಕುರಿತು ರಾಜನಾದ, ಧರ್ಮಾತ್ಮನಾದ ಯುಧಿಷ್ಠಿರನು ಹೀಗೆ ಹೇಳಿದನು.

ತವ ಧೈರ್ಯಂ ಚ ವೀರ್ಯಂ ಚ ಪಾಂಚಾಲಾಃ ಪಾಂಡವೈಃ ಸಹ ।
ಸರ್ವೇ ಸಮಧಿರೂಢಾಃ ಸ್ಮ ಸಂಗ್ರಾಮಾನ್ನಃ ಸಮುದ್ಧರ ॥೫೪॥

ಪಾಂಚಾಲಸಹಿತರಾದ, ಪಾಂಡವರಾದ ನಾವು ನಿನ್ನ ಧೈರ್ಯವನ್ನೂ ಮತ್ತು ಪರಾಕ್ರಮವನ್ನೂ ಅವಲಂಬಿಸಿದ್ದೇವೆ. ನಮ್ಮನ್ನು ಯುದ್ಧದಿಂದ ಉದ್ಧರಿಸುವವನಾಗು.

ಜಾನಾಮಿ ತ್ವಾಂ ಮಹಾಬಾಹೋ ಕ್ಷತ್ರಧರ್ಮೇ ವ್ಯವಸ್ಥಿತಮ್ ।
ಸಮರ್ಥಮೇಕಂ ಪರ್ಯಾಪ್ತಂ ಕೌರವಾಣಾಂ ವಿನಿಗ್ರಹೇ ॥೫೫॥

ಎಲೈ ಮಹಾಬಾಹುವೇ, ನೀನು ಕ್ಷತ್ರಧರ್ಮದಲ್ಲಿ ನಿಷ್ಠನಾಗಿದ್ದೀಯೆ ಮತ್ತು ಕೌರವರನ್ನು ನಿಗ್ರಹಿಸಲು ನೀನೊಬ್ಬನೇ ಸಮರ್ಥನಾಗಿದ್ದೀಯೆ ಎಂದು ನಾನು ತಿಳಿದಿದ್ದೇನೆ.

ಪುರಸ್ತಾದುಪಯಾತಾನಾಂ ಕೌರವಾಣಾಂ ಯುಯುತ್ಸತಾಮ್ ॥೫೬॥

ಭವತಾ ಯದ್ ವಿಧಾತವ್ಯಂ ತನ್ನಃ ಶ್ರೇಯಃ ಪರಂತಪ ।
ಸಂಗ್ರಾಮಾದಪಯಾತಾನಾಂ ಭಗ್ನಾನಾಂ ಶರಣೈಷಿಣಾಮ್ ॥೫೭॥

ಪೌರುಷಂ ದರ್ಶಯನ್ ಶೂರೋ ಯಸ್ತಿಷ್ಠೇದಗ್ರತಃ ಪುಮಾನ್ ।
ಕ್ರೀಣೀಯಾತ್ ತಂ ಸಹಸ್ರೇಣ ಇತಿ ನೀತಿಮತಾಂ ಮತಮ್ ॥೫೮॥

ಯುದ್ಧವನ್ನು ಮಾಡುವ ಅಪೇಕ್ಷೆಯಿಂದ ಮುನ್ನುಗ್ಗುವ ಕೌರವರಿಗೆ ನೀನು ಏನು ಮಾಡುತ್ತೀಯೋ ಅದು ನಮಗೆ ಶ್ರೇಯಸ್ಕರವಾದುದು. ಎಲೈ ಪರಂತಪನೇ, ಸಂಗ್ರಾಮದಲ್ಲಿ ಭಗ್ನರಾಗಿ, ಶರಣಾರ್ಥಿಗಳಾಗಿ ಹಿಂದೆ ಸರಿಯುವ ಸೈನಿಕರಿಗೆ ಯಾವ ಶೂರನು ತನ್ನ ಪೌರುಷವನ್ನು ತೋರಿಸುತ್ತಾ ಮುಂದೆ ನಿಲ್ಲುವನೋ ಅವನನ್ನು ಸಹಸ್ರಸುವರ್ಣದಿಂದಲಾದರೂ ಕೊಂಡುಕೊಳ್ಳಬೇಕು ಎಂಬುದು ರಾಜನೀತಿಯನ್ನು ತಿಳಿದವರ ಅಭಿಪ್ರಾಯ.

ಸ ತ್ವಂ ಶೂರಶ್ಚ ವೀರಶ್ಚ ವಿಕ್ರಾಂತಶ್ಚ ನರರ್ಷಭ ।
ಭಯಾರ್ತಾನಾಂ ಪರಿತ್ರಾತಾ ಸಂಯುಗೇಷು ನ ಸಂಶಯಃ ॥೫೯॥

ಎಲೈ ನರರ್ಷಭನೇ, ಅಂತಹ ನೀನು ಶೂರನೂ, ವೀರನೂ, ಪರಾಕ್ರಮಶಾಲಿಯೂ, ಯುದ್ಧದಲ್ಲಿ ಭಯಗ್ರಸ್ತರಾದವರನ್ನು ರಕ್ಷಿಸುವವನೂ ಆಗಿದ್ದೀಯೆ ಎಂಬ ವಿಷಯದಲ್ಲಿ ಸಂಶಯವಿಲ್ಲ.

ಸಂಜಯಃ

ಏವಂ ಬ್ರುವತಿ ಕೌಂತೇಯೇ ಧರ್ಮಾತ್ಮನಿ ಯುಧಿಷ್ಠಿರೇ ।
ಧೃಷ್ಟದ್ಯುಮ್ನ ಉವಾಚೇದಂ ಮಾಂ ವಚೋ ಗತಸಾಧ್ವಸಮ್ ॥೬೦॥

ಸಂಜಯ– ಧರ್ಮಾತ್ಮನಾದ ಕುಂತೀಪುತ್ರನಾದ ಯುಧಿಷ್ಠಿರನು ಹೀಗೆ ಮಾತನಾಡುತ್ತಿರಲು, ಧೃಷ್ಟದ್ಯುಮ್ನನು ನನ್ನನ್ನು ಕುರಿತು ನಿರ್ಭಯವಾಗಿ ಈ ಮಾತನ್ನು ಆಡಿದನು.

ಸರ್ವಾನ್ ಜನಪದಾನ್ ಸೂತ ಯೋಧಾ ದುರ್ಯೋಧನಸ್ಯ ಯೇ ।
ಸಬಾಹ್ಲಿಕಾನ್ ಕುರೂನ್ ಬ್ರೂಯಾಃ ಪ್ರತಿವೀರಾನ್ ಶರದ್ವತಃ ॥೬೧॥

ಸೂತಪುತ್ರಂ ತಥಾ ದ್ರೋಣಂ ಸಹಪುತ್ರಂ ಜಯದ್ರಥಮ್ ।
ಭೀಷ್ಮಂ ಚೈವ ಬ್ರೂಹಿ ಗತ್ವಾ ಆಶು ಗಚ್ಛ ಚ ಮಾಚಿರಮ್ ॥೬೨॥

ಎಲೈ ಸೂತನೇ, ಕೈಯಲ್ಲಿ ಬಾಣವನ್ನು ಹಿಡಿದ ಪ್ರತಿವೀರರಾದ, ದುರ್ಯೋಧನ ಪಕ್ಷಕ್ಕೆ ಸೇರಿದ ಎಲ್ಲಾ ಜನಪದರನ್ನೂ, ಯೋಧರನ್ನೂ, ಬಾಹ್ಲಿಕಸಹಿತರಾದ ಕುರುಗಳನ್ನೂ, ಸೂತಪುತ್ರನಾದ ಕರ್ಣನನ್ನೂ, ಅಶ್ವತ್ಥಾಮನಿಂದ ಸಹಿತರಾದ ದ್ರೋಣರನ್ನೂ, ಜಯದ್ರಥನನ್ನೂ ಮತ್ತು ಭೀಷ್ಮರನ್ನೂ ಸಮಾಗಮವನ್ನು ಹೊಂದಿ ಶೀಘ್ರವಾಗಿ ಹೋಗಿ ಹೇಳುವವನಾಗು.

ಯುಧಿಷ್ಠಿರೋ ಸಾಧುನೈವಾಭ್ಯುಪೈತಿ
ಮಾ ವೋಽವಧೀದರ್ಜುನೋ ದೇವಗುಪ್ತಃ ।
ವನಂ ದಗ್ಧಂ ದೇವರಾಜಸ್ಯ ತೂರ್ಣಂ
ಯಾಚಧ್ವಂ ವೈ ಪಾಂಡವಂ ಲೋಕವೀರಮ್ ॥೬೩॥

ಯುಧಿಷ್ಠಿರನು ಸಾಧುಮಾರ್ಗದಿಂದಲೇ ನಡೆಯುತ್ತಾನೆ. ದೇವಗುಪ್ತನಾದ ಅರ್ಜುನನು ನಿಮ್ಮನ್ನು ವಧೆ ಮಾಡದಿರಲಿ. ದೇವರಾಜನಾದ ಇಂದ್ರನ ಖಾಂಡವವನವು ಶೀಘ್ರವಾಗಿ ಅರ್ಜುನನಿಂದ ದಗ್ಧವಾಯಿತು. ಲೋಕವೀರನಾದ ಪಾಂಡವನನ್ನು ನೀವು ಯಾಚಿಸುವವರಾಗಿ.

ನೈತಾದೃಶೋ ಹಿ ಯೋಧೋಽಸ್ತಿ ಪೃಥಿವ್ಯಾಮಿಹ ಕಶ್ಚನ ।
ಯಥಾವಿಧಃ ಸವ್ಯಸಾಚೀ ಪಾಂಡವಃ ಸತ್ಯವಿಕ್ರಮಃ ॥೬೪॥

ಪಾಂಡುಪುತ್ರನಾದ, ಸತ್ಯವಿಕ್ರಮನಾದ, ಸವ್ಯಸಾಚಿಯಾದ ಅರ್ಜುನನು ಎಂತಹ ಯೋಧನೋ ಅಂತಹ ಯೋಧನು ಪೃಥಿವಿಯಲ್ಲಿ ಯಾವನೂ ಇಲ್ಲ.

ದೇವೈರ್ಹಿ ಸಂಭೃತೋ ದಿವ್ಯೋ ರಥೋ ಗಾಂಡೀವಧನ್ವನಃ ।
ನ ಸ ಜೇಯೋ ಮನುಷ್ಯೇಣ ಮಾ ಸ್ಮ ಕೃದ್ಧ್ವಂ ಮನೋ ಯುಧಿ ॥೬೫॥

ಗಾಂಡೀವಧನುರ್ಧಾರಿಯಾದ ಅರ್ಜುನನಿಗೆ ದೇವತೆಗಳು ದಿವ್ಯವಾದ ರಥವನ್ನು ನೀಡಿದ್ದಾರೆ. ಅವನನ್ನು ಮನುಷ್ಯರು ಜಯಿಸಲು ಸಾಧ್ಯವಿಲ್ಲ. ಯುದ್ಧವನ್ನು ಮಾಡುವ ಮನಸ್ಸನ್ನು ತ್ಯಜಿಸಿ (ಎಂದು ಹೇಳುವವನಾಗು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕೋನಷಷ್ಟಿತಮೋऽಧ್ಯಾಯಃ ॥

ವ್ಯಾಸಾಭಿಗಮನಪರ್ವಣಿ ದ್ವಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಐವತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತನೆಯ ಅಧ್ಯಾಯ

ಧೃತರಾಷ್ಟ್ರನ ಮಾತುಗಳನ್ನು ನಿರಾಕರಿಸಿ, ದುರ್ಯೋಧನನಿಂದ
ಕರ್ಣ-ದುಶ್ಶಾಸನರ ಜೊತೆಯಲ್ಲಿ ತನ್ನ ಯುದ್ಧೋತ್ಸಾಹದ ಕಥನ.

ಧೃತರಾಷ್ಟ್ರಃ

ಕ್ಷತ್ರತೇಜಾ ಬ್ರಹ್ಮಚಾರೀ ಕೌಮಾರಾದಪಿ ಪಾಂಡವಃ ।
ತೇನ ಸಂಯುಗಮೇಷ್ಯಂತಿ ಮಂದಾ ವಿಲಪತೋ ಮಮ ॥೧॥

ಧೃತರಾಷ್ಟ್ರ- ಪಾಂಡುಪುತ್ರನಾದ ಅರ್ಜುನನು ಬಾಲ್ಯದಿಂದಲೂ ಕ್ಷತ್ರತೇಜಸ್ಸುಳ್ಳವನು ಮತ್ತು ಬ್ರಹ್ಮಚಾರಿ. ಮಂದರಾದ ನನ್ನ ಪುತ್ರರು ನಾನು ಇಷ್ಟು ಗೋಳಾಡುತ್ತಿದ್ದರೂ ಅವನ ಜೊತೆಯಲ್ಲಿ ಯುದ್ಧವನ್ನು ಮಾಡುವರು.

ದುರ್ಯೋಧನ ನಿವರ್ತಸ್ವ ಯುದ್ಧಾದ್ ಭರತಸತ್ತಮ ।
ನ ಹಿ ಯುದ್ಧಂ ಪ್ರಶಂಸಂತಿ ಸರ್ವಾವಸ್ಥಾಸ್ವರಿಂದಮ ॥೨॥

ಎಲೈ ಭರತಶ್ರೇಷ್ಠನಾದ ದುರ್ಯೋಧನನೇ, ಯುದ್ಧದಿಂದ ಹಿಂದೆ ಸರಿಯುವವನಾಗು. ಎಲೈ ಅರಿಂದಮನೇ, ಎಲ್ಲಾ ಕಾಲದಲ್ಲಿಯೂ ಯುದ್ಧವು ಶ್ರೇಷ್ಠವೆಂದು ರಾಜನೀತಿಯನ್ನು ತಿಳಿದ ಯಾರೂ ಹೇಳುವುದಿಲ್ಲ.

ಅಲಮರ್ಧಂ ಪೃಥಿವ್ಯಾಸ್ತೇ ಸಹಾಮಾತ್ಯಸ್ಯ ಜೀವಿತುಮ್ ।
ಪ್ರಯಚ್ಛ ಪಾಂಡುಪುತ್ರಾಣಾಂ ಯಥೋಚಿತಮರಿಂದಮ ॥೩॥

ಅರಿಂದಮನೇ, ನೀನು ಮತ್ತು ನಿನ್ನ ಮಂತ್ರಿಗಳು ಜೀವಿಸುವುದಕ್ಕೆ ಭೂಮಿಯ ಅರ್ಧಭಾಗವು ಸಾಕು. ಪಾಂಡುಪುತ್ರರಿಗೆ ಅವರಿಗೆ ಯೋಗ್ಯವಾದ ಭಾಗವನ್ನು ಕೊಟ್ಟುಬಿಡು.

ಏತದ್ಧಿ ಕುರವಃ ಸರ್ವೇ ಮನ್ಯಂತೇ ಧರ್ಮಸಂಹಿತಮ್ ।
ಯತ್ ತ್ವಂ ಪ್ರಶಾಂತಿಮಿಚ್ಛೇಥಾಃ ಪಾಂಡುಪುತ್ರೈರ್ಮಹಾತ್ಮಭಿಃ ॥೪॥

ನೀನು ಮಹಾತ್ಮರಾದ ಪಾಂಡುಪುತ್ರರ ಜೊತೆಯಲ್ಲಿ ಸಂಧಿಯನ್ನು ಬಯಸಿದರೆ ಇದು ಬಹಳ ಧರ್ಮಯುಕ್ತವಾದುದು ಎಂದು ಕುರುಗಳೆಲ್ಲರೂ ಭಾವಿಸುತ್ತಾರೆ.

ಅಂಗೇಮಾಂ ಸಮವೇಕ್ಷಸ್ವ ಪುತ್ರ ಸ್ವಾಮೇವ ವಾಹಿನೀಮ್ ।
ಜಾತ ಏವ ತವಾಭಾವಸ್ತ್ವಂ ತು ಮೋಹಾನ್ನ ಬುಧ್ಯಸೇ ॥೫॥

ಪ್ರೀತಿಪಾತ್ರನಾದ ಪುತ್ರನೇ, ನಿನ್ನ ಸೈನ್ಯವನ್ನೇ ನೋಡು. ಈಗಾಗಲೇ ವಿನಾಶ ಉಂಟಾಗಿದೆ. ಆದರೆ ನೀನು ಮೋಹದಿಂದ ಅದನ್ನು ತಿಳಿಯುತ್ತಿಲ್ಲ.

ನ ಹ್ಯಹಂ ಯೋದ್ಧುಮಿಚ್ಛಾಮಿ ನೈತದಿಚ್ಛಂತಿ ಬಾಹ್ಲಿಕಃ ।
ನ ಚ ಭೀಷ್ಮೋ ನ ಚ ದ್ರೋಣೋ ನಾಶ್ವತ್ಥಾಮಾ ನ ಸಂಜಯಃ ॥೬॥

ನ ಸೋಮದತ್ತೋ ನ ಕೃಪೋ ನ ಶಲ್ಯೋ ಯುದ್ಧಮಿಚ್ಛತಿ ॥೭॥

ಸತ್ಯವ್ರತಃ ಪುರುಮಿತ್ರೋ ಜಯೋ ಭೂರಿಶ್ರವಾಸ್ತಥಾ ॥೮॥

ತತ್ ತ್ವಂ ಪ್ರಶಾಂತಿಮಿಚ್ಛೇಥಾಃ ಪಾಂಡುಪುತ್ರೈರ್ಮಹಾತ್ಮಭಿಃ ॥೯॥

ನಾನು ಯುದ್ಧವನ್ನು ಬಯಸುವುದಿಲ್ಲ. ಬಾಹ್ಲಿಕನೂ ಇದನ್ನು ಬಯಸುವುದಿಲ್ಲ. ಭೀಷ್ಮ, ದ್ರೋಣ, ಅಶ್ವತ್ಥಾಮ, ಸಂಜಯ, ಕೃಪ, ಶಲ್ಯ, ಸತ್ಯವ್ರತ, ಪುರುಮಿತ್ರ,

ಜಯ, ಭೂರಿಶ್ರವ ಇವರು ಯಾರೂ ಯುದ್ಧವನ್ನು ಬಯಸುವುದಿಲ್ಲ. ಆದ್ದರಿಂದ ನೀನು ಮಹಾತ್ಮರಾದ ಪಾಂಡುಪುತ್ರರ ಜೊತೆಯಲ್ಲಿ ಸಂಧಿಯನ್ನು ಬಯಸುವವನಾಗು.

ಯೇ ತು ಸಂಪ್ರತಿ ತಿಷ್ಠೇಯುಃ ಕುರವಃ ಪೀಡಿತಾ ಪರೈಃ ।
ತೇ ಯುದ್ಧಂ ನಾಭಿನಂದಂತಿ ತತ್ ತುಭ್ಯಂ ತಾತ ರೋಚತಾಮ್ ॥

ಈಗಾಗಲೇ ಯಾವ ಕುರುಗಳು ಪಾಂಡವರಿಂದ ಪೀಡಿತರಾಗಿ ನಿನ್ನ ಜೊತೆಯಲ್ಲಿದ್ದಾರೆಯೋ ಅವರೂ ಯುದ್ಧವನ್ನು ಬಯಸುವುದಿಲ್ಲ. ಪ್ರೀತಿಪಾತ್ರನೇ, ನೀನೂ ಹಾಗೆಯೇ ಬಯಸುವವನಾಗು.

ನ ತ್ವಂ ಕರೋಷಿ ಕಾಮೇನ ಕರ್ಣಃ ಕಾರಯಿತಾ ತವ ।
ದುಃಶಾಸನಶ್ಚ ಪಾಪಾತ್ಮಾ ಶಕುನಿಶ್ಚಾಪಿ ಸೌಬಲಃ ॥೧೧॥

ನಿನ್ನ ಇಚ್ಛೆಯಿಂದ ಈ ಯುದ್ಧವನ್ನು ನೀನು ಮಾಡುತ್ತಿಲ್ಲ. ಕರ್ಣನೂ, ದುಶ್ಶಾಸನನೂ ಮತ್ತು ಪಾಪಾತ್ಮನಾದ ಸೌಬಲನಾದ ಶಕುನಿಯೂ ನಿನ್ನಿಂದ ಮಾಡಿಸುತ್ತಿದ್ದಾರೆ.

ದುರ್ಯೋಧನಃ

ನಾಹಂ ಭವತಿ ನ ದ್ರೋಣೇ ನಾಶ್ವತ್ಥಾಮ್ನಿ ನ ಸಂಜಯೇ ।
ನ ಭೀಷ್ಮೇ ನ ಚ ಕಾಂಭೋಜೇ ನ ಕೃಪೇ ನ ಚ ಬಾಹ್ಲಿಕೇ ॥೧೨॥

ಸತ್ಯವ್ರತೇ ಪುರುಮಿತ್ರೇ ಭೂರಿಶ್ರವಸಿ ವಾ ಪುನಃ ।
ಅನ್ಯೇಷು ವಾ ತಾವಕೇಷು ಭಾರಂ ಕೃತ್ವಾ ಸಮಾಹ್ವಯೇ ॥೧೩॥

ದುರ್ಯೋಧನ– ನಾನು ನಿನ್ನನ್ನಾಗಲೀ ಅಥವಾ ದ್ರೋಣರನ್ನಾಗಲೀ ಅಥವಾ ಅಶ್ವತ್ಥಾಮರನ್ನಾಗಲೀ, ಸಂಜಯನನ್ನಾಗಲೀ, ಭೀಷ್ಮರನ್ನಾಗಲೀ, ಕಾಂಭೋಜರಾಜನನ್ನಾಗಲೀ, ಕೃಪರನ್ನಾಗಲೀ, ಬಾಹ್ಲಿಕರಾಜನನ್ನಾಗಲೀ, ಸತ್ಯವ್ರತನನ್ನಾಗಲೀ, ಪುರುಮಿತ್ರನನ್ನಾಗಲೀ ಅಥವಾ ಭೂರಿಶ್ರವನನ್ನಾಗಲೀ ಅಥವಾ ನಿನ್ನವರಾದ ಬೇರೆಯವರನ್ನಾಗಲೀ (ಅವರ ಮೇಲೆ ಭಾರವನ್ನು ಹಾಕಿ) ಅವಲಂಬಿಸಿ ಪಾಂಡವರನ್ನು ಯುದ್ಧಕ್ಕೆ ಆಹ್ವಾನಿಸುತ್ತಿಲ್ಲ.

ಅಹಂ ಚ ತಾತ ಕರ್ಣಶ್ಚ ರಣಯಜ್ಞಂ ವಿತತ್ಯ ವೈ ।
ಯುಧಿಷ್ಠಿರಂ ಪಶುಂ ಕೃತ್ವಾ ದೀಕ್ಷಿತೌ ಭರತರ್ಷಭ ॥೧೪॥

ಎಲೈ ತಂದೆಯೇ, ಭರತಶ್ರೇಷ್ಠನೇ, ನಾನೂ ಮತ್ತು ಕರ್ಣನೂ ರಣಯಜ್ಞವನ್ನು ಹೂಡಿ ಯುಧಿಷ್ಠಿರನನ್ನು ಪಶುವನ್ನಾಗಿ ಮಾಡಿ ದೀಕ್ಷಿತರಾಗಿದ್ದೇವೆ.

ರಥೋ ವೇದಿಃ ಸ್ರುವಃ ಖಡ್ಗೋ ಗದಾ ಸ್ರುಕ್ ಕವಚೋಽಜಿನಮ್ ।
ಚಾತುರ್ಹೋತ್ರಂ ತು ಧುರ್ಯಾ ಮೇ ಶರಾ ದರ್ಭಾ ಹವಿರ್ಯಶಃ ॥

ಆತ್ಮಯಜ್ಞೇನ ನೃಪತೇ ಇಷ್ಟ್ವಾ ವೈವಸ್ವತಂ ರಣೇ ।
ವಿಜಿತ್ಯ ಚ ಸಮೇಷ್ಯಾವೋ ಹತಾಮಿತ್ರೌ ಶ್ರಿಯಾ ವೃತೌ ॥೧೬॥

ರಥವೇ ವೇದಿ, ಖಡ್ಗವೇ ಸ್ರುವ, ಗದೆಯೇ ಸ್ರುಕ್, ಕವಚವೇ ಕೃಷ್ಣಾಜಿನ, ನಾಲ್ಕು ಕುದುರೆಗಳೇ ನಾಲ್ವರು ಋತ್ವಿಕ್‌ಗಳು, ಬಾಣಗಳೇ ದರ್ಭೆಗಳು, ಯಶಸ್ಸೇ ಹವಿಸ್ಸು. ಎಲೈ ರಾಜನೇ, ಆತ್ಮಯಜ್ಞದಿಂದ ಯುದ್ಧದಲ್ಲಿ ಯಮನನ್ನು ಉದ್ದೇಶಿಸಿ ಯಾಗವನ್ನು ಮಾಡಿ, ಪಾಂಡವರನ್ನು ಗೆದ್ದು, ಯಾವ ಶತ್ರುಗಳಿಲ್ಲದೆ ಸಂಪತ್ತಿನಿಂದ ಕೂಡಿದವರಾಗಿ ನಾವಿಬ್ಬರೂ ಒಂದುಗೂಡುತ್ತೇವೆ.

ಅಹಂ ಚ ತಾತ ಕರ್ಣಶ್ಚ ಭ್ರಾತಾ ದುಃಶಾಸನಶ್ಚ ಮೇ ।
ಏತೇ ವಯಂ ಹನಿಷ್ಯಾಮಃ ಪಾಂಡವಾನ್ ಸಮರೇ ತ್ರಯಃ ॥೧೭॥

ಎಲೈ ತಂದೆಯೇ, ನಾನು, ಕರ್ಣ ಮತ್ತು ನನ್ನ ತಮ್ಮನಾದ ದುಶ್ಶಾಸನ - ಈ ಮೂವರು ಯುದ್ಧದಲ್ಲಿ ಪಾಂಡವರನ್ನು ಕೊಲ್ಲುವೆವು.

ಅಹಂ ಹಿ ಪಾಂಡವಾನ್ ಹತ್ವಾ ಪ್ರಶಸ್ತಾಂ ಪೃಥಿವೀಮಿಮಾಮ್ ।
ಮಾಂ ಹತ್ವಾ ಪಾಂಡುಪುತ್ರಾ ವಾ ಭೋಕ್ತಾರಃ ಪೃಥಿವೀಮಿಮಾಮ್ ॥

ನಾನು ಪಾಂಡವರನ್ನು ಕೊಂದು ಈ ಪ್ರಶಸ್ತವಾದ ಭೂಮಿಯನ್ನು ಆಳುವೆನು ಅಥವಾ ಪಾಂಡುಪುತ್ರರು ನನ್ನನ್ನು ಕೊಂದು ಈ ಭೂಮಿಯನ್ನು ಭೋಗಿಸುವರು.

ತ್ಯಕ್ತಂ ಮೇ ಜೀವಿತಂ ರಾಜ್ಯಂ ಧನಂ ಸರ್ವಂ ಚ ಪಾರ್ಥಿವ ।
ನ ಜಾತು ಪಾಂಡವೈಃ ಸಾರ್ಧಂ ಭುಂಜೀಯಾಂ ಪೃಥಿವೀಮಿಮಾಮ್ ॥

ಎಲೈ ರಾಜನೇ, ನಾನು ನನ್ನ ಜೀವಿತವನ್ನೂ, ರಾಜ್ಯವನ್ನೂ, ಧನವನ್ನೂ, ಎಲ್ಲವನ್ನೂ ಬಿಟ್ಟಿದ್ದೇನೆ. ಆದರೆ ಎಂದೂ ಪಾಂಡವರ ಜೊತೆಯಲ್ಲಿ ಹಂಚಿಕೊಂಡು ಈ ಭೂಮಿಯನ್ನು ಭೋಗಿಸುವುದಿಲ್ಲ.

ಯಾವದ್ಧಿ ಸೂಚ್ಯಾಸ್ತೀಕ್ಷ್ಣಯಾ ವಿಧ್ಯೇದಗ್ರೇಣ ಭಾರತ ।
ತಾವದಪ್ಯಪರಿತ್ಯಾಜ್ಯಂ ಭೂಮೇರ್ನಃ ಪಾಂಡವಾನ್ ಪ್ರತಿ ॥೨೦॥

ಎಲೈ ಭಾರತನೇ, ಸೂಜಿಯ ತುದಿಯಿಂದ ಚುಚ್ಚುವಷ್ಟು ಭೂಮಿಯನ್ನು ಕೂಡ ಪಾಂಡವರಿಗೆ ನಾವು ಕೊಡತಕ್ಕದ್ದಲ್ಲ.

ಧೃತರಾಷ್ಟ್ರಃ

ಸರ್ವಾನ್ ವಸ್ತಾತ ಶೋಚಾಮಿ ತ್ಯಕ್ತೋ ದುರ್ಯೋಧನೋ ಮಯಾ ।
ಯೇ ಮಂದಮನುಯಾಸ್ಯಧ್ವಂ ಯಾಂತಂ ವೈವಸ್ವತಕ್ಷಯಮ್ ॥೨೧॥

ಧೃತರಾಷ್ಟ್ರ– ಪ್ರೀತಿಪಾತ್ರರೇ, ನಾನು ದುರ್ಯೋಧನನನ್ನು ಬಿಟ್ಟಿದ್ದೇನೆ. ಯಮಲೋಕಕ್ಕೆ ಹೋಗುವ ಅವನನ್ನು ಅನುಸರಿಸುವ ಮಂದರಾದ ನಿಮ್ಮೆಲ್ಲರನ್ನು ಕುರಿತು ಶೋಕಪಡುತ್ತಿದ್ದೇನೆ.

ಮೃಗಾಣಾಮಿವ ಯೂಥೇಷು ವ್ಯಾಘ್ರಾಃ ಪ್ರಹರತಾಂ ವರಾಃ ।
ವರಾನ್ ವರಾನ್ ಹನಿಷ್ಯಂತಿ ಸಮೇತಾ ಯುಧಿ ಪಾಂಡವಾಃ ॥೨೨॥

ಜಿಂಕೆಗಳ ಸಮೂಹದಲ್ಲಿ ವ್ಯಾಘ್ರಗಳು ಸಂಚರಿಸಿದಂತೆ ಪ್ರಹಾರ ಮಾಡುವವರಲ್ಲಿ ಶ್ರೇಷ್ಠರಾದ ಪಾಂಡವರು ಒಟ್ಟುಗೂಡಿ, ಯುದ್ಧದಲ್ಲಿ ಶ್ರೇಷ್ಠರಾದ ಕೌರವರನ್ನು ಆರಿಸಿ ಆರಿಸಿ ಕೊಲ್ಲುವರು.

ಪ್ರತೀಪಮೇತಿ ಮೇ ಸೇನಾ ಯುಯುಧಾನೇನ ಭಾರತೀ ।
ವ್ಯಸ್ತಾ ಸೀಮಂತಿನೀ ಗ್ರಸ್ತಾ ಪ್ರಮೃಷ್ಟಾ ದೀರ್ಘಬಾಹುನಾ ॥೨೩॥

ದೀರ್ಘಬಾಹುವಾದ ಪುರುಷನಿಂದ ಒಬ್ಬ ಮುತ್ತೈದೆಯನ್ನು ತಲೆಕೂದಲುಗಳಲ್ಲಿ ಹಿಡಿದು ನಾಶಮಾಡಿದಂತೆ ನನ್ನ ಭಾರತಸೈನ್ಯವು ಸಾತ್ಯಕಿಯಿಂದ ಪ್ರತೀಕಾರಕ್ಕೆ ಒಳಗಾಗುತ್ತದೆ.

ಸಂಪೂರ್ಣಂ ಪೂರಯನ್ ಭೂಯೋ ಬಲಂ ಪಾರ್ಥಸ್ಯ ಮಾಧವಃ ।
ಶೈನೇಯಃ ಸಮರೇ ಸ್ಥಾತಾ ಬೀಜವತ್ ಪ್ರವಪನ್ ಶರಾನ್ ॥೨೪॥

ಪೂರ್ಣವಾದ ಬಲವುಳ್ಳ ಅರ್ಜುನನಿಗೆ ಮಧುವಂಶದಲ್ಲಿ ಹುಟ್ಟಿದ ಸಾತ್ಯಕಿಯು ಇನ್ನೂ ಬಲವನ್ನು ತುಂಬುತ್ತಾ, ಯುದ್ಧದಲ್ಲಿ ಬೀಜಗಳನ್ನು ಬಿತ್ತಿದಂತೆ ಬಾಣಗಳ ಮಳೆಯನ್ನು ಸುರಿಸುತ್ತಾ ನಿಲ್ಲುವವನಾಗುತ್ತಾನೆ.

ಸೇನಾಮುಖೇ ಪ್ರಬುದ್ಧಾನಾಂ ಭೀಮಸೇನೋ ಭವಿಷ್ಯತಿ ।
ತಂ ಸರ್ವೇ ಸಂಶ್ರಯಿಷ್ಯಂತಿ ಪ್ರಾಕಾರಮಕುತೋಭಯಾಃ ॥೨೫॥

ಸೇನೆಯ ಅಗ್ರಭಾಗದಲ್ಲಿ ಜಾಗರೂಕರಾಗಿರುವವರಿಗೆ ಭೀಮಸೇನನು ಆಶ್ರಯನಾಗುತ್ತಾನೆ. ಕೋಟೆಯ ಗೋಡೆಯನ್ನು ಆಶ್ರಯಿಸಿದಂತೆ ಎಲ್ಲರೂ ಅವನನ್ನು ನಿರ್ಭಯರಾಗಿ ಆಶ್ರಯಿಸುವರು.

ಯದಾ ದ್ರಕ್ಷ್ಯಸಿ ಭೀಮೇನ ಕುಂಜರಾನ್ ವಿನಿಪಾತಿತಾನ್ ।
ವಿಶೀರ್ಣದಂತಾನ್ ವಿಕ್ರುಷ್ಟಾನ್ ಭಿನ್ನಕುಂಭಾನ್ ಸಶೋಣಿತಾನ್ ॥

ತಾನಭಿಪ್ರೇಕ್ಷ್ಯ ಸಂಗ್ರಾಮೇ ವಿಶೀರ್ಣಾನಿವ ಪರ್ವತಾನ್ ।
ಭೀತೋ ಭೀಮಸ್ಯ ಸಂಸ್ಪರ್ಶಾತ್ ಸ್ಮರ್ತಾಸಿ ವಚನಸ್ಯ ಮೇ ॥೨೭॥

ನೀನು ಯಾವಾಗ ಭೀಮಸೇನನಿಂದ ಹೊಡೆಯಲ್ಪಟ್ಟು, ದಂತಗಳನ್ನು ಮುರಿದುಕೊಂಡು ಅಥವಾ ದಂತಗಳು ಹೊರಗೆ ಎಳೆಯಲ್ಪಟ್ಟು, ಕುಂಭಸ್ಥಳವು ಒಡೆದು ರಕ್ತದಿಂದ ಕೂಡಿದ ಗಜಗಳು ಬಿದ್ದಿರುವುದನ್ನು ನೋಡುವೆಯೋ ಆಗ ಬಿರಿದ ಪರ್ವತಗಳಂತೆ ಯುದ್ಧದಲ್ಲಿ ಭೂಮಿಯ ಮೇಲೆ ಬಿದ್ದಿರುವ ಅವುಗಳನ್ನು ನೋಡಿ ಭೀಮನ ಸ್ಪರ್ಶಕ್ಕೆ ಹೆದರಿ ನನ್ನ ಮಾತುಗಳನ್ನು ಸ್ಮರಿಸುವವನಾಗುವಿ.

ನಿರ್ದಗ್ಧಂ ಭೀಮಸೇನೇನ ಸೈನ್ಯಂ ಹತರಥದ್ವಿಪಮ್ ।
ಗತಿಮಗ್ನೇರಿವ ಪ್ರೇಕ್ಷ್ಯ ಸ್ಮರ್ತಾಸಿ ವಚನಂ ಮಮ ॥೨೮॥

ಅಗ್ನಿಯ ಗಮನದಂತೆ ಭೀಮಸೇನನಿಂದ ಹತವಾದ ರಥಾಶ್ವಗಜಗಳುಳ್ಳ ಸೈನ್ಯವನ್ನು ನೋಡಿ ನನ್ನ ಮಾತನ್ನು ಸ್ಮರಿಸುವಿ.

ಮಹನ್ನೋ ಭಯಮಾಗಾಮಿ ನ ಚೇಚ್ಛಾಮೀಹ ಪಾಂಡವೈಃ ।
ಗದಯಾ ಭೀಮಸೇನೇನ ಹತಾನ್ ಶಮಮುಪೈಷ್ಯಥ ॥೨೯॥

ನಮಗೆ ದೊಡ್ಡ ಭಯವು ಪ್ರಾಪ್ತವಾಗಲಿದೆ. ನಾನು ಪಾಂಡವರ ಜೊತೆಯಲ್ಲಿ ಯುದ್ಧವನ್ನಾಗಲೀ ಅಥವಾ ಭೀಮಸೇನನಿಂದ ಗದಾಪ್ರಹಾರದಿಂದ ಕೌರವರು ಹತರಾಗುವುದನ್ನಾಗಲೀ ಬಯಸುವುದಿಲ್ಲ. ನೀವು ಸಂಧಿಯನ್ನು ಮಾಡಿಕೊಳ್ಳುವವರಾಗಿ.

ಮಹಾವನಮಿವ ಚ್ಛಿನ್ನಂ ಯದಾ ದ್ರಕ್ಷ್ಯಸಿ ಪಾತಿತಮ್ ।
ಬಲಂ ಕುರೂಣಾಂ ಭೀಮೇನ ತದಾ ಸ್ಮರ್ತಾಸಿ ಮೇ ವಚಃ ॥೩೦॥

ಕತ್ತರಿಸಲ್ಪಟ್ಟ ಕಾಡಿನಂತೆ ನೀನು ಕುರುಗಳ ಸೈನ್ಯವು ಭೀಮಸೇನನಿಂದ ಹೊಡೆದು ಉರುಳಿಸಲ್ಪಟ್ಟಿದ್ದನ್ನು ಯಾವಾಗ ನೋಡುವಿಯೋ ಆಗ ನನ್ನ ಮಾತನ್ನು ಸ್ಮರಿಸುವಿ.

ವೈಶಂಪಾಯನಃ

ಏತಾವದುಕ್ತ್ವಾ ರಾಜಾ ತು ಸರ್ವಾಂಸ್ತಾನ್ ಪೃಥಿವೀಪತೀನ್ ।
ಅನುಭಾಷ್ಯ ಮಹಾರಾಜ ಪುನಃ ಪಪ್ರಚ್ಛ ಸಂಜಯಮ್ ॥೩೧॥

ವೈಶಂಪಾಯನ– ರಾಜನಾದ ಧೃತರಾಷ್ಟ್ರನು ಎಲ್ಲಾ ರಾಜರನ್ನು ಕುರಿತು ಇಷ್ಟು ಮಾತನ್ನು ಹೇಳಿ ಎಲೈ ಮಹಾರಾಜನೇ, ಪುನಃ ಅವರೊಡನೆ ಮಾತನಾಡಿ ಸಂಜಯನನ್ನು ಕುರಿತು ಪುನಃ ಪ್ರಶ್ನೆಯನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಉದ್ಯೋಗಪರ್ವಣಿ ಷಷ್ಟಿತಮೋऽಧ್ಯಾಯಃ ॥

॥ ವ್ಯಾಸಾಭಿಗಮನಪರ್ವಣಿ ತ್ರಯೋದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಅರವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೊಂದನೆಯ ಅಧ್ಯಾಯ

ಸಂಧಿಗಾಗಿ ಹೋಗಿದ್ದ ಸಂಜಯನಿಂದ, ಧೃತರಾಷ್ಟ್ರನನ್ನು ಕುರಿತು ಉಪಪ್ಲಾವ್ಯದಲ್ಲಿ ನಡೆದ ಘಟನೆಗಳ ವರ್ಣನೆ.

ಧೃತರಾಷ್ಟ್ರಃ

ಬ್ರೂಹಿ ಸಂಜಯ ಯಚ್ಚೇಷಂ ವಾಸುದೇವಾದನಂತರಮ್ ।
ಯದರ್ಜುನ ಉವಾಚ ತ್ವಾಂ ಪರಂ ಕೌತೂಹಲಂ ಹಿ ಮೇ ॥೧॥

ಧೃತರಾಷ್ಟ್ರ– ಸಂಜಯನೇ, ವಾಸುದೇವನು ಮಾತನಾಡಿದ ಅನಂತರದಲ್ಲಿ ಏನು ನಡೆಯಿತು? ಅರ್ಜುನನು ನಿನ್ನನ್ನು ಕುರಿತು ಏನನ್ನು ಮಾತನಾಡಿದನು? ಹೇಳು. ಈ ವಿಷಯದಲ್ಲಿ ನನಗೆ ಬಹಳ ಕುತೂಹಲವಿದೆ.

ಯದಬ್ರೂತಾಂ ಮಹಾತ್ಮಾನೌ ವಾಸುದೇವಧನಂಜಯೌ ।
ತನ್ಮೇ ಬ್ರೂಹಿ ಮಹಾಪ್ರಾಜ್ಞ ಶುಶ್ರೂಷೇ ವಚನಂ ತವ ॥೨॥

ಮಹಾಪ್ರಾಜ್ಞನೇ, ಮಹಾತ್ಮರಾದ ಕೃಷ್ಣಾರ್ಜುನರು ಏನನ್ನು ಹೇಳಿದರು? ನಿನ್ನ ಮಾತನ್ನು ಕೇಳಲು ಬಯಸುತ್ತೇನೆ. ಅದನ್ನು ನನಗೆ ಹೇಳು.

ಸಂಜಯಃ

ಶೃಣು ರಾಜನ್ ಯಥಾ ದೃಷ್ಟೌ ಮಯಾ ಕೃಷ್ಣಧನಂಜಯೌ ।
ಊಚತುಶ್ಚಾಪಿ ಯದ್ ವೀರೌ ತತ್ ತೇ ವಕ್ಷ್ಯಾಮಿ ಭಾರತ ॥೩॥

ಸಂಜಯ– ರಾಜನೇ, ನಾನು ಕೃಷ್ಣಾರ್ಜುನರನ್ನು ಹೇಗೆ ನೋಡಿದೆ ಮತ್ತು ವೀರರಾದ ಅವರು ಏನನ್ನು ಹೇಳಿದರು ಎಂದು ನಿನಗೆ ಹೇಳುವೆನು. ಎಲೈ ಭಾರತನೇ, ಅದನ್ನು ಕೇಳುವವನಾಗು.

ಪಾದಾಂಗುಲೀರಭಿಪ್ರೇಕ್ಷನ್ ಪ್ರಯತೋಽಹಂ ಕೃತಾಂಜಲಿಃ ।
ಶುದ್ಧಾಂತಂ ಪ್ರಾವಿಶಂ ರಾಜನ್ನಾಖ್ಯಾತುಂ ನರದೇವಯೋಃ ॥೪॥

ಎಲೈ ರಾಜನೇ, ನಾನು ಕೈಗಳನ್ನು ಮುಗಿದು, ಮನಸ್ಸಿನ ಅವಧಾನದಿಂದ ಕೂಡಿ ಕೃಷ್ಣನ ಪಾದಾಂಗುಲಿಗಳನ್ನು ನೋಡುತ್ತಾ ಕೃಷ್ಣಾರ್ಜುನರು ಇದ್ದ ಅಂತಃಪುರವನ್ನು ಪ್ರವೇಶಿಸಿದೆನು.

ನೈವಾಭಿಮನ್ಯುರ್ನ ಯಮೌ ತಂ ದೇಶಮಭಿಯಾತಿ ವೈ ।
ಯತ್ರ ಕೃಷ್ಣೌ ಚ ಕೃಷ್ಣಾ ಚ ಸತ್ಯಭಾಮಾ ಚ ಭಾಮಿನೀ ॥೫॥

ಕೃಷ್ಣಾರ್ಜುನರು ದ್ರೌಪದಿಯು ಮತ್ತು ಭಾಮಿನಿಯಾದ ಸತ್ಯಭಾಮೆಯು ಇರುವ ಆ ಸ್ಥಳಕ್ಕೆ ಅಭಿಮನ್ಯುವಾಗಲೀ ಅಥವಾ ನಕುಲ-ಸಹದೇವರಾಗಲೀ ಬರುತ್ತಿರಲಿಲ್ಲ.

ಉಭೌ ಮಧ್ವಾಸವಕ್ಷೀಬಾವುಭೌ ಚಂದನರೂಷಿತೌ ।
ಸ್ರಗ್ವಿಣೌ ವರವಸ್ತ್ರೌ ತೌ ದಿವ್ಯಾಭರಣಭೂಷಿತೌ ॥೬॥

ಕೃಷ್ಣಾರ್ಜುನರಿಬ್ಬರೂ ಮಧುಪಾನ ಮಾಡಿದ್ದರು. ಗಂಧಲೇಪನವನ್ನು ಹೊಂದಿ, ಹೂವಿನ ಮಾಲೆಗಳನ್ನೂ ಶ್ರೇಷ್ಠವಾದ ವಸ್ತ್ರಗಳನ್ನೂ ಧರಿಸಿ, ದಿವ್ಯಾಭರಣ-ಭೂಷಿತರಾಗಿದ್ದರು.

ನೈಕರತ್ನವಿಚಿತ್ರಂ ತು ಕಾಂಚನಂ ಮಹದಾಸನಮ್ ।
ವಿವಿಧಾಸ್ತರಣಾಸ್ತೀರ್ಣಂ ಯತ್ರಾಸಾತಾಮರಿಂದಮೌ ॥೭॥

ಅರಿಂದಮರಾದ ಅವರಿಬ್ಬರೂ ಬಹಳ ರತ್ನಗಳಿಂದ ವಿಚಿತ್ರವಾಗಿದ್ದ ದೊಡ್ಡ ಸುವರ್ಣಮಯವಾದ ಆಸನದ ಮೇಲೆ ಅನೇಕ ಹಾಸುಗಳನ್ನು ಹಾಸಿ ಅದರ ಮೇಲೆ ಇದ್ದರು.

ಅರ್ಜುನೋತ್ಸಂಗಗೌ ಪಾದೌ ಕೇಶವಸ್ಯೋಪಲಕ್ಷಯೇ ।
ಅರ್ಜುನಸ್ಯ ಚ ಕೃಷ್ಣಾಯಾಂ ಸತ್ಯಾಯಾಂ ಚ ಮಹಾತ್ಮನಃ ॥೮॥

ಕೃಷ್ಣನ ಒಂದು ಪಾದವು ಅರ್ಜುನನ ತೊಡೆಯ ಮೇಲೆಯೂ, ಮಹಾತ್ಮನಾದ ಅವನ ಇನ್ನೊಂದು ಪಾದವು ಸತ್ಯಭಾಮೆಯ ತೊಡೆಯ ಮೇಲೆಯೂ ಮತ್ತು ಅರ್ಜುನನ ಪಾದಗಳು ದ್ರೌಪದಿಯ ತೊಡೆಯ ಮೇಲೆಯೂ ಇದ್ದುದನ್ನು ನಾನು ಗಮನಿಸಿದೆನು.

ಕಾಂಚನಂ ಪಾದಪೀಠಂ ತು ಪಾರ್ಥೋ ಮೇ ಪ್ರಾದಿಶತ್ ತದಾ ॥೯॥

ತದಹಂ ಪಾಣಿನಾ ಸ್ಪೃಷ್ಟ್ವಾ ತತೋ ಭೂಮಾವುಪಾವಿಶಮ್ ॥೧೦॥

ಅರ್ಜುನನು ನನಗೆ ಸುವರ್ಣಮಯವಾದ ಪಾದಪೀಠವನ್ನು ತೋರಿಸಿದನು. ನಾನು ಅದನ್ನು ಹಸ್ತದಿಂದ ಸ್ಪರ್ಶಮಾಡಿ ನೆಲದ ಮೇಲೆ ಕುಳಿತುಕೊಂಡೆನು.

ಊರ್ಧ್ವರೇಖಾತಳೌ ಪಾದೌ ಪಾರ್ಥಸ್ಯ ಶುಭಲಕ್ಷಣೌ ।
ಪಾದಪೀಠಾದಪಹೃತೌ ತತ್ರಾಪಶ್ಯಮಹಂ ಶುಭೌ ॥೧೧॥

ಆಗ ನಾನು ತನ್ನ ಪಾದಪೀಠದಿಂದ ತೆಗೆದ ಅರ್ಜುನನ ಊರ್ಧ್ವರೇಖೆಗಳಿಂದಲೂ ಮತ್ತು ಶುಭಲಕ್ಷಣಗಳಿಂದಲೂ ಕೂಡಿದ ಎರಡು ಪಾದತಳಗಳನ್ನು ನೋಡಿದೆನು.

ಶ್ಯಾಮೌ ಬೃಹಂತೌ ತರುಣೌ ಸಾಲಸ್ಕಂಧಾವಿವೋದ್ಗತೌ ।
ಏಕಾಸನಗತೌ ದೃಷ್ಟ್ವಾ ಭಯಂ ಮಾಂ ಮಹದಾವಿಶತ್ ॥೧೨॥

ಶ್ಯಾಮವರ್ಣದವರೂ, ತರುಣರೂ, ದೊಡ್ಡ ಶರೀರವುಳ್ಳವರೂ, ಸಾಲಸ್ಕಂಧದಂತೆ ಎತ್ತರವಾದವರೂ ಮತ್ತು ಒಂದೇ ಆಸನದಲ್ಲಿ ಇದ್ದವರೂ ಆದ ಅವರಿಬ್ಬರನ್ನೂ ನೋಡಿ ನನಗೆ ಬಹಳ ಭಯವುಂಟಾಯಿತು.

ಇಂದ್ರವಿಷ್ಣುಸಮಾವೇತೌ ಮಂದಾತ್ಮಾ ನಾವಬುದ್ಧ್ಯತೇ ।
ಸಂಶ್ರಯಾದ್ ದ್ರೋಣಭೀಷ್ಮಾಭ್ಯಾಂ ಕರ್ಣಸ್ಯ ಚ ವಿಕತ್ಥನಾತ್ ॥೧೩॥

ಅವರಿಬ್ಬರೂ ಇಂದ್ರ ಮತ್ತು ವಿಷ್ಣುವಿಗೆ ಸಮರಾದವರು. ಮಂದಾತ್ಮನಾದ ದುರ್ಯೋಧನನು ಭೀಷ್ಮ-ದ್ರೋಣರ ಅವಲಂಬನೆಯ ಬಲದಿಂದ ಮತ್ತು ಕರ್ಣನ ಆತ್ಮಶ್ಲಾಘನೆಯ ಮಾತುಗಳಿಂದ ಕೃಷ್ಣಾರ್ಜುನರನ್ನು ತಿಳಿಯುತ್ತಿಲ್ಲ.

ನಿದೇಶಸ್ಥಾವಿಮೌ ಯಸ್ಯ ಮಾನಸಸ್ತಸ್ಯ ಸೇತ್ಸ್ಯತೇ ।
ಸಂಕಲ್ಪೋ ಧರ್ಮರಾಜಸ್ಯ ನಿಶ್ಚಯೋ ಮೇ ತದಾऽಭವತ್ ॥೧೪॥

ಈ ಇಬ್ಬರೂ ಮಹಾತ್ಮರು ಯಾವನ ಆಜ್ಞಾಧಾರಕರಾಗಿದ್ದಾರೆಯೋ ಅಂತಹ ಧರ್ಮರಾಜನ ಮನಸ್ಸಿನ ಸಂಕಲ್ಪವು ಸಿದ್ಧಿಸುತ್ತದೆ ಎಂದು ನನಗೆ ಆಗ ನಿಶ್ಚಯ ಉಂಟಾಯಿತು.

ಸತ್ಕೃತಶ್ಚಾನ್ನಪಾನಾಭ್ಯಾಮಚ್ಚನ್ನೋ ಲಬ್ಧಸತ್ಕ್ರಿಯಃ ।
ಅಂಜಲಿಂ ಮೂರ್ಧ್ನಿ ಸಂಧಾಯ ತೌ ಸಂದೇಶಮಚೋದಯಮ್ ॥೧೫॥

ಅನ್ನ-ಪಾನಗಳಿಂದ ಸತ್ಕೃತನಾಗಿ, ಒಳ್ಳೆಯ ವಸ್ತ್ರಗಳನ್ನು ಧರಿಸಿ, ಅವರ ಸನ್ಮಾನವನ್ನು ಸ್ವೀಕರಿಸಿ, ಕೈಗಳನ್ನು ತಲೆಯ ಮೇಲೆ ಜೋಡಿಸಿ ನಿನ್ನ ಸಂದೇಶವನ್ನು ಅವರಿಬ್ಬರಿಗೂ ಹೇಳಿದನು.

ಧನುರ್ಬಾಣೋಚಿತೇನೈಕಪಾಣಿನಾ ಶುಭಲಕ್ಷಣಮ್ ।
ಪಾದಮಾನಮಯನ್ ಪಾರ್ಥಃ ಕೇಶವಂ ಸಮಚೋದಯತ್ ॥೧೬॥

ಧನುರ್ಬಾಣಗಳಿಗೆ ಉಚಿತವಾದ ಶುಭಲಕ್ಷಣವುಳ್ಳ ತನ್ನ ಹಸ್ತದಿಂದ ಅರ್ಜುನನು ಕೃಷ್ಣನ ಪಾದವನ್ನು ಕೆಳಗೆ ಇಟ್ಟು ಮಾತನಾಡುವಂತೆ ಕೃಷ್ಣನನ್ನು ಪ್ರೇರಿಸಿದನು.

ಇಂದ್ರಕೇತುರಿವೋತ್ಥಾಯ ಸರ್ವಾಭರಣಭೂಷಿತಃ ।
ಇಂದ್ರವೀರ್ಯೋಪಮಃ ಕೃಷ್ಣಃ ಸಂವಿಷ್ಟೋ ಮಾऽಭ್ಯಭಾಷತ ॥೧೭॥

ಸರ್ವಾಭರಣಭೂಷಿತನೂ, ಇಂದ್ರನ ಪರಾಕ್ರಮಕ್ಕೆ ಸಮವಾದ ಪರಾಕ್ರಮ ಉಳ್ಳವನೂ ಆದ ಕೃಷ್ಣನು ಇಂದ್ರಧ್ವಜದಂತೆ ಎದ್ದು ಕುಳಿತು ನನ್ನನ್ನು ಕುರಿತು ಮಾತನಾಡಿದನು.

ವಾಚಂ ಸ ವದತಾಂ ಶ್ರೇಷ್ಠೋ ಹ್ಲಾದಿನೀಂ ವಚನಕ್ಷಮಾಮ್ ।
ತ್ರಾಸನೀಂ ಧಾರ್ತರಾಷ್ಟ್ರಾಣಾಂ ಮೃದುಪೂರ್ವಾಂ ಸುದಾರುಣಾಮ್ ॥

ಮಾತನಾಡುವವರಲ್ಲಿ ಶ್ರೇಷ್ಠನಾದ ಅವನು ಮಾತನಾಡಲು ಯೋಗ್ಯವಾದ, ಸಂತೋಷವನ್ನು ಉಂಟುಮಾಡುವ, ದುರ್ಯೋಧನಾದಿಗಳಿಗೆ ಭಯವನ್ನು ಉಂಟುಮಾಡುವ, ಮಾತುಗಳನ್ನು ಮೊದಲು ಮೃದುವಾಗಿ ಪ್ರಾರಂಭಿಸಿ ಕೊನೆಯಲ್ಲಿ ದಾರುಣವಾಗಿಯೇ ಹೇಳಿದನು.

ವಾಚಂ ತಾಂ ವಚನಾರ್ಹಸ್ಯ ಶಿಕ್ಷಾಕ್ಷರಸಮನ್ವಿತಾಮ್ ।
ಅಶ್ರೌಷಮಹಮಿಷ್ಟಾರ್ಥಾಂ ಪಶ್ಚಾದ್ ಹೃದಯಶೋಷಿಣೀಮ್ ॥೧೯॥

ಒಳ್ಳೆಯ ಮಾತುಗಳನ್ನಾಡುವ, ಶಿಕ್ಷಾಶಾಸ್ತ್ರದ ಲಕ್ಷಣಗಳಿಂದ ಕೂಡಿದ, ಇಷ್ಟಾರ್ಥವನ್ನು ಕೊಡುವ, ಕೊನೆಯಲ್ಲಿ ಮನಸ್ಸಿಗೆ ದುಃಖವನ್ನುಂಟುಮಾಡುವ ಅವನ ಮಾತುಗಳನ್ನು ಕೇಳಿದೆನು.

ವಾಸುದೇವಃ

ಸಂಜಯೇದಂ ವಚೋ ಬ್ರೂಯಾ ಧೃತರಾಷ್ಟ್ರಂ ಮನೀಷಿಣಾಮ್ ।
ಶೃಣ್ವತಃ ಕುರುಮುಖ್ಯಸ್ಯ ದ್ರೋಣಸ್ಯಾಪಿ ಚ ಶೃಣ್ವತಃ ॥೨೦॥

ವಾಸುದೇವ– ಸಂಜಯನೇ, ಕುರುಮುಖ್ಯನಾದ ಭೀಷ್ಮನೂ ಮತ್ತು ದ್ರೋಣನೂ ಕೇಳುವಂತೆ ಈ ನನ್ನ ಮಾತನ್ನು ಮೇಧಾವಿಯಾದ ಧೃತರಾಷ್ಟ್ರನಿಗೆ ಹೇಳು.

ಯಜಧ್ವಂ ವಿಪುಲೈರ್ಯಜ್ಞೈರ್ವಿಪ್ರೇಭ್ಯೋ ದತ್ತ ದಕ್ಷಿಣಾಃ ।
ಪುತ್ರೈರ್ದಾರೈಶ್ಚ ಮೋದಧ್ವಂ ಮಹದ್ ವೋ ಭಯಮಾಗತಮ್ ॥೨೧॥

ವಿಪುಲವಾದ ಯಜ್ಞಗಳನ್ನು ಮಾಡಿ, ಬ್ರಾಹ್ಮಣರಿಗೆ ದಕ್ಷಿಣೆಗಳನ್ನು ಕೊಡಿ. ಹೆಂಡತಿ ಮಕ್ಕಳ ಜೊತೆಯಲ್ಲಿ ಸಂತೋಷವನ್ನು ಪಡಿ. ನಿಮಗೆ ದೊಡ್ಡ ಭಯವು ಉಂಟಾಗಿದೆ.

ಅರ್ಥಾನ್ ತ್ಯಜತ ಪಾತ್ರೇಭ್ಯಃ ಸುತಾನ್ ಪ್ರಾಪ್ನುತ ಕಾಮಜಾನ್ ।
ಪ್ರಿಯಂ ಪ್ರಿಯೇಭ್ಯಶ್ಚರತ ರಾಜಾ ಹಿ ತ್ವರತೇ ಜಯೇ ॥೨೨॥

ಪಾತ್ರರಿಗೆ ದಾನವನ್ನು ಮಾಡಿ, ಇಷ್ಟವಾದಂತಹ ಮಕ್ಕಳನ್ನು ಪಡೆಯಿರಿ, ನೀವು ಪ್ರಿಯರಾದವರಿಗೆ ಮಾಡಬೇಕಾದ ಪ್ರಿಯವನ್ನು ಮಾಡಿ. ಧರ್ಮರಾಜನು ಯುದ್ಧದಲ್ಲಿ ಜಯವನ್ನು ಸಂಪಾದಿಸುವ ತ್ವರೆಯಲ್ಲಿದ್ದಾನೆ.

ಋಣಮೇತತ್ ಪ್ರವೃದ್ಧಂ ಮೇ ಹೃದಯಾನ್ನಾಪಸರ್ಪತಿ ।
ಯದ್ ಗೋವಿಂದೇತಿ ಚುಕ್ರೋಶ ಕೃಷ್ಣಾ ಮಾಂ ದೂರವಾಸಿನಮ್ ॥

ದೂರದಲ್ಲಿದ್ದ ನನ್ನನ್ನು ದ್ರೌಪದಿಯು ಗೋವಿಂದ ಎಂದು ಕರೆದ ಅವಳ ಋಣವು ಬಹಳವಾಗಿ ಬೆಳೆದು ನನ್ನ ಮನಸ್ಸನ್ನು ಬಿಟ್ಟುಹೋಗುವುದಿಲ್ಲ.

ತೇಜೋಮಯಂ ದುರಾಧರ್ಷಂ ಗಾಂಡೀವಂ ಯಸ್ಯ ಕಾರ್ಮುಕಮ್ ।
ಮದ್‌ದ್ವಿತೀಯೇನ ತೇನೇಹ ವೈರಂ ವಃ ಸವ್ಯಸಾಚಿನಾ ॥೨೪॥

ತೇಜೋಮಯವಾದ, ಎಂದೂ ಸೋಲನ್ನು ಕಾಣದ ಗಾಂಡೀವಧನುಸ್ಸನ್ನು ಹೊಂದಿದ ಅರ್ಜುನನು ನನ್ನ ಸಹಾಯವನ್ನು ಹೊಂದಿದವನಾಗಿದ್ದಾನೆ. ಅಂತಹ ಸವ್ಯಸಾಚಿಯ ಜೊತೆಯಲ್ಲಿ ನಿಮಗೆ ವೈರವು ಉಂಟಾಗಿದೆ.

ಮದ್‌ದ್ವಿತೀಯಂ ಪುನಃ ಪಾರ್ಥಂ ಕಃ ಪ್ರಾರ್ಥಯಿತುಮಿಚ್ಛತಿ ।
ಯೋ ನ ಕಾಲಪರೀತೋ ವಾಪ್ಯಪಿ ಸಾಕ್ಷಾತ್ ಪುರಂದರಃ ॥೨೫॥

ನನ್ನಿಂದ ಸಹಿತನಾದ ಅರ್ಜುನನನ್ನು ಯುದ್ಧದಲ್ಲಿ ಮೃತ್ಯುಗ್ರಸ್ತನಾದ ಒಬ್ಬನನ್ನು ಬಿಟ್ಟು ಸಾಕ್ಷಾತ್ ಪುರಂದರನೇ ಆದರೂ ಸಹ ಯಾವನು ಆಹ್ವಾನ ಮಾಡಲು ಬಯಸುತ್ತಾನೆ?

ಬಾಹುಭ್ಯಾಮುದ್ವಹೇದ್ ಭೂಮಿಂ ದಹೇತ್ ಕ್ರುದ್ಧ ಇಮಾಃ ಪ್ರಜಾಃ ।
ಪಾತಯೇದ್ ತ್ರಿದಿವಾದ್ ದೇವಾನ್ ಯೋಽರ್ಜುನಂ ಸಮರೇ ಜಯೇತ್॥

ಯಾವನು ಅರ್ಜುನನನ್ನು ಯುದ್ಧದಲ್ಲಿ ಜಯಿಸುವನೋ ಅವನು ತನ್ನ ಬಾಹುಗಳಿಂದ ಭೂಮಿಯನ್ನು ಮೇಲಕ್ಕೆ ಎತ್ತಿಯಾನು! ಕೋಪದಿಂದ ಈ ಎಲ್ಲಾ ಪ್ರಜೆಗಳನ್ನೂ ದಹಿಸಿಯಾನು ಮತ್ತು ದೇವತೆಗಳನ್ನು ಸ್ವರ್ಗದಿಂದ ಬೀಳಿಸಿಯಾನು.

ದೇವಾಸುರಮನುಷ್ಯೇಷು ಯಕ್ಷಗಂಧರ್ವಭೋಗಿಷು ।
ನ ತಂ ಪಶ್ಯಾಮ್ಯಹಂ ಯುದ್ಧೇ ಪಾಂಡವಂ ಯೋಽಭ್ಯಯಾದ್ ರಣೇ॥

ಯುದ್ಧದಲ್ಲಿ ಎದುರಿಗೆ ಹೋಗಿ ಅರ್ಜುನನ ಜೊತೆಯಲ್ಲಿ ಹೋರಾಡುವ ಒಬ್ಬ ವ್ಯಕ್ತಿಯನ್ನು ದೇವಾಸುರಮನುಷ್ಯರಲ್ಲಾಗಲೀ, ಯಕ್ಷಗಂಧರ್ವಸರ್ಪಗಳಲ್ಲಾಗಲೀ ನಾನು ಕಾಣುವುದಿಲ್ಲ.

ಯತ್ ತದ್ ವಿರಾಟನಗರೇ ಶ್ರೂಯತೇ ಮಹದದ್ಭುತಮ್ ।
ಏಕಸ್ಯ ಚ ಬಹೂನಾಂ ಚ ಪರ್ಯಾಪ್ತಂ ತನ್ನಿದರ್ಶನಮ್ ॥೨೮॥

ವಿರಾಟನಗರದಲ್ಲಿ ಒಬ್ಬನಿಗೂ ಮತ್ತು ಅನೇಕರಿಗೂ ಎಂತಹ ಅದ್ಭುತವಾದ ಯುದ್ಧರೂಪವಾದ ಘಟನೆಯು ಸಂಭವಿಸಿತೆಂದು ಕೇಳಿದ್ದೇವೆಯೋ ಅದೊಂದು ದೃಷ್ಟಾಂತವು ಅರ್ಜುನನ ಸಾಮರ್ಥ್ಯವನ್ನು ಹೇಳುವುದಕ್ಕೆ ಸಾಕು.

ಏಕೇನ ಪಾಂಡುಪುತ್ರೇಣ ವಿರಾಟನಗರೇ ಯದಾ ।
ಭಗ್ನಾಃ ಪಲಾಯಂತ ದಿಶಃ ಪರ್ಯಾಪ್ತಂ ತನ್ನಿದರ್ಶನಮ್ ॥೨೯॥

ವಿರಾಟನಗರದಲ್ಲಿ ಆಗ ಪಾಂಡುಪುತ್ರನಾದ ಒಬ್ಬನೇ ಅರ್ಜುನನಿಂದ ಭಗ್ನರಾಗಿ ಕೌರವ ಸೈನ್ಯಗಳು ದಿಕ್ಕುದಿಕ್ಕುಗಳಲ್ಲಿ ಓಡಿದವು. ಆ ದೃಷ್ಟಾಂತವು ಸಾಕು.

ಬಲಂ ವೀರ್ಯಂ ಚ ತೇಜಶ್ಚ ಶೀಘ್ರತಾ ಲಘುಹಸ್ತತಾ ।
ಅವಿಷಾದಶ್ಚ ಧೈರ್ಯಂ ಚ ಪಾರ್ಥಾನ್ನಾನ್ಯತ್ರ ವಿದ್ಯತೇ ॥೩೦॥

ಬಲ, ವೀರ್ಯ, ತೇಜಸ್ಸು, ವೇಗ, ಹಸ್ತದ ವೇಗ, ವಿಷಾದವಿಲ್ಲದಿರುವಿಕೆ ಮತ್ತು ಧೈರ್ಯ ಈ ಗುಣಗಳು ಅರ್ಜುನನನ್ನು ಬಿಟ್ಟು ಬೇರೆ ಕಡೆ ಇರುವುದಿಲ್ಲ.

ಸಂಜಯಃ

ಇತ್ಯಬ್ರವೀದ್ ಹೃಷೀಕೇಶಃ ಪಾರ್ಥಮುದ್ಧರ್ಷಯನ್ ಗಿರಾ ।
ಗರ್ಜನ್ ಸಮಯವರ್ಷೀವ ಗಗನೇ ಪಾಕಶಾಸನಃ ॥೩೧॥

ಸಂಜಯ– ಹೀಗೆ ಅರ್ಜುನನಿಗೆ ತನ್ನ ಮಾತುಗಳಿಂದ ಸಂತೋಷವನ್ನುಂಟು ಮಾಡುತ್ತಾ ಮಳೆಗಾಲದಲ್ಲಿ ಇಂದ್ರನು ಸುರಿಸುವ ಮಳೆಯಂತೆ ಗರ್ಜಿಸುತ್ತಾ ಕೃಷ್ಣನು ಮಾತನಾಡಿದನು.

ವಾಸುದೇವವಚಃ ಶ್ರುತ್ವಾ ಕುಂತೀಪುತ್ರೋ ಧನಂಜಯಃ ।
ಉವಾಚ ಕಾಲೇ ದುರ್ಧರ್ಷೋ ವಾಸುದೇವಸ್ಯ ಶೃಣ್ವತಃ ॥೩೨॥

ಕೃಷ್ಣನ ಮಾತುಗಳನ್ನು ಕೇಳಿ ಕುಂತೀಪುತ್ರನೂ, ಎಂದೂ ಸೋಲದವನೂ ಆದ ಅರ್ಜುನನು ಕೃಷ್ಣನು ಕೇಳುವಂತೆ ನನ್ನನ್ನು ಕುರಿತು ಮಾತನಾಡಿದನು.

ಅರ್ಜುನಃ

ಪಿತಾಮಹಂ ಶಾಂತನವಂ ಧೃತರಾಷ್ಟ್ರಂ ಚ ಸಂಜಯ ।
ದ್ರೋಣಂ ಕೃಪಂ ಚ ಕರ್ಣಂ ಚ ಮಹಾರಾಜಂ ಚ ಬಾಹ್ಲಿಕಮ್ ॥೩೩॥

ದ್ರೌಣಿಂ ಚ ಸೋಮದತ್ತಂ ಚ ಶಕುನಿಂ ಚಾಪಿ ಸೌಬಲಮ್ ।
ದುಃಶಾಸನಂ ಶಲಂ ಚೈವ ಪುರುಮಿತ್ರಂ ವಿವಿಂಶತಿಮ್ ॥೩೪॥

ಅರ್ಜುನ– ಎಲೈ ಸಂಜಯನೇ, ಪಿತಾಮಹರಾದ, ಶಂತನುಪುತ್ರರಾದ ಭೀಷ್ಮ, ಧೃತರಾಷ್ಟ್ರ, ದ್ರೋಣ, ಕೃಪ, ಕರ್ಣ, ಮಹಾರಾಜನಾದ ಬಾಹ್ಲಿಕ, ಅಶ್ವತ್ಥಾಮ, ಸೋಮದತ್ತ, ಸೌಬಲನಾದ ಶಕುನಿ, ದುಶ್ಶಾಸನ, ಶಲ, ಪುರುಮಿತ್ರ, ವಿವಿಂಶತಿ;

ವಿಕರ್ಣಂ ಚಿತ್ರಸೇನಂ ಚ ಜಯತ್ಸೇನಂ ಚ ಪಾರ್ಥಿವಮ್ ।
ವಿಂದಾನುವಿಂದಾವಾವಂತ್ಯೌ ದುರ್ಮುಖಂ ಚಾಪಿ ಪೌರವಮ್ ॥೩೫॥

ಸೈಂಧವಂ ದುಃಸಹಂ ಚೈವ ಭೂರಿಶ್ರವಸಮೇವ ಚ ।
ಭಗದತ್ತಂ ಚ ರಾಜಾನಂ ಜಲಸಂಧಂ ಚ ಪೌರವಮ್ ॥೩೬॥

ವಿಕರ್ಣ, ಚಿತ್ರಸೇನ, ಜಯತ್ಸೇನ ರಾಜ, ಅವಂತಿದೇಶದ ವಿಂದಾನುವಿಂದರು, ಕುರುವಂಶದಲ್ಲಿ ಜನಿಸಿದ ದುರ್ಮುಖ, ಸೈಂಧವ, ದುಃಸಹ, ಭೂರಿಶ್ರವ, ಭಗದತ್ತ ರಾಜ, ಪುರುವಂಶದ ಜಲಸಂಧ;

ಯೇ ಚಾಪ್ಯನ್ಯೇ ಪಾರ್ಥಿವಾಸ್ತತ್ರ ಯೋದ್ಧುಂ
ಸಮಾಗತಾಃ ಕೌರವಾಣಾಂ ಪ್ರಿಯಾರ್ಥಮ್ ।
ಮಮೂರ್ಷವಃ ಪಾಂಡವಾಗ್ನೌ ಪ್ರದೀಪ್ತೇ
ಸಮಾನೀತಾ ಧಾರ್ತರಾಷ್ಟ್ರೇಣ ಸೂತ ॥೩೭॥

ಯಥಾನ್ಯಾಯಂ ಕುಶಲಂ ವಂದನಂ ಚ
ಸಮಾಗತಾ ಮದ್ವಚನೇನ ವಾಚ್ಯಾಃ ॥೩೮॥

ಮತ್ತು ಕೌರವರಿಗೆ ಪ್ರಿಯವನ್ನುಂಟುಮಾಡಲು ಬಂದಿರತಕ್ಕಂತಹ ಮೃತ್ಯುಗ್ರಸ್ತರಾದ, ಪಾಂಡವಾಗ್ನಿಯಲ್ಲಿ ಹೋಮಮಾಡಲ್ಪಡುವ, ಧೃತರಾಷ್ಟ್ರನಿಂದ ಆನೀತರಾದ ಉಳಿದ ರಾಜರು ಯಾರಿದ್ದಾರೆಯೋ ಎಲೈ ಸೂತನೇ, ಆ ಸಮಾಗತರಾದ ರಾಜರೆಲ್ಲರಿಗೂ ನ್ಯಾಯಕ್ಕೆ ಅನುಗುಣವಾಗಿ ನನ್ನ ಮಾತಿನಂತೆ ಕ್ಷೇಮವನ್ನು ಮತ್ತು ನನ್ನ ವಂದನೆಗಳನ್ನು ತಿಳಿಸುವವನಾಗು.

ಇದಂ ಬ್ರೂಯಾಃ ಸಂಜಯ ರಾಜಮಧ್ಯೇ
ಸುಯೋಧನಂ ಪಾಪಕೃತಾಂ ಪ್ರಧಾನಮ್ ।
ಅಮರ್ಷಣಂ ದುರ್ಮತಿಂ ರಾಜಪುತ್ರಂ
ಪಾಪಾತ್ಮಾನಂ ಧಾರ್ತರಾಷ್ಟ್ರಂ ಸುಲುಬ್ಧಮ್ ॥೩೯॥

ಸರ್ವಂ ಮಮೈತದ್ ವಚನಂ ಸಮಗ್ರಂ
ಸಹಾಮಾತ್ಯಂ ಸಂಜಯ ಶ್ರಾವಯೇಥಾಃ ॥೪೦॥

ಎಲೈ ಸಂಜಯನೇ, ಪಾಪಿಷ್ಠರಲ್ಲಿ ಪ್ರಧಾನನೂ, ರೋಷಶೀಲನೂ, ದುಷ್ಟಬುದ್ಧಿ ಉಳ್ಳವನೂ, ಬಹಳ ಲೋಭಿಯೂ ಆದ, ರಾಜಕುಮಾರನಾದ ಸುಯೋಧನನನ್ನು ಕುರಿತು ಅವನ ಮಂತ್ರಿಗಳ ಜೊತೆಯಲ್ಲಿ ಅವನಿಗೆ ನಾನು ಹೇಳುವ ಈ ಮಾತುಗಳನ್ನು ರಾಜರ ಮಧ್ಯದಲ್ಲಿ ತಿಳಿಸುವವನಾಗು.

ಸಂಜಯಃ

ಏವಂ ಪರಿಷ್ವಜ್ಯ ಧನಂಜಯೋ ಮಾಂ
ತತೋಽರ್ಥವದ್ ಧರ್ಮವಚ್ಚಾಪಿ ವಾಕ್ಯಮ್ ।
ಪ್ರೋವಾಚೇದಂ ವಾಸುದೇವಂ ಸಮೀಕ್ಷ್ಯ
ಪಾರ್ಥೋ ಧೀಮಾನ್ ಲೋಹಿತಾಂತಾಯತಾಕ್ಷಃ ॥೪೧॥

ಸಂಜಯ– ಹೀಗೆ ಮೇಧಾವಿಯೂ, ಲೋಹಿತಾಕ್ಷನೂ, ವಿಸ್ತಾರನೇತ್ರನೂ ಆದ ಅರ್ಜುನನು ನನ್ನನ್ನು ಆಲಿಂಗಿಸಿ, ಕೃಷ್ಣನನ್ನು ನೋಡುತ್ತಾ ಧರ್ಮಾರ್ಥಗಳಿಂದ ಕೂಡಿದ ಈ ಮಾತುಗಳನ್ನು ಆಡಿದನು.

ಯಥಾಶ್ರುತಂ ತೇ ವದತೋ ಮಹಾತ್ಮನೋ
ಯದುಪ್ರವೀರಸ್ಯ ವಚಃ ಸಮಾಹಿತಮ್ ।
ತಥೈವ ವಾಚ್ಯಂ ಭವತಾಽಪಿ ಮದ್ವಚಃ
ಸಮಾಗತೇಷು ಕ್ಷಿತಿಪೇಷು ಸರ್ವಶಃ ॥೪೨॥

ಸಂಜಯನೇ, ಮಹಾತ್ಮನಾದ, ಕುರುಪ್ರವೀರನಾದ ಕೃಷ್ಣನ ಸಮಾಧಾನಯುಕ್ತವಾದ ಮಾತುಗಳನ್ನು ನೀನು ಹೇಗೆ ಕೇಳಿದೆಯೋ ಅದರಂತೆ ನನ್ನ ಮಾತುಗಳನ್ನೂ ಸಹ ಸಮಾಗತರಾದ ರಾಜರ ಮಧ್ಯದಲ್ಲಿ ನೀನು ಹಾಗೆಯೇ ಹೇಳಬೇಕು.

ಶರಾಗ್ನಿಧೂಮೇ ರಥನೇಮಿನಾದಿತೇ
ಧನುಃಸ್ರುವೇಣಾಸ್ತ್ರಬಲಾಪಹಾರಿಣಾ ।
ಯಥಾ ನ ಹೋಮಃ ಕ್ರಿಯತೇ ಮಹಾಮೃಧೇ
ತಥಾ ಸಮೇತ್ಯ ಪ್ರಯತಧ್ವಮಾದೃತಾಃ ॥೪೩॥

ಎಲೈ ಧೃತರಾಷ್ಟ್ರಪುತ್ರರೇ, ಬಾಣಗಳೆಂಬ ಅಗ್ನಿಧೂಮದಿಂದ ಕೂಡಿದ, ರಥಚಕ್ರದ ನಾಗದಿಂದ ಕೂಡಿದ, ಧನುಸ್ಸುಗಳೆಂಬ ಸ್ರುವದಿಂದ ಕೂಡಿದ ಶತ್ರುಬಲವನ್ನು

ಅಪಹರಿಸುವ ಅಸ್ತ್ರಗಳಿಂದ ಕೂಡಿದ ದೊಡ್ಡ ಯುದ್ಧದಲ್ಲಿ ಹೋಮವು ಉಂಟಾಗದಂತೆ ನೀವೆಲ್ಲರೂ ಆದರವನ್ನು ವಹಿಸಿ ಪ್ರಯತ್ನವನ್ನು ಮಾಡುವವರಾಗಿ.

ನ ಚೇತ್ ಪ್ರಯಚ್ಛಧ್ವಮಮಿತ್ರಘಾತಿನೋ
ಯುಧಿಷ್ಠಿರಸ್ಯಾಂಶಮಭೀಪ್ಸಿತಂ ಸ್ವಕಮ್ ।
ನಯಾಮಿ ವಃ ಸಾಶ್ವಪದಾತಿಕುಂಜರಾನ್
ದಿಶಂ ಪಿತೄಣಾಮಶಿವಾಂ ಶಿತೈಃ ಶರೈಃ ॥೪೪॥

ಶತ್ರುಘಾತಿಯಾದ ಯುಧಿಷ್ಠಿರನಿಗೆ ಅವನಿಗೆ ಸಲ್ಲಬೇಕಾದ ಮತ್ತು ಇಷ್ಟವಾದ ಭಾಗವನ್ನು ನೀವು ಕೊಡದಿದ್ದರೆ ನನ್ನ ಹರಿತವಾದ ಬಾಣಗಳಿಂದ ನಿಮ್ಮೆಲ್ಲರನ್ನೂ ಅಶ್ವಪದಾತಿಗಜಗಳ ಸಹಿತವಾಗಿ ಪಿತೃಗಳು ಇರುವ ಅಮಂಗಳವಾದ ದಿಕ್ಕಿಗೆ ಕಳುಹಿಸುವೆನು.

ಸಂಜಯಃ

ತತೋಽಹಮಾಮಂತ್ರ್ಯ ತದಾ ಧನಂಜಯಂ
ಚತುರ್ಭುಜಂ ಚೈವ ನಮಸ್ಯ ಸತ್ವರಃ ।
ಜವೇನ ಸಂಪ್ರಾಪ್ತ ಇಹಾಮರದ್ಯುತೇ
ತವಾಂತಿಕಂ ಪ್ರಾಪಯಿತುಂ ವಚೋ ಮಹತ್ ॥೪೫॥

ಸಂಜಯ– ಎಲೈ ದೇವತೆಗಳ ಕಾಂತಿಯನ್ನು ಹೊಂದಿದ ಧೃತರಾಷ್ಟ್ರನೇ, ಆಗ ನಾನು ಅವರಿಬ್ಬರ ಅನುಮತಿಯನ್ನು ಪಡೆದು, ಅರ್ಜುನನಿಗೂ ಮತ್ತು ಚತುರ್ಭುಜನಾದ ಕೃಷ್ಣನಿಗೂ ನಮಸ್ಕಾರವನ್ನು ಮಾಡಿ, ಅವರ ಸಂದೇಶವನ್ನು ತಿಳಿಸಲು ನಿನ್ನ ಬಳಿಗೆ ಶೀಘ್ರವಾಗಿ ಬಂದಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕಷಷ್ಟಿತಮೋಽಧ್ಯಾಯಃ ॥

॥ ವ್ಯಾಸಾಭಿಗಮನಪರ್ವಣಿ ಚತುರ್ದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಅರವತ್ತೊಂದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೆರಡನೆಯ ಅಧ್ಯಾಯ

ದೈವಸಹಾಯವುಳ್ಳ ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳುವುದಕ್ಕೆ ಧೃತರಾಷ್ಟ್ರನ ಒತ್ತಾಯ. ದುರ್ಯೋಧನನಿಂದ ಅದನ್ನು ನಿರಾಕರಿಸಿ, ತನಗಿರುವ ದೈವಸಹಾಯದ ಮತ್ತು ಮಂತ್ರಬಲದ ಕಥನ.

ವೈಶಂಪಾಯನಃ

ಸಂಜಯಸ್ಯ ವಚಃ ಶ್ರುತ್ವಾ ಪ್ರಜ್ಞಾಚಕ್ಷುರ್ನರೇಶ್ವರಃ ।
ತತಃ ಸಂಖ್ಯಾತುಮಾರೇಭೇ ತದ್ವಚೋ ಗುಣದೋಷತಃ ॥೧॥

ವೈಶಂಪಾಯನ– ಪ್ರಜ್ಞಾಚಕ್ಷುಸ್ಸನ್ನು ಹೊಂದಿದ ಧೃತರಾಷ್ಟ್ರರಾಜನು ಸಂಜಯನ ಮಾತುಗಳನ್ನು ಕೇಳಿ, ಪಾಂಡವರ ಪಕ್ಷದಲ್ಲಿ ಗುಣಗಳನ್ನು ಮತ್ತು ದುರ್ಯೋಧನನ ಪಕ್ಷದಲ್ಲಿ ದೋಷಗಳನ್ನು ಎಣಿಸಲು ಪ್ರಾರಂಭಿಸಿದನು.

ಪ್ರಸಂಖ್ಯಾಯ ಚ ಸೌಕ್ಷ್ಮ್ಯೇಣ ಗುಣದೋಷಾನ್ ವಿಚಕ್ಷಣಃ ।
ಯಥಾವನ್ಮತಿ ತತ್ತೇನ ಜಯಕಾಮಃ ಸುತಾನ್ ಪ್ರತಿ ॥೨॥

ಬಲಾಬಲೇ ವಿನಿಶ್ಚಿತ್ಯ ಯಾಥಾತಥ್ಯೇನ ಬುದ್ಧಿಮಾನ್ ।
ಯದಾ ತು ಮೇನೇ ಭೂಯಿಷ್ಠಂ ತದ್ವಚೋ ಗುಣದೋಷತಃ ॥೩॥

ದೇವಮಾನುಷಯೋಃ ಶಕ್ತ್ಯಾ ತೇಜಸಾ ಚೈವ ಪಾಂಡವಾನ್ ।
ಕುರೂನ್ ಶಕ್ತ್ಯಾऽಲ್ಪತರಯಾ ದುರ್ಯೋಧನಮಥಾಬ್ರವೀತ್ ॥೪॥

ಮೇಧಾವಿಯೂ, ನಿಪುಣನೂ ಆದ ಅವನು ತನ್ನ ಬುದ್ಧಿಗೆ ತೋರುವಷ್ಟು ಸೂಕ್ಷ್ಮವಾಗಿ ಗುಣ-ದೋಷಗಳನ್ನು ಎಣಿಸಿ, ತನ್ನ ಮಕ್ಕಳಿಗೆ ಜಯವನ್ನು ಬಯಸುವವನಾಗಿ, ಬಲಾಬಲಗಳನ್ನು ಸರಿಯಾಗಿ ನಿಶ್ಚಯಿಸಿ, ದೇವತೆಗಳ ಮತ್ತು ಮನುಷ್ಯರ ಶಕ್ತಿಗೆ ಅನುಗುಣವಾಗಿ ಪಾಂಡವರನ್ನು ಅಧಿಕ ಶಕ್ತಿಯುಳ್ಳವರೆಂದೂ, ಕೌರವರನ್ನು ಅಲ್ಪಶಕ್ತಿಯುಳ್ಳವರೆಂದೂ ನಿಶ್ಚಯಿಸಿ, ಅನಂತರ ದುರ್ಯೋಧನನನ್ನು ಕುರಿತು ಮಾತನಾಡಿದನು.

ಧೃತರಾಷ್ಟ್ರಃ

ದುರ್ಯೋಧನೇಯಂ ಚಿಂತಾ ಮೇ ಶಶ್ವನ್ನ ಹ್ಯುಪಶಾಮ್ಯತಿ ॥೫॥

ಈದೃಶೇಽಭಿನಿವಿಷ್ಟಸ್ಯ ಪೃಥಿವೀಕ್ಷಯಕಾರಕೇ ।
ಅಧರ್ಮ್ಯೇ ವಾಽಯಶಸ್ಯೇ ವಾ ಕಾರ್ಯೇ ಮಹತಿ ದಾರುಣೇ ॥೬॥

ಪಾಂಡವೈರ್ವಿಗ್ರಹಸ್ತಾತ ಸರ್ವಥಾ ಮೇ ನ ರೋಚತೇ ॥೭॥

ಎಲೈ ದುರ್ಯೋಧನನೇ, ಪೃಥಿವೀಕ್ಷಯಕಾರಕವಾದ, ಅಧರ್ಮರೂಪವಾದ, ಅಕೀರ್ತಿಕರವಾದ, ಭಯಂಕರವಾದ ಮಹತ್ಕಾರ್ಯದಲ್ಲಿ ಆಸಕ್ತನಾಗಿರುವ ನಿನ್ನನ್ನು ನೋಡಿ ನನ್ನ ಮನಸ್ಸಲ್ಲಿ ಚಿಂತೆಯು ಉಪಶಮನವನ್ನೇ ಹೊಂದುವುದಿಲ್ಲ. ಪ್ರೀತಿಪಾತ್ರನೇ, ಪಾಂಡವರಲ್ಲಿ ಯುದ್ಧವು ನನಗೆ ಸರ್ವಥಾ ಇಷ್ಟವಿಲ್ಲ.

ಸತ್ಯಂ ಹ್ಯೇತದಹಂ ಮನ್ಯೇ ಪ್ರತ್ಯಕ್ಷಂ ನಾನುಮಾನತಃ ।
ಆತ್ಮಜೈಸ್ತು ಪರಂ ಸ್ನೇಹಂ ಸರ್ವಭೂತಾನಿ ಕುರ್ವತೇ ॥೮॥

ಪ್ರಿಯಾಣಿ ಚೈಷಾಂ ಕುರ್ವಂತಿ ಯಥಾಶಕ್ತಿ ಹಿತಾನಿ ಚ ।
ಏವಮೇವೋಪಕರ್ತ್ರಾಣಾಂ ಪ್ರಾಯಶೋ ಲಕ್ಷಯಾಮಹೇ ॥೯॥

ಇಚ್ಛಂತಿ ಬಹುಲಂ ಸಂತಃ ಪ್ರತಿಕರ್ತುಂ ಮಹತ್ ಪ್ರಿಯಮ್ ॥೧೦॥

ಈ ವಿಷಯವನ್ನು ನಾನು ಪ್ರತ್ಯಕ್ಷವಾಗಿ ಸತ್ಯವಾಗಿ ತಿಳಿದಿದ್ದೇನೆ, ಊಹೆಯಿಂದಲ್ಲ. ಎಲ್ಲ ಪ್ರಾಣಿಗಳೂ ತಮ್ಮ ಮಕ್ಕಳಲ್ಲಿ ಸ್ನೇಹವನ್ನು ಮಾಡುತ್ತವೆ. ತಮಗೆ ಶಕ್ತಿ ಇದ್ದಷ್ಟು ಅವರಿಗೆ ಪ್ರಿಯವನ್ನು ಮತ್ತು ಹಿತವನ್ನು ಉಂಟುಮಾಡುತ್ತವೆ. ಉಪಕಾರವನ್ನು ಮಾಡಿದವರ ವಿಷಯದಲ್ಲಿಯೂ ಹೆಚ್ಚಾಗಿ ಹೀಗೇ ನಡೆದುಕೊಳ್ಳುವುದನ್ನು ನಾವು ಕಾಣುತ್ತೇವೆ. ಸಜ್ಜನರಾದವರು ಉಪಕಾರವನ್ನು ಮಾಡಿದವರಿಗೆ ದೊಡ್ಡ ಪ್ರತ್ಯುಪಕಾರವನ್ನು ಮಾಡಲು ಬಯಸುತ್ತಾರೆ.

ಅಗ್ನಿಃ ಸಾಚಿವ್ಯಕರ್ತಾ ಸ್ಯಾತ್ ಖಾಂಡವೇ ತತ್ಕೃತಂ ಸ್ಮರನ್ ।
ಅರ್ಜುನಸ್ಯಾಪಿ ಭೀಮೇಽಸ್ಮಿನ್ ಕುರುಪಾಂಡವಸಮಾಗಮೇ ॥೧೧॥

ಈ ಘೋರವಾದ ಕುರುಪಾಂಡವ ಸಂಗ್ರಾಮದಲ್ಲಿ ಅಗ್ನಿಯು ಖಾಂಡವದಹನ ಸಮಯದಲ್ಲಿ ತನಗೆ ಮಾಡಿದ ಉಪಕಾರವನ್ನು ನೆನೆದು ಅರ್ಜುನನಿಗೆ ಸಹಾಯವನ್ನು ಮಾಡುವನು.

ಜಾತಿಗೃದ್ಧ್ಯಾऽಭಿಪನ್ನಾಶ್ಚ ಪಾಂಡವಾನಾಮನೇಕಶಃ ।
ಧರ್ಮಾದಯಃ ಸಮೇಷ್ಯಂತಿ ಸಮಾಹೂತಾ ದಿವೌಕಸಃ ॥೧೨॥

ಧರ್ಮ, ಇಂದ್ರ ಮೊದಲಾದ ದೇವತೆಗಳು ಯುಧಿಷ್ಠಿರಾದಿಗಳು ತಮ್ಮ ಮಕ್ಕಳಾದ್ದರಿಂದ ಅವರು ಆಹ್ವಾನ ಮಾಡಿದಾಗ ಅವರೆಲ್ಲರೂ ಬಂದು ಅವರ ಜೊತೆಯಲ್ಲಿ ಸೇರುತ್ತಾರೆ.

ಭೀಷ್ಮದ್ರೋಣಕೃಪಾದೀನಾಂ ಭಯಾದಶನಿಸನ್ನಿಭಮ್ ।
ರಿರಕ್ಷಿಷಂತಃ ಸಂರಂಭಂ ಗಮಿಷ್ಯಂತೀತಿ ಮೇ ಮತಿಃ ॥೧೩॥

ಭೀಷ್ಮದ್ರೋಣಕೃಪಾದಿಗಳು ತಮ್ಮ ಗುರುಗಳಾದ್ದರಿಂದ ಅವರ ಮೇಲೆ ತಮ್ಮ ರೋಷವನ್ನು ತೀರಿಸಿಕೊಳ್ಳದೆ ಅವರನ್ನು ರಕ್ಷಿಸಿ ಪಾಂಡವರು ತಮ್ಮ ರೋಷವನ್ನು (ನಮ್ಮ ಸೈನ್ಯದಲ್ಲಿ) ಬೇರೆ ಕಡೆಗೆ ತಿರುಗಿಸುತ್ತಾರೆ ಎಂದು ನನ್ನ ಅಭಿಪ್ರಾಯ.

ತದ್ ದೇವಸಹಿತಾಃ ಪಾರ್ಥಾ ನ ಶಕ್ಯಾಃ ಪ್ರತಿವೀಕ್ಷಿತುಮ್ ।
ಮಾನುಷೇಣ ನರವ್ಯಾಘ್ರಾ ವೀರ್ಯವಂತೋऽಸ್ತ್ರಪಾರಗಾಃ ॥೧೪॥

ವೀರ್ಯವಂತರೂ, ಅಸ್ತ್ರಪಾರಂಗತರೂ, ದೇವಸಹಾಯವುಳ್ಳವರೂ ಆದ ನರವ್ಯಾಘ್ರರಾದ ಪಾಂಡವರನ್ನು ಮನುಷ್ಯನು ಎದುರು ನಿಂತು ನೋಡಲೂ ಸಾಧ್ಯವಿಲ್ಲ.

ದುರಾಸದಂ ಯಸ್ಯ ದಿವ್ಯಂ ಗಾಂಡೀವಂ ಧನುರುತ್ತಮಮ್ ।
ವಾರುಣೌ ಚಾಕ್ಷಯೌ ದಿವ್ಯೌ ಶರಪೂರ್ಣೌ ಮಹೇಷುಧೀ ॥೧೫॥

ವಾನರಶ್ಚ ಧ್ವಜೇ ದಿವ್ಯೇ ನಿಃಸಂಗೋ ಧೂಮವದ್‌ಗತಿಃ ।
ರಥಸ್ಯ ಚತುರಂತಾಯಾಂ ಯಸ್ಯ ನಾಸ್ತಿ ಸಮಸ್ತಿ ಷಾ ॥೧೬॥

ಯಾವನ ಶ್ರೇಷ್ಠವಾದ ಗಾಂಡೀವ ಧನುಸ್ಸು ದಿವ್ಯವಾದುದೋ ಮತ್ತು ಸೋಲಿಸಲು ಅಸಾಧ್ಯವಾದುದೋ, ಯಾವನ ಬಳಿ ವರುಣನಿಂದ ಕೊಡಲ್ಪಟ್ಟ ಶರಪೂರ್ಣವಾದ ದಿವ್ಯವಾದ ಅಕ್ಷಯವಾದ ಬತ್ತಳಿಕೆಗಳಿವೆಯೋ, ಯಾವನ ಧ್ವಜದಲ್ಲಿ ದಿವ್ಯವಾದ, ಎಲ್ಲಿಯೂ ಸಿಲುಕಿಕೊಳ್ಳದಿರುವ ವಾನರನಿದ್ದಾನೆಯೋ, ಯಾವ ಅವನಿಗೆ ರಥಕ್ಕೆ ಧೂಮದಂತಹ ಗತಿ ಇದೆಯೋ, ಯಾವನ ಧ್ವಜದ ಕಾಂತಿಗೆ ಸಮನಾದ ಕಾಂತಿ

ಇಲ್ಲವೋ, ಯಾವನ ರಥಕ್ಕೆ ಚತುಸ್ಸಮುದ್ರಾಂತವಾದ ಭೂಮಿಯಲ್ಲಿ ಹೋಲಿಕೆ ಇಲ್ಲವೋ;

ಮಹಾಮೇಘನಿಭಶ್ಚಾಪಿ ನಿಘೋರ್ಷಃ ಶ್ರೂಯತೇ ಜನೈಃ ।
ಮಹಾಶನಿಸಮಃ ಶಬ್ದಃ ಶಾತ್ರವಾಣಾಂ ಭಯಂಕರಃ ॥೧೭॥

ಯಂ ಚಾತಿಮಾನುಷಂ ವೀರ್ಯೇ ಕೃತ್ಸ್ನೋ ಲೋಕೋ ವ್ಯವಸ್ಯತಿ ।
ದೇವಾನಾಮಪಿ ಜೇತಾರಂ ಯಂ ವಿದುಃ ಪಾರ್ಥಿವಾ ರಣೇ ॥೧೮॥

ಯಾವನ ರಥದ ಘೋಷವು ಮಹಾಮೇಘಗಳ ಘೋಷದಂತೆ ಜನರಿಂದ ಕೇಳಲ್ಪಡುತ್ತದೆಯೋ, ಯಾವ ಆ ರಥಶಬ್ದವು ಸಿಡಿಲಿನಂತೆ ಶತ್ರುಗಳಿಗೆ ಭಯಂಕರವಾಗಿದೆಯೋ, ಯಾವನನ್ನು ಸಮಗ್ರವಾದ ಜನರು ಮನುಷ್ಯಶಕ್ತಿಯನ್ನು ಮೀರಿದವನು ಎಂದು ತಿಳಿಯುತ್ತಾರೆಯೋ, ಯಾವನನ್ನು ಎಲ್ಲ ರಾಜರೂ ಯುದ್ಧದಲ್ಲಿ ದೇವತೆಗಳನ್ನು ಜಯಿಸುವವನು ಎಂದು ತಿಳಿಯುತ್ತಾರೆಯೋ;

ಶತಾನಿ ಪಂಚ ಚೈವೇಷೂನ್ ಯೋ ಗೃಹ್ಣನ್ನೇವ ದೃಶ್ಯತೇ ।
ನಿಮೇಷಾಂತರಮಾತ್ರೇಣ ಮುಂಚನ್ ದೂರಂ ಚ ಪಾತಯನ್ ॥೧೯॥

ಯಮಾಹ ಭೀಷ್ಮೋ ದ್ರೋಣಶ್ಚ ಕೃಪೋ ದ್ರೌಣಿಸ್ತಥೈವ ಚ ।
ಮದ್ರರಾಜಸ್ತಥಾ ಶಲ್ಯೋ ಮಧ್ಯಸ್ಥಾ ಯೇ ಚ ಮಾನವಾಃ ॥೨೦॥

ಯುದ್ಧಾಯಾವಸ್ಥಿತಂ ಪಾರ್ಥಂ ಪಾರ್ಥಿವೈರತಿಮಾನುಷೈಃ ।
ಅಶಕ್ಯಂ ರಥಶಾರ್ದೂಲಂ ಪರಾಜೇತುಮರಿಂದಮಮ್ ॥೨೧॥

ಯಾವನು ಐನೂರುಬಾಣಗಳನ್ನು ತೆಗೆದುಕೊಳ್ಳುವುದು ಮಾತ್ರ ಕಾಣಿಸುತ್ತದೆ, ಒಂದೇ ನಿಮೇಷದಲ್ಲಿ (ರೆಪ್ಪೆಯನ್ನು ಮುಚ್ಚಿ ತೆರೆಯುವಷ್ಟರಲ್ಲಿ) ಅದನ್ನು ಪ್ರಯೋಗಿಸಿ ದೂರದಲ್ಲಿ ಬೀಳಿಸುತ್ತಾನೆ, ಯಾವನನ್ನು ಭೀಷ್ಮ, ದ್ರೋಣ, ಕೃಪ ಅಶ್ವತ್ಥಾಮ, ಸೈಂಧವ, ಶಲ್ಯ ಮತ್ತು ಮಧ್ಯಸ್ಥರಾದ ಮನುಷ್ಯರು ಹೀಗೆಯೇ ಹೇಳುತ್ತಾರೆಯೋ, ಅಂತಹ ಅತಿಮಾನುಷರಾಜರಿಂದ ಕೂಡಿದ ರಥಶಾರ್ದೂಲನಾದ ಅರಿಂದಮನಾದ ಯುದ್ಧಕ್ಕೆ ಸನ್ನದ್ಧನಾದ ಅರ್ಜುನನನ್ನು ಸೋಲಿಸುವುದು ಅಸಾಧ್ಯವಾದುದು.

ಕ್ಷಿಪತ್ಯೇಕೇನ ವೇಗೇನ ಪಂಚಬಾಣಶತಾನಿ ಯಃ ॥೨೨॥

ಸದೃಶಂ ಬಾಹುವೀರ್ಯೇಣ ಕಾರ್ತವೀರ್ಯಸ್ಯ ಪಾಂಡವಮ್ ।
ತಮರ್ಜುನಂ ಮಹೇಷ್ವಾಸಂ ಮಹೇಂದ್ರೋಪೇಂದ್ರರಕ್ಷಿತಮ್ ॥೨೩॥

ನಿಘ್ನಂತಮಿವ ಪಶ್ಯಾಮಿ ವಿಮರ್ದೇऽಸ್ಮಿನ್ ಮಹಾಮೃಧೇ ॥೨೪॥

ಅವನು ಒಂದೇ ವೇಗದಿಂದ ಐದುನೂರು ಬಾಣಗಳನ್ನು ಪ್ರಯೋಗಿಸುತ್ತಾನೆ. ಅರ್ಜುನನು ಬಾಹುವೀರ್ಯದಲ್ಲಿ ಕಾರ್ತವೀರ್ಯನಿಗೆ ಸಮಾನನಾಗಿದ್ದಾನೆ. ಅಂತಹ ಇಂದ್ರ ಮತ್ತ ಉಪೇಂದ್ರನಿಂದ ರಕ್ಷಿತನಾದ, ಮಹಾಧನುರ್ಧಾರಿಯಾದ ಅರ್ಜುನನು ಈ ದೊಡ್ಡ ಯುದ್ಧದಲ್ಲಿ ಶತ್ರುಗಳನ್ನು ಸಂಹರಿಸುವುದನ್ನು ನಾನು ನೋಡುತ್ತಿದ್ದೇನೆ.

ಇತ್ಯೇವಂ ಚಿಂತಯನ್ ಕೃತ್ಸ್ನಮಹೋರಾತ್ರಾಣಿ ಭಾರತ ।
ಅನಿದ್ರೋ ನಿಃಸುಖಶ್ಚಾಸ್ಮಿ ಕುರೂಣಾಂ ಶಮಚಿಂತಯಾ ॥೨೫॥

ಎಲೈ ಭಾರತನೇ, ಹೀಗೆ ಎಲ್ಲಾ ಹಗಲು-ರಾತ್ರಿಗಳಲ್ಲಿ ಸಮಗ್ರವಾಗಿ ಚಿಂತಿಸುತ್ತಾ, ಕುರುಗಳ ಶಾಂತಿಯನ್ನು ಬಯಸಿ ನಿದ್ರಾಹೀನನೂ ಮತ್ತು ಸುಖಹೀನನೂ ಆಗಿದ್ದೇನೆ.

ಕ್ಷಯೋದಯೋऽಯಂ ಸುಮಹಾನ್ ಕುರೂಣಾಂ ಪ್ರತ್ಯುಪಸ್ಥಿತಃ ।
ಅಸ್ಯ ಚೇತ್ ಕಲಹಸ್ಯಾಂತಃ ಶಮಾದನ್ಯೋ ನ ವಿದ್ಯತೇ ॥೨೬॥

ಈ ಕಲಹಕ್ಕೆ ಶಾಂತಿಯನ್ನು ಬಿಟ್ಟು ಬೇರೆ ಶಮನೋಪಾಯವಿಲ್ಲದ ಕಾರಣ ಕುರುಗಳಿಗೆ ದೊಡ್ಡ ವಿನಾಶಕಾಲವು ಬಂದೊದಗಿದೆ.

ಶಮೋ ಮೇ ರೋಚತೇತ್ಯರ್ಥಂ ಪಾರ್ಥೈಃ ಸಹ ನ ವಿಗ್ರಹಃ ।
ಕುರುಭ್ಯೋ ಹಿ ಸದಾ ಮನ್ಯೇ ಪಾಂಡವಾನ್ ಶಕ್ತಿಮತ್ತರಾನ್ ॥೨೭॥

ಪಾಂಡವರ ಜೊತೆಯಲ್ಲಿ ನನಗೆ ಸಂಧಿಯು ಇಷ್ಟವಾಗುತ್ತದೆಯೇ ಹೊರತು ವಿರೋಧವಲ್ಲ. ಕುರುಗಳಿಗಿಂತಲೂ ಪಾಂಡವರು ಅಧಿಕಶಕ್ತಿಯುಳ್ಳವರು ಎಂದು ನಾನು ಯಾವಾಗಲೂ ತಿಳಿದಿದ್ದೇನೆ.

ವೈಶಂಪಾಯನಃ

ಪಿತುರೇತದ್ ವಚಃ ಶ್ರುತ್ವಾ ಧಾರ್ತರಾಷ್ಟ್ರೋಽತ್ಯಮರ್ಷಣಃ ।
ಆಧಾಯ ವಿಪುಲಂ ಕ್ರೋಧಂ ಪುನರೇವೇದಮಬ್ರವೀತ್ ॥೨೮॥

ವೈಶಂಪಾಯನ– ತಂದೆಯ ಈ ಮಾತುಗಳನ್ನು ಕೇಳಿ ರೋಷಶೀಲನಾದ ದುರ್ಯೋಧನನು ವಿಪುಲವಾದ ಕ್ರೋಧವನ್ನು ತಂದುಕೊಂಡು ಪುನಃ ಹೀಗೆ ಮಾತನಾಡಿದನು.

ಅಶಕ್ಯಾ ದೇವಸಚಿವಾಃ ಪಾರ್ಥಾಃ ಸ್ಯುರಿತಿ ಯದ್ ಭವಾನ್ ।
ಮನ್ಯತೇ ತದ್ಭಯಂ ವ್ಯೇತು ಭವತೋ ರಾಜಸತ್ತಮ ॥೨೯॥

ಎಲೈ ರಾಜಸತ್ತಮನೇ, ದೇವಸಹಾಯವುಳ್ಳ ಪಾಂಡವರು ಯುದ್ಧದಲ್ಲಿ ಎದುರಿಸಲು ಅಶಕ್ಯರಾದವರು ಎಂದು ಏನು ನಿನ್ನ ಭಯವಿದೆಯೋ ಅದು ದೂರವಾಗಲಿ.

ಅಕಾಮದ್ವೇಷಸಂಯೋಗಾನ್ಮೋಹಾಲ್ಲೋಭಾಚ್ಚ ಭಾರತ ।
ಉಪೇಕ್ಷಯಾ ಚ ಭಾವಾನಾಂ ದೇವಾ ದೇವತ್ವಮಾಪ್ನುವನ್ ॥೩೦॥

ಎಲೈ ಭಾರತನೇ, ದೇವತೆಗಳು ಕಾಮ-ದ್ವೇಷರಹಿತರಾದುದರಿಂದ ಮನುಷ್ಯರಿಗಿರುವ ಲೋಭ-ಮೋಹಗಳಿಂದಲೂ ದೂರವಾಗಿರುವುದರಿಂದ ಮತ್ತು ಲೋಭ-ಮೋಹಗಳುಳ್ಳ ಮನುಷ್ಯರನ್ನು ಉಪೇಕ್ಷೆ ಮಾಡುವ ಕಾರಣದಿಂದ ದೇವತೆಗಳು ದೇವತ್ವವನ್ನು ಹೊಂದಿದರು.

ಇತಿ ದ್ವೈಪಾಯನೋ ವ್ಯಾಸೋ ನಾರದಶ್ಚ ಮಹಾತಪಾಃ ।
ಜಾಮದಗ್ನ್ಯಶ್ಚ ರಾಮೋ ನಃ ಕಥಾಮಕಥಯನ್ ಪುರಾ ॥೩೧॥

ಹೀಗೆಂದು ದ್ವೈಪಾಯನರಾದ ವ್ಯಾಸರೂ, ಮಹಾತಪಸ್ವಿಗಳಾದ ನಾರದರೂ, ಜಮದಗ್ನಿಪುತ್ರರಾದ ಪರಶುರಾಮರೂ ನಮಗೆ ಹಿಂದೆ ಹೇಳಿದ್ದರು.

ನೈವ ಮಾನುಷವದ್ ದೇವಾಃ ಪ್ರವರ್ತಂತೇ ಕದಾಚನ ।
ಕಾಮಾತ್ ಕ್ರೋಧಾತ್ ತಥಾ ಲೋಭಾತ್ ದ್ವೇಷಾಚ್ಚ ಭರತರ್ಷಭ ॥

ಕ್ಷಿಪತ್ಯೇಕೇನ ವೇಗೇನ ಪಂಚಬಾಣಶತಾನಿ ಯಃ ॥೨೨॥

ಸದೃಶಂ ಬಾಹುವೀರ್ಯೇಣ ಕಾರ್ತವೀರ್ಯಸ್ಯ ಪಾಂಡವಮ್ ।
ತಮರ್ಜುನಂ ಮಹೇಷ್ವಾಸಂ ಮಹೇಂದ್ರೋಪೇಂದ್ರರಕ್ಷಿತಮ್ ॥೨೩॥

ನಿಘ್ನಂತಮಿವ ಪಶ್ಯಾಮಿ ವಿಮರ್ದೇऽಸ್ಮಿನ್ ಮಹಾಮೃಧೇ ॥೨೪॥

ಅವನು ಒಂದೇ ವೇಗದಿಂದ ಐದುನೂರು ಬಾಣಗಳನ್ನು ಪ್ರಯೋಗಿಸುತ್ತಾನೆ. ಅರ್ಜುನನು ಬಾಹುವೀರ್ಯದಲ್ಲಿ ಕಾರ್ತವೀರ್ಯನಿಗೆ ಸಮಾನನಾಗಿದ್ದಾನೆ. ಅಂತಹ ಇಂದ್ರ ಮತ್ತ ಉಪೇಂದ್ರನಿಂದ ರಕ್ಷಿತನಾದ, ಮಹಾಧನುರ್ಧಾರಿಯಾದ ಅರ್ಜುನನು ಈ ದೊಡ್ಡ ಯುದ್ಧದಲ್ಲಿ ಶತ್ರುಗಳನ್ನು ಸಂಹರಿಸುವುದನ್ನು ನಾನು ನೋಡುತ್ತಿದ್ದೇನೆ.

ಇತ್ಯೇವಂ ಚಿಂತಯನ್ ಕೃತ್ಸ್ನಮಹೋರಾತ್ರಾಣಿ ಭಾರತ ।
ಅನಿದ್ರೋ ನಿಃಸುಖಶ್ಚಾಸ್ಮಿ ಕುರೂಣಾಂ ಶಮಚಿಂತಯಾ ॥೨೫॥

ಎಲೈ ಭಾರತನೇ, ಹೀಗೆ ಎಲ್ಲಾ ಹಗಲು-ರಾತ್ರಿಗಳಲ್ಲಿ ಸಮಗ್ರವಾಗಿ ಚಿಂತಿಸುತ್ತಾ, ಕುರುಗಳ ಶಾಂತಿಯನ್ನು ಬಯಸಿ ನಿದ್ರಾಹೀನನೂ ಮತ್ತು ಸುಖಹೀನನೂ ಆಗಿದ್ದೇನೆ.

ಕ್ಷಯೋದಯೋऽಯಂ ಸುಮಹಾನ್ ಕುರೂಣಾಂ ಪ್ರತ್ಯುಪಸ್ಥಿತಃ ।
ಅಸ್ಯ ಚೇತ್ ಕಲಹಸ್ಯಾಂತಃ ಶಮಾದನ್ಯೋ ನ ವಿದ್ಯತೇ ॥೨೬॥

ಈ ಕಲಹಕ್ಕೆ ಶಾಂತಿಯನ್ನು ಬಿಟ್ಟು ಬೇರೆ ಶಮನೋಪಾಯವಿಲ್ಲದ ಕಾರಣ ಕುರುಗಳಿಗೆ ದೊಡ್ಡ ವಿನಾಶಕಾಲವು ಬಂದೊದಗಿದೆ.

ಶಮೋ ಮೇ ರೋಚತೇತ್ಯರ್ಥಂ ಪಾರ್ಥೈಃ ಸಹ ನ ವಿಗ್ರಹಃ ।
ಕುರುಭ್ಯೋ ಹಿ ಸದಾ ಮನ್ಯೇ ಪಾಂಡವಾನ್ ಶಕ್ತಿಮತ್ತರಾನ್ ॥೨೭॥

ಪಾಂಡವರ ಜೊತೆಯಲ್ಲಿ ನನಗೆ ಸಂಧಿಯು ಇಷ್ಟವಾಗುತ್ತದೆಯೇ ಹೊರತು ವಿರೋಧವಲ್ಲ. ಕುರುಗಳಿಗಿಂತಲೂ ಪಾಂಡವರು ಅಧಿಕಶಕ್ತಿಯುಳ್ಳವರು ಎಂದು ನಾನು ಯಾವಾಗಲೂ ತಿಳಿದಿದ್ದೇನೆ.

ವೈಶಂಪಾಯನಃ

ಪಿತುರೇತದ್ ವಚಃ ಶ್ರುತ್ವಾ ಧಾರ್ತರಾಷ್ಟ್ರೋಽತ್ಯಮರ್ಷಣಃ ।
ಆಧಾಯ ವಿಪುಲಂ ಕ್ರೋಧಂ ಪುನರೇವೇದಮಬ್ರವೀತ್ ॥೨೮॥

ವೈಶಂಪಾಯನ– ತಂದೆಯ ಈ ಮಾತುಗಳನ್ನು ಕೇಳಿ ರೋಷಶೀಲನಾದ ದುರ್ಯೋಧನನು ವಿಪುಲವಾದ ಕ್ರೋಧವನ್ನು ತಂದುಕೊಂಡು ಪುನಃ ಹೀಗೆ ಮಾತನಾಡಿದನು.

ಅಶಕ್ಯಾ ದೇವಸಚಿವಾಃ ಪಾರ್ಥಾಃ ಸ್ಯುರಿತಿ ಯದ್ ಭವಾನ್ ।
ಮನ್ಯತೇ ತದ್ಭಯಂ ವ್ಯೇತು ಭವತೋ ರಾಜಸತ್ತಮ ॥೨೯॥

ಎಲೈ ರಾಜಸತ್ತಮನೇ, ದೇವಸಹಾಯವುಳ್ಳ ಪಾಂಡವರು ಯುದ್ಧದಲ್ಲಿ ಎದುರಿಸಲು ಅಶಕ್ಯರಾದವರು ಎಂದು ಏನು ನಿನ್ನ ಭಯವಿದೆಯೋ ಅದು ದೂರವಾಗಲಿ.

ಅಕಾಮದ್ವೇಷಸಂಯೋಗಾನ್ಮೋಹಾಲ್ಲೋಭಾಚ್ಚ ಭಾರತ ।
ಉಪೇಕ್ಷಯಾ ಚ ಭಾವಾನಾಂ ದೇವಾ ದೇವತ್ವಮಾಪ್ನುವನ್ ॥೩೦॥

ಎಲೈ ಭಾರತನೇ, ದೇವತೆಗಳು ಕಾಮ-ದ್ವೇಷರಹಿತರಾದುದರಿಂದ ಮನುಷ್ಯರಿಗಿರುವ ಲೋಭ-ಮೋಹಗಳಿಂದಲೂ ದೂರವಾಗಿರುವುದರಿಂದ ಮತ್ತು ಲೋಭ-ಮೋಹಗಳುಳ್ಳ ಮನುಷ್ಯರನ್ನು ಉಪೇಕ್ಷೆ ಮಾಡುವ ಕಾರಣದಿಂದ ದೇವತೆಗಳು ದೇವತ್ವವನ್ನು ಹೊಂದಿದರು.

ಇತಿ ದ್ವೈಪಾಯನೋ ವ್ಯಾಸೋ ನಾರದಶ್ಚ ಮಹಾತಪಾಃ ।
ಜಾಮದಗ್ನ್ಯಶ್ಚ ರಾಮೋ ನಃ ಕಥಾಮಕಥಯನ್ ಪುರಾ ॥೩೧॥

ಹೀಗೆಂದು ದ್ವೈಪಾಯನರಾದ ವ್ಯಾಸರೂ, ಮಹಾತಪಸ್ವಿಗಳಾದ ನಾರದರೂ, ಜಮದಗ್ನಿಪುತ್ರರಾದ ಪರಶುರಾಮರೂ ನಮಗೆ ಹಿಂದೆ ಹೇಳಿದ್ದರು.

ನೈವ ಮಾನುಷವದ್ ದೇವಾಃ ಪ್ರವರ್ತಂತೇ ಕದಾಚನ ।
ಕಾಮಾತ್ ಕ್ರೋಧಾತ್ ತಥಾ ಲೋಭಾತ್ ದ್ವೇಷಾಚ್ಚ ಭರತರ್ಷಭ ॥

ಎಲೈ ಭರತರ್ಷಭನೇ, ದೇವತೆಗಳು ಮನುಷ್ಯರಂತೆ ಕಾಮದಿಂದ, ಕ್ರೋಧದಿಂದ, ಲೋಭದಿಂದ ಮತ್ತು ದ್ವೇಷದಿಂದ ಪ್ರವೃತ್ತರಾಗುವುದಿಲ್ಲ.

ಯದಾ ಹ್ಯಗ್ನಿಶ್ಚ ವಾಯುಶ್ಚ ಧರ್ಮ ಇಂದ್ರೋಽಶ್ವಿನಾವಪಿ ।
ಕಾಮಯೋಗಾತ್ ಪ್ರವರ್ತೇರನ್ ಅಪಾರ್ಥಾ ದುಃಖಮಾಪ್ನುಯುಃ ॥

ಅಗ್ನಿ, ವಾಯು, ಯಮ, ಇಂದ್ರ, ಅಶ್ವಿನಿಗಳು ಕಾಮದಿಂದ ಪ್ರವೃತ್ತರಾಗುವುದಾದರೆ ಅವರು ತಮ್ಮ ಸ್ವಧರ್ಮವನ್ನು ಕಳೆದುಕೊಂಡು ದುಃಖಿತರಾಗುವರು.

ತಸ್ಮಾನ್ನ ಭವತಾ ಚಿಂತಾ ಕಾರ್ಯೈಷಾ ಸ್ಯಾತ್ ಕಥಂಚನ ।
ದೇವಾಶ್ಚೋಪೇಕ್ಷಕಾ ಹ್ಯೇತೇ ಶಶ್ವದ್ ಭಾವೇಷು ಭಾರತ ॥೩೪॥

ಆದ್ದರಿಂದ ನೀನು ಯಾವ ಕಾರಣದಿಂದಲೂ ಇಂತಹ ಚಿಂತೆಯನ್ನು ಮಾಡುವ ಅವಶ್ಯಕತೆ ಇಲ್ಲ. ಎಲೈ ಭಾರತನೇ, ಭೂಮಿಯಲ್ಲಿ ನಡೆಯುವ ಘಟನೆಗಳ ವಿಷಯದಲ್ಲಿ ದೇವತೆಗಳು ಯಾವಾಗಲೂ ಉದಾಸೀನರಾಗಿರುತ್ತಾರೆ.

ಅಥ ಚೇತ್ ಕಾಮಸಂಯೋಗಾದ್ ದ್ವೇಷೋ ಲೋಭಶ್ಚ ಲಕ್ಷ್ಯತೇ ।
ದೇವೇಷು ದೇವಪ್ರಾಮಾಣ್ಯಂ ನೈವ ತದ್ ವಿಕ್ರಮಿಷ್ಯತಿ ॥೩೫॥

ದೇವತೆಗಳಲ್ಲಿ ಕಾಮ, ದ್ವೇಷ, ಲೋಭ ಮೊದಲಾದವುಗಳು ಕಂಡುಬಂದರೆ ಅವರ ದೇವತ್ವವೇ ನಾಶವಾಗುವುದರಿಂದ ಅವರು ಯಾವ ಶೌರ್ಯವನ್ನೂ ಹೊಂದಿರುವುದಿಲ್ಲ.

ಮಯಾಽಭಿಮಂತ್ರಿತಃ ಶಶ್ವತ್ ಜಾತವೇದಾಃ ಪ್ರಶಾಮ್ಯತಿ ।
ದಿಧಕ್ಷುಃ ಸಕಲಾನ್ ಲೋಕಾನ್ ಪರಿಕ್ಷಿಪ್ಯ ಸಮಂತತಃ ॥೩೬॥

ಎಲ್ಲ ಕಡೆಯಲ್ಲೂ ಹರಡಿ ಸಕಲ ಲೋಕಗಳನ್ನೂ ದಹಿಸಲು ಬಯಸುವ ಅಗ್ನಿಯು ನನ್ನ ಮಂತ್ರಶಕ್ತಿಯಿಂದ ಶಾಂತನಾಗುತ್ತಾನೆ.

ಯದ್ವಾ ಪರಮಕಂ ತೇಜೋ ಯೇನ ಯುಕ್ತಾ ದಿವೌಕಸಃ ।
ಮಮಾಪ್ಯನುಪಮಂ ಭೂಯೋ ದೇವೇಭ್ಯೋ ವಿದ್ಧಿ ಭಾರತ ॥೩೭॥

ಎಲೈ ಭಾರತನೇ, ದೇವತೆಗಳಿಗೆ ಯಾವ ಶ್ರೇಷ್ಠವಾದ ತೇಜಸ್ಸಿದೆಯೋ ಹಾಗೆಯೇ ಮತ್ತು ಅದಕ್ಕಿಂತಲೂ ಹೆಚ್ಚು ತೇಜಸ್ಸು ನನ್ನಲ್ಲಿದೆ ಎಂದು ತಿಳಿಯುವವನಾಗು.

ವಿದೀರ್ಯಮಾಣಂ ವಸುಧಾಂ ಗಿರೀಣಾಂ ಶಿಖರಾಣಿ ಚ ।
ಲೋಕಸ್ಯ ಪಶ್ಯತೋ ರಾಜನ್ ಸ್ಥಾಪಯಾಮ್ಯಭಿಮಂತ್ರಣಾತ್ ॥೩೮॥

ಎಲೈ ರಾಜನೇ, ಬಿರಿಯುತ್ತಿರುವ ಭೂಮಿಯನ್ನೂ ಮತ್ತು ಸೀಳಿ ಹೋಗುತ್ತಿರುವ ಪರ್ವತ ಶಿಖರಗಳನ್ನು ಜನರ ಕಣ್ಣೆದುರಿಗೆ ನನ್ನ ಮಂತ್ರಶಕ್ತಿಯಿಂದ ನಿಲ್ಲಿಸುತ್ತೇನೆ.

ಚೇತನಾಚೇತನಸ್ಯಾಸ್ಯ ಜಂಗಮಸ್ಥಾವರಸ್ಯ ಚ ।
ವಿನಾಶಾಯ ಸಮುತ್ಪನ್ನಂ ಭಯಂ ಘೋರಂ ಮಹಾಸ್ವನಮ್ ॥೩೯॥

ಅಶ್ಮವರ್ಷಂ ಚ ವಾಯುಂ ಚ ಶಮಯಾಮೀಹ ನಿತ್ಯಶಃ ।
ಜಗತಃ ಪಶ್ಯತೋಽಭೀಕ್ಷ್ಣಂ ಭೂತಾನಾಮನುಕಂಪಯಾ ॥೪೦॥

ಚೇತನಾಚೇತನಾತ್ಮಕವಾದ, ಸ್ಥಾವರ-ಜಂಗಮಾತ್ಮಕವಾದ ಈ ಪ್ರಪಂಚದ ವಿನಾಶಕ್ಕಾಗಿ ಉಂಟಾದ ಭಯಂಕರವಾದ ಮಹಾಘೋರವಾದ, ಕರ್ಕಶಸ್ವರದಿಂದ ಕೂಡಿದ ಅಶ್ಮವರ್ಷವನ್ನೂ (ಕಲ್ಲಿನ ಮಳೆಯನ್ನೂ) ಮತ್ತು ಬಿರುಗಾಳಿಯನ್ನೂ ಪ್ರಾಣಿಗಳ ಮೇಲಿನ ದಯದಿಂದ ಎಲ್ಲರೂ ನೋಡುತ್ತಿರುವಂತೆಯೇ ಶೀಘ್ರವಾಗಿ ನಿಲ್ಲಿಸುತ್ತೇನೆ.

ಸ್ತಂಭಿತಾಸ್ವಪ್ಸು ಗಚ್ಛಂತಿ ಮಯಾ ರಥಪದಾತಯಃ ॥೪೧॥

ದೇವಾಸುರಾಣಾಂ ಭಾವಾನಾಮ್ ಅಹಮೇಕಃ ಪ್ರವರ್ತಿತಾ ॥೪೨॥

ನನ್ನ ರಥಪದಾತಿಗಳು ನಾನು ಸ್ತಂಭನೆ ಮಾಡಿದ ಜಲದ ಮೇಲೆ ಸಂಚಾರ ಮಾಡುತ್ತಾರೆ. ದೇವಾಸುರರು ಮಾಡುವ ಎಲ್ಲ ಕೆಲಸಗಳನ್ನೂ ಪ್ರವರ್ತಿಸುವವನು ನಾನೊಬ್ಬನೇ ಆಗಿದ್ದೇನೆ.

ಅಕ್ಷೌಹಿಣೀಭಿರ್ಯಾನ್ ದೇಶಾನ್ ಯಾಮಿ ಕಾರ್ಯೇಣ ಕೇನಚಿತ್ ।
ತತ್ರಾಪೋ ಮೇ ಪ್ರವರ್ತಂತೇ ಯತ್ರ ಯತ್ರಾಭಿಕಾಮಯೇ ॥೪೩॥

ನಾನು ನನ್ನ ಅಕ್ಷೌಹಿಣಿ ಸೈನ್ಯದ ಜೊತೆಯಲ್ಲಿ ಎಲ್ಲಿ ಎಲ್ಲಿಗೆ ಹೋಗುತ್ತೇನೆಯೋ ಅಲ್ಲಿ ನಾನು ಬಯಸಿದ ಸ್ಥಳದಲ್ಲಿ ಜಲವು ಉಂಟಾಗುತ್ತದೆ.

ಭಯಾನಿ ವಿಷಯೇ ರಾಜನ್ ವ್ಯಾಘ್ರಾದೀನಿ ನ ಸಂತಿ ಮೇ ।
ಮಂತ್ರಗುಪ್ತಾನಿ ಭೂತಾನಿ ನ ಹಿಂಸಂತಿ ಭಯಂಕರಾಃ ॥೪೪॥

ಎಲೈ ರಾಜನೇ, ನನ್ನ ದೇಶದಲ್ಲಿ ವ್ಯಾಘ್ರಾದಿಗಳ ಭಯವಿಲ್ಲ. ಭಯಂಕರವಾದ ಪ್ರಾಣಿಗಳು ಮಂತ್ರಗುಪ್ತವಾದ ಗೋವು ಮೊದಲಾದ ಪ್ರಾಣಿಗಳನ್ನು ಹಿಂಸೆ ಮಾಡುವುದಿಲ್ಲ.

ನಿಕಾಮವರ್ಷೀ ಪರ್ಜನ್ಯೋ ರಾಜನ್ ವಿಷಯವಾಸಿನಾಮ್ ।
ಸಸ್ಯಾನಾಂ ಸರ್ವಜಂತೂನಾಮೀತಯಶ್ಚ ನ ಸಂತಿ ಮೇ ॥೪೫॥

ಎಲೈ ರಾಜನೇ, ನನ್ನ ದೇಶದಲ್ಲಿ ವಾಸಮಾಡುವವರಿಗೆ, ಪರ್ಜನ್ಯನು ಬೇಡಿದಾಗ ಮಳೆಯನ್ನು ಸುರಿಸುತ್ತಾನೆ. ಸಸ್ಯಗಳಿಗಾಗಲೀ ಅಥವಾ ನನ್ನ ರಾಜ್ಯದ ಪ್ರಾಣಿಗಳಿಗಾಗಲೀ ಯಾವ ಈತಿಬಾಧೆಗಳೂ ಇರುವುದಿಲ್ಲ.

ಅಶ್ವಿನಾವಥ ವಾಯ್ವಗ್ನಿಮರುದ್ಭಿಃ ಸಹ ವೃತ್ರಹಾ ।
ಧರ್ಮಶ್ಚೈವ ಮಯಾ ದ್ವಿಷ್ಟಾನ್ ನೋತ್ಸಹಂತೇಽಭಿರಕ್ಷಿತುಮ್ ॥೪೬॥

ಅಶ್ವಿನೀದೇವತೆಗಳಾಗಲೀ, ವಾಯು, ಅಗ್ನಿ, ಮರುತ್ತುಗಳಿಂದ ಕೂಡಿದ ಇಂದ್ರನಾಗಲೀ ಅಥವಾ ಯಮಧರ್ಮನಾಗಲೀ ನನ್ನ ದ್ವೇಷಕ್ಕೆ ಪಾತ್ರರಾದವರನ್ನು ರಕ್ಷಿಸಲು ಬಯಸುವುದಿಲ್ಲ.

ಯದಿ ಹ್ಯೇತೇ ಸಮರ್ಥಾಃ ಸ್ಯುರ್ಮದ್ದ್ವಿಷಸ್ತ್ರಾತುಮಂಜಸಾ ।
ನ ಸ್ಮ ತ್ರಯೋದಶ ಸಮಾಃ ಪಾರ್ಥಾ ದುಃಖಮವಾಪ್ನುಯುಃ ॥೪೭॥

ಒಂದುಪಕ್ಷ ಈ ದೇವತೆಗಳು ನನ್ನ ಶತ್ರುಗಳನ್ನು ರಕ್ಷಿಸಲು ಸಮರ್ಥರಾಗಿದ್ದರೆ ಪಾಂಡವರು ಹದಿಮೂರು ವರ್ಷಗಳ ಕಾಲ ದುಃಖವನ್ನು ಅನುಭವಿಸುತ್ತಿರಲಿಲ್ಲ.

ನೈವ ದೇವಾ ನ ಗಂಧರ್ವಾ ನಾಸುರಾ ನ ಚ ರಾಕ್ಷಸಾಃ ।
ಶಕ್ತಾಸ್ತ್ರಾತುಂ ಮಯಾ ರಿಷ್ಟಾ ಸತ್ಯಮೇತದ್ ಬ್ರವೀಮಿ ತೇ ॥೪೮॥

ದೇವತೆಗಳಾಗಲೀ, ಗಂಧರ್ವರಾಗಲೀ, ಅಸುರರಾಗಲೀ, ರಾಕ್ಷಸರಾಗಲೀ ನನ್ನ ಮಂತ್ರದ ಸಾಮರ್ಥ್ಯದಿಂದ ತಮ್ಮ ಬಲವನ್ನು ಕಳೆದುಕೊಂಡವರಾಗಿ ನನ್ನ ದ್ವೇಷಿಗಳನ್ನು ರಕ್ಷಿಸಲು ಸಮರ್ಥರಾಗುವುದಿಲ್ಲ. ಈ ಮಾತನ್ನು ನಾನು ಸತ್ಯವಾಗಿ ಹೇಳುತ್ತಿದ್ದೇನೆ.

ಯದಭಿಧ್ಯಾಮಹಂ ಶಶ್ವಚ್ಛುಭಂ ವಾ ಯದಿ ವಾऽಶುಭಮ್ ।
ತದ್ ಭವೇತ್ ವಿಧಿಪೂರ್ವಂ ಮೇ ಮಿತ್ರೇಷ್ವರಿಷು ಚೋಭಯೋಃ ॥

ನಾನು ನನ್ನ ಶತ್ರುಗಳಿಗೆ ಮತ್ತು ಮಿತ್ರರಿಗೆ ಯಾವ ಅಶುಭವನ್ನೂ ಮತ್ತು ಶುಭವನ್ನು ಸಂಕಲ್ಪಿಸುತ್ತೇನೆಯೋ ಅವು ವಿಧಿಪ್ರಕಾರವಾಗಿ ಶತ್ರು, ಮಿತ್ರರಿಗೆ ಹಾಗೆಯೇ ಉಂಟಾಗುತ್ತವೆ.

ಭವಿಷ್ಯತೀದಮಿತಿ ವಾ ಯದ್ ಬ್ರವೀಮಿ ಪರಂತಪ ।
ನಾನ್ಯಥಾ ಭೂತಪೂರ್ವಂ ಚ ಸತ್ಯವಾಗಿತಿ ಮಾಂ ವಿದುಃ ॥೫೦॥

ಎಲೈ ಪರಂತಪನೇ, ನಾನು ಹೀಗೆಯೇ ಆಗುವುದು ಎಂದು ಹೇಳಿದರೆ ಅದು ಹಾಗೆಯೇ ಆಗುತ್ತದೆ. ಹಿಂದೆ ಎಂದೂ ಅದು ಬೇರೆ ರೀತಿಯಲ್ಲಿ ಆಗಿಲ್ಲ. ಆದ್ದರಿಂದ ಜನರು ನನ್ನನ್ನು ಸತ್ಯವಚನವುಳ್ಳವನು ಎಂದು ತಿಳಿಯುತ್ತಾರೆ.

ಲೋಕಸಾಕ್ಷಿಕಮೇತನ್ಮೇ ಮಾಹಾತ್ಮ್ಯಂ ದಿಕ್ಷು ವಿಶ್ರುತಮ್ ।
ಆಶ್ವಾಸನಾರ್ಥಂ ಭವತಃ ಪ್ರೋಕ್ತಂ ನ ಶ್ಲಾಘಯಾ ನೃಪ ॥೫೧॥

ಎಲೈ ರಾಜನೇ, ಈ ನನ್ನ ಮಹಿಮೆಯು ಲೋಕಸಾಕ್ಷಿಕವಾದುದು. ಎಲ್ಲ ದಿಕ್ಕುಗಳಲ್ಲಿಯೂ ಪ್ರಖ್ಯಾತವಾದುದು. ನಿನಗೆ ನಂಬಿಕೆಯುಂಟಾಗಲಿ ಎಂಬುದಕ್ಕೆ ಮಾತ್ರ ಹೇಳುತ್ತಿದ್ದೇನೆ, ನನ್ನನ್ನು ಹೊಗಳಿಕೊಳ್ಳುವ ಉದ್ದೇಶದಿಂದಲ್ಲ.

ನ ಹ್ಯಹಂ ಶ್ಲಾಘನೋ ರಾಜನ್ ಭೂತಪೂರ್ವಃ ಕದಾಚನ ।
ಅಸದಾಚರಿತಂ ಹ್ಯೇತದ್ ಯದಾತ್ಮಾನಂ ಪ್ರಶಂಸತಿ ॥೫೨॥

ಎಲೈ ರಾಜನೇ, ನಾನು ಹಿಂದೆ ಎಂದೂ ನನ್ನನ್ನು ಹೊಗಳಿಕೊಂಡವನಲ್ಲ. ತನ್ನನ್ನು ತಾನು ಹೊಗಳಿಕೊಳ್ಳುವುದು ಅಸಜ್ಜನರು ಆಚರಿಸುವ ಮಾರ್ಗ.

ಪಾಂಡವಾಂಶ್ಚೈವ ಮತ್ಸ್ಯಾಂಶ್ಚ ಪಾಂಚಾಲಾನ್ ಕೈಕಯೈಃ ಸಹ ।
ಸಾತ್ಯಕಿಂ ವಾಸುದೇವಂ ಚ ಶ್ರೋತಾಸಿ ವಿಜಿತಾನ್ ಮಯಾ ॥೫೩॥

ಪಾಂಡವರು, ಮತ್ಸ್ಯರು, ಕೇಕಯರಿಂದ ಕೂಡಿದ ಪಾಂಚಾಲರು, ಸಾತ್ಯಕಿ ಮತ್ತು ಕೃಷ್ಣ ಎಲ್ಲರೂ ನನ್ನಿಂದ ಪರಾಜಿತರಾದ ವಾರ್ತೆಯನ್ನು ನೀನು ಕೇಳುವಿ.

ಸರಿತಃ ಸಾಗರಂ ಪ್ರಾಪ್ಯ ಯಥಾ ನಶ್ಯಂತಿ ಸರ್ವಶಃ ।
ತಥೈವ ತೇ ವಿನಂಕ್ಷ್ಯಂತಿ ಮಾಮಾಸಾದ್ಯ ಸಹಾನ್ವಯಾಃ ॥೫೪॥

ನದಿಗಳು ಸಮುದ್ರವನ್ನು ಸೇರಿ ಪೂರ್ಣವಾಗಿ ನಾಶವನ್ನು ಹೊಂದುವಂತೆ ಶತ್ರುಸೈನ್ಯವು ನನ್ನನ್ನು ಎದುರಿಸಿ ತಮ್ಮ ಪರಿವಾರದೊಡನೆ ನಾಶವನ್ನು ಹೊಂದುವುದು.

ಪರಾ ಬುದ್ಧಿಃ ಪರಂ ತೇಜೋ ವೀರ್ಯಂ ಚ ಪರಮಂ ಮಮ ।
ಪರಾ ವಿದ್ಯಾ ಪರೋ ಯೋಗೋ ಮಮ ತೇಭ್ಯೋ ವಿಶಾಂಪತೇ॥೫೫॥

ನನ್ನ ಬುದ್ಧಿಯು ಶ್ರೇಷ್ಠವಾದುದು. ತೇಜಸ್ಸು ಮತ್ತು ಶೌರ್ಯಗಳೂ ಶ್ರೇಷ್ಠವಾದವು. ವಿದ್ಯೆಯು ಶ್ರೇಷ್ಠವಾದುದು. ಉಪಾಯಗಳು ಶ್ರೇಷ್ಠವಾದವು. ಎಲೈ ರಾಜನೇ, ಈ ಎಲ್ಲ ವಿಷಯಗಳಲ್ಲಿಯೂ ನಾನು ಅವರಿಗಿಂತ ಶ್ರೇಷ್ಠನಾಗಿದ್ದೇನೆ.

ಪಿತಾಮಹಶ್ಚ ದ್ರೋಣಶ್ಚ ಕೃಪಃ ಶಲ್ಯಃ ಶಲಸ್ತಥಾ ।
ಅಸ್ತ್ರೇಷು ಯದ್ ವಿಜಾನಂತಿ ಸರ್ವಂ ತನ್ಮಯಿ ವಿದ್ಯತೇ ॥೫೬॥

ಪಿತಾಮಹರಾದ ಭೀಷ್ಮರೂ, ದ್ರೋಣರೂ, ಕೃಪರೂ, ಶಲ್ಯ ಮತ್ತು ಶಲರೂ ಯಾವ ಅಸ್ತ್ರಗಳನ್ನು ತಿಳಿದಿದ್ದಾರೆಯೋ ಅವೆಲ್ಲವೂ ನನ್ನೊಬ್ಬನಲ್ಲಿಯೇ ಇವೆ.

ವೈಶಂಪಾಯನಃ

ಇತ್ಯುಕ್ತ್ವಾ ಸಂಜಯಂ ಭೂಯಃ ಪರ್ಯಪೃಚ್ಛತ ಭಾರತ ।
ಜ್ಞಾತುಂ ಯುಯುತ್ಸೋಃ ಕಾರ್ಯಾಣಿ ಪ್ರಾಪ್ತಕಾಲಮರಿಂದಮಃ ॥೫೭॥

ವೈಶಂಪಾಯನ– ಎಲೈ ಭಾರತನೇ, ಹೀಗೆ ಮಾತನಾಡಿ ಅರಿಂದಮನಾದ ಧೃತರಾಷ್ಟ್ರನು ಯುದ್ಧವು ಪ್ರಾಪ್ತವಾದ ಈ ಸಮಯದಲ್ಲಿ ಅರ್ಜುನನು ಏನು ಮಾಡಲು ಬಯಸುತ್ತಿದ್ದಾನೆ ಎಂದು ತಿಳಿದುಕೊಳ್ಳಲು ಸಂಜಯನನ್ನು ಕುರಿತು ಪುನಃ ಪ್ರಶ್ನೆಯನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ದ್ವಿಷಷ್ಟಿತಮೋऽಧ್ಯಾಯಃ ॥
॥ ವ್ಯಾಸಾಭಿಗಮನಪರ್ವಣಿ ಪಂಚದಶೋऽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಅರವತ್ತೆರಡನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ಮೂರನೆಯ ಅಧ್ಯಾಯ

ಧೃತರಾಷ್ಟ್ರನನ್ನು ತಿರಸ್ಕರಿಸಿ, ಕರ್ಣನಿಂದ ಪಾಂಡವವಧೆಯ ಪ್ರತಿಜ್ಞೆ. ಭೀಷ್ಮರಿಂದ ನಿಂದಿತನಾದ ಅವನಿಂದ ಶಸ್ತ್ರನ್ಯಾಸ ಮತ್ತು ಸಭಾತ್ಯಾಗ.

ವೈಶಂಪಾಯನಃ

ತಥೈವ ಪೃಚ್ಛಂತಮತೀವ ಪಾರ್ಥಂ
ವೈಚಿತ್ರವೀರ್ಯಂ ತಮಚಿಂತಯಿತ್ವಾ ।
ಉವಾಚ ಕರ್ಣೋ ಧೃತರಾಷ್ಟ್ರಪುತ್ರಂ
ಪ್ರಹರ್ಷಯನ್ ಸಂಸದಿ ಕೌರವಾಣಾಮ್ ॥೧॥

ವೈಶಂಪಾಯನ– ಹಾಗೆಯೇ ಅರ್ಜುನನ ಬಗ್ಗೆ ಪ್ರಶ್ನೆಯನ್ನು ಮಾಡುತ್ತಿದ್ದ ಧೃತರಾಷ್ಟ್ರನನ್ನು ಲೆಕ್ಕಿಸದೆ ಕರ್ಣನು ಕೌರವರ ಸಭೆಯಲ್ಲಿ ದುರ್ಯೋಧನನನ್ನು ಸಂತೋಷಪಡಿಸುತ್ತಾ ಮಾತನಾಡಿದನು.

ಮಿಥ್ಯಾ ಪ್ರತಿಜ್ಞಾಯ ಮಯಾ ಯದಸ್ತ್ರಂ
ರಾಮಾತ್ ಕೃತಂ ಬ್ರಹ್ಮಧೃತಂ ಪುರಸ್ತಾತ್ ।
ವಿಜ್ಞಾಯ ತೇನಾಸ್ಮಿ ತದೈವಮುಕ್ತಃ
ತೇ ನಾಂತಕಾಲೇ ಪ್ರತಿಭಾಸ್ಯತೀತಿ ॥೨॥

ನಾನು ಪರಶುರಾಮರಿಗೆ ಸುಳ್ಳನ್ನು ಹೇಳಿ ಹಿಂದೆ ಬ್ರಹ್ಮಾಸ್ತ್ರವನ್ನು (ವೇದಮಯವಾದ ಅಸ್ತ್ರವನ್ನು) ಸಂಪಾದಿಸಿದೆನು. ಅದನ್ನು ತಿಳಿದ ಅವರು ನಿನಗೆ ಅಂತ್ಯಕಾಲದಲ್ಲಿ ಇದು ಪ್ರತಿಭಾಸವಾಗುವುದಿಲ್ಲ ಎಂದು ಹೇಳಿದರು.

ಮಹಾಪರಾಧೇ ಹ್ಯಪಿ ಯನ್ನ ತೇನ
ಮಹರ್ಷಿಣಾऽಹಂ ಗುರುಣಾ ಚ ಶಪ್ತಃ ।
ಶಕ್ತಃ ಪ್ರದಗ್ಧುಂ ಹ್ಯತಿತಿಗ್ಮತೇಜಾಃ
ಸಸಾಗರಾಮಪ್ಯವನಿಂ ಮಹರ್ಷಿಃ ॥೩॥

ನಾನು ಮಹಾಪರಾಧವನ್ನು ಮಾಡಿದ್ದರೂ ಸಹ ಮಹರ್ಷಿಗಳೂ ಮತ್ತು ಗುರುಗಳೂ ಆದ ಅವರು ನನಗೆ ಶಾಪವನ್ನು ನೀಡಲಿಲ್ಲ. ಅತಿತೀಕ್ಷ್ಣವಾದ ಸಾಮರ್ಥ್ಯವುಳ್ಳ ಆ

ಮಹರ್ಷಿಗಳು ಸಾಗರಸಹಿತವಾದ ಭೂಮಿಯನ್ನೂ ಸುಟ್ಟು ಬೂದಿ ಮಾಡಲು ಸಮರ್ಥರಾದವರು.

ಪ್ರಸಾದಿತಂ ಹ್ಯಸ್ಯ ಮನೋ ಮಯಾऽಭೂತ್
ಶುಶ್ರೂಷಯಾ ಸ್ವೇನ ಚ ಪೌರುಷೇಣ ।
ತದಸ್ತಿ ಚಾಸ್ತ್ರಂ ಮಮ ಚಾವಶೇಷಂ
ತಸ್ಮಾತ್ ಸಮರ್ಥೋऽಸ್ಮಿ ಮಮೈಷ ಭಾರಃ ॥೪॥

ಆಗ ನಾನು ಅವರನ್ನು ನನ್ನ ಶುಶ್ರೂಷೆಯಿಂದಲೂ ಮತ್ತು ಭೃತ್ಯಜನರು ಮಾಡುವ ಪರಿಚಾರಿಕೆಯಿಂದಲೂ ಸಂತೋಷಗೊಳಿಸಿದೆ. ಆ ಅಸ್ತ್ರವು ನನ್ನಲ್ಲಿ ಇನ್ನೂ ಹಾಗೆಯೇ ಉಳಿದಿದೆ. ಆದ್ದರಿಂದ ಸಮರ್ಥನಾಗಿದ್ದೇನೆ. ಯುದ್ಧದಲ್ಲಿ ಪಾಂಡವರನ್ನು ಗೆಲ್ಲುವುದು ನನ್ನ ಭಾರ.

ನಿಮೇಷಮಾತ್ರಾತ್ ತಮೃಷಿಪ್ರಸಾದಾತ್
ಅವಾಪ್ಯ ಪಾಂಚಾಲಕರೂಶಮತ್ಸ್ಯಾನ್ ।
ನಿಹತ್ಯ ಪಾರ್ಥಾನ್ ಸಹ ಪುತ್ರಪೌತ್ರೈಃ
ಲೋಕಾನಹಂ ಶತ್ರುಜನಾನ್ ಪ್ರಪತ್ಸ್ಯೇ ॥೫॥

ನಾನು ಪಾಂಚಾಲ, ಕರೂಶ, ಮತ್ಸ್ಯರ ಸೇನೆಯನ್ನು ಸಂಧಿಸಿ, ಆ ಋಷಿಗಳ ಅನುಗ್ರಹದಿಂದ ಒಂದು ನಿಮಿಷದಲ್ಲಿ ಪುತ್ರಪೌತ್ರ ಸಹಿತರಾದ ಪಾಂಡವರನ್ನು ಕೊಂದು ಶತ್ರುಗಳ ವಧೆಯಿಂದ ಉಂಟಾದ ಶುಭಲೋಕವನ್ನು ಹೊಂದುವೆನು.

ಪಿತಾಮಹಸ್ತಿಷ್ಠತು ತೇ ಸಮೀಪೇ
ದ್ರೋಣಶ್ಚ ಸರ್ವೇ ಚ ನರೇಂದ್ರಮುಖ್ಯಾಃ ।
ಋಷಿಪ್ರಸಾದೇನ ಬಲೇನ ಗತ್ವಾ
ಪಾರ್ಥಾನ್ ಹನಿಷ್ಯಾಮಿ ಮಮೈಷ ಭಾರಃ ॥೬॥

ಪಿತಾಮಹರಾದ ಭೀಷ್ಮರೂ, ದ್ರೋಣರೂ ಮತ್ತು ಪ್ರಧಾನರಾದ ರಾಜರೆಲ್ಲರೂ ನಿನ್ನ ಸಮೀಪದಲ್ಲಿಯೇ ಇರಲಿ. ಪರಶುರಾಮಋಷಿಗಳ ಅನುಗ್ರಹದಿಂದ ನಾನು ಸೈನ್ಯವನ್ನು ತೆಗೆದುಕೊಂಡು ಹೋಗಿ ಪಾಂಡವರನ್ನು ಕೊಲ್ಲುವೆನು. ಇದು ನನ್ನ ಜವಾಬ್ದಾರಿ.

ವೈಶಂಪಾಯನಃ

ಏವಂ ಬ್ರುವಂತಂ ತಮುವಾಚ ಭೀಷ್ಮಃ
ಕಿಂ ಕತ್ಥಸೇ ಕಾಲಪರೀತಬುದ್ಧೇ ।
ನ ಕರ್ಣ ಜಾನಾಸಿ ಯಥಾ ಪ್ರದಾನೇ
ಹತೇ ಹತಾಃ ಸ್ಯುರ್ಧೃತರಾಷ್ಟ್ರಪುತ್ರಾಃ ॥೭॥

ವೈಶಂಪಾಯನ– ಹೀಗೆ ಮಾತನಾಡುತ್ತಿದ್ದ ಕರ್ಣನನ್ನು ಕುರಿತು ಭೀಷ್ಮರು, ಕಾಲದಿಂದ ಗ್ರಸ್ಥವಾದ ಬುದ್ಧಿಯುಳ್ಳವನೇ, ಏಕೆ ನಿನ್ನನ್ನು ನೀನು ಹೊಗಳಿಕೊಳ್ಳುತ್ತಿದ್ದೀಯೆ? ಪ್ರಧಾನಪುರುಷನಾದ ನೀನು ಹತನಾದರೆ ಎಲೈ ಕರ್ಣನೇ, ಧೃತರಾಷ್ಟ್ರಪುತ್ರರೆಲ್ಲರೂ ಹತರಾಗುವರು ಎಂಬುದನ್ನು ನೀನು ತಿಳಿಯುತ್ತಿಲ್ಲ.

ಯತ್ ಖಾಂಡವಂ ದಾಹಯತಾ ಕೃತಂ ಹಿ
ಕೃಷ್ಣದ್ವಿತೀಯೇನ ಧನಂಜಯೇನ ।
ಶ್ರುತ್ವೈವ ತತ್ ಕರ್ಮ ನಿಯಂತುಮಾತ್ಮಾ
ಯುಕ್ತಸ್ತ್ವಯಾ ವೈ ಸಹಬಾಂಧವೇನ ॥೮॥

ಖಾಂಡವದಹನವನ್ನು ಮಾಡುವ ಕೃಷ್ಣನ ಜೊತೆಯಲ್ಲಿದ್ದ ಅರ್ಜುನನು ಏನು ಮಾಡಿದನೋ ಆ ಕಾರ್ಯವನ್ನು ತಿಳಿದು ನೀನೂ ನಿನ್ನ ಬಂಧುಗಳೂ ನಿಮ್ಮ ನಾಲಿಗೆಯನ್ನು ಮತ್ತು ಮನಸ್ಸನ್ನು ನಿಯಂತ್ರಿಸುವುದು ಒಳ್ಳೆಯದು.

ಯಾಂ ಚಾಪಿ ಶಕ್ತಿಂ ತ್ರಿದಶಾಧಿಪಸ್ತೇ
ದದೌ ಮಹಾತ್ಮಾ ಭಗವಾನ್ ಮಹೇಂದ್ರಃ ।
ಭಸ್ಮೀಕೃತಾಂ ತಾಂ ಸಮರೇ ವಿಶೀರ್ಣಾಂ
ಚಕ್ರಾಹತಾಂ ದ್ರಕ್ಷ್ಯಸಿ ಕೇಶವೇನ ॥೯॥

ಮಹಾತ್ಮನೂ, ಪೂಜ್ಯನೂ ಮತ್ತು ಸ್ವರ್ಗಾಧಿಪತಿಯೂ ಆದ ದೇವೇಂದ್ರನು ಯಾವ ಶಕ್ತಿಯನ್ನು ನಿನಗೆ ನೀಡಿದ್ದಾನೆಯೋ ಆ ಆಯುಧವು ಕೃಷ್ಣನ ಚಕ್ರಾಯುಧದಿಂದ ಭಸ್ಮೀಕೃತವಾಗಿ ಯುದ್ಧದಲ್ಲಿ ಪುಡಿಪುಡಿಯಾಗುವುದನ್ನು ನೀನು ನೋಡುವಿ.

ಯಸ್ತೇ ಶರಃ ಸರ್ಪಮುಖೋ ವಿಭಾತಿ
ಸದಾऽಗ್ರ್ಯಮಾಲ್ಯೈರ್ಮಹಿತಃ ಪ್ರಯತ್ನಾತ್ ।
ಸ ಪಾಂಡುಪುತ್ರಾಭಿಹತಃ ಶರೌಘೈಃ
ಸಹ ತ್ವಯಾ ಯಾಸ್ಯತಿ ಕರ್ಣ ನಾಶಮ್ ॥೧೦॥

ನಿನ್ನ ಬಳಿ ನೀನು ಪ್ರಯತ್ನಪೂರ್ವಕವಾಗಿ ಶ್ರೇಷ್ಠವಾದ ಪುಷ್ಪಗಳಿಂದ ಪೂಜಿಸುತ್ತಿರುವ ಸರ್ಪಮುಖವುಳ್ಳ ಬಾಣವಿದೆಯಷ್ಟೆ! ಅದು ಪಾಂಡುಪುತ್ರನಾದ ಅರ್ಜುನನ ಬಾಣಸಮೂಹದಿಂದ ಹೊಡೆಯಲ್ಪಟ್ಟು ಎಲೈ ಕರ್ಣನೇ, ನಿನ್ನ ಜೊತೆಯಲ್ಲಿಯೇ ನಾಶವನ್ನು ಹೊಂದುವುದು.

ಬಾಣಸ್ಯ ಭೌಮಸ್ಯ ಚ ಕರ್ಣ ಹಂತಾ
ಕಿರೀಟಿನಂ ರಕ್ಷತಿ ವಾಸುದೇವಃ ।
ಯಸ್ತಾದೃಶಾನಾಂ ಚ ಗರೀಯಸಾಂ ಚ
ಹಂತಾ ರಿಪೂಣಾಂ ತುಮುಲೇ ಪ್ರಗಾಢೇ ॥೧೧॥

ಎಲೈ ಕರ್ಣನೇ, ಬಾಣಾಸುರನನ್ನು ಮತ್ತು ನರಕಾಸುರನನ್ನು ಸಂಹಾರ ಮಾಡಿದ ಕೃಷ್ಣನು ಅರ್ಜುನನನ್ನು ರಕ್ಷಿಸುತ್ತಾನೆ. ಅವನು ನಿನ್ನಂತಹ ಮತ್ತು ನಿನಗಿಂತಲೂ ದೊಡ್ಡವರಾದ ಶತ್ರುಗಳನ್ನು ಘೋರವಾದ ಯುದ್ಧದಲ್ಲಿ ಕೊಲ್ಲುವನು.

ಕರ್ಣಃ

ಅಸಂಶಯಂ ವೃಷ್ಣಿಪತಿರ್ಯಥೋಕ್ತಃ
ತತಶ್ಚ ಭೂಯಾಂಶ್ಚ ತತೋ ಮಹಾತ್ಮಾ ।
ಅಹಂ ಯದುಕ್ತಃ ಪರುಷಂ ತು ಕಿಂಚಿತ್
ಪಿತಾಮಹಸ್ತಸ್ಯ ಫಲಂ ಶೃಣೋತು ॥೧೨॥

ಕರ್ಣ– ವೃಷ್ಣಿಪತಿಯಾದ ಕೃಷ್ಣನು ನೀನು ಹೇಳಿದಂತೆಯೇ ಇದ್ದಾನೆ ಎಂಬ ವಿಷಯದಲ್ಲಿ ಸಂಶಯವಿಲ್ಲ. ಆದರೆ ನಾನು ಅವನಿಗಿಂತಲೂ ಅಧಿಕವಾದ ಶಕ್ತಿಯನ್ನು ಹೊಂದಿದವನು. ಆದ್ದರಿಂದ ನಾನೂ ಮಹಾತ್ಮನಾಗಿದ್ದೇನೆ. ಪಿತಾಮಹರಾದ ಭೀಷ್ಮರು ನನಗೆ ಯಾವ ಕ್ರೂರವಾದ ಮಾತುಗಳನ್ನು ಆಡಿದ್ದಾರೆಯೋ ಅದರ ಫಲವನ್ನು ಕೇಳುವವನಾಗು.

ನ್ಯಸ್ಯಾಮಿ ಶಸ್ತ್ರಾಣಿ ನ ಜಾತು ಸಂಖೇ
ಪಿತಾಮಹೋ ದ್ರಕ್ಷ್ಯತಿ ಮಾಂ ಸಭಾಯಾಮ್ ।
ತ್ವಯಿ ಪ್ರಶಾಂತೇ ತು ಮಮ ಪ್ರಭಾವಂ
ದ್ರಕ್ಷ್ಯಂತಿ ಸರ್ವೇ ಭುವಿ ಭೂಮಿಪಾಲಾಃ ॥೧೩॥

ನಾನು ಯುದ್ಧದಲ್ಲಿ ಎಂದೂ ಶಸ್ತ್ರವನ್ನು ಕೆಳಗಿಡುವುದಿಲ್ಲ. ಪಿತಾಮಹರಾದ ಭೀಷ್ಮರು ನನ್ನನ್ನು ಸಭೆಯಲ್ಲಿ ಮಾತ್ರ ನೋಡುವರು. ಎಲೈ ಭೀಷ್ಮರೇ, ನೀವು ನಾಶ ಹೊಂದಿದ ಮೇಲೆ ಯುದ್ಧದಲ್ಲಿ ನನ್ನ ಸಾಮರ್ಥ್ಯವನ್ನು ಉಳಿದ ರಾಜರು ನೋಡುವರು.

ವೈಶಂಪಾಯನಃ

ಇತ್ಯೇವಮುಕ್ತ್ವಾ ಸ ಮಹಾಧನುಷ್ಮಾನ್
ಹಿತ್ವಾ ಸಭಾಂ ಸ್ವಂ ಭವನಂ ಜಗಾಮ ।
ಭೀಷ್ಮಸ್ತು ದುರ್ಯೋಧನಮೇವ ರಾಜನ್
ಮಧ್ಯೇ ಕುರೂಣಾಂ ಪ್ರಹಸನ್ನುವಾಚ ॥೧೪॥

ಹೀಗೆ ಹೇಳಿ ಮಹಾಧನುರ್ಧಾರಿಯಾದ ಕರ್ಣನು ಸಭೆಯನ್ನು ತ್ಯಜಿಸಿ, ತನ್ನ ಮನೆಗೆ ಹೋದನು. ಎಲೈ ರಾಜನೇ, ಭೀಷ್ಮರಾದರೂ ಕುರುಸಭೆಯ ಮಧ್ಯದಲ್ಲಿ ದುರ್ಯೋಧನನನ್ನೇ ಕುರಿತು ನಗುತ್ತಾ ಮಾತನಾಡಿದರು.

ಸತ್ಯಪ್ರತಿಜ್ಞಃ ಕಿಲ ಸೂತಪುತ್ರಃ
ತಥಾ ಸ ಭಾರಂ ವಿಷಹೇತ ಕಸ್ಮಾತ್ ।
ವ್ಯೂಹಂ ಪ್ರತಿವ್ಯೂಹ್ಯ ಶಿರಾಂಸಿ ಭಿತ್ತ್ವಾ
ಲೋಕಕ್ಷಯಂ ಪಶ್ಯತು ಭೀಮಸೇನಾತ್ ॥೧೫॥

ಸೂತಪುತ್ರನಾದ ಕರ್ಣನು ಸತ್ಯಪ್ರತಿಜ್ಞೆಯುಳ್ಳವನಷ್ಟೆ? ಆದ್ದರಿಂದ ಅವನು ಏಕೆ ಯುದ್ಧದ ಭಾರವನ್ನು ಹೊತ್ತಾನು? ನಮ್ಮ ವ್ಯೂಹಕ್ಕೆ ಪ್ರತಿಯಾಗಿ ವ್ಯೂಹವನ್ನು ರಚಿಸಿ, ಶತ್ರುಗಳ ಶಿರಸ್ಸನ್ನು ಒಡೆದು, ಭೀಮಸೇನನು ಲೋಕಕ್ಷಯವನ್ನು ಉಂಟುಮಾಡುವುದನ್ನು ಅವನು ನೋಡಲಿ.

ಆವಂತ್ಯಕಾಳಿಂಗಜಯದ್ರಥೇಷು
ಚೇದಿಧ್ವಜೇ ತಿಷ್ಠತಿ ಬಾಹ್ಲಿಕೇ ಚ ।

ಅಹಂ ಹನಿಷ್ಯಾಮಿ ಸದಾ ಪರೇಷಾಂ
ಸಹಸ್ರಶಶ್ಚಾಯುತಶಶ್ಚ ಯೋಧಾನ್ ॥೧೬॥

ಅವಂತಿ, ಕಳಿಂಗದೇಶಗಳ ರಾಜರೂ, ಜಯದ್ರಥನೂ, ಚೇದಿರಾಜನಾದ ಧೃಷ್ಟಕೇತುವೂ ಮತ್ತು ಬಾಹ್ಲಿಕ ರಾಜನೂ ಈ ಯುದ್ಧಭೂಮಿಯಲ್ಲಿರುವಾಗಲೇ ನಾನು ಶತ್ರುಗಳ ಸೈನ್ಯದ ಯೋಧರನ್ನು ಸಹಸ್ರಸಂಖ್ಯೆಯಲ್ಲಿ, ಹತ್ತುಸಹಸ್ರಸಂಖ್ಯೆಯಲ್ಲಿ ಕೊಲ್ಲುವೆನು.

ಯದೈವ ರಾಮೇ ಭಗವತ್ಯನಿಂದ್ಯೇ
ಬ್ರಹ್ಮ ಬ್ರುವಾಣಃ ಕೃತವಾಂಸ್ತದಸ್ತ್ರಮ್ ।
ತದೈವ ಧರ್ಮಶ್ಚ ತಪಶ್ಚ ನಷ್ಟಂ
ವೈಕರ್ತನಸ್ಯಾಧಮಪೂರುಷಸ್ಯ ॥೧೭॥

ಕರ್ಣನು ಭಗವಂತನೂ ಮತ್ತು ದೋಷದೂರನೂ ಆದ ಪರಶುರಾಮನಲ್ಲಿ ನಾನು ಬ್ರಾಹ್ಮಣ ಎಂದು ಹೇಳಿ ಯಾವಾಗ ಆ ಅಸ್ತ್ರವನ್ನು ಸ್ವೀಕರಿಸಿದನೋ ಆಗಲೇ ಅಧಮ ಪುರುಷನಾದ ಕರ್ಣನ ಧರ್ಮವೂ ಮತ್ತು ತಪಸ್ಸೂ ನಷ್ಟವಾಯಿತು.

ವೈಶಂಪಾಯನಃ

ತಥೋಕ್ತವಾಕ್ಯೇ ನೃಪತೀಂದ್ರ ಭೀಷ್ಮೇ
ನಿಕ್ಷಿಪ್ಯ ಶಸ್ತ್ರಾಣಿ ಗತೇ ತು ಕರ್ಣೇ ।
ವೈಚಿತ್ರವೀರ್ಯಸ್ಯ ಸುತೋಽಲ್ಪಬುದ್ಧಿಃ
ದುರ್ಯೋಧನಃ ಶಾಂತನವಂ ಬಭಾಷೇ ॥೧೮॥

ವೈಶಂಪಾಯನ– ಎಲೈ ರಾಜನೇ, ಕರ್ಣನು ಶಸ್ತ್ರವನ್ನು ಕೆಳಗಿಟ್ಟು ಹೋದಮೇಲೆ, ಭೀಷ್ಮರು ಹಾಗೆ ಮಾತನಾಡುತ್ತಿರಲು, ಅಲ್ಪಬುದ್ಧಿಯುಳ್ಳ ಧೃತರಾಷ್ಟ್ರಪುತ್ರನಾದ ದುರ್ಯೋಧನನು ಭೀಷ್ಮರನ್ನು ಕುರಿತು ಮಾತನಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ತ್ರಿಷಷ್ಟಿತಮೋಽಧ್ಯಾಯಃ ॥
॥ ವ್ಯಾಸಾಭಿಗಮನಪರ್ವಣಿ ಷೋಡಶೋಽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಅರವತ್ಮೂರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ನಾಲ್ಕನೆಯ ಅಧ್ಯಾಯ

ಭೀಷ್ಮರು ಹೇಳಿದ ಪಾಂಡವರ ಶ್ರೇಷ್ಠತೆಯನ್ನು ಖಂಡಿಸಿದ ದುರ್ಯೋಧನನಿಂದ ಕರ್ಣಾದಿಗಳ ಸಹಾಯದಿಂದ ತಾನೊಬ್ಬನೇ ಯುದ್ಧಮಾಡುವುದಾಗಿ ಕಥನ.

ದುರ್ಯೋಧನಃ

ಸದೃಶಾನಾಂ ಮನುಷ್ಯೇಷು ಸರ್ವೇಷಾಂ ತುಲ್ಯಜನ್ಮನಾಮ್ ।
ಕಥಮೇಕಾಂತತಸ್ತೇಷಾಂ ಪಾರ್ಥಾನಾಂ ಮನ್ಯಸೇ ಜಯಮ್ ॥೧॥

ದುರ್ಯೋಧನ– ಎಲ್ಲ ಮನುಷ್ಯರೂ ಮನುಷ್ಯಜಾತಿಯಿಂದ ಸಮಾನರಾಗಿರುವಾಗ ನೀನು ಪಾಂಡವರಿಗೇ ಏಕೆ ನಿಯಮೇನ ಜಯವನ್ನು ಭಾವಿಸುತ್ತೀಯೆ?

ವಯಂ ಚ ತೇऽಪಿ ತುಲ್ಯಾ ವೈ ವೀರ್ಯೇಣ ಚ ಪರಾಕ್ರಮೈಃ ।
ಸಮೇನ ವಯಸಾ ಚೈವ ಪ್ರಜ್ಞಯಾ ಚ ಶ್ರುತೇನ ಚ ॥೨॥

ನಾವು ಮತ್ತು ಅವರು ಶೌರ್ಯದಲ್ಲಿಯೂ, ಪರಾಕ್ರಮದಲ್ಲಿಯೂ, ವಯಸ್ಸಿನಲ್ಲಿಯೂ, ಪ್ರಜ್ಞೆಯಲ್ಲಿಯೂ ಮತ್ತು ವಿದ್ಯೆಯಲ್ಲಿಯೂ ಸಮರಾದವರು.

ಅಸ್ತ್ರೇಷು ರಥಚರ್ಯಾಸು ಶೀಘ್ರತ್ವೇ ಕೌಶಲೇ ತಥಾ ।
ಸರ್ವೇ ಸ್ಮ ಸಮಜಾತೀಯಾಃ ಸರ್ವೇ ಸ್ಮ ಸಮಯೋನಯಃ ॥೩॥

ಪಿತಾಮಹ ವಿಜಾನೀಷೇ ಪಾರ್ಥೇಷು ವಿಜಯಂ ಕಥಮ್ ॥೪॥

ಅಸ್ತ್ರಗಳಲ್ಲಿ, ರಥಚರ್ಯಗಳಲ್ಲಿ, ವೇಗದಲ್ಲಿ, ಕೌಶಲದಲ್ಲಿ ನಾವೆಲ್ಲರೂ ಒಂದೇ ಯೋನಿಯವರು ಮತ್ತು ಒಂದೇ ಜಾತಿಯವರು. ಹೀಗಿರುವಾಗ ತಾತನಾದ ಭೀಷ್ಮನೇ, ಪಾಂಡವರೇ ಗೆಲ್ಲುವರೆಂದು ನೀನು ಹೇಗೆ ತಿಳಿಯುತ್ತೀಯೆ?

ನಾಹಂ ಭವತಿ ನ ದ್ರೋಣೇ ನ ಕೃಪೇ ನ ಚ ಬಾಹ್ಲಿಕೇ ।
ಅನ್ಯೇಷು ಚ ನರೇಂದ್ರೇಷು ಪರಾಕ್ರಮ್ಯ ಸಮಾರಭೇ ॥೫॥

ನಿನ್ನಲ್ಲಾಗಲೀ, ದ್ರೋಣರಲ್ಲಾಗಲೀ, ಕೃಪರಲ್ಲಾಗಲೀ, ಬಾಹ್ಲಿಕರಾಜನಲ್ಲಾಗಲೀ ಅಥವಾ ಬೇರೆ ರಾಜರಲ್ಲಾಗಲೀ ಭಾರವನ್ನು ಹಾಕಿ ಯುದ್ಧವನ್ನು ಆರಂಭಿಸುತ್ತಿಲ್ಲ.

ಅಹಂ ವೈಕರ್ತನಃ ಕರ್ಣೋ ಭ್ರಾತಾ ದುಃಶಾಸನಶ್ಚ ಮೇ ।
ಪಾಂಡವಾನ್ ಸಮರೇ ಪಂಚ ಹನಿಷ್ಯಾಮಃ ಶಿತೈಃ ಶರೈಃ ॥೬॥

ನಾನು, ವೈಕರ್ತನನಾದ ಕರ್ಣ ಮತ್ತು ತಮ್ಮನಾದ ದುಶ್ಶಾಸನ - ಈ ಮೂವರು ಯುದ್ಧದಲ್ಲಿ ನಮ್ಮ ಹರಿತವಾದ ಬಾಣಗಳಿಂದ ಪಂಚಪಾಂಡವರನ್ನು ಕೊಲ್ಲುವೆವು.

ತತೋ ರಾಜನ್ ಮಹಾಯಜ್ಞೈರ್ವಿವಿಧೈರ್ಭೂರಿದಕ್ಷಿಣೈಃ ।
ಬ್ರಾಹ್ಮಣಾಂಸ್ತರ್ಪಯಿಷ್ಯಾಮಿ ಗೋಭಿರಶ್ವೈರ್ಧನೇನ ಚ ॥೭॥

ರಾಜನೇ, ಅನಂತರ ಭೂರಿದಕ್ಷಿಣೆಗಳಿಂದ ಕೂಡಿದ ಅನೇಕ ವಿಧವಾದ ಮಹಾಯಜ್ಞಗಳನ್ನು ಮಾಡಿ ಗೋದಾನ, ಅಶ್ವದಾನ ಮತ್ತು ಧನದಾನಗಳನ್ನು ಮಾಡಿ, ಬ್ರಾಹ್ಮಣರನ್ನು ಸಂತೋಷಪಡಿಸುವೆನು.

ಯದಾ ಪರಿಕರಿಷ್ಯಂತಿ ಐಣೇಯಾನಿವ ತಂತುನಾ ।
ಅತರಿತ್ರಾನಿವ ಜಲೇ ಬಾಹುಭಿರ್ಮಾಮಕಾ ರಣೇ ॥೮॥

ಪಶ್ಯತಸ್ತೇ ಪರಾಂಸ್ತತ್ರ ರಥನಾಗಸಮಾಕುಲಾನ್ ।
ತದಾ ದರ್ಪಂ ವಿಮೋಕ್ಷ್ಯಂತಿ ಪಾಂಡವಾಃ ಸ ಚ ಕೇಶವಃ ॥೯॥

ನಿನ್ನ ಕಣ್ಣೆದುರಿಗೆ ಗಜಾಶ್ವರಥಸಹಿತರಾದ ಪಾಂಡವರು ನನ್ನ ಸೈನ್ಯದಿಂದ ಸುತ್ತುವರಿಯಲ್ಪಟ್ಟು, ಬಲೆಯಿಂದ ಜಿಂಕೆಯ ಮರಿಗಳನ್ನು ಸುತ್ತುವರಿದಂತೆ, ದೋಣಿಯಿಲ್ಲದಿರುವ ನೀರಿನಲ್ಲಿ ಸಂಕಟಕ್ಕೆ ಒಳಗಾದಂತೆ ಪಾಂಡವರೂ ಮತ್ತು ಕೃಷ್ಣನೂ ಸಿಲುಕುವರು. ಆಗ ಅವರು ತಮ್ಮ ದರ್ಪವನ್ನು ತ್ಯಜಿಸುವರು.

ಸುಖಾನ್ಯವಾಪ್ಯ ಸಹಿತಾಃ ಕೃತ್ವಾ ಕರ್ಮ ಸುದುಷ್ಕರಮ್ ।
ವಿಸ್ರಬ್ಧಾಸ್ತು ಭವಿಷ್ಯಾಮಃ ಪ್ರಾಪ್ತೇ ಕಾಲೇ ಗತಜ್ವರಾಃ ॥೧೦॥

ನಾವಾದರೋ ದುಷ್ಕರವಾದ ಕಾರ್ಯವನ್ನು ಮಾಡಿ, ಯೋಗ್ಯವಾದ ಕಾಲದಲ್ಲಿ ಎಲ್ಲಾ ಸಂತಾಪಗಳನ್ನೂ ಕಳೆದುಕೊಂಡು, ಒಟ್ಟಿಗೆ ಸುಖವನ್ನು ಹೊಂದಿ ನಿಶ್ಚಿಂತರಾಗಿರುವೆವು.

ವೈಶಂಪಾಯನಃ

ಅಥಾಬ್ರವೀನ್ಮಹಾರಾಜೋ ಧೃತರಾಷ್ಟ್ರಃ ಸುದುರ್ಮನಾಃ ।
ವಿದುರಂ ವಿದುಷಾಂ ಶ್ರೇಷ್ಠಂ ಸರ್ವಪಾರ್ಥಿವಸನ್ನಿಧೌ ॥೧೧॥

ಮೋಹಿತೋ ಮೃತ್ಯುಪಾಶೇನ ಕಾಲಸ್ಯ ವಶಮಾಗತಃ ।
ತಾತ ಕರ್ಣೇನ ಸಹಿತಃ ಪುತ್ರೋ ದುರ್ಯೋಧನೋ ಮಮ ॥೧೨॥

ವೈಶಂಪಾಯನ– ಆಗ ಬಹಳ ದುಃಖದಿಂದ ಕೂಡಿದ ಮಹಾರಾಜನಾದ ಧೃತರಾಷ್ಟ್ರನು ಸರ್ವರಾಜರ ಸನ್ನಿಧಿಯಲ್ಲಿ, ವಿದ್ವಾಂಸರಲ್ಲಿ ಶ್ರೇಷ್ಠನಾದ ವಿದುರನನ್ನು ಕುರಿತು ಪ್ರೀತಿಪಾತ್ರನೇ, ಕರ್ಣನಿಂದ ಸಹಿತನಾಗಿ ನನ್ನ ಪುತ್ರನಾದ ದುರ್ಯೋಧನನು ಮೃತ್ಯುಪಾಶದಿಂದ ಮೋಹಿತನಾಗಿ ಕಾಲಕ್ಕೆ ವಶನಾಗಿದ್ದಾನೆ, ಎಂದನು.

ವಿದುರಃ

ಇಹ ನಿಶ್ರೇಯಸಂ ಪ್ರಾಹುರ್ವೃದ್ಧಾ ನಿಶ್ಚಯದರ್ಶಿನಃ ।
ಬ್ರಾಹ್ಮಣಸ್ಯ ವಿಶೇಷೇಣ ದಮೋ ಧರ್ಮಃ ಸನಾತನಃ ॥೧೩॥

ವಿದುರ– ತತ್ತ್ವಜ್ಞಾನವುಳ್ಳ ಹಿರಿಯರು ಇಲ್ಲಿ ಬ್ರಾಹ್ಮಣನಾದವನಿಗೆ ವಿಶೇಷವಾಗಿ ದಮ ಮತ್ತು ಸನಾತನ ಧರ್ಮವು ಶ್ರೇಯಸ್ಕರವೆಂದು ಹೇಳುತ್ತಾರೆ.

ತಸ್ಯ ದಾನಂ ಕ್ಷಮಾ ಸಿದ್ಧಿರ್ಯಥಾವದುಪಪದ್ಯತೇ ।
ದಮೋ ದಾನಂ ತಪೋ ಜ್ಞಾನಮಧೀತಂ ಚಾನುವರ್ತತೇ ॥೧೪॥

ಅಂತಹ ಬ್ರಾಹ್ಮಣನಿಗೆ ದಾನ, ಕ್ಷಮೆ ಮತ್ತು ಸಿದ್ಧಿಗಳು ಯೋಗ್ಯವಾಗಿ ಉಂಟಾಗುತ್ತವೆ. ದಮ, ದಾನ, ತಪಸ್ಸು, ಜ್ಞಾನ ಇವುಗಳು ಬ್ರಾಹ್ಮಣನ ಅಧ್ಯಯನವನ್ನು ಅವಲಂಬಿಸಿ ಇರುತ್ತವೆ.

ದಮಸ್ತೇಜೋ ವರ್ಧಯತಿ ಪವಿತ್ರಂ ದಮ ಉತ್ತಮಮ್ ।
ವಿಪ್ರಾತ್ಮಾ ವೃದ್ಧತೇಜಾಸ್ತು ಪುರುಷೋ ವಿಂದತೇ ಮಹತ್ ॥೧೫॥

ದಮವು ತೇಜಸ್ಸನ್ನು ಹೆಚ್ಚಿಸುತ್ತದೆ. ದಮವು ಶ್ರೇಷ್ಠವಾದುದು ಮತ್ತು ಪವಿತ್ರವಾದುದು. ದಮವನ್ನು ಹೊಂದಿದ ಬ್ರಾಹ್ಮಣನು ಅಭಿವೃದ್ಧವಾದ ತೇಜಸ್ಸನ್ನು ಹೊಂದಿದವನಾಗಿ ಶ್ರೇಷ್ಠವಾದ ಪುರುಷಾರ್ಥವನ್ನು ಸಂಪಾದಿಸುತ್ತಾನೆ.

ಕ್ರವ್ಯಾದ್ಭ್ಯಃ ಇವ ಭೂತಾನಾಮದಾಂತೇಭ್ಯಃ ಸದಾ ಭಯಮ್ ।
ತೇಷಾಂ ಚ ಪ್ರತಿಷೇಧಾರ್ಥಂ ಕ್ಷತ್ರಂ ಸೃಷ್ಟಂ ಸ್ವಯಂಭುವಾ ॥೧೬॥

ಮಾಂಸಾಹಾರಿ ಪ್ರಾಣಿಗಳಿಗೆ ಉಳಿದ ಪ್ರಾಣಿಗಳು ಹೆದರಿದಂತೆ ದಮವಿಲ್ಲದ ಮನುಷ್ಯರಿಂದ ಸದಾ ಭಯದ ಪ್ರಸಕ್ತಿ ಇದೆ. ಅಂತಹವರನ್ನು ತಡೆಯಲು ಬ್ರಹ್ಮದೇವರು ಕ್ಷತ್ರಿಯರನ್ನು ಸೃಷ್ಟಿಸಿದ್ದಾರೆ.

ಆಶ್ರಮೇಷು ಚತುರ್ಷ್ವಾಹುರ್ದಮಮೇವೋತ್ತಮಂ ವ್ರತಮ್ ।
ತಸ್ಯ ಲಿಂಗಂ ಪ್ರವಕ್ಷ್ಯಾಮಿ ಯೇಷಾಂ ಸಮುದಯೋ ದಮಃ ॥೧೭॥

ನಾಲ್ಕು ಆಶ್ರಮಗಳಲ್ಲಿಯೂ ದಮವೇ ಶ್ರೇಷ್ಠವಾದ ವ್ರತವೆಂದು ಹೇಳುತ್ತಾರೆ. ಯಾರಿಗೆ ದಮವಿದೆಯೋ ಅವರ ಚಿಹ್ನೆಗಳನ್ನು ಹೇಳುವೆನು.

ಕ್ಷಮಾ ಧೃತಿರಹಿಂಸಾ ಚ ಸಮತಾ ಸತ್ಯಮಾರ್ಜವಮ್ ।
ಇಂದ್ರಿಯಾಭಿಜಯೋ ಧೈರ್ಯಂ ಮಾರ್ದವಂ ಹ್ರೀರಚಾಪಲಮ್ ॥

ಅಕಾರ್ಪಣ್ಯಸಂರಂಭಃ ಸಂತೋಷಃ ಶ್ರದ್ದಧಾನತಾ ।
ಏತಾನಿ ಯಸ್ಯ ರಾಜೇಂದ್ರ ಸ ದಾಂತಃ ಪುರುಷಃ ಸ್ಮೃತಃ ॥೧೯॥

ಕ್ಷಮೆ, ಸ್ಥೈರ್ಯ, ಅಹಿಂಸೆ, ಸಮತ್ವ, ಸತ್ಯ, ಆರ್ಜವ (ಸರಳತೆ), ಇಂದ್ರಿಯಜಯ, ಧೈರ್ಯ, ಮಾರ್ದವ, ನಾಚಿಕೆ, ಅಚಾಂಚಲ್ಯ, ಅದೈನ್ಯ, ಕೋಪಾಭಾವ, ಸಂತೋಷ, ಶ್ರದ್ಧೆ. ಎಲೈ ರಾಜೇಂದ್ರನೇ, ಈ ಗುಣಗಳು ಯಾರಲ್ಲಿ ಇರುತ್ತವೆಯೋ ಅವನನ್ನು ದಮವುಳ್ಳ ಪುರುಷನೆಂದು ಕರೆಯುತ್ತಾರೆ.

ಕಾಮೋ ಲೋಭಶ್ಚ ದರ್ಪಶ್ಚ ಮನ್ಯುರ್ನಿದ್ರಾ ವಿಕತ್ಥನಮ್ ।
ಮಾನ ಈರ್ಷ್ಯಾ ಚ ಶೋಕಶ್ಚ ನೈತದ್ ದಾಂತೋ ನಿಷೇವತೇ ॥೨೦॥

ದಾಂತನಾದ ಪುರುಷನು ಕಾಮ, ಲೋಭ, ದರ್ಪ, ಕ್ರೋಧ, ನಿದ್ರೆ, ಆತ್ಮಶ್ಲಾಘನೆ, ಅಹಂಕಾರ, ಅಸೂಯೆ ಮತ್ತು ಶೋಕಗಳನ್ನು ಹೊಂದುವುದಿಲ್ಲ.

ಅಜಿಹ್ಮಮಶಠಂ ಶುದ್ಧಮೇತದ್ ದಾಂತಸ್ಯ ಲಕ್ಷಣಮ್ ॥೨೧॥

ಅಲೋಲುಪಸ್ತಥಾऽಲ್ಪೇಚ್ಛಃ ಕಾಮಾನಾಮವಿಚಿಂತಕಃ ।
ಸಮುದ್ರಕಲ್ಪಃ ಪುರುಷಃ ಸ ದಾಂತಃ ಪರಿಕೀರ್ತಿತಃ ॥೨೨॥

ವಕ್ರತೆಯಿಲ್ಲದೆ, ಶಾಠ್ಯವಿಲ್ಲದೆ ಶುದ್ಧನಾಗಿರುವುದು ದಾಂತನ ಲಕ್ಷಣ. ಇಂದ್ರಿಯ ಲೋಲುಪತೆ ಇಲ್ಲದೆ ಅಲ್ಪತೃಪ್ತನಾಗಿ, ಭೋಗವಿಷಯಗಳನ್ನು ಚಿಂತಿಸದೆ ಸಮುದ್ರದಂತೆ ಸ್ಥಿಮಿತನಾಗಿರುವ ಪುರುಷನು ದಾಂತನೆಂದು ಕರೆಯಲ್ಪಡುತ್ತಾನೆ.

ಸುವೃತ್ತಃ ಶೀಲಸಂಪನ್ನಃ ಪ್ರಸನ್ನಾತ್ಮಾऽऽತ್ಮವಿದ್ ಬುಧಃ ।
ಪ್ರಾಪ್ಯೇಹ ಲೋಕೇ ಸಮ್ಮಾನಂ ಸ್ವರ್ಗತಿಂ ಪ್ರೇತ್ಯ ಗಚ್ಛತಿ ॥೨೩॥

ಒಳ್ಳೆಯ ನಡತೆಯುಳ್ಳವನೂ, ಶೀಲಸಂಪನ್ನನೂ, ಪ್ರಸನ್ನವಾದ ಮನಸ್ಸುಳ್ಳವನೂ, ಪರಮಾತ್ಮಜ್ಞಾನವನ್ನು ಹೊಂದಿದವನೂ ಆದ ಬುಧನು ಈ ಲೋಕದಲ್ಲಿ ಸನ್ಮಾನವನ್ನು ಹೊಂದಿ ಮರಣಾನಂತರದಲ್ಲಿ ಸ್ವರ್ಗವನ್ನು ಪಡೆಯುತ್ತಾನೆ.

ಅಭಯಂ ಯಸ್ಯ ಭೂತೇಭ್ಯಃ ಸರ್ವೇಷಾಮಭಯಂ ಯತಃ ।
ಸ ವೈ ಪರಿಣತಪ್ರಜ್ಞಃ ಪ್ರಖ್ಯಾತೋ ಮನುಜೋತ್ತಮಃ ॥೨೪॥

ಯಾವನಿಗೆ ಎಲ್ಲಾ ಪ್ರಾಣಿಗಳೂ ಅಭಯವನ್ನು ನೀಡುತ್ತವೆಯೋ ಮತ್ತು ಯಾವನಿಂದ ಎಲ್ಲ ಪ್ರಾಣಿಗಳಿಗೂ ಅಭಯವಿದೆಯೋ ಅವನು ಪರಿಣತಪ್ರಜ್ಞನಾದ ಮನುಷ್ಯಶ್ರೇಷ್ಠನೆಂದು ಪ್ರಖ್ಯಾತನಾಗುವನು.

ಸರ್ವಭೂತಹಿತೋ ಮೈತ್ರಃ ತಸ್ಮಾನ್ನೋದ್ವಿಜತೇ ಜನಃ ।
ಸಮುದ್ರ ಇವ ಗಂಭೀರಃ ಪ್ರಜ್ಞಾತೃಪ್ತಃ ಪ್ರಶಾಮ್ಯತಿ ॥೨೫॥

ಸರ್ವಪ್ರಾಣಿಗಳ ಹಿತದಲ್ಲಿ ರತನಾಗಿ, ಎಲ್ಲರಲ್ಲಿಯೂ ಮೈತ್ರಿಯನ್ನು ಮಾಡಿ ಅವನು ಉದ್ವೇಗವನ್ನು ಹೊಂದುವುದಿಲ್ಲ. ಸಮುದ್ರದಂತೆ ಗಂಭೀರನಾಗಿದ್ದು ತನ್ನ ಪ್ರಜ್ಞೆಯಿಂದ ತೃಪ್ತನಾಗಿ ಶಾಂತನಾಗಿರುತ್ತಾನೆ.

ಕರ್ಮಣಾऽऽಚರಿತಂ ಪೂರ್ವಂ ಸದ್ಭಿರಾಚರಿತಂ ಚ ಯತ್ ।
ತದೇವಾಸ್ಥಾಯ ಮೋದಂತೇ ದಾಂತಾಃ ಶಮಪರಾಯಣಾಃ ॥೨೬॥

ಶಮ ಮತ್ತು ದಮ ಪರಾಯಣರಾದವರು ಪೂರ್ವಕಾಲೀನ ಸಜ್ಜನರು ಏನನ್ನು ಆಚರಿಸಿದರೋ ಅದನ್ನೇ ಆಚರಿಸಿ ಸಂತೋಷಪಡುತ್ತಾರೆ.

ನೈಷ್ಕರ್ಮ್ಯಂ ವಾ ಸಮಾಸ್ಥಾಯ ಜ್ಞಾನತೃಪ್ತೋ ಜಿತೇಂದ್ರಿಯಃ ।
ಕಾಲಾಕಾಂಕ್ಷೀ ಚರನ್ ಲೋಕೇ ಬ್ರಹ್ಮಭೂಯಾಯ ಕಲ್ಪತೇ ॥೨೭॥

ಅಥವಾ ಸಂನ್ಯಾಸವನ್ನಾದರೂ ಸ್ವೀಕಾರ ಮಾಡಿ ಜಿತೇಂದ್ರಿಯರಾಗಿ, ಜ್ಞಾನದಿಂದ ತೃಪ್ತರಾಗಿ, ತಮ್ಮ ಶರೀರಪಾತಸಮಯವನ್ನು ನಿರೀಕ್ಷಿಸುತ್ತಾ, ಭೂಮಿಯಲ್ಲಿ ಸಂಚರಿಸಿ ಶ್ರೇಷ್ಠನಾದ ಬ್ರಹ್ಮನನ್ನೇ ಪಡೆಯುತ್ತಾರೆ.

ಶಕುನೀನಾಮಿವಾಕಾಶೇ ಪದಂ ನೈವೋಪಲಭ್ಯತೇ ।
ಏವಂ ಪ್ರಜ್ಞಾನತೃಪ್ತಸ್ಯ ಮುನೇರ್ವರ್ತ್ಮ ನ ದೃಶ್ಯತೇ ॥೨೮॥

ಆಕಾಶದಲ್ಲಿ ಪಕ್ಷಿಗಳು ಹಾರುವ ಮಾರ್ಗವು ಹೇಗೆ ಕಾಣುವುದಿಲ್ಲವೋ ಅದರಂತೆ ಪ್ರಜ್ಞಾನತೃಪ್ತನಾದ ಋಷಿಯ ನಡತೆಯು ತಿಳಿಯುವುದಿಲ್ಲ.

ಉತ್ಸೃಜ್ಯ ವಾ ಗೃಹಾನ್ ಯಸ್ತು ಮೋಕ್ಷಮೇವಾಭಿಮನ್ಯತೇ ।
ಲೋಕಾಸ್ತೇಜೋಮಯಾಸ್ತಸ್ಯ ಕಲ್ಪ್ಯಂತೇ ಶಾಶ್ವತಾ ದಿವಿ ॥೨೯॥

ಯಾವನು ತನ್ನ ಮನೆಯನ್ನು ತ್ಯಜಿಸಿ ಮೋಕ್ಷಕ್ಕಾಗಿಯೇ ಸಾಧನೆಯನ್ನು ಮಾಡುತ್ತಾನೆಯೋ ಅವನಿಗೆ ಶಾಶ್ವತವಾದ ತೇಜೋಮಯವಾದ ಲೋಕಗಳು ಕೈಗೂಡುತ್ತವೆ.

ಕಶ್ಚಿಚ್ಛಾಕುನಿಕೋ ರಾಜನ್ ಪೂರ್ವಮಾಸೀದಿತಿ ಶ್ರುತಿಃ ।
ಶಕುನೀನಾಂ ವಧಾರ್ಥಾಯ ಪಾಶಾನ್ ಭೂಮಾವಯೋಜಯತ್ ॥

ಎಲೈ ರಾಜನೇ, ಹಿಂದೆ ಒಬ್ಬ ಪಕ್ಷಿಯನ್ನು ಬೇಟೆಯಾಡುವವನು ಇದ್ದನೆಂದು ಕೇಳಿದ್ದೇವೆ. ಅವನು ಪಕ್ಷಿಗಳನ್ನು ಹಿಡಿದು ಕೊಲ್ಲಲು ಭೂಮಿಯ ಮೇಲೆ ಹಗ್ಗದ ಬಲೆಯನ್ನು ಹರಡಿದನು.

ತಸ್ಮಿನ್ ಯೌ ಶಕುನೌ ಬದ್ಧೌ ಯುಗಪತ್ ಸಹಚಾರಿಣೌ ।
ತಾವುಪಾದಾಯ ತಂ ಪಾಶಂ ಜಗ್ಮತುಃ ಖಚರಾವುಭೌ ॥೩೧॥

ಆ ಬಲೆಯಲ್ಲಿ ಒಟ್ಟಿಗೆ ಸಂಚರಿಸುತ್ತಿದ್ದ ಎರಡು ಪಕ್ಷಿಗಳು ಒಟ್ಟಿಗೆ ಬಿದ್ದು ಆ ಬಲೆಯ ಹಗ್ಗವನ್ನು ಎತ್ತಿಕೊಂಡು ಆಕಾಶದಲ್ಲಿ ಹಾರಿಹೋದವು.

ತೌ ವಿಹಾಯಸಮಾಕ್ರಾಂತೌ ದೃಷ್ಟ್ವಾ ಶಾಕುನಿಕಸ್ತದಾ ।
ಅನ್ವಧಾವದನಿರ್ವಿಣ್ಣೋ ಯೇನ ಯೇನ ಸ್ಮ ಗಚ್ಛತಃ ॥೩೨॥

ಆ ಬೇಡನು ಆಕಾಶದಲ್ಲಿ ಹಾರುತ್ತಿದ್ದ ಆ ಹಕ್ಕಿಗಳನ್ನು ನೋಡಿ, ಏನೂ ನಿರಾಶೆ ಇಲ್ಲದೆ ಅವು ಹೋದಂತೆ ಹೋದಂತೆ ಭೂಮಿಯ ಮೇಲೆ ಓಡುತ್ತಿದ್ದನು.

ತಥಾ ತಮನುಧಾವಂತಂ ಮೃಗಯುಂ ಶಕುನಾರ್ಥಿನಮ್ ।
ಆಶ್ರಮಸ್ಥೋ ಮುನಿಃ ಕಶ್ಚಿದ್ ದದರ್ಶಾಥ ಕೃತಾಹ್ನಿಕಃ ॥೩೩॥

ಆ ರೀತಿಯಲ್ಲಿ ಆ ಪಕ್ಷಿಗಳನ್ನು ಬಯಸಿ ಓಡುತ್ತಿದ್ದ ಆ ಬೇಡನನ್ನು ಆಶ್ರಮದಲ್ಲಿ ತನ್ನ ಆಹ್ನಿಕವನ್ನು ಮುಗಿಸಿದ್ದ ಒಬ್ಬ ಋಷಿಯು ನೋಡಿದನು.

ತಾವಂತರಿಕ್ಷಗೌ ಶೀಘ್ರಮನುಯಾಂತಂ ಮಹೀಚರಮ್ ।
ಶ್ಲೋಕೇನಾನೇನ ಕೌರವ್ಯ ಪಪ್ರಚ್ಛ ಸ ಮುನಿಸ್ತದಾ ॥೩೪॥

ಅಂತರಿಕ್ಷದಲ್ಲಿ ಹಾರುತ್ತಿದ್ದ ಆ ಪಕ್ಷಿಗಳನ್ನು ಅನುಸರಿಸಿ ಭೂಮಿಯ ಮೇಲೆ ಓಡುತ್ತಿದ್ದ ಆ ಬೇಡನನ್ನು ಕಂಡು ಎಲೈ ಕೌರವ್ಯನೇ, ಆಗ ಒಂದು ಶ್ಲೋಕದಲ್ಲಿ ಪ್ರಶ್ನೆಯನ್ನು ಮಾಡಿದನು.

ವಿಚಿತ್ರಮಿದಮಾಶ್ಚರ್ಯಂ ಮೃಗಯೋ ಪ್ರತಿಭಾತಿ ಮೇ ।
ಪ್ಲವಮಾನೌ ಹಿ ಖಚರೌ ಪದಾತಿರನುಧಾವತಿ ॥೩೫॥

ಎಲೈ ಬೇಡನೇ, ಇದು ವಿಚಿತ್ರ ಮತ್ತು ಆಶ್ಚರ್ಯ ಎಂದು ನನಗೆ ತೋರುತ್ತದೆ. ಪಕ್ಷಿಗಳು ಆಕಾಶದಲ್ಲಿ ಹಾರುತ್ತಿವೆ, ನೀನು ಭೂಮಿಯ ಮೇಲೆ ಓಡುತ್ತಿದ್ದೀಯೆ (ಎಂದು ಕೇಳಿದನು).

ಶಾಕುನಿಕಃ

ಪಾಶಾಮೇಕಮುಭಾವೇತೌ ಸಹಿತೌ ಹರತೋ ಮಮ ।
ಯತ್ರ ವೈ ವಿವದಿಷ್ಯೇತೇ ತತ್ರ ಮೇ ವಶಮೇಷ್ಯತಃ ॥೩೬॥

ಬೇಡ– ನನ್ನ ಬಲೆಯನ್ನು ಎತ್ತಿಕೊಂಡು ಈ ಎರಡು ಹಕ್ಕಿಗಳೂ ಹಾರುತ್ತಿವೆ. ಎಲ್ಲಿ ಅವು ಜಗಳವನ್ನು ಮಾಡುತ್ತವೆಯೋ ಅಲ್ಲಿ ನನಗೆ ವಶವಾಗುವುವು.

ವಿದುರಃ

ತೌ ವಿವಾದಮನುಪ್ರಾಪ್ತೌ ಶಕುನೌ ಮೃತ್ಯುಸಂಧಿತೌ ।
ವಿಗೃಹ್ಯ ಪಾಶಂ ದುರ್ಬುದ್ಧೀ ಪೃಥಿವ್ಯಾಂ ಸನ್ನಿಪೇತತುಃ ॥೩೭॥

ವಿದುರ– ಮೃತ್ಯುಸನ್ನಿಹಿತವಾದ ಆ ಪಕ್ಷಿಗಳು ಜಗಳವನ್ನಾಡಲು ಪ್ರಾರಂಭಿಸಿದವು. ದುರ್ಬುದ್ಧಿಯುಳ್ಳ ಆ ಪಕ್ಷಿಗಳು ಪಾಶವನ್ನು ಕಿತ್ತು ಭೂಮಿಯ ಮೇಲೆ ಬಿದ್ದವು.

ತೌ ಯುದ್ಧ್ಯಮಾನೌ ಸಂರಬ್ಧೌ ಮೃತ್ಯುಪಾಶವಶಾನುಗೌ ।
ಉಪಸೃತ್ಯ ಪ್ರಮತ್ತೌ ತೌ ಜಗ್ರಾಹ ಮೃಗಯುಸ್ತದಾ ॥೩೮॥

ಮೃತ್ಯುಪಾಶಕ್ಕೆ ವಶವಾಗಿ ಕೋಪದಿಂದ ಹೊಡೆದಾಡುತ್ತಾ ಬೇರೆ ಎಚ್ಚರಿಕೆ ಇಲ್ಲದ ಆ ಪಕ್ಷಿಗಳನ್ನು ಸಮೀಪಿಸಿ ಬೇಡನು ಅವುಗಳನ್ನು ಹಿಡಿದುಕೊಂಡನು.

ಏವಂ ಯೇ ಜ್ಞಾತಯೋऽರ್ಥೇಷು ಮಿಥೋ ಗಚ್ಛಂತಿ ವಿಗ್ರಹಮ್ ।
ತೇ ಮೃತ್ಯುವಶಮಾಯಾಂತಿ ಶಕುನಾವಿವ ವಿಗ್ರಹಾತ್ ॥೩೯॥

ಹೀಗೆ ದಾಯಾದಿಗಳು ಒಂದೇ ವಸ್ತುವಿನ ವಿಷಯದಲ್ಲಿ ವಿರೋಧವನ್ನು ಮಾಡಿದರೆ ವಿರೋಧವನ್ನು ಮಾಡಿದ ಆ ಪಕ್ಷಿಗಳಂತೆ ಮೃತ್ಯುವಶರಾಗುತ್ತಾರೆ.

ಸಂಭೋಜನಂ ಸಂಕಥನಂ ಸಂಪ್ರಶ್ನೋऽಥ ಸಮಾಗಮಃ ।
ಏತಾನಿ ಜ್ಞಾತಿಕಾರ್ಯಾಣಿ ನ ವಿರೋಧಃ ಕದಾಚನ ॥೪೦॥

ಜೊತೆಯಲ್ಲಿ ಭೋಜನವನ್ನು ಮಾಡುವುದು, ಜೊತೆಯಲ್ಲಿ ಕುಳಿತು ಮಾತನಾಡುವುದು, ತಿಳಿಯದ ವಿಷಯವನ್ನು ಇನ್ನೊಬ್ಬರಲ್ಲಿ ಕೇಳುವುದು, ಒಟ್ಟಿಗೆ ಇರುವುದು ಇವುಗಳು ದಾಯಾದಿಗಳು ಮಾಡಬೇಕಾದ ಕಾರ್ಯ ಹೊರತು ಎಂದೂ ವಿರೋಧವನ್ನು ಮಾಡುವುದಲ್ಲ.

ಯೇ ಸ್ಮ ಕಾಲೇ ಸುಮನಸಃ ಸರ್ವೇ ವೃದ್ಧಾನುಪಾಸತೇ ।
ಸಿಂಹಗುಪ್ತಮಿವಾರಣ್ಯಮಪ್ರಧೃಷ್ಯಾ ಭವಂತಿ ತೇ ॥೪೧॥

ಯಾವ ದಾಯಾದಿಗಳು ಒಳ್ಳೆಯ ಮನಸ್ಸನ್ನು ಹೊಂದಿದವರಾಗಿ, ಹಿರಿಯರ ಮಾತುಗಳನ್ನು ಕೇಳುತ್ತಾರೆಯೋ ಅವರು ಸಿಂಹಗಳಿಂದ ರಕ್ಷಿತವಾದ ಅರಣ್ಯದಂತೆ ಯಾರಿಗೂ ಸೋಲುವುದಿಲ್ಲ.

ಯೇ ತು ಸನ್ನಿಧಿಮಾಸಾದ್ಯ ದೀನಾ ಇವ ಸಮಾಸತೇ ।
ಶ್ರಿಯಂ ತೇ ಸಂಪ್ರಯಚ್ಛಂತಿ ದ್ವಿಷದ್ಭ್ಯೋ ಭರತರ್ಷಭ ॥೪೨॥

ಎಲೈ ಭರತರ್ಷಭನೇ, ಯಾರು ದೊಡ್ಡ ನಿಧಿಯನ್ನು ಪಡೆದು ದೀನರಂತೆ ನಡೆದುಕೊಳ್ಳುತ್ತಾರೆಯೋ ಅವರು ತಮ್ಮ ಸಂಪತ್ತನ್ನು ತಮ್ಮ ಶತ್ರುಗಳಿಗೆ ಕೊಡುತ್ತಾರೆ.

ಧೂಮಾಯಂತೇ ವ್ಯಪೇತಾನಿ ಜ್ವಲಂತಿ ಸಹಿತಾನಿ ಚ ।
ಧೃತರಾಷ್ಟ್ರೋಲ್ಮುಕಾನೀವ ಜ್ಞಾತಯೋ ಭರತರ್ಷಭ ॥೪೩॥

ಎಲೈ ಭರತರ್ಷಭನೇ, ಧೃತರಾಷ್ಟ್ರನೇ, ದಾಯಾದಿಗಳು ಕೊಳ್ಳಿಗಳಂತೆ ಬಿಡಿಬಿಡಿಯಾಗಿದ್ದರೆ ಧೂಮವನ್ನು ಕಾರುತ್ತಾರೆ, ಒಟ್ಟಿಗೆ ಸೇರಿದರೆ ಜ್ವಲಿಸುತ್ತಾರೆ.

ಇದಮನ್ಯತ್ ಪ್ರವಕ್ಷ್ಯಾಮಿ ಯಥಾ ದೃಷ್ಟಂ ಗಿರೌ ಮಯಾ ।
ಶ್ರುತ್ವಾ ತದಪಿ ಕೌರವ್ಯ ಯಥಾ ಶ್ರೇಯಸ್ತಥಾ ಕುರು ॥೪೪॥

ನಾನು ಪರ್ವತದಲ್ಲಿ ನೋಡಿದ ಇನ್ನೊಂದು ವಿಷಯವನ್ನು ಹೇಳುವೆನು. ಎಲೈ ಧೃತರಾಷ್ಟ್ರನೇ, ಅದನ್ನೂ ಕೇಳಿ ನಿನಗೆ ಯಾವುದು ಶ್ರೇಯಸ್ಸು ಎನಿಸುತ್ತದೋ ಅದರಂತೆ ಮಾಡು.

ವಯಂ ಕಿರಾತೈಃ ಸಹಿತಾ ಗಚ್ಛಾಮೋ ಗಿರಿಮುತ್ತಮಮ್ ।
ಬ್ರಾಹ್ಮಣೈರ್ದೇವಕಲ್ಪೈಶ್ಚ ವಿದ್ಯಾವಿನಯಸಾಧನೈಃ ॥೪೫॥

ಕುಂಜಭೂತಂ ಗಿರಿಂ ಸರ್ವಮಭಿತೋ ಗಂಧಮಾದನಮ್ ।
ದೀಪ್ಯಮಾನೌಷಧಿಗಣಂ ಸಿದ್ಧಗಂಧರ್ವಸೇವಿತಮ್ ॥೪೬॥

ನಾವು ಕಿರಾತರ ಜೊತೆಯಲ್ಲಿಯೂ ಮತ್ತು ವೇದವಿದ್ಯಾವಿನಯ ಸಂಪನ್ನರಾದ, ದೇವಸಮಾನರಾದ ಬ್ರಾಹ್ಮಣರ ಜೊತೆಯಲ್ಲಿಯೂ ಅನೇಕ ದಿವ್ಯ ಔಷಧಿಗಳಿಂದ ಕೂಡಿದ, ಸಿದ್ಧ, ಗಂಧರ್ವರಿಂದ ಸೇವಿತವಾದ ಸುತ್ತಲೂ ಅನೇಕ ಲತಾಕುಂಜಗಳಿರುವ ಗಂಧಮಾದನ ಪರ್ವತಕ್ಕೆ ಹೋದೆವು.

ತತ್ರಾಪಶ್ಯಾಮ ವೈ ಸರ್ವೇ ಮಧು ಸ್ಫೀತಶ್ಚ ಮಾಕ್ಷಿಕಮ್ ।
ಮಹಾಪ್ರಪಾತೇ ವಿಷಮೇ ನಿವಿಷ್ಟಂ ಕುಂಭಸಮ್ಮಿತಮ್ ॥೪೭॥

ಅಲ್ಲಿ ಒಂದು ದೊಡ್ಡ ಹಳ್ಳದಲ್ಲಿ ಇದ್ದ, ತುಂಬ ದೊಡ್ಡ ಪ್ರಮಾಣದ ಪರಿಶುದ್ಧವಾದ ಜೇನುತುಪ್ಪವನ್ನು ಎಲ್ಲರೂ ನೋಡಿದೆವು.

ಆಶೀವಿಷೈ ರಕ್ಷ್ಯಮಾಣಂ ಕುಬೇರದಯಿತಂ ಭೃಶಮ್ ।
ಯತ್ ಪ್ರಾಶ್ಯ ಪುರುಷೋ ಮರ್ತ್ಯೋಽಪ್ಯಮರತ್ವಂ ನಿಗಚ್ಛತಿ ॥೪೮॥

ಕುಬೇರನಿಗೆ ಪ್ರಿಯವಾದ ಆ ಮಧುವು ಸರ್ಪಗಳಿಂದ ರಕ್ಷಿತವಾಗಿದ್ದಿತು. ಆ ಮಧುವನ್ನು ಪಾನಮಾಡಿದರೆ ಪುರುಷನು ಮೃತ್ಯುವನ್ನೂ ದೂರಮಾಡುತ್ತಾನೆ.

ಅಚಕ್ಷುರ್ಲಭತೇ ಚಕ್ಷುರ್ವೃದ್ಧೋ ಭವತಿ ವೈ ಯುವಾ ।
ಇತಿ ತೇ ಕಥಯಂತಿ ಸ್ಮ ಬ್ರಾಹ್ಮಣಾ ಜಂಭಸಾಧಕಾಃ ॥೪೯॥

ಅಂಧನು ಚಕ್ಷುಸ್ಸನ್ನು ಪಡೆಯುತ್ತಾನೆ, ವೃದ್ಧನು ಯುವಕನಾಗುತ್ತಾನೆ ಎಂದು ಆಹಾರದಲ್ಲಿ ಪರಿಣತರಾದ ಬ್ರಾಹ್ಮಣರು ಹೇಳುತ್ತಾರೆ.

ತತಃ ಕಿರಾತಾಸ್ತಂ ದೃಷ್ಟ್ವಾ ಪ್ರಾರ್ಥಯಂತೋ ಮಹೀಪತೇ ।
ವಿನೇಶುರ್ವಿಷಮೇ ತಸ್ಮಿನ್ ಸಸರ್ಪೇ ಗಿರಿಗಹ್ವರೇ ॥೫೦॥

ಎಲೈ ರಾಜನೇ, ಅನಂತರ ಆ ಕಿರಾತರು (ಬೇಡರೆಲ್ಲರೂ) ಆ ಮಧುವನ್ನು ಬಯಸಿ ಆ ಗಿರಿಯ ಗುಹೆಯಲ್ಲಿದ್ದ ಸರ್ಪವಿದ್ದ ಹಳ್ಳದಲ್ಲಿ ವಿನಾಶವನ್ನು ಹೊಂದಿದರು.

ತಥೈವ ತವ ಪುತ್ರೋಽಯಂ ಪೃಥಿವೀಮೇಕ ಇಚ್ಛತಿ ।
ಮಧು ಪಶ್ಯತಿ ಸಮ್ಮೋಹಾತ್ ಪ್ರಪಾತಂ ನಾನುಪಶ್ಯತಿ ॥೫೧॥

ಹಾಗೆಯೇ ನಿನ್ನ ಪುತ್ರನು ಒಬ್ಬನೇ ಪೃಥಿವಿಯನ್ನು ಬಯಸುತ್ತಾನೆ. ಸಮ್ಮೋಹದಿಂದ ಅವನಿಗೆ ಮಧುವು ಕಾಣುತ್ತಿದೆ. ಆದರೆ ಪ್ರಪಾತವು ಕಾಣುತ್ತಿಲ್ಲ.

ದುರ್ಯೋಧನೋ ಯೋದ್ಧುಮನಾಃ ಸಮರೇ ಸವ್ಯಸಾಚಿನಾ ।
ನ ಚ ಪಶ್ಯಾಮಿ ತೇಜೋಽಸ್ಯ ವಿಕ್ರಮಂ ವಾ ತಥಾವಿಧಮ್ ॥೫೨॥

ದುರ್ಯೋಧನನು ಯುದ್ಧದಲ್ಲಿ ಅರ್ಜುನನ ಜೊತೆಯಲ್ಲಿ ಯುದ್ಧಮಾಡಲು ಬಯಸುತ್ತಾನೆ. ಆದರೆ ಅವನಿಗೆ ಅಂತಹ ತೇಜಸ್ಸಾಗಲೀ ಅಥವಾ ಪರಾಕ್ರಮವಾಗಲೀ ನನಗೆ ಕಾಣಿಸುವುದಿಲ್ಲ.

ಏಕೇನ ರಥಮಾಸ್ಥಾಯ ಪೃಥಿವೀ ಯೇನ ನಿರ್ಜಿತಾ ।
ಭೀಷ್ಮದ್ರೋಣಪ್ರಭೃತಯಃ ಸಂತ್ರಸ್ತಾಃ ಸಾಧುಯಾಯಿನಃ ॥೫೩॥

ವಿರಾಟನಗರೇ ಭಗ್ನಾಃ ಕಿಂ ವಾ ತೇಽತ್ರ ನಿದರ್ಶನಮ್ ।
ಪ್ರತೀಕ್ಷಮಾಣೋ ಯೋ ವೀರಃ ಕ್ಷಮತೇ ನಿಕೃತಿಂ ತವ ॥೫೪॥

ಅವನು ಒಬ್ಬನೇ ಒಂದೇ ರಥದಲ್ಲಿ ಕುಳಿತು ಭೂಮಿಯನ್ನೆಲ್ಲವನ್ನೂ ಗೆದ್ದವನು. ಸಾಧುಮಾರ್ಗದಲ್ಲಿ ನಡೆಯುವ ಭೀಷ್ಮ-ದ್ರೋಣಾದಿಗಳು ಅವನ ಪರಾಕ್ರಮಕ್ಕೆ ಹೆದರಿದರು. ಅಂತಹವರು ವಿರಾಟನಗರದಲ್ಲಿ ಎಲ್ಲರೂ ಭಗ್ನರಾದರು. ಇದಕ್ಕಿಂತ ಬೇರೆ ನಿದರ್ಶನವು ಬೇಕೆ? ವೀರನಾದ ಅವನು ಕಾಲವನ್ನು ಪ್ರತೀಕ್ಷೆಮಾಡುತ್ತಾ ನಿನ್ನ ಮಕ್ಕಳು ಮಾಡಿದ ಅಪಚಾರವನ್ನು ಕ್ಷಮಿಸುತ್ತಿದ್ದಾನೆ.

ದ್ರುಪದೋ ಮತ್ಸ್ಯರಾಜಶ್ಚ ಸಂಕ್ರುದ್ಧಶ್ಚ ಧನಂಜಯಃ ।
ನ ಶೇಷಯೇಯುಃ ಸಮರೇ ವಾಯುಯುಕ್ತಾ ಇವಾಗ್ನಯಃ ॥೫೫॥

ದ್ರುಪದನೂ, ಮತ್ಸ್ಯರಾಜನಾದ ವಿರಾಟನೂ, ಕೋಪಗೊಂಡ ಅರ್ಜುನನೂ ಸಹ ವಾಯುಸಹಿತವಾದ ಅಗ್ನಿಗಳಂತೆ ಯುದ್ಧದಲ್ಲಿ ಶತ್ರುಗಳಲ್ಲಿ ಯಾರನ್ನೂ ಉಳಿಸುವುದಿಲ್ಲ.

ಅಂಕೇ ಕುರುಷ್ವ ರಾಜಾನಂ ಧೃತರಾಷ್ಟ್ರ ಯುಧಿಷ್ಠಿರಮ್ ।
ಯುಧ್ಯತೋರ್ಹಿ ದ್ವಯೋರ್ಯುದ್ಧೇ ನೈಕಾಂತೇನ ಭವೇಜ್ಜಯಃ ॥೫೬॥

ಧೃತರಾಷ್ಟ್ರನೇ, ರಾಜನಾದ ಯುಧಿಷ್ಠಿರನನ್ನು ತೊಡೆಯ ಮೇಲೆ ಕೂಡಿಸಿಕೋ. ಇಬ್ಬರೂ ಯುದ್ಧವನ್ನು ಮಾಡುವಾಗ ಒಬ್ಬನಿಗೇ ನಿಯಮೇನ ಜಯವುಂಟಾಗುವುದೆಂದು ಹೇಳಲು ಸಾಧ್ಯವಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಚತುಃಷಷ್ಟಿತಮೋಽಧ್ಯಾಯಃ ॥

॥ ವ್ಯಾಸಾಭಿಗಮನಪರ್ವಣಿ ಸಪ್ತದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಅರವತ್ನಾಲ್ಕನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೈದನೆಯ ಅಧ್ಯಾಯ

ಅರ್ಜುನನು ಕೃಷ್ಣನಿಂದ ರಕ್ಷಿತನಾಗಿರುವುದರಿಂದ ದುರ್ಜಯನೆಂದು ಹೇಳಿ ಧೃತರಾಷ್ಟ್ರನಿಂದ ದುರ್ಯೋಧನನಿಗೆ ಸಂಧಿಮಾಡಿಕೊಳ್ಳುವಂತೆ ಒತ್ತಾಯ.

ಧೃತರಾಷ್ಟ್ರಃ

ದುರ್ಯೋಧನ ವಿಜಾನೀಹಿ ಯತ್ ತ್ವಾಂ ವಕ್ಷ್ಯಾಮಿ ಪುತ್ರಕ ।
ಉತ್ಪಥಂ ಮನ್ಯಸೇ ಮಾರ್ಗಮನಭಿಜ್ಞ ಇವಾಧ್ವಗಃ ॥೧॥

ಧೃತರಾಷ್ಟ್ರ– ಪ್ರೀತಿಯ ಪುತ್ರನೇ, ನಾನು ನಿನಗೆ ಹೇಳುವ ಮಾತನ್ನು ಕೇಳು. ದಾರಿಯನ್ನು ತಿಳಿಯದವನಂತೆ ನೀನು ದುರ್ಮಾರ್ಗವನ್ನು ಸರಿಯಾದ ಮಾರ್ಗವೆಂದು ತಿಳಿದಿದ್ದೀಯೆ.

ಪಂಚಾನಾಂ ಪಾಂಡುಪುತ್ರಾಣಾಂ ಯತ್ ತೇಜಃ ಪ್ರಜಿಹೀರ್ಷಸಿ ।
ಪಂಚಾನಾಮಿವ ಭೂತಾನಾಂ ಮಹತಾಂ ಸುಮಹಾತ್ಮನಾಮ್ ॥೨॥

ಪಂಚಮಹಾಭೂತಗಳಂತಿರುವ ಮಹಾತ್ಮರಾದ ಪಂಚಪಾಂಡವರ ತೇಜಸ್ಸನ್ನು ಅಪಹರಿಸಲು ನೀನು ಇಚ್ಛಿಸುತ್ತೀಯೆ.

ಯುಧಿಷ್ಠಿರಂ ಹಿ ಕೌಂತೇಯಂ ಪರಂ ಧರ್ಮಮಿಹಾಸ್ಥಿತಮ್ ।
ಪರಾಂ ಗತಿಮಸಂಪ್ರೇತ್ಯ ನ ತ್ವಂ ಜೇತುಮಿಹಾರ್ಹಸಿ ॥೩॥

ನಿತ್ಯವೂ ಧರ್ಮಾಚರಣೆಯಲ್ಲಿರುವ ಕುಂತೀಪುತ್ರನಾದ ಯುಧಿಷ್ಠಿರನನ್ನು ನೀನು ಮರಣವನ್ನು ಹೊಂದಿ, ಪರಗತಿಯನ್ನು ಹೊಂದದೆ ಜಯಿಸಲು ಸಾಧ್ಯವಿಲ್ಲ (ಮರಣ ಹೊಂದಿದರೂ ಸಾಧ್ಯವಿಲ್ಲ).

ಭೀಮಸೇನಂ ಚ ಕೌಂತೇಯಂ ಯಸ್ಯ ನಾಸ್ತಿ ಸಮೋ ಬಲೇ ।
ರಣಾಂತಕಂ ತರ್ಜಯಸೇ ಮಹಾವಾತಮಿವ ದ್ರುಮಃ ॥೪॥

ಯಾವನಿಗೆ ಬಲದಲ್ಲಿ ಸಮಾನನಾದವನು ಇಲ್ಲವೋ ಅಂತಹ ರಣಾಂತಕನಾದ ಕುಂತೀಪುತ್ರನಾದ ಭೀಮಸೇನನನ್ನು ನೀನು ಒಂದು ವೃಕ್ಷವು ಬಿರುಗಾಳಿಯನ್ನು ಹೆದರಿಸುವಂತೆ ಹೆದರಿಸುತ್ತಿದ್ದೀಯೆ.

ಸರ್ವಶಸ್ತ್ರಭೃತಾಂ ಶ್ರೇಷ್ಠಂ ಮೇರುಂ ಶಿಖರಿಣಾಮಿವ ।
ಯುಧಿ ಗಾಂಡೀವಧನ್ವಾನಂ ಕೋ ನು ಯುಧ್ಯೇತ ಬುದ್ಧಿಮಾನ್ ॥೫॥

ಎಲ್ಲ ಪರ್ವತಗಳಿಗೆ ಮೇರುವಿದ್ದಂತೆ, ಎಲ್ಲ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ, ಗಾಂಡೀವ ಧನುಸ್ಸನ್ನು ಹೊಂದಿದ ಅರ್ಜುನನ ಜೊತೆಯಲ್ಲಿ ಯಾವ ವಿವೇಕಿಯು ಯುದ್ಧವನ್ನು ಮಾಡಿಯಾನು?

ಧೃಷ್ಟದ್ಯುಮ್ನಶ್ಚ ಪಾಂಚಾಲ್ಯಃ ಕಮಿವಾದ್ಯ ನ ಶಾತಯೇತ್ ।
ಶತ್ರುಮಧ್ಯೇ ಶರಾನ್ ಮುಂಚನ್ ದೇವರಾಡಶನೀಮಿವ ॥೬॥

ಪಾಂಚಾಲದೇಶದ ಧೃಷ್ಟದ್ಯುಮ್ನನೂ ಸಹ ಇಂದ್ರನು ಸಿಡಿಲುಗಳನ್ನು ಸಿಡಿಸಿದಂತೆ ಶತ್ರುಗಳ ಮಧ್ಯದಲ್ಲಿ ಬಾಣಗಳನ್ನು ಪ್ರಯೋಗಿಸುತ್ತಾ ಈ ದಿನ ಯಾರನ್ನು ಪುಡಿಪುಡಿ ಮಾಡುವುದಿಲ್ಲ?

ಸಾತ್ಯಕಿಶ್ಚಾಪಿ ದುರ್ಧರ್ಷಃ ಸಮ್ಮತೋಽಂಧಕವೃಷ್ಣಿಷು ।
ಧ್ವಂಸಯಿಷ್ಯತಿ ತೇ ಸೇನಾಂ ಪಾಂಡವೇಯಹಿತೇ ರತಃ ॥೭॥

ಸಾತ್ಯಕಿಯೂ ಸಹ ಅಂಧಕವೃಷ್ಣಿಗಳಿಗೆ ಸಮ್ಮತನಾದವನು ಮತ್ತು ಸೋಲಿಸಲು ಅಸಾಧ್ಯನಾದವನು. ಪಾಂಡುಪುತ್ರರ ಹಿತದಲ್ಲಿ ಆಸಕ್ತನಾದ ಅವನು ನಿನ್ನ ಸೈನ್ಯವನ್ನು ಧ್ವಂಸಗೊಳಿಸುವನು.

ಯಃ ಪುನಃ ಪ್ರತಿಮಾನೇನ ತ್ರೀನ್ ಲೋಕಾನತಿರಿಚ್ಯತೇ ।
ಸ ಶ್ರೇಷ್ಠೋ ಜಗತಃ ಕೃಷ್ಣಃ ಪಾಂಡವಾನಾಂ ಹಿತೇ ರತಃ ॥೮॥

ಇನ್ನು ಯಾವನು ತನ್ನ ಗುಣಗಳಿಂದ ಮೂರುಲೋಕಗಳನ್ನು ಮೀರಿದ್ದಾನೆಯೋ ಅಂತಹ ಸರ್ವಜಗತ್ತಿಗೂ ಶ್ರೇಷ್ಠನಾದ ಕೃಷ್ಣನು ಪಾಂಡವರ ಹಿತದಲ್ಲಿ ರತನಾಗಿದ್ದಾನೆ.

ಏಕತೋ ಹ್ಯಸ್ಯ ದಾರಾಶ್ಚ ಜ್ಞಾತಯಶ್ಚ ಸಬಾಂಧವಾಃ ।
ಆತ್ಮಾ ಚ ಪೃಥಿವೀ ಚೇಯಮ್ ಏಕತಶ್ಚ ಧನಂಜಯಃ ॥೯॥

ಒಂದುಕಡೆ ಅವನ (ಕೃಷ್ಣನ) ಪತ್ನಿಯರೂ, ಜ್ಞಾತಿಗಳೂ, ಬಾಂಧವರೂ, ತಾನು ಮತ್ತು ಸಮಸ್ತವಾದ ಪೃಥಿವಿ. ಇನ್ನೊಂದು ಕಡೆ ಕೇವಲ ಅರ್ಜುನ (ಅರ್ಜುನನು ಕೃಷ್ಣನಿಗೆ ಅಷ್ಟು ಪ್ರೀತಿಪಾತ್ರನಾದವನು ಎಂದು ಅಭಿಪ್ರಾಯ).

ವಾಸುದೇವೋಽಪಿ ದುರ್ಧರ್ಷೋ ಯತಾತ್ಮಾ ಯತ್ರ ಪಾಂಡವಃ ।
ಅವಿಷಹ್ಯಂ ಪೃಥಿವ್ಯಾಽಪಿ ತದ್‌ಬಲಂ ಯತ್ರ ಕೇಶವಃ ॥೧೦॥

ವಾಸುದೇವನೂ ಸಹ ಸೋಲಿಸಲಾರದವನು ಮತ್ತು ಮನೋನಿಗ್ರಹವುಳ್ಳವನು. ಯಾವ ಸೈನ್ಯದಲ್ಲಿ ಅರ್ಜುನನು ಮತ್ತು ಕೃಷ್ಣನು ಇದ್ದಾರೆಯೋ ಆ ಸೈನ್ಯವನ್ನು ಸಮಗ್ರವಾದ ಪೃಥಿವಿಯೂ ಸೋಲಿಸಲಾರದು.

ತಿಷ್ಠ ತಾತ ಸತಾಂ ವಾಕ್ಯೇ ಸುಹೃದಾಮರ್ಥವಾದಿನಾಮ್ ।
ವೃದ್ಧಂ ಶಾಂತನವಂ ಭೀಷ್ಮಂ ನಿರೀಕ್ಷಸ್ವ ಪಿತಾಮಹಮ್ ॥೧೧॥

ಮಾಂ ಚ ಬ್ರುವಾಣಂ ಶುಶ್ರೂಷ ಕುರೂಣಾಮರ್ಥದರ್ಶನಮ್ ।

ಪ್ರೀತಿಪಾತ್ರನೇ, ನಿನ್ನ ಹಿತವನ್ನು ಬಯಸುವ ಸುಹೃದರಾದ ಸಜ್ಜನರ ಮಾತುಗಳನ್ನು ಕೇಳುವವನಾಗು. ವೃದ್ಧನಾದ, ಶಂತನುಪುತ್ರನಾದ, ಪಿತಾಮಹನಾದ ಭೀಷ್ಮನನ್ನು ನೋಡು. ಕುರುಗಳ ಹಿತವನ್ನು ನೋಡಿ ಮಾತನಾಡುವ ನನ್ನ ಮಾತನ್ನು ಕೇಳುವವನಾಗು.

ದ್ರೋಣಂ ಕೃಪಂ ವಿಕರ್ಣಂ ಚ ಮಹಾರಾಜಂ ಚ ಬಾಹ್ಲಿಕಮ್ ॥೧೨॥

ದ್ರೌಣಿಂ ಚ ಸೋಮದತ್ತಂ ಚ ಶಕುನಿಂ ಚಾಪಿ ಸೌಬಲಮ್ ।
ದುಃಶಾಸನಂ ಶಲಂ ಚೈವ ಪುರುಮಿತ್ರಂ ವಿವಿಂಶತಿಮ್ ॥೧೩॥

ವಿಕರ್ಣಂ ಚಿತ್ರಸೇನಂ ಚ ಜಯತ್ಸೇನಂ ಚ ಪಾರ್ಥಿವಮ್ ।
ವಿಂದಾನುವಿಂದಾವಾವಂತ್ಯೌ ದುರ್ಮುಖಂ ಚಾಪಿ ಕೌರವಮ್ ॥೧೪॥

ಸೈಂಧವಂ ದುಃಸಹಂ ಚೈವ ಭೂರಿಶ್ರವಸಮೇವ ಚ ।
ಭಗದತ್ತಂ ಚ ರಾಜಾನಂ ಜಲಸಂಧಂ ಚ ಪಾರ್ಥಿವಮ್ ॥೧೫॥

ದ್ರೋಣರು, ಕೃಪರು, ವಿಕರ್ಣ, ಬಾಹ್ಲಿಕಮಹಾರಾಜ, ಅಶ್ವತ್ಥಾಮ, ಸೋಮದತ್ತ, ಸೌಬಲನಾದ ಶಕುನಿ, ದುಶ್ಶಾಸನ, ಶಲ, ಪುರುಮಿತ್ರ , ವಿವಿಂಶತಿ, ವಿಕರ್ಣ, ಚಿತ್ರಸೇನ, ಜಯತ್ಸೇನರಾಜ, ಅವಂತಿದೇಶದ ವಿಂದಾನುವಿಂದರು, ಕೌರವನಾದ ದುರ್ಮುಖ, ಸೈಂಧವ, ದುಃಸಹ, ಭೂರಿಶ್ರವ, ಭಗದತ್ತ ರಾಜ ಮತ್ತು ಜಲಸಂಧ ರಾಜ;

ಏತೇ ಹ್ಯಪಿ ಯಥೈವಾಹಂ ಮಂತುಮರ್ಹಸಿ ತಾಂಸ್ತಥಾ ।
ಸರ್ವೇ ಧರ್ಮವಿದೋ ಹ್ಯೇತೇ ತುಲ್ಯಸ್ನೇಹಾಶ್ಚ ಭಾರತ ॥೧೬॥

ಇವರೂ ಸಹ ನನ್ನಂತೆಯೇ ಎಂದು ಅವರನ್ನು ನೀನು ತಿಳಿಯಬೇಕು. ಎಲೈ ಭಾರತನೇ, ಎಲ್ಲರೂ ಧರ್ಮವನ್ನು ತಿಳಿದವರು ಮತ್ತು ನಿನ್ನಲ್ಲಿ ಸಮಾನವಾದ ಸ್ನೇಹವನ್ನು ಹೊಂದಿದವರು.

ಯತ್ ತದ್ ವಿರಾಟನಗರೇ ಸಹ ಭ್ರಾತೃಭಿರಗ್ರತಃ ।
ಉತ್ಸೃಜ್ಯ ಗಾಃ ಸುಸಂತ್ರಸ್ತಂ ಬಲಂ ತೇ ಸಮಶೀರ್ಯತ ॥೧೭॥

ವಿರಾಟನಗರದಲ್ಲಿ ಭ್ರಾತೃಸಹಿತನಾದ ನೀನು ಮುಂದಿರುವಾಗಲೇ ಗೋವುಗಳನ್ನು ಬಿಟ್ಟು ನಿನ್ನ ಸೈನ್ಯವು ಹೆದರಿ ಚದುರಿಹೋಯಿತು.

ಯಚ್ಚೈವ ತಸ್ಮಿನ್ ನಗರೇ ಶ್ರೂಯತೇ ಮಹದದ್ಭುತಮ್ ।
ಏಕಸ್ಯ ಚ ಬಹೂನಾಂ ಚ ಪರ್ಯಾಪ್ತಂ ತನ್ನಿದರ್ಶನಮ್ ॥೧೮॥

ಮತ್ತು ಆ ನಗರದಲ್ಲಿ ಒಬ್ಬ ಅರ್ಜುನನಿಗೆ ಅನೇಕ ಮಹಾರಥರ ಜೊತೆಯಲ್ಲಿ ಅದ್ಭುತವಾದ ದೊಡ್ಡ ಯುದ್ಧವು ಕೇಳಿಬರುತ್ತದೆಯಷ್ಟೆ. ಅದೊಂದು ನಿದರ್ಶನವು ಸಾಕು.

ಅರ್ಜುನಸ್ತತ್ ತಥಾऽಕಾರ್ಷೀತ್ ಕಿಂ ಪುನಃ ಸರ್ವ ಏವ ತೇ ।
ಸಭ್ರಾತೄನಭಿಜಾನೀಹಿ ಪ್ರೀತ್ಯಾ ಚ ಪ್ರತಿಪಾದಯ ॥೧೯॥

ಅರ್ಜುನನೊಬ್ಬನೇ ಹಾಗೆ ಮಾಡಿದನು. ಇನ್ನು ಪಾಂಡವರೆಲ್ಲರೂ ಸೇರಿ ಏನು ಮಾಡಿಯಾರು? ನನ್ನ ತಮ್ಮನ ಮಕ್ಕಳಾದ ಪಾಂಡವರನ್ನು ಗೌರವಿಸಿ ಪ್ರೀತಿಯಿಂದ ಅವರಿಗೆ ಕೊಡಬೇಕಾದ ರಾಜ್ಯಾಂಶವನ್ನು ಕೊಡುವವನಾಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪಂಚಷಷ್ಟಿತಮೋऽಧ್ಯಾಯಃ ॥

॥ ವ್ಯಾಸಾಭಿಗಮನಪರ್ವಣಿ ಅಷ್ಟಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಅರವತ್ತೈದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತಾರನೆಯ ಅಧ್ಯಾಯ

ದುರ್ಯೋಧನನ ಔದ್ಧತ್ಯದಿಂದ ರಾಜರ ನಿರ್ಗಮನ.
ಸಂಜಯ ಮತ್ತು ವ್ಯಾಸರಿಂದ ಸೈನ್ಯಗಳ ಬಲಾಬಲಕಥನ.

ವೈಶಂಪಾಯನಃ

ದುರ್ಯೋಧನೇ ಧಾರ್ತರಾಷ್ಟ್ರೇ ತದ್ವಚೋ ನಾಭಿನಂದತಿ ।
ತೂಷ್ಣೀಂಭೂತೇಷು ಸರ್ವೇಷು ಸಮುತ್ತಸ್ಥುರ್ನರರ್ಷಭಾಃ ॥೧॥

ವೈಶಂಪಾಯನ– ಧೃತರಾಷ್ಟ್ರಪುತ್ರನಾದ ದುರ್ಯೋಧನನು ಆ ಮಾತುಗಳನ್ನು ಅಂಗೀಕರಿಸದೆ ಇರುತ್ತಿರಲು ಮತ್ತು ಎಲ್ಲರೂ ಮೌನವಾಗಿರುತ್ತಿರಲು ರಾಜರೆಲ್ಲರು ಎದ್ದರು.

ಉತ್ತಿಷ್ಠೇಷು ಮಹಾರಾಜ ಪೃಥಿವ್ಯಾಂ ಸರ್ವರಾಜಸು ।
ರಹಿತೇ ಸಂಜಯಂ ರಾಜಾ ಪರಿಪ್ರಷ್ಟುಂ ಪ್ರಚಕ್ರಮೇ ॥೨॥

ಆಶಂಸಮಾನೋ ವಿಜಯಂ ತೇಷಾಂ ಪುತ್ರವಶಾನುಗಃ ।
ಆತ್ಮನಶ್ಚ ಪರೇಷಾಂ ಚ ಪಾಂಡವಾನಾಂ ಚ ನಿಶ್ಚಯಮ್ ॥೩॥

ಎಲೈ ಜನಮೇಜಯ ಮಹಾರಾಜನೇ, ಪೃಥಿವಿಯ ಎಲ್ಲಾ ರಾಜರೂ ಎದ್ದು ಹೊರಟಮೇಲೆ ಧೃತರಾಷ್ಟ್ರನು ಪುತ್ರವಶವರ್ತಿಯಾಗಿ, ಅವರ ವಿಜಯವನ್ನು ಆಶಿಸುತ್ತಾ, ತನ್ನ ಮತ್ತು ಪಾಂಡವರ ಸೈನ್ಯಗಳ ಬಲಾಬಲಗಳನ್ನು ತಿಳಿದುಕೊಳ್ಳಲು ಏಕಾಂತದಲ್ಲಿ ಸಂಜಯನನ್ನು ಕುರಿತು ಪ್ರಶ್ನೆ ಮಾಡಲು ಪ್ರಾರಂಭಿಸಿದನು.

ಧೃತರಾಷ್ಟ್ರಃ

ಗಾವಲ್ಗಣೇ ಬ್ರೂಹಿ ನಃ ಸಾರಫಲ್ಗು
ಸ್ವಸೇನಾಯಾಂ ಯಾವದಿಹಾಸ್ತಿ ಕಿಂಚಿತ್ ।
ತ್ವಂ ಪಾಂಡವಾನಾಂ ನಿಪುಣಂ ವೇತ್ಥ ಸರ್ವಂ
ಕಿಮೇಷಾಂ ಜ್ಯಾಯಃ ಕಿಮು ತೇಷಾಂ ಕನೀಯಃ ॥೪॥

ಧೃತರಾಷ್ಟ್ರ– ಎಲೈ ಗಾವಲ್ಗಣಿಯೇ, ನಮ್ಮ ಸೈನ್ಯದಲ್ಲಿರುವ ಉತ್ತಮ ಮತ್ತು ಕನಿಷ್ಠವಾದ ಅಂಶಗಳು ಯಾವುವು ಎಂದು ಹೇಳು. ನೀನು ಪಾಂಡವರ ವಿಷಯದಲ್ಲಿ

ಎಲ್ಲವನ್ನೂ ಚೆನ್ನಾಗಿ ತಿಳಿದಿದ್ದೀಯೆ. ಈ ದುರ್ಯೋಧನನ ಸೈನ್ಯವು ಶ್ರೇಷ್ಠವೇ? ಅಥವಾ ಆ ಪಾಂಡವರ ಸೈನ್ಯವು ಕನಿಷ್ಟವೇ?

ತ್ವಮೇತಯೋಃ ಸಾರವಿತ್ ಸರ್ವದರ್ಶೀ
ಧರ್ಮಾರ್ಥಯೋರ್ನಿಪುಣೋ ನಿಶ್ಚಯಜ್ಞಃ ।
ಸ ಮೇ ಪೃಷ್ಟಃ ಸಂಜಯ ಬ್ರೂಹಿ ಸರ್ವಂ
ನಿಯುಧ್ಯಮಾನಾಃ ಕತರೇಽಸ್ಮಿನ್ ನ ಸಂತಿ ॥೫॥

ನೀನು ಸರ್ವಜ್ಞನಾದವನು, ಇಬ್ಬರ ನಿರ್ಧಾರವನ್ನೂ ತಿಳಿದವನು, ಧರ್ಮಾರ್ಥಗಳಲ್ಲಿ ನಿಪುಣನಾದವನು, ಎರಡೂ ಸೈನ್ಯಗಳ ಬಲವನ್ನು ತಿಳಿದವನು. ಎಲೈ ಸಂಜಯನೇ, ನಾನು ನಿನ್ನನ್ನು ಪ್ರಶ್ನೆಮಾಡುತ್ತಿದ್ದೇನೆ. ಯುದ್ಧವನ್ನು ಮಾಡುವ ಯಾರು ಎರಡು ಪಕ್ಷದಲ್ಲಿ ವಿನಾಶವನ್ನು ಹೊಂದುವರು?

ಸಂಜಯಃ

ನ ತ್ವಾಂ ಬ್ರೂಯಾಂ ರಹಿತೇ ಜಾತು ಕಿಂಚಿದ್
ಅಸೂಯಾ ಹಿ ತ್ವಾಂ ಪ್ರಸಹೇತ ರಾಜನ್ ।
ಆನಯಸ್ವ ಪಿತರಂ ಮಹಾವ್ರತಂ
ಗಾಂಧಾರೀಂ ಚ ಮಹೀಷೀಮಾಜಮೀಢ ॥೬॥

ಸಂಜಯ– ಎಲೈ ರಾಜನೇ, ನಾನು ನಿನಗೆ ಏಕಾಂತದಲ್ಲಿ ಏನನ್ನೂ ಹೇಳುವುದಿಲ್ಲ. ಏಕೆಂದರೆ ನಿನಗೆ ಅಸೂಯೆ ಉಂಟಾದೀತು. ನಿನ್ನ ತಂದೆಯಾದ ಮಹಾವ್ರತರಾದ ವ್ಯಾಸರನ್ನೂ ಮತ್ತು ಮಹಿಷಿಯಾದ ಗಾಂಧಾರಿಯನ್ನು ಕರೆತರೆಸು.

ತೌ ತೇಽಸೂಯಾಂ ವಿನಯೇತಾಂ ನರೇಂದ್ರ
ಧರ್ಮಜ್ಞೌ ತೌ ನಿಪುಣೌ ನಿಶ್ಚಯಜ್ಞೌ ।
ತಯೋಸ್ತು ತ್ವಾಂ ಸನ್ನಿಧೌ ತದ್ ವದೇಯಂ
ಕೃತ್ಸ್ನಂ ಮತಂ ಕೇಶವಪಾರ್ಥಯೋರ್ಯತ್ ॥೭॥

ಎಲೈ ನರೇಂದ್ರನೇ, ಧರ್ಮಜ್ಞರೂ, ನಿಪುಣರೂ ಮತ್ತು ಪರಸ್ಪರ ನಿರ್ಧಾರವನ್ನು ತಿಳಿದವರೂ ಆದ ಅವರಿಬ್ಬರೂ ನಿನ್ನ ಅಸೂಯೆಯನ್ನು ಹೋಗಲಾಡಿಸಬಹುದು. ಅವರ ಸನ್ನಿಧಿಯಲ್ಲಿ ಕೃಷ್ಣಾರ್ಜುನರ ಸಮಗ್ರ ಅಭಿಪ್ರಾಯವನ್ನು ನಾನು ಹೇಳುವೆನು.

ವೈಶಂಪಾಯನಃ

ಇತ್ಯುಕ್ತೇನ ಚ ಗಾಂಧಾರೀ ವ್ಯಾಸಶ್ಚಾತ್ರಾಜಗಾಮ ಹ ।
ಆನೀತೌ ವಿದುರೇಣೇಹ ಸಭಾಂ ಶೀಘ್ರಂ ಪ್ರವೇಶಿತೌ ॥೮॥

ವೈಶಂಪಾಯನ– ಹೀಗೆ ಧೃತರಾಷ್ಟ್ರನಿಂದ ಹೇಳಲ್ಪಟ್ಟಾಗ ವಿದುರನು ಗಾಂಧಾರಿಯನ್ನೂ ಮತ್ತು ವ್ಯಾಸರನ್ನೂ ಶೀಘ್ರವಾಗಿ ಕರೆದುಕೊಂಡು ಬಂದು ಸಭೆಯನ್ನು ಪ್ರವೇಶಿಸುವಂತೆ ಮಾಡಿದನು.

ತತಸ್ತನ್ಮತಮಾಜ್ಞಾಯ ಸಂಜಯಸ್ಯಾತ್ಮಜಸ್ಯ ಚ ।
ಅಭ್ಯುಪೇತ್ಯ ಮಹಾಪ್ರಾಜ್ಞಃ ಕೃಷ್ಣದ್ವೈಪಾಯನೋಽಬ್ರವೀತ್ ॥೯॥

ಸಂಪೃಚ್ಛತೇ ಧೃತರಾಷ್ಟ್ರಾಯ ಸಂಜಯ
ಆಚಕ್ಷ್ವ ಸರ್ವಂ ಯಾವದೇಷೋಽನುಯುಂಕ್ತೇ ।
ಸರ್ವಂ ಯಾವದ್ ವೇತ್ಥ ತಸ್ಮಿನ್ ಯಥಾವದ್
ಯಾಥಾತಥ್ಯಂ ವಾಸುದೇವೇಽರ್ಜುನೇ ಚ ॥೧೦॥

ಆಗ ಸಂಜಯನ ಮತ್ತು ತನ್ನ ಪುತ್ರನಾದ ಧೃತರಾಷ್ಟ್ರನ ಅಭಿಪ್ರಾಯವನ್ನು ಸ್ವೀಕರಿಸಿ, ಮಹಾಪ್ರಾಜ್ಞರಾದ ಕೃಷ್ಣದ್ವೈಪಾಯನರಾದ ವ್ಯಾಸರು ಸಂಜಯನನ್ನು ಕುರಿತು ಸಂಜಯನೇ, ಧೃತರಾಷ್ಟ್ರನು ಎಷ್ಟು ಪ್ರಶ್ನೆಯನ್ನು ಕೇಳುತ್ತಾನೆಯೋ ಅದಕ್ಕೆ ಅನುಗುಣವಾಗಿ ಕೃಷ್ಣಾರ್ಜುನರ ಅಭಿಪ್ರಾಯವನ್ನು ಸರಿಯಾಗಿ ತಿಳಿದವನಾಗಿ ಉತ್ತರಗಳನ್ನು ಹೇಳು ಎಂದು ಹೇಳಿದರು.

ಸಂಜಯಃ

ಅರ್ಜುನೋ ವಾಸುದೇವಶ್ಚ ಧನ್ವಿನೌ ಪರಮಾರ್ಚಿತೌ ।
ಕಾಮಾದನ್ಯತ್ರ ಸಂಭೂತೌ ಪೂರ್ವಭಾವಾಯ ಸಮ್ಮಿತೌ ॥೧೧॥

ಸಂಜಯ– ಅರ್ಜುನ ಮತ್ತು ಕೃಷ್ಣ ಇಬ್ಬರೂ ಪರಮಪೂಜಿತರಾದ ಧನುರ್ಧಾರಿಗಳು. ಕಾಮರಹಿತರಾಗಿ ಜನಿಸಿ ಅವರು ಪೂರ್ವಜರ ಸ್ವಭಾವವನ್ನು ಅನುಸರಿಸುವವರು.

ಜನ್ಮಾಂತರಂ ಸಮಾಸ್ಥಾಯ ಯಥಾಯುಕ್ತಂ ಮನಸ್ವಿನಃ ।
ಚಕ್ರಂ ತದ್ ವಾಸುದೇವಸ್ಯ ಮಾಯಯಾ ವರ್ತತೇ ವಿಭೋ ॥೧೨॥

ಎಲೈ ವಿಭುವೇ, ಮನೋಬಲವುಳ್ಳ ವಾಸುದೇವನಾದ ಕೃಷ್ಣನ ಇಚ್ಛೆಯಿಂದ ಈ ಜಗಚ್ಚಕ್ರವು ಜನ್ಮಾಂತರವನ್ನು ಪಡೆದು ಪುನಃ ಪುನಃ ಆವೃತ್ತಿಯನ್ನು ಹೊಂದುತ್ತದೆ.

ನರಕಂ ಶಂಬರಂ ಚೈವ ಕಂಸಂ ಚೈದ್ಯಂ ಚ ಮಾಧವಃ ।
ಜಿತವಾನ್ ಘೋರಸಂಕಾಶಾನ್ ಕ್ರೀಡನ್ನಿವ ಜನಾರ್ದನಃ ॥೧೩॥

ಮಧುವಂಶದಲ್ಲಿ ಅವತರಿಸಿದ ಜನಾರ್ದನನಾದ ಕೃಷ್ಣನು ನರಕ, ಶಂಬರ, ಕಂಸ, ಶಿಶುಪಾಲ ಮೊದಲಾದ ಘೋರರೂಪರಾದವರನ್ನು ಆಟವಾಡುವವನಂತೆ ಸಂಹರಿಸಿದನು.

ಪೃಥಿವೀಂ ಚಾಂತರಿಕ್ಷಂ ಚ ದ್ಯಾಂ ಚೈವ ಪುರುಷೋತ್ತಮಃ ।
ಮನಸೈವ ವಿಸೃಷ್ಟಾತ್ಮಾ ನಯತ್ಯಾತ್ಮವಶಂ ವಶೀ ॥೧೪॥

ಮನಸ್ಸಿನಿಂದಲೇ ಜೀವರಿಗೆ ದೇಹಸಂಬಂಧವನ್ನು ಉಂಟುಮಾಡುವ, ಸರ್ವನಿಯಾಮಕನಾದ ಪುರುಷೋತ್ತಮನಾದ ಅವನು ಭೂಮಿ, ಅಂತರಿಕ್ಷ ಮತ್ತು ಸ್ವರ್ಗಲೋಕವೆಲ್ಲವನ್ನೂ ತನ್ನ ವಶವನ್ನಾಗಿ ಮಾಡಿಕೊಳ್ಳುತ್ತಾನೆ (ಲಕ್ಷಾಲಂಕಾರ).

ಭೂಯೋ ಭೂಯೋ ಹಿ ಯದ್ ರಾಜನ್ ಪೃಚ್ಛಸೇ ಪಾಂಡವಾನ್ ಪ್ರತಿ ॥

ಸ ಯದ್ ಧ್ರುವಂ ಪಾಂಡವೇಷು ವಿದ್ಧಿ ರಾಜಸು ಸತ್ತಮ ।
ಸಾರಾಸಾರಬಲಂ ಜ್ಞಾತುಂ ತತ್ ಸಮಾಸೇನ ಮೇ ಶೃಣು ॥೧೬॥

ಎಲೈ ರಾಜನೇ, ನೀನು ಪುನಃ ಪುನಃ ಪಾಂಡವರ ವಿಷಯದಲ್ಲಿ ಪ್ರಶ್ನೆಯನ್ನು ಮಾಡುತ್ತಿದ್ದೀಯೆ. ಎಲೈ ಶ್ರೇಷ್ಠನಾದವನೇ, ಪಾಂಡವರಲ್ಲಿ ಯಾವುದು ನಿತ್ಯವಾಗಿದೆಯೋ ರಾಜರಲ್ಲಿ ಶ್ರೇಷ್ಠವಾದ ಮತ್ತು ಕನಿಷ್ಠವಾದ ಬಲಗಳು ಯಾವುದಿದೆಯೋ ಅದನ್ನು ತಿಳಿದುಕೊಳ್ಳಲು ಬಯಸುವ ನಿನಗೆ ಸಂಕ್ಷೇಪವಾಗಿ ಹೇಳುತ್ತೇನೆ, ಅದನ್ನು ಕೇಳು.

ಏಕತೋ ವಾ ಜಗತ್ ಕೃತ್ಸ್ನಮೇಕತೋ ವಾ ಜನಾರ್ದನಃ ।
ಸಾರತೋ ಜಗತಃ ಕೃತ್ಸ್ನಾದತಿರಿಕ್ತೋ ಜನಾರ್ದನಃ ॥೧೭॥

ಒಂದುಕಡೆ ಸಮಸ್ತ ಜಗತ್ತು, ಇನ್ನೊಂದು ಕಡೆ ಕೃಷ್ಣಮಾತ್ರ. ಹೀಗೆ ತೂಗಿದರೆ ಜಗತ್ತಿಗಿಂತ ಕೃಷ್ಣನೇ ಅಧಿಕನಾಗುತ್ತಾನೆ.

ಭಸ್ಮ ಕುರ್ಯಾದ್ ಜಗದಿದಂ ಮನಸೈವ ಜನಾರ್ದನಃ ।
ನ ತು ಕೃತ್ಸ್ನಂ ಜಗಚ್ಚಕ್ತಂ ಕಿಂಚಿತ್ ಕರ್ತುಂ ಜನಾರ್ದನೇ ॥೧೮॥

ಜನಾರ್ದನನು ತನ್ನ ಮನಸ್ಸಿನ ಸಂಕಲ್ಪದಿಂದಲೇ ಈ ಜಗತ್ತನ್ನು ಭಸ್ಮಮಾಡಿಯಾನು. ಆದರೆ ಸಮಸ್ತವಾದ ಜಗತ್ತು ಜನಾರ್ದನನಿಗೆ ಏನೂ ಮಾಡಲಾರದು.

ಯತಃ ಸತ್ಯಂ ಯತೋ ಧರ್ಮೋ ಯತೋ ಹ್ರೀರಾರ್ಜವಂ ಯತಃ ।
ತತೋ ಭವತಿ ಗೋವಿಂದೋ ಯತಃ ಕೃಷ್ಣಸ್ತತೋ ಜಯಃ ॥೧೯॥

ಎಲ್ಲಿ ಸತ್ಯವಿದೆಯೋ, ಎಲ್ಲಿ ಧರ್ಮವಿದೆಯೋ, ಎಲ್ಲಿ ನಾಚಿಕೆ ಇದೆಯೋ, ಎಲ್ಲಿ ಆರ್ಜವವಿದೆಯೋ ಅಲ್ಲಿ ಗೋವಿಂದನಿದ್ದಾನೆ. ಎಲ್ಲಿ ಕೃಷ್ಣನಿದ್ದಾನೋ ಅಲ್ಲಿ ಜಯವಿದೆ.

ಪೃಥಿವೀಂ ಚಾಂತರಿಕ್ಷಂ ಚ ದಿವಂ ಚ ಪುರುಷೋತ್ತಮಃ ।
ಮನಸೈವ ವಿಸೃಷ್ಟಾತ್ಮಾ ಕ್ರೀಡನ್ನಿವ ಜನಾರ್ದನಃ ॥೨೦॥

ಮನಸ್ಸಿನಿಂದಲೇ ಆಟವಾಡುವಂತೆ ಜೀವರನ್ನು ಸೃಷ್ಟಿಸಿದ ಪುರುಷೋತ್ತಮನಾದ ಜನಾರ್ದನನು ಭೂಮಿ, ಅಂತರಿಕ್ಷ ಮತ್ತು ಸ್ವರ್ಗಲೋಕವನ್ನು ತನ್ನ ವಶದಲ್ಲಿಟ್ಟು ಕೊಂಡಿದ್ದಾನೆ.

ಸ ಕೃತ್ವಾ ಪಾಂಡವಾನ್ ಸತ್ರಂ ಲೋಕಂ ಸಮ್ಮೋಹಯನ್ನಿವ ।
ಅಧರ್ಮನಿರತಾನ್ ಮೂಢಾನ್ ದಗ್ಧುಮಿಚ್ಛತಿ ತೇ ಸುತಾನ್ ॥೨೧॥

ಅವನು ಪ್ರಪಂಚವನ್ನು ಸಂಮೋಹಗೊಳಿಸುವಂತೆ ಪಾಂಡವರಿಂದ ಒಂದು ಯಜ್ಞವನ್ನು ಮಾಡಿಸಿ, ಅಧರ್ಮನಿರತರೂ ಮತ್ತು ಮೂಢರೂ ಆದ ನಿನ್ನ ಪುತ್ರರನ್ನು ಅದರಲ್ಲಿ ದಹಿಸಲು ಬಯಸುತ್ತಾನೆ.

ಕಾಲಚಕ್ರಂ ಜಗಚ್ಚಕ್ರಂ ಯುಗಚಕ್ರಂ ಚ ಕೇಶವಃ ।
ಆತ್ಮಯೋಗೇನ ಭಗವಾನ್ ಪರಿವರ್ತಯತೇऽನಿಶಮ್ ॥೨೨॥

ಭಗವಂತನಾದ ಕೇಶವನು ಕಾಲಚಕ್ರವನ್ನೂ, ಜಗಚ್ಚಕ್ರವನ್ನೂ ಮತ್ತು ಯುಗಚಕ್ರವನ್ನೂ ತನ್ನ ಸಾಮರ್ಥ್ಯದಿಂದಲೇ ಸತತವಾಗಿ ತಿರುಗಿಸುತ್ತಾನೆ.

ಕಾಲಸ್ಯ ಚ ಸ ಹಿ ಮೃತ್ಯೋಶ್ಚ ಜಂಗಮಸ್ಥಾವರಸ್ಯ ಚ ।
ಈಷ್ಟೇ ಹಿ ಭಗವಾನೇಕಃ ಸತ್ಯಮೇತದ್ ಬ್ರವೀಮಿ ತೇ ॥೨೩॥

ಭಗವಂತನಾದ ಅವನೊಬ್ಬನೇ ಕಾಲಕ್ಕೂ, ಮೃತ್ಯುವಿಗೂ, ಸ್ಥಾವರಜಂಗಮವಾದ ಜಗತ್ತಿಗೂ ಒಡೆಯನಾದವನು. ಈ ಮಾತನ್ನು ನಿನಗೆ ಸತ್ಯವಾಗಿ ಹೇಳುತ್ತಿದ್ದೇನೆ.

ಈಶನ್ನಪಿ ಮಹಾಯೋಗೀ ಸರ್ವಸ್ಯ ಜಗತೋ ಹರಿಃ ।
ಕರ್ಮಾಣ್ಯಾರಭತೇ ಕರ್ತುಂ ಕೀನಾಶ ಇವ ದುರ್ಬಲಃ ॥೨೪॥

ಮಹಾಯೋಗಿಯಾದ ಹರಿಯು ಸರ್ವಜಗತ್ತಿಗೆ ಒಡೆಯನಾದರೂ ದುರ್ಬಲನಾದ ಕೃಷಿಕನಂತೆ ಕಾರ್ಯಗಳನ್ನು ಆರಂಭಿಸುತ್ತಾನೆ.

ತೇನ ವಂಚಯತೇ ಲೋಕಾನ್ ಮಾಯಾಯೋಗೇನ ಕೇಶವಃ ।
ಯೇ ತಮೇವ ಪ್ರಪದ್ಯಂತೇ ನ ತೇ ಮುಹ್ಯಂತಿ ಮಾನವಾಃ ॥೨೫॥

ಕೇಶವನು ಅದರಿಂದ ತನ್ನ ಇಚ್ಛಾಶಕ್ತಿಯಿಂದ ಜೀವನನ್ನು ವಂಚಿಸುತ್ತಾನೆ. ಯಾವ ಮನುಷ್ಯರು ಅವನನ್ನೇ ಶರಣು ಹೊಂದುವರೋ ಅವರು ಮೋಹಕ್ಕೆ ಒಳಗಾಗುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಷಟ್‌ಷಷ್ಟಿತಮೋऽಧ್ಯಾಯಃ ॥

॥ ವ್ಯಾಸಾಭಿಗಮನಪರ್ವಣಿ ಏಕೋನವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಅರವತ್ತಾರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೇಳನೆಯ ಅಧ್ಯಾಯ

ಕೃಷ್ಣನ ಮಹಿಮೆಯನ್ನು ಹೇಳಿ, ಅವನಿಗೆ ಶರಣಾಗತನಾಗುವಂತೆ ಸಂಜಯನ ಒತ್ತಾಯ. ದುರ್ಯೋಧನನಿಂದ ಅದರ ನಿರಾಕರಣೆ ಮತ್ತು ಗಾಂಧಾರಿಯ ಉಗ್ರವಚನಗಳು.

ಧೃತರಾಷ್ಟ್ರಃ

ಕಥಂ ತ್ವಂ ಮಾಧವಂ ವೇತ್ಥ ಸರ್ವಲೋಕಮಹೇಶ್ವರಮ್ ।
ಕಥಮೇನಂ ನ ವೇದಾಹಂ ತನ್ಮಮಾಚಕ್ಷ್ವ ಸಂಜಯ ॥೧॥

ಧೃತರಾಷ್ಟ್ರ– ಎಲೈ ಸಂಜಯನೇ, ಕೃಷ್ಣನು ಸರ್ವಲೋಕಮಹೇಶ್ವರನೆಂದು ನೀನು ಹೇಗೆ ತಿಳಿದಿದ್ದೀಯೆ? ನನಗೆ ಏಕೆ ಅವನ ವಿಷಯದಲ್ಲಿ ಅಂತಹ ಜ್ಞಾನವಿಲ್ಲ ಎಂದು ನನಗೆ ತಿಳಿಸು.

ಸಂಜಯಃ

ಶೃಣು ರಾಜನ್ ನ ತೇ ವಿದ್ಯಾ ಮಮ ವಿದ್ಯಾ ನ ಹೀಯತೇ ।
ವಿದ್ಯಾಹೀನಸ್ತಮೋಧ್ವಸ್ತೋ ನಾಭಿಜಾನಾಸಿ ಕೇಶವಮ್ ॥೨॥

ಸಂಜಯ– ಎಲೈ ರಾಜನೇ, ಕೇಳು. ನಿನಗೆ ಜ್ಞಾನವಿಲ್ಲ. ನನ್ನ ಜ್ಞಾನವು ಎಂದೂ ನಶಿಸಿ ಹೋಗುವುದಿಲ್ಲ. ನೀನು ತಮೋಗುಣಕ್ಕೆ ವಶನಾಗಿ ಜ್ಞಾನಹೀನನಾದುದರಿಂದ ಕೃಷ್ಣನನ್ನು ಸರಿಯಾಗಿ ತಿಳಿಯುತ್ತಿಲ್ಲ.

ವಿದ್ಯಯಾ ತಾತ ಜಾನಾಮಿ ತ್ರಿಯುಗಂ ಮಧುಸೂದನಮ್ ।
ಕರ್ತಾರಮಕೃತಂ ದೇವಂ ಭೂತಾನಾಂ ಪ್ರಭವಾಪ್ಯಯಮ್ ॥೩॥

ಪ್ರೀತಿಪಾತ್ರನೇ, ನನ್ನ ಜ್ಞಾನದಿಂದ ನಾನು ಅವನು ಮೂರು ಯುಗದಲ್ಲಿ ಅವತಾರ ಮಾಡುವವನೆಂದೂ, ಮಧುಸೂದನನೆಂದೂ, ಸೃಷ್ಟ್ಯಾದಿಕರ್ತನೆಂದೂ, ಸ್ವತಃ ಜನ್ಮರಹಿತನೆಂದೂ, ದೇವನೆಂದೂ ಎಲ್ಲ ಜೀವರ ಜನನ-ಮರಣಗಳಿಗೆ ಕಾರಣನೆಂದೂ ತಿಳಿದಿದ್ದೇನೆ.

ಧೃತರಾಷ್ಟ್ರಃ

ಗಾವಲ್ಗಣೇಽತ್ರ ಕಾ ವಿದ್ಯಾ ಯಾತೇ ನಿತ್ಯಾ ಜನಾರ್ದನೇ ।
ಯಯಾ ತ್ವಮಭಿಜಾನಾಸಿ ತ್ರಿಯುಗಂ ಮಧುಸೂದನಮ್ ॥೪॥

ಧೃತರಾಷ್ಟ್ರ– ಗಾವಲ್ಗಣಿಯೇ, ಜನಾರ್ದನನ ವಿಷಯದಲ್ಲಿ ನಿನಗಿರುವ ಜ್ಞಾನವು ಎಂತಹದು? ಅದರ ಬಲದಿಂದ ನೀನು ಕೃಷ್ಣನನ್ನು ತ್ರಿಯುಗನಾದವನು ಮತ್ತು ಮಧುಸೂದನನೆಂದೂ ತಿಳಿದಿರುವೆಯಷ್ಟೆ!

ಸಂಜಯಃ

ಮಾಯಾಂ ನ ಸೇವೇ ಭದ್ರಂ ತೇ ನ ವೃಥಾ ಧರ್ಮಮಾಚರೇ ।
ಶುದ್ಧಭಾವಂ ಗತೋ ಭಕ್ಯಾ ಶಾಸ್ತ್ರಾದ್ ವೇದ್ಮಿ ಜನಾರ್ದನಮ್ ॥೫॥

ಸಂಜಯ– ನಾನು ಯಾವ ಕಪಟವನ್ನೂ ಮಾಡುವುದಿಲ್ಲ. ನಿನಗೆ ಮಂಗಳವಾಗಲಿ. ವ್ಯರ್ಥವಾದ ಧರ್ಮವನ್ನು ಆಚರಿಸುವುದಿಲ್ಲ. ಭಕ್ತಿಯಿಂದ ಶುದ್ಧವಾದ ಮನಸ್ಸನ್ನು ಹೊಂದಿದ್ದೇನೆ. ಶಾಸ್ತ್ರದಿಂದ ಜನಾರ್ದನನನ್ನು ತಿಳಿದಿದ್ದೇನೆ.

ಧೃತರಾಷ್ಟ್ರಃ

ದುರ್ಯೋಧನ ಹೃಷೀಕೇಶಂ ಪ್ರಪದ್ಯಸ್ವ ಜನಾರ್ದನಮ್ ।
ಆಪ್ತೋ ನಃ ಸಂಜಯಸ್ತಾತ ಶರಣಂ ಗಚ್ಛ ಕೇಶವಮ್ ॥೬॥

ಧೃತರಾಷ್ಟ್ರ– ಪ್ರೀತಿಪಾತ್ರನಾದ ದುರ್ಯೋಧನನೇ, ಜನಾರ್ದನನಾದ ಹೃಷೀಕೇಶನಿಗೆ ಶರಣಾಗತನಾಗು. ಸಂಜಯನು ನಮಗೆ ಆಪ್ತನಾದವನು. ಕೃಷ್ಣನಿಗೆ ಶರಣಾಗತನಾಗು.

ದುರ್ಯೋಧನಃ

ಭಗವಾನ್ ದೇವಕೀಪುತ್ರೋ ಲೋಕಾಂಶ್ಚೇನ್ನಿಹನಿಷ್ಯತಿ ।
ಪ್ರವದನ್ನರ್ಜುನೇ ಸಖ್ಯಂ ನಾಹಂ ಗಚ್ಛೇಽದ್ಯ ಕೇಶವಮ್ ॥೭॥

ದುರ್ಯೋಧನ– ಭಗವಂತನಾದ ದೇವಕೀಪುತ್ರನು ಅರ್ಜುನನ ಸ್ನೇಹವನ್ನು ಸಾರುತ್ತಾ ಲೋಕಗಳನ್ನು ಸಂಹರಿಸುವವನಾದರೆ ನಾನು ಅವನಿಗೆ ಶರಣಾಗತನಾಗುವುದಿಲ್ಲ.

ಧೃತರಾಷ್ಟ್ರಃ

ಅವಾಗ್ ಗಾಂಧಾರಿ ಪುತ್ರಸ್ತೇ ಗಚ್ಛತ್ಯೇಷ ಸುದುರ್ಮತಿಃ ।
ಈರ್ಷ್ಯುರ್ದುರಾತ್ಮಾ ಮಾನೀ ಚ ಶ್ರೇಯಸಾಂ ಶಾಸನಾತಿಗಃ ॥೮॥

ಧೃತರಾಷ್ಟ್ರ– ಎಲೌ ಗಾಂಧಾರಿಯೇ, ಬಹಳ ದುರ್ಮತಿಯಾದ ಈ ನಿನ್ನ ಪುತ್ರನು ಅಧೋಗತಿಯನ್ನು ಹೊಂದುವನು. ಅವನು ಅಸೂಯಾಪರ, ದುರಾತ್ಮನಾದವನು, ಅಹಂಕಾರಿ ಮತ್ತು ಶ್ರೇಷ್ಠರಾದವರ ಶಾಸನವನ್ನು ಮೀರುವವನು.

ಗಾಂಧಾರೀ

ಐಶ್ವರ್ಯಕಾಮ ದುಷ್ಪಾತ್ಮನ್ ವೃದ್ಧಾನಾಂ ಶಾಸನಾತಿಗ ।
ಐಶ್ವರ್ಯಜೀವಿತೇ ಹಿತ್ವಾ ಪಿತರಂ ಮಾಂ ಚ ಬಾಲಿಶ ॥೯॥

ವರ್ಧಯನ್ ದುರ್ಹೃದಾಂ ಪ್ರೀತಿಂ ಮಾಂ ಚ ಶೋಕಾಯ ರಂಧ್ರಯನ್ ।
ನಿಹತೋ ಭೀಮಸೇನೇನ ಸ್ಮರ್ತಾಸಿ ವಚನಂ ಪಿತುಃ ॥೧೦॥

ಗಾಂಧಾರಿ– ಐಶ್ವರ್ಯಕಾಮನಾದ ದುಷ್ಪಾತ್ಮನೇ, ದೊಡ್ಡವರ ಶಾಸನವನ್ನು ಮೀರುವವನೇ, ಬಾಲಿಶನಾದವನೇ, ನೀನು ಸಂಪತ್ತನ್ನೂ ಮತ್ತು ಪ್ರಾಣಗಳನ್ನೂ ಬಿಟ್ಟು ನನ್ನನ್ನೂ ಮತ್ತು ನಿನ್ನ ತಂದೆಯನ್ನೂ ಬಿಟ್ಟು, ಶತ್ರುಗಳಿಗೆ ಸಂತೋಷವನ್ನುಂಟು ಮಾಡುತ್ತಾ, ನನ್ನನ್ನು ಶೋಕದಲ್ಲಿ ಕೆಡವಿ, ಭೀಮಸೇನನಿಂದ ಹತನಾಗಿ ನಿನ್ನ ತಂದೆಯ ಮಾತುಗಳನ್ನು ಸ್ಮರಿಸುವಿ.

ವ್ಯಾಸಃ

ಪ್ರಿಯೋಽಸಿ ರಾಜನ್ ಕೃಷ್ಣಸ್ಯ ಧೃತರಾಷ್ಟ್ರ ನಿಬೋಧ ಮೇ ।
ಯಸ್ಯ ತೇ ಸಂಜಯೋ ದೂತೋ ಯಸ್ತಾ ್ವ ಶ್ರೇಯಸಿ ಯೋಕ್ಷ್ಯತೇ ॥

ವ್ಯಾಸರು– ರಾಜನಾದ ಧೃತರಾಷ್ಟ್ರನೇ, ನೀನು ಕೃಷ್ಣನಿಗೆ ಪ್ರಿಯನಾಗಿದ್ದೀಯೆ. ಯಾವ ನಿನಗೆ ಸಂಜಯನು ದೂತನಾಗಿದ್ದಾನೆಯೋ ಮತ್ತು ಯಾವ ಸಂಜಯನು ನಿನ್ನನ್ನು ಶ್ರೇಯೋಮಾರ್ಗದಲ್ಲಿ ಇಡುವವನಾಗಿದ್ದಾನೆಯೋ ಅಂತಹ ನೀನು ನನ್ನ ಮಾತನ್ನು ಕೇಳು.

ಜಾನಾತ್ಯೇಷ ಹೃಷೀಕೇಶಂ ಪುರಾಣಂ ಯಚ್ಚ ವೈ ನವಮ್ ।
ಶುಶ್ರೂಷಮಾಣಮೇಕಾಗ್ರಂ ಮೋಕ್ಷ್ಯತೇ ಮಹತೋ ಭಯಾತ್ ॥೧೨॥

ಸಂಜಯನು ಪ್ರಾಚೀನನಾದ ಮತ್ತು ಈಗ ಇರುವ ಕೃಷ್ಣನನ್ನು ತಿಳಿದಿದ್ದಾನೆ. ಅವನು ಏಕಾಂತಚಿತ್ತದಿಂದ ಕೃಷ್ಣನ ಸೇವೆಯನ್ನು ಮಾಡುವವನಾಗಿ ದೊಡ್ಡ ಭಯಗಳಿಂದ ನಿರ್ಮುಕ್ತನಾಗಿದ್ದಾನೆ.

ವೈಚಿತ್ರವೀರ್ಯ ಪುರುಷಾಃ ಕ್ರೋಧಹರ್ಷಸಮಾವೃತಾಃ ।
ಸಿತಾ ಬಹುವಿಧೈಃ ಪಾಶೈರ್ಯೇನ ತುಷ್ಟಾಃ ಸ್ವಕೈರ್ಧನೈಃ ॥೧೩॥

ವಿಚಿತ್ರವೀರ್ಯನ ಪುತ್ರನಾದ ಎಲೈ ಧೃತರಾಷ್ಟ್ರನೇ, ಜೀವರು ಹರ್ಷ-ಕ್ರೋಧಗಳಿಂದ ಕೂಡಿದವರಾಗಿ ಅನೇಕ ವಿಧವಾದ ಪಾಶಗಳಿಂದ ಕಟ್ಟಲ್ಪಟ್ಟಿದ್ದಾರೆ. ಅದರಿಂದ ಅವರು ತಮ್ಮ ಸಂಪತ್ತಿನಿಂದ ಸಂತುಷ್ಟರಾಗಿದ್ದಾರೆ.

ಯಮಸ್ಯ ವಶಮಾಯಾಂತಿ ಕಾಮಮೂಢಾಃ ಪುನಃ ಪುನಃ ।
ಅಂಧನೇತ್ರಾ ಯಥೈವಾಂಧಾ ನೀಯಮಾನಾಃ ಸ್ವಕರ್ಮಭಿಃ ॥೧೪॥

ಅಂತಹವರು ಕುರುಡನಿಂದ ನಡೆಸಲ್ಪಟ್ಟ ಇನ್ನೊಬ್ಬ ಕುರುಡನಂತೆ ತಮ್ಮ ಕರ್ಮಗಳಿಂದ ನಡೆಸಲ್ಪಟ್ಟವರಾಗಿ ಕಾಮಮೂಢರಾಗಿ ಪುನಃ ಪುನಃ ಯಮನ ವಶರಾಗುತ್ತಾರೆ.

ಏಷ ಏಕಾಯನಃ ಪಂಥಾ ಯೇನ ಯಾಂತಿ ಮನೀಷಿಣಃ ।
ತಂ ದೃಷ್ಟ್ವಾ ಮೃತ್ಯುಮತ್ಯೇತಿ ಮಹಾಂಸ್ತತ್ರ ನ ಸಜ್ಜತೇ ॥೧೫॥

ವಿವೇಕಿಗಳು ನಡೆಯುವ ಈ ದಾರಿಯು ಮುಖ್ಯವಾದುದು. ಅಂತಹ ಮಾರ್ಗದಿಂದ ನಡೆದು ಕೃಷ್ಣನನ್ನು ನೋಡಿ ಮೃತ್ಯುವನ್ನು ದಾಟುತ್ತಾರೆ. ಮೃತ್ಯುವು ಅಂತಹ ಜೀವರ ಮೇಲೆ ಪ್ರಭುತ್ವವನ್ನು ಹೊಂದುವುದಿಲ್ಲ.

ಧೃತರಾಷ್ಟ್ರಃ

ಅಂಗ ಸಂಜಯ ಮೇ ಶಂಸ ಪಂಥಾನಮಕುತೋಭಯಮ್ ।
ಯೇನ ಗತ್ವಾ ಹೃಷೀಕೇಶಂ ಪ್ರಾಪ್ನುಯಾಂ ಶಾಂತಿಮುತ್ತಮಾಮ್ ॥೧೬॥

ಧೃತರಾಷ್ಟ್ರ- ಪ್ರೀತಿಪಾತ್ರನಾದ ಸಂಜಯನೇ, ಯಾವ ಮಾರ್ಗದಲ್ಲಿ ನಡೆದು ಹೃಷೀಕೇಶನನ್ನು ಹೊಂದಿ, ಶ್ರೇಷ್ಠವಾದ ಶಾಂತಿಯನ್ನು ಪಡೆಯುವೆನೋ ಅಂತಹ ನಿರ್ಧಯವಾದ ಮಾರ್ಗವನ್ನು ನನಗೆ ಉಪದೇಶ ಮಾಡುವವನಾಗು.

ಸಂಜಯಃ

ನಾಕೃತಾತ್ಮಾ ಕೃತಾತ್ಮಾನಂ ಜಾತು ವಿದ್ಯಾಜ್ಜನಾರ್ದನಮ್ ।
ಆತ್ಮನಸ್ತು ಕ್ರಿಯೋಪಾಯೋ ನಾನ್ಯತ್ರೇಂದ್ರಿಯನಿಗ್ರಹಮ್ ॥೧೭॥

ಮನೋನಿಗ್ರಹ ಇಲ್ಲದವನು ಮನೋಜಯವುಳ್ಳ ಕೃಷ್ಣನನ್ನು ಎಂದೂ ತಿಳಿಯಲಾರನು. ಸರಿಯಾದ ಕರ್ಮಗಳನ್ನು ಮಾಡಲು ಇಂದ್ರಿಯನಿಗ್ರಹವನ್ನು ಬಿಟ್ಟು ಬೇರೆ ಯಾವ ಉಪಾಯವೂ ಇಲ್ಲ.

ಇಂದ್ರಿಯಾಣಾಮುದೀರ್ಣಾನಾಂ ಕಾಮತ್ಯಾಗೋऽಪ್ರಮಾದತಃ ।
ಅಪ್ರಮಾದೋऽವಿಹಿಂಸಾ ಚ ಜ್ಞಾನಯೋನಿರಸಂಶಯಮ್ ॥೧೮॥

ಹುಚ್ಚೆದ್ದು ಕುಣಿಯುವ ಇಂದ್ರಿಯಗಳ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದ ಆಸೆಯ ತ್ಯಾಗವನ್ನು ಮಾಡಬೇಕು. ಜಾಗರೂಕತೆ ಮತ್ತು ಅಹಿಂಸೆ ಇವೆರಡೂ ನಿಸ್ಸಂಶಯವಾಗಿ ಜ್ಞಾನಕ್ಕೆ ಕಾರಣವಾಗುತ್ತದೆ.

ಇಂದ್ರಿಯಾಣಾಂ ಯಮೇ ಯತ್ತೋ ಭವ ರಾಜನ್ನತಂದ್ರಿತಃ ।
ಬುದ್ಧಿಶ್ಚ ತೇ ಮಾ ಚ್ಯವತು ನಿಯಚ್ಛೈತಾಂ ಯತಸ್ತತಃ ॥೧೯॥

ಎಲೈ ರಾಜನೇ, ಆಲಸ್ಯವಿಲ್ಲದೆ ನಿನ್ನ ಇಂದ್ರಿಯಗಳನ್ನು ನಿಯಂತ್ರಿಸಿ, ಎಚ್ಚರಿಕೆಯಿಂದ ಇರುವವನಾಗು. ನಿನ್ನ ಬುದ್ಧಿಯು ಹಾಳಾಗದಿರಲಿ. ಯಾವ ವಿಷಯಗಳಿಂದ ನಿನ್ನ ಬುದ್ಧಿಯು ವ್ಯಥೆಗೆ ಈಡಾಗುತ್ತದೆಯೋ ಅಂತಹ ವಿಷಯಗಳಿಂದ ನಿನ್ನ ಬುದ್ಧಿಯನ್ನು ನಿಯಂತ್ರಿಸು.

ಏತಜ್ಜ್ಞಾನಂ ವಿದುರ್ವಿಪ್ರಾ ಧ್ರುವಮಿಂದ್ರಿಯಧಾರಣಮ್ ।
ಏತಜ್ಜ್ಞಾನಂ ಚ ಪಂಥಾಶ್ಚ ಯೇನ ಯಾಂತಿ ಮನೀಷಿಣಃ ॥೨೦॥

ಜ್ಞಾನಿಗಳಾದ ಬ್ರಾಹ್ಮಣರು ಈ ಇಂದ್ರಿಯಧಾರಣೆಯನ್ನು ನಿಶ್ಚಿತವಾದ ಜ್ಞಾನಕಾರಣವೆಂದು ತಿಳಿಯುತ್ತಾರೆ. ಇದರಿಂದ ಉಂಟಾಗುವುದು ನಿಶ್ಚಿತವಾದ ಜ್ಞಾನ ಮತ್ತು ಇದು ವಿವೇಕಿಗಳು ಹೋಗುವ ಮಾರ್ಗ.

ಅಪ್ರಾಪ್ಯಃ ಕೇಶವೋ ರಾಜನ್ನಿಂದ್ರಿಯೈರಜಿತೈರ್ನರೈಃ ।
ಆಗಮಾಭಿಗತೋ ಯೋಗೀ ವಶೀ ತತ್ತ್ವೇ ಪ್ರಸೀದತಿ ॥೨೧॥

ಎಲೈ ರಾಜನೇ, ಇಂದ್ರಿಯಜಯವಿಲ್ಲದ ಪುರುಷರು ಎಂದೂ ಕೇಶವನನ್ನು ಹೊಂದುವುದಿಲ್ಲ. ಇಂದ್ರಿಯಜಯವನ್ನು ಹೊಂದಿ, ಆಗಮಗಳನ್ನು ಅಧ್ಯಯನ ಮಾಡಿ, ಅದರಂತೆ ನಡೆಯುವ ಯೋಗಿಯು ತತ್ತ್ವಜ್ಞಾನವನ್ನು ಹೊಂದಿ ಪ್ರಸನ್ನನಾಗುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಸಪ್ತಷಷ್ಟಿತಮೋऽಧ್ಯಾಯಃ ॥

॥ ವ್ಯಾಸಾಭಿಗಮನಪರ್ವಣಿ ವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಅರವತ್ತೇಳನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೆಂಟನೆಯ ಅಧ್ಯಾಯ

ಧೃತರಾಷ್ಟ್ರನನ್ನು ಕುರಿತು ಸಂಜಯನಿಂದ ಕೃಷ್ಣನ ನಾಮಗಳ ನಿರ್ವಚನ.

ಧೃತರಾಷ್ಟ್ರಃ

ಭೂಯೋ ಮೇ ಪುಂಡರೀಕಾಕ್ಷಂ ಸಂಜಯಾಚಕ್ಷ್ವ ತತ್ತ್ವತಃ ।
ನಾಮಕರ್ಮಾರ್ಥವಿತ್ ತಾತ ಪ್ರಾಪ್ನುಯಾಂ ಪುರುಷೋತ್ತಮಮ್ ॥೧॥

ಧೃತರಾಷ್ಟ್ರ– ಎಲೈ ಸಂಜಯನೇ, ನನಗೆ ಪುನಃ ಪುಂಡರೀಕಾಕ್ಷನಾದ ಕೃಷ್ಣನ ಯಥಾರ್ಥವಾದ ಸ್ವರೂಪವನ್ನು ಹೇಳು. ಅವನ ನಾಮಗಳ ಸರಿಯಾದ ಅರ್ಥವನ್ನು ಮತ್ತು ಕರ್ಮಗಳನ್ನು ತಿಳಿದು ಎಲೈ ಪ್ರೀತಿಪಾತ್ರನೇ, ನಾನು ಪುರುಷೋತ್ತಮನಾದ ಅವನನ್ನು ಹೊಂದುವೆನು.

ಸಂಜಯಃ

ಶ್ರುತಂ ಮೇ ವಾಸುದೇವಸ್ಯ ನಾಮನಿರ್ವಚನಂ ಶುಭಮ್ ।
ಯಾವತ್ ತತ್ತ್ವಾಭಿಜಾನೇಽಹಮ್ ಅಪ್ರಮೇಯೋ ಹಿ ಕೇಶವಃ ॥೨॥

ಸಂಜಯ– ನಾನು ವಾಸುದೇವನಾದ ಕೃಷ್ಣನ ನಾಮಗಳ ಶುಭವಾದ ನಿರ್ವಚನಗಳನ್ನು ಕೇಳಿದ್ದೇನೆ. ಅವನು ಪೂರ್ಣವಾಗಿ ತಿಳಿಯಲು ಅಶಕ್ಯನಾದವನು. ನಾನು ಎಷ್ಟನ್ನು ತಿಳಿದಿದ್ದೇನೆಯೋ ಅದನ್ನು ಹೇಳುತ್ತೇನೆ.

ವಸನಾತ್ ಸರ್ವಭೂತಾನಾಂ ವಸುತ್ವಾದ್ ದೇವಯೋನಿತಃ ।
ವಾಸುದೇವಸ್ತತೋ ವೇದ್ಯೋ ವಿಷುತ್ವಾದ್ ವಿಷ್ಣುರುಚ್ಯತೇ ॥೩॥

ಎಲ್ಲರನ್ನೂ ತನ್ನಲ್ಲಿ ವಾಸಮಾಡಿಸಿಕೊಳ್ಳುವುದರಿಂದ ಮತ್ತು ನಿಧಿಯಾದುದರಿಂದ ಮತ್ತು ದೇವಯೋನಿಯನ್ನು ಹೊಂದಿರುವುದರಿಂದ ಅವನನ್ನು ವಾಸುದೇವನೆಂದು ತಿಳಿಯಬೇಕು. ವ್ಯಾಪ್ತನಾದುದರಿಂದ ಅವನನ್ನು ವಿಷ್ಣು ಎಂದು ಕರೆಯುತ್ತಾರೆ.

ಮೌನಾದ್ಧ್ಯಾನಾಚ್ಚ ಯೋಗಾಚ್ಚ ವಿದ್ಧಿ ಭಾರತ ಮಾಧವಮ್ ।
ಸರ್ವಸತ್ತ್ವಮಯತ್ವಾಚ್ಚ ಮಧುಹಾ ಮಧುಸೂದನಃ ॥೪॥

ಮೌನದಿಂದ, ಧ್ಯಾನದಿಂದ ಮತ್ತು ಜ್ಞಾನಯೋಗದಿಂದ ಅವನನ್ನು ಮಾಧವನೆಂದು ತಿಳಿ. ಸರ್ವಸತ್ತ್ವಮಯನಾದುದರಿಂದಲೂ ಮಧುವಿನಂತೆ ಸರ್ವಸಾಮರ್ಥ್ಯಗಳ ಸಾರಸಂಗ್ರಹರೂಪನಾದುದರಿಂದಲೂ ಮಾಧವನೆಂದು ತಿಳಿ. ಮಧುನಾಮಕನಾದ ದೈತ್ಯನ ಸಂಹಾರವನ್ನು ಮಾಡಿದುದರಿಂದ ಅವನು ಮಧುಸೂದನನೆನಿಸುತ್ತಾನೆ.

ಕೃಷಿರ್ಭೂವಾಚಕಃ ಶಬ್ದೋ ಣಶ್ಚ ನಿರ್ವೃತಿವಾಚಕಃ ।
ಕೃಷ್ಣಸ್ತದ್ಭಾವಯೋಗಾಚ್ಚ ಕೃಷ್ಣೋ ಭವತಿ ಶಾಶ್ವತಃ ॥೫॥

ಕೃಷಿ ಎಂಬ ಶಬ್ದವು ಭೂಮಿಯನ್ನು ಹೇಳುತ್ತದೆ. ಣಕಾರವು ಆನಂದವನ್ನು ಹೇಳುತ್ತದೆ. ಅವೆರಡನ್ನೂ ಹೊಂದಿರುವುದರಿಂದ ಎಂದರೆ ಭೂಮಿಯಲ್ಲಿದ್ದರೂ ಸುಖಪೂರ್ಣನಾಗಿರುವುದರಿಂದ ಶಾಶ್ವತನಾದ ಅವನು ಕೃಷ್ಣನೆಂದು ಕರೆಯಲ್ಪಡುತ್ತಾನೆ.

ಪುಂಡರೀಕಂ ಪರಂ ಧಾಮ ನಿತ್ಯಮಕ್ಷಯಮಕ್ಷರಮ್ ।
ತದ್ಭಾವಾತ್ ಪುಂಡರೀಕಾಕ್ಷೋ ದಸ್ಯುತ್ರಾಸಾಜ್ಜನಾರ್ದನಃ ॥೬॥

ಜೀವರ ಹೃದಯ ಪುಂಡರೀಕವು ಅಥವಾ ಮುಕ್ತರ ಹೃದಯಪುಂಡರೀಕವು ಅವನಿಗೆ ನಾಶಹೊಂದದ ನಿವಾಸಸ್ಥಾನವಾಗಿರುವುದರಿಂದ ಅವನು ಪುಂಡರೀಕಾಕ್ಷನೆನಿಸುತ್ತಾನೆ. ದಸ್ಯು ಜನರನ್ನು ಪೀಡಿಸುವುದರಿಂದ ಅವನನ್ನು ಜನಾರ್ದನ ಎಂದು ಕರೆಯುತ್ತಾರೆ.

ಯತಃ ಸತ್ವಂ ನ ಚ್ಯವತೇ ಯಚ್ಚ ಸತ್ವಾನ್ನ ಹೀಯತೇ ।
ತತ್ತ್ವತಃ ಸಾತ್ವತಸ್ತಸ್ಮಾದ್ ಆರ್ಷಭಾದ್ ವೃಷಭೇಕ್ಷಣಃ ॥೭॥

ಯಾವನನ್ನು ಜ್ಞಾನಾದಿ ಸದ್ಗುಣಗಳು ಎಂದೂ ತ್ಯಜಿಸುವುದಿಲ್ಲವೋ ಮತ್ತು ಯಾವನ ಜ್ಞಾನಾದಿ ಸದ್ಗುಣಗಳು ಎಂದೂ ತ್ರಾಸವನ್ನು ಹೊಂದುವುದಿಲ್ಲವೋ ಅಂಥವನನ್ನು ಸಾತ್ವತ ಎಂದು ಕರೆಯುತ್ತಾರೆ. ಶ್ರೇಷ್ಠನಾದುದರಿಂದ ವೃಷಭೇಕ್ಷಣ ಎಂದು ಕರೆಯುತ್ತಾರೆ.

ನ ಜಾಯತೇ ಜನಿತ್ರಾऽಯಮ್ ಅಜಸ್ತಸ್ಮಾದನೀಕಜಿತ್ ।
ದೇವಾನಾಂ ಸುಖಶಂಸಿತ್ವಾದ್ ದಮಾದ್ ದಾಮೋದರೋ ವಿಭುಃ ॥೮॥

ತಂದೆಯಿಂದ ಜನಿಸುವುದಿಲ್ಲವಾದ್ದರಿಂದ ಅವನು ಅಜನಾದವನು. ದೇವತೆಗಳ ಸುಖವನ್ನು ಆಶಂಸನ ಮಾಡುವುದರಿಂದ ಅವನನ್ನು ಅನೀಕಜಿತ್ ಎಂದು ಕರೆಯುತ್ತಾರೆ. ದಮವನ್ನು ಹೊಂದಿರುವುದರಿಂದ ಮತ್ತು ದೋಷದೂರನಾಗಿರುವುದರಿಂದ ವಿಭುವಾದ ಅವನು ದಾಮೋದರನೆಂದು ಕರೆಯಲ್ಪಡುತ್ತಾನೆ.

ಹರ್ಷಾತ್ ಸುಖಾತ್ ಸುಖೈಶ್ವರ್ಯಾದ್ ಹೃಷೀಕೇಶತ್ವಮಶ್ನುತೇ ।
ಬಾಹುಭ್ಯಾಂ ರೋದಸೀ ಬಿಭ್ರನ್ ಮಹಾಬಾಹುರಿತಿ ಸ್ಮೃತಃ ॥೯॥

ಹರ್ಷ, ಸುಖ ಮತ್ತು ಐಶ್ವರ್ಯಗಳನ್ನು ಹೊಂದಿರುವುದರಿಂದ ಅವನು ಹೃಷೀ-ಕ-ಈಶ (ಹೃಷೀಕೇಶ) ನೆಂದು ಕರೆಯಲ್ಪಡುತ್ತಾನೆ. ತನ್ನ ಬಾಹುಗಳಿಂದ ಭೂಲೋಕ ಮತ್ತು ದ್ಯುಲೋಕಗಳನ್ನು ಹಿಡಿದಿರುವುದರಿಂದ ಅವನನ್ನು ಮಹಾಬಾಹುವೆಂದು ಕರೆಯುತ್ತಾರೆ.

ಅಧೋ ನ ಕ್ಷೀಯತೇ ಜಾತು ಯಸ್ಮಾತ್ ತಸ್ಮಾದಧೋಕ್ಷಜಃ ।
ನರಾಣಾಮಯನಾಚ್ಚಾಪಿ ತತೋ ನಾರಾಯಣಃ ಸ್ಮೃತಃ ॥೧೦॥

ಕೆಳಗೆ ಪಾತವನ್ನು ಹೊಂದಿ ಕ್ಷಯವನ್ನು ಹೊಂದುವುದಿಲ್ಲವಾದ್ದರಿಂದ ಅವನು ಅಧೋಕ್ಷಜನಾದವನು. ನರರಿಗೆ ಆಶ್ರಯನಾದುದರಿಂದ ಅವನು ನಾರಾಯಣನೆನಿಸುತ್ತಾನೆ.

ಪೂರಣಾತ್ ಸಾದನಾಚ್ಚಾಪಿ ತತೋ ವೈ ಪುರುಷೋತ್ತಮಃ ॥೧೧॥

ಅಸತಶ್ಚ ಸತಶ್ಚೈವ ಸರ್ವಸ್ಯ ಪ್ರಭವೋಽಪ್ಯಯಃ ॥೧೨॥

ಸರ್ವಸ್ಯ ಚ ಸದಾ ಜ್ಞಾನಾತ್ ಸರ್ವಜ್ಞಂ ತಂ ಪ್ರಚಕ್ಷತೇ ॥೧೩॥

ಯೋಗ್ಯಜೀವರಿಗೆ ಜ್ಞಾನಾದಿಗಳನ್ನು ಪೂರಣಮಾಡುವುದರಿಂದಲೂ, ಜಗತ್ತಿನ ಸೃಷ್ಟಿ-ಸ್ಥಿತಿ-ಸಂಹಾರವನ್ನು ಮಾಡುವುದರಿಂದಲೂ ಅವನು ಪುರುಷೋತ್ತಮ ಎನಿಸುತ್ತಾನೆ. ಅವನು ಎಲ್ಲ ಕಾರ್ಯಕಾರಣಗಳಿಗೂ ಸೃಷ್ಟಿಕರ್ತನೂ ಮತ್ತು ಲಯಕರ್ತನೂ ಆಗಿದ್ದಾನೆ. ಯಾವಾಗಲೂ ಎಲ್ಲ ವಿಷಯಗಳ ಜ್ಞಾನವನ್ನು ಹೊಂದಿರುವುದರಿಂದ ಅವನನ್ನು ಸರ್ವಜ್ಞನೆಂದು ಕರೆಯುತ್ತಾರೆ.

ಸತ್ಯೇ ಪ್ರತಿಷ್ಠಿತಃ ಕೃಷ್ಣಃ ಸತ್ಯಮತ್ರ ಪ್ರತಿಷ್ಠಿತಮ್ ।
ಸತ್ತಾಸತ್ತೇ ಚ ಗೋವಿಂದಃ ತಸ್ಮಾತ್ ಸತ್ಯೋಽಪಿ ನಾಮತಃ ॥೧೪॥

ಕೃಷ್ಣನು ಸತ್ಯದಲ್ಲಿ ಪ್ರತಿಷ್ಠಿತನಾಗಿದ್ದಾನೆ. ಸತ್ಯವು ಕೃಷ್ಣನಲ್ಲಿ ಪ್ರತಿಷ್ಠಿತವಾಗಿದೆ. ಸತ್ವ ಮತ್ತು ಅಸತ್ವಗಳಿಗೆ ಗೋವಿಂದನಾದ ಅವನು ನಿಯಾಮಕನಾದವನು. ಆದ್ದರಿಂದ ಅವನಿಗೆ ಸತ್ಯವೆಂಬ ನಾಮವಿದೆ.

ವಿಷ್ಣುರ್ವಿಕ್ರಮಣಾದ್ ದೇವೋ ಜಯನಾಜ್ಜಿಷ್ಣುರುಚ್ಯತೇ ॥೧೫॥

ವಿಕ್ರಮಣ ಮಾಡುವುದರಿಂದ ಅವನು ವಿಷ್ಣುವೆನಿಸುತ್ತಾನೆ. ಜಯಶೀಲನಾದುದರಿಂದ ಆ ದೇವನು ಜಿಷ್ಣು ಎನಿಸುತ್ತಾನೆ.

ಶಾಶ್ವತತ್ವಾದನಂತಶ್ಚ ಗೋವಿಂದಶ್ಚೇತನಾದಭೂತ್ ।
ಅತತ್ತ್ವಂ ಕುರುತೇ ತತ್ತ್ವಂ ಯೇನ ಮೋಹಯತೇ ಪ್ರಜಾಃ ॥೧೬॥

ಶಾಶ್ವತನಾದುದರಿಂದ ಅವನು ಅನಂತ. ಜ್ಞಾನಪೂರ್ಣನಾದುದರಿಂದ ಅವನು ಗೋವಿಂದ. ಅವನು ತತ್ತ್ವವನ್ನು ಅತತ್ತ್ವವಾಗಿ ಕಾಣುವಂತೆ ಮಾಡುತ್ತಾನೆ. ಅದರಿಂದ ಜೀವರನ್ನು ಮೋಹಿಸುತ್ತಾನೆ.

ಏವಂವಿಧೋ ಧರ್ಮನಿತ್ಯೋ ಭಗವಾನ್ ಮಧುಸೂದನಃ ।
ಆಗಂತಾ ಹಿ ಮಹಾಬಾಹುರಾನೃಶಂಸ್ಯಾರ್ಥಮಚ್ಯುತಃ ॥೧೭॥

ಧರ್ಮನಿತ್ಯನಾದ ಭಗವಂತನಾದ ಮಧುಸೂದನನು ಇಂತಹವನು. ಮಹಾಬಾಹುವಾದ ಆ ಅಚ್ಯುತನು ಒದಗಲಿರುವ ಕ್ರೌರ್ಯವನ್ನು ಪರಿಹರಿಸಲು ಇಲ್ಲಿಗೆ ಬರುವವನಾಗುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಅಷ್ಟಷಷ್ಟಿತಮೋऽಧ್ಯಾಯಃ ॥

॥ ವ್ಯಾಸಾಭಿಗಮನಪರ್ವಣಿ ಏಕವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಅರವತ್ತೆಂಟನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೊಂಬತ್ತನೆಯ ಅಧ್ಯಾಯ

ಕೃಷ್ಣನ ಆಗಮನ ವಾರ್ತೆಯನ್ನು ಕೇಳಿ ಧೃತರಾಷ್ಟ್ರನ ಹರ್ಷವಚನಗಳು.

ಧೃತರಾಷ್ಟ್ರಃ

ಚಕ್ಷುಷ್ಮತಾಂ ವೈ ಸ್ಪೃಹಯಾಮಿ ಸಂಜಯ ।
ದ್ರಕ್ಷ್ಯಂತಿ ಯೋ ವಾಸುದೇವಂ ಸಮೀಪೇ ।
ವಿಭ್ರಾಜಮಾನಂ ವಪುಷಾ ಪರೇಣ
ಪ್ರಕಾಶಯಂತಂ ಪ್ರದಿಶೋ ದಿಶಶ್ಚ ॥೧॥

ಧೃತರಾಷ್ಟ್ರ– ಎಲೈ ಸಂಜಯನೇ, ಯಾರು ತನ್ನ ಶ್ರೇಷ್ಠವಾದ ಶರೀರದಿಂದ ಶೋಭಿಸುವ, ದಿಕ್ಕುವಿದಿಕ್ಕುಗಳನ್ನು ಬೆಳಗುವ ವಾಸುದೇವನಾದ ಕೃಷ್ಣನನ್ನು ಸಮೀಪದಲ್ಲಿ ನೋಡುತ್ತಾರೆಯೋ ಅಂತಹವರ ದೃಷ್ಟಿಯನ್ನು ನಾನು ಬಯಸುತ್ತೇನೆ.

ಸಂಜಯಃ

ವಕ್ತಾ ವಾಚಂ ರಾಜಮಧ್ಯೇ ಸಭಾಯಾಂ
ವೃಷ್ಣಿಶ್ರೇಷ್ಠೋ ಮುನಿಭಿರ್ಭ್ರಾಜಮಾನಃ ॥೨॥

ಸಂಜಯ– ಋಷಿಗಳಿಂದ ಕೂಡಿ ಶೋಭಿಸುವ ವೃಷ್ಣಿಶ್ರೇಷ್ಠನಾದ ಕೃಷ್ಣನು ಸಭೆಯಲ್ಲಿ ರಾಜರ ಮಧ್ಯದಲ್ಲಿ ಮಾತನಾಡುವವನಿದ್ದಾನೆ.

ಧೃತರಾಷ್ಟ್ರಃ

ಈರಯಂತಂ ಭಾರತೀಂ ಭಾರತಾನಾಮ್
ಅಭ್ಯರ್ಚನೀಯಾಂ ಶಂಕರೀಂ ಸೃಂಜಯಾನಾಮ್ ।
ಬುಭೂಷದ್ಭಿರ್ಗ್ರಹಣೀಯಾಮನಿಂದ್ಯಾಂ
ಪರಾಸೂನಾಮಗ್ರಹಣೀಯರೂಪಾಮ್ ॥೩॥

ಧೃತರಾಷ್ಟ್ರ– ಭರತವಂಶದವರಿಗೂ ಮತ್ತು ಸೃಂಜಯರಿಗೂ ಪೂಜನೀಯವಾದ ಸುಖಪ್ರದವಾದ ಶ್ರೇಯಸ್ಕಾಮಿಗಳಿಂದ ಸ್ವೀಕರಿಸಲು ಯೋಗ್ಯವಾದ ಮರಣವು ಪ್ರಾಪ್ತವಾದವರಿಗೆ ಸ್ವೀಕರಿಸಲು ಅಸಾಧ್ಯವಾದ, ಅನಿಂದ್ಯವಾದ ಮಾತುಗಳನ್ನು (ಆಡುವ ಕೃಷ್ಣನಿಗೆ ಶರಣಾಗತನಾಗುತ್ತೇನೆ).

ಸಮುದ್ಯಂತಂ ಸಾತ್ವತಮೇಕವೀರಂ
ಪ್ರಣೇತಾರಮೃಷಭಂ ಯಾದವಾನಾಮ್ ।
ನಿಹಂತಾರಂ ಕ್ಷೋಭಣಂ ಶಾತ್ರವಾಣಾಂ
ಮುಷ್ಣಂತಂ ವೈ ದ್ವಿಷತಾಂ ಚೈವ ತೇಜಃ ॥೪॥

ಸಾತ್ವತಕುಲಕ್ಕೆ ಸೇರಿದ, ಸರ್ವೋತ್ತಮವೀರನಾಗಿ ಉದಯಿಸುವ ಯಾದವರ ನಾಯಕನಾದಂತಹ, ಶ್ರೇಷ್ಠನಾದ, ಶತ್ರುಗಳಿಗೆ ಕ್ಷೋಭೆಯನ್ನುಂಟು ಮಾಡಿ ಅವರನ್ನು ಸಂಹರಿಸುವ, ಶತ್ರುಗಳ ತೇಜಸ್ಸನ್ನು ಅಪಹರಿಸುವ (ಕೃಷ್ಣನಿಗೆ ಶರಣಾಗತನಾಗುವೆನು).

ದ್ರಷ್ಟಾರೋ ಹಿ ಕುರವಸ್ತಂ ಸಮೇತಾ
ಮಹಾತ್ಮಾನಂ ಶತ್ರುಹಣಂ ವರೇಣ್ಯಮ್ ।
ಬ್ರುವಂತಂ ವಾಚಮನೃಶಂಸರೂಪಾಂ
ವೃಷ್ಣಿಶ್ರೇಷ್ಠಂ ಮೋಹಯಂತಂ ಮದೀಯಾನ್ ॥೫॥

ಎಲ್ಲ ಕುರುಗಳೂ ಒಟ್ಟಿಗೆ ಸೇರಿ ಮಹಾತ್ಮನೂ, ಶತ್ರುಸಂಹಾರಕನೂ ಮತ್ತು ಸ್ತೋತ್ರ ಮಾಡಲ್ಪಡಲು ಯೋಗ್ಯನಾದವನೂ, ಕರುಣಾಪೂರ್ಣವಾದ ಮಾತುಗಳನ್ನು ಆಡುವವನೂ, ನನ್ನ ಪುತ್ರರನ್ನು ಮೋಹಿಸುವವನೂ ಆದ ವೃಷ್ಣಿಶ್ರೇಷ್ಠನನ್ನು ನೋಡುವರು.

ಋಷಿಂ ಸನಾತನತಮಂ ವಿಪಶ್ಚಿತಂ
ವಾಚಃ ಸಮುದ್ರಂ ಕಲಶಂ ಯತೀನಾಮ್ ।
ಅರಿಷ್ಟನೇಮಿಂ ಗರುಡಂ ಸುಪರ್ಣಂ
ಹರಿಂ ಪ್ರಜಾನಾಂ ಭುವನಸ್ಯ ಧಾಮ ॥೬॥

ಸನಾತನಜ್ಞಾನಿಯಾದಂತಹ, ಸರ್ವಜ್ಞನಾದಂತಹ, ಅವನ ಗುಣಗಳನ್ನು ಹೇಳುವ ವಾಗ್ವಿಷಯದಲ್ಲಿ ಸಮುದ್ರದಂತೆಯೂ, ಯತಿಗಳ ಕಮಂಡಲುವಿನಂತೆಯೂ ಇರುವ (ಕೆಲವು ಜೀವರಿಂದ ವಿಸ್ತಾರವಾದ ಮಾತುಗಳಿಂದಲೂ, ಕೆಲವು ಜೀವರಿಂದ ಅಲ್ಪವಾದ ವಚನಗಳಿಂದಲೂ ಸ್ತೋತ್ರಮಾಡಲ್ಪಡುವ), ಎಂದೂ ನಾಶವಾಗದ ಸುದರ್ಶನಚಕ್ರವನ್ನು ಹೊಂದಿರುವ, ಗರುಡವಾಹನನಾದ, ಪೂರ್ಣಸುಖೋಪನಾದ, ಪ್ರಜೆಗಳಿಗೆ ಮತ್ತು ಲೋಕಗಳಿಗೆ ಆಶ್ರಯನಾದ ಹರಿಯನ್ನು (ಎಲ್ಲ ಕುರುಗಳೂ ನೋಡುವರು) (ಲಕ್ಷ್ಮಾಲಂಕಾರ).

ಸಹಸ್ರಶೀರ್ಷಂ ಪುರುಷಂ ಪುರಾಣಮ್
ಅನಾದಿಮಧ್ಯಾಂತಮನಂತಕೀರ್ತಿಮ್ ।
ಶುಕ್ರಸ್ಯ ಧಾತಾರಮಜಂ ಚ ನಿತ್ಯಂ
ಪರಂ ಪರೇಷಾಂ ಶರಣಂ ಪ್ರಪದ್ಯೇ ॥೭॥

ಸಹಸ್ರಶೀರ್ಷನೂ, ಪುರಾಣಪುರುಷನೂ, ಆದಿಮಧ್ಯಾಂತರಹಿತನೂ, ಅನಂತಕೀರ್ತಿಯುಳ್ಳವನೂ, ಜಗತ್ತಿಗೆ ಶುಭವನ್ನು ನೀಡುವವನೂ, ಜನ್ಮರಹಿತನೂ, ಶಾಶ್ವತನೂ, ಉತ್ತಮರಿಗಿಂತಲೂ ಉತ್ತಮನಾದವನೂ ಆದ ಆ ಕೃಷ್ಣನಿಗೆ ಶರಣಾಗತನಾಗುತ್ತೇನೆ.

ತ್ರೈಲೋಕ್ಯನಿರ್ಮಾಣಮಜಂ ಜನಿತ್ರಂ
ದೇವಾಸುರಾಣಾಮಥನಾಗರಕ್ಷಸಾಮ್ ।
ನರಾಧಿಪಾನಾಂ ವಿದುಷಾಂ ಪ್ರಧಾನಮ್
ಇಂದ್ರಾನುಜಂ ತಂ ಶರಣಂ ಪ್ರಪದ್ಯೇ ॥೮॥

ಮೂರುಲೋಕಗಳನ್ನೂ ನಿರ್ಮಾಣಮಾಡುವವನೂ, ಜನನರಹಿತನೂ, ಜಗತ್ತಿಗೆ ತಂದೆಯೂ, ದೇವಾಸುರರಿಗಿಂತಲೂ ನಾಗ-ರಾಕ್ಷಸರಿಗಿಂತಲೂ, ಚಕ್ರವರ್ತಿಗಳಿಗಿಂತಲೂ ಜ್ಞಾನಿಗಳಿಗಿಂತಲೂ ಶ್ರೇಷ್ಠನಾದವನೂ ಆದ ಉಪೇಂದ್ರನಾದ ಕೃಷ್ಣನನ್ನು ಶರಣುಹೊಂದುತ್ತೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಉದ್ಯೋಗಪರ್ವಣಿ ಏಕೋನಸಪ್ತತಿತಮೋऽಧ್ಯಾಯಃ ॥

ವ್ಯಾಸಾಭಿಗಮನಪರ್ವಣಿ ದ್ವಾವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಅರವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ಯದುಕ್ತವಾನ್ ಸಂಜಯಾಯ ಯದಿ ದಿತ್ಸತಿ ನಃ ಪಿತಾ ।
ರಾಜ್ಯಂ ತದಾ ತ್ವಮಾಗಚ್ಛ ವಿದುರೋ ವಾ ನ ಚೇನ್ನ ಚ ॥೪೭॥

ತಾವಥಾನಾಗತೌ ಜ್ಞಾತ್ವಾ ಮಂತ್ರಯಾಮಾಸ ಶೌರಿಣಾ ।
ಸೋऽಪ್ಯಾಹಾಹಂ ಗಮಿಷ್ಯಾಮಿ ಸಭಾಯಾಮೃಷಿಸನ್ನಿಧೌ ॥೪೮॥

'ನಮಗೆ ಧೃತರಾಷ್ಟ್ರ ರಾಜ್ಯ ಕೊಡಲು ಒಪ್ಪಿದರೆ ಅದನ್ನು ತಿಳಿಸಲು ನೀನು ಬಾ ಅಥವಾ ವಿದುರ ಬರಲಿ. ಇಲ್ಲದಿದ್ದರೆ ಬೇಡ' ಎಂದು ಧರ್ಮರಾಜ ಸಂಜಯನಿಗೆ ಹೇಳಿದ್ದರಿಂದ ಅವರಿಬ್ಬರೂ ಬಾರದಿದ್ದುದನ್ನು ಕಂಡು ತಾನು ಕೃಷ್ಣನೊಡನೆ ಮಂತ್ರಾಲೋಚನೆ ಮಾಡಿದ. ಶ್ರೀಕೃಷ್ಣನೆಂದ 'ನಾನು ಹೋಗುವೆನು. ರಾಜಸಭೆಯಲ್ಲಿ ಋಷಿಗಳ ಸಮಕ್ಷಮದಲ್ಲಿ ಹಿತಕರವಾದ ಯೋಗ್ಯವಾದ ಮಾತುಗಳನ್ನಾಡುವೆನು' ಎಂದು.

॥ ಸಮಾಪ್ತಂ ವ್ಯಾಸಾಭಿಗಮನಪರ್ವ ॥

★ ★ ★ ★ ★

೬. ಭಗವದ್ಯಾನಪರ್ವ

ಎಪ್ಪತ್ತನೆಯ ಅಧ್ಯಾಯ

ಕೃಷ್ಣನನ್ನು ಕುರಿತು ಯುಧಿಷ್ಠಿರನಿಂದ ಯುದ್ಧಪರಿಣಾಮಗಳ ವರ್ಣನೆ.

ಜನಮೇಜಯಃ

ಪ್ರಯಾತೇ ಸಂಜಯೇ ಸಾಧೋ ಕೌರವಾನ್ ಪ್ರತಿ ವೈ ತದಾ ।
ಕಿಂ ಚಕ್ರುಃ ಪಾಂಡವಾಸ್ತತ್ರ ಮಮ ಪೂರ್ವಪಿತಾಮಹಾಃ ॥೧॥

ಜನಮೇಜಯ– ಎಲೈ ಸಜ್ಜನರಾದ ವೈಶಂಪಾಯನರೇ, ಸಂಜಯನು ಕೌರವರ ಬಳಿಗೆ ಪುನಃ ಹಿಂದಿರುಗುತ್ತಿರಲು ನನ್ನ ಪೂರ್ವಪಿತಾಮಹರಾದ ಪಾಂಡವರು ಅಲ್ಲಿ (ಉಪಪ್ಲಾವ್ಯನಗರದಲ್ಲಿ) ಏನು ಮಾಡಿದರು?

ಏತತ್ ಸರ್ವಂ ದ್ವಿಜಶ್ರೇಷ್ಠ ವಿಸ್ತರಂ ಮಮ ಸತ್ತಮ ।
ಕಥಯಸ್ವ ಪ್ರಯತ್ನೇನ ಶ್ರೋತುಮಿಚ್ಛಾಮಿ ಪಂಡಿತ ॥೨॥

ಎಲೈ ಬ್ರಾಹ್ಮಣಶ್ರೇಷ್ಠರೇ, ವಿದ್ವಾಂಸರೇ, ಸಜ್ಜನರಲ್ಲಿ ಉತ್ತಮರಾದವರೇ, ಇವೆಲ್ಲವನ್ನೂ ವಿಸ್ತಾರವಾಗಿ ನನಗೆ ಹೇಳಿ. ನಾನು ಪ್ರಯತ್ನಪೂರ್ವಕವಾಗಿ ಕೇಳಲು ಬಯಸುತ್ತೇನೆ.

ವೈಶಂಪಾಯನಃ

ಸಂಜಯೇ ಪ್ರತಿಯಾತೇ ತು ಧರ್ಮರಾಜೋ ಯುಧಿಷ್ಠಿರಃ ।
ಅರ್ಜುನಂ ಭೀಮಸೇನಂ ಚ ಮಾದ್ರೀಪುತ್ರೌ ಚ ಭ್ರಾತರೌ ॥೩॥

ವಿರಾಟದ್ರುಪದೌ ಚೈವ ಕೇಕಯಾನಾಂ ಮಹಾರಥಾನ್ ।
ಅಬ್ರವೀದುಪಸಂಗಮ್ಯ ಶಂಖಚಕ್ರಗದಾಧರಮ್ ॥೪॥

ವೈಶಂಪಾಯನ– ಸಂಜಯನು ಹೊರಟು ಹೋದಮೇಲೆ ಯುಧಿಷ್ಠಿರನು, ಅರ್ಜುನ, ಭೀಮಸೇನ, ಸಹೋದರರಾದ ನಕುಲ-ಸಹದೇವರು, ವಿರಾಟ, ದ್ರುಪದ, ಕೇಕಯದೇಶದ ಮಹಾರಥರು ಇವರನ್ನು ಸಂಧಿಸಿ, ಶಂಖಚಕ್ರಗದಾಧರನಾದ ಕೃಷ್ಣನ ವಿಷಯದಲ್ಲಿ ಮಾತನಾಡಿದನು.

ಅಭಿಯಾಚಾಮಹೇ ಗತ್ವಾ ಪ್ರಯಾತುಂ ಕುರುಸಂಸದಮ್ ॥೫॥

ತಥಾ ಭೀಷ್ಮೇಣ ದ್ರೋಣೇನ ಬಾಹ್ಲಿಕೇನ ಚ ಧೀಮತಾ ।
ಅನ್ಯೈಶ್ಚ ಕುರುಭಿಃ ಸಾರ್ಧಂ ನ ಯುದ್ಧ್ಯೇಮಹಿ ಸಂಯುಗೇ ॥೬॥

ಏಷಃ ನಃ ಪ್ರಥಮಃ ಕಲ್ಪ ಏತನ್ನಃ ಶ್ರೇಯ ಉತ್ತಮಮ್ ॥೭॥

ನಾವು ಕೃಷ್ಣನ ಬಳಿಗೆ ಹೋಗಿ ಕುರುಸಭೆಗೆ ಹೋಗುವಂತೆ ಅವನನ್ನು ಪ್ರಾರ್ಥಿಸೋಣ. ಹಾಗೆಯೇ ಅವನು ಭೀಷ್ಮ, ದ್ರೋಣ, ಮೇಧಾವಿಯಾದ ಬಾಹ್ಲಿಕ ಮತ್ತು ಉಳಿದವರ ಜೊತೆಯಲ್ಲೂ ಸಮಾಗಮ ಹೊಂದಲಿ. ನಾವು ಕುರುಗಳ ಜೊತೆಯಲ್ಲಿ ಯುದ್ಧವನ್ನು ಮಾಡುವುದಿಲ್ಲ. ಇದು ನಮಗೆ ಶ್ರೇಷ್ಠವಾದ ಮಾರ್ಗ, ಬಹಳ ಶ್ರೇಯಸ್ಕರವಾದುದು.

ವೈಶಂಪಾಯನಃ

ಏವಮುಕ್ತಾಃ ಸುಮನಸಃ ತೇऽಭಿಜಗ್ಮುರ್ಜನಾರ್ದನಮ್ ।
ಪಾಂಡವೈಃ ಸಹ ರಾಜಾನೋ ಮರುತ್ವಂತಮಿವಾಮರಾಃ ॥೮॥

ತಥಾ ಚ ದುಃಸಹಾಃ ಸರ್ವೈಃ ಸದಸ್ಯಾಸ್ತೇ ನರರ್ಷಭ ॥೯॥

ವೈಶಂಪಾಯನ– ಎಲೈ ನರರ್ಷಭನೇ, ಹೀಗೆ ಹೇಳಲ್ಪಟ್ಟ ಒಳ್ಳೆಯ ಮನಸ್ಸುಳ್ಳ ಎಲ್ಲರಿಂದಲೂ ದುಃಸಹರಾದ ಸಭಾಸದರಾದ ಆ ರಾಜರೆಲ್ಲರೂ ದೇವತೆಗಳು ಇಂದ್ರರ ಜೊತೆಯಲ್ಲಿ ಹೋದಂತೆ ಪಾಂಡವರ ಜೊತೆಯಲ್ಲಿ ಹೋದರು.

ಜನಾರ್ದನಂ ಸಮಾಸಾದ್ಯ ಕುಂತೀಪುತ್ರೋ ಯುಧಿಷ್ಠಿರಃ ।
ಅಭ್ಯಭಾಷತ ದಾಶಾರ್ಹಮ್ ಋಷಭಂ ಸರ್ವಸಾತ್ವತಾಮ್ ॥೧೦॥

ಕುಂತೀಪುತ್ರನಾದ ಯುಧಿಷ್ಠಿರನು ಜನಾರ್ದನನನ್ನು ಸಮೀಪಿಸಿ, ಸರ್ವಸಾತ್ವತ ಶ್ರೇಷ್ಠನಾದ ಆ ದಾಶಾರ್ಹನನ್ನು ಕುರಿತು ಹೀಗೆ ಮಾತನಾಡಿದನು.

ಅಯಂ ಸ ಕಾಲಃ ಸಂಪ್ರಾಪ್ತೋ ಮಿತ್ರಾರ್ಥೇ ಹಿ ಜನಾರ್ದನ ।
ನ ಚ ತ್ವದನ್ಯಂ ಪಶ್ಯಾಮಿ ಯೋ ನ ಆಪತ್ಸು ತಾರಯೇತ್ ॥೧೧॥

ಜನಾರ್ದನನೇ, ಮಿತ್ರರಿಗೆ ಸಹಾಯಮಾಡುವ ಈ ಕಾಲವು ಬಂದೊದಗಿದೆ. ನಿನ್ನನ್ನು ಬಿಟ್ಟು ನಮ್ಮನ್ನು ಆಪತ್ತಿನಿಂದ ಪಾರುಮಾಡುವವರು ಬೇರೆ ಯಾರೂ ಕಾಣುವುದಿಲ್ಲ.

ತ್ವಾಂ ಹಿ ಮಾಧವ ಸಂಶ್ರಿತ್ಯ ನಿರ್ಭಯಾ ಮೋಹದರ್ಪಿತಮ್ ।
ಧಾರ್ತರಾಷ್ಟ್ರಂ ಸಹಾಮಾತ್ಯಂ ಸ್ವಮಂಶಮನುಯುಂಕ್ಷ್ಮಹೇ ॥೧೨॥

ಎಲೈ ಮಾಧವನೇ, ನಿನ್ನನ್ನು ಆಶ್ರಯಿಸಿ ನಾವು ನಿರ್ಭಯರಾಗಿ ಮೋಹದರ್ಪಿತರಾದ ಅಮಾತ್ಯರಿಂದ ಕೂಡಿದ ದುರ್ಯೋಧನನ ಬಳಿಯಲ್ಲಿನಮ್ಮ ಭಾಗವನ್ನು ಕೇಳುವವರಾಗುತ್ತೇವೆ.

ಯಥಾ ಹಿ ಸರ್ವಾನ್ಸಾಪತ್ಸು ಪಾಸಿ ವೃಷ್ಣೀನರಿಂದಮ ।
ತಥಾ ತೇ ಪಾಂಡವಾ ರಕ್ಷ್ಯಾಃ ಪಾಹ್ಯಸ್ಮಾನ್ ಮಹತೋ ಭಯಾತ್ ॥

ಎಲೈ ಅರಿಂದಮನೇ, ವೃಷ್ಣಿಗಳನ್ನು ಎಲ್ಲಾ ಆಪತ್ತುಗಳಲ್ಲಿ ರಕ್ಷಣೆ ಮಾಡಿದಂತೆ ಪಾಂಡವರೂ ಸಹ ನಿನ್ನಿಂದ ರಕ್ಷಿಸಲ್ಪಡಬೇಕಾದವರು. ನಮಗೆ ಒದಗಿರುವ ಮಹಾಭಯದಿಂದ ನಮ್ಮನ್ನು ರಕ್ಷಿಸುವವನಾಗು.

ಶ್ರೀಭಗವಾನ್

ಅಹಮಸ್ಮಿ ಮಹಾಬಾಹೋ ಬ್ರೂಹಿ ಯತ್ ತೇ ವಿವಕ್ಷಿತಮ್ ।
ಕರಿಷ್ಯಾಮಿ ಹಿ ತತ್ ಸರ್ವಂ ಯತ್ ತ್ವಂ ವಕ್ಷ್ಯಸಿ ಭಾರತ ॥೧೪॥

ಶ್ರೀಭಗವಾನ್– ಮಹಾಬಾಹುವೇ, ನಾನು ಸಿದ್ಧನಾಗಿದ್ದೇನೆ. ನಿನ್ನ ಮನಸ್ಸಿನಲ್ಲಿ ಏನಿದೆಯೋ ಅದನ್ನು ಹೇಳು. ಎಲೈ ಭಾರತನೇ, ನೀನು ಏನು ಹೇಳುವಿಯೋ ಅವೆಲ್ಲವನ್ನೂ ನಾನು ಮಾಡುವೆನು.

ಯುಧಿಷ್ಠಿರಃ

ಶ್ರುತಂ ತೇ ಧೃತರಾಷ್ಟ್ರಸ್ಯ ಸಪುತ್ರಸ್ಯ ಚಿಕೀರ್ಷಿತಮ್ ।
ಏತದ್ಧಿ ಸಕಲಂ ಕೃಷ್ಣ ಸಂಜಯೋ ಮಾಂ ಯದಬ್ರವೀತ್ ॥೧೫॥

ಮೃದುಪೂರ್ವಂ ಸಾಮಮಿಶ್ರಂ ಸಾಂತ್ವಮುಗ್ರಂ ಚ ಮಾಧವ ।
ನ ತು ತನ್ನ್ಯಾಯಮಾಸ್ಥಾಯ ಗರ್ಹಿತಾಶ್ಚ ತತೋ ವಯಮ್ ॥೧೬॥

ಯುಧಿಷ್ಠಿರ– ಕೃಷ್ಣನೇ, ಪುತ್ರಸಹಿತನಾದ ಧೃತರಾಷ್ಟ್ರನ ಅಭಿಪ್ರಾಯವನ್ನು ಸಂಜಯನು ಹೇಳಿದಂತೆ ಎಲ್ಲವನ್ನೂ ನೀನು ಕೇಳಿದ್ದೀಯೆ. ಸಂಜಯನು ಮೊದಲು ಮೃದುವಾಗಿ ಸಾಮೋಪಾಯಮಿಶ್ರಿತವಾದ ಸಾಂತ್ವನವನ್ನೂ, ಕೊನೆಯಲ್ಲಿ ಉಗ್ರಮಾತನ್ನು ಆಡಿದರೂ ಅವರು ನ್ಯಾಯವಾಗಿ ಆಡಿದ ಆ ಮಾತುಗಳನ್ನು ಸ್ವೀಕರಿಸದೆ ನಮ್ಮನ್ನು ನಿಂದಿಸಿದ್ದಾರೆ.

ತನ್ಮತಂ ಧೃತರಾಷ್ಟ್ರಸ್ಯ ಸೋಽನ್ಯಾತ್ಮಾ ವಿವೃತಾಂತರಃ ।
ಯಥೋಕ್ತಂ ದೂತ ಆಚಷ್ಟೇ ವಧ್ಯಃ ಸ್ಯಾದನ್ಯಥಾ ಬ್ರುವನ್ ॥೧೭॥

ದುರ್ಯೋಧನನಲ್ಲಿ ಮನಸ್ಸುಳ್ಳ ಧೃತರಾಷ್ಟ್ರನು ತನ್ನ ಅಂತರಂಗವನ್ನು ಬಯಲು ಪಡಿಸಿದವನಾಗಿ ಅಂತಹ ಅಭಿಪ್ರಾಯವನ್ನು ಹೊಂದಿದ್ದಾನೆ. ದೂತನಾದವನು ಸಂದೇಶವನ್ನು ನೀಡಿದಂತೆಯೇ ಹೇಳಬೇಕು. ಅದನ್ನು ವ್ಯತ್ಯಾಸ ಮಾಡಿದರೆ ಅವನು ವಧ್ಯನಾಗುತ್ತಾನೆ.

ಅಪ್ರದಾನೇನ ರಾಜ್ಯಸ್ಯ ಶಾಂತಿಮಸ್ಮಾಸು ಮಾರ್ಗತೇ ।
ಲುಬ್ಧಃ ಪಾಪೇನ ಮನಸಾ ಚರನ್ನಸಮಮಾತ್ಮನಃ ॥೧೮॥

ಪಾಪವನ್ನು ಹೊಂದಿದ ಮನಸ್ಸಿನಿಂದ ರಾಜ್ಯದ ಮೇಲೆ ಲೋಭವುಳ್ಳವನಾಗಿ ತನ್ನ ಸ್ಥಾನಕ್ಕೆ ಅನುಗುಣವಾಗಿ ನಡೆದುಕೊಳ್ಳದೆ ಧೃತರಾಷ್ಟ್ರನು ನಮಗೆ ರಾಜ್ಯವನ್ನು ಕೊಡದೆ ಶಾಂತಿಯನ್ನು ಬಯಸುತ್ತಾನೆ.

ಯತ್ ತದ್ ದ್ವಾದಶವರ್ಷಾಣಿ ವನೇಷ್ವಧ್ಯುಷಿತಾ ವಯಮ್ ।
ಛದ್ಮನಾ ಶರದಂ ಚೈಕಾಂ ಧೃತರಾಷ್ಟ್ರಸ್ಯ ಶಾಸನಾತ್ ॥೧೯॥

ಸ್ಥಾತಾ ನಃ ಸಮಯೇ ತಸ್ಮಿನ್ ಧೃತರಾಷ್ಟ್ರ ಇತಿ ಪ್ರಭೋ ।
ನಾಹಾಸ್ಮ ಸಮಯಂ ಕೃಷ್ಣ ತದ್ಧಿ ನೋ ಬ್ರಾಹ್ಮಣಾ ವಿದುಃ ॥೨೦॥

ಎಲೈ ಪ್ರಭುವೇ, ಧೃತರಾಷ್ಟ್ರನು ನಮಗೆ ಮಾಡಿದ ಪ್ರತಿಜ್ಞೆಯಂತೆ ನಡೆದುಕೊಳ್ಳುವನು ಎಂದು ಭಾವಿಸಿ ಅವನ ಶಾಸನದಂತೆ ನಾವು ಹನ್ನೆರಡು ವರ್ಷಗಳ ಕಾಲ ವನವಾಸವನ್ನೂ, ಒಂದು ವರ್ಷದ ಕಾಲ ಅಜ್ಞಾತವಾಸವನ್ನೂ ಮಾಡಿದೆವು. ಕೃಷ್ಣನೇ, ನಮ್ಮ ಪ್ರತಿಜ್ಞೆಯನ್ನು ನಾವು ತ್ಯಜಿಸಲಿಲ್ಲ. ಅದನ್ನು ಬ್ರಾಹ್ಮಣರು ತಿಳಿದಿದ್ದಾರೆ.

ವೃದ್ಧೋ ರಾಜಾ ಧೃತರಾಷ್ಟ್ರಃ ಸ್ವಧರ್ಮಂ ನಾನುಪಶ್ಯತಿ ।
ಪಶ್ಯನ್ ವಾ ಪುತ್ರಗೃಧ್ನುತ್ವಾನ್ಮಂದಸ್ಯಾನ್ವೇತಿ ಶಾಸನಮ್ ॥೨೧॥

ವೃದ್ಧನಾದ ಧೃತರಾಷ್ಟ್ರನಿಗೆ ತನ್ನ ಸ್ವಧರ್ಮವು ಕಾಣುತ್ತಿಲ್ಲ. ಅಥವಾ ಸ್ವಧರ್ಮವು ಕಂಡರೂ ಪುತ್ರನ ಮೇಲಿನ ಮೋಹದಿಂದ ಮಂದನಾದ ಅವನ ಶಾಸನವನ್ನು ಅನುಸರಿಸುತ್ತಿದ್ದಾನೆ.

ಸುಯೋಧನಮತೇ ತಿಷ್ಠನ್ ರಾಜಾಽಸ್ಮಾಸು ಜನಾರ್ದನ ।
ಮಿಥ್ಯಾ ಚರತಿ ಲುಬ್ಧಃ ಸನ್ ಚರನ್ ಹಿ ಪ್ರಿಯಮಾತ್ಮನಃ ॥೨೨॥

ಎಲೈ ಜನಾರ್ದನನೇ, ರಾಜನು ಸುಯೋಧನನ ಅಭಿಪ್ರಾಯದಂತೆ ನಡೆದುಕೊಳ್ಳುವವನಾಗಿ, ರಾಜ್ಯಲೋಭದಿಂದ ತನಗೆ ಪ್ರಿಯವನ್ನು ಮಾಡಿಕೊಳ್ಳುತ್ತಾ ನಮ್ಮ ಜೊತೆಯಲ್ಲಿ ಕಪಟದಿಂದ ವರ್ತಿಸುತ್ತಿದ್ದಾನೆ.

ಇತೋ ದುಃಖತರಂ ಕಿಂ ನು ಯದಹಂ ಮಾತರಂ ತತಃ ।
ಸಂವಿಧಾತುಂ ನ ಶಕ್ನೋಮಿ ಮಿತ್ರಾಣಾಂ ವಾ ಜನಾರ್ದನ ॥೨೩॥

ಎಲೈ ಜನಾರ್ದನನೇ, ನನಗೆ ತಾಯಿಯಾದ ಕುಂತಿಯನ್ನಾಗಲೀ ಅಥವಾ ಮಿತ್ರರಾದ ರಾಜರನ್ನಾಗಲೀ ಸಮಾಧಾನ ಮಾಡಲು ಸಾಧ್ಯವಾಗುತ್ತಿಲ್ಲ ಎಂಬುದಕ್ಕಿಂತ ದುಃಖತರವಾದುದು ಏನಿದೆ?

ಕಾಶಿಭಿಶ್ಚೇದಿಪಾಂಚಾಲೈರ್ಮತ್ಸ್ಯೈಶ್ಚ ಮಧುಸೂದನ ।
ಭವತಾ ಚೈವ ನಾಥೇನ ಪಂಚ ಗ್ರಾಮಾ ವೃತಾ ಮಯಾ ॥೨೪॥

ಮಧುಸೂದನನೇ, ನಿನ್ನನ್ನು ನಾಥನನ್ನಾಗಿ ಮಾಡಿಕೊಂಡು ನಾನು ಕಾಶಿರಾಜರು, ಚೇದಿರಾಜರು, ಪಾಂಚಾಲ-ಮತ್ಸ್ಯರಾಜರ ಜೊತೆಯಲ್ಲಿ ಐದುಗ್ರಾಮಗಳನ್ನು ಕೇಳಿದೆನು.

ಕುಶಸ್ಥಲಂ ವೃಕಸ್ಥಲಂ ವಾಸಂತೀಂ ವಾರಣಾವತಮ್ ।
ಅವಸಾನಂ ಚ ಗೋವಿಂದ ಕಿಂಚಿದೇವ ಚ ಪಂಚಮಮ್ ॥೨೫॥

ಪಂಚ ನಸ್ತಾತ ದೀಯಂತಾಂ ಗ್ರಾಮಾ ವಾ ನಗರಾಣಿ ವಾ ।
ವಸೇಮ ಸಹಿತಾ ಯೇಷು ಮಾ ಚ ನೋ ಭರತಾ ನಶನ್ ॥೨೬॥

ಗೋವಿಂದನೇ, ಕುಶಸ್ಥಲ, ವೃಕಸ್ಥಲ, ವಾಸಂತಿ (ಆಸಂದಿ- ಏಕಚಕ್ರನಗರ), ವಾರಣಾವತ ಮತ್ತು ಐದನೆಯ ಯಾವುದಾದರೊಂದು ಗ್ರಾಮ- ಹೀಗೆ ಪ್ರೀತಿಪಾತ್ರನೇ, ಯಾವುದಾದರೂ ಐದುಗ್ರಾಮಗಳನ್ನು ಅಥವಾ ನಗರಗಳನ್ನು ನಮಗೆ ನೀಡಿ. ನಾವೆಲ್ಲರೂ ಅಲ್ಲಿ ಒಟ್ಟಿಗೆ ವಾಸಮಾಡುತ್ತೇವೆ, ಭರತರು ನಾಶವಾಗದಿರಲಿ (ಎಂದು ಹೇಳಿದೆನು).

ನ ಚ ತಾನಪಿ ದುಷ್ಪಾತ್ಮಾ ಧಾರ್ತರಾಷ್ಟ್ರೋಽನುಮನ್ಯತೇ ।
ಸ್ವಾಮ್ಯಮಾತ್ಮನಿ ಮತ್ವಾ ಸ ತತೋ ದುಃಖತರಂ ನು ಕಿಮ್ ॥೨೭॥

ದುಷ್ಪಾತ್ಮನಾದ ದುರ್ಯೋಧನನು ತಾನೇ ಎಲ್ಲದಕ್ಕೂ ಒಡೆಯನೆಂದು ತಿಳಿದು ಅದಕ್ಕೂ ಸಮ್ಮತಿಸುವುದಿಲ್ಲ. ಇದಕ್ಕಿಂತ ದುಃಖತರವಾದುದು ಏನಿದೆ?

ಕುಲೇ ಜಾತಸ್ಯ ವೃದ್ಧಸ್ಯ ಪರವಿತ್ತೇಷು ಗೃದ್ಧ್ಯತಃ ।
ಲೋಭಃ ಪ್ರಜ್ಞಾನಮಾಹಂತಿ ಪ್ರಜ್ಞಾ ಹಂತಿ ಹತಾ ಹ್ರಿಯಮ್ ॥೨೮॥

ಸತ್ಕುಲದಲ್ಲಿ ಪ್ರಸೂತನಾಗಿ, ವೃದ್ಧನಾಗಿ, ಇನ್ನೊಬ್ಬರ ಸಂಪತ್ತನ್ನು ಬಯಸುವವನಿಗೆ ಲೋಭವು ಪ್ರಜ್ಞೆಯನ್ನು ನಾಶಮಾಡುತ್ತದೆ. ಹತವಾದ ಪ್ರಜ್ಞೆಯು ದುಷ್ಪಕಾರ್ಯವನ್ನು ಮಾಡುವುದರಲ್ಲಿ ನಾಚಿಕೆಯನ್ನು ನಾಶಮಾಡುತ್ತದೆ.

ಹ್ರೀರ್ಹತಾ ಬಾಧತೇ ಧರ್ಮಂ ಧರ್ಮೋ ಹಂತಿ ಹತಃ ಶ್ರಿಯಮ್ ।
ಶ್ರೀರ್ಹತಾ ಪುರುಷಂ ಹಂತಿ ಪುರುಷಶ್ಚ ಹತಃ ಸ್ವತಾಮ್ ॥೨೯॥

ಹತವಾದ ನಾಚಿಕೆಯು ಧರ್ಮವನ್ನು ಬಾಧಿಸುತ್ತದೆ. ಬಾಧಿಸಲ್ಪಟ್ಟ ಧರ್ಮವು ಕಾಂತಿಯನ್ನು ನಾಶಮಾಡುತ್ತದೆ. ಹತವಾದ ಕಾಂತಿಯು ಪುರುಷನನ್ನು ನಾಶಮಾಡುತ್ತದೆ. ಹತನಾದ ಪುರುಷನು ತನ್ನ ಸಂಪತ್ತೆಲ್ಲವನ್ನೂ ಕಳೆದುಕೊಳ್ಳುತ್ತಾನೆ.

ಅಸ್ವತೋ ವಿನಿವರ್ತಂತೇ ಜ್ಞಾತಯಃ ಸುಹೃದೋ ದ್ವಿಜಾಃ ।
ಅಪುಷ್ಪಾದಫಲಾದ್ ವೃಕ್ಷಾದ್ ಯಥಾ ಕೃಷ್ಣ ಪತತ್ರಿಣಃ ॥೩೦॥

ಎಲೈ ಕೃಷ್ಣನೇ, ಪುಷ್ಪ-ಫಲಗಳಿಲ್ಲದ ಮರಗಳಿಂದ ಪಕ್ಷಿಗಳು ನಿವೃತ್ತವಾಗುವಂತೆ ಧನಹೀನನಾದ ಮನುಷ್ಯರನ್ನು ಅಥವಾ ರಾಜರನ್ನು ಜ್ಞಾತಿಗಳು, ಸುಹೃದರು ಮತ್ತು ಬ್ರಾಹ್ಮಣರು ತ್ಯಜಿಸುತ್ತಾರೆ.

ಏತಚ್ಚ ಮರಣಂ ತಾತ ಯದಸ್ಮಾನ್ ಪತಿತಾದಿವ ।
ಜ್ಞಾತಯೋ ವಿನಿವರ್ತಂತೇ ಪ್ರೇತಸತ್ಕಾದಿವಾಸವಃ ॥೩೧॥

ಎಲೈ ಪ್ರೀತಿಪಾತ್ರನೇ, ಪತಿತನನ್ನು ಎಲ್ಲರೂ ತ್ಯಜಿಸುವಂತೆ, ಶವದಿಂದ ಪ್ರಾಣಗಳು ಹಿಂದೆ ಸರಿದಂತೆ ಜ್ಞಾತಿಗಳು ನಮ್ಮನ್ನು ತೊರೆಯುವುದೇ ಮರಣ.

ನಾತಃ ಪಾಪೀಯಸೀಂ ಕಾಂಶ್ಚಿದವಸ್ಥಾಂ ಶಂಬರೋಽಬ್ರವೀತ್ ।
ಯಚ್ಚ ನೈವೋದ್ಯತಃ ಪ್ರಾತರ್ಭೋಜನಂ ಪ್ರತಿದೃಶ್ಯತೇ ॥೩೨॥

ಪ್ರಾತಃಕಾಲದಲ್ಲಿ ಎದ್ದು ಸನ್ನದ್ಧನಾಗಿ ತನಗೆ ಯಾವ ಆಹಾರವನ್ನೂ ಕಾಣದಿರುವುದಕ್ಕಿಂತ ದೊಡ್ಡ ಪಾಪದ ಅವಸ್ಥೆಯು ಇಲ್ಲವೆಂದು ಅರ್ಥಶಾಸ್ತ್ರಜ್ಞನಾದ ಶಂಬರನು ಹೇಳುತ್ತಾನೆ.

ಧನಮಾಹುಃ ಪರಂ ಧರ್ಮಂ ಧನೇ ಸರ್ವಂ ಪ್ರತಿಷ್ಠಿತಮ್ ।
ಜೀವಂತಿ ಧನಿನೋ ಲೋಕೇ ಮೃತಾ ಯೇ ತ್ವಧನಾ ನರಾಃ ॥೩೩॥

ಧನವನ್ನು ಶ್ರೇಷ್ಠವಾದ ಧರ್ಮವೆಂದು ಹೇಳುತ್ತಾರೆ. ಎಲ್ಲವೂ ಧನವನ್ನು ಆಶ್ರಯಿಸಿಕೊಂಡಿದೆ. ಧನಿಕರಾದವರೇ ಲೋಕದಲ್ಲಿ ಜೀವನವನ್ನು ಮಾಡುತ್ತಾರೆ. ನಿರ್ಧನರಾದ ಮನುಷ್ಯರು ಮೃತಪ್ರಾಯರು.

ಯೇ ಧನಾದಪಕರ್ಷಂತಿ ನರಂ ಸ್ವಬಲಮಾಶ್ರಿತಃ ।
ತೇ ಧರ್ಮಮರ್ಥಂ ಕಾಮಂ ಚ ಪ್ರಮಥ್ನಂತಿ ನರಂ ಚ ತಮ್ ॥೩೪॥

ಯಾರು ತಮ್ಮ ಬಲವನ್ನು ಆವಲಂಬಿಸಿ, ಇನ್ನೊಬ್ಬ ಮನುಷ್ಯನ ಧನವನ್ನು ಕಸಿದುಕೊಳ್ಳುತ್ತಾರೆಯೋ ಅವರು ಆ ಮನುಷ್ಯನ ಧರ್ಮವನ್ನೂ, ಅರ್ಥವನ್ನೂ ಮತ್ತು ಕಾಮವನ್ನೂ ನಾಶಮಾಡುತ್ತಾರೆ.

ಏತಾಮವಸ್ಥಾಂ ಪ್ರಾಪ್ಯೈಕೇ ಮರಣಂ ವವ್ರಿರೇ ಜನಾಃ ।
ಗ್ರಾಮಾನೇಕೇ ವನಾಯೈಕೇ ನಾಶಾಯೈವ ಪ್ರವವ್ರಜುಃ ॥೩೫॥

ಇಂತಹ ಅವಸ್ಥೆಯನ್ನು ಹೊಂದಿದ ಕೆಲವರು ಮರಣವನ್ನು ಬಯಸಿದರು. ಕೆಲವರು ಆತ್ಮನಾಶಕ್ಕಾಗಿ ಗ್ರಾಮಗಳಿಗೂ, ಇನ್ನು ಕೆಲವರು ವನಗಳಿಗೂ ಹೊರಟುಹೋದರು.

ಆತ್ಮಾನಮೇಕೇ ತ್ಯಕ್ಷ್ಯಂತಿ ಯಾಂತ್ಯನ್ಯೇ ದ್ವಿಷತಾಂ ವಶಮ್ ।
ದಾಸ್ಯಮೇಕೇ ಚ ಗಚ್ಛಂತಿ ಪರೇಷಾಮರ್ಥಹೇತವೇ ॥೩೬॥

ಕೆಲವರು ದೇಹತ್ಯಾಗವನ್ನು ಮಾಡುತ್ತಾರೆ. ಇನ್ನು ಕೆಲವರು ಶತ್ರುಗಳ ವಶರಾಗುತ್ತಾರೆ. ಇನ್ನು ಕೆಲವರು ಧನದ ನಿಮಿತ್ತದಿಂದ ಪರರಿಗೆ ದಾಸರಾಗುತ್ತಾರೆ.

ಆಪದೇವಾಸ್ಯ ಮರಣಾತ್ ಪುರುಷಸ್ಯ ಗರೀಯಸೀ ।
ಯಯಾ ವಿನಾಶ್ಯತೇ ಚಾಸ್ಯ ನಿಮಿತ್ತಂ ಧರ್ಮಕಾಮಯೋಃ ॥೩೭॥

ಮರಣಕ್ಕಿಂತ ಆಪತ್ತೇ ಪುರುಷನಿಗೆ ಬಹಳ ಹೀನಾಯವಾದುದು. ಆದ್ದರಿಂದ ಅವನ ಧರ್ಮ-ಕಾಮದ ನಿಮಿತ್ತವೆಲ್ಲವೂ ನಾಶವನ್ನು ಹೊಂದುತ್ತದೆ.

ಯದಸ್ಯ ಧರ್ಮ್ಯಂ ಮರಣಂ ಶಾಶ್ವತಂ ಲೋಕವರ್ತ್ಮ ತತ್ ।
ಸಮಂತಾತ್ ಸರ್ವಭೂತಾನಾಂ ನ ತದತ್ಯೇತಿ ಕಶ್ಚನ ॥೩೮॥

ಧಾರ್ಮಿಕವಾದ ಮರಣವೇನಿದೆಯೋ ಅದು ಶಾಶ್ವತವಾದ ಲೋಕಗಳಿಗೆ ದಾರಿ. ಎಲ್ಲ ಜೀವರಿಗೂ ಅದು ಹಾಗೆಯೇ. ಮರಣವನ್ನು ಯಾವ ಜೀವರೂ ಮೀರುವುದಿಲ್ಲ.

ನ ತಥಾ ಬಾಧ್ಯತೇ ಕೃಷ್ಣ ಪ್ರಕೃತ್ಯಾ ನಿರ್ಧನೋ ಜನಃ ।
ಯಥಾ ಭದ್ರಾಂ ಶ್ರಿಯಂ ಪ್ರಾಪ್ಯ ತಯಾ ಹೀನಃ ಸುಖೈಧಿತಃ ॥೩೯॥

ಕೃಷ್ಣನೇ, ಮೊದಲು ಸಂಪತ್ತನ್ನು ಹೊಂದಿ ಸುಖದಿಂದ ಬೆಳೆದವನು, ಅದನ್ನು ಕಳೆದುಕೊಂಡು ನಿರ್ಧನನಾಗಿ ಎಂತಹ ಬಾಧೆಯನ್ನು ಅನುಭವಿಸುತ್ತಾನೋ ಅಂತಹ ಬಾಧೆಯನ್ನು ಯಾವ ಪ್ರಕೃತಿವಿಕೋಪದಿಂದಲೂ ಅನುಭವಿಸುವುದಿಲ್ಲ.

ಸ ತದಾऽऽತ್ಮಾಪರಾಧೇನ ಸಂಪ್ರಾಪ್ತೋ ವ್ಯಸನಂ ಮಹತ್ ।
ಸೇಂದ್ರಾನ್ ಗರ್ಹಯತೇ ದೇವಾನ್ ಆತ್ಮಾನಂ ನ ಕಥಂಚನ ॥೪೦॥

ತನ್ನ ಅಪರಾಧದಿಂದ ದೊಡ್ಡ ವ್ಯಥೆಯನ್ನು ತಂದುಕೊಂಡ ಮನುಷ್ಯನು ಆಗ ಇಂದ್ರಾದಿದೇವತೆಗಳನ್ನು ನಿಂದಿಸುತ್ತಾನೆ. ತನ್ನನ್ನು ನಿಂದಿಸಿಕೊಳ್ಳುವುದಿಲ್ಲ.

ನ ಚಾಸ್ಯ ಸರ್ವಶಾಸ್ತ್ರಾಣಿ ಪ್ರತರಂತಿ ನಿಗರ್ಹಣಾತ್ ।
ಸೋऽಭಿಕ್ರುದ್ಧ್ಯತಿ ಭೃತ್ಯಾನಾಂ ಸುಹೃದಶ್ಚಾಭ್ಯಸೂಯತಿ ॥೪೧॥

ಅಂತಹ ನಿಂದನೆಯನ್ನು ಮಾಡುವವನನ್ನು ಯಾವ ಶಾಸ್ತ್ರಗಳೂ ದಾಟಿಸುವುದಿಲ್ಲ. ಆಗ ಅವನು ತನ್ನ ಭೃತ್ಯರ ಮೇಲೆ ಕೋಪಗೊಳ್ಳುತ್ತಾನೆ. ಮತ್ತು ತನ್ನ ವಿಶ್ವಾಸಪಾತ್ರರನ್ನು ನೋಡಿ ಅಸೂಯೆ ಪಡುತ್ತಾನೆ.

ತಂ ತದಾ ಮನ್ಯುರೇವೈತಿ ಸ ಭೂಯಃ ಸಂಪ್ರಮುಹ್ಯತಿ ।
ಸ ಮೋಹವಶಮಾಪನ್ನಃ ಕ್ರೂರಂ ಕರ್ಮ ನಿಷೇವತೇ ॥೪೨॥

ಆಗ ಅವನಿಗೆ ಕೋಪವುಂಟಾಗುತ್ತದೆ. ಅವನು ಪುನಃ ಮೋಹಕ್ಕೆ ಒಳಗಾಗುತ್ತಾನೆ. ಮೋಹಕ್ಕೆ ಒಳಗಾದ ಅವನು ಕ್ರೂರಕರ್ಮಗಳನ್ನು ಮಾಡುತ್ತಾನೆ.

ಪಾಪಕರ್ಮತಯಾ ದೇವ ಸಂಕರಂ ತೇನ ಪುಷ್ಯತಿ ।
ಸಂಕರೋ ನರಕಾಯೈವ ಸಾ ಕಾಷ್ಠಾ ಪಾಪಕರ್ಮಣಾಮ್ ॥೪೩॥

ಎಲೈ ದೇವನೇ, ಪಾಪಕರ್ಮವನ್ನು ಮಾಡುವವನು ಸಂಕರವನ್ನು ಪೋಷಿಸುತ್ತಾನೆ. ವರ್ಣಸಂಕರವು ನರಕಕ್ಕೇ ಕರೆದುಕೊಂಡು ಹೋಗುತ್ತದೆ. ಮತ್ತು ಪಾಪಕರ್ಮಗಳಿಗೆ ಅದು ಕೊನೆಯ ಎಲ್ಲೆಯಾಗಿರುತ್ತದೆ.

ನ ಚೇತ್ ಪ್ರಬುಧ್ಯತೇ ಕೃಷ್ಣ ನರಕಾಯೈವ ಗಚ್ಛತಿ ।
ತಸ್ಯ ಪ್ರಬೋಧಃ ಪ್ರಜ್ಞೈವ ಪ್ರಜ್ಞಾಚಕ್ಷುರ್ನ ರಿಷ್ಯತಿ ॥೪೪॥

ಎಲೈ ಕೃಷ್ಣನೇ, ಅವನು ಎಚ್ಚರಗೊಳ್ಳದಿದ್ದರೆ ನರಕಕ್ಕೇ ಹೋಗುತ್ತಾನೆ. ಅವನನ್ನು ಎಚ್ಚರಗೊಳಿಸುವುದು ಪ್ರಜ್ಞೆಯು ಮಾತ್ರ . ಪ್ರಜ್ಞೆಯ ಕಣ್ಣನ್ನು ಹೊಂದಿದವನು ನಾಶವನ್ನು ಹೊಂದುವುದಿಲ್ಲ.

ಪ್ರಜ್ಞಾಲಾಭೇ ಹಿ ಪುರುಷಃ ಶಾಸ್ತ್ರಾಣ್ಯೇವಾನ್ವವೇಕ್ಷತೇ ।
ಶಾಸ್ತ್ರನಿಷ್ಠಃ ಪುನರ್ಧರ್ಮಂ ತಸ್ಯ ಹ್ರೀರಂಗಮುತ್ತಮಮ್ ॥೪೫॥

ಪ್ರಜ್ಞೆಯನ್ನು ಪಡೆದ ಮನುಷ್ಯನು ಶಾಸ್ತ್ರಗಳನ್ನೇ ಅನುಸರಿಸುತ್ತಾನೆ. ಎಲೈ ಪ್ರೀತಿಪಾತ್ರನೇ, ಶಾಸ್ತ್ರನಿಷ್ಠನಾದ ಮನುಷ್ಯನು ಧರ್ಮವನ್ನು, ನಾಚಿಕೆಯನ್ನೂ ಪುನಃ ಶ್ರೇಷ್ಠವಾದ ಧರ್ಮವನ್ನು ಮತ್ತು ಅಧರ್ಮವನ್ನು ಮಾಡಲು ನಾಚಿಕೆಯನ್ನು ಹೊಂದುತ್ತಾನೆ.

ಹ್ರೀಮಾನ್ ಹಿ ಪಾಪಂ ಪ್ರದ್ವೇಷ್ಟಿ ತಸ್ಯ ಶ್ರೀರಭಿವರ್ಧತೇ ।
ಶ್ರೀಮಾನ್ ಸ ಯಾವದ್ ಭವತಿ ತಾವದ್ ಭವತಿ ಪೂರುಷಃ ॥೪೬॥

ನಾಚಿಕೆಯುಳ್ಳವನು ಪಾಪಕರ್ಮವನ್ನು ದ್ವೇಷಿಸುತ್ತಾನೆ. ಅವನ ಸಂಪತ್ತು ಅಭಿವೃದ್ಧಿಯನ್ನು ಹೊಂದುತ್ತದೆ. ಎಲ್ಲಿಯವರೆಗೆ ಸಂಪತ್ತು ಇರುತ್ತದೆಯೋ ಅಲ್ಲಿಯವರೆಗೆ ಅವನು ಮನುಷ್ಯನಾಗುತ್ತಾನೆ.

ಧರ್ಮನಿತ್ಯಃ ಪ್ರಶಾಂತಾತ್ಮಾ ಕಾರ್ಯಯೋಗವಹಃ ಸದಾ ।
ನಾಧರ್ಮೇ ಕುರುತೇ ಬುದ್ಧಿಂ ನ ಚ ಪಾಪೇ ಪ್ರವರ್ತತೇ ॥೪೭॥

ನಿತ್ಯದಲ್ಲಿ ಧರ್ಮಾಚರಣೆಯನ್ನು ಮಾಡುವವನೂ, ಪ್ರಶಾಂತವಾದ ಮನಸ್ಸುಳ್ಳವನೂ, ಮಾಡಬೇಕಾದ ಕಾರ್ಯವನ್ನು ಯಾವಾಗಲೂ ಮಾಡುವವನೂ ಆದ ಅವನು ಅಧರ್ಮವನ್ನು ಮಾಡುವುದಕ್ಕೆ ಬಯಸುವುದಿಲ್ಲ ಮತ್ತು ಪಾಪಕರ್ಮದಲ್ಲಿಯೂ ಪ್ರವೃತ್ತನಾಗುವುದಿಲ್ಲ. .

ಅಹ್ರೀಕೋ ವಾऽಪಿ ಮೂಢೋ ವಾ ನೈವ ಸ್ತ್ರೀ ನ ಪುನಃ ಪುಮಾನ್ ।
ನಾಸ್ಯಾಧಿಕಾರೋ ಧರ್ಮೇऽಸ್ತಿ ಯಥಾ ಶೂದ್ರಸ್ತಥೈವ ಸಃ ॥೪೮॥

ನಾಚಿಕೆಯಿಲ್ಲದ ಮತ್ತು ಮೂಢನಾದ ಮನುಷ್ಯನು ಸ್ತ್ರೀಯಾಗಲೀ ಅಥವಾ ಪುರುಷನಾಗಲೀ ಅವನಿಗೆ ಶೂದ್ರನಂತೆ ಧರ್ಮಾಧಿಕಾರವಿಲ್ಲ.

ಹ್ರೀಮಾನುಪೈತಿ ದೇವಾಂಶ್ಚ ಪಿತೄನಾತ್ಮಾನಮೇವ ಚ ।
ತೇನಾಮೃತತ್ವಂ ವ್ರಜತಿ ಸಾ ಕಾಷ್ಠಾ ಪುಣ್ಯಕರ್ಮಣಾಮ್ ॥೪೯॥

ಪಾಪಕರ್ಮದ ನಾಚಿಕೆಯುಳ್ಳವನು ದೇವತೆಗಳನ್ನೂ ಮತ್ತು ಪಿತೃಗಳನ್ನೂ ಮತ್ತು ಪರಮಾತ್ಮನನ್ನೂ ಹೊಂದಿ ಮೋಕ್ಷವನ್ನು ಪಡೆಯುತ್ತಾನೆ. ಅದು ಪುಣ್ಯಕರ್ಮಗಳ ಕೊನೆಯ ಎಲ್ಲೆ.

ತದಿದಂ ಮಯಿ ತೇ ದೃಷ್ಟಂ ಪ್ರತ್ಯಕ್ಷಂ ಮಧುಸೂದನ ।
ಯಥಾ ರಾಜ್ಯಾತ್ ಪರಿಭ್ರಷ್ಟೋ ವಸಾಮಿ ವಸತೀರಿಮಾಃ ॥೫೦॥

ಎಲೈ ಮಧುಸೂದನನೇ, ನಾನು ರಾಜ್ಯದಿಂದ ಭ್ರಷ್ಟನಾದರೂ ಹೇಗೆ ವಾಸವನ್ನು ಮಾಡುತ್ತಿದ್ದೇನೆಂದು ಈ ವಿಷಯವನ್ನು ನನ್ನಲ್ಲಿ ನೀನು ಪ್ರತ್ಯಕ್ಷವಾಗಿ ನೋಡುತ್ತಿದ್ದೀಯೆ.

ತೇ ವಯಂ ನ ಶ್ರಿಯಂ ಹಾತುಮಲಂ ನ್ಯಾಯೇನ ಕೇನಚಿತ್ ।
ಅತ್ರ ನೋ ಯತಮಾನಾನಾಂ ವಧಶ್ಚೇದಪಿ ಸಾಧು ತತ್ ॥೫೧॥

ನಾವು ನಮಗೆ ಒದಗಿರುವ ಈ ಸಂಪತ್ತನ್ನು ಯಾವ ನ್ಯಾಯದಿಂದಲೂ ತ್ಯಜಿಸಲು ಸಾಧ್ಯವಿಲ್ಲ. ಅದನ್ನು ಉಳಿಸಿಕೊಳ್ಳಲು ಪ್ರಯತ್ನಪಡುವ ನಮಗೆ ಮರಣ ಉಂಟಾದರೂ ಅದು ಶ್ರೇಷ್ಠವಾದದ್ದೇ .

ತತ್ರ ನಃ ಪ್ರಥಮಃ ಕಲ್ಪೋ ಯದ್ ವಯಂ ತೇ ಚ ಮಾಧವ ।
ಪ್ರಶಾಂತಾಃ ಸಮಭೂತಾಶ್ಚ ಶ್ರಿಯಂ ತಾಮಶ್ನುವೀಮಹಿ ॥೫೨॥

ಎಲೈ ಮಾಧವನೇ, ನಾವಿಬ್ಬರೂ ಪ್ರಶಾಂತರಾಗಿ, ಸಮರಾಗಿ ಆ ಸಂಪತ್ತನ್ನು ಹಂಚಿಕೊಳ್ಳುವುದು ಶ್ರೇಷ್ಠವಾದ ಮಾರ್ಗ.

ತತ್ಕೈಷಾ ಪರಮಾ ಕಾಷ್ಠಾ ರೌದ್ರಕರ್ಮಕ್ಷಯೋದಯಾ ।
ಯದ್ ವಯಂ ಕೌರವಾನ್ ಹತ್ವಾ ತಾನಿ ಶಾಸ್ತ್ರಾಣ್ಯಧೀಮಹಿ ॥೫೩॥

ನಾವು ಕೌರವರನ್ನು ಕೊಂದು, ಅನಂತರ ವೇದ-ಶಾಸ್ತ್ರಗಳನ್ನು ಅಧ್ಯಯನ ಮಾಡುವುದಾದರೆ ಅದು ಭಯಂಕರವಾದ ಕರ್ಮದ ಪರಾಕಾಷ್ಠೆಯಾಗುತ್ತದೆ.

ಯೇ ಪುನಃ ಸ್ಯುರಸಂಬದ್ಧಾ ಅನಾರ್ಯಾಃ ಕೃಷ್ಣ ಶತ್ರವಃ ।
ತೇಷಾಮಪ್ಯವಧಃ ಕಾರ್ಯಃ ಕಿಂಪುನರ್ಯೇ ಸ್ಯುರೀದೃಶಾಃ ॥೫೪॥

ಎಲೈ ಕೃಷ್ಣನೇ, ನಮಗೆ ಸಂಬಂಧವಿಲ್ಲದ ಶತ್ರುಗಳು ಅನಾರ್ಯರಾದರೂ ಅವರ ವಧೆಯನ್ನು ಮಾಡಬಾರದು. ಹೀಗಿರುವಾಗ ಇಂತಹ ಜ್ಞಾತಿಗಳ ವಿಷಯದಲ್ಲಿ ಹೇಳುವುದೇನಿದೆ?

ಜ್ಞಾತಯಶ್ಚೈವ ಭೂಯಿಷ್ಠಾಃ ಸಹಾಯಾ ಗುರವಶ್ಚ ನಃ ।
ತೇಷಾಂ ವಧೋತಿಪಾಪೀಯಾನ್ ಕಿಂ ನು ಯುದ್ಧೇಽಸ್ತಿ ಶೋಭನಮ್॥

ಅವರು ನಮ್ಮ ಜ್ಞಾತಿಗಳೂ, ಹೆಚ್ಚಾಗಿ ಸಹಾಯವನ್ನು ಮಾಡಿದ ಗುರುಗಳೂ ಆಗಿದ್ದಾರೆ. ಅವರ ವಧೆಯು ಅತ್ಯಂತ ಪಾಪಿಷ್ಠವಾದುದು. ಯುದ್ಧದಲ್ಲಿ ಯಾವ ಒಳ್ಳೆಯ ಅಂಶವಿದೆ?

ಪಾಪಃ ಕ್ಷತ್ರಿಯಧರ್ಮೋಽಯಂ ವಯಂ ಚ ಕ್ಷತ್ರಬಂಧವಃ ।
ಸ ನಃ ಸ್ವಧರ್ಮೋಽಧರ್ಮೋ ವಾ ವೃತ್ತಿರನ್ಯಾ ವಿಗರ್ಹಿತಾ ॥೫೬॥

ಈ ಕ್ಷತ್ರಿಯಧರ್ಮವು ಪಾಪಿಷ್ಠವಾದುದು. ನಾವಾದರೂ ಕ್ಷತ್ರಿಯರಾಗಿದ್ದೇವೆ. ವಧೆಯು ಸ್ವಧರ್ಮವಾಗಲಿ ಅಥವಾ ಅಧರ್ಮವಾಗಲಿ, ಅದನ್ನು ಬಿಟ್ಟು ಬೇರೆ ವೃತ್ತಿಯು ನಮಗೆ ನಿಂದಿತವಾದುದು.

ಶೂದ್ರಃ ಕರೋತಿ ಶುಶ್ರೂಷಾಂ ವೈಶ್ಯಾ ವಾಣಿಜ್ಯಜೀವಿನಃ ।
ವಯಂ ವಧೇನ ಜೀವಾಮಃ ಕಾರ್ಪಣ್ಯಂ ಬ್ರಾಹ್ಮಣೈರ್ವೃತಮ್ ॥೫೭॥

ಶೂದ್ರರು ಸೇವೆಯಿಂದ ಜೀವನವನ್ನು ಮಾಡುತ್ತಾರೆ. ವೈಶ್ಯರು ವಾಣಿಜ್ಯದಿಂದ ಜೀವಿಸುತ್ತಾರೆ. ಕ್ಷತ್ರಿಯರಾದ ನಾವು ವಧೆಯಿಂದ ಜೀವಿಸುತ್ತೇವೆ. ಬ್ರಾಹ್ಮಣರು ಕಾರ್ಪಣ್ಯವನ್ನು (ಕಷ್ಟವನ್ನು) ಜೀವನವಾಗಿ ಆರಿಸಿದ್ದಾರೆ.

ಕ್ಷತ್ರಿಯಃ ಕ್ಷತ್ರಿಯಂ ಹಂತಿ ಮತ್ಸ್ಯೋ ಮತ್ಸ್ಯೇನ ಜೀವತಿ ।
ಶ್ವಾ ಶ್ವಾನಂ ಹಂತಿ ದಾಶಾರ್ಹ ಪಶ್ಯ ಧರ್ಮೋ ಯಥಾ ಗತಃ ॥೫೮॥

ಕ್ಷತ್ರಿಯನು ಕ್ಷತ್ರಿಯನನ್ನು ಕೊಲ್ಲುತ್ತಾನೆ. ಒಂದು ಮೀನು ಇನ್ನೊಂದು ಮೀನನ್ನು ತಿಂದು ಜೀವಿಸುತ್ತದೆ. ಒಂದು ನಾಯಿಯು ಇನ್ನೊಂದು ನಾಯಿಯನ್ನು ಕೊಲ್ಲುತ್ತದೆ. ದಾಶಾರ್ಹನೇ, ಧರ್ಮವು ಯಾವ ಮಾರ್ಗದಲ್ಲಿ ಹೋಗುತ್ತದೆ ಎಂಬುದನ್ನು ನೋಡು.

ಯುದ್ಧೇ ಕೃಷ್ಣ ಕಲಿರ್ನಿತ್ಯಂ ಪ್ರಾಣಾಃ ಸೀದಂತಿ ಸಂಯುಗೇ ।
ಬಲಂ ತು ನೀತಿಮಾಸ್ಥಾಯ ಭವೇ ಜಯಪರಾಜಯೌ ॥೫೯॥

ಎಲೈ ಕೃಷ್ಣನೇ, ಯುದ್ಧದಲ್ಲಿ ಶಾಶ್ವತವಾದ ವಿರೋಧವು ಉಂಟಾಗುತ್ತದೆ ಮತ್ತು ಪ್ರಾಣಗಳ ಹಾನಿಯಾಗುತ್ತದೆ. ನಾನು ಒಳ್ಳೆಯ ನೀತಿಯನ್ನು ಮತ್ತು ಬಲವನ್ನು ಆಶ್ರಯಿಸಿ, ನನ್ನ ಜಯವನ್ನೂ, ಶತ್ರುಗಳ ಪರಾಜಯವನ್ನೂ ಸಂಪಾದಿಸುತ್ತೇನೆ.

ನಾತ್ಮಚ್ಛಂದೇನ ಭೂತಾನಾಂ ಜೀವಿತಂ ಮರಣಂ ತಥಾ ।
ನಾಪ್ಯಕಾಲೇ ಸುಖಂ ಪ್ರಾಪ್ಯಂ ದುಃಖಂ ಚಾಪಿ ಯದೂತ್ತಮ ॥೬೦॥

ಯದೂತ್ತಮನೇ, ಜೀವರಿಗೆ ತಮ್ಮ ಇಚ್ಛೆಯಿಂದ ಜೀವನವಾಗಲೀ, ಮರಣವಾಗಲೀ ಉಂಟಾಗುವುದಿಲ್ಲ. ಅದರಂತೆ ಅಕಾಲದಲ್ಲಿ ಸುಖವಾಗಲೀ ಅಥವಾ ದುಃಖವಾಗಲೀ ಪ್ರಾಪ್ತವಾಗುವುದಿಲ್ಲ.

ಏಕೋ ಹ್ಯಪಿ ಬಹೂನ್ ಹಂತಿ ಘ್ನಂತ್ಯೇಕಂ ಬಹವೋऽಪ್ಯುತ ।
ಶೂರಂ ಕಾಪುರುಷೋ ಹಂತಿ ಅಯಶಸ್ವೀ ಯಶಸ್ವಿನಮ್ ॥೬೧॥

ಒಬ್ಬನು ಅನೇಕ ಜನರನ್ನು ಕೊಲ್ಲುತ್ತಾನೆ ಮತ್ತು ಅನೇಕ ಜನರು ಸೇರಿ ಒಬ್ಬನನ್ನು ಕೊಲ್ಲುತ್ತಾರೆ. ಒಬ್ಬ ಕೆಟ್ಟ ಮನುಷ್ಯನು ಶೂರನನ್ನು ಕೊಲ್ಲುತ್ತಾನೆ. ಅಪಕೀರ್ತಿಯನ್ನು ಪಡೆದವನು ಕೀರ್ತಿವಂತನನ್ನು ಕೊಲ್ಲುತ್ತಾನೆ.

ಜಯೋ ನೈವೋಭಯೋರ್ದೃಷ್ಟೋ ನೋಭಯೋಶ್ಚ ಪರಾಜಯಃ ।
ತಥೈವಾಪಚಯೋ ದೃಷ್ಟೋ ವ್ಯಪಯಾನೇ ವ್ಯಯಾವ್ಯಯೌ ॥೬೨॥

ಯುದ್ಧದಲ್ಲಿ ಎರಡು ಪಕ್ಷಗಳಿಗೂ ಜಯವು ದೃಷ್ಟವಾಗಿಲ್ಲ. ಎರಡು ಪಕ್ಷಗಳಿಗೂ ಪರಾಜಯವೂ ದೃಷ್ಟವಾಗಿಲ್ಲ. ಹಾಗೆಯೇ ಎರಡು ಪಕ್ಷಗಳಿಗೂ ಅಪಚಯವು (ಕ್ಷೀಣತೆಯು) ದೃಷ್ಟವಾಗಿದೆ ಮತ್ತು ಪಲಾಯನವನ್ನು ಮಾಡಿದರೆ ಕೀರ್ತಿಯ ವ್ಯಯವೂ ಮತ್ತು ನಮ್ಮ ಸೈನ್ಯದ ರಕ್ಷಣೆಯೂ ಉಂಟಾಗುತ್ತದೆ.

ಸರ್ವಥಾ ವ್ರಜಿನಂ ಯುದ್ಧಂ ಕೋ ಘ್ನನ್ ನ ಪ್ರತಿಹನ್ಯತೇ ।
ಹತಸ್ಯ ಚ ಹೃಷೀಕೇಶ ಸಮೌ ಜಯಪರಾಜಯೌ ॥೬೩॥

ಪರಾಜಯಶ್ಚ ಮರಣಾನ್ನೈವ ವಿಶಿಷ್ಯತೇ ॥೬೪॥

ಹೃಷೀಕೇಶನೇ, ಯುದ್ಧವು ಸರ್ವಥಾ ಪಾಪಕರವಾದುದು. ಇನ್ನೊಬ್ಬನನ್ನು ಹೊಡೆಯುವ ಯಾವನು ಅವನಿಂದ ಹೊಡೆಯಲ್ಪಡುವುದಿಲ್ಲ? ಯುದ್ಧದಲ್ಲಿ ಹತನಾದವನಿಗೆ ಜಯ-ಪರಾಜಯಗಳೆರಡೂ ಸಮವಾದವುಗಳು. ಪರಾಜಯವು ಮರಣಕ್ಕಿಂತಲೂ ಬಹಳ ಭಿನ್ನವಾದುದೇನೂ ಅಲ್ಲ.

ಯಸ್ಯ ಸ್ಯಾದ್ ವಿಜಯಃ ಕೃಷ್ಣ ತಸ್ಯಾಪ್ಯಪಜಯೋ ಧ್ರುವಮ್ ।
ಅಂತತೋ ದಯಿತಂ ಘ್ನಂತಿ ಕೇಚಿದಪ್ಯಪರಾಜಿತಾಃ ॥೬೫॥

ಕೃಷ್ಣನೇ, ಯಾವನಿಗೆ ವಿಜಯ ಉಂಟಾಗುತ್ತದೆಯೋ ಅವನಿಗೆ ನಿಶ್ಚಿತವಾಗಿ ಅಪಜಯವುಂಟಾಗುತ್ತದೆ. ಶತ್ರುಪಕ್ಷದಲ್ಲಿ ಅಪರಾಜಿತರಾಗಿ ಉಳಿದ ಕೆಲವರು ಕೊನೆಯಲ್ಲಿ ವಿಜಯವನ್ನು ಸಾಧಿಸಿದವರಿಗೆ ಪ್ರಿಯರಾದವರನ್ನು ಕೊಲ್ಲುತ್ತಾರೆ.

ತಸ್ಯಾಂಗಬಲಹೀನಸ್ಯ ಪುತ್ರಾನ್ ಭ್ರಾತೄನಪಶ್ಯತಃ ।
ನಿರ್ವೇದೋ ಜೀವಿತೇ ಕೃಷ್ಣ ಸರ್ವತಶ್ಚೋಪಜಾಯತೇ ॥೬೬॥

ಕೃಷ್ಣನೇ, ಪರಿವಾರಬಲದಿಂದ ಹೀನನಾದ, ಪುತ್ರರನ್ನೂ ಮತ್ತು ಸುಹೃದರನ್ನೂ ಕಾಣದಿರುವ ಅವನಿಗೆ ತನ್ನ ಜೀವನದಲ್ಲಿಯೂ ಮತ್ತು ಎಲ್ಲ ವಿಷಯದಲ್ಲಿಯೂ ವೈರಾಗ್ಯ ಉಂಟಾಗುತ್ತದೆ.

ಯೇ ಹ್ಯೇವ ಧೀರಾ ಹ್ರೀಮಂತ ಆರ್ಯಾಃ ಕರುಣವೇದಿನಃ ।
ತ ಏವ ಯುದ್ಧೇ ಹನ್ಯಂತೇ ಯವೀಯಾನ್ ಮುಚ್ಯತೇ ಜನಃ ॥೬೭॥

ಯಾರು ಧೀರರೋ, ನಾಚಿಕೆಯುಳ್ಳವರೋ, ಒಳ್ಳೆಯ ನಡತೆಯುಳ್ಳವರೋ, ಕರುಣಾಶಾಲಿಗಳೋ ಅಂತಹವರೇ ಯುದ್ಧದಲ್ಲಿ ಕೊಲ್ಲಲ್ಪಡುತ್ತಾರೆ. ಅವರಿಗಿಂತ ಕೆಳಜನರು ಮುಕ್ತರಾಗುತ್ತಾರೆ.

ಹತ್ವಾಽಪ್ಯನುಶಯೋ ನಿತ್ಯಂ ಪರಾನಪಿ ಜನಾರ್ದನ ।
ಅನುಬಂಧಪ್ರಲಾಪಶ್ಚ ಶೇಷಶ್ಚಾಪ್ಯವಶಿಷ್ಯತೇ ॥೬೮॥

ಜನಾರ್ದನನೇ, ಶತ್ರುವನ್ನು ಕೊಂದಮೇಲೆಯೂ ಉದಾತ್ತ ನಡತೆಯುಳ್ಳವನಿಗೆ ಅವನ ಪುತ್ರಾದಿಗಳಿಗೆ ಅನುಕೂಲವನ್ನು ಉಂಟುಮಾಡುವ ಬುದ್ಧಿಯುಂಟಾಗುತ್ತದೆ. ಆ ಕಾಲದಲ್ಲಿ ಸ್ನೇಹದ ಮಾತುಗಳೂ ಉಂಟಾಗುತ್ತವೆ. ಆದರೂ ಶತ್ರುವಿನ ಒಂದು ಶೇಷವು ಹಾಗೆಯೇ ಉಳಿಯುತ್ತದೆ.

ಶೇಷೋ ಹಿ ಬಲಮಾಸಾದ್ಯ ನ ಶೇಷಮವಶೇಷಯೇತ್ ।
ಸರ್ವೋಚ್ಛೇದೇ ಚ ಯತತೇ ವೈರಸ್ಯಾಂತವಿಧಿತ್ಸಯಾ ॥೬೯॥

ಆ ಉಳಿದ ಶೇಷವು ಬಲವನ್ನು ಹೊಂದಿ ತನ್ನ ತಂದೆಯನ್ನು (ಸ್ವಾಮಿಯನ್ನು) ಕೊಂದವನನ್ನು ಉಳಿಸುವುದಿಲ್ಲ. ವೈರವನ್ನು ಕೊನೆಗಾಣಿಸುವ ಇಚ್ಛೆಯಿಂದ ಅವನ ಸರ್ವನಾಶವನ್ನು ಮಾಡಲು ಪ್ರಯತ್ನಿಸುತ್ತದೆ.

ಜಯೋ ವೈರಂ ಪ್ರಸೃಜತಿ ದುಃಖಮಾಸ್ತೇ ಪರಾಜಿತಃ ।
ಸುಖಂ ಪ್ರಶಾಂತಃ ಸ್ವಪಿತಿ ಹಿತ್ವಾ ಜಯಪರಾಜಯೌ ॥೭೦॥

ಜಯವು ವೈರವನ್ನು ಹುಟ್ಟುಹಾಕುತ್ತದೆ. ಪರಾಜಿತನಾದವನು ದುಃಖವನ್ನು ಅನುಭವಿಸುತ್ತಾನೆ. ಪ್ರಶಾಂತನಾದವನು ಜಯ-ಪರಾಜಯಗಳನ್ನು ಬಿಟ್ಟು ಸುಖವಾಗಿ ನಿದ್ರಿಸುತ್ತಾನೆ.

ಜಾತವೈರಶ್ಚ ಪುರುಷೋ ದುಃಖಂ ಸ್ವಪಿತಿ ನಿತ್ಯದಾ ।
ಅನಿರ್ವೃತ್ತೇನ ಮನಸಾ ಸಸರ್ಪ ಇವ ವೇಶ್ಮನಿ ॥೭೧॥

ವೈರವನ್ನು ಕಟ್ಟಿಕೊಂಡ ಪುರುಷನು ಸರ್ಪವಿರುವ ಮನೆಯಲ್ಲಿ ವಾಸಿಸುವಂತೆ, ಯಾವಾಗಲೂ ಅಸಮಾಧಾನದಿಂದ ಕೂಡಿದ ಮನಸ್ಸುಳ್ಳವನಾಗಿ ದುಃಖದಿಂದ ನಿದ್ರೆಯನ್ನು ಮಾಡುತ್ತಾನೆ.

ಉತ್ಸಾದಯತಿ ಯಃ ಸರ್ವಂ ಯಶಸಾ ಸ ವಿಮುಚ್ಯತೇ ।
ಅಕೀರ್ತಿಂ ಸರ್ವಭೂತೇಷು ಶಾಶ್ವತೀಂ ಸ ನಿಗಚ್ಛತಿ ॥೭೨॥

ಯಾವನು ಎಲ್ಲರನ್ನೂ ಸಂಹರಿಸುತ್ತಾನೆಯೋ ಅವನು ತನ್ನ ಕೀರ್ತಿಯನ್ನು ಕಳೆದುಕೊಳ್ಳುತ್ತಾನೆ ಮತ್ತು ಸರ್ವಪ್ರಾಣಿಗಳಲ್ಲಿ ಶಾಶ್ವತವಾದ ಅಪಕೀರ್ತಿಯನ್ನು ಹೊಂದುತ್ತಾನೆ.

ನ ಹಿ ವೈರಾಣಿ ಶಾಮ್ಯಂತಿ ದೀರ್ಘಕಾಲಕೃತಾನ್ಯಪಿ ।
ಆಖ್ಯಾತಾರಶ್ಚ ವಿದ್ಯಂತೇ ಪುಮಾಂಶ್ಚೇದ್ ವಿದ್ಯತೇ ಕುಲೇ ॥೭೩॥

ದೀರ್ಘಕಾಲದಿಂದ ಬಂದ ವೈರಗಳು ನಾಶವನ್ನು ಹೊಂದುವುದಿಲ್ಲ. ಆ ಕುಲದಲ್ಲಿ ಯಾರಾದರೂ ಇದ್ದರೆ ಅವರಿಗೆ ಹಿಂದಿನ ವೈರವನ್ನು ಹೇಳುವ ಜನರು ಇರುತ್ತಾರೆ.

ನ ಚಾಪಿ ವೈರಂ ವೈರೇಣ ಕೇಶವ ಪ್ರತಿಶಾಮ್ಯತಿ ।
ಹವಿಷಾऽಗ್ನಿರ್ಯಥಾ ಕೃಷ್ಣ ಭೂಯ ಏವಾಭಿವರ್ಧತೇ ॥೭೪॥

ಕೇಶವನೇ, ವೈರವು ವೈರದಿಂದ ಶಾಂತವಾಗುವುದಿಲ್ಲ. ಅಗ್ನಿಯು ಹವಿಸ್ಸಿನಿಂದ ಅಭಿವೃದ್ಧಿಯನ್ನು ಹೊಂದಿದಂತೆ ವೈರವು ಇನ್ನೂ ಅಭಿವೃದ್ಧಿಯನ್ನೇ ಹೊಂದುತ್ತದೆ.

ಅತೋऽನ್ಯಥಾ ನಾಸ್ತಿ ಶಾಂತಿರ್ನಿತ್ಯಮಂತರಮಂತತಃ ।
ಅಂತರಂ ಲಿಪ್ಸಮಾನಾನಾಮ್ ಅಯಂ ದೋಷೋ ನಿರಂತರಃ ॥೭೫॥

ಆದ್ದರಿಂದ ಬೇರೆ ಯಾವ ರೀತಿಯಿಂದಲೂ ಶಾಂತಿ ಉಂಟಾಗುವುದಿಲ್ಲ. ಕೊನೆಯವರೆಗೂ ಶಾಂತಿಗೆ ಒಂದು ಅವಕಾಶವೇ ದೊರೆಯುವುದಿಲ್ಲ. ಶತ್ರುಗಳಲ್ಲಿ ಒಂದು ಅಂತರವನ್ನು (ಛಿದ್ರವನ್ನು) ಹುಡುಕಲು ಬಯಸುವವರಿಗೆ ಈ ದೋಷವು ಯಾವಾಗಲೂ ಇರುತ್ತದೆ.

ಪೌರುಷೇ ಯೋ ಹಿ ಬಲವಾನ್ ಆಧಿರ್ಹೃದಯತಾಪನಃ ।
ತಸ್ಯ ತ್ಯಾಗೇನ ವಾ ಶಾಂತಿರ್ಮರಣೇನಾಪಿ ವಾ ಭವೇತ್ ॥೭೬॥

ಯಾವ ಪುರುಷನು ಅಧಿಕವಾದ ಬಲವನ್ನು ಹೊಂದಿ, ಇನ್ನೊಬ್ಬರ ಮನಸ್ಸಿಗೆ ಖೇದವನ್ನು ಉಂಟುಮಾಡುವನೋ ಅವನ ದೇಶತ್ಯಾಗದಿಂದ ಅಥವಾ ಪ್ರಾಣತ್ಯಾಗದಿಂದ ಅಥವಾ ಕಲಹಕ್ಕೆ ಕಾರಣವಾದ ವಿತ್ತದ ತ್ಯಾಗದಿಂದ ಅಥವಾ ಮರಣದಿಂದ ಶಾಂತಿ ಉಂಟಾದೀತು.

ಅಥವಾ ಮೂಲಘಾತೇನ ದ್ವಿಷತಾಂ ಮಧುಸೂದನ ।
ಫಲಂ ನಿವೃತ್ತಿರರ್ಥಸ್ಯ ತನ್ನೃಶಂಸತರಂ ಭವೇತ್ ॥೭೭॥

ಮಧುಸೂದನನೇ, ಅಥವಾ ಶತ್ರುಗಳನ್ನು ಮೂಲಸಹಿತವಾಗಿ ನಾಶವನ್ನು ಮಾಡಿ ನಾವು ಕಳೆದುಕೊಂಡ ಅರ್ಥವನ್ನು ಮರಳಿ ಪಡೆಯಬಹುದು. ಆದರೆ ಅದು ಅತ್ಯಂತ ಕ್ರೂರವಾದುದು.

ಯಾ ತು ತ್ಯಾಗೇನ ಶಾಂತಿಃ ಸ್ಯಾತ್ ತದೃತೇ ವಧ ಏವ ಸಃ ।
ಸಂಶಯಾಚ್ಚ ಸಮುಚ್ಛೇದಾದ್ ದ್ವಿಷತಾಮಾತ್ಮನಸ್ತಥಾ ॥೭೮॥

ತ್ಯಾಗದಿಂದ ಯಾವ ಶಾಂತಿ ಉಂಟಾಗುತ್ತದೋ, ತ್ಯಾಗವಿಲ್ಲದಿದ್ದರೆ ಅದು ವಧೆಯಲ್ಲಿಯೇ ಪರ್ಯವಸಾನವನ್ನು ಹೊಂದುತ್ತದೆ. ಏಕೆಂದರೆ ಸಂಶಯದಿಂದಲೂ ಶತ್ರುಗಳು ತನ್ನನ್ನು ಸಮುಚ್ಛೇದ ಮಾಡುತ್ತಾರೆ. ತಾನು ಶತ್ರುಗಳನ್ನು ಸಮುಚ್ಛೇದ ಮಾಡುತ್ತಾನೆ.

ನ ಚ ತ್ಯಕ್ತುಂ ತದಿಚ್ಛಾಮೋ ನ ಚೇಚ್ಛಾಮಃ ಕುಲಕ್ಷಯಮ್ ।
ಅತ್ರ ಯಾ ಪ್ರಣಿಪಾತೇನ ಶಾಂತಿಃ ಸೈವ ಗರೀಯಸೀ ॥೭೯॥

ನಮ್ಮ ಸಂಪತ್ತನ್ನು ನಾವು ಬಿಡಲು ಇಚ್ಛಿಸುವುದಿಲ್ಲ ಮತ್ತು ಕುಲಕ್ಷಯವನ್ನೂ ಬಯಸುವುದಿಲ್ಲ. ಪರಸ್ಪರವಾಗಿ ಬಾಗುವುದರಿಂದ (ನಮಸ್ಕಾರ ಮಾಡುವುದರಿಂದ) ಶಾಂತಿ ಉಂಟಾಗುವುದಾದರೆ ಅದು ಬಹಳ ಶ್ರೇಷ್ಠವಾದುದು.

ಸರ್ವಥಾ ಯತಮಾನಾನಾಮ್ ಅಯುದ್ಧಮಭಿಕಾಂಕ್ಷತಾಮ್ ।
ಸಾಂತ್ವೇ ಪ್ರತಿಹತೇ ಯುದ್ಧಂ ಪ್ರಸಿದ್ಧಂ ನಾಪರಾಕ್ರಮಃ ॥೮೦॥

ಯುದ್ಧವನ್ನು ಬಯಸದೆ ಎಲ್ಲ ರೀತಿಯಲ್ಲಿಯೂ ಪ್ರಯತ್ನಶೀಲರಾಗಿ ಹೋಗುವವರಿಗೆ, ಸಂಧಿಯು ಮುರಿದುಹೋದರೆ ಯುದ್ಧವೇ ಉಳಿಯುತ್ತದೆ. ಪರಾಕ್ರಮರಹಿತರಾಗಿರುವುದು ಅಲ್ಲ.

ಪ್ರತಿಘಾತೇನ ಸಾಂತ್ವಸ್ಯ ದಾರುಣಂ ಸಂಪ್ರವರ್ತತೇ ।
ತಚ್ಚುನಾಮಿವ ಗೋಪಾತೇ ಪಂಡಿತೈರುಪಲಕ್ಷಿತಮ್ ॥೮೧॥

ಸಂಧಿಯು ಮುರಿದುಹೋದರೆ ಭಯಂಕರವಾದ ಪರಿಣಾಮವು ಉಂಟಾಗುತ್ತದೆ. ಅದನ್ನು ಪಂಡಿತರು ಗೋವು ಮರಣವನ್ನು ಹೊಂದಿದ್ದರೆ ಆ ಶರೀರಕ್ಕಾಗಿ ಕಚ್ಚಾಡುವ ನಾಯಿಗಳಿಗೆ ಹೋಲಿಸುತ್ತಾರೆ.

ಲಾಂಗೂಲಚಾಲನಂ ಕ್ಷ್ವೇಲಾ ಪ್ರತಿರಾವೋ ನಿವರ್ತನಮ್ ।
ದಂತದರ್ಶನಮಾರಾವಸ್ತತೋ ಯುದ್ಧಂ ಪ್ರವರ್ತತೇ ॥೮೨॥

ಮೊದಲು ಬಾಲವನ್ನು ಅಲ್ಲಾಡಿಸುವುದು, ಅನಂತರ ಮೃದುವಾಗಿ ಕಿರುಚುವುದು, ಅದಕ್ಕೆ ಪ್ರತಿಯಾಗಿ ಕಿರುಚುವುದು, ಸ್ವಲ್ಪ ಹಿಂದೆ ಬರುವುದು, ಹಲ್ಲುಗಳನ್ನು ತೋರಿಸುವುದು, ಗಟ್ಟಿಯಾಗಿ ಬೊಗಳುವುದು, ಅನಂತರ ನಾಯಿಗಳಿಗೆ ಯುದ್ಧವು ಉಂಟಾಗುತ್ತದೆ.

ತತ್ರ ಯೋ ಬಲವಾನ್ ಕೃಷ್ಣ ಜಿತ್ವಾ ಸೋಽತ್ತಿ ತದಾಮಿಷಮ್ ।
ಏವಮೇವ ಮನುಷ್ಯೇಷು ವಿಶೇಷೋ ನಾಸ್ತಿ ಕಶ್ಚನ ॥೮೩॥

ಎಲೈ ಕೃಷ್ಣನೇ, ಆ ನಾಯಿಗಳಲ್ಲಿ ಯಾವುದು ಬಲಿಷ್ಠವಾಗಿರುತ್ತದೆಯೋ ಅದು ಇನ್ನೊಂದನ್ನು ಗೆದ್ದು ಆ ಮಾಂಸವನ್ನು ತಿನ್ನುತ್ತದೆ. ಮನುಷ್ಯರಲ್ಲಿಯೂ ಹೀಗಿಯೇ. ಯಾವ ವಿಶೇಷವೂ ಇಲ್ಲ.

ಸರ್ವಥಾ ತ್ವೇತದುಚಿತಂ ದುರ್ಬಲೇಷು ಬಲೀಯಸಾಮ್ ।
ಅನಾದರೋ ವಿರೋಧಸ್ಯ ಪ್ರಣಿಪಾತೀ ಹಿ ದುರ್ಬಲಃ ॥೮೪॥

ಪ್ರಬಲರಾದವರು ದುರ್ಬಲರಾದವರ ವಿರೋಧವನ್ನು ಉದಾಸೀನ ಮಾಡುವುದು ಬಹಳ ಯೋಗ್ಯವಾದುದು. ಏಕೆಂದರೆ ದುರ್ಬಲನಾದವನಷ್ಟೇ ನಮಸ್ಕಾರವನ್ನು ಮಾಡುತ್ತಾನೆ.

ಪಿತಾ ರಾಜಾ ಚ ವೃದ್ಧಶ್ಚ ಸರ್ವಥಾ ಮಾನಮರ್ಹತಿ ।
ತಸ್ಮಾನ್ಮಾನ್ಯಶ್ಚ ಪೂಜ್ಯಶ್ಚ ಧೃತರಾಷ್ಟ್ರೋ ಜನೇಶ್ವರಃ ॥೮೫॥

ತಂದೆಯಾದವನು, ರಾಜನಾದವನು, ವೃದ್ಧನಾದವನು ಸರ್ವಥಾ ಗೌರವಕ್ಕೆ

ಅರ್ಹನಾಗುತ್ತಾನೆ. ಆದ್ದರಿಂದ ಧೃತರಾಷ್ಟ್ರರಾಜನು ನಮ್ಮ ಗೌರವಕ್ಕೂ, ಪೂಜೆಗೂ ಅರ್ಹನಾದವನು.

ಪುತ್ರಸ್ನೇಹಶ್ಚ ಬಲವಾನ್ ಧೃತರಾಷ್ಟ್ರಸ್ಯ ಮಾಧವ ।
ಸ ಪುತ್ರವಶಮಾಪನ್ನಃ ಪ್ರಣಿಪಾತಂ ಪ್ರಹಾಸ್ಯತಿ ॥೮೬॥

ಎಲೈ ಮಾಧವನೇ, ಧೃತರಾಷ್ಟ್ರನಿಗೆ ಪುತ್ರಸ್ನೇಹವು ಬಹಳ ಪ್ರಬಲವಾಗಿದೆ. ಪುತ್ರವಶನಾದ ಅವನು ನಮಸ್ಕಾರ ಮಾಡುವುದಿಲ್ಲ (ಬಾಗಿ ನಡೆಯುವುದಿಲ್ಲ).

ತತ್ರ ಕಿಂ ಮನ್ಯಸೇ ಕೃಷ್ಣ ಪ್ರಾಪ್ತಕಾಲಮನಂತರಮ್ ।
ಕಥಮರ್ಥಾಚ್ಚ ಧರ್ಮಾಚ್ಚ ನ ಹೀಯೇಮಹಿ ಮಾಧವ ॥೮೭॥

ಕೃಷ್ಣನೇ, ಅಂತಹ ಈ ಕಾಲದಲ್ಲಿ ನಾವು ಏನು ಮಾಡಬೇಕೆಂದು ನೀನು ಭಾವಿಸುತ್ತೀಯೆ? ಮಾಧವನೇ, ನಾವು ಅರ್ಥದಿಂದಲೂ ಮತ್ತು ಧರ್ಮದಿಂದಲೂ ಹೇಗೆ ಹೀನರಾಗದೇ ಇದ್ದೇವು?

ಈದೃಶೇಷ್ವರ್ಥಕೃಚ್ಛ್ರೇಷ್ವಸ್ಮಿನ್ ಕಮನ್ಯಂ ಮಧುಸೂದನ ।
ಉಪಸಂಪ್ರಷ್ಟುಮರ್ಹಾಮಿ ತ್ವಾಮೃತೇ ಪುರುಷೋತ್ತಮ ॥೮೮॥

ಎಲೈ ಮಧುಸೂದನನೇ, ಪುರುಷೋತ್ತಮನೇ, ಇಂತಹ ಧರ್ಮಾರ್ಥಗಳ ಸಂಕಟಗಳಲ್ಲಿ ನಿನ್ನನ್ನು ಬಿಟ್ಟು ನಾನು ಬೇರೆ ಯಾರನ್ನು ಕೇಳಲು ಸಾಧ್ಯವಾಗುತ್ತದೆ?

ಪ್ರಿಯಶ್ಚ ಪ್ರಿಯಕಾಮಶ್ಚ ಗತಿಜ್ಞಃ ಸರ್ವಕರ್ಮಣಾಮ್ ।
ಕೋ ಹಿ ಕೃಷ್ಣಾಸ್ತಿ ನಸ್ತ್ವಾದೃಕ್ ಸರ್ವನಿಶ್ಚಯವಿತ್ ಸುಹೃತ್ ॥೮೯॥

ನೀನು ನಮಗೆ ಪ್ರಿಯನಾದವನು. ನಮ್ಮ ಪ್ರಿಯವನ್ನು ಬಯಸುವವನು. ಎಲ್ಲ ಕರ್ಮಗಳ ಗತಿಯನ್ನು ತಿಳಿದವನು. ಕೃಷ್ಣನೇ, ಎಲ್ಲರ ಅಭಿಪ್ರಾಯವನ್ನು ತಿಳಿದ ನಿನ್ನಂತಹ ಸುಹೃಜ್ಜನರು ನಮಗೆ ಯಾರಿದ್ದಾರೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಸಪ್ತತಿತಮೋऽಧ್ಯಾಯಃ ॥
॥ ಭಗವದ್ಯಾನಪರ್ವಣಿ ಪ್ರಥಮೋऽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಇಪ್ಪತ್ತೊಂದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ವಕ್ಷ್ಯೇ ಪಥ್ಯಾನಿ ಯುಕ್ತಾನಿ ಯದಿ ನಾಸೌ ಗ್ರಹಿಷ್ಯತಿ ।
ವಧ್ಯಃ ಸರ್ವಸ್ಯ ಲೋಕಸ್ಯ ಸ ಭವೇತ್ ಸರ್ವಧರ್ಮಹಾ ॥೪೯॥

ಶ್ರೀಕೃಷ್ಣನೆಂದ 'ನಾನು ಹೋಗುವೆನು. ರಾಜಸಭೆಯಲ್ಲಿ ಋಷಿಗಳ ಸಮಕ್ಷಮದಲ್ಲಿ ಹಿತಕರವಾದ, ಯೋಗ್ಯವಾದ ಮಾತುಗಳನ್ನಾಡುವೆನು. ಅವನ್ನು ದುರ್ಯೋಧನ ಕೇಳದಿದ್ದರೆ, ಎಲ್ಲ ಜನರ ಕಣ್ಣಿಗೆ ಸರ್ವಧರ್ಮ ಪರಿತ್ಯಾಗಿ ವಧಾರ್ಹನೆನಿಸುತ್ತಾನೆ'.

★ ★ ★ ★ ★

ಎಪ್ಪತ್ತೊಂದನೆಯ ಅಧ್ಯಾಯ

ಸಂಧಿಯನ್ನು ಸಂಪಾದಿಸಲು ಹಸ್ತಿನಪುರಕ್ಕೆ ಹೋಗಲು ಕೃಷ್ಣನ ನಿರ್ಧಾರ.

ವೈಶಂಪಾಯನಃ

ಏವಮುಕ್ತಃ ಪ್ರತ್ಯುವಾಚ ಧರ್ಮರಾಜಂ ಜನಾರ್ದನಃ ।
ಉಭಯೋರೇವ ಶಾಂತ್ಯರ್ಥಂ ಯಾಸ್ಯಾಮಿ ಕುರುಸಂಸದಮ್ ॥೧॥

ವೈಶಂಪಾಯನ– ಹೀಗೆ ಹೇಳಲ್ಪಟ್ಟ ಜನಾರ್ದನನು ಧರ್ಮರಾಜನನ್ನು ಕುರಿತು ಎರಡೂ ಪಕ್ಷಗಳ ಶಾಂತಿಗಾಗಿ ನಾನು ಕೌರವರ ಸಭೆಗೆ ಹೋಗುವೆನು ಎಂದು ಹೇಳಿದನು.

ಶಮಂ ತತ್ರ ಲಭೇಯಂ ಚೇದ್ ಯುಷ್ಮದರ್ಥಮಹಾಪಯನ್ ।
ಪುಣ್ಯಂ ಮೇ ಸುಮಹದ್ ರಾಜನ್ ಚರಿತಂ ಸ್ಯಾನ್ಮಹಾಫಲಮ್ ॥೨॥

ನಿಮ್ಮ ಹಿತವನ್ನು ಕಡೆಗಣಿಸದೆ ಅಲ್ಲಿ ನಾನು ಸಂಧಿಯನ್ನು ಸಂಪಾದನೆ ಮಾಡಲು ಸಾಧ್ಯವಾದರೆ ಎಲೈ ರಾಜನೇ, ನಾನು ಒಳ್ಳೆಯ ಕಾರ್ಯವನ್ನು ಮಾಡಿದಂತಾಗುತ್ತದೆ. ಮತ್ತು ಬಹಳ ಪುಣ್ಯವನ್ನು ಸಂಪಾದಿಸುವೆನು.

ಮೋಚಯೇಯಂ ಮೃತ್ಯುಪಾಶಾತ್ ಸಂರಬ್ಧಾನ್ ಕುರುಸೃಂಜಯಾನ್ ।
ಪಾಂಡವಾನ್ ಧಾರ್ತರಾಷ್ಟ್ರಾಂಶ್ಚ ಸರ್ವಾಂ ಚ ಪೃಥಿವೀಮಿಮಾಮ್ ॥

ಕ್ರೋಧಗೊಂಡಿರುವ ಕೌರವರನ್ನೂ, ಸೃಂಜಯರನ್ನೂ, ಪಾಂಡವರನ್ನೂ, ಧೃತರಾಷ್ಟ್ರಪುತ್ರರನ್ನೂ ಮತ್ತು ಈ ಎಲ್ಲಾ ಭೂಮಿಯನ್ನೂ ಮೃತ್ಯುಪಾಶದಿಂದ ಬಿಡುಗಡೆಗೊಳಿಸಿಯೇನು (ಎಂದು ಹೇಳಿದನು).

ಏವಮುಕ್ತಃ ಪ್ರತ್ಯುವಾಚ ಧರ್ಮರಾಜೋ ಜನಾರ್ದನಮ್ ।
ಭ್ರಾತೄಣಾಂ ಸಮವೇತಾನಾಂ ಸಕಾಶೇ ಪುರುಷೋತ್ತಮಮ್ ॥೪॥

ಹೀಗೆ ಕೃಷ್ಣನು ಹೇಳಿದುದನ್ನು ಕೇಳಿ ಧರ್ಮರಾಜನು ಒಟ್ಟಿಗೆ ಸೇರಿದ ತನ್ನ ಸಹೋದರರ ಜೊತೆಯಲ್ಲಿ ಪುರುಷೋತ್ತಮನಾದ ಅವನನ್ನು ಕುರಿತು ಹೇಳಿದನು.

ನ ಮಮೈತನ್ಮತಂ ಕೃಷ್ಣ ಯತ್ ತ್ವಂ ಯಾಯಾಃ ಕುರೂನ್ ಪ್ರತಿ ।
ಸುಯೋಧನಃ ಸೂಕ್ತಮಪಿ ನ ಕರಿಷ್ಯತಿ ತೇ ವಚಃ ॥೫॥

ಎಲೈ ಕೃಷ್ಣನೇ, ನೀನು ಕುರುಗಳ ಸಭೆಗೆ ಹೋಗುವುದು ನನ್ನ ಅಭಿಪ್ರಾಯವಲ್ಲ. ಸುಯೋಧನನು ನೀನು ಯೋಗ್ಯವಾದುದನ್ನು ಹೇಳಿದರೂ ನಿನ್ನ ಮಾತನ್ನು ನಡೆಸಿಕೊಡುವುದಿಲ್ಲ.

ಸುಯೋಧನೋ ಹಿ ದುಷ್ಪಾತ್ಮಾ ಕರ್ಣಶ್ಚ ಸಹಸೌಬಲಃ ।
ಸಮೇತಂ ಪಾರ್ಥಿವಂ ಕ್ಷತ್ರಂ ದುರ್ಯೋಧನವಶಾನುಗಮ್ ॥೬॥

ತೇಷಾಂ ಮಧ್ಯೇಽವತರಣಂ ತವ ಕೃಷ್ಣ ನ ರೋಚಯೇ ॥೭॥

ಸುಯೋಧನನೂ, ಕರ್ಣನೂ ಮತ್ತು ಶಕುನಿಯೂ ದುಷ್ಟರಾದವರು. ಅಲ್ಲದೆ ಅಲ್ಲಿ ಒಂದುಗೂಡಿದ ಪೃಥಿವಿಯ ಕ್ಷತ್ರಿಯ ಸಮೂಹವು ದುರ್ಯೋಧನನ ವಶದಲ್ಲಿದೆ. ಕೃಷ್ಣನೇ, ನೀನು ಅವರ ಮಧ್ಯೆ ಹೋಗುವುದು ನನಗೆ ಇಷ್ಟವಾಗುವುದಿಲ್ಲ.

ನ ಹಿ ನಃ ಪ್ರೀಣಯೇದ್ ದ್ರವ್ಯಂ ನ ದೇವತ್ವಂ ಕುತಃ ಸುಖಮ್ ।
ನ ಚ ಸರ್ವಾಮರೈಶ್ವರ್ಯಂ ತವ ರೋಧೇನ ಮಾಧವ ॥೮॥

ಎಲೈ ಮಾಧವನೇ, ನಿನಗೆ ತೊಂದರೆಯಾದರೆ ನಮಗೆ ದ್ರವ್ಯವಾಗಲೀ, ರಾಜತನವಾಗಲೀ, ಸುಖವಾಗಲೀ, ಎಲ್ಲಾ ದೇವತೆಗಳ ಐಶ್ವರ್ಯವೇ ಆಗಲಿ ಸಂತೋಷವನ್ನು ಕೊಡುವುದಿಲ್ಲ.

ಶ್ರೀಭಗವಾನ್

ಜಾನಾಮ್ಯೇತಾಂ ಮಹಾರಾಜ ಧಾರ್ತರಾಷ್ಟ್ರಸ್ಯ ಪಾಪತಾಮ್ ।
ಅವಾಚ್ಯಾಸ್ತು ಭವಿಷ್ಯಾಮಃ ಸರ್ವಲೋಕೇ ಮಹೀಕ್ಷಿತಾಮ್ ॥೯॥

ಶ್ರೀಭಗವಾನ್– ಮಹಾರಾಜನೇ, ಸುಯೋಧನನ ಈ ದುಷ್ಟತನವನ್ನು ನಾನು ತಿಳಿದಿದ್ದೇನೆ. ನಾನು ಅಲ್ಲಿಗೆ ಹೋಗುವುದರಿಂದ ಈ ಲೋಕದ ಎಲ್ಲಾ ಜನರಿಂದ ಅನಿಂದ್ಯನಾಗುವೆನು.

ನ ಚಾಪಿ ಮಮ ಪರ್ಯಾಪ್ತಾಃ ಸಹಿತಾಃ ಸರ್ವಪಾರ್ಥಿವಾಃ ।
ಕ್ರುದ್ಧಸ್ಯ ಸಂಯುಗೇ ಸ್ಥಾತುಂ ಸಿಂಹಸ್ಯೇವೇತರೇ ಮೃಗಾಃ ॥೧೦॥

ಮತ್ತು ಕೋಪಗೊಂಡ ಸಿಂಹದ ಎದುರಿಗೆ ಜಿಂಕೆಗಳು ನಿಲ್ಲಲು ಸಾಧ್ಯವಾಗದಂತೆ ಕ್ರುದ್ಧನಾದ ನನ್ನ ಎದುರಿಗೆ ಎಲ್ಲ ಪಾರ್ಥಿವರೂ ಸೇರಿ ಯುದ್ಧದಲ್ಲಿ ನಿಲ್ಲಲಾರರು.

ಅಥ ಚೈತೇ ಪ್ರವರ್ತಂತೇ ಮಯಿ ಕಿಂಚಿದಸಾಂಪ್ರತಮ್ ।
ನಿರ್ದಹೇಯಂ ಕುರೂನ್ ಸರ್ವಾನಿತಿ ಮೇ ಧೀಯತೇ ಮತಿಃ ॥೧೧॥

ಇನ್ನು ಕುರುಗಳು ನನಗೆ ಏನಾದರೂ ಅಪಚಾರವನ್ನು ಮಾಡಿದರೆ ನಾನು ಎಲ್ಲಾ ಕುರುಗಳನ್ನೂ ಸುಟ್ಟುಹಾಕುತ್ತೇನೆ ಎಂದು ನನ್ನ ಅಭಿಪ್ರಾಯವಿದೆ.

ನ ಜಾತು ಗಮನಂ ಪಾರ್ಥ ಭವೇತ್ ತತ್ರ ನಿರರ್ಥಕಮ್ ।
ಅರ್ಥಪ್ರಾಪ್ತಿಃ ಕದಾಚಿತ್ ಸ್ಯಾದಂತತೋ ವಾऽಪ್ಯವಾಚ್ಯತಾ ॥೧೨॥

ಎಲೈ ಪಾರ್ಥನೇ, ನಾನು ಅಲ್ಲಿಗೆ ಹೋಗುವುದು ಎಂದೂ ವ್ಯರ್ಥವಾಗುವುದಿಲ್ಲ. ಒಂದುಪಕ್ಷ ಸಂಧಿಯನ್ನು ಸಾಧಿಸಬಹುದು ಅಥವಾ ಕೊನೆಯ ಪಕ್ಷ ಅನಿಂದೆಯನ್ನಾದರೂ ಸಂಪಾದಿಸಬಹುದು.

ಯುಧಿಷ್ಠಿರಃ

ಯತ್ ತುಭ್ಯಂ ರೋಚತೇ ಕೃಷ್ಣ ಸ್ವಸ್ತಿ ಪ್ರಾಪ್ನುಹಿ ಕೌರವಾನ್ ।
ಕೃತಾರ್ಥಂ ಸ್ವಸ್ತಿಮಂತಂ ತ್ವಾಂ ದ್ರಕ್ಷ್ಯಾಮಿ ಪುನರಾಗತಮ್ ॥೧೩॥

ಯುಧಿಷ್ಠಿರ– ಎಲೈ ಕೃಷ್ಣನೇ, ನಿನಗೆ ಯಾವುದು ಇಷ್ಟವೋ ಅದನ್ನು ಮಾಡು. ಕ್ಷೇಮದಿಂದ ಕೌರವಸಭೆಗೆ ಹೋಗುವವನಾಗು. ನೀನು ಕಾರ್ಯವನ್ನು ಸಾಧಿಸಿ ಕ್ಷೇಮದಿಂದ ಹಿಂದಿರುಗಿ ಬಂದುದನ್ನು ನಾನು ನೋಡುವೆನು.

ವಿಷ್ವಕ್ಸೇನ ಕುರೂನ್ ಗತ್ವಾ ಭರತಾನ್ ಶಮಯ ಪ್ರಭೋ ।
ಯಥಾ ಸರ್ವೇ ಸುಮನಸಃ ಸಹ ಸ್ಯಾಮ ಸುಚೇತಸಃ ॥೧೪॥

ಎಲೈ ವಿಶ್ವಕ್ಸೇನನೇ, ಪ್ರಭುವೇ, ಕೌರವರ ಸಮೀಪಕ್ಕೆ ಹೋಗಿ ಎಲ್ಲ ಭರತರೂ ಒಳ್ಳೆಯ ಮನಸ್ಸಿನಿಂದ ಮತ್ತು ಸ್ನೇಹದಿಂದ ಕೂಡಿದವರಾಗಿ ಇರುವಂತೆ ಸಂಧಿಯನ್ನು ಉಂಟುಮಾಡುವವನಾಗು.

ಭ್ರಾತಾ ಚಾಸಿ ಸಖಾ ಚಾಸಿ ಬೀಭತ್ಸೋರ್ಮಮ ಚ ಪ್ರಿಯಃ ।
ಸೌಹೃದೇನಾವಿಶಂಕ್ಯೋಽಸಿ ಸ್ವಸ್ತಿ ಪ್ರಾಪ್ನುಹಿ ಭೂತಯೇ ॥೧೫॥

ನೀನು ಅರ್ಜುನನಿಗೆ ಸಹೋದರನೂ ಮತ್ತು ಸ್ನೇಹಿತನೂ ಆಗಿದ್ದೀಯೆ. ನನಗೂ ಪ್ರಿಯನಾಗಿದ್ದೀಯೆ. ನಿನ್ನ ಸೌಹಾರ್ದದ ವಿಷಯದಲ್ಲಿ ಯಾರೂ ಸಂಶಯಪಡಬೇಕಾದ ಕಾರಣವಿಲ್ಲ. ನಿನಗೆ ಕ್ಷೇಮವಾಗಲಿ, ನಮ್ಮ ಅಭ್ಯುದಯಕ್ಕಾಗಿ ನೀನು ಹೋಗಿ ಬಾ.

ಅಸ್ಮಾನ್ ವೇತ್ಥ ಪರಾನ್ ವೇತ್ಥ ವೇತ್ಥಾರ್ಥಾನ್ ವೇತ್ಥ ಭಾಷಿತುಮ್ ।
ಯದ್ಯದಸ್ಮದ್ಧಿತಂ ಕೃಷ್ಣ ತತ್ತದ್ ವಾಚ್ಯಃ ಸುಯೋಧನಃ ॥೧೬॥

ನೀನು ನಮ್ಮನ್ನು ತಿಳಿದಿದ್ದೀಯೆ. ಅವರನ್ನು ತಿಳಿದಿದ್ದೀಯೆ. ಎಲ್ಲ ವಿಷಯಗಳನ್ನೂ ತಿಳಿದಿದ್ದೀಯೆ ಮತ್ತು ಹೇಗೆ ಮಾತನಾಡಬೇಕೆಂದೂ ತಿಳಿದಿದ್ದೀಯೆ. ಎಲೈ ಕೃಷ್ಣನೇ, ಯಾವ ಯಾವುದು ನಮಗೆ ಹಿತವೋ ಅವೆಲ್ಲವನ್ನೂ ಸುಯೋಧನನಿಗೆ ಹೇಳಬೇಕು.

ಯದ್ಯದ್ ಧರ್ಮ್ಯಾಣ ಸಂಯುಕ್ತಮುಪಪದ್ಯೇದ್ಧಿತಂ ವಚಃ ।
ತತ್ತತ್ ಕೇಶವ ಭಾಷೇಥಾಃ ಸಾಂತ್ವಂ ವಾ ಯದಿ ವೇತರತ್ ॥೧೭॥

ಯಾವ ಯಾವುದು ಧರ್ಮಯುಕ್ತವಾಗಿರುತ್ತದೆಯೋ ಮತ್ತು ಯಾವ ಯಾವ ಮಾತುಗಳು ನಮಗೆ ಹಿತವನ್ನು ಉಂಟುಮಾಡುತ್ತವೆಯೋ ಎಲೈ ಕೇಶವನೇ, ಅದು

ಸಂಧಿಯಾಗಲೀ ಅಥವಾ ಯುದ್ಧವಾಗಲೀ ಆಯಾ ವಿಷಯಗಳನ್ನು ಕುರಿತು ನೀನು ಅಲ್ಲಿ ಮಾತನಾಡಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಉದ್ಯೋಗಪರ್ವಣಿ ಏಕಸಪ್ತತಿತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಎಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೆರಡನೆಯ ಅಧ್ಯಾಯ

ಯುಧಿಷ್ಠಿರನಿಗೆ ಯುದ್ಧಪಕ್ಷವನ್ನು ಸ್ಥಿರಮಾಡಿ, ಲೋಕಸಂಶಯನಿರಾಕರಣೆ ಮಾಡಲು ಸಂಧಿಗಾಗಿ ಪ್ರಯತ್ನ ಮಾಡುವಂತೆ ಕೃಷ್ಣನ ಕಥನ.

ಶ್ರೀಭಗವಾನ್

ಸಂಜಯಸ್ಯ ಶ್ರುತಂ ವಾಕ್ಯಂ ಭವತಶ್ಚ ಶ್ರುತಂ ಮಯಾ ।
ಸರ್ವಂ ಜಾನಾಮ್ಯಭಿಪ್ರಾಯಂ ತೇಷಾಂ ಚ ಭವತಶ್ಚ ಯಃ ॥೧॥

ಶ್ರೀಭಗವಾನ್– ಸಂಜಯನ ಮಾತುಗಳನ್ನು ಕೇಳಿದೆ ಮತ್ತು ನಿನ್ನ ಮಾತುಗಳನ್ನೂ ಕೇಳಿದೆ. ನಿನ್ನ ಮತ್ತು ಅವರ (ಕೌರವರ) ಎಲ್ಲಾ ಅಭಿಪ್ರಾಯವನ್ನೂ ನಾನು ತಿಳಿದಿದ್ದೇನೆ.

ತವ ಧರ್ಮಾಶ್ರಿತಾ ಬುದ್ಧಿಸ್ತೇಷಾಂ ವೈರಾನ್ವಿತಾ ಮತಿಃ ।
ಯದಯುದ್ಧೇನ ಲಭ್ಯೇತ ತತ್ ತೇ ಬಹುಮತಂ ಭವೇತ್ ॥೨॥

ನಿನ್ನ ಬುದ್ಧಿಯು ಧರ್ಮವನ್ನು ಆಶ್ರಯಿಸಿದೆ. ಕೌರವರ ಬುದ್ಧಿಯು ವೈರವನ್ನು ಆಶ್ರಯಿಸಿದೆ. ಯುದ್ಧವಿಲ್ಲದೆ ಯಾವುದನ್ನು ಸಂಪಾದಿಸಬಹುದೋ ಅದು ನಿನಗೆ ಮಾನ್ಯವಾಗುತ್ತದೆ.

ನ ಚ ತನ್ನೈಷ್ಠಿಕಂ ಕರ್ಮ ಕ್ಷತ್ರಿಯಸ್ಯ ವಿಶಾಂಪತೇ ।
ಆಹುರಾಶ್ರಮಿಣಃ ಸರ್ವೇ ಯದ್ ಭೈಕ್ಷಂ ಕ್ಷತ್ರಿಯಶ್ಚರೇತ್ ॥೩॥

ಎಲೈ ರಾಜನೇ, ಕ್ಷತ್ರಿಯನಾದವನು ಭೈಕ್ಷವನ್ನು ಮಾಡುವುದು ಅವನಿಗೆ ವಿಹಿತವಾದ ಕರ್ಮವಲ್ಲವೆಂದು ಎಲ್ಲಾ ಆಶ್ರಮದವರೂ ಹೇಳುತ್ತಾರೆ.

ಜಯೋ ವಧೋ ವಾ ಸಂಗ್ರಾಮೇ ಧಾತ್ರಾऽऽದಿಷ್ಟಃ ಸನಾತನಃ ।
ಸ್ವಧರ್ಮಃ ಕ್ಷತ್ರಿಯಸ್ಯೈಷ ಕಾರ್ಪಣ್ಯಂ ನ ಪ್ರಶಸ್ಯತೇ ॥೪॥

ಯುದ್ಧದಲ್ಲಿ ಜಯ ಅಥವಾ ವಧೆ ಇದು ಬ್ರಹ್ಮದೇವರು ಕ್ಷತ್ರಿಯರಿಗೆ ಆದೇಶ ಮಾಡಿದ ಸನಾತನವಾದ ಧರ್ಮ. ಇದು ಕ್ಷತ್ರಿಯನ ಸ್ವಧರ್ಮ. ಅವನಿಗೆ ದೈನ್ಯವು ಪ್ರಶಸ್ತವಲ್ಲ.

ನ ಹಿ ಕಾರ್ಪಣ್ಯಮಾಸ್ಥಾಯ ಶಕ್ಯಾ ವೃತ್ತಿರ್ಯುಧಿಷ್ಠಿರ ।
ವಿಕ್ರಮಸ್ವ ಮಹಾಬಾಹೋ ಜಹಿ ಶತ್ರೂನರಿಂದಮ ॥೫॥

ಎಲೈ ಯುಧಿಷ್ಠಿರನೇ, ದೈನ್ಯವನ್ನು ಅವಲಂಬಿಸಿ ಬದುಕಲು ಸಾಧ್ಯವಿಲ್ಲ. ಮಹಾಬಾಹುವೇ, ಪರಾಕ್ರಮವನ್ನು ತೋರಿಸು. ಅರಿಂದಮನೇ, ಶತ್ರುಗಳನ್ನು ಜಯಿಸುವವನಾಗು.

ಅತಿಗೃದ್ಧಾಃ ಕೃತಸ್ನೇಹಾ ದೀರ್ಘಕಾಲಂ ಸಹೋಷಿತಾಃ ।
ಕೃತಮಿತ್ರಾಃ ಕೃತಬಲಾಃ ಧಾರ್ತರಾಷ್ಟ್ರಾಃ ಪರಂತಪ ॥೬॥

ಎಲೈ ಪರಂತಪನೇ, ಧೃತರಾಷ್ಟ್ರನ ಪುತ್ರರು ಬಹಳ ದುರಾಸೆಯುಳ್ಳವರು. ದೀರ್ಘಕಾಲದಲ್ಲಿ ಜೊತೆಯಲ್ಲಿ ವಾಸಮಾಡಿ ಪರಸ್ಪರ ಸ್ನೇಹವುಳ್ಳವರಾಗಿದ್ದಾರೆ. ಮಿತ್ರರನ್ನು ಸಂಪಾದಿಸಿ ಸೈನ್ಯವನ್ನೂ ಸಂಪಾದಿಸಿದ್ದಾರೆ.

ನ ಪರ್ಯಾಯೋऽಸ್ತಿ ಯತ್ ಸಾಮ್ಯಂ ತ್ವಯಿ ಕುರ್ಯುರ್ವಿಶಾಂಪತೇ।
ಬಲವತ್ತಾಂ ಹಿ ಮನ್ಯಂತೇ ಭೀಷ್ಮದ್ರೋಣಕೃಪಾದಿಭಿಃ ॥೭॥

ಎಲೈ ರಾಜನೇ, ಅವರು ನಿನ್ನನ್ನು ತಮ್ಮ ಸಮಾನವಾಗಿ ಕಾಣುತ್ತಾರೆ ಎಂಬ ನಿಶ್ಚಯವಿಲ್ಲ. ಭೀಷ್ಮದ್ರೋಣಕೃಪರಿಂದ ಕೂಡಿದ ಅವರು ತಮ್ಮನ್ನು ನಿನಗಿಂತ ಬಲಿಷ್ಠರೆಂದು ತಿಳಿದಿದ್ದಾರೆ (ಲಕ್ಷಾಲಂಕಾರ).

ಸಂಧಿಯಾಗಲೀ ಅಥವಾ ಯುದ್ಧವಾಗಲೀ ಆಯಾ ವಿಷಯಗಳನ್ನು ಕುರಿತು ನೀನು ಅಲ್ಲಿ ಮಾತನಾಡಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಉದ್ಯೋಗಪರ್ವಣಿ ಏಕಸಪ್ತತಿತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಎಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೆರಡನೆಯ ಅಧ್ಯಾಯ

ಯುಧಿಷ್ಠಿರನಿಗೆ ಯುದ್ಧಪಕ್ಷವನ್ನು ಸ್ಥಿರಮಾಡಿ, ಲೋಕಸಂಶಯನಿರಾಕರಣೆ ಮಾಡಲು ಸಂಧಿಗಾಗಿ ಪ್ರಯತ್ನ ಮಾಡುವಂತೆ ಕೃಷ್ಣನ ಕಥನ.

ಶ್ರೀಭಗವಾನ್

ಸಂಜಯಸ್ಯ ಶ್ರುತಂ ವಾಕ್ಯಂ ಭವತಶ್ಚ ಶ್ರುತಂ ಮಯಾ ।
ಸರ್ವಂ ಜಾನಾಮ್ಯಭಿಪ್ರಾಯಂ ತೇಷಾಂ ಚ ಭವತಶ್ಚ ಯಃ ॥೧॥

ಶ್ರೀಭಗವಾನ್– ಸಂಜಯನ ಮಾತುಗಳನ್ನು ಕೇಳಿದೆ ಮತ್ತು ನಿನ್ನ ಮಾತುಗಳನ್ನೂ ಕೇಳಿದೆ. ನಿನ್ನ ಮತ್ತು ಅವರ (ಕೌರವರ) ಎಲ್ಲಾ ಅಭಿಪ್ರಾಯವನ್ನೂ ನಾನು ತಿಳಿದಿದ್ದೇನೆ.

ತವ ಧರ್ಮಾಶ್ರಿತಾ ಬುದ್ಧಿಸ್ತೇಷಾಂ ವೈರಾನ್ವಿತಾ ಮತಿಃ ।
ಯದಯುದ್ಧೇನ ಲಭ್ಯೇತ ತತ್ ತೇ ಬಹುಮತಂ ಭವೇತ್ ॥೨॥

ನಿನ್ನ ಬುದ್ಧಿಯು ಧರ್ಮವನ್ನು ಆಶ್ರಯಿಸಿದೆ. ಕೌರವರ ಬುದ್ಧಿಯು ವೈರವನ್ನು ಆಶ್ರಯಿಸಿದೆ. ಯುದ್ಧವಿಲ್ಲದೆ ಯಾವುದನ್ನು ಸಂಪಾದಿಸಬಹುದೋ ಅದು ನಿನಗೆ ಮಾನ್ಯವಾಗುತ್ತದೆ.

ನ ಚ ತನ್ನೈಷ್ಠಿಕಂ ಕರ್ಮ ಕ್ಷತ್ರಿಯಸ್ಯ ವಿಶಾಂಪತೇ ।
ಆಹುರಾಶ್ರಮಿಣಃ ಸರ್ವೇ ಯದ್ ಭೈಕ್ಷಂ ಕ್ಷತ್ರಿಯಶ್ಚರೇತ್ ॥೩॥

ಎಲೈ ರಾಜನೇ, ಕ್ಷತ್ರಿಯನಾದವನು ಭೈಕ್ಷವನ್ನು ಮಾಡುವುದು ಅವನಿಗೆ ವಿಹಿತವಾದ ಕರ್ಮವಲ್ಲವೆಂದು ಎಲ್ಲಾ ಆಶ್ರಮದವರೂ ಹೇಳುತ್ತಾರೆ.

ಜಯೋ ವಧೋ ವಾ ಸಂಗ್ರಾಮೇ ಧಾತ್ರಾऽऽದಿಷ್ಟಃ ಸನಾತನಃ ।
ಸ್ವಧರ್ಮಃ ಕ್ಷತ್ರಿಯಸ್ಯೈಷ ಕಾರ್ಪಣ್ಯಂ ನ ಪ್ರಶಸ್ಯತೇ ॥೪॥

ಯುದ್ಧದಲ್ಲಿ ಜಯ ಅಥವಾ ವಧೆ ಇದು ಬ್ರಹ್ಮದೇವರು ಕ್ಷತ್ರಿಯರಿಗೆ ಆದೇಶ ಮಾಡಿದ ಸನಾತನವಾದ ಧರ್ಮ. ಇದು ಕ್ಷತ್ರಿಯನ ಸ್ವಧರ್ಮ. ಅವನಿಗೆ ದೈನ್ಯವು ಪ್ರಶಸ್ತವಲ್ಲ.

ನ ಹಿ ಕಾರ್ಪಣ್ಯಮಾಸ್ಥಾಯ ಶಕ್ಯಾ ವೃತ್ತಿರ್ಯುಧಿಷ್ಠಿರ ।
ವಿಕ್ರಮಸ್ವ ಮಹಾಬಾಹೋ ಜಹಿ ಶತ್ರೂನರಿಂದಮ ॥೫॥

ಎಲೈ ಯುಧಿಷ್ಠಿರನೇ, ದೈನ್ಯವನ್ನು ಅವಲಂಬಿಸಿ ಬದುಕಲು ಸಾಧ್ಯವಿಲ್ಲ. ಮಹಾಬಾಹುವೇ, ಪರಾಕ್ರಮವನ್ನು ತೋರಿಸು. ಅರಿಂದಮನೇ, ಶತ್ರುಗಳನ್ನು ಜಯಿಸುವವನಾಗು.

ಅತಿಗೃದ್ಧಾಃ ಕೃತಸ್ನೇಹಾ ದೀರ್ಘಕಾಲಂ ಸಹೋಷಿತಾಃ ।
ಕೃತಮಿತ್ರಾಃ ಕೃತಬಲಾಃ ಧಾರ್ತರಾಷ್ಟ್ರಾಃ ಪರಂತಪ ॥೬॥

ಎಲೈ ಪರಂತಪನೇ, ಧೃತರಾಷ್ಟ್ರನ ಪುತ್ರರು ಬಹಳ ದುರಾಸೆಯುಳ್ಳವರು. ದೀರ್ಘಕಾಲದಲ್ಲಿ ಜೊತೆಯಲ್ಲಿ ವಾಸಮಾಡಿ ಪರಸ್ಪರ ಸ್ನೇಹವುಳ್ಳವರಾಗಿದ್ದಾರೆ. ಮಿತ್ರರನ್ನು ಸಂಪಾದಿಸಿ ಸೈನ್ಯವನ್ನೂ ಸಂಪಾದಿಸಿದ್ದಾರೆ.

ನ ಪರ್ಯಾಯೋऽಸ್ತಿ ಯತ್ ಸಾಮ್ಯಂ ತ್ವಯಿ ಕುರ್ಯುರ್ವಿಶಾಂಪತೇ।
ಬಲವತ್ತಾಂ ಹಿ ಮನ್ಯಂತೇ ಭೀಷ್ಮದ್ರೋಣಕೃಪಾದಿಭಿಃ ॥೭॥

ಎಲೈ ರಾಜನೇ, ಅವರು ನಿನ್ನನ್ನು ತಮ್ಮ ಸಮಾನವಾಗಿ ಕಾಣುತ್ತಾರೆ ಎಂಬ ನಿಶ್ಚಯವಿಲ್ಲ. ಭೀಷ್ಮದ್ರೋಣಕೃಪರಿಂದ ಕೂಡಿದ ಅವರು ತಮ್ಮನ್ನು ನಿನಗಿಂತ ಬಲಿಷ್ಠರೆಂದು ತಿಳಿದಿದ್ದಾರೆ (ಲಕ್ಷಾಲಂಕಾರ).

ಯಾವಚ್ಚ ಮಾರ್ದವೇನೈತಾನ್ ರಾಜನ್ನುಪಚರಿಷ್ಯಸಿ ।
ತಾವದೇತೇ ಹರಿಷ್ಯಂತಿ ತವ ರಾಜ್ಯಮರಿಂದಮ ॥೮॥

ಎಲೈ ರಾಜನೇ, ಎಲೈ ಅರಿಂದಮನೇ, ಎಲ್ಲಿಯವರೆಗೆ ನೀನು ಅವರ ಜೊತೆಯಲ್ಲಿ ಮೃದುವಾಗಿ ನಡೆದುಕೊಳ್ಳುವಿಯೋ ಅಲ್ಲಿಯವರೆಗೆ ಅವರು ನಿನ್ನ ರಾಜ್ಯವನ್ನು ಅಪಹರಿಸುವರು.

ನಾನುಕ್ರೋಶಾನ್ನ ಕಾರ್ಪಣ್ಯಾನ್ನ ಚ ಧರ್ಮಾರ್ಥಸಂಶ್ರಯಾತ್ ।
ಅಲಂ ಕರ್ತುಂ ಧಾರ್ತರಾಷ್ಟ್ರಾನ್ ತವ ಕಾಮಮರಿಂದಮ ॥೯॥

ಎಲೈ ಅರಿಂದಮನೇ, ದಯೆಯಿಂದಾಗಲೀ, ದೈನ್ಯದಿಂದಾಗಲೀ, ಧರ್ಮಾರ್ಥಯುಕ್ತ ಮಾತುಗಳಿಂದಾಗಲೀ ಧೃತರಾಷ್ಟ್ರಪುತ್ರರನ್ನು ನಿನ್ನ ಇಚ್ಛೆಯನ್ನು ನೆರವೇರಿಸುವಂತೆ ಮಾಡಲು ಸಾಧ್ಯವಿಲ್ಲ.

ಏತದೇವ ನಿಮಿತ್ತಂ ತೇ ಧಾರ್ತರಾಷ್ಟ್ರೋ ಯಥಾ ತ್ವಯಿ ।
ನಾನ್ವತಪ್ಯತ ಕೋಪೇನ ತವ ಕೃತ್ವಾಽಪಿ ದುಷ್ಕರಮ್ ॥೧೦॥

ನಿನಗೆ ದುಷ್ಕರವಾದ ಅಪಚಾರವನ್ನು ಮಾಡಿದರೂ ದುರ್ಯೋಧನನು ಪಶ್ಚಾತ್ತಾಪ ಪಡದಿರುವುದಕ್ಕೆ ನಿನ್ನ ಮಾರ್ದವವೇ ಕಾರಣ.

ಪಿತಾಮಹಸ್ಯ ದ್ರೋಣಸ್ಯ ವಿದುರಸ್ಯ ಚ ಧೀಮತಃ ।
ಬ್ರಾಹ್ಮಣಾನಾಂ ಚ ಸಾಧೂನಾಂ ರಾಜ್ಞಶ್ಚ ನಗರಸ್ಯ ಚ ॥೧೧॥

ಪಶ್ಯತಾಂ ಕುರುಮುಖ್ಯಾನಾಂ ಸರ್ವೇಷಾಮೇವ ತತ್ತ್ವತಃ ।
ದಾನಶೀಲಂ ಮೃದುಂ ದಾಂತಂ ಧರ್ಮಶೀಲಮನುವ್ರತಮ್ ॥೧೨॥

ಯತ್ ತ್ವಾಮುಪಧಿನಾ ರಾಜ್ಯಂ ದ್ಯೂತೇನಾವಂಚಯತ್ ತದಾ ।
ನ ಚಾಪತ್ರಪತೇ ಪಾಪೋ ನೃಶಂಸಃ ಸ್ವೇನ ಕರ್ಮಣಾ ॥೧೩॥

ಪಿತಾಮಹರಾದ ಭೀಷ್ಮರೂ, ದ್ರೋಣರೂ, ಮೇಧಾವಿಯಾದ ವಿದುರನೂ, ಬ್ರಾಹ್ಮಣರೂ, ಸಜ್ಜನರೂ, ರಾಜರೂ, ನಾಗರಿಕರೂ, ಕುರುಮುಖ್ಯರೂ ಎಲ್ಲರೂ ಸರಿಯಾಗಿ ನೋಡುತ್ತಿರುವಂತೆಯೇ ದಾನಶೀಲನೂ, ಮೃದುವೂ, ಧರ್ಮಶೀಲನೂ,

ಇಂದ್ರಿಯನಿಗ್ರಹವುಳ್ಳವನೂ, ದೊಡ್ಡವರ ಮಾತನ್ನು ಕೇಳುವವನೂ ಆದ ನಿನಗೆ ಕಪಟದ್ಯೂತದಿಂದ ವಂಚನೆಯನ್ನು ಮಾಡಿ, ರಾಜ್ಯವನ್ನು ಅಪಹರಿಸಿ ಆ ಕ್ರೂರಿಯಾದ ದುರ್ಯೋಧನನು ತಾನು ಮಾಡಿದ ಕರ್ಮದಿಂದ ನಾಚಿಕೆಯನ್ನು ಪಡುವುದಿಲ್ಲ.

ತಥಾಶೀಲಸಮಾಚಾರೇ ರಾಜನ್ ಮಾ ಪ್ರಣಯಂ ಕೃಥಾಃ ।
ವಧ್ಯಾಸ್ತೇ ಸರ್ವಲೋಕಸ್ಯ ಕಿಂ ಪುನಸ್ತವ ಭಾರತ ॥೧೪॥

ಎಲೈ ರಾಜನೇ, ಅಂತಹ ಶೀಲ ಮತ್ತು ಆಚಾರಗಳುಳ್ಳ ವ್ಯಕ್ತಿಯಲ್ಲಿ ನೀನು ಸ್ನೇಹವನ್ನು ಮಾಡಬೇಡ. ಅವರು ಎಲ್ಲರಿಗೂ ವಧ್ಯರಾದವರು. ನಿನ್ನಿಂದ ವಧ್ಯರಾದವರು ಎಂದು ಪುನಃ ಹೇಳಬೇಕಾದುದಿಲ್ಲ.

ವಾಗ್ಭಿಸ್ತ್ವ ಪ್ರತಿರೂಪಾಭಿರತುದತ್ ತ್ವಾಂ ಸಹಾನುಜಮ್ ।
ನಾಥ್ಯಮಾನಃ ಪ್ರಹೃಷ್ಟಃ ಸನ್ ಭ್ರಾತೃಭಿಃ ಸಹ ಭಾಷತೇ ॥೧೫॥

ಏತಾವತ್ ಪಾಂಡವಾನಾಂ ಹಿ ನಾಸ್ತಿ ಕಿಂಚಿದಿಹ ಸ್ವಕಮ್ ।
ನಾಮಧೇಯಂ ಚ ಗೋತ್ರಂ ಚ ತಥಾಽಪ್ಯೇಷಾಂ ತು ಶಿಷ್ಯತೇ ॥೧೬॥

ಕಾಲೇನ ಮಹತಾ ಚೈಷಾಂ ಭವಿಷ್ಯತಿ ಪರಾಭವಃ ।
ಪ್ರಕೃತಿಂ ತೇ ಭಜಿಷ್ಯಂತಿ ನಷ್ಟಪ್ರಕೃತಯೋ ಜನಾಃ ॥೧೭॥

ಅಸದೃಶವಾದ ಕೆಟ್ಟಮಾತುಗಳಿಂದ ತಮ್ಮಂದಿರಿಂದ ಕೂಡಿದ ನಿನ್ನನ್ನು ಅವನು ಚುಚ್ಚಿಮಾತನಾಡಿದನು. ಅವನನ್ನು ಬೇಡಿದರೂ ಅವನು ಸಂತೋಷದಿಂದ ತಮ್ಮಂದಿರ ಜೊತೆಯಲ್ಲಿ ಬಾಯಿಗೆ ಬಂದಂತೆ ಮಾತನಾಡುತ್ತಾನೆ. ಇಲ್ಲಿ ಪಾಂಡವರ ಧನವು ಸ್ವಲ್ಪವೂ ಇಲ್ಲ. ಆದರೂ ಅವರ ಹೆಸರು ಮತ್ತು ಗೋತ್ರವು ಮಾತ್ರ ಉಳಿದಿದೆ. ಕಾಲಕ್ರಮದಲ್ಲಿ ಅವರಿಗೆ ಪರಾಭವ ಉಂಟಾಗಿ ಅದೂ ನಾಶವನ್ನು ಹೊಂದುತ್ತದೆ. ಅವರು ತಮ್ಮ ಸ್ವಭಾವವನ್ನು ಕಳೆದುಕೊಂಡು ಪ್ರಕೃತಿಯಲ್ಲಿ ಲೀನರಾಗುತ್ತಾರೆ (ಎಂದು ಬಾಯಿಗೆ ಬಂದಂತೆ ಮಾತನಾಡುತ್ತಾನೆ).

ದುಃಶಾಸನೇನ ಪಾಪೇನ ತದಾ ದುಃಖೇ ಪ್ರವರ್ತಿತೇ ।
ಅನಾಥವತ್ ತದಾ ದೇವೀ ದ್ರೌಪದೀ ಸುದುರಾತ್ಮನಾ ॥೧೮॥

ಆಕೃಷ್ಟಕೇಶಾ ರುದತೀ ಸಭಾಯಾಂ ರಾಜಸಂಸದಿ ।
ಭೀಷ್ಮದ್ರೋಣಪ್ರಮುಖತೋ ಗೌರಿತಿ ವ್ಯಾಹೃತಾ ಮುಹುಃ ॥೧೯॥

ಪಾಪಿಯೂ, ದುರಾತ್ಮನೂ ಆದ ದುಶ್ಶಾಸನನೂ ದ್ರೌಪದಿಯನ್ನು ತಲೆಗೂದಲಿನಲ್ಲಿ ಹಿಡಿದು ಎಳೆದು ತಂದು, ರಾಜಸಭೆಯಲ್ಲಿ ಭೀಷ್ಮ-ದ್ರೋಣರ ಎದುರಿನಲ್ಲಿ ಅನಾಥಳಂತೆ ಆ ದೇವಿಯು ಅಳುತ್ತಿದ್ದರೂ ಅಂತಹ ದುಃಖವನ್ನು ಕೊಟ್ಟು, ನೀನು ಪಶು ಎಂದು ಅನೇಕ ಬಾರಿ ಕರೆದನು.

ಭವತಾ ವಾರಿತಾಃ ಸರ್ವೇ ಭ್ರಾತರೋ ಭೀಮವಿಕ್ರಮಾಃ ।
ಧರ್ಮಪಾಶನಿಬದ್ಧಾಶ್ಚ ನ ಕಿಂಚಿತ್ ಪ್ರತಿಪೇದಿರೇ ॥೨೦॥

ಭಯಂಕರ ಪರಾಕ್ರಮವುಳ್ಳ ನಿನ್ನ ತಮ್ಮಂದಿರನ್ನು ನೀನು ತಡೆದೆ. ಧರ್ಮಪಾಶನಿಬದ್ಧರಾದ ಅವರು ಆಗ ಏನನ್ನೂ ಮಾಡಲಿಲ್ಲ.

ಏತಾಶ್ಚಾನ್ಯಾಶ್ಚ ಪರುಷಾ ವಾಚಃ ಸಂಸದಿ ಚೇರಯನ್ ।
ಶ್ಲಾಘತೇ ಜ್ಞಾತಿಮಧ್ಯೇ ಸ್ಮ ತ್ವಯಿ ಪ್ರವ್ರಾಜಿತೇ ವನಮ್ ॥೨೧॥

ಮತ್ತು ಇಂತಹ ಅನೇಕ ಮತ್ತು ಬೇರೆಯ ಉಗ್ರವಾದ ಮಾತುಗಳನ್ನು ಸಭೆಯಲ್ಲಿ ಆಡಿ, ನೀನು ವನವಾಸಕ್ಕೆ ಹೋದ ಮೇಲೆ ತನ್ನ ಬಂಧುಗಳ ಮಧ್ಯದಲ್ಲಿ ದುರ್ಯೋಧನನು ತನ್ನನ್ನು ಹೊಗಳಿಕೊಳ್ಳುತ್ತಾನೆ.

ಯೇ ತತ್ರಾಸನ್ ಸಮಾನೀತಾಸ್ತೇ ದೃಷ್ಟ್ವಾ ತ್ವಾಮನಾಗಸಮ್ ।
ಅಶ್ರುಕಂಠಾ ರುದಂತಶ್ಚ ಸಭಾಯಾಮಾಸತೇ ತದಾ ॥೨೨॥

ಆ ಸಭೆಗೆ ಆಹೂತರಾಗಿ ಯಾರು ಬಂದಿದ್ದರೋ ಅವರೆಲ್ಲರೂ ನಿರಪರಾಧಿಯಾದ ನಿನ್ನನ್ನು ನೋಡಿ ಅಶ್ರುಕಂಠರಾಗಿ ಅಳುತ್ತಾ ಸಭೆಯಲ್ಲಿ ಸುಮ್ಮನೆ ಕುಳಿತಿದ್ದರು.

ನಚೈನಮಭ್ಯನಂದಂಸ್ತೇ ರಾಜಾನೋ ಬ್ರಾಹ್ಮಣೈಃ ಸಹ ।
ಸರ್ವೇ ದುರ್ಯೋಧನಂ ತತ್ರ ನಿಂದಂತಿ ಸ್ಮ ಸಭಾಸದಃ ॥೨೩॥

ಬ್ರಾಹ್ಮಣರಿಂದ ಸಹಿತರಾದ ಆ ರಾಜರು ಅವನನ್ನು ಅಭಿನಂದಿಸಲಿಲ್ಲ. ಅಲ್ಲಿದ್ದ ಸಭಾಸದರೆಲ್ಲರೂ ದುರ್ಯೋಧನನನ್ನು ನಿಂದಿಸಿದರು.

ಕುಲೀನಸ್ಯ ಚ ಯಾ ನಿಂದಾ ವಧೋ ವಾಽಮಿತ್ರಕರ್ಶನ ।
ಮಹಾಗುಣೋ ವಧೋ ರಾಜನ್ ನ ತು ನಿಂದಾ ಕುಜೀವಿನಃ ॥೨೪॥

ಎಲೈ ಶತ್ರುಕರ್ಶನನೇ, ಕುಲೀನನಾದವನಿಗೆ ನಿಂದೆ ಮತ್ತು ವಧೆಗಳಲ್ಲಿ ವಧೆಯು ಬಹಳ ಶ್ರೇಷ್ಠವಾದುದು. ಕೆಟ್ಟಜೀವನವನ್ನು ನಡೆಸುವ ಅವನಿಗೆ ನಿಂದೆಯು ಒಳ್ಳೆಯದಲ್ಲ.

ತದೈವ ನಿಹತೋ ರಾಜನ್ ಯದೈವ ನಿರಪತ್ರಪಃ ।
ನಿಂದಿತಶ್ಚ ಮಹಾರಾಜ ಪೃಥಿವ್ಯಾಂ ಸರ್ವರಾಜಭಿಃ ॥೨೫॥

ಎಲೈ ಮಹಾರಾಜನೇ, ನಿರ್ಲಜ್ಜನಾದ ಅವನು ಭೂಮಿಯಲ್ಲಿ ಸರ್ವರಾಜರಿಂದ ನಿಂದಿತನಾದಾಗಲೇ ಅವನು ಮೃತನಾಗಿದ್ದಾನೆ.

ಈಷತ್ಕಾರೋ ವಧಸ್ತಸ್ಯ ಯಸ್ಯ ಚಾರಿತ್ರಮೀದೃಶಮ್ ।
ಪ್ರಸ್ಕಂದನಃ ಪ್ರತಿಸ್ತಬ್ಧಃ ಛಿನ್ನಮೂಲ ಇವ ದ್ರುಮಃ ॥೨೬॥

ಯಾವನ ಚರಿತ್ರೆಯು ಈ ರೀತಿಯಾಗಿದೆಯೋ ಅವನನ್ನು ತುಚ್ಛೀಕರಿಸುವುದೇ ಅವನ ವಧೆ. ಸ್ತ್ರೀಲೋಲನೂ, ಪ್ರತಿಸ್ತಬ್ಧನೂ ಆದ ಅವನು ಬುಡವನ್ನು ಕತ್ತರಿಸಿದ ಮರದಂತೆ (ನಾಶವನ್ನು ಹೊಂದುವನು).

ವಧ್ಯಃ ಸರ್ಪ ಇವಾನಾರ್ಯಃ ಸರ್ವಲೋಕಸ್ಯ ದುರ್ಮತಿಃ ॥೨೭॥

ಜಹ್ಯೇನಂ ತ್ವಮಮಿತ್ರಘ್ನ ಮಾ ರಾಜನ್ ವಿಚಿಕಿತ್ಸಥಾಃ ॥೨೮॥

ಅನಾರ್ಯನೂ, ದುರ್ಮತಿಯೂ ಆದ ಅವನು ಸರ್ಪದಂತೆ ಸರ್ವಲೋಕಕ್ಕೂ ವಧ್ಯನಾದವನು. ಶತ್ರುಸಂಹಾರಕನಾದ ರಾಜನೇ, ಅವನನ್ನು ಸಂಹರಿಸು. ಇದರಲ್ಲಿ ಸಂಶಯಪಡಬೇಡ.

ಸರ್ವಥಾ ತು ಮತಂ ಚೈತದ್ ರೋಚತೇ ಚ ಮಮಾನಘ ।
ಯತ್ ತ್ವಂ ಪಿತರಿ ಭೀಷ್ಮೇ ಚ ಪ್ರಣಿಪಾತಂ ಸಮಾಚರೇಃ ॥೨೯॥

ಎಲೈ ನಿರ್ದೋಷನಾದವನೇ, ನೀನು ತಂದೆಯಾದ ಧೃತರಾಷ್ಟ್ರನಿಗೂ ಮತ್ತು ಪಿತಾಮಹರಾದ ಭೀಷ್ಮರಿಗೂ ನಮಸ್ಕಾರ ಮಾಡುವುದು ನನಗೆ ಬಹಳವಾಗಿ ಹಿಡಿಸುತ್ತದೆ.

ಅಹಂ ತು ಸರ್ವಲೋಕಸ್ಯ ಗತ್ವಾ ಚ್ಛೇತ್ಸ್ಯಾಮಿ ಸಂಶಯಮ್ ।
ಯೇಷಾಮಸ್ತಿ ದ್ವಿಧಾ ಭಾವೋ ರಾಜನ್ ದುರ್ಯೋಧನಂ ಪ್ರತಿ ॥೩೦॥

ಎಲೈ ರಾಜನೇ, ಯಾರಿಗೆ ದುರ್ಯೋಧನನ ವಿಷಯದಲ್ಲಿ ಒಳ್ಳೆಯವನು ಮತ್ತು ಕೆಟ್ಟವನು ಎಂಬ ಎರಡು ರೀತಿಯಾದ ಬುದ್ಧಿ ಇದೆಯೋ ನಾನು ಅಲ್ಲಿಗೆ ಹೋಗಿ ಎಲ್ಲ ಲೋಕಗಳ ಆ ಸಂಶಯವನ್ನು ಪರಿಹರಿಸುವೆನು.

ಮಧ್ಯೇ ರಾಜ್ಞಾಮಹಂ ತತ್ರ ಪ್ರತಿಪೌರುಷಿಕಾನ್ ಗುಣಾನ್ ।
ತವ ಸಂಕೀರ್ತಯಿಷ್ಯಾಮಿ ಯೇ ಚ ತಸ್ಯ ವ್ಯತಿಕ್ರಮಾಃ ॥೩೧॥

ಅಲ್ಲಿ ರಾಜರ ಮಧ್ಯದಲ್ಲಿ ನಾನು ನಿನ್ನ ಅಸಾಧಾರಣ ಗುಣಗಳನ್ನೂ ಮತ್ತು ಅವನ ಅಪಚಾರಗಳನ್ನೂ ನಿರೂಪಿಸುವೆನು.

ಬ್ರುವತಸ್ತತ್ರ ಮೇ ವಾಕ್ಯಂ ಧರ್ಮಾರ್ಥಸಹಿತಂ ಹಿತಮ್ ।
ನಿಶಮ್ಯ ಪಾರ್ಥಿವಾಃ ಸರ್ವೇ ನಾನಾಜನಪದೇಶ್ವರಾಃ ॥೩೨॥

ತ್ವಯಿ ಸಂಪ್ರತಿಪತ್ಸ್ಯಂತೇ ಧರ್ಮಾತ್ಮಾ ಸತ್ಯವಾಗಿತಿ ॥೩೩॥

ಅಸ್ಮಿಂಶ್ಚಾಧಿಗಮಿಷ್ಯಂತಿ ತಥಾ ಲೋಭಾದವರ್ತತ ॥೩೪॥

ನನ್ನ ಧರ್ಮಾರ್ಥಸಹಿತವಾದ ಹಿತವಾದ, ಮಾತುಗಳನ್ನು ಕೇಳಿ, ಅಲ್ಲಿ ಬಂದಿರುವ ನಾನಾ ದೇಶದ ರಾಜರು ನೀನು ಧರ್ಮಾತ್ಮನೂ ಮತ್ತು ಸತ್ಯವಚನನೆಂದು ನಿನ್ನಲ್ಲಿ ಪ್ರೀತಿಯನ್ನು ಹೊಂದುವರು. ದುರ್ಯೋಧನನು ಲೋಭದಿಂದಲೇ ನಡೆದುಕೊಂಡಿದ್ದಾನೆಂದೂ ನಿಶ್ಚಯಿಸುವರು.

ಗರ್ಹಯಿಷ್ಯಾಮಿ ಚೈವೈನಂ ಪೌರಜಾನಪದೇಷ್ವಪಿ ।
ವೃದ್ಧಬಾಲಾನುಪಾದಾಯ ಚಾತುರ್ವರ್ಣ್ಯೇ ಸಮಾಗತೇ ॥೩೫॥

ವೃದ್ಧರೂ ಮತ್ತು ಬಾಲರನ್ನೂ ಒಳಗೊಂಡ ಚತುರ್ವರ್ಣದ ಪೌರಜಾನಪದರು ಸೇರಿರುವಾಗ ನಾನು ಅವನನ್ನು ನಿಂದಿಸುವೆನು.

ಧರ್ಮಂ ಚೇದ್ ಯಾಚಮಾನಸ್ತ್ವಂ ಧರ್ಮಂ ತತ್ರ ನ ಲಪ್ಸ್ಯಸೇ ।
ಕುರೂನ್ ವಿಗರ್ಹಯಿಷ್ಯಂತಿ ಧೃತರಾಷ್ಟ್ರಂ ಚ ಪಾರ್ಥಿವಮ್ ॥೩೬॥

ಧರ್ಮವನ್ನು ಬೇಡುತ್ತಿರುವ ನೀನು ಅಲ್ಲಿ ಧರ್ಮವನ್ನು ಪಡೆಯದಿದ್ದರೆ ಎಲ್ಲಾ ಕುರುಗಳನ್ನೂ ಮತ್ತು ರಾಜನಾದ ಧೃತರಾಷ್ಟ್ರನನ್ನೂ ನಿಂದಿಸುವೆನು.

ತಸ್ಮಿನ್ ಲೋಕಪರಿತ್ಯಕ್ತೇ ಕಿಂ ಕಾರ್ಯಮವಶಿಷ್ಯತೇ ।
ಹತೇ ದುರ್ಯೋಧನೇ ರಾಜನ್ ಯದನ್ಯತ್ ಕ್ರಿಯತಾಮಿತಿ ॥೩೭॥

ಸುಯೋಧನನು ಹೀಗೆ ಎಲ್ಲರಿಂದಲೂ ಪರಿತ್ಯಕ್ತನಾದ ಮೇಲೆ ಇನ್ನೇನು ಉಳಿದಿರುತ್ತದೆ? ರಾಜನೇ, ದುರ್ಯೋಧನನು ಹತನಾದ ಮೇಲೆ ಏನು ಮಾಡಬೇಕೋ ಅದನ್ನು ಮಾಡುವವನಾಗು.

ಯಾತ್ವಾ ಚಾಹಂ ಕುರೂನ್ ಸರ್ವಾನ್ ಯುಷ್ಮದರ್ಥಮಹಾಪಯನ್।
ಯತಿಷ್ಯೇ ಪ್ರಶಮಂ ಕರ್ತುಂ ಲಕ್ಷಯಿಷ್ಯೇ ಚ ಚೇಷ್ಟಿತಮ್ ॥೩೮॥

ನಾನು ಎಲ್ಲ ಕುರುಗಳ ಸಮೀಪಕ್ಕೆ ಹೋಗಿ, ನಿಮ್ಮ ಹಿತಕ್ಕೆ ಭಂಗ ಬರದಂತೆ, ಸಂಧಿಗಾಗಿ ಪ್ರಯತ್ನವನ್ನು ಪಟ್ಟು ಅವನ ಚೇಷ್ಟೆಗಳನ್ನು ಗಮನಿಸುವೆನು.

ಕೌರವಾಣಾಂ ಪ್ರವೃತ್ತಿಂ ಚ ಗತ್ವಾ ಯುದ್ಧಾಧಿಕಾರಿಕಾಮ್ ।
ನಿಶಾಮ್ಯ ವಿನಿವರ್ತಿಷ್ಯೇ ಜಯಾಯ ತವ ಭಾರತ ॥೩೯॥

ಕೌರವರು ಯುದ್ಧಕ್ಕಾಗಿ ಮಾಡುತ್ತಿರುವ ಸಿದ್ಧತೆಗಳನ್ನು ನೋಡಿ ಎಲೈ ಭಾರತನೇ, ನಿನ್ನ ಜಯದ ಸಲುವಾಗಿ ಹಿಂದಿರುಗುವೆನು.

ಸರ್ವಥಾ ಯುದ್ಧಮೇವಾಹಮಾಶಂಸಾಮಿ ಪರೈಃ ಸಹ ।
ನಿಮಿತ್ತಾನಿ ಹಿ ಸರ್ವಾಣಿ ತಥಾ ಪ್ರಾದುರ್ಭವಂತಿ ಮೇ ॥೪೦॥

ಎಲೈ ನಿರ್ದೋಷನಾದವನೇ, ನೀನು ತಂದೆಯಾದ ಧೃತರಾಷ್ಟ್ರನಿಗೂ ಮತ್ತು ಪಿತಾಮಹರಾದ ಭೀಷ್ಮರಿಗೂ ನಮಸ್ಕಾರ ಮಾಡುವುದು ನನಗೆ ಬಹಳವಾಗಿ ಹಿಡಿಸುತ್ತದೆ.

ಅಹಂ ತು ಸರ್ವಲೋಕಸ್ಯ ಗತ್ವಾ ಚ್ಛೇತ್ಸ್ಯಾಮಿ ಸಂಶಯಮ್ ।
ಯೇಷಾಮಸ್ತಿ ದ್ವಿಧಾ ಭಾವೋ ರಾಜನ್ ದುರ್ಯೋಧನಂ ಪ್ರತಿ ॥೩೦॥

ಎಲೈ ರಾಜನೇ, ಯಾರಿಗೆ ದುರ್ಯೋಧನನ ವಿಷಯದಲ್ಲಿ ಒಳ್ಳೆಯವನು ಮತ್ತು ಕೆಟ್ಟವನು ಎಂಬ ಎರಡು ರೀತಿಯಾದ ಬುದ್ಧಿ ಇದೆಯೋ ನಾನು ಅಲ್ಲಿಗೆ ಹೋಗಿ ಎಲ್ಲ ಲೋಕಗಳ ಆ ಸಂಶಯವನ್ನು ಪರಿಹರಿಸುವೆನು.

ಮಧ್ಯೇ ರಾಜ್ಞಾಮಹಂ ತತ್ರ ಪ್ರತಿಪೌರುಷಿಕಾನ್ ಗುಣಾನ್ ।
ತವ ಸಂಕೀರ್ತಯಿಷ್ಯಾಮಿ ಯೇ ಚ ತಸ್ಯ ವ್ಯತಿಕ್ರಮಾಃ ॥೩೧॥

ಅಲ್ಲಿ ರಾಜರ ಮಧ್ಯದಲ್ಲಿ ನಾನು ನಿನ್ನ ಅಸಾಧಾರಣ ಗುಣಗಳನ್ನೂ ಮತ್ತು ಅವನ ಅಪಚಾರಗಳನ್ನೂ ನಿರೂಪಿಸುವೆನು.

ಬ್ರುವತಸ್ತತ್ರ ಮೇ ವಾಕ್ಯಂ ಧರ್ಮಾರ್ಥಸಹಿತಂ ಹಿತಮ್ ।
ನಿಶಮ್ಯ ಪಾರ್ಥಿವಾಃ ಸರ್ವೇ ನಾನಾಜನಪದೇಶ್ವರಾಃ ॥೩೨॥

ತ್ವಯಿ ಸಂಪ್ರತಿಪತ್ಸ್ಯಂತೇ ಧರ್ಮಾತ್ಮಾ ಸತ್ಯವಾಗಿತಿ ॥೩೩॥

ಅಸ್ಮಿಂಶ್ಚಾಧಿಗಮಿಷ್ಯಂತಿ ತಥಾ ಲೋಭಾದವರ್ತತ ॥೩೪॥

ನನ್ನ ಧರ್ಮಾರ್ಥಸಹಿತವಾದ ಹಿತವಾದ, ಮಾತುಗಳನ್ನು ಕೇಳಿ, ಅಲ್ಲಿ ಬಂದಿರುವ ನಾನಾ ದೇಶದ ರಾಜರು ನೀನು ಧರ್ಮಾತ್ಮನೂ ಮತ್ತು ಸತ್ಯವಚನನೆಂದು ನಿನ್ನಲ್ಲಿ ಪ್ರೀತಿಯನ್ನು ಹೊಂದುವರು. ದುರ್ಯೋಧನನು ಲೋಭದಿಂದಲೇ ನಡೆದುಕೊಂಡಿದ್ದಾನೆಂದೂ ನಿಶ್ಚಯಿಸುವರು.

ಗರ್ಹಯಿಷ್ಯಾಮಿ ಚೈವೈನಂ ಪೌರಜಾನಪದೇಷ್ವಪಿ ।
ವೃದ್ಧಬಾಲಾನುಪಾದಾಯ ಚಾತುರ್ವರ್ಣ್ಯೇ ಸಮಾಗತೇ ॥೩೫॥

ವೃದ್ಧರೂ ಮತ್ತು ಬಾಲರನ್ನೂ ಒಳಗೊಂಡ ಚತುರ್ವರ್ಣದ ಪೌರಜಾನಪದರು ಸೇರಿರುವಾಗ ನಾನು ಅವನನ್ನು ನಿಂದಿಸುವೆನು.

ಧರ್ಮಂ ಚೇದ್ ಯಾಚಮಾನಸ್ತ್ವಂ ಧರ್ಮಂ ತತ್ರ ನ ಲಪ್ಸ್ಯಸೇ ।
ಕುರೂನ್ ವಿಗರ್ಹಯಿಷ್ಯಂತಿ ಧೃತರಾಷ್ಟ್ರಂ ಚ ಪಾರ್ಥಿವಮ್ ॥೩೬॥

ಧರ್ಮವನ್ನು ಬೇಡುತ್ತಿರುವ ನೀನು ಅಲ್ಲಿ ಧರ್ಮವನ್ನು ಪಡೆಯದಿದ್ದರೆ ಎಲ್ಲಾ ಕುರುಗಳನ್ನೂ ಮತ್ತು ರಾಜನಾದ ಧೃತರಾಷ್ಟ್ರನನ್ನೂ ನಿಂದಿಸುವೆನು.

ತಸ್ಮಿನ್ ಲೋಕಪರಿತ್ಯಕ್ತೇ ಕಿಂ ಕಾರ್ಯಮವಶಿಷ್ಯತೇ ।
ಹತೇ ದುರ್ಯೋಧನೇ ರಾಜನ್ ಯದನ್ಯತ್ ಕ್ರಿಯತಾಮಿತಿ ॥೩೭॥

ಸುಯೋಧನನು ಹೀಗೆ ಎಲ್ಲರಿಂದಲೂ ಪರಿತ್ಯಕ್ತನಾದ ಮೇಲೆ ಇನ್ನೇನು ಉಳಿದಿರುತ್ತದೆ? ರಾಜನೇ, ದುರ್ಯೋಧನನು ಹತನಾದ ಮೇಲೆ ಏನು ಮಾಡಬೇಕೋ ಅದನ್ನು ಮಾಡುವವನಾಗು.

ಯಾತ್ವಾ ಚಾಹಂ ಕುರೂನ್ ಸರ್ವಾನ್ ಯುಷ್ಮದರ್ಥಮಹಾಪಯನ್।
ಯತಿಷ್ಯೇ ಪ್ರಶಮಂ ಕರ್ತುಂ ಲಕ್ಷಯಿಷ್ಯೇ ಚ ಚೇಷ್ಟಿತಮ್ ॥೩೮॥

ನಾನು ಎಲ್ಲ ಕುರುಗಳ ಸಮೀಪಕ್ಕೆ ಹೋಗಿ, ನಿಮ್ಮ ಹಿತಕ್ಕೆ ಭಂಗ ಬರದಂತೆ, ಸಂಧಿಗಾಗಿ ಪ್ರಯತ್ನವನ್ನು ಪಟ್ಟು ಅವನ ಚೇಷ್ಟೆಗಳನ್ನು ಗಮನಿಸುವೆನು.

ಕೌರವಾಣಾಂ ಪ್ರವೃತ್ತಿಂ ಚ ಗತ್ವಾ ಯುದ್ಧಾಧಿಕಾರಿಕಾಮ್ ।
ನಿಶಾಮ್ಯ ವಿನಿವರ್ತಿಷ್ಯೇ ಜಯಾಯ ತವ ಭಾರತ ॥೩೯॥

ಕೌರವರು ಯುದ್ಧಕ್ಕಾಗಿ ಮಾಡುತ್ತಿರುವ ಸಿದ್ಧತೆಗಳನ್ನು ನೋಡಿ ಎಲೈ ಭಾರತನೇ, ನಿನ್ನ ಜಯದ ಸಲುವಾಗಿ ಹಿಂದಿರುಗುವೆನು.

ಸರ್ವಥಾ ಯುದ್ಧಮೇವಾಹಮಾಶಂಸಾಮಿ ಪರೈಃ ಸಹ ।
ನಿಮಿತ್ತಾನಿ ಹಿ ಸರ್ವಾಣಿ ತಥಾ ಪ್ರಾದುರ್ಭವಂತಿ ಮೇ ॥೪೦॥

ಎಲ್ಲಾ ರೀತಿಯಿಂದಲೂ ನಾನು ಕೌರವರ ಜೊತೆಯಲ್ಲಿ ಯುದ್ಧವನ್ನೇ ಬಯಸುತ್ತೇನೆ. ಎಲ್ಲಾ ಸೂಚನೆಗಳೂ ಹಾಗೆಯೇ ತೋರುತ್ತಿವೆ.

ಮೃಗಾಃ ಶಕುಂತಾಶ್ಚ ವದಂತಿ ಘೋರಂ
ಹಸ್ತ್ಯಶ್ವಮುಖ್ಯೇಷು ನಿಶಾಮಯೇ ಚ ।
ಘೋರಾಣಿ ರೂಪಾಣಿ ತಥೈವ ಚಾಗ್ನಿಃ
ವರ್ಣಾನ್ ಬಹೂನ್ ಪುಷ್ಯತಿ ಘೋರರೂಪಾನ್ ॥೪೧॥

ಪಕ್ಷಿಗಳು ಮತ್ತು ಮೃಗಗಳು ಘೋರವಾಗಿ ಕಿರುಚುತ್ತಿವೆ. ಪ್ರಧಾನವಾದ ಗಜಗಳು ಮತ್ತು ಅಶ್ವಗಳು ರಾತ್ರಿಯ ಸಮಯದಲ್ಲಿ ಘೋರರೂಪವನ್ನು ತಾಳುತ್ತಿವೆ. ಅಗ್ನಿಯು ಭಯಂಕರವಾದ ವರ್ಣಗಳನ್ನು ತೋರಿಸುತ್ತಾ ಜ್ವಲಿಸುತ್ತಿದೆ.

ಮನುಷ್ಯಲೋಕಕ್ಷಯಕೃತ್ ಸುಘೋರೋ
ನೋ ಚೇದನುಪ್ರಾಪ್ತ ಇಹಾಂತಕಃ ಸ್ಯಾತ್ ।
ಶಸ್ತ್ರಾಣಿ ಯಂತ್ರಂ ಕವಚಾನ್ ರಥಾಂಶ್ಚ
ನಾಗಾನ್ ಧ್ವಜಾಂಶ್ಚ ಪ್ರತಿಪಾದಯಸ್ವ ॥೪೨॥

ಮನುಷ್ಯಲೋಕಕ್ಕೆ ಕ್ಷಯವನ್ನುಂಟುಮಾಡುವ ಘೋರವಾದ ಸಮಯವು ಪ್ರಾಪ್ತವಾಗಿದೆ. ಇಲ್ಲದಿದ್ದರೆ ಹಂತಕನಾದ ಯಮನೇ ಇಲ್ಲಿಗೆ ಬರುತ್ತಿದ್ದಾನೆ. ನೀನು ಶಸ್ತ್ರಗಳನ್ನೂ, ಯಂತ್ರ, ಕವಚಗಳನ್ನೂ, ರಥಗಜಧ್ವಜಗಳನ್ನೂ ಸಿದ್ಧಪಡಿಸುವವನಾಗು.

ಯೋಧಾಶ್ಚ ಸರ್ವೇ ಕೃತನಿಶ್ಚಯಾಸ್ತೇ
ಭವಂತು ಹಸ್ತ್ಯಶ್ವರಥೇಷು ಯತ್ತಾಃ ।
ಸಾಂಗ್ರಾಮಿಕಂ ತೇ ಯದುಪಾರ್ಜನೀಯಂ
ಸರ್ವಂ ಸಮಗ್ರಂ ಕುರು ತನ್ನರೇಂದ್ರ ॥೪೩॥

ಎಲೈ ನರೇಂದ್ರನೇ, ನಿನ್ನ ಯೋಧರೆಲ್ಲರೂ ಯುದ್ಧವನ್ನು ನಿಶ್ಚಯಿಸಿದವರಾಗಿ ತಮ್ಮ ಅಶ್ವಗಜರಥಗಳಲ್ಲಿ ಸನ್ನದ್ಧರಾಗಿರಲಿ. ಯುದ್ಧದ ಸಲಕರಣೆಗಳನ್ನು ಏನನ್ನು ಸಂಪಾದಿಸಬೇಕೋ ಅವೆಲ್ಲವನ್ನೂ ಸಂಪಾದಿಸುವವನಾಗು.

ದುರ್ಯೋಧನೋ ನ ಹ್ಯಲಮದ್ಯ ದಾತುಂ
ಜೀವಂಸ್ತವೈತನ್ನೃಪತೇ ಕಥಂಚಿತ್ ।
ಯತ್ ತೇ ಪುರಸ್ತಾದಭವತ್ ಸಮೃದ್ಧಂ
ದ್ಯೂತೇ ಹೃತಂ ಪಾಂಡವಮುಖ್ಯ ರಾಜ್ಯಮ್ ॥೪೪॥

ಎಲೈ ರಾಜನೇ, ಎಲೈ ಪಾಂಡವಮುಖ್ಯನೇ, ಹಿಂದೆ ದ್ಯೂತದಲ್ಲಿ ಯಾವ ನಿನ್ನ ಸಮೃದ್ಧವಾದ ರಾಜ್ಯವನ್ನು ದುರ್ಯೋಧನನು ಅಪಹರಿಸಿದನೋ ಅವನು ಬದುಕಿರುವವರೆಗೆ ಅದನ್ನು ಎಂದೂ ನಿನಗೆ ಕೊಡುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ದ್ವಾಸಪ್ತತಿತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಎಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ಇತ್ಯುಕ್ತೇ ವೈರಮಾತ್ಮೋತ್ಥಂ ಲೋಕಮಧ್ಯೇ ಪ್ರಹಾಪಯನ್ ।
ಲೋಕಸಂಗ್ರಹಣಾರ್ಥಾಯ ಭೀಮಸೇನೋऽಬ್ರವೀದ್ ವಚಃ ॥೫೦॥

ಶ್ರೀಕೃಷ್ಣ ಹೀಗೆ ಹೇಳಿದಾಗ, ಭೀಮ ತನ್ನಿಂದಾಗಿ ಯುದ್ಧವಾಯಿತೆಂಬ ಗ್ರಹಿಕೆ ಲೋಕಕ್ಕೆ ಆಗುವುದನ್ನು ತಪ್ಪಿಸಲು ಲೋಕರೀತಿಯನ್ನು ಅನುಸರಿಸುವುದಕ್ಕಾಗಿ ಈ ಒಂದು ಮಾತನ್ನು ಹೇಳಿದ.

ನಾಸ್ಮನ್ನಿಮಿತ್ತನಾಶಃ ಸ್ಯಾತ್ ಕುಲಸ್ಯಾಪಿ ವಯಂ ಕುಲಮ್ ।
ರಕ್ಷಿತುಂ ಧಾರ್ತರಾಷ್ಟ್ರಸ್ಯ ಭವೇಮಾಧಶ್ಚರಾ ಇತಿ ॥೫೧॥

'ನಮ್ಮ ನಿಮಿತ್ತವಾಗಿ ಕುಲನಾಶವಾಗುವುದು ಬೇಡ. ಕುಲರಕ್ಷಣೆಯ ಸಲುವಾಗಿ ನಾವು ದುರ್ಯೋಧನನ ಕೆಳಗೇ ಇರೋಣ'.

ಇಚ್ಛತಾऽಪ್ಯಖಿಲಾನ್ ಹಂತುಂ ಧಾರ್ತರಾಷ್ಟ್ರಾನ್ ದೃಢಾತ್ಮನಾ ।
ಭೀಮೇನೋಕ್ತೋ ವಾಸುದೇವ ಲೋಕಸಂಗ್ರಹಣೇಚ್ಛಯಾ ॥೫೨॥

ಭೀಮ ದೃಢಮನಸ್ಸಿನಿಂದ ಎಲ್ಲ ಕೌರವರನ್ನೂ ಕೊಲ್ಲಲು ಬಯಸಿಯೂ ಕೂಡ ಹೀಗೆ ಲೋಕರೀತಿಯನ್ನು ಅನುಸರಿಸುವ ಇಚ್ಛೆಯಿಂದ ಕೃಷ್ಣನಿಗೆ ಹೇಳಿದ.

★ ★ ★ ★ ★

ಎಪ್ಪತ್ಮೂರನೆಯ ಅಧ್ಯಾಯ

ದುರ್ಯೋಧನನ ದುರಾರಾಧ್ಯತ್ವವನ್ನು ಹೇಳಿ, ಭೀಮಸೇನನಿಂದ ಕೃಷ್ಣನನ್ನು ಕುರಿತು ಹೇಗಾದರೂ ಸಂಧಿಯನ್ನು ಸಾಧಿಸುವಂತೆ ಪ್ರಾರ್ಥನೆ.

ಭೀಮಃ

ಯಥಾ ಯಥೈವ ಶಾಂತಿಃ ಸ್ಯಾತ್ ಕುರೂಣಾಂ ಮಧುಸೂದನ ।
ತಥಾ ತಥೈವ ಭಾಷೇಥಾ ಮಾ ಸ್ಮ ಯುದ್ಧೇನ ಭೀಷಯೇಃ ॥೧॥

ಭೀಮ– ಎಲೈ ಮಧುಸೂದನನೇ, ಹೇಗೆ ಹೇಗೆ ಮಾತನಾಡಿದರೆ ಕುರುಗಳ ಜೊತೆಯಲ್ಲಿ ಶಾಂತಿಯು ಸಾಧ್ಯವಾಗುವುದೋ ಹಾಗೆಯೇ ಮಾತನಾಡುವವನಾಗು. ಯುದ್ಧದ ವಾರ್ತೆಯಿಂದ ಅವರನ್ನು ಹೆದರಿಸಬೇಡ.

ಅಮರ್ಷೀ ನಿತ್ಯಸಂರಬ್ಧಃ ಶ್ರೇಯೋದ್ವೇಷೀ ಮಹಾಮನಾಃ ।
ನೋಗ್ರಂ ದುರ್ಯೋಧನೋ ವಾಚ್ಯಃ ಸಾಮ್ನೈವೈನಂ ಸಮಾಚರೇಃ ॥೨॥

ದುರ್ಯೋಧನನು ರೋಷಕ್ರೀಡಾದವನು. ಯಾವಾಗಲೂ ಕ್ರುದ್ಧನಾದವನು. ಒಳ್ಳೆಯದನ್ನು ದ್ವೇಷಿಸುವವನು. ಅಹಂಕಾರಿ. ಅವನ ಜೊತೆಯಲ್ಲಿ ಉಗ್ರವಾಗಿ ಮಾತನಾಡಬಾರದು. ಮೃದುವಾಗಿಯೇ ಅವನ ಜೊತೆಯಲ್ಲಿ ವ್ಯವಹರಿಸಬೇಕು.

ಪ್ರಕೃತ್ಯಾ ಪಾಪಸತ್ವಶ್ಚ ತುಲ್ಯಚೇತಾಶ್ಚ ದಸ್ಯುಭಿಃ ।
ಐಶ್ವರ್ಯಮದಮತ್ತಶ್ಚ ಕೃತವೈರಶ್ಚ ಪಾಂಡವೈಃ ॥೩॥

ಅವನು ಸ್ವಾಭಾವಿಕವಾಗಿಯೇ ಪಾಪಮನಸ್ಸುಳ್ಳವನು, ಕಳ್ಳರಿಗೆ ಸಮಾನವಾದ ಮನಃಸ್ಥಿತಿಯುಳ್ಳವನು, ಐಶ್ವರ್ಯಮದದಿಂದ ಮತ್ತನಾಗಿದ್ದಾನೆ ಮತ್ತು ಪಾಂಡವರ ಜೊತೆಯಲ್ಲಿ ದ್ವೇಷವನ್ನು ಮಾಡಿದ್ದಾನೆ.

ಅದೀರ್ಘದರ್ಶೀ ನಿಷ್ಠೂರೀ ಕ್ಷೇಪ್ತಾ ಕ್ರೂರಪರಾಕ್ರಮಃ ।
ದೀರ್ಘಮನ್ಯುರನೇಯಶ್ಚ ಪಾಪಾತ್ಮಾ ನಿಕೃತಿಪ್ರಿಯಃ ॥೪॥

ಅವನು ದೀರ್ಘದರ್ಶಿಯಲ್ಲದವನು, ನಿಷ್ಠುರಿಯಾದವನು, ಸರ್ವನಿಂದಕನಾದವನು, ಕ್ರೂರಪರಾಕ್ರಮವುಳ್ಳವನು, ದೀರ್ಘವೈರಿ, ಅವಿಧೇಯನಾದವನು, ಪಾಪಸ್ವರೂಪನಾದವನು ಮತ್ತು ಕಪಟಪ್ರಿಯನಾದವನು.

ಮ್ರಿಯೇತಾಪಿ ನ ಭಜ್ಯೇತ ನೈವ ಜಹ್ಯಾತ್ ಸ್ವಕಂ ಮತಮ್ ।
ತಾದೃಶೇನ ಶಮಃ ಕೃಷ್ಣ ಮನ್ಯೇ ಪರಮದುಷ್ಕರಃ ॥೫॥

ಅವನು ಮರಣವನ್ನು ಹೊಂದಿಯಾನು, ಆದರೆ ಬಗ್ಗಲಾರ. ತನ್ನ ಅಭಿಪ್ರಾಯವನ್ನು ಏನಾದರೂ ಬಿಡಲಾರ. ಎಲೈ ಕೃಷ್ಣನೇ, ಅಂತಹವನ ಜೊತೆಯಲ್ಲಿ ಸಂಧಿಯು ಬಹಳ ಅಸಾಧ್ಯವಾದುದು ಎಂದು ಭಾವಿಸುತ್ತೇನೆ.

ಸುಹೃದಾಮಪ್ಯವಾಚೀನಃ ತ್ಯಕ್ತಧರ್ಮಾ ಪ್ರಿಯಾನೃತಃ ।
ಪ್ರತಿಹಂತ್ಯೇವ ಸುಹೃದಾಂ ವಾಚಶ್ಚೈವ ಮನಾಂಸಿ ಚ ॥೬॥

ಅವನು ಸುಹೃಜ್ಜನರನ್ನೂ ತಿರಸ್ಕರಿಸುವವನು, ಧರ್ಮವನ್ನು ತ್ಯಜಿಸಿದವನು, ಅನೃತ ಪ್ರಿಯನಾದವನು, ಸುಹೃಜ್ಜನರ ಮಾತನ್ನೂ ಮತ್ತು ಮನಸ್ಸುಗಳನ್ನೂ ಹಾಳು ಮಾಡುವವನು.

ಸ ಮನ್ಯುವಶಮಾಪನ್ನಃ ಸ್ವಭಾವಂ ದುಷ್ಟಮಾಸ್ಥಿತಃ ।
ಸ್ವಭಾವಾತ್ ಪಾಪಮಭ್ಯೇತಿ ತೃಣೈಶ್ಚನ್ನ ಇವೋರಗಃ ॥೭॥

ಕ್ರೋಧಕ್ಕೆ ವಶನಾದ ಅವನು ದುಷ್ಟಸ್ವಭಾವವನ್ನು ಹೊಂದಿದ್ದಾನೆ. ಸ್ವಭಾವದಿಂದಲೇ ಪಾಪವನ್ನು ಮಾಡುವ ಅವನು ತೃಣಗಳಿಂದ ಮುಚ್ಚಲ್ಪಟ್ಟ ಸರ್ಪದಂತಿದ್ದಾನೆ.

ದುರ್ಯೋಧನೋ ಹೃಷೀಕೇಶ ಸರ್ವಥಾ ವಿದಿತಸ್ತವ ।
ಯಚ್ಚೀಲೋ ಯತ್ಸ್ವಭಾವಶ್ಚ ಯದ್‌ಬಲೋ ಯತ್ಪರಾಕ್ರಮಃ ॥೮॥

ಎಲೈ ಹೃಷೀಕೇಶನೇ, ದುರ್ಯೋಧನನು ಎಂತಹ ಶೀಲವುಳ್ಳವನು, ಎಂತಹ ಸ್ವಭಾವದವನು, ಅವನ ಬಲವೇನು, ಅವನ ಪರಾಕ್ರಮವೇನು ಎಂಬುದನ್ನು ನೀನು ಸರ್ವಥಾ ತಿಳಿದಿದ್ದೀಯೆ.

ಪುರಾ ಪ್ರಸನ್ನಾಃ ಕುರವಃ ಸಹಪುತ್ರಾಸ್ತಥಾ ವಯಮ್ ।
ಇಂದ್ರಜ್ಯೇಷ್ಠಾ ಇವಾಭೂಮ ಮೋದಮಾನಾಃ ಸಬಾಂಧವಾಃ ॥೯॥

ಹಿಂದೆ ಮಕ್ಕಳಿಂದ ಸಹಿತರಾದ ಕೌರವರು ಮತ್ತು ನಾವು ಇಂದ್ರಜ್ಯೇಷ್ಠನಾದ ದೇವತೆಗಳಂತೆ ಬಂಧುಗಳ ಜೊತೆಯಲ್ಲಿ ಪ್ರಸನ್ನರಾಗಿ ಸಂತೋಷದಿಂದಿದ್ದೆವು.

ದುರ್ಯೋಧನಸ್ಯ ಕ್ರೋಧಸ್ತು ಭಾರತಾನ್ ಮಧುಸೂದನ ।
ಧಕ್ಷ್ಯತೇ ಶಿಶಿರಾಪಾಯೇ ವನಾನೀವ ಹುತಾಶನಃ ॥೧೦॥

ಎಲೈ ಮಧುಸೂದನನೇ, ಶಿಶಿರಋತು ಕಳೆದ ಮೇಲೆ ಅಗ್ನಿಯು ವನಗಳನ್ನು ಸುಡುವಂತೆ ದುರ್ಯೋಧನನ ಕೋಪವು ಭರತವಂಶದವರನ್ನು ಸುಡುವುದು.

ಅಷ್ಟಾದಶೇಮೇ ರಾಜಾನಃ ಪ್ರಖ್ಯಾತಾ ಮಧುಸೂದನ ।
ಯೇ ಸಮುಚ್ಚಿಚ್ಛಿದುರ್ಜ್ಞಾತೀನ್ ಸುಹೃದಶ್ಚ ಸಬಾಂಧವಾನ್ ॥೧೧॥

ಎಲೈ ಮಧುಸೂದನನೇ, ತಮ್ಮ ಸುಹೃಜ್ಜನರನ್ನೂ ಮತ್ತು ಜ್ಞಾತಿಗಳನ್ನೂ ಮತ್ತು ಬಾಂಧವರನ್ನೂ ನಾಶಮಾಡಿದ ಈ ಹದಿನೆಂಟು ರಾಜರು ಪ್ರಖ್ಯಾತರಾಗಿದ್ದಾರೆ.

ಅಸುರಾಣಾಂ ಸಮೃದ್ಧಾನಾಂ ಜ್ವಲತಾಮಿವ ತೇಜಸಾ ।
ಪರ್ಯಾಯಕಾಲೇ ಧರ್ಮಸ್ಯ ಪ್ರಾಪ್ತೇ ಕಲಿರಜಾಯತ ॥೧೨॥

ಸಮೃದ್ಧರಾಗಿ ತೇಜಸ್ಸಿನಿಂದ ಬೆಳಗುವ ಅಸುರರಿಗೆ ಧರ್ಮಚಕ್ರವು ತಿರುಗಿದಂತೆ ಪರಸ್ಪರ ವಿರೋಧವುಂಟಾಯಿತು.

ಹೇಹಯಾನಾಮುದಾವರ್ತೋ ನೀಪಾನಾಂ ಜನಮೇಜಯಃ ।
ಬಹುಲಸ್ತಾಲಜಂಘಾನಾಂ ಕೃಮೀಣಾಮುದ್ಧತೋ ವಸುಃ ॥೧೩॥

ಹೇಹಯದೇಶದ ಉದಾವರ್ತ, ನೀಪದೇಶದ ಜನಮೇಜಯ, ತಾಲಜಂಘದ ಬಹುಲ, ಕೃಮಿಗಳ ಉದ್ಧತನಾದ ವಸು;

ಅಜಬಿಂದುಃ ಸುವೀರಾಣಾಂ ಸುರಾಷ್ಟ್ರಾಣಾಂ ಕುಶರ್ದ್ದಿಕಃ ।
ಅರ್ಕಜಶ್ಚ ಬಲೀಹಾನಾಂ ಚೀನಾನಾಂ ಧೌತಮೂಲಕಃ ॥೧೪॥

ಸುವೀರರ ಅಜಬಿಂದು, ಸುರಾಷ್ಟ್ರದ ಕುಶರ್ದ್ಧಿಕ, ಬಲೀಹದ ಅರ್ಕಜ, ಚೀನರ ಧೌತಮೂಲಕ;

ಹಯಗ್ರೀವೋ ವಿದೇಹಾನಾಂ ವರಯುಶ್ಚ ಮಹೌಜಸಾಮ್ ।
ಬಾಹುಃ ಸುಂದರವೇಗಾನಾಂ ದೀಪ್ತಾಕ್ಷಾಣಾಂ ಪುರೂರವಾಃ ॥೧೫॥

ವಿದೇಹರ ಹಯಗ್ರೀವ, ಮಹೌಜಸರ ವರಯು, ಸುಂದರವೇಗರ ಬಾಹು, ದೀಪ್ತಾಕ್ಷರ ಪುರೂರವ;

ಸಹಜಶ್ಚೇದಿಮತ್ಸ್ಯಾನಾಂ ಪ್ರವೀರಾಣಾಂ ವೃಷಧ್ವಜಃ ।
ಧಾರಣಶ್ಚೇಂದ್ರವತ್ಸಾನಾಂ ಕರಂಧಾನಾಂ ವಿಗಾಹನಃ ॥೧೬॥

ಚೇದಿ-ಮತ್ಸ್ಯರ ಸಹಜ, ಪ್ರವೀರರ ವೃಷಧ್ವಜ, ಇಂದ್ರವತ್ಸರ ಧಾರಣ, ಕರಂಧರ ವಿಗಾಹನ;

ಶಮಶ್ಚ ನಂದಿವೇಗಾನಾಮಿತ್ಯೇತೇ ಕುಲಪಾಂಸನಾಃ ।
ಯುಗಾಂತೇ ಕೃಷ್ಣ ಸಂಭೂತಾಃ ಕುಲೇಷು ಪುರುಷಾಧಮಾಃ ॥೧೭॥

ನಂದಿವೇಗರ ಶಮ- ಇವರು (ಈ ಹದಿನೇಳು ರಾಜರು) ಕುಲನಾಶಕರಾದವರು. ಕೃಷ್ಣನೇ, ಯುಗಾಂತದಲ್ಲಿ ತಮ್ಮ ತಮ್ಮ ಕುಲದ ನಾಶಕ್ಕಾಗಿ ಜನಿಸಿದ ಪುರುಷಾಧಮರು.

ಅಪ್ಯಯಂ ನಃ ಕುರೂಣಾಂ ಸ್ಯಾದ್ ಯುಗಾಂತೇ ಕಾಲಸಂಭೃತಃ ।
ದುರ್ಯೋಧನಃ ಕುಲಾಂಗಾರೋ ಜಘನ್ಯಃ ಪಾಪಪೂರುಷಃ ॥೧೮॥

ಯುಗಾಂತದಲ್ಲಿ ಕಾಲವಶನಾಗಿ ಜನಿಸಿದ ಕುಲಾಂಗಾರನಾದ ಈ ಹದಿನೆಂಟು ರಾಜರಲ್ಲಿ ಕೊನೆಯವನಾದ ಪಾಪಪುರುಷನಾದ ಈ ದುರ್ಯೋಧನನು ಕುರುಗಳಾದ ನಮ್ಮ ವಿನಾಶವನ್ನು ಮಾಡುವನೆಂದು ತೋರುತ್ತದೆ.

ತಸ್ಮಾನ್ಮೃದು ಶನೈರ್ಯುಯಾ ಧರ್ಮಾರ್ಥಸಹಿತಂ ಹಿತಮ್ ।
ಕಾಮಾನುಬಂಧಬಹುಲಂ ನೋಗ್ರಮುಗ್ರಪರಾಕ್ರಮ ॥೧೯॥

ಎಲೈ ಉಗ್ರಪರಾಕ್ರಮವುಳ್ಳ ಕೃಷ್ಣನೇ, ಆದ್ದರಿಂದ ನಿಧಾನವಾಗಿ ಮೃದುವಾಗಿ ಅವನಿಗೆ ಹಿತವಾದ ಧರ್ಮಾರ್ಥಸಹಿತವಾದ, ಅವನ ಇಷ್ಟವನ್ನು ಪೂರೈಸುವಂತಹ ಮಾತುಗಳನ್ನು ಆಡು. ಉಗ್ರವಾದ ಮಾತುಗಳನ್ನು ಆಡಬೇಡ.

ಅಪಿ ದುರ್ಯೋಧನಂ ಕೃಷ್ಣ ಸರ್ವೇ ವಯಮಧಶ್ಚರಾಃ ।
ನೀಚೈರ್ಭೂತ್ವಾऽನುಯಾಸ್ಯಾಮೋ ಮಾ ಸ್ಮ ನೋ ಭರತಾ ನಶನ್ ॥

ಎಲೈ ಕೃಷ್ಣನೇ, ನಾವೆಲ್ಲರೂ ದುರ್ಯೋಧನನ ಕೆಳಗೆ ಸಂಚರಿಸುವವರಾಗಿ ಕೆಳಭಾಗದಲ್ಲಿದ್ದು ಜೀವಿಸುತ್ತೇವೆ. ನಮ್ಮ ಭರತರು ನಾಶ ಹೊಂದದಿರಲಿ (ಇದು ಭೀಮಸೇನನ ಅರ್ಥಗರ್ಭಿತವಾದ ಮಾತು. ಅಧಶ್ಚರಾ ಎಂದರೆ ಸೇವಕರೆಂದು ಅರ್ಥವಲ್ಲ. ಅಧಶ್ಚರಾ ಎಂಬುದಕ್ಕೂ ನೀಚೈರ್ಭೂತ್ವಾನುಯಸ್ಯಾಮ ಎಂಬುದಕ್ಕೂ ಕೆಳಗೆ ಸಂಚರಿಸುತ್ತೇವೆ ಎಂದು ಅರ್ಥ. ದುರ್ಯೋಧನನು ಪಾಂಡವರಿಗಿಂತ ಮೊದಲೇ ಮರಣವನ್ನು ಹೊಂದುವುದರಿಂದ ಸ್ವಲ್ಪಕಾಲ ಅವನು ಸಾಂಕಲ್ಪಿಕ ಸ್ವರ್ಗದಲ್ಲಿ ಇರುತ್ತಾನೆ. ಆಗ ಇನ್ನೂ ಭೂಮಿಯ ಮೇಲೆ ವಾಸಮಾಡುವ ಪಾಂಡವರು ಅವನಿಗಿಂತ ಕೆಳಗೆ ಸಂಚರಿಸುತ್ತಾರೆ– ಸಂಚರಿಸುತ್ತೇವೆ ಎಂದು ಇಷ್ಟೇ ಅರ್ಥ– ವಾದಿರಾಜರು).

ಅಪ್ಯುದಾಸೀನವೃತ್ತಿಃ ಸ್ಯಾದ್ ಯಥಾ ನಃ ಕುರುಭಿಃ ಸಹ ।
ವಾಸುದೇವ ತಥಾ ಕಾರ್ಯಂ ನ ಕುರೂನನಯಃ ಸ್ಪೃಶೇತ್ ॥೨೧॥

ಎಲೈ ವಾಸುದೇವನೇ, ಕುರುಗಳಿಗೆ ಪರಸ್ಪರ ದ್ವೇಷವಿಲ್ಲದಂತೆ, ಪರಸ್ಪರ ಔದಾಸೀನ್ಯವಿದ್ದರೂ ಒಳ್ಳೆಯದು. ಅದರಂತೆ ಮಾಡಬೇಕು. ಕುರುಗಳಿಗೆ ಅನ್ಯಾಯವಾಗದಿರಲಿ.

ವಾಚ್ಯಃ ಪಿತಾಮಹೋ ವೃದ್ಧೋ ಯೇ ಚ ಕೃಷ್ಣ ಸಭಾಸದಃ ।
ಭ್ರಾತೄಣಾಮಸ್ತು ಸೌಭ್ರಾತ್ರಂ ಧಾರ್ತರಾಷ್ಟ್ರಃ ಪ್ರಶಾಮ್ಯತಾಮ್ ॥೨೨॥

ಎಲೈ ಕೃಷ್ಣನೇ, ಪಿತಾಮಹರಾದ ಭೀಷ್ಮರಿಗೂ ಮತ್ತು ಸಭಾಸದರಿಗೂ ಅಣ್ಣ-ತಮ್ಮಂದಿರಿಗೂ ಸ್ನೇಹವಿರಲಿ. ದುರ್ಯೋಧನನು ಶಾಂತಿಯನ್ನು ಹೊಂದಿ ಸಂಧಿಯನ್ನು ಮಾಡಿಕೊಳ್ಳುವವನಾಗಲಿ ಎಂದು ಹೇಳಬೇಕು.

ಅಹಮೇತದ್ ಬ್ರವೀಮ್ಯೇವಂ ರಾಜಾ ಚೈವಂ ಪ್ರಶಾಮ್ಯತಿ ।
ಅರ್ಜುನೋ ನೈವ ಯುದ್ಧಾರ್ಥೀ ಭೂಯಸೀ ಹಿ ದಯಾऽರ್ಜುನೇ ॥

ನಾನು ಹೀಗೆ ಶಾಂತಿಯನ್ನು ಹೇಳುತ್ತಿದ್ದೇನೆ. ಯುಧಿಷ್ಠಿರನೂ ಸಹ ಹೀಗೆ ಶಾಂತಿಯನ್ನು ಬಯಸುತ್ತಾನೆ. ಅರ್ಜುನನೂ ಯುದ್ಧವನ್ನು ಬಯಸುವುದಿಲ್ಲ. ಏಕೆಂದರೆ ಅವನು ಬಹಳ ದಯಾಶೀಲನಾದವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ತ್ರಿಸಪ್ತತಿತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಎಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ನಾಲ್ಕನೆಯ ಅಧ್ಯಾಯ

ಭೀಮಸೇನನನ್ನು ಕುರಿತು ಕೃಷ್ಣನ ಯುದ್ಧಪ್ರೋತ್ಸಾಹವಚನ.

ವೈಶಂಪಾಯನಃ

ಸ ತಚ್ಛ್ರುತ್ವಾ ಮಹಾಬಾಹುಃ ಕೇಶವಃ ಪ್ರಹಸನ್ನಿವ ।
ಅಭೂತಪೂರ್ವಂ ಭೀಮಸ್ಯ ಮಾರ್ದವೋಪಹಿತಂ ವಚಃ ॥೧॥

ಗಿರೇರಿವ ಲಘುತ್ವಂ ತತ್ ಶೀತತ್ವಮಿವ ಪಾವಕೇ ।
ಮತ್ವಾ ರಾಮಾನುಜಃ ಶೌರಿಃ ಶಾರ್ಙ್ಗಧನ್ವಾ ವೃಕೋದರಮ್ ॥೨॥

ಸಂತೇಜಯಂಸ್ತದಾ ವಾಗ್ಭಿರ್ಮಾತರಿಶ್ವೇವ ಪಾವಕಮ್ ।
ಉವಾಚ ಭೀಮಮಾಸೀನಂ ಕೃಪಯಾऽಭಿಪರಿಪ್ಲುತಮ್ ॥೩॥

ವೈಶಂಪಾಯನ– ಮಹಾಬಾಹುವಾದ, ಬಲರಾಮನ ತಮ್ಮನಾದ, ಶಾರ್ಙ್ಗ ಧನುರ್ಧಾರಿಯಾದ ಶೌರಿಯಾದ ಕೃಷ್ಣನು ನಗುವವನಂತೆ ಪರ್ವತವು ಹಗುವಾದಂತಿರುವ, ಅಗ್ನಿಯು ಶೀತವಾದಂತಿರುವ ಭೀಮಸೇನನ ಮೃದುವಾದ ಮಾತುಗಳನ್ನು ಕೇಳಿ, ಕೃಪೆಯಿಂದ ತುಂಬಿ ಕುಳಿತಿದ್ದ ಭೀಮಸೇನನನ್ನು ಕುರಿತು

ವಾಯುವು ಅಗ್ನಿಯನ್ನು ಉದ್ದೀಪನಗೊಳಿಸಿದಂತೆ ಅವನನ್ನು ಹುರಿದುಂಬಿಸುತ್ತಾ ಮಾತನಾಡಿದನು.

ತ್ವಮನ್ಯದಾ ಭೀಮಸೇನ ಯುದ್ಧಮೇವ ಪ್ರಶಂಸಸಿ ।
ವಧಾಭಿನಂದನಃ ಕ್ರೂರಾನ್ ಧಾರ್ತರಾಷ್ಟ್ರಾನ್ ಮಿಮರ್ದಿಷುಃ ॥೪॥

ಎಲೈ ಭೀಮಸೇನನೇ, ನೀನು ಬೇರೆಯ ಕಾಲದಲ್ಲಿ ಕ್ರೂರರಾದ ದುರ್ಯೋಧನಾದಿಗಳನ್ನು ಮರ್ದನ ಮಾಡಲು ಬಯಸಿ ವಧೆಯನ್ನು ಅಭಿನಂದಿಸುತ್ತಾ ಯುದ್ಧವನ್ನೇ ಪ್ರಶಂಸಿಸುತ್ತೀಯೆ.

ನ ಚ ಸ್ವಪಿಷಿ ಜಾಗರ್ಷಿ ಕ್ರುದ್ಧಃ ಶೇಷೇ ಪರಂತಪ ।
ಘೋರಾಮಶಾಂತಾಂ ರುಶತೀಂ ಸದಾ ವಾಚಾ ಪ್ರಭಾಷಸೇ ॥೫॥

ಎಲೈ ಪರಂತಪನೇ, ನೀನು ರಾತ್ರಿಯಲ್ಲಿ ನಿದ್ರೆಯನ್ನು ಮಾಡುವುದಿಲ್ಲ. ಎಚ್ಚರವಾಗಿರುತ್ತೀಯೆ. ಕೋಪದಿಂದ ಮಲಗುತ್ತೀಯೆ. ಘೋರವಾದ, ಅಶಾಂತವಾದ, ಶತ್ರುದಾಹಕವಾದ ಮಾತುಗಳನ್ನೇ ಯಾವಾಗಲೂ ಆಡುತ್ತೀಯೆ.

ವಿನಿಃಶ್ವಸನ್ನಗ್ನಿವರ್ಣಃ ಸಂತಪ್ತಃ ಸ್ವೇನ ತೇಜಸಾ ।
ಅಪ್ರಶಾಂತಮನಾ ಭೀಮ ಸಧೂಮ ಇವ ಪಾವಕಃ ॥೬॥

ಏಕಾಂತೇ ನಿಃಶ್ವಸನ್ ಶೇಷೇ ಭಾರಾರ್ತ ಇವ ದುರ್ಬಲಃ ।
ಅಪಿ ತ್ವಾಂ ಕೇಚಿದುನ್ಮತ್ತಂ ಮನ್ಯಂತೇಽತದ್ವಿದೋ ಜನಾಃ ॥೭॥

ನಿನ್ನ ತೇಜಸ್ಸಿನಿಂದಲೇ ಸಂತಪ್ತನಾಗಿ ಅಗ್ನಿಯ ವರ್ಣವನ್ನು ಹೊಂದಿ ಉಸಿರನ್ನು ಬಿಡುತ್ತಾ, ಸಮಾಧಾನಗೊಳ್ಳದ ಮನಸ್ಸಿನಿಂದ ಕೂಡಿದವನಾಗಿ ಎಲೈ ಭೀಮನೇ, ಧೂಮದಿಂದ ಕೂಡಿದ ಅಗ್ನಿಯಂತೆ ಇರುತ್ತೀಯೆ. ನೀನು ದುರ್ಬಲನು, ಭಾರವನ್ನು ಹೊತ್ತು ಬಳಲಿದಂತೆ ಏಕಾಂತದಲ್ಲಿ ನಿಟ್ಟುಸಿರು ಬಿಡುತ್ತಾ ಮಲಗಿರುತ್ತೀಯೆ. ನಿನ್ನ ಸ್ವರೂಪವನ್ನು ತಿಳಿಯದ ಜನರು ನಿನ್ನನ್ನು ಉನ್ಮತ್ತನೆಂದು ಭಾವಿಸುತ್ತಾರೆ.

ಆರುಜ್ಯ ವೃಕ್ಷಾನ್ ನಿರ್ಮೂಲಾನ್ ಗಜಃ ಪರಿಭವನ್ನಿವ ।
ನಿಘ್ನನ್ ಪದ್ಭಿಃ ಕ್ಷಿತಿಂ ಭೀಮ ನಿಷ್ಪತನ್ ಪ್ರತಿಧಾವಸಿ ॥೮॥

ಎಲೈ ಭೀಮನೇ, ವೃಕ್ಷಗಳನ್ನು ಬೇರುಸಹಿತವಾಗಿ ಕಿತ್ತು ಅವುಗಳನ್ನು ನಾಶಮಾಡುವ ಗಜದಂತೆ ನೀನು ಭೂಮಿಯನ್ನು ಕಾಲಿನಿಂದ ಒದೆಯುತ್ತಾ ಗರ್ಜಿಸುತ್ತಾ ಓಡಾಡುತ್ತೀಯೆ.

ನಾಸ್ಮಿನ್ ಜನೇ ಹಿ ರಮಸೇ ರಹಃ ಕ್ಷಿಪಸಿ ಪಾಂಡವ ।
ನಾಶ್ನನ್ ನಿಶಿ ದಿವಾ ಚಾಪಿ ಕದಾಚಿದಭಿನಂದಸಿ ॥೯॥

ಎಲೈ ಪಾಂಡವನೇ, ನಿನ್ನ ಸುತ್ತಲೂ ಇರುವ ಜನರ ಜೊತೆಯಲ್ಲಿ ನೀನು ಸಂತೋಷ ಪಡುವುದಿಲ್ಲ. ಏಕಾಂತದಲ್ಲಿ (ದುರ್ಯೋಧನಾದಿಗಳನ್ನು) ನಿಂದಿಸುತ್ತೀಯೆ. ಹಗಲೂ ರಾತ್ರಿಯೂ ಸರಿಯಾಗಿ ಭೋಜನವನ್ನು ಮಾಡದೆ ಯಾವಾಗಲೂ ಹರ್ಷರಹಿತನಾಗಿರುತ್ತೀಯೆ.

ಅಸ್ವಸ್ಥೋಽಸ್ಮಯಮಾನಶ್ಚ ರಹಸ್ಯಾಸ್ಸೇ ರುದನ್ನಿವ ।
ಜಾನ್ವೋರ್ಮೂರ್ಧಾನಮಾಧಾಯ ಚಿರಮಾಸ್ಸೇ ಪ್ರಮೀಲಿತಃ ॥೧೦॥

ಅಸ್ವಸ್ಥನಾಗಿ ನಗದೇ ಏಕಾಂತದಲ್ಲಿ ಕೊಲ್ಲುವವನಂತೆ ಇರುತ್ತೀಯೆ. ಮಂಡಿಗಳ ಮೇಲೆ ಮುಖವನ್ನು ಇಟ್ಟುಕೊಂಡು ಕಣ್ಣುಗಳನ್ನು ಮುಚ್ಚಿ ಬಹಳ ಕಾಲ ಕುಳಿತಿರುತ್ತೀಯೆ.

ಭ್ರುಕುಟಿಂ ಚ ಪುನಃ ಕುರ್ವನ್ನೋಷ್ಠೌ ಚ ವಿಲಿಹನ್ನಿವ ।
ಅಭೀಕ್ಷ್ಣಂ ದೃಶ್ಯಸೇ ಭೀಮ ಸರ್ವಂ ತನ್ಮನ್ಯುಕಾರಿತಮ್ ॥೧೧॥

ಎಲೈ ಭೀಮನೇ, ಪುನಃ ಹುಬ್ಬುಗಳನ್ನು ಗಂಟುಕಟ್ಟಿ, ತುಟಿಗಳನ್ನು ಸತತವಾಗಿ ಸವರಿಕೊಳ್ಳುವುದು ಕಂಡುಬರುತ್ತದೆ. ಎಲೈ ಭೀಮನೇ, ಇವೆಲ್ಲವೂ ಕೋಪದ ಚಿಹ್ನೆಗಳು.

ಯಥಾ ಪುರಸ್ತಾತ್ ಸವಿತಾ ದೃಶ್ಯತೇ ಶುಕ್ರಮುಚ್ಚರನ್ ।
ಯಥಾ ಚ ಪಶ್ಚಾನ್ನಿರ್ಮುಕ್ತೋ ಧ್ರುವಂ ಪರ್ಯೇತಿ ರಶ್ಮಿಮಾನ್ ॥೧೨॥

ತಥಾ ಸತ್ಯಂ ಬ್ರವೀಮ್ಯೇತನ್ನಾಸ್ತಿ ತಸ್ಯ ವ್ಯತಿಕ್ರಮಃ ।
ಹಂತಾಽಹಂ ಗದಯಾಽಭ್ಯೇತ್ಯ ದುರ್ಯೋಧನಮಮರ್ಷಣಮ್ ॥೧೩॥

ಹೇಗೆ ಸೂರ್ಯನು ಉದಯಿಸುವುದಕ್ಕಿಂತ ಮೊದಲು ಪೂರ್ವದಲ್ಲಿ ಸ್ವಲ್ಪ ಬೆಳಕನ್ನು ಕೊಟ್ಟು ಅನಂತರ ರಾತ್ರಿನಿರ್ಮುಕ್ತನಾಗಿ ಕಿರಣಗಳಿಂದ ಕೂಡಿ ಮೇಲೆ ಬರುವುದು

ಸತ್ಯವೋ ಮತ್ತು ಆ ಮಾತಿಗೆ ಹೇಗೆ ವ್ಯತ್ಯಾಸವಿಲ್ಲವೋ ಅದರಂತೆ ನನ್ನ ಮಾತೂ ಸತ್ಯ. ಅದಕ್ಕೆ ವ್ಯತ್ಯಾಸವಿಲ್ಲ. ನಾನು ರೋಷಣಶೀಲನಾದ ದುರ್ಯೋಧನನನ್ನು ಸಮೀಪಿಸಿ ಗದೆಯಿಂದ ಅವನನ್ನು ಕೊಲ್ಲುವೆನು.

ಇತಿ ಸ್ಮ ಮಧ್ಯೇ ಭ್ರಾತೄಣಾಂ ಸತ್ಯೇನಾಲಭಸೇ ಗದಾಮ್ ।
ತಸ್ಯ ತೇ ಪ್ರಶಮೇ ಬುದ್ಧಿಃ ಧೀಯತೇಽತ್ರ ಪರಂತಪ ॥೧೪॥

ಹೀಗೆ ಸಹೋದರರ ಮಧ್ಯದಲ್ಲಿ ಮಾತನಾಡಿ, ಗದೆಯನ್ನು ಹಿಡಿದು ಶಪಥ ಮಾಡುತ್ತೀಯೆ. ಎಲೈ ಪರಂತಪನೇ, ಅಂತಹ ನಿನಗೆ ಈ ದಿನ ಶಾಂತಿಯಲ್ಲಿ (ಸಂಧಿಯಲ್ಲಿ) ಬುದ್ಧಿಯುಂಟಾಗಿದೆ!

ಅಹೋ ಯುದ್ಧಾಭಿಕಾಂಕ್ಷಾಣಾಂ ಯುದ್ಧಕಾಲ ಉಪಸ್ಥಿತೇ ।
ಚೇತಾಂಸಿ ವಿಪ್ರತೀಪಾನಿ ಯತ್ ತ್ವಾಂ ಭೀರಭಿವಿಂದತಿ ॥೧೫॥

ಏನು ಆಶ್ಚರ್ಯ! ಯುದ್ಧವನ್ನು ಬಯಸುವವರಿಗೆ ಯುದ್ಧಕಾಲವು ಪ್ರಾಪ್ತವಾದಾಗ ಮನಸ್ಸು ವ್ಯತ್ಯಾಸಗೊಳ್ಳುತ್ತದೆ. ಏಕೆಂದರೆ ನಿನ್ನನ್ನೂ ಭಯವು ಆವರಿಸಿದೆ.

ಅಹೋ ಪಾರ್ಥ ನಿಮಿತ್ತಾನಿ ವಿಪರೀತಾನಿ ಪಶ್ಯಸಿ ।
ಸ್ವಪ್ನಾಂತೇ ಜಾಗರಾಂತೇ ಚ ತಸ್ಮಾತ್ ಪ್ರಶಮಮಿಚ್ಛಸಿ ॥೧೬॥

ಎಲೈ ಭೀಮಸೇನನೇ, ಇದು ಆಶ್ಚರ್ಯಕರವಾದುದು. ಸ್ವಪ್ನದಲ್ಲಿಯೂ, ಜಾಗೃತಕಾಲದಲ್ಲಿಯೂ ನೀನು ವಿಪರೀತವಾದ ಶಕುನಗಳನ್ನು ನೋಡುತ್ತಿದ್ದೀಯೆ. ಆದ್ದರಿಂದ ಶಾಂತಿಯನ್ನು ಬಯಸುತ್ತಿದ್ದೀಯೆ.

ಅಹೋ ನಾಶಂಸಸೇ ಕಿಂಚಿತ್ ಪುಂಸ್ತ್ವಂ ಕ್ಲೀಬ ಇವಾತ್ಮನಿ ।
ಕಶ್ಮಲೇನಾಭಿಪನ್ನೋಽಸಿ ತೇನ ತೇ ವಿಕೃತಂ ಮನಃ ॥೧೭॥

ಇದು ಆಶ್ಚರ್ಯ. ನಪುಂಸಕನಂತೆ ನೀನು ಪೌರುಷವನ್ನೇ ಬಯಸುತ್ತಿಲ್ಲ. ವಿಷಾದದಿಂದ ಕೂಡಿದ್ದೀಯೆ. ಆದ್ದರಿಂದ ನಿನ್ನ ಮನಸ್ಸು ವಿಕಾರವನ್ನು ಹೊಂದಿದೆ.

ತದ್ ವೇಪತೇ ತೇ ಹೃದಯಂ ಮನಸ್ತೇ ಪ್ರವಿಷೀದತಿ ।
ಊರುಸ್ತಂಭಗೃಹೀತೋಽಸಿ ತಸ್ಮಾತ್ ಪ್ರಶಮಮಿಚ್ಛಸಿ ॥೧೮॥

ಆದ್ದರಿಂದ ನಿನ್ನ ಹೃದಯವು ನಡುಗುತ್ತಿದೆ. ನಿನ್ನ ಮನಸ್ಸು ಉಡುಗಿಹೋಗುತ್ತಿದೆ. ತೊಡೆಗಳು ಸ್ತಂಭಿತವಾಗಿವೆ. ಆದ್ದರಿಂದ ಶಾಂತಿಯನ್ನು ಬಯಸುತ್ತಿದ್ದೀಯೆ.

ಅನಿತ್ಯಂ ಕಿಲ ಮರ್ತ್ಯಸ್ಯ ಪಾರ್ಥ ಚಿತ್ತಂ ಚಲಾಚಲಮ್ ।
ವಾಗವೇಗಪ್ರಚಲಿತಾ ಅಷ್ಮೀಲಾ ಶಾಲ್ಮಲೇರಿವ ॥೧೯॥

ಎಲೈ ಪಾರ್ಥನೇ, ಮನುಷ್ಯನ ಚಿತ್ತವು ಅನಿತ್ಯವಾದುದು ಮತ್ತು ಬಹಳ ಚಂಚಲವಾದುದು. ಅದು ಬಿರುಗಾಳಿಯ ವೇಗಕ್ಕೆ ಸಿಕ್ಕಿದ ಬೂರಗದ ಮರದ ದೊಡ್ಡಕೊಂಬೆಯಂತೆ ಚಂಚಲವಾಗಿದೆ.

ತವೈಷಾ ವಿಕೃತಾ ಬುದ್ಧಿರ್ಗವಾಂ ವಾಗಿವ ಮಾನುಷೀ ।
ಮನಾಂಸಿ ಪಾಂಡುಪುತ್ರಾಣಾಮಂಜಯಸ್ಯಸ್ರವಾನಿವ ॥೨೦॥

ಗೋವು ಮನುಷ್ಯನ ವಾಣಿಯಲ್ಲಿ ಮಾತನಾಡುವುದು ಎಷ್ಟು ಆಶ್ಚರ್ಯಕರವೋ ಅದರಂತೆ ನಿನ್ನ ಬುದ್ಧಿಯ ವಿಕಾರವು ಆಶ್ಚರ್ಯವಾಗಿ ಪಾಂಡುಪುತ್ರರ ಮನಸ್ಸನ್ನು ಬಾಲಕನ ಕಣ್ಣೀರು ಅಂಜನವನ್ನು ಹರಡಿದಂತೆ ವಿಷಾದಕ್ಕೆ ಕೆಡವುತ್ತಿದೆ.

ಇದಂ ಮೇ ಮಹದಾಶ್ಚರ್ಯಂ ಪರ್ವತಸ್ಯೇವ ಸರ್ಪಣಮ್ ।
ಯದೀದೃಶಂ ಪ್ರಭಾಷೇಥಾ ಭೀಮಸೇನಾಸಮಂ ತವ ॥೨೧॥

ಭೀಮಸೇನನೇ, ನಿನಗೆ ಅನನುಗುಣವಾಗಿ ಹೀಗೆ ಏನನ್ನು ಮಾತನಾಡುತ್ತಿದ್ದೀಯೋ ಅದು ಪರ್ವತದ ಚಲನೆಯಂತೆ ನನಗೆ ಬಹಳ ಆಶ್ಚರ್ಯಕರವಾಗಿದೆ.

ಸ ದೃಷ್ಟಾಽಸ್ವಾನಿ ಕರ್ಮಾಣಿ ಕುಲೇ ಜನ್ಮ ಚ ಭಾರತ ।
ಉತ್ತಿಷ್ಠಸ್ವ ವಿಷಾದಂ ಮಾ ಕೃಥಾ ವೀರ ಸ್ಥಿರೋ ಭವ ॥೨೨॥

ಎಲೈ ಭಾರತನೇ, ನೀನು ಹಿಂದೆ ಮಾಡಿದ ಕರ್ಮಗಳನ್ನೂ, ಶ್ರೇಷ್ಠವಾದ ಕುಲದಲ್ಲಿ ಜನ್ಮವನ್ನೂ ಸ್ಮರಿಸಿ ಎದ್ದೇಳು. ವಿಷಾದವನ್ನು ಮಾಡಬೇಡ. ವೀರನೇ ಸ್ಥಿರವಾಗಿರು.

ನ ಚೈತದನುರೂಪಂ ತೇ ತೇಷು ಶಾಂತಿರರಿಂದಮ ।
ಯದೋಜಸಾ ನ ಲಭತೇ ಕ್ಷತ್ರಿಯೋ ನ ತದಶ್ನುತೇ ॥೨೩॥

ಎಲೈ ಅರಿಂದಮನೇ, ಕೌರವರಲ್ಲಿ ಶಾಂತಿಯು ನಿನಗೆ ಅನುಗುಣವಾದುದಲ್ಲ. ಕ್ಷತ್ರಿಯನು ಯಾವುದನ್ನು ಪರಾಕ್ರಮದಿಂದ ಸಂಪಾದಿಸುವುದಿಲ್ಲವೋ ಅದನ್ನು ಎಂದೂ ಹೊಂದುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಚತುಃಸಪ್ತತಿತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಎಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ವಧಂ ತೇಷಾಂ ಧರ್ಮಮೇವ ಲೋಕೇ ಖ್ಯಾಪಯಿತುಂ ಹರಿಃ ।
ಆಕ್ಷಿಪನ್ನಿವ ಭೀಮಂ ತಂ ಯುದ್ಧಾಯ ಪ್ರೇರಯದ್ ದೃಢಮ್ ॥೫೩॥

ಕೌರವರ ವಧೆ ಧರ್ಮವೆಂದು ಲೋಕಕ್ಕೆ ತಿಳಿಸುವುದಕ್ಕಾಗಿ ಕೃಷ್ಣ ಭೀಮನನ್ನು ಆಕ್ಷೇಪಿಸುವವನಂತೆ ಯುದ್ಧಕ್ಕೆ ದೃಢವಾಗಿ ಪ್ರೇರಿಸಿದ.

ಅಭಿಪ್ರಾಯಂ ಕೇಶವಸ್ಯ ಜಾನನ್ ಭೀಮೋ ನಿಜಂ ಬಲಮ್ ।
ರಾಜ್ಞಾಂ ಮಧ್ಯೇऽವದತ್ ತಚ್ಚ ಕೃಷ್ಣೋऽಭ್ಯಧಿಕಮೇವ ಹಿ ॥೫೪॥

ಆಗ ಶ್ರೀಕೃಷ್ಣನ ಅಭಿಪ್ರಾಯವನ್ನು ತಿಳಿದ ಭೀಮ ರಾಜರೆಲ್ಲರ ನಡುವೆ ತನ್ನ ಬಲವನ್ನು ಹೇಳಿಕೊಂಡ. ಕೃಷ್ಣ 'ಅದು ಅಷ್ಟೇ ಅಲ್ಲ, ಇನ್ನೂ ಹೆಚ್ಚೇ ಇದೆ' ಎಂದ.

★ ★ ★ ★ ★

ಎಪ್ಪತ್ತೈದನೆಯ ಅಧ್ಯಾಯ

ಕೃಷ್ಣನ ಗೂಢವಾದ ಮಾತುಗಳಿಗೆ ಉತ್ತರವನ್ನು ಹೇಳಿ,
ಭೀಮಸೇನನಿಂದ ತನ್ನ ಸಾಮರ್ಥ್ಯದ ಕಥನ.

ವೈಶಂಪಾಯನಃ

ತಥೋಕ್ತೇ ವಾಸುದೇವೇನ ನಿತ್ಯಮನ್ಯುರಮರ್ಷಣಃ ।
ಸದಶ್ವವತ್ ಸಮಾಧಾಯ ಬಭಾಷೇ ತದನಂತರಮ್ ॥೧॥

ವೈಶಂಪಾಯನ- ವಾಸುದೇವನು ಹಾಗೆ ಹೇಳುತ್ತಿರಲು ನಿತ್ಯವೂ ಕ್ರುದ್ಧನೂ ಮತ್ತು ಕೋಪಸ್ವಭಾವದವನೂ ಆದ ಭೀಮಸೇನನು ಒಳ್ಳೆಯ ಕುದುರೆಯಂತೆ ಸಮಾಧಾನವನ್ನು ತಂದುಕೊಂಡು ಅನಂತರ ಮಾತನಾಡಿದನು.

ಭೀಮ

ಅನ್ಯಥಾ ಮಾಂ ಚಿಕೀರ್ಷಂತಮನ್ಯಥಾ ಮನ್ಯಸೇऽಚ್ಯುತ ।
ಪ್ರಣೀತಭಾವಮತ್ಯರ್ಥಂ ಯುಧಿ ಸತ್ಯಪರಾಕ್ರಮಮ್ ॥೨॥

ಭೀಮ- ಎಲೈ ಅಚ್ಯುತನೇ, ಸತ್ಯವಾದ ಪರಾಕ್ರಮವುಳ್ಳವನಾಗಿ, ಯುದ್ಧದಲ್ಲಿ ಅತ್ಯಂತ ಆಸಕ್ತನಾಗಿ ಬೇರೆ ರೀತಿಯಲ್ಲೇ ಮಾಡಲು ಯೋಚಿಸುತ್ತಿರುವ ನನ್ನನ್ನು ನೀನು ಬೇರೆ ರೀತಿಯಲ್ಲಿ ತಿಳಿಯುತ್ತಿದ್ದೀಯೆ.

ವೇತ್ಥಿ ದಾಶಾರ್ಹ ಸತ್ವಂ ಮೇ ದೀರ್ಘಕಾಲಂ ಸಹೋಷಿತಃ ।
ಉತ ವಾ ಮಾಂ ನ ಜಾನಾಸಿ ಪ್ಲವದ್ಹ್ರದಮಿವಾಪ್ಲವಮ್ ॥೩॥

ತಸ್ಮಾದನಭಿರೂಪಾಭಿರ್ವಾಗ್ಭಿರ್ಮಾಂ ತ್ವಂ ಸಮಾರ್ಚ್ಛಸಿ ॥೪॥

ಕಥಂ ಹಿ ಭೀಮಸೇನಂ ಮಾಂ ಜಾನನ್ ಕಶ್ಚನ ಮಾಧವ ।
ಬ್ರೂಯಾದಪ್ರತಿರೂಪಾಣಿ ಯಥಾ ಮಾಂ ವಕ್ತುಮರ್ಹಸಿ ॥೫॥

ಎಲೈ ದಾಶಾರ್ಹನೇ, ಬಹುಕಾಲ ನನ್ನ ಜೊತೆಯಲ್ಲಿ ವಾಸ ಮಾಡಿ, ನನ್ನ ಬಲವನ್ನು ತಿಳಿದಿದ್ದೀಯೆ. ಅಥವಾ ಮಡುವಿನಿಂದ ನೌಕಾನಿರಪೇಕ್ಷವಾಗಿ ಹರಿದುಹೋಗುವ ನೀರಿನಂತೆ ನನ್ನನ್ನು ತಿಳಿದಿಲ್ಲವೇ? ಆದ್ದರಿಂದ ನನಗೆ ಅನನುಗುಣವಾದ ಮಾತುಗಳನ್ನು ಆಡಿ ನನ್ನನ್ನು ಹಿಂಸಿಸುತ್ತಿದ್ದೀಯೆ. ಎಲೈ ಮಾಧವನೇ, ಭೀಮಸೇನನಾದ ನನ್ನನ್ನು ತಿಳಿದ ಯಾವನು ತಾನೇ ನೀನು ಮಾತನಾಡಿದಂತೆ ನನಗೆ ಅನುರೂಪವಲ್ಲದ ಮಾತುಗಳನ್ನು ಆಡಲು ಸಾಧ್ಯ? (ಲಕ್ಷಾಲಂಕಾರ).

ತಸ್ಮಾದಿದಂ ಪ್ರವಕ್ಷ್ಯಾಮಿ ವಚನಂ ವೃಷ್ಣಿನಂದನ ।
ಆತ್ಮನಃ ಪೌರುಷಂ ಚೈವ ಬಲಂ ಚ ನ ಸಮಂ ಪರೈಃ ॥೬॥

ಎಲೈ ವೃಷ್ಣಿನಂದನನೇ, ಆದ್ದರಿಂದ ಈ ಮಾತನ್ನು ಆಡುತ್ತಿದ್ದೇನೆ. ಪರರ ಬಲ-ಪೌರುಷಗಳು ನನ್ನ ಬಲ-ಪೌರುಷಗಳಿಗೆ ಎಂದೂ ಸಮವಲ್ಲ. (ನನ್ನ ಬಲ-ಪೌರುಷಗಳು ಅತ್ಯಧಿಕವಾದುವು).

ಸರ್ವಥಾऽನಾರ್ಯಕರ್ಮೈತತ್ ಪ್ರಶಂಸಾ ಸ್ವಯಮಾತ್ಮನಃ ।
ಅತಿವಾದಾಪವಿದ್ಧಸ್ತು ವಕ್ಷ್ಯಾಮಿ ಬಲಮಾತ್ಮನಃ ॥೭॥

ತನ್ನನ್ನೇ ತಾನು ಹೊಗಳಿಕೊಳ್ಳುವುದು ಸರ್ವಥಾ ಅಸಜ್ಜನರು ಮಾಡುವ ಕಾರ್ಯ. ಆದರೆ ನಿಂದೆಗೆ ಗುರಿಯಾಗಿರುವುದರಿಂದ ನನ್ನ ಬಲವನ್ನು ನಾನು ಹೇಳಿಕೊಳ್ಳುವೆನು.

ಪಶ್ಯೇಮೇ ರೋದಸೀ ಕೃಷ್ಣ ಯಯೋರಾಸನ್ನಿಮಾಃ ಪ್ರಜಾಃ ।
ಅಚಲೇ ಚಾಪ್ರತಿಷ್ಠೇ ಚಾಪ್ಯನಂತೇ ಸರ್ವಮಾತರೌ ॥೮॥

ಕೃಷ್ಣನೇ, ಈ ಭೂಲೋಕ ಮತ್ತು ಸ್ವರ್ಗಲೋಕಗಳನ್ನು ನೋಡು, ಇವು ಅಚಲವಾದವು, ಅನಂತವಾದವು, ಎಲ್ಲರಿಗೂ ಆಶ್ರಯವಾಗಿ ಎಲ್ಲ ಪ್ರಜೆಗಳಿಗೂ ತಾಯಿಯರೆಂದು ಹೇಳಲ್ಪಡುವಂಥವುಗಳು.

ಯದಿ ಮೇ ಸಹಸಾऽऽಕೃಷ್ಟೇ ಸಮೇ ಯಾತಾಂ ಶಿಲೇ ಇವ ।
ಅಹಮೇತೇ ನಿಗೃಹ್ಣೀಯಾಂ ಬಾಹುಭ್ಯಾಂ ಸಚರಾಚರೇ ॥೯॥

ನಾನು ದೂರದಲ್ಲಿರುವ ಇವುಗಳನ್ನು, ಅವುಗಳಲ್ಲಿರುವ ಚರಾಚರ ಪ್ರಾಣಿಗಳ ಜೊತೆಯಲ್ಲಿನನ್ನ ಬಾಹುಬಲದಿಂದ ಎಳೆದು, ಅವುಗಳನ್ನು ಒಟ್ಟಿಗೆ ತಂದು ಶಿಲೆಯಂತೆ ಗಟ್ಟಿಯಾಗಿ ಮಾಡಬಲ್ಲೆ(ಲಕ್ಷಾಲಂಕಾರ).

ಪಶ್ಯೈತದಂತರಂ ಬಾಹ್ವೋರ್ಮಹಾಪರಿಘಯೋರಿವ ।
ಯ ಏತೌ ಪ್ರಾಪ್ಯ ಮುಚ್ಯೇತ ನ ತಂ ಪಶ್ಯಾಮಿ ಪೂರುಷಮ್ ॥೧೦॥

ಹಿಮವಾಂಶ್ಚ ಸಮುದ್ರಶ್ಚ ವಜ್ರೋ ವಾ ಬಲಭಿತ್ ಸ್ವಯಮ್ ।
ಮಯಾऽಭಿಪನ್ನಂ ತ್ರಾಯೇರನ್ ಬಲಮಾಸ್ಥಾಯ ನ ತ್ರಯಃ ॥೧೧॥

ಎಲೈ ಕೃಷ್ಣನೇ, ಕಬ್ಬಿಣದ ಒನಕೆಗಳಂತಿರುವ ನನ್ನ ಬಾಹುಗಳ ಮಧ್ಯಭಾಗವನ್ನು ನೋಡು. ಇಲ್ಲಿ ಸಿಲುಕಿದ ಯಾವ ಪುರುಷನೂ ನನ್ನಿಂದ ಬಿಡಿಸಿಕೊಳ್ಳಲಾರ.

ಹಿಮಾಲಯ ಪರ್ವತ, ಸಮುದ್ರ ಮತ್ತು ಬಲಸೂದನನಾದ ವಜ್ರಹಸ್ತನಾದ ಇಂದ್ರ ಈ ಮೂವರು ಸೇರಿದರೂ ಸಹ ತಮ್ಮ ಬಲದಿಂದ ನನ್ನ ಕೈಗೆ ಸಿಲುಕಿದವನನ್ನು ರಕ್ಷಿಸಲಾರರು.

ಯುದ್ಧಾರ್ಹಾನ್ ಕ್ಷತ್ರಿಯಾನ್ ಸರ್ವಾನ್ ಪಾಂಡವೇಷ್ವಾತತಾಯಿನಃ ।
ಅಧಃ ಪಾದತಳೇನೈತಾನ್ ಅಧಿಷ್ಠಾಸ್ಯಾಮಿ ಭೂತಳೇ ॥೧೨॥

ಪಾಂಡವರಿಗೆ ದ್ರೋಹವನ್ನು ಮಾಡಿದ, ಯುದ್ಧಕ್ಕೆ ಅರ್ಹರಾದ ಎಲ್ಲ ಕ್ಷತ್ರಿಯರನ್ನೂ ಭೂತಳದಲ್ಲಿ ಹಾಕಿ, ಅವರನ್ನು ನನ್ನ ಪಾದತಳದಿಂದ ಮೆಟ್ಟಿ ನಿಲ್ಲುತ್ತೇನೆ.

ನ ಹಿ ತ್ವಂ ನಾಭಿಜಾನಾಸಿ ಮಮ ವಿಕ್ರಮಮಚ್ಯುತ ।
ಯಥಾ ಮಯಾ ವಿನಿರ್ಜಿತ್ಯ ರಾಜಾನೋ ವಶಗಾಃ ಕೃತಾಃ ॥೧೩॥

ಎಲೈ ಅಚ್ಯುತನೇ, ನಾನು ಹಿಂದೆ ಹೇಗೆ ರಾಜರನ್ನು ಗೆದ್ದು, ಅವರನ್ನು ವಶಪಡಿಸಿಕೊಂಡ ನನ್ನ ಪರಾಕ್ರಮವನ್ನು ನೀನು ತಿಳಿಯದೆ ಇಲ್ಲ.

ಅಥ ಚೇನ್ಮಾಂ ನ ಜಾನಾಸಿ ಯಥಾ ಸೂರ್ಯಮಿವೋದಿತಮ್ ।
ವಿಗಾಢೇ ಯುಧಿ ಸಂಬಾಧೇ ವೇತ್ಸ್ಯಸೇ ಮಾಂ ಜನಾರ್ದನ ॥೧೪॥

ಎಲೈ ಜನಾರ್ದನನೇ, ಒಂದುಪಕ್ಷ ಉದಿಸಿದ ಸೂರ್ಯನಂತಿರುವ ನನ್ನನ್ನು ನೀನು ತಿಳಿಯದಿದ್ದರೆ ಗಾಢವಾದ ಯುದ್ಧದಲ್ಲಿ ಶತ್ರುಗಳ ಜೊತೆಯಲ್ಲಿ ಹೋರಾಟ ಉಂಟಾದಾಗ ನನ್ನ ಸಾಮರ್ಥ್ಯವನ್ನು ತಿಳಿಯುವಿ.

ಕಿಂ ಮಾಽತ್ಯಧಾಕ್ಷೀಃ ಪರುಷೈಃ ವ್ರಣಂ ಸೂಚ್ಯೇವ ಚಾನಘ ।
ಯಥಾಮತಿ ಬ್ರವೀಮ್ಯೇತದ್ ವಿದ್ಧಿ ಮಾಮಧಿಕಂ ತತಃ ॥೧೫॥

ಎಲೈ ಅನಘನೇ, ಗಾಯವನ್ನು ಸೂಜಿಯಿಂದ ಚುಚ್ಚಿದಂತೆ ಏಕೆ ನನ್ನನ್ನು ಉಗ್ರವಾದ ಮಾತುಗಳಿಂದ ದಹಿಸುತ್ತಿದ್ದೀಯೆ? ನಾನು ನನ್ನ ಸಾಮರ್ಥ್ಯವನ್ನು ನನ್ನ ಬುದ್ಧಿಗೆ ತೋರಿದಂತೆ ಅಲ್ಪವಾಗಿಯೇ ಹೇಳಿದ್ದೇನೆ. ನನ್ನನ್ನು ಅದಕ್ಕಿಂತಲೂ ಅಧಿಕ ಸಾಮರ್ಥ್ಯವುಳ್ಳವನೆಂದು ತಿಳಿ.

ದ್ರಷ್ಟಾಸಿ ಯುಧಿ ಸಂಬಾಧೇ ಪ್ರವೃತ್ತೇ ವೈಶಸೇಽಹನಿ ।
ಮಯಾ ಪ್ರಣುನ್ನಾನ್ ಮಾತಂಗಾನ್ ರಥಿನಃ ಸಾದಿನಸ್ತಥಾ ॥೧೬॥

ಯುದ್ಧವು ಪ್ರವೃತ್ತವಾಗಿ ಹಿಂಸೆಯ ದಿನಗಳು ಪ್ರಾಪ್ತವಾದಾಗ ಆ ಸಂಘರ್ಷದಲ್ಲಿ ನನ್ನಿಂದ ಕೊಲ್ಲಲ್ಪಡುವ ಗಜಗಳನ್ನೂ, ರಥಿಕರನ್ನೂ ಮತ್ತು ಅಶ್ವಾರೋಹಿಗಳನ್ನೂ ನೀನು ನೋಡುವಿ.

ತಥಾಽಂತಕಮಿವ ಕ್ರುದ್ಧಂ ನಿಘ್ನಂತಂ ಕ್ಷತ್ರಿಯರ್ಷಭಾನ್ ।
ದ್ರಷ್ಟಾ ಮಾ ತ್ವಂ ಚ ಲೋಕಶ್ಚ ನಿಕರ್ಷಂತಂ ಪರಾನ್ ವರಾನ್ ॥೧೭॥

ಕೋಪಗೊಂಡ ಯಮನಂತೆ ಕ್ಷತ್ರಿಯ ಶ್ರೇಷ್ಠರನ್ನು ಕೊಲ್ಲುತ್ತಾ, ಶತ್ರುಗಳ ಸೈನ್ಯದಲ್ಲಿ ಶ್ರೇಷ್ಠರಾದವರನ್ನು ಆರಿಸಿ, ಎಳೆದಾಡಿ ಕೊಲ್ಲುವ ನನ್ನನ್ನು ನೀನೂ ಮತ್ತು ಸರ್ವಲೋಕವೂ ನೋಡುವುದು.

ನ ಮೇ ಸೀದಂತಿ ಗಾತ್ರಾಣಿ ನ ಚ ಮೇ ವೇಪತೇ ಮನಃ ।
ಸರ್ವಲೋಕಾದಭಿಕ್ರುದ್ಧಾನ್ನ ಭಯಂ ವಿದ್ಯತೇ ಮಮ ॥೧೮॥

ನನ್ನ ಶರೀರವು ಕುಸಿಯುತ್ತಿಲ್ಲ. ನನ್ನ ಮನಸ್ಸು ನಡುಗುತ್ತಿಲ್ಲ. ಎಲ್ಲ ಲೋಕವೂ ಕೋಪಗೊಂಡು ನನ್ನ ಎದುರಿಗೆ ನಿಂತರೂ ನನಗೆ ಭಯವಿಲ್ಲ.

ಕಿಂತು ಸೌಹೃದಮೇವೈತತ್ ಕೃಪಯಾ ಮಧುಸೂದನ ।
ಸರ್ವಾನ್ ತಿತಿಕ್ಷೇ ಸಂಕ್ಲೇಶಾನ್ ಮಾ ಸ್ಮ ನೋ ಭರತಾ ನಶನ್ ॥೧೯॥

ಎಲೈ ಮಧುಸೂದನನೇ, ಆದರೆ ಬಂಧುಗಳ ಮೇಲಿನ ಪ್ರೀತಿ ಮತ್ತು ದಯೆಯಿಂದ ಈ ಮಾತುಗಳನ್ನು ಹೇಳುತ್ತಿದ್ದೇನೆ. ನಮ್ಮ ಭರತರಿಗೆ ನಾಶವುಂಟಾಗದಿರಲಿ ಎಂದು ನಾನು ಒದಗಿದ ಎಲ್ಲಾ ಕ್ಲೇಶಗಳನ್ನೂ ಸಹಿಸುತ್ತಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪಂಚಸಪ್ತತಿತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಎಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ಶಶಂಸ ಸತ್ಯೈಃ ಸದ್ವಾಕ್ಯೈ ರಾಜ್ಞಾಂ ಮಧ್ಯೇ ಪ್ರಕಾಶಯನ್ ।
ವಧಂ ಕುರೂಣಾಂ ಸದ್ಧರ್ಮಂ ಗುಣಾನ್ ಭೀಮಸ್ಯ ಚಾಮಿತಾನ್ ॥

ಭೀಮನ ಗುಣಗಳು ಅಪರಿಮಿತವೆಂಬುದನ್ನೂ ಕೌರವರ ವಧೆ ಉತ್ತಮ ಧರ್ಮವೆಂಬುದನ್ನೂ ಪ್ರಕಟಗೊಳಿಸುತ್ತ ಶ್ರೀಕೃಷ್ಣನು ರಾಜರ ನಡುವೆ ಸತ್ಯವಾದ ನಿರ್ದುಷ್ಟವಾದ ಮಾತುಗಳಿಂದ ಭೀಮನನ್ನು ಪ್ರಶಂಸೆ ಮಾಡಿದ.

ನಿತ್ಯಮೇಕಮನಸ್ಕೌ ತಾವಪಿ ಕೇಶವಮಾರುತೀ ।

ಶ್ರೀಕೃಷ್ಣ-ಭೀಮರು ಎಂದಿಗೂ ಒಂದೇ ಅಭಿಪ್ರಾಯ ಉಳ್ಳವರು.

★ ★ ★ ★ ★

ಎಪ್ಪತ್ತಾರನೆಯ ಅಧ್ಯಾಯ

ಕೃಷ್ಣನಿಂದ ಭೀಮಸೇನನ ಮಾತುಗಳ ಅನುಮೋದನೆ

ಶ್ರೀಭಗವಾನ್

ಭಾವಂ ಜಿಜ್ಞಾಸಮಾನೋಽಹಂ ಪ್ರಣಯಾದಿದಮಬ್ರವಮ್ ।
ನ ಚಾಕ್ಷೇಪಾನ್ನ ಪಾಂಡಿತ್ಯಾನ್ನ ಕ್ರೋಧಾನ್ನ ವಿವಕ್ಷಯಾ ॥೧॥

ಶ್ರೀಭಗವಾನ್– ನಿನ್ನ ಮನಸ್ಸಿನ ಅಭಿಪ್ರಾಯವನ್ನು ತಿಳಿದುಕೊಳ್ಳಲು ನಾನು ಪ್ರೀತಿಯಿಂದ ಈ ಮಾತುಗಳನ್ನು ಆಡಿದೆ. ನಿನ್ನನ್ನು ಆಕ್ಷೇಪ ಮಾಡುವುದಕ್ಕಾಗಲೀ, ನಿಂದಿಸುವುದಕ್ಕಾಗಲೀ ಅಥವಾ ನನ್ನ ಪಾಂಡಿತ್ಯದಿಂದಾಗಲೀ, ಕ್ರೋಧದಿಂದಾಗಲೀ ಮಾತನಾಡಲಿಲ್ಲ.

ವೇದಾಹಂ ತವ ಮಾಹಾತ್ಮ್ಯಮುತ ತೇ ವೇದ ಯದ್ ಬಲಮ್ ।
ಉತ ತೇ ವೇದ ಕರ್ಮಾಣಿ ನ ತ್ವಾಂ ಪರಿಭವಾಮ್ಯಹಮ್ ॥೨॥

ನಾನು ನಿನ್ನ ಮಹಿಮೆಯನ್ನೂ, ನಿನ್ನ ಸಾಮರ್ಥ್ಯವನ್ನೂ ತಿಳಿದಿದ್ದೇನೆ. ನೀನು ಮಾಡಿದ ಕರ್ಮಗಳನ್ನೂ ತಿಳಿದಿದ್ದೇನೆ. ನಿನಗೆ ಅವಮಾನವನ್ನು ಮಾಡುವುದಿಲ್ಲ.

ಯತ್ ಕಿಂಚಾತ್ಮನಿ ಕಲ್ಯಾಣಂ ಸಂಭಾವಯಸಿ ಪಾಂಡವ ।
ಸಹಸ್ರಗುಣಮಪ್ಯೇತತ್ ತ್ವಯಿ ಸಂಭಾವಯಾಮ್ಯಹಮ್ ॥೩॥

ಎಲೈ ಪಾಂಡುಪುತ್ರನಾದ ಭೀಮಸೇನನೇ, ನೀನು ನಿನ್ನಲ್ಲಿ ಎಷ್ಟು ಕಲ್ಯಾಣಗುಣಗಳು ಇವೆ ಎಂದು ಭಾವಿಸುತ್ತೀಯೋ ಅದಕ್ಕಿಂತ ಸಹಸ್ರಪಟ್ಟು ಹೆಚ್ಚಾಗಿ ಆ ಗುಣಗಳು ಇವೆ ಎಂದು ನಾನು ಭಾವಿಸುತ್ತೇನೆ.

ಯಾದೃಶೇ ಚ ಕುಲೇ ಜನ್ಮ ಸರ್ವರಾಜಾಭಿಪೂಜಿತೇ ।
ಬಂಧುಭಿಶ್ಚ ಸುಹೃದ್ಭಿಶ್ಚ ಭೀಮ ತ್ವಮಸಿ ತಾದೃಶಃ ॥೪॥

ಎಲೈ ಭೀಮನೇ, ಎಲ್ಲ ರಾಜರಿಂದಲೂ, ಬಂಧುಗಳಿಂದಲೂ, ಸುಹೃಜ್ಜನರಿಂದಲೂ ಪೂಜಿತವಾದ ಎಂತಹ ಕುಲದಲ್ಲಿ ನೀನು ಅವತರಿಸಿದ್ದೀಯೋ ಅಂತಹ ಕುಲಕ್ಕೆ ಅನುರೂಪನಾಗಿದ್ದೀಯೆ.

ಕಿಂತು ಪರ್ಯಾಯಧರ್ಮಸ್ಯ ಸಂದಿಗ್ಧಸ್ಯ ವೃಕೋದರ ।
ಪರ್ಯಾಯಂ ನ ವ್ಯವಸ್ಯಂತಿ ದೇವಮಾನುಷಯೋರ್ಜನಾಃ ॥೫॥

ಆದರೆ ವೃಕೋದರನೇ, ಕಾಲಕ್ರಮದಲ್ಲಿ ಧರ್ಮವು ಸಂದಿಗ್ಧವಾದಾಗ ದೇವ-ಮನುಷ್ಯರ ಜಾತಿಗೆ ಸೇರಿದ ಜೀವರು ಯಾವುದನ್ನು ಮಾಡಬೇಕು ಮತ್ತು ಯಾವುದನ್ನು ಬಿಡಬೇಕು ಎಂದು ನಿಶ್ಚಯಿಸಲಾರರು.

ಉದಿತೇಜುಹೋತಿ, ಅನುದಿತೇಜುಹೋತಿ– ಸೂರ್ಯೋದಯವಾದ ಮೇಲೆ ಹೋಮ ಮಾಡಬೇಕು, ಸೂರ್ಯೋದಯಕ್ಕಿಂತ ಮೊದಲೇ ಹೋಮ ಮಾಡಬೇಕು– ಮುಂತಾದ ಪ್ರಾತಃಕಾಲಾದಿಗಳಲ್ಲಿ ಪ್ರಾಪ್ತವಾಗುವ ಕರ್ಮವು ಹೇಗೆ ಸಾಧಾರಣ ಜನರಿಗೆ ಸಂಶಯವನ್ನುಂಟುಮಾಡುತ್ತದೆಯೋ ಅದರಂತೆ ಕಾಲಕ್ರಮದಲ್ಲಿ ಯುದ್ಧವು ಪ್ರಾಪ್ತವಾದಾಗ ಯುದ್ಧವನ್ನು ಮಾಡಬೇಕೇ ಅಥವಾ ಬಿಡಬೇಕೇ ಎಂಬ ಸಂಶಯವು ಉಂಟಾಗುತ್ತದೆ. ಸಜ್ಜನರ ಜೊತೆಯಲ್ಲಿ ಸಂಧಿಯನ್ನೇ ಮಾಡಿಕೊಳ್ಳಬೇಕು, ದುರ್ಜನರ ಜೊತೆಯಲ್ಲಿ ಯುದ್ಧವನ್ನೇ ಮಾಡಬೇಕು ಎಂಬ ನಿಶ್ಚಯವು ಉಂಟಾಗುವುದು ಕಷ್ಟಕರವಾದುದು– ವಾದಿರಾಜರು.

ಯ ಏವ ಹೇತುರ್ಭೂತ್ವಾ ಹಿ ಪುರುಷಸ್ಯಾರ್ಥಸಿದ್ಧಿಷು ।
ವಿನಾಶೇऽಪಿ ಸ ಏವಾಸ್ಯ ಸಂದಿಗ್ಧಂ ಕರ್ಮ ಪೌರುಷಮ್ ॥೬॥

ಮನುಷ್ಯನ ಅರ್ಥಸಿದ್ಧಿಗೆ ಯಾವುದು ಕಾರಣವಾಗುತ್ತದೆಯೋ ಅದೇ ಅವನ ವಿನಾಶಕ್ಕೂ ಕಾರಣವಾಗುತ್ತದೆ. ಆದ್ದರಿಂದ ಪುರುಷನ ಕರ್ಮ ಅಥವಾ ಶೌರ್ಯವು ಸಿದ್ಧಿಯ ವಿಷಯದಲ್ಲಿ ಸಂದಿಗ್ಧವಾದುದು.

ಅನ್ಯಥಾ ಪರಿದೃಷ್ಟಾನಿ ಕವಿಭಿರ್ದೋಷದರ್ಶಿಭಿಃ ।
ಅನ್ಯಥಾ ಪರಿವರ್ತಂತೇ ವೇಗಾ ಇವ ನಭಸ್ವತಃ ॥೭॥

ದೋಷದರ್ಶಿಗಳಾದ ಜ್ಞಾನಿಗಳು ಒಂದು ಕರ್ಮವು ಈ ರೀತಿಯಲ್ಲೇ ಆಗುತ್ತದೆ ಎಂದು ನಿಶ್ಚಯಿಸಿದರೆ ಬೀಸುವ ವಾಯುವು ತನ್ನ ವೇಗವನ್ನೂ ಮತ್ತು ದಿಕ್ಕನ್ನೂ ಬದಲಿಸಿದಂತೆ ಅದು ಬೇರೆ ರೀತಿಯಾಗಿಯೇ ಪರಿಣಾಮವನ್ನು ಹೊಂದುತ್ತದೆ.

ಸುಮಂತ್ರಿತಂ ಸುಗೀತಂ ಚ ನ್ಯಾಯತಶ್ಚೋಪಪಾದಿತಮ್ ।
ಯತ್ಕೃತಂ ಮಾನುಷಂ ಕರ್ಮ ದೈವೇನಾಪಿ ವಿರುದ್ಧ್ಯತೇ ॥೮॥

ಬಹಳ ಆಲೋಚಿಸಿ, ಹಿಂದಿನವರು ಹೊಗಳಿದ ಕರ್ಮಗಳನ್ನು ಮನುಷ್ಯನು ನ್ಯಾಯದಿಂದ ಮಾಡಿದರೂ ದೈವಸಂಕಲ್ಪವಿಲ್ಲದಿದ್ದರೆ ಅದು ಅವನಿಗೆ ವಿರುದ್ಧವಾಗುತ್ತದೆ.

ಕಾಡಿನಲ್ಲಿದ್ದ ಹುಲಿಗಳನ್ನು ತಂದು ಅವುಗಳನ್ನು ಪಳಗಿಸಿ ಆಟವಾಡಿಸಿದರೂ ದೈವ ಪ್ರೇರಣೆಯಿಂದ ಒಂದು ದಿನ ಅವು ಅವನ ಮೇಲೆ ಎರಗಿ ಸಂಹಾರ ಮಾಡುತ್ತವೆ.

ತಥಾ ದೈವಕೃತಂ ಕರ್ಮ ಪೌರುಷೇಣ ವಿಹನ್ಯತೇ ।
ಶೀತಮುಷ್ಣಂ ತಥಾ ವರ್ಷಂ ಕ್ಷುತ್ಪಿಪಾಸೇ ಚ ಭಾರತ ॥೯॥

ಎಲೈ ಭಾರತನೇ, ಅದರಂತೆಯೇ ದೇವತೆಗಳು ಉಂಟುಮಾಡಿದ ಅನಾವೃಷ್ಟಿ-ಅತಿವೃಷ್ಟಿ ಶೀತ-ಉಷ್ಣ, ಹಸಿವು-ನೀರಡಿಕೆ ಮನುಷ್ಯನಿಂದ ಪರಿಹರಿಸಲ್ಪಡುತ್ತವೆ.

ಅನಾವೃಷ್ಟ್ಯಾದಿಗಳು ಹಸಿವು-ನೀರಡಿಕೆಗಳು ಮೊದಲಾದವುಗಳು ದೈವಸಂಕಲ್ಪದಿಂದ ಉಂಟಾದಾಗ ಪುರುಷನು ತನ್ನ ಪ್ರಯತ್ನದಿಂದ ಅದನ್ನು

ಪರಿಹರಿಸಿಕೊಳ್ಳುತ್ತಾನೆ. ಪರಿಹರಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಎಲ್ಲಿ ದೈವಸಂಕಲ್ಪ ಮತ್ತು ಪುರುಷಪ್ರಯತ್ನಗಳು ವಿರುದ್ಧವಾಗಿರುತ್ತವೆಯೋ ಅಲ್ಲೆಲ್ಲಾ ಹೀಗೆ ನಡೆಯುತ್ತದೆ– ವಾದಿರಾಜರು.

ಯದನ್ಯದ್ ದಿಷ್ಟಭಾವಸ್ಯ ಪುರುಷಸ್ಯ ಸ್ವಯಂ ಕೃತಮ್ ।
ತಸ್ಮಾದನುಪರೋಧಶ್ಚ ಭಿದ್ಯತೇ ತತ್ರ ಲಕ್ಷಣಮ್ ॥೧೦॥

ಪುರುಷನು ದೈವಸಂಕಲ್ಪಕ್ಕೆ ವಿರುದ್ಧವಾಗಿ, ಇವುಗಳಿಂದ ನನಗೆ ಅನುಕೂಲವಾಗುತ್ತದೆಂದು ತಿಳಿದು ಯಾವುದನ್ನು ಸೇವಿಸುತ್ತಾನೆಯೋ ಅಲ್ಲಿ ಆ ವಸ್ತುಗಳಿಂದ ಅವನು ಅಪೇಕ್ಷಿಸಿದ ಫಲವು ಉಂಟಾಗುವುದಿಲ್ಲ. (ಸುಖವನ್ನು ಪಡೆಯಬೇಕಾದ ವಸ್ತುವೇ ದೈವಸಂಕಲ್ಪದಿಂದ ದುಃಖವನ್ನು ಕೊಡುತ್ತದೆ ಎಂದು ಅಭಿಪ್ರಾಯ).

ಲೋಕಸ್ಯ ನಾನ್ಯತೋ ವೃತ್ತಿಃ ಪಾಂಡವಾನ್ಯತ್ರ ಕರ್ಮಣಃ ।
ಏವಂಬುದ್ಧಿಃ ಪ್ರವರ್ತೇತ ಫಲಂ ಸ್ಯಾದುಭಯಾನ್ವಯಾತ್ ॥೧೧॥

ಎಲೈ ಪಾಂಡವನೇ, ಲೋಕಕ್ಕೆ ದೈವದಿಂದ ಸಂಕಲ್ಪಿತವಾದ ಕರ್ಮವನ್ನು ಬಿಟ್ಟು ಬೇರೆಯ ಪ್ರವೃತ್ತಿ ಇಲ್ಲ. ಹೀಗೆ ತಿಳಿದುಕೊಂಡು ಮನುಷ್ಯನು ಪ್ರಯತ್ನವನ್ನು ಮಾಡಬೇಕು. ದೈವಸಂಕಲ್ಪ ಮತ್ತು ಮನುಷ್ಯಪ್ರಯತ್ನ ಎರಡೂ ಪರಸ್ಪರ ಅನುಕೂಲವಾಗಿದ್ದರೆ ಆಗ ಫಲವು ಉಂಟಾಗುತ್ತದೆ.

ಯ ಏವಂ ಕೃತಬುದ್ಧಿಃ ಸನ್ ಕರ್ಮಸ್ವೇವ ಪ್ರವರ್ತತೇ ।
ನಾಸಿದ್ಧೌ ವ್ಯಥತೇ ಕಿಂಚಿತ್ ನ ಸಿದ್ಧೌ ಹರ್ಷಮಶ್ನುತೇ ॥೧೨॥

ಯಾವನು ಇಂತಹ ಪರೀಕ್ಷಿತ ಬುದ್ಧಿಯುಳ್ಳವನಾಗಿ ಕರ್ಮಗಳಲ್ಲಿ ಪ್ರವೃತ್ತನಾಗುತ್ತಾನೆಯೋ ಅವನು ಕರ್ಮದ ಫಲವು ಸಿದ್ಧಿಸದಿದ್ದರೆ ವ್ಯಥೆಯನ್ನೂ ಪಡುವುದಿಲ್ಲ, ಫಲವು ಸಿದ್ಧಿಸಿದರೆ ಸಂತೋಷವನ್ನೂ ಪಡುವುದಿಲ್ಲ.

ಯತ್ರೇಯಮರ್ಥಮಾತ್ರಾ ತೇ ಭೀಮಸೇನ ವಿವಕ್ಷಯಾ ।
ನೈಕಾಂತಸಿದ್ಧಿರ್ವಕ್ತವ್ಯಾ ಶತ್ರುಭಿಃ ಸಹ ಸಂಯುಗೇ ॥೧೩॥

ಎಲೈ ಭೀಮಸೇನನೇ, ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡುವಾಗ ನಿಯಮೇನ ಜಯವುಂಟಾಗುತ್ತದೆ ಎಂದು ಹೇಳಲು ಸಾಧ್ಯವಿಲ್ಲ ಎಂಬ ಇಷ್ಟೇ ಅರ್ಥವನ್ನು ತಿಳಿಸುವುದಕ್ಕೋಸ್ಕರ ನಾನು ಮೊದಲು ನಿನಗೆ ಅಂತಹ ಮಾತುಗಳನ್ನು ಆಡಿದೆ.

ನಾತಿಪ್ರಣೇತಬುದ್ಧಿಃ ಸ್ಯಾತ್ ತಥಾ ಭಾವವಿಪರ್ಯಯೇ ।
ವಿವೃದ್ಧಿಮಿಚ್ಛೇದ್ ಹಾನಿಂ ವಾಽಪ್ಯೇತಮರ್ಥಂ ಬ್ರವೀಮಿ ತೇ ॥೧೪॥

ವಸ್ತುಗಳು ವಿಪರೀತವಾಗಿ ಪರಿಣಮಿಸಿದಾಗ ಬಹಳ ಚಿಕಿತ್ಸಕ ಬುದ್ಧಿಯನ್ನು ಮಾಡಬಾರದು. ಯಾವುದರಿಂದ ಕ್ಷೇಮವಾಗುತ್ತದೋ ಮತ್ತು ಹಾನಿಯು ದೂರವಾಗುತ್ತದೋ ಅಂತಹ ಕಾರ್ಯವನ್ನು ಮಾಡಬೇಕು ಎಂದು ತಿಳಿಸಲು ನಿನಗೆ ಈ ಮಾತುಗಳನ್ನು ಆಡುತ್ತಿದ್ದೇನೆ.

ಮನೆಗೆ ಬೆಂಕಿ ಹತ್ತಿದಾಗ ಅದನ್ನು ಆರಿಸಲು ವಿಷಘಳಿಗೆ, ಅಮೃತಘಳಿಗೆ ಮೊದಲಾದವುಗಳನ್ನು ನೋಡಬಾರದು. ಏನನ್ನು ಮಾಡಿದರೆ ಅಗ್ನಿದಾಹವು ನಾಶವನ್ನು ಹೊಂದಿ, ತನ್ನ ಮನೆಯು ವೃದ್ಧಿಯನ್ನು ಪಡೆಯುತ್ತದೆಯೋ ಅಂತಹದನ್ನು ಕ್ಷಿಪ್ರವಾಗಿ ಮಾಡಬೇಕು– ವಾದಿರಾಜರು.

ಶ್ವೋಭೂತೇ ಧೃತರಾಷ್ಟ್ರಸ್ಯ ಸಮೀಪಂ ಪ್ರಾಪ್ಯ ಪಾಂಡವ ।
ಯತಿಷ್ಯೇ ಪ್ರಶಮಂ ಕರ್ತುಂ ಯುಷ್ಮದರ್ಥಮಹಾಪಯನ್ ॥೧೫॥

ಎಲೈ ಪಾಂಡವನೇ, ನಾಳೆಯ ದಿವಸ ಧೃತರಾಷ್ಟ್ರನ ಸಮೀಪಕ್ಕೆ ಹೋಗಿ, ನಿಮ್ಮ ಹಿತಕ್ಕೆ ತೊಂದರೆಯಾಗದಂತೆ ಸಂಧಿಯನ್ನು ಮಾಡಲು ಪ್ರಯತ್ನಿಸುವೆನು.

ಶಮಂ ಚೇತ್ ತೇ ಕರಿಷ್ಯಂತಿ ತತೋಽನಂತಂ ಯಶೋ ಮಮ ।
ಭವತಾಂ ಚ ಕೃತಃ ಕಾಮಃ ತೇಷಾಂ ಚ ಶ್ರೇಯ ಉತ್ತಮಮ್ ॥೧೬॥

ಅವರು ಶಾಂತರಾಗಿ ನನ್ನ ಮಾತುಗಳನ್ನು ನಡೆಸಿದರೆ ನನಗೆ ಅಪಾರವಾದ ಕೀರ್ತಿಯುಂಟಾಗುವುದು. ನಿಮ್ಮ ಆಸೆಯನ್ನು ನೆರವೇರಿಸಿದಂತೆಯೂ ಮತ್ತು ಅವರಿಗೆ ಶ್ರೇಷ್ಠವಾದ ಶ್ರೇಯಸ್ಸನ್ನು ಮಾಡಿದಂತೆಯೂ ಆಗುವುದು.

ತೇ ಚೇದಭಿನಿವೇಕ್ಷ್ಯಂತಿ ನಾಭ್ಯುಪೇಷ್ಯಂತಿ ಮದ್ವಚಃ ।
ಕುರವೋ ಯುದ್ಧಮೇವಾತ್ರ ಘೋರಂ ಕರ್ಮ ಭವಿಷ್ಯತಿ ॥೧೭॥

ಕೌರವರು ತಮ್ಮ ಹಠವನ್ನೇ ಹಿಡಿದು ನನ್ನ ಮಾತುಗಳನ್ನು ನಡೆಸಿಕೊಡದಿದ್ದರೆ ಆಗ ಘೋರಕರ್ಮವಾದ ಯುದ್ಧವೇ ನಡೆಯುವುದು.

ಅಸ್ಮಿನ್ ಯುದ್ಧೇ ಭೀಮಸೇನ ತ್ವಯಿ ಭಾರಃ ಸಮಾಹಿತಃ ।
ಧೂರರ್ಜುನೇನ ವೋಢವ್ಯಾ ವೋಢವ್ಯ ಇತರೋ ಜನಃ ॥೧೮॥

ಎಲೈ ಭೀಮಸೇನನೇ, ಈ ಯುದ್ಧದಲ್ಲಿ ಎಲ್ಲ ಭಾರವೂ ನಿನ್ನ ಮೇಲೆಯೇ ಇದೆ. ಅರ್ಜುನನೂ ಕಾರ್ಯವನ್ನು ನಿರ್ವಹಿಸಬೇಕು. ಉಳಿದ ಎಲ್ಲರೂ ನಿಮ್ಮಿಂದ ರಕ್ಷಿಸಲ್ಪಡಬೇಕು.

ಅಹಂ ಹಿ ಯಂತಾ ಬೀಭತ್ಸೋರ್ಭವಿತಾ ಸಂಯುಗೇ ಸತಿ ।
ಧನಂಜಯಸ್ಯೈಷ ಕಾರ್ಯೋ ನ ಹಿ ಯುದ್ಧಂ ನ ಕಾಮಯೇ ॥೧೯॥

ಯುದ್ಧವು ಆಗುವುದಾದರೆ ನಾನು ಅರ್ಜುನನ ಸಾರಥಿಯಾಗುವೆನು. ನಾನು ಅರ್ಜುನನಿಗೆ ಈ ಕಾರ್ಯವನ್ನು ಮಾಡಬೇಕು. ಯುದ್ಧವು ನನಗೆ ಇಷ್ಟವಿಲ್ಲ ಎಂದೇನೂ ಅಲ್ಲ.

ತಸ್ಮಾದಾಶಂಕಮಾನೋಽಹಂ ವೃಕೋದರ ಮತಿಂ ತವ ।
ತುದನ್ನಕ್ಲೀಬಯಾ ವಾಚಾ ತೇಜಸ್ತೇ ಸಮದೀಪಯಮ್ ॥೨೦॥

ಆದ್ದರಿಂದ ಎಲೈ ವೃಕೋದರನೇ, ನಿನ್ನ ಬುದ್ಧಿಯನ್ನು ಶಂಕಿಸಿ, ನಿನ್ನ ತೇಜಸ್ಸನ್ನು ಉದ್ದೀಪನಗೊಳಿಸಲು ನಾನು ಪೌರುಷದ ವಾಕ್ಯಗಳಿಂದ ನಿನ್ನನ್ನು ಚುಚ್ಚಿ ಮಾತನಾಡಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಷಟ್‌ಸಪ್ತತಿತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಎಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಪ್ಪತ್ತೇಳನೆಯ ಅಧ್ಯಾಯ

ಅರ್ಜುನನಿಂದ ಸಂಧಿ-ಯುದ್ಧಗಳೆರಡನ್ನೂ ಪ್ರಸ್ತಾಪಿಸಿ,
ಕೃಷ್ಣನ ಮನಸ್ಸಿಗೆ ತೋರಿದಂತೆ ಮಾಡಬೇಕಾಗಿ ಪ್ರಾರ್ಥನೆ.

ಅರ್ಜುನಃ

ಉಕ್ತಂ ಯುಧಿಷ್ಠಿರೇಣೈವ ಯಾವದ್ ವಾಚ್ಯಂ ಜನಾರ್ದನ ।
ತವ ವಾಕ್ಯಂ ತು ಮೇ ಶ್ರುತ್ವಾ ಪ್ರತಿಭಾತಿ ಪರಂತಪ ॥೧॥

ಅರ್ಜುನ– ಎಲೈ ಜನಾರ್ದನನೇ, ಯುಧಿಷ್ಠಿರನು ಏನು ಹೇಳಬೇಕೋ ಅದೆಲ್ಲವನ್ನೂ ಹೇಳಿದ್ದಾನೆ. ಪರಂತಪನೇ, ನಿನ್ನ ಮಾತುಗಳನ್ನು ಕೇಳಿ ನಿನ್ನ ಮಾತುಗಳು ಯೋಗ್ಯವೆಂದು ನನಗೆ ತೋರುತ್ತದೆ.

ನೈವ ಪ್ರಶಮಮತ್ರ ತ್ವಂ ಮನ್ಯಸೇ ಸುಕರಂ ಪ್ರಭೋ ।
ಲೋಭಾದ್ವಾ ಧೃತರಾಷ್ಟ್ರಸ್ಯ ದೈನ್ಯಾದ್ವಾ ಸಮುಪಸ್ಥಿತಾತ್ ॥೨॥

ಎಲೈ ಪ್ರಭುವೇ, ನಾವು ದ್ರವ್ಯದಲ್ಲಿ ಆಸೆಯನ್ನು ಮಾಡಿ ಅಥವಾ ಧೃತರಾಷ್ಟ್ರನ ಎದುರಿಗೆ ದೈನ್ಯವನ್ನು ತೋರಿ ಸಂಧಿಯನ್ನು ಸಂಪಾದಿಸುವುದು ಸುಲಭವಲ್ಲವೆಂದು ನೀನೂ ತಿಳಿದಿದ್ದೀಯೆ.

ಅಫಲಂ ಮನ್ಯಸೇ ಚಾಪಿ ಪುರುಷಸ್ಯ ಪರಾಕ್ರಮಮ್ ।
ನ ಚಾಂತರೇಣ ಕರ್ಮಾಣಿ ಪೌರುಷೇಣ ಫಲೋದಯಃ ॥೩॥

ಈ ಸಂದರ್ಭದಲ್ಲಿ ಸಂಧಿಯನ್ನು ಸಂಪಾದಿಸಲು ಮಾಡುವ ಪುರುಷ ಪ್ರಯತ್ನವು ನಿಷ್ಫಲವೆಂದು ತಿಳಿದಿದ್ದೀಯೆ. ದೈವಸಂಕಲ್ಪಿತ ಕರ್ಮಗಳಾದರೂ ಪುರುಷಪ್ರಯತ್ನವಿಲ್ಲದೆ ಫಲವನ್ನು ನೀಡುವುದಿಲ್ಲ– ವಾದಿರಾಜರು.

ಯದಿದಂ ಭಾಷಿತಂ ವಾಕ್ಯಂ ತಥೈವ ನ ತಥೈವ ಚ ।
ನ ಚೈತದೇವಂ ದ್ರಷ್ಟವ್ಯಮಸಾಧ್ಯಮಿತಿ ಕಿಂಚನ ॥೪॥

ನೀನು ಆಡಿದ ಮಾತುಗಳು ಹಾಗೆಯೇ ಆಗುತ್ತವೆ. ಧರ್ಮರಾಜನು ಆಡಿದ ಮಾತುಗಳು ಹಾಗೆಯೇ ಆಗಬಹುದು ಅಥವಾ ಬೇರೆ ರೀತಿಯೂ ಆಗಬಹುದು. ಯಾವುದನ್ನೂ ಅಸಾಧ್ಯವೆಂದು ತಿಳಿಯಬಾರದು (ಲಕ್ಷಾಲಂಕಾರ).

ಕಿಂ ಚೈತನ್ಮನ್ಯಸೇ ಕೃಚ್ಛ್ರಮಸ್ಮಾಕಮುಪಪಾದಿತಮ್ ।
ಕುರ್ವಂತಿ ತೇಷಾಂ ಕರ್ಮಾಣಿ ಯೇಷಾಂ ನಾಸ್ತಿ ಫಲೋದಯಃ ॥೫॥

ಮತ್ತು ನಮಗೆ ಒದಗಿರುವ ಕ್ಲೇಶವು ನಮ್ಮಿಂದಲೇ ಸಂಪಾದಿತವಾದುದು ಎಂದು ನೀನು ತಿಳಿದಿದ್ದೀಯೆ. ಜೀವರು ಶುಭಫಲವನ್ನು ಕೊಡದಿರುವ ಕರ್ಮಗಳನ್ನೂ ಮಾಡುತ್ತಾರಷ್ಟೆ!

ಸಂಪಾದ್ಯಮಾನಂ ಸಮ್ಯಕ್ ಸ್ಯಾತ್ ತತ್ ಕರ್ಮ ಸಫಲಂ ಪ್ರಭೋ ।
ಸ ತಥಾ ಕೃಷ್ಣ ವರ್ತಸ್ವ ಯಥಾ ಶರ್ಮ ಭವೇತ್ ಪರೈಃ ॥೬॥

ಎಲೈ ಪ್ರಭುವೇ, ಯಾವ ಕರ್ಮವು ದೈವಸಂಕಲ್ಪ ಮತ್ತು ಸರಿಯಾದ ಮನುಷ್ಯನ ಪ್ರಯತ್ನದಿಂದ ಕೂಡಿರುತ್ತದೆಯೋ ಅದು ಸಫಲವಾಗುತ್ತದೆ. ಕೃಷ್ಣನೇ, ಹೇಗೆ ಮಾಡಿದರೆ ಶತ್ರುಗಳ ಜೊತೆಯಲ್ಲಿ ಸಂಧಿಯುಂಟಾದೀತೋ ಅದರಂತೆ ನಡೆದುಕೊಳ್ಳುವವನಾಗು.

ಪಾಂಡವಾನಾಂ ಕುರೂಣಾಂ ಚ ಭವಾನ್ ಪರಮಕಃ ಸುಹೃತ್ ।
ಸುರಾಣಾಮಸುರಾಣಾಂ ಚ ಯಥಾ ವೀರ ಪ್ರಜಾಪತಿಃ ॥೭॥

ಎಲೈ ವೀರನೇ, ದೇವತೆಗಳಿಗೂ ಮತ್ತು ದೈತ್ಯರಿಗೂ ಬ್ರಹ್ಮದೇವರು ಹಿತಚಿಂತಕರಾದಂತೆ ಪಾಂಡವರಿಗೂ ಮತ್ತು ಕೌರವರಿಗೂ ನೀನು ಶ್ರೇಷ್ಠನಾದ ಹಿತಚಿಂತಕನಾಗಿದ್ದೀಯೆ.

ಕುರೂಣಾಂ ಪಾಂಡವಾನಾಂ ಚ ಪ್ರವಿಧತ್ಸ್ವ ನಿರಾಮಯಮ್ ।
ಅಸ್ಮದ್ಧಿತಮನುಷ್ಠಾತುಂ ನ ಮನ್ಯೇ ತವ ದುಷ್ಕರಮ್ ॥೮॥

ಪಾಂಡವರಿಗೂ ಮತ್ತು ಕೌರವರಿಗೂ ಕ್ಷೇಮವನ್ನು ಮಾಡುವವನಾಗು. ನಮಗೆ ಹಿತವನ್ನು ಉಂಟುಮಾಡುವುದು ನಿನಗೆ ಅಸಾಧ್ಯವಲ್ಲವೆಂದು ನಾನು ತಿಳಿದಿದ್ದೇನೆ.

ಏವಂ ಚೇತ್ ಕಾರ್ಯತಾಮೇತಿ ಕಾರ್ಯಂ ತವ ಜನಾರ್ದನ ।
ವಚನಂ ಚೈವಮೇವ ತ್ವಂ ಕರಿಷ್ಯಸಿ ಜನಾರ್ದನ ॥೯॥

ಎಲೈ ಜನಾರ್ದನನೇ, ಹೀಗಾಗುವುದಾದರೆ ಸಂಧಿರೂಪವಾದ ಕಾರ್ಯವನ್ನು ಮಾಡಲು ಸಾಧ್ಯವಾಗುತ್ತದೆ. ಜನಾರ್ದನನೇ, ನೀನು ಅದಕ್ಕೆ ಅನುಗುಣವಾಗಿಯೇ ಮಾತನಾಡುವವನಾಗು.

ಚಿಕೀರ್ಷಿತಮಥಾನ್ಯತ್ ತೇ ತಸ್ಮಿನ್ ವೀರ ದುರಾತ್ಮನಿ ।
ಭವಿಷ್ಯತಿ ಚ ತತ್ ಸರ್ವಂ ಯಥಾ ತವ ಚಿಕೀರ್ಷಿತಮ್ ॥೧೦॥

ಎಲೈ ವೀರನೇ, ನೀನು ಆ ದುರಾತ್ಮನ ವಿಷಯದಲ್ಲಿ ಬೇರೆ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ಭಾವಿಸಿದರೆ ನಿನ್ನ ಸಂಕಲ್ಪಕ್ಕೆ ಅನುಗುಣವಾಗಿ ಎಲ್ಲವೂ ಹಾಗೆಯೇ ಆಗುತ್ತದೆ.

ಶರ್ಮ ತೈಃ ಸಹ ವಾ ನೋऽಸ್ತು ತವ ವಾ ಯಚ್ಚಿಕೀರ್ಷಿತಮ್ ।
ವಿಚಾರ್ಯಮಾಣೋ ಯಃ ಕಾಮಸ್ತವ ಕೃಷ್ಣ ಸ ನೋ ಗುರುಃ ॥೧೧॥

ನಮಗೆ ಕೌರವರ ಜೊತೆಯಲ್ಲಿ ಸಂಧಿಯಾದರೂ ಇರಲಿ ಅಥವಾ ಎಲೈ ಕೃಷ್ಣನೇ, ನೀನು ವಿಚಾರಮಾಡಿ ಯಾವುದನ್ನು ನಿರ್ಧರಿಸುತ್ತೀಯೋ ಅದಾದರೂ ಸಿದ್ಧವಾಗಲಿ. ಕೃಷ್ಣನೇ, ನಿನ್ನ ಅಭಿಪ್ರಾಯವೇ ನಮಗೆ ದೊಡ್ಡದು.

ನ ಸ ನಾರ್ಹತಿ ದುಷ್ಪಾತ್ಮಾ ವಧಂ ಸಸುತಬಾಂಧವಃ ।
ಯೇನ ಧರ್ಮಸುತೇ ದೃಷ್ಟಾ ನ ಸಾ ಶ್ರೀರಪಮರ್ಷಿತಾ ॥೧೨॥

ಯಾವ ದುರ್ಯೋಧನನು ಯುಧಿಷ್ಠಿರನಲ್ಲಿ ನೆಲೆಗೊಂಡ ಸಂಪತ್ತನ್ನು ನೋಡಿ ಸಹಿಸಲಿಲ್ಲವೋ ಅಂತಹ ದುಷ್ಪಾತ್ಮನಾದ ದುರ್ಯೋಧನನು ಬಾಂಧವರ ಮತ್ತು ಪುತ್ರರ ಜೊತೆಯಲ್ಲಿ ಅವಧ್ಯನಾದವನೇನೂ ಅಲ್ಲ.

ಸ ಯೇನಾಪಶ್ಯತೋऽಪಾಯಂ ಧರ್ಮಿಷ್ಠಾನ್ ಮಧುಸೂದನ ।
ಉಪಾಯೇನ ನೃಶಂಸೇನ ಹೃತಾ ದುರ್ದ್ಯೂತದೇವಿನಾ ॥೧೩॥

ಎಲೈ ಮಧುಸೂದನನೇ, ಧರ್ಮರಾಜನಲ್ಲಿದ್ದ ಸಂಪತ್ತನ್ನು ಅವನಿಂದ ಕಸಿಯಲು ಬೇರೆ ಯಾವ ಉಪಾಯವನ್ನೂ ಕಾಣದೇ ಕ್ರೂರನಾದ ಅವನು ಕೆಟ್ಟದ್ಯೂತರೂಪವಾದ ಉಪಾಯದಿಂದ ಅದನ್ನು ಅಪಹರಿಸಿದನು.

ಕಥಂ ಹಿ ಪುರುಷೋ ಜಾತಃ ಕ್ಷತ್ರಿಯೇಷು ಧನುರ್ಧರಃ ।
ಸಮಾಹೂತೋ ನಿವರ್ತೇತ ಪ್ರಾಣತ್ಯಾಗೇಽಪಿ ಪಂಡಿತಃ ॥೧೪॥

ಕ್ಷತ್ರಿಯನಾಗಿ ಹುಟ್ಟಿ, ಧನುರ್ಧರನಾಗಿ, ವಿವೇಕಿಯಾದವನು ಯುದ್ಧಕ್ಕೆ ಆಹ್ವಾನ ಮಾಡಿದಾಗ ಪ್ರಾಣ ಹೋದರೂ ಹೇಗೆ ಹಿಂದಕ್ಕೆ ಬಂದಾನು?

ಅಧರ್ಮೇಣ ಜಿತಾನ್ ದೃಷ್ಟ್ವಾ ವನೇ ಪ್ರವ್ರಜಿತಾಂಸ್ತಥಾ ।
ವಧ್ಯತಾಂ ಮಮ ವಾರ್ಷ್ಣೇಯ ನಿರ್ಗತೋಽಸೌ ಸುಯೋಧನಃ ॥೧೫॥

ಎಲೈ ವಾರ್ಷ್ಣೇಯನೇ, ನಮ್ಮನ್ನು ಅಧರ್ಮದಿಂದ ಜಯಿಸಿ ಕಾಡಿಗೆ ಕಳುಹಿಸಿದ ಸುಯೋಧನನು ಸ್ಪಷ್ಟವಾಗಿ ನನ್ನಿಂದ ವಧ್ಯನಾಗಿದ್ದಾನೆ.

ನ ಚೈತದದ್ಭುತಂ ಕೃಷ್ಣ ಮಿತ್ರಾರ್ಥೇ ಯಚ್ಚಿಕೀರ್ಷಸಿ ।
ಕ್ರಿಯತಾಂ ತತ್ತು ಮುಖ್ಯಂ ಸ್ಯಾನ್ಮೃದುನಾ ಚೇತರೇಣ ವಾ ॥೧೬॥

ಕೃಷ್ಣನೇ, ಮಿತ್ರರ ಸಲುವಾಗಿ ಏನು ಮಾಡಲು ಬಯಸಿದ್ದೀಯೋ ಅದು ನಿನ್ನಲ್ಲಿ ಅದ್ಭುತವಲ್ಲ. ಅದು ಮೃದುವಾಗಿರಲೀ ಅಥವಾ ಉಗ್ರವಾಗಿರಲೀ. ನೀನು ಅದನ್ನೇ ಮಾಡುವವನಾಗು.

ಅಥವಾ ಮನ್ಯಸೇ ಜ್ಯಾಯಾನ್ ವಧಸ್ತೇಷಾಮನಂತರಮ್ ।
ತದೇವ ಕ್ರಿಯತಾಮಾಶು ನ ವಿಚಾರ್ಯಮತಸ್ತ್ವಯಾ ॥೧೭॥

ಅಥವಾ ಕೌರವರ ವಧೆಯೇ ಶ್ರೇಷ್ಠವೆಂದು ನೀನು ಚಿಂತಿಸುವುದಾದರೆ ಅದನ್ನೇ ಶೀಘ್ರವಾಗಿ ಮಾಡು. ನೀನು ಬೇರೆ ವಿಚಾರವನ್ನು ಮಾಡುವ ಅವಶ್ಯಕತೆ ಇಲ್ಲ.

ಜಾನಾಸಿ ಹಿ ತಥಾ ತೇನ ದ್ರೌಪದೀ ಪಾಪಬುದ್ಧಿನಾ ।
ಪರಿಕ್ಲಿಷ್ಟಾ ಸಭಾಮಧ್ಯೇ ತಚ್ಚ ತಸ್ಯೋಪಮರ್ಷಿತಮ್ ॥೧೮॥

ಪಾಪಬುದ್ಧಿಯುಳ್ಳ ಅವನು ಸಭಾಮಧ್ಯದಲ್ಲಿ ದ್ರೌಪದಿಯನ್ನು ಹೇಗೆ ಅವಮಾನ ಮಾಡಿದನು ಎಂದು ನೀನು ತಿಳಿದಿದ್ದೀಯೆ. ನಾವು ಅವನ ಆ ದುಷ್ಕರ್ಮವನ್ನೂ ಸಹಿಸಿದೆವು.

ಸ ನಾಮ ಸಮ್ಯಗ್ ವರ್ತೇತ ಪಾಂಡವೇಷ್ವಿತಿ ಮಾಧವ ।
ನ ಮೇ ಸಂಜಾಯತೇ ಬುದ್ಧಿರ್ಬೀಜಮುಪ್ತಮಿವೋಷರೇ ॥೧೯॥

ಎಲೈ ಮಾಧವನೇ, ಮರುಭೂಮಿಯಲ್ಲಿ ಹಾಕಿದ ಬೀಜವು ಹೇಗೆ ಮೊಳಕೆ ಒಡೆಯುವುದಿಲ್ಲವೋ ಅದರಂತೆ ಅವನಿಗೆ ಎಂದಾದರೂ ಪಾಂಡವರಾದ ನಮ್ಮ ವಿಷಯದಲ್ಲಿ ಸರಿಯಾದ ನಡವಳಿಕೆ ಉಂಟಾಗುತ್ತದೆ ಎಂಬ ಬುದ್ಧಿಯು ನನಗೆ ಬರುವುದಿಲ್ಲ.

ತಸ್ಮಾದ್ ಯನ್ಮನ್ಯಸೇ ಯುಕ್ತಂ ಪಾಂಡವಾನಾಂ ಹಿತಂ ಚ ಯತ್ ।
ತದಾಶು ಕುರು ವಾರ್ಷ್ಣೇಯ ತನ್ನಃ ಕಾರ್ಯಮನಂತರಮ್ ॥೨೦॥

ಆದ್ದರಿಂದ ವಾರ್ಷ್ಣೇಯನೇ, ಯಾವುದನ್ನು ನೀನು ಯುಕ್ತವಾದುದು ಮತ್ತು ಪಾಂಡವರಿಗೆ ಹಿತವಾದುದು ಎಂದು ಚಿಂತಿಸುತ್ತೀಯೋ ಅದನ್ನೇ ಶೀಘ್ರವಾಗಿ ಮಾಡುವವನಾಗು. ನಾವೂ ಕೂಡ ಅದನ್ನೇ ಮಾಡುವವರಾಗುತ್ತೇವೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಸಪ್ತಸಪ್ತತಿತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಅಷ್ಟಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಎಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ತತಃ ಕೃಷ್ಣೋऽರ್ಜುನಂ ಚೈವ ಕೃಪಾಳುಂ ಸಂಧಿಕಾಮುಕಮ್ ।
ಹೇತುಮದ್ಭಿಃ ಶುಭೈರ್ವಾಕ್ಯೈರನುನೀಯ ಜಗತ್ಪತಿಃ ॥೫೭॥

ಬಳಿಕ ದಯಾಳುವಾಗಿ ಸಂಧಿಯನ್ನು ಬಯಸಿದ್ದ ಅರ್ಜುನನನ್ನು ಜಗದೊಡೆಯನಾದ ಕೃಷ್ಣ ಯುಕ್ತಿಯುಕ್ತವಾದ ಮಾತುಗಳಿಂದ ಯುದ್ಧಕ್ಕೆ ಒಪ್ಪಿಸಿದ.

★ ★ ★ ★ ★

ಎಪ್ಪತ್ತೆಂಟನೆಯ ಅಧ್ಯಾಯ

ಸುಯೋಧನನ ಜೊತೆಯಲ್ಲಿ ಸಂಧಿಯು ದುರ್ಲಭವಾದರೂ ಯುಧಿಷ್ಠಿರನ ಮಾತಿನಂತೆ ಸಂಧಿಗಾಗಿ ತಾನು ಪ್ರಯತ್ನಪಡುವಂತೆ ಅರ್ಜುನನನ್ನು ಕುರಿತು ಕೃಷ್ಣನ ಉತ್ತರ.

ಶ್ರೀಭಗವಾನ್

ಏವಮೇತನ್ಮಹಾಬಾಹೋ ಯಥಾ ವದಸಿ ಪಾಂಡವ ।
ಸರ್ವಂ ತ್ವಿದಂ ಸಮಾಯತ್ತಂ ಬೀಭತ್ಸೋ ಕರ್ಮಣೋರ್ದ್ವಯೋಃ ॥೧॥

ಶ್ರೀಭಗವಾನ್– ಎಲೈ ಮಹಾಬಾಹುವಾದ ಪಾಂಡವನೇ, ನೀನು ಹೇಳಿದಂತೆಯೇ ಎಲ್ಲವೂ ಸರಿ. ಎಲೈ ಬೀಭತ್ಸುವೇ, ಇವೆಲ್ಲವೂ ಕೂಡ ಎರಡು ಕರ್ಮಗಳನ್ನು (ದೈವಸಂಕಲ್ಪಮತ್ತು ಪುರುಷಪ್ರಯತ್ನವನ್ನು) ಅವಲಂಬಿಸಿವೆ.

ಕ್ಷೇತ್ರಂ ಹಿ ರಸವಚ್ಛುದ್ಧಂ ಕರ್ಷಕೇಣೋಪಪಾದಿತಮ್ ।
ಋತೇ ವರ್ಷಾನ್ನ ಕೌಂತೇಯ ಜಾತು ನಿರ್ವರ್ತಯೇತ್ ಫಲಮ್ ॥೨॥

ಫಲವತ್ತಾದ ಹೊಲವು ಕೃಷೀವಲನಿಂದ ಸಿದ್ಧಮಾಡಲ್ಪಡುತ್ತದೆ. ಎಲೈ ಕೌಂತೇಯನೇ, ಆದರೂ ಮಳೆ ಇಲ್ಲದಿದ್ದರೆ ಅದು ಅಪೇಕ್ಷಿತವಾದ ಫಲವನ್ನು ಎಂದೂ ಕೊಡುವುದಿಲ್ಲ.

ತತ್ರ ವೈ ಪೌರುಷಂ ಬ್ರೂಯುರಾಸೇಕಂ ಯತ್ನಕಾರಿತಮ್ ।
ತತ್ರ ಚಾಪಿ ಧ್ರುವಂ ಪಶ್ಯೇತ್ ಶೋಷಣಂ ದೈವಕಾರಿತಮ್ ॥೩॥

ಅಲ್ಲಿಯೂ ಸಹ ಪುರುಷನು ಪ್ರಯತ್ನದಿಂದ ಏನಾದರೂ ನೀರನ್ನು ಹಾಕಿದರೆ ಆಗಲೂ ಕೂಡ ಸಸ್ಯವು ಒಣಗಿಹೋಗುವುದನ್ನು ನೋಡಬಹುದು. ಆ ಸಸ್ಯದ ಒಣಗುವಿಕೆಯು ದೈವದಿಂದ ಉಂಟಾದದ್ದು.

ತದಿದಂ ನಿಶ್ಚಿತಂ ಬುದ್ಧ್ಯಾ ಪೂರ್ವೈರಪಿ ಮಹಾತ್ಮಭಿಃ ।
ದೈವಂ ಚ ಮಾನುಷಂ ಚೈವ ಸಂಯುಕ್ತಂ ಲೋಕಕಾರಣಮ್ ॥೪॥

ಪೂರ್ವಜರಾದ ಮಹಾತ್ಮರು ತಮ್ಮ ಬುದ್ಧಿಯಿಂದ ಇದನ್ನು ನಿಶ್ಚಯಿಸಿದ್ದರು. ದೈವಸಂಕಲ್ಪ ಮತ್ತು ಮಾನುಷಪ್ರಯತ್ನ, ಎರಡೂ ಸೇರಿಯೇ ಲೋಕದಲ್ಲಿ ಅಪೇಕ್ಷಿತವಾದ ಫಲಕ್ಕೆ ಕಾರಣವಾಗುತ್ತವೆ.

ಅಹಂ ತು ತತ್ ಕರಿಷ್ಯಾಮಿ ಪರಂ ಪುರುಷಕಾರತಃ ।
ದೈವಂ ಹಿ ನ ಮಯಾ ಶಕ್ಯಂ ಕರ್ಮ ಕರ್ತುಂ ಕಥಂಚನ ॥೫॥

ಪುರುಷಪ್ರಯತ್ನದಿಂದ ಏನು ಮಾಡಬಹುದೋ ಅದನ್ನು ನಾನು ಉತ್ತಮವಾಗಿ ಮಾಡುವೆನು. ಆದರೆ ದೈವಕರ್ಮವನ್ನು ಮಾತ್ರ ನಾನು ಯಾವ ರೀತಿಯಿಂದಲೂ ಮಾಡಲು ಸಾಧ್ಯವಿಲ್ಲ.

ಸ ಹಿ ಧರ್ಮಂ ಚ ಸತ್ಯಂ ಚ ತ್ಯಕ್ತ್ವಾ ಚರತಿ ದುರ್ಮತಿಃ ।
ನ ಹಿ ಸಂತಪ್ಯತೇ ತೇನ ತಥಾರೂಪೇಣ ಕರ್ಮಣಾ ॥೬॥

ದುರ್ಮತಿಯಾದ ದುರ್ಯೋಧನನು ಧರ್ಮವನ್ನೂ ಮತ್ತು ಸತ್ಯವನ್ನೂ ತ್ಯಜಿಸಿ ನಡೆದುಕೊಳ್ಳುತ್ತಾನೆ ಮತ್ತು ಅಂತಹ ದುಷ್ಕರ್ಮವನ್ನು ಮಾಡಿದರೂ ಸಹ ಪಶ್ಚಾತ್ತಾಪ ಪಡುವುದಿಲ್ಲ.

ತಾಂ ಚಾಪಿ ಬುದ್ಧಿಂ ಪಾಪಿಷ್ಠಾಂ ವರ್ಧಯಂತ್ಯಸ್ಯ ಮಂತ್ರಿಣಃ ।
ಶಕುನಿಃ ಸೂತಪುತ್ರಶ್ಚ ಭ್ರಾತಾ ದುಃಶಾಸನಸ್ತಥಾ ॥೭॥

ಅವನ ಮಂತ್ರಿಗಳಾದ ಶಕುನಿ, ಕರ್ಣ ಮತ್ತು ತಮ್ಮನಾದ ದುಶ್ಶಾಸನ ಇವರು ಅವನ ಪಾಪದ ಬುದ್ಧಿಯನ್ನು ಇನ್ನೂ ಹೆಚ್ಚುವಂತೆ ಮಾಡುತ್ತಾರೆ.

ಸ ಹಿ ತ್ಯಾಗೇನ ರಾಜ್ಯಸ್ಯ ನ ಶಮಂ ಸಮುಪೈಷ್ಯತಿ ।
ಅಂತರೇಣ ವಧಂ ಪಾರ್ಥ ಸಾನುಬಂಧಃ ಸುಯೋಧನಃ ॥೮॥

ಎಲೈ ಪಾರ್ಥನೇ, ಸುಯೋಧನನು ಪರಿವಾರ ಸಹಿತನಾಗಿ ವಧೆಯನ್ನು ಹೊಂದದೆ ರಾಜ್ಯದ ಅಂಶವನ್ನು ಕೊಟ್ಟು ಸಂಧಿಯನ್ನು ಮಾಡಿಕೊಳ್ಳುವುದಿಲ್ಲ.

ನ ಚಾಪಿ ಪ್ರಣಿಪಾತೇನ ತ್ಯಕ್ತುಮಿಚ್ಛತಿ ಧರ್ಮಹಾ ।
ಯಾಚ್ಯಮಾನಶ್ಚ ರಾಜ್ಯಂ ಸ ನ ಪ್ರದಾಸ್ಯತಿ ದುರ್ಮತಿಃ ॥೯॥

ಧರ್ಮವನ್ನು ನಾಶಮಾಡುವ ಅವನು ಅವನಿಗೆ ನಮಸ್ಕಾರವನ್ನು ಮಾಡಿದರೂ ರಾಜ್ಯವನ್ನು ಕೊಡಲು ಬಯಸುವುದಿಲ್ಲ ಮತ್ತು ಬೇಡಿದರೂ ಸಹ ದುರ್ಮತಿಯಾದ ಅವನು ರಾಜ್ಯವನ್ನು ಕೊಡುವುದಿಲ್ಲ.

ನ ತು ಮನ್ಯೇ ಸ ತದ್ವಾಚ್ಯೋ ಯದ್ ಯುಧಿಷ್ಠಿರಶಾಸನಮ್ ।
ಉಕ್ತಂ ಪ್ರಯೋಜನಂ ಯತ್ತು ಧರ್ಮರಾಜೇನ ಭಾರತ ॥೧೦॥

ಎಲೈ ಭಾರತನೇ, ಧರ್ಮರಾಜನು ಹೇಳಿದ ಆದೇಶವನ್ನಾಗಲೀ ಮತ್ತು ಅದರ ಪ್ರಯೋಜನವನ್ನಾಗಲೀ ದುರ್ಯೋಧನನಿಗೆ ಹೇಳಬಾರದು ಎಂದು ನಾನು ನುಡಿಯುತ್ತೇನೆ.

ತಥಾ ಪಾಪಸ್ತು ತತ್ ಸರ್ವಂ ನ ಕರಿಷ್ಯತಿ ಕೌರವಃ ।
ತಸ್ಮಿಂಶ್ಚಾಕ್ರಿಯಮಾಣೇऽಸೌ ಲೋಕವಧ್ಯೋ ಭವಿಷ್ಯತಿ ॥೧೧॥

ಪಾಪಿಯಾದ ಕೌರವನು ಅವನು ಧರ್ಮರಾಜನು ಹೇಳಿದ ಯಾವುದನ್ನೂ ಮಾಡುವುದಿಲ್ಲ. ಧರ್ಮರಾಜನು ಹೇಳಿದಂತೆ ಅವನು ನಡೆದುಕೊಳ್ಳದಿದ್ದರೆ ಅವನು ಲೋಕದಿಂದಲೇ ವಧ್ಯನಾಗುವನು.

ಮಮ ಚಾಪಿ ಸ ವಧ್ಯೋ ಹಿ ಜಗತಶ್ಚಾಪಿ ಭಾರತ ।
ಯೇನ ಕೌಮಾರಕೇ ಯೂಯಂ ಸರ್ವೇ ವಿಪ್ರಕೃತಾಸ್ತದಾ ॥೧೨॥

ಎಲೈ ಭಾರತನೇ, ಯಾವ ದುರ್ಯೋಧನನು ಬಾಲ್ಯದಲ್ಲಿಯೇ ನಿಮಗೆ ಬಹಳವಾಗಿ ಅಪಚಾರಗಳನ್ನು ಮಾಡಿದನೋ ಅವನು ನನಗೂ ಮತ್ತು ಜಗತ್ತಿಗೂ ವಧ್ಯನಾಗಿದ್ದಾನೆ.

ವಿಪ್ರಲುಪ್ತಂ ಚ ವೋ ರಾಜ್ಯಂ ನೃಶಂಸೇನ ದುರಾತ್ಮನಾ ।
ನ ಚೋಪಶಾಮ್ಯತೇ ಪಾಪಃ ಶ್ರಿಯಂ ದೃಷ್ಟ್ವಾ ಯುಧಿಷ್ಠಿರೇ ॥೧೩॥

ದುರಾತ್ಮನೂ ಮತ್ತು ಕ್ರೂರಿಯೂ ಆದ ಅವನು ನಿಮ್ಮ ರಾಜ್ಯವನ್ನು ಹಾಳುಮಾಡಿದನು. ಅವನು ಯುಧಿಷ್ಠಿರನ ಸಂಪತ್ತನ್ನು ನೋಡಿ ಸಹಿಸಲಿಲ್ಲ.

ಅಸಕೃಚ್ಚಾಪ್ಯಹಂ ತೇನ ತ್ವತ್ಕೃತೇ ಪಾರ್ಥ ಭೇದಿತಃ ।
ನ ಮಯಾ ತದ್ ಗೃಹೀತಂ ಚ ಪಾಪಂ ತಸ್ಯ ಚಿಕೀರ್ಷಿತಮ್ ॥೧೪॥

ನನ್ನನ್ನು ನಿನ್ನಿಂದ ಬೇರೆ ಮಾಡಲು ಅವನು ಅನೇಕ ಬಾರಿ ಭೇದೋಪಾಯಗಳನ್ನು ಮಾಡಿದನು. ಆದರೆ ಎಲೈ ಪಾರ್ಥನೇ, ನಾನು ಆ ಯಾವ ಪಾಪವಿಷಯಗಳನ್ನೂ ಸ್ವೀಕರಿಸಲಿಲ್ಲ ಮತ್ತು ಅವನ ಇಷ್ಟದಂತೆ ನಡೆದುಕೊಳ್ಳಲಿಲ್ಲ.

ಜಾನಾಸಿ ಹಿ ಮಹಾಬಾಹೋ ತ್ವಮಪ್ಯಸ್ಯ ಪರಂ ಮಹತ್ ।
ಪ್ರಿಯಂ ಚಿಕೀರ್ಷಮಾಣಂ ಚ ಧರ್ಮರಾಜಸ್ಯ ಮಾಮಪಿ ॥೧೫॥

ಎಲೈ ಮಹಾಬಾಹುವೇ, ನಾನು ಈ ಧರ್ಮರಾಜನಿಗೆ ಎಷ್ಟು ದೊಡ್ಡ ಪ್ರಿಯವನ್ನು ಮಾಡಲು ಬಯಸುತ್ತೇನೆ ಎಂಬುದನ್ನು ನೀನು ತಿಳಿದಿದ್ದೀಯೆ.

ಸ ಜಾನನ್ನಪಿ ಚಾತ್ಮಾನಂ ಮಮ ಚೈವ ಪರಂ ಮತಮ್ ।
ಅಜಾನನ್ನಿವ ಮಾಂ ಕಸ್ಮಾದ್ ಅರ್ಜುನಾದ್ಯಾಭಿಶಂಕಸೇ ॥೧೬॥

ಎಲೈ ಅರ್ಜುನನೇ, ನೀನು ನಿನ್ನನ್ನು ಸರಿಯಾಗಿ ತಿಳಿದಿದ್ದರೂ ಮತ್ತು ನನ್ನ ಶ್ರೇಷ್ಠವಾದ ಅಭಿಪ್ರಾಯವನ್ನು ತಿಳಿದಿದ್ದರೂ ಏನೂ ತಿಳಿಯದವನಂತೆ ಈ ದಿನ ಏಕೆ ನನ್ನನ್ನು ಶಂಕಿಸುತ್ತಿದ್ದೀಯೆ?

ಯಚ್ಚಾಪಿ ಪರಮಂ ದಿವ್ಯಂ ತದಪ್ಯವಗತಂ ಮಯಾ ।
ವಿಧಾನವಿಹಿತಂ ಪಾರ್ಥ ಕಥಂ ಶರ್ಮ ಭವೇತ್ ಪರೈಃ ॥೧೭॥

ಎಲೈ ಪಾರ್ಥನೇ, ಈ ವಿಷಯದಲ್ಲಿ ಶ್ರೇಷ್ಠವಾದ ದೇವಸಂಕಲ್ಪವೇನಿದೆಯೋ ಅದನ್ನೂ ನಾನು ತಿಳಿದಿದ್ದೇನೆ. ಅವರ ಜೊತೆಯಲ್ಲಿ ಸಂಧಿಯು ಹೇಗೆ ಉಂಟಾದೀತು?

ಯತ್ತು ವಾಚಾ ಮಯಾ ಶಕ್ಯಂ ಕರ್ಮಣಾ ವಾऽಪಿ ಪಾಂಡವ ।
ಕರಿಷ್ಯೇ ತದಹಂ ಪಾರ್ಥ ನ ತ್ವಾಶಂಸೇ ಶಮಂ ಪರೈಃ ॥೧೮॥

ಎಲೈ ಪಾಂಡವನೇ, ಮಾತನಾಡಿ ಏನನ್ನು ಮಾಡಬಹುದೋ, ಕ್ರಿಯೆಯನ್ನು ಮಾಡಿ ಏನನ್ನು ಮಾಡಬಹುದೋ ಅದನ್ನು ನಾನು ಮಾಡುವೆನು. ಆದರೆ ಎಲೈ ಪಾರ್ಥನೇ, ನಾನು ಅವರ ಜೊತೆಯಲ್ಲಿ ಸಂಧಿಯನ್ನು ಮಾತ್ರ ಬಯಸುವುದಿಲ್ಲ.

ಕಥಂ ಗೋಗ್ರಹಣೇ ಬ್ರೂಯಾದಿಚ್ಛನ್ ಶರ್ಮ ತಥಾ ಚಿರಮ್ ।
ಯಾಚ್ಯಮಾನೋಽಪಿ ಭೀಷ್ಮೇಣ ಸಂವತ್ಸರಗತೇಽಹನಿ ॥೧೯॥

ಅವನು ಸುಖವನ್ನು ಬಯಸುವವನಾದರೆ ಗೋಗ್ರಹಣಕಾಲದಲ್ಲಿ ಭೀಷ್ಮರು ಬೇಡವೆಂದು ಬೇಡುತ್ತಿದ್ದರೂ ಸಹ ಅಜ್ಞಾತವಾಸದ ಸಂವತ್ಸರವು ಕಳೆದಿದ್ದರೂ ಸಹ ಕಳೆದಿಲ್ಲವೆಂಬಂತಹ ಮಾತುಗಳನ್ನು ಹೇಗೆ ಆಡುತ್ತಿದ್ದನು?

ತಥೈವ ತೇ ಪರಾಭೂತಾ ಯಥಾ ಸಂಕಲ್ಪಿತಾಸ್ತ್ವಯಾ ।
ಲವಶಃ ಕಣಶಶ್ಚೈವ ನ ಸಂತುಷ್ಟಃ ಸುಯೋಧನಃ ॥೨೦॥

ನಿನ್ನ ಸಂಕಲ್ಪದಂತೆ ಆಗ ಅವರೆಲ್ಲರೂ ಸಹ ನಿನ್ನಿಂದ ಪರಾಭವವನ್ನು ಹೊಂದಿದರು. ಸುಯೋಧನನಿಗೆ ಮಾತ್ರ ಅದರಿಂದ ಲವಲೇಶವೂ ತೃಪ್ತಿಯಿಲ್ಲ.

ಸರ್ವಥಾ ತು ಮಯಾ ಕಾರ್ಯಂ ಧರ್ಮರಾಜಸ್ಯ ಶಾಸನಮ್ ।
ವಿಭಾವ್ಯಂ ತಸ್ಯ ಭೂಯಶ್ಚ ಕರ್ಮ ಪಾಪಂ ದುರಾತ್ಮನಃ ॥೨೧॥

ನಾನು ಸರ್ವರೀತಿಯಿಂದಲೂ ಧರ್ಮರಾಜನ ಶಾಸನವನ್ನು ಅನುಸರಿಸಲೇಬೇಕು ಮತ್ತು ಆ ದುರಾತ್ಮನಾದ ದುರ್ಯೋಧನನು ಮಾಡುವ ಪಾಪಕರ್ಮವನ್ನು ಇನ್ನೂ ನೋಡಬೇಕಾಗಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಅಷ್ಟಸಪ್ತತಿತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ನವಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಎಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ಉಕ್ತೋ ಮಾನುಷಯಾ ಬುದ್ಧ್ಯಾ ನಕುಲೇನ ಸುನೀತಿವತ್ ।
ಶೌರ್ಯಪ್ರಕಾಶನಾಯೈವ ಯುದ್ಧಂ ಯೋಜಯತಾಂ ಭವಾನ್ ।
ಇತ್ಯುಕ್ತಃ ಸಹದೇವೇನ ಯುಯುಧಾನೇನ ಚಾಚ್ಯುತಃ ॥೫೮॥

ನಕುಲ, ಕೃಷ್ಣನಿಗೆ ಅವನೊಬ್ಬ ಮನುಷ್ಯನೆಂಬ ಭಾವನೆಯಿಂದ ಒಬ್ಬ ನೀತಿಜ್ಞನಿಗೆ ಹೇಳುವಂತೆ ಉಪದೇಶದ ಮಾತನ್ನು ಹೇಳಿದ. ಸಹದೇವ ತನ್ನ ಶೌರ್ಯವನ್ನು ಮೆರೆಸುವುದಕ್ಕಾಗಿ ಯುದ್ಧವನ್ನು ಬಯಸಿ ನೀನು ಯುದ್ಧ ನಡೆಯುವಂತೆಯೇ ಮಾಡು ಎಂದ. ಸಾತ್ಯಕಿಯೂ ಹಾಗೇ ಹೇಳಿದ.

ದಸ್ಯೂನಾಂ ನಿಗ್ರಹೋ ಧರ್ಮಃ ಕ್ಷತ್ರಿಯಾಣಾಂ ಯತಃ ಪರಃ ।
ಅತೋ ನ ಧಾರ್ತರಾಷ್ಟ್ರೈರ್ನಃ ಸಂಧಿಃ ಸ್ಯಾದಿತಿ ಪಾರ್ಷತೀ ॥೫೯॥

ಜಗಾದ ಕೃಷ್ಣಂ ಸೋಽಪ್ಯೇನಾಮೋಮಿತ್ಯುಕ್ತ್ವಾ ವಿನಿರ್ಯಯೌ ॥೬೦॥

ದ್ರೌಪದಿ ಕೃಷ್ಣನಿಗೆ ಹೇಳಿದಳು, 'ದರೋಡೆಕೋರರನ್ನು ನಿಗ್ರಹಿಸುವುದು ಕ್ಷತ್ರಿಯರಿಗೆ ಪರಮಧರ್ಮ. ಅದರಿಂದ ಕೌರವರೊಡನೆ ಸಂಧಿ ಬೇಡ' ಕೃಷ್ಣ ಅವಳಿಗೆ ಹಾಗೇ ಆಗಲಿ ಎಂದು ಹೇಳಿ ಹೊರಟುಹೋದ.

★ ★ ★ ★ ★

ಎಪ್ಪತ್ತೊಂಬತ್ತನೆಯ ಅಧ್ಯಾಯ

ನಕುಲ-ಸಹದೇವ ಮತ್ತು ಸಾತ್ಯಕಿಯರಿಂದ ಸಂಧಿಯ
ವಿಷಯದಲ್ಲಿ ತಮ್ಮ ತಮ್ಮ ಅಭಿಪ್ರಾಯಗಳ ಕಥನ.

ನಕುಲಃ

ಉಕ್ತಂ ಬಹುವಿಧಂ ವಾಕ್ಯಂ ಧರ್ಮರಾಜೇನ ಮಾಧವ ।
ಧರ್ಮಜ್ಞೇನ ವದಾನ್ಯೇನ ಧರ್ಮಯುಕ್ತಂ ಚ ತತ್ತ್ವತಃ ॥೧॥

ನಕುಲ– ಮಾಧವನೇ, ಧರ್ಮಜ್ಞನೂ, ಉದಾರಿಯೂ ಆದ ಧರ್ಮರಾಜನು ಧರ್ಮಯುಕ್ತವಾದ, ಸತ್ಯವಾದ, ತಾತ್ವಿಕವಾದ ಮಾತುಗಳನ್ನು ಆಡಿದ್ದಾನೆ.

ಮತಮಾಜ್ಞಾಯ ರಾಜ್ಞಶ್ಚ ಭೀಮಸೇನೇನ ಮಾಧವ ।
ಸಂಶಮಂ ಬಾಹುವೀರ್ಯಂ ಚ ಖ್ಯಾಪಿತಂ ಮಾಧವಾತ್ಮನಃ ॥೨॥

ಎಲೈ ಮಾಧವನೇ, ರಾಜನಾದ ಯುಧಿಷ್ಠಿರನ ಅಭಿಪ್ರಾಯವನ್ನು ತಿಳಿದು ಭೀಮಸೇನನು ತನ್ನ ಸಂಧಿಯ ಇಚ್ಛೆಯನ್ನು ಮತ್ತು ಬಾಹುಪರಾಕ್ರಮವನ್ನು ಸ್ಪಷ್ಟಪಡಿಸಿದ್ದಾನೆ.

ತಥೈವ ಫಲ್ಗುನೇನಾಪಿ ಯದುಕ್ತಂ ತತ್ ತ್ವಯಾ ಶ್ರುತಮ್ ।
ಆತ್ಮನಶ್ಚ ಮತಂ ವೀರ ಕಥಿತಂ ಭವತಾऽಸಕೃತ್ ॥೩॥

ಅದರಂತೆಯೇ, ಅರ್ಜುನನೂ ಏನು ಹೇಳಿದನೋ ಅದನ್ನೂ ನೀನು ಕೇಳಿದ್ದೀಯೆ ಮತ್ತು ಎಲೈ ವೀರನೇ, ನಿನ್ನ ಅಭಿಪ್ರಾಯವನ್ನೂ ಸಹ ಅನೇಕಬಾರಿ ಹೇಳಿದ್ದೀಯೆ.

ಸರ್ವಮೇತದತಿಕ್ರಮ್ಯ ಶ್ರುತ್ವಾ ಪರಮತಂ ಭವಾನ್ ।
ಯತ್ ಪ್ರಾಪ್ತಕಾಲಂ ಮನ್ಯೇಥಾಃ ತತ್ ಕುರ್ಯಾಃ ಪುರುಷೋತ್ತಮ ॥

ಎಲೈ ಪುರುಷೋತ್ತಮನೇ, ಇವೆಲ್ಲವನ್ನೂ ಮೀರಿ ನೀನು ಶತ್ರುಗಳ ಅಭಿಪ್ರಾಯದ ದೃಷ್ಟಿಯಲ್ಲಿ ಯಾವುದನ್ನು ಯೋಗ್ಯವೆಂದು ಭಾವಿಸುತ್ತೀಯೋ ಅದನ್ನೇ ಮಾಡುವವನಾಗು.

ತಸ್ಮಿಂಸ್ತಸ್ಮಿನ್ ನಿಮಿತ್ತೇ ಹಿ ಮತಂ ಭವತಿ ಕೇಶವ ।
ಪ್ರಾಪ್ತಕಾಲಂ ಮನುಷ್ಯೇಣ ಸ್ವಯಂ ಕಾರ್ಯಮರಿಂದಮ ॥೫॥

ಎಲೈ ಕೇಶವನೇ, ಎಲೈ ಅರಿಂದಮನೇ, ಆಯಾ ನಿಮಿತ್ತಗಳು ಉಂಟಾದಾಗ ಆಯಾ ಕಾಲದಲ್ಲಿ ಮನುಷ್ಯನು ಸ್ವತಃ ನಿರ್ಧಾರವನ್ನು ತೆಗೆದುಕೊಂಡು ಯೋಗ್ಯವಾದ ಕಾರ್ಯವನ್ನು ಮಾಡಬೇಕಾಗುತ್ತದೆ.

ಅಥವಾ ಚಿಂತಿತೋ ಹ್ಯರ್ಥಃ ಪುನರ್ಭವತಿ ಸೋऽನ್ಯಥಾ ।
ಅನಿತ್ಯಬುದ್ಧಯೋ ಲೋಕೇ ನರಾಃ ಪುರುಷಸತ್ತಮ ॥೬॥

ಒಂದು ರೀತಿಯಲ್ಲಿ ಯೋಚಿಸಿದ್ದ ಕಾರ್ಯವು ಇನ್ನೊಂದು ರೀತಿಯಾಗುತ್ತದೆ. ಎಲೈ ಪುರುಷೋತ್ತಮನೇ, ಲೋಕದಲ್ಲಿ ಮನುಷ್ಯರ ಬುದ್ಧಿಯು ಅನಿತ್ಯವಾದುದು.

ಅನ್ಯಥಾಬುದ್ಧಯೋ ಹ್ಯಾಸನ್ನಸ್ಮಾಸು ವನವಾಸಿಷು ।
ಅದೃಶ್ಯೇಷ್ವನ್ಯಥಾ ಕೃಷ್ಣ ದೃಶ್ಯೇಷು ಪುನರನ್ಯಥಾ ॥೭॥

ಎಲೈ ಕೃಷ್ಣನೇ, ನಾವು ವನವಾಸ ಮಾಡುತ್ತಾ ಅವರ ಕಣ್ಣೆದುರಿಗೆ ಇಲ್ಲದಿದ್ದಾಗ ಅವರ ಬುದ್ಧಿಯು ಬೇರೆಯದಾಗಿದ್ದಿತು. ಈಗ ನಾವು ಅವರ ದೃಷ್ಟಿಗೆ ಬಿದ್ದಮೇಲೆ ಬೇರೆಯೇ ಆಗಿದೆ.

ಅಸ್ಮಾಕಮಪಿ ವಾರ್ಷ್ಣೇಯ ವನೇ ವಿಚರತಾಂ ತದಾ ।
ನ ತಥಾ ಪ್ರಣಯೋ ರಾಜ್ಯೇ ಯಥಾ ಸಂಪ್ರತಿ ವರ್ತತೇ ॥೮॥

ಎಲೈ ವಾರ್ಷ್ಣೇಯನೇ, ನಮಗೂ ಸಹ ಕಾಡಿನಲ್ಲಿ ಸಂಚರಿಸುವಾಗ ಇಲ್ಲದಿದ್ದ ರಾಜ್ಯದ ಆಸೆಯು ನಗರಕ್ಕೆ ಬಂದಮೇಲೆ ಈಗ ಉಂಟಾಗಿದೆ.

ನಿವೃತ್ತವನವಾಸಾನ್ ನಃ ಶ್ರುತ್ವಾ ವೀರ ಸಮಾಗತಾಃ ।
ಅಕ್ಷೋಹಿಣ್ಯೋ ಹಿ ಸಪ್ತೇಮಾಃ ತ್ವತ್ಪ್ರಸಾದಾಜ್ಜನಾರ್ದನ ॥೯॥

ಎಲೈ ವೀರನೇ, ಎಲೈ ಜನಾರ್ದನನೇ, ನಾವು ವನವಾಸ ಮತ್ತು ಅಜ್ಞಾತವಾಸಗಳನ್ನು ಮುಗಿಸಿದ್ದೇವೆಂದು ತಿಳಿದು ನಿನ್ನ ಅನುಗ್ರಹದಿಂದ ಏಳು ಅಕ್ಷೋಹಿಣಿ ಸೈನ್ಯಗಳು ನಮ್ಮ ಜೊತೆಗೆ ಬಂದು ಸೇರಿವೆ.

ಇಮಾನ್ ಹಿ ಪುರುಷವ್ಯಾಘ್ರಾನ್ ಅಚಿಂತ್ಯಬಲಪೌರುಷಾನ್ ।
ಆತ್ತಶಸ್ತ್ರಾನ್ ರಣೇ ದೃಷ್ಟ್ವಾ ನ ವ್ಯಥೇದಿಹ ಕಃ ಪುಮಾನ್ ॥೧೦॥

ಕೈಯಲ್ಲಿ ಶಸ್ತ್ರವನ್ನು ಹಿಡಿದ, ಅಚಿಂತ್ಯಪರಾಕ್ರಮಗಳನ್ನುಳ್ಳ ಈ ಪುರುಷವ್ಯಾಘ್ರರನ್ನು ನೋಡಿ ಯುದ್ಧದಲ್ಲಿ ಯಾವ ಮನುಷ್ಯನಿಗೆ ದುಃಖವುಂಟಾಗುವುದಿಲ್ಲ?

ಸ ಭವಾನ್ ಕುರುಮಧ್ಯೇ ತಂ ಸಾಂತ್ವಪೂರ್ವಂ ಭಯೋತ್ತರಮ್ ।
ಬ್ರೂಯಾದ್ ವಾಕ್ಯಂ ಯಥಾऽಸ್ಮತ್ತೋ ನ ವ್ಯಥೇತ ಸುಯೋಧನಃ ॥

ಆದ್ದರಿಂದ ನೀನು ಕೌರವರ ಮಧ್ಯದಲ್ಲಿ ಸುಯೋಧನನ್ನು ಕುರಿತು ಮೊದಲು ಮಧುರವಾಗಿ, ಕೊನೆಯಲ್ಲಿ ಭಯಜನಕವಾಗಿ ಮಾತನಾಡುವವನಾಗು. ಅವನು ನಮ್ಮಿಂದ ವ್ಯಥೆಪಡದಂತೆ ಮಾತನಾಡು.

ಯುಧಿಷ್ಠಿರಂ ಭೀಮಸೇನಂ ಬೀಭತ್ಸುಂ ಚಾಪರಾಜಿತಮ್ ।
ಸಹದೇವಂ ಚ ಮಾಂ ಚೈವ ತ್ವಾಂ ಚ ರಾಮಂ ಚ ಕೇಶವ ॥೧೨॥

ಸಾತ್ಯಕಿಂ ಚ ಮಹಾವೀರ್ಯಂ ವಿರಾಟಂ ಚ ಸಹಾತ್ಮಜಮ್ ।
ದ್ರುಪದಂ ಚ ಸಹಾಮಾತ್ಯಂ ಧೃಷ್ಟದ್ಯುಮ್ನಂ ಚ ಪಾರ್ಷತಮ್ ॥೧೩॥

ಕಾಶಿರಾಜಂ ಚ ವಿಕ್ರಾಂತಂ ಧೃಷ್ಟಕೇತುಂ ಚ ಚೇದಿಪಮ್ ।
ಮಾಂಸಶೋಣಿತಭೃನ್ಮರ್ತ್ಯಃ ಪ್ರತಿಯುಧ್ಯೇತ ಕೋ ಯುಧಿ ॥೧೪॥

ಯುಧಿಷ್ಠಿರ, ಭೀಮಸೇನ, ಅಪರಾಜಿತನಾದ ಅರ್ಜುನ, ಸಹದೇವ, ನಕುಲನಾದ ನಾನು, ನೀನು, ಬಲರಾಮ, ಮಹಾಪರಾಕ್ರಮಿಯಾದ ಸಾತ್ಯಕಿ, ವಿರಾಟ ಮತ್ತು ಅವನ ಮಕ್ಕಳು, ದ್ರುಪದ ಮತ್ತು ಅವನ ಮಂತ್ರಿಗಳು, ದ್ರುಪದನ ಪುತ್ರನಾದ ಧೃಷ್ಟದ್ಯುಮ್ನ, ಪರಾಕ್ರಮಶಾಲಿಯಾದ ಕಾಶಿರಾಜ, ಚೇದಿರಾಜನಾದ ಧೃಷ್ಟಕೇತು ಇಷ್ಟು ಪುರುಷರ ಜೊತೆಯಲ್ಲಿ ಮಾಂಸರಕ್ತಸಹಿತನಾದ ಯಾವ ಪುರುಷನು ಅವರ ಜೊತೆಯಾಗಿ ಯುದ್ಧವನ್ನು ಮಾಡುತ್ತಾನೆ?

ಸ ಭವಾನ್ ಗಮನಾದೇವ ಸಾಧಯಿಷ್ಯತ್ಯಸಂಶಯಮ್ ।
ಇಷ್ಟಮರ್ಥಂ ಮಹಾಬಾಹೋ ಧರ್ಮರಾಜಸ್ಯ ಕೇವಲಮ್ ॥೧೫॥

ಎಲೈ ಮಹಾಬಾಹುವೇ, ನೀನು ಅಲ್ಲಿಗೆ ಹೋಗುವ ಮಾತ್ರದಿಂದಲೇ ಯುಧಿಷ್ಠಿರನಿಗೆ ಇಷ್ಟವಾದ ಅರ್ಥವನ್ನು ಸಾಧಿಸುವಿ.

ವಿದುರಶ್ಚೈವ ಭೀಷ್ಮಶ್ಚ ದ್ರೋಣಶ್ಚ ಸಹಬಾಹ್ಲಿಕಃ ।
ಶ್ರೇಯಃ ಸಮರ್ಥಾ ವಿಜ್ಞಾತುಮುಚ್ಯಮಾನಾಸ್ತ್ವಯಾऽನಘ ॥೧೬॥

ಎಲೈ ಅನಘನೇ, ನೀನು ಹೇಳುವ ಶ್ರೇಯಸ್ಕರವಾದ ಮಾತುಗಳನ್ನು ತಿಳಿದುಕೊಳ್ಳಲು ವಿದುರ, ಭೀಷ್ಮ, ದ್ರೋಣ ಮತ್ತು ಬಾಹ್ಲಿಕರು ಸಮರ್ಥರಾಗಿದ್ದಾರೆ.

ತೇ ಚೈನಮನುನೇಷ್ಯಂತಿ ಧೃತರಾಷ್ಟ್ರಂ ಜನಾಧಿಪಮ್ ।
ತಂ ಚ ಪಾಪಸಮಾಚಾರಂ ಸಹಾಮಾತ್ಯಂ ಸುಯೋಧನಮ್ ॥೧೭॥

ಪಾಪಾಚಾರವುಳ್ಳ, ಮಂತ್ರಿಗಳಿಂದೊಡಗೂಡಿದ, ಆ ದುರ್ಯೋಧನನನ್ನೂ ಮತ್ತು ರಾಜನಾದ ಧೃತರಾಷ್ಟ್ರನನ್ನೂ ಅವರು ಸಮಾಧಾನಪಡಿಸುವರು.

ಶ್ರೋತಾ ಚಾರ್ಥಸ್ಯ ವಿದುರಃ ತ್ವಂ ಚ ವಕ್ತಾ ಜನಾರ್ದನ ।
ಕಿಮಿವಾರ್ಥಂ ನಿವರ್ತೇಥಾಃ ಸ್ಥಾಪಯೇಥಾ ನ ವರ್ತ್ಮನಿ ॥೧೮॥

ಎಲೈ ಜನಾರ್ದನನೇ, ಮಾತನಾಡುವವನು ನೀನು ಮತ್ತು ನಿನ್ನ ಮಾತುಗಳನ್ನು ಕೇಳುವವನು ವಿದುರ. ಹೀಗಿರುವಾಗ ಅವರ ಮನಸ್ಸಿನಲ್ಲಿರುವ ಯಾವ ವಿಷಯವನ್ನು ವಿಚಾರಿಸದೆ ಹಿಂದೆ ಬರುತ್ತೀಯೆ? ಯಾರನ್ನು ಸರಿಯಾದ ಮಾರ್ಗದಲ್ಲಿ ಸ್ಥಾಪಿಸುವುದಿಲ್ಲ?

ಸಹದೇವಃ

ಯದೇತತ್ ಕಥಿತಂ ರಾಜ್ಞಾ ಧರ್ಮ ಏಷ ಸನಾತನಃ ।
ಯಥಾ ಚ ಯುದ್ಧಮೇವ ಸ್ಯಾತ್ ತಥಾ ಕಾರ್ಯಮರಿಂದಮ ॥೧೯॥

ಸಹದೇವ– ರಾಜನಾದ ಯುಧಿಷ್ಠಿರನು ಏನು ಹೇಳುವನೋ ಅವೆಲ್ಲವೂ ಧರ್ಮವೇ. ಆದ್ದರಿಂದ ಅರಿಂದಮನೇ, ಯುದ್ಧವೇ ಉಂಟಾಗುವಂತೆ ನೀನು ಎಲ್ಲವನ್ನು ನಿರ್ವಹಿಸು.

ಯದಿ ಪ್ರಶಮಮಿಚ್ಛೇಯುಃ ವಿನಾಶೇ ಪಾಂಡವೈಃ ಸಹ ।
ತಥಾಪಿ ಯುದ್ಧಂ ದಾಶಾರ್ಹ ಯೋಜಯೇಥಾಃ ಸಹೈವ ತೈಃ ॥೨೦॥

ಎಲೈ ದಾಶಾರ್ಹನೇ, ಅವರು ಪಾಂಡವರ ಜೊತೆಯಲ್ಲಿ ಯುದ್ಧವು ಪ್ರಾಪ್ತವಾದಾಗ ಸಂಧಿಯನ್ನೇ ಬಯಸಿದರೂ ಸಹ ಎಲೈ ದಾಶಾರ್ಹನೇ, ಅವರ ಜೊತೆಯಲ್ಲಿ ಯುದ್ಧವನ್ನೇ ಯೋಜಿಸುವವನಾಗು.

ಕಥಂ ನು ದೃಷ್ಟ್ವಾ ಪಾಂಚಾಲೀಂ ತಥಾ ಕ್ಲಿಷ್ಟಾಂ ಸಭಾಗತಾಮ್ ।
ಅವಧೇನ ಪ್ರಶಾಮ್ಯೇತ ಮಮ ಮನ್ಯುಃ ಸುಯೋಧನೇ ॥೨೧॥

ಸಭೆಯಲ್ಲಿ ಪಾಂಚಾಲಿಯು ಅಷ್ಟು ಕ್ಲೇಶವನ್ನು ಅನುಭವಿಸಿದ್ದುದನ್ನು ನೋಡಿದ ನನ್ನ ಕೋಪವು ಸುಯೋಧನನ ವಧೆಯನ್ನು ಮಾಡದೆ ಹೇಗೆ ಶಾಂತವಾದೀತು?

ಯದಿ ಭೀಮಾರ್ಜುನೌ ಕೃಷ್ಣ ಧರ್ಮರಾಜಶ್ಚ ಧಾರ್ಮಿಕಃ ।
ಧರ್ಮಮುತ್ಸೃಜ್ಯ ತೇನಾಹಂ ಯೋದ್ಧುಮಿಚ್ಛಾಮಿ ಸಂಯುಗೇ ॥೨೨॥

ಎಲೈ ಕೃಷ್ಣನೇ, ಭೀಮಾರ್ಜುನರೂ ಮತ್ತು ಧರ್ಮರಾಜನು ಧಾರ್ಮಿಕರಾಗಿ ಇದ್ದರೆ ಇರಲಿ. ನಾನು ಮಾತ್ರ ಧರ್ಮವನ್ನು ಬಿಟ್ಟು ಅವರ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸುತ್ತೇನೆ.

ಕಾಶಿರಾಜಂ ಚ ವಿಕ್ರಾಂತಂ ಧೃಷ್ಟಕೇತುಂ ಚ ಚೇದಿಪಮ್ ।
ಮಾಂಸಶೋಣಿತಭುನ್ಮರ್ತ್ಯಃ ಪ್ರತಿಯುಧ್ಯೇತ ಕೋ ಯುಧಿ ॥೧೪॥

ಯುಧಿಷ್ಠಿರ, ಭೀಮಸೇನ, ಅಪರಾಜಿತನಾದ ಅರ್ಜುನ, ಸಹದೇವ, ನಕುಲನಾದ ನಾನು, ನೀನು, ಬಲರಾಮ, ಮಹಾಪರಾಕ್ರಮಿಯಾದ ಸಾತ್ಯಕಿ, ವಿರಾಟ ಮತ್ತು ಅವನ ಮಕ್ಕಳು, ದ್ರುಪದ ಮತ್ತು ಅವನ ಮಂತ್ರಿಗಳು, ದ್ರುಪದನ ಪುತ್ರನಾದ ಧೃಷ್ಟದ್ಯುಮ್ನ, ಪರಾಕ್ರಮಶಾಲಿಯಾದ ಕಾಶಿರಾಜ, ಚೇದಿರಾಜನಾದ ಧೃಷ್ಟಕೇತು ಇಷ್ಟು ಪುರುಷರ ಜೊತೆಯಲ್ಲಿ ಮಾಂಸರಕ್ತಸಹಿತನಾದ ಯಾವ ಪುರುಷನು ಅವರ ಜೊತೆಯಾಗಿ ಯುದ್ಧವನ್ನು ಮಾಡುತ್ತಾನೆ?

ಸ ಭವಾನ್ ಗಮನಾದೇವ ಸಾಧಯಿಷ್ಯತ್ಯಸಂಶಯಮ್ ।
ಇಷ್ಟಮರ್ಥಂ ಮಹಾಬಾಹೋ ಧರ್ಮರಾಜಸ್ಯ ಕೇವಲಮ್ ॥೧೫॥

ಎಲೈ ಮಹಾಬಾಹುವೇ, ನೀನು ಅಲ್ಲಿಗೆ ಹೋಗುವ ಮಾತ್ರದಿಂದಲೇ ಯುಧಿಷ್ಠಿರನಿಗೆ ಇಷ್ಟವಾದ ಅರ್ಥವನ್ನು ಸಾಧಿಸುವಿ.

ವಿದುರಶ್ಚೈವ ಭೀಷ್ಮಶ್ಚ ದ್ರೋಣಶ್ಚ ಸಹಬಾಹ್ಲಿಕಃ ।
ಶ್ರೇಯಃ ಸಮರ್ಥಾ ವಿಜ್ಞಾತುಮುಚ್ಯಮಾನಾಸ್ತ್ವಯಾऽನಘ ॥೧೬॥

ಎಲೈ ಅನಘನೇ, ನೀನು ಹೇಳುವ ಶ್ರೇಯಸ್ಕರವಾದ ಮಾತುಗಳನ್ನು ತಿಳಿದುಕೊಳ್ಳಲು ವಿದುರ, ಭೀಷ್ಮ, ದ್ರೋಣ ಮತ್ತು ಬಾಹ್ಲಿಕರು ಸಮರ್ಥರಾಗಿದ್ದಾರೆ.

ತೇ ಚೈನಮನುನೇಷ್ಯಂತಿ ಧೃತರಾಷ್ಟ್ರಂ ಜನಾಧಿಪಮ್ ।
ತಂ ಚ ಪಾಪಸಮಾಚಾರಂ ಸಹಾಮಾತ್ಯಂ ಸುಯೋಧನಮ್ ॥೧೭॥

ಪಾಪಾಚಾರವುಳ್ಳ, ಮಂತ್ರಿಗಳಿಂದೊಡಗೂಡಿದ, ಆ ದುರ್ಯೋಧನನನ್ನೂ ಮತ್ತು ರಾಜನಾದ ಧೃತರಾಷ್ಟ್ರನನ್ನೂ ಅವರು ಸಮಾಧಾನಪಡಿಸುವರು.

ಶ್ರೋತಾ ಚಾರ್ಥಸ್ಯ ವಿದುರಃ ತ್ವಂ ಚ ವಕ್ತಾ ಜನಾರ್ದನ ।
ಕಿಮಿವಾರ್ಥಂ ನಿವರ್ತೇಥಾಃ ಸ್ಥಾಪಯೇಥಾ ನ ವರ್ತ್ಮನಿ ॥೧೮॥

ಎಲೈ ಜನಾರ್ದನನೇ, ಮಾತನಾಡುವವನು ನೀನು ಮತ್ತು ನಿನ್ನ ಮಾತುಗಳನ್ನು ಕೇಳುವವನು ವಿದುರ. ಹೀಗಿರುವಾಗ ಅವರ ಮನಸ್ಸಿನಲ್ಲಿರುವ ಯಾವ ವಿಷಯವನ್ನು ವಿಚಾರಿಸದೆ ಹಿಂದೆ ಬರುತ್ತೀಯೆ? ಯಾರನ್ನು ಸರಿಯಾದ ಮಾರ್ಗದಲ್ಲಿ ಸ್ಥಾಪಿಸುವುದಿಲ್ಲ?

ಸಹದೇವಃ

ಯದೇತತ್ ಕಥಿತಂ ರಾಜ್ಞಾ ಧರ್ಮ ಏಷ ಸನಾತನಃ ।
ಯಥಾ ಚ ಯುದ್ಧಮೇವ ಸ್ಯಾತ್ ತಥಾ ಕಾರ್ಯಮರಿಂದಮ ॥೧೯॥

ಸಹದೇವ– ರಾಜನಾದ ಯುಧಿಷ್ಠಿರನು ಏನು ಹೇಳುವನೋ ಅವೆಲ್ಲವೂ ಧರ್ಮವೇ. ಆದ್ದರಿಂದ ಅರಿಂದಮನೇ, ಯುದ್ಧವೇ ಉಂಟಾಗುವಂತೆ ನೀನು ಎಲ್ಲವನ್ನು ನಿರ್ವಹಿಸು.

ಯದಿ ಪ್ರಶಮಮಿಚ್ಛೇಯುಃ ವಿನಾಶೇ ಪಾಂಡವೈಃ ಸಹ ।
ತಥಾಪಿ ಯುದ್ಧಂ ದಾಶಾರ್ಹ ಯೋಜಯೇಥಾಃ ಸಹೈವ ತೈಃ ॥೨೦॥

ಎಲೈ ದಾಶಾರ್ಹನೇ, ಅವರು ಪಾಂಡವರ ಜೊತೆಯಲ್ಲಿ ಯುದ್ಧವು ಪ್ರಾಪ್ತವಾದಾಗ ಸಂಧಿಯನ್ನೇ ಬಯಸಿದರೂ ಸಹ ಎಲೈ ದಾಶಾರ್ಹನೇ, ಅವರ ಜೊತೆಯಲ್ಲಿ ಯುದ್ಧವನ್ನೇ ಯೋಜಿಸುವವನಾಗು.

ಕಥಂ ನು ದೃಷ್ಟ್ವಾ ಪಾಂಚಾಲೀಂ ತಥಾ ಕ್ಲಿಷ್ಟಾಂ ಸಭಾಗತಾಮ್ ।
ಅವಧೇನ ಪ್ರಶಾಮ್ಯೇತ ಮಮ ಮನ್ಯುಃ ಸುಯೋಧನೇ ॥೨೧॥

ಸಭೆಯಲ್ಲಿ ಪಾಂಚಾಲಿಯು ಅಷ್ಟು ಕ್ಲೇಶವನ್ನು ಅನುಭವಿಸಿದ್ದುದನ್ನು ನೋಡಿದ ನನ್ನ ಕೋಪವು ಸುಯೋಧನನ ವಧೆಯನ್ನು ಮಾಡದೆ ಹೇಗೆ ಶಾಂತವಾದೀತು?

ಯದಿ ಭೀಮಾರ್ಜುನೌ ಕೃಷ್ಣ ಧರ್ಮರಾಜಶ್ಚ ಧಾರ್ಮಿಕಃ ।
ಧರ್ಮಮುತ್ಸೃಜ್ಯ ತೇನಾಹಂ ಯೋದ್ಧುಮಿಚ್ಛಾಮಿ ಸಂಯುಗೇ ॥೨೨॥

ಎಲೈ ಕೃಷ್ಣನೇ, ಭೀಮಾರ್ಜುನರೂ ಮತ್ತು ಧರ್ಮರಾಜನು ಧಾರ್ಮಿಕರಾಗಿ ಇದ್ದರೆ ಇರಲಿ. ನಾನು ಮಾತ್ರ ಧರ್ಮವನ್ನು ಬಿಟ್ಟು ಅವರ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸುತ್ತೇನೆ.

ಬ್ರೂಹಿ ಮದ್ವಚನಂ ಕೃಷ್ಣ ಸುಯೋಧನಮಧಾರ್ಮಿಕಮ್ ।
ಕೃಚ್ಛ್ರೇ ವನೇ ವಾ ವಸ್ತವ್ಯಂ ಪುರೇ ವಾ ನಾಗಸಾಹ್ವಯೇ ॥೨೩॥

ಎಲೈ ಕೃಷ್ಣನೇ, ಕಾಡಿನಲ್ಲಿ ಕಷ್ಟಕರವಾದ ವನವಾಸವನ್ನು ಮಾಡಬೇಕು ಅಥವಾ ಹಸ್ತಿನಪುರದಲ್ಲಿ ರಾಜ್ಯವಾಳಬೇಕು ಎಂದು ನನ್ನ ಮಾತನ್ನು ಅಧಾರ್ಮಿಕನಾದ ಆ ದುರ್ಯೋಧನನಿಗೆ ಹೇಳು.

ಸಾತ್ಯಕಿಃ

ಸತ್ಯಮಾಹ ಮಹಾಬಾಹೋ ಸಹದೇವೋ ಮಹಾಮತಿಃ ।
ದುರ್ಯೋಧನೇ ವಧೇ ಶಾಂತಿಸ್ತಸ್ಯ ಕೋಪಸ್ಯ ಮೇ ಭವೇತ್ ॥೨೪॥

ಸಾತ್ಯಕಿ– ಎಲೈ ಮಹಾಬಾಹುವೇ, ಮಹಾಮೇಧಾವಿಯಾದ ಸಹದೇವನು ಸತ್ಯವನ್ನೇ ನುಡಿದಿದ್ದಾನೆ. ನನಗೂ ಸಹ ಉಂಟಾಗಿರುವ ಕೋಪಕ್ಕೆ ದುರ್ಯೋಧನನ ವಧೆಯಿಂದಲೇ ಶಾಂತಿ ಉಂಟಾಗುತ್ತದೆ.

ನ ಜಾನಾಸಿ ಯಥಾ ದೃಷ್ಟ್ವಾ ಚೀರಾಜಿನಧರಾನ್ ವನೇ ।
ತವಾಪಿ ಮನ್ಯುರುದ್ಭೂತೋ ದುಃಖಿತಾನ್ ಪ್ರೇಕ್ಷ್ಯ ಪಾಂಡವಾನ್ ॥

ಕೃಷ್ಣನೇ, ಕಾಡಿನಲ್ಲಿ ನಾರುಮಡಿ, ಕೃಷ್ಣಾಜಿನವನ್ನು ಧರಿಸಿ, ದುಃಖಿತರಾದ ಪಾಂಡವರನ್ನು ನೋಡಿ ನಿನಗೆ ಎಷ್ಟು ಕೋಪವುಂಟಾಯಿತೆಂದು ನಿನಗೇ ತಿಳಿದಿಲ್ಲ.

ತಸ್ಮಾನ್ಮಾದ್ರೀಸುತಃ ಶೂರೋ ಯದಾಹ ಪುರುಷರ್ಷಭ ।
ವಚನಂ ಸರ್ವಯೋಧಾನಾಂ ತನ್ಮತಂ ಪುರುಷೋತ್ತಮ ॥೨೬॥

ಎಲೈ ಪುರುಷೋತ್ತಮನೇ, ಪುರುಷಶ್ರೇಷ್ಠನೇ, ಆದ್ದರಿಂದ ಮಾದ್ರೀಸುತನಾದ ಶೂರನಾದ ಸಹದೇವನು ಏನು ಹೇಳಿದನೋ ಅದು ಎಲ್ಲಾ ಸೈನಿಕರ ಅಭಿಪ್ರಾಯ.

ವೈಶಂಪಾಯನಃ

ಏವಂ ವದತಿ ವಾಕ್ಯಂ ತು ಯುಯುಧಾನೇ ಮಹಾಮತೌ ।
ಸುಭೀಮಃ ಸಿಂಹನಾದೋಽಭೂತ್ ಯೋಧಾನಾಂ ತತ್ರ ಸರ್ವಶಃ ॥

ವೈಶಂಪಾಯನ– ಮಹಾಮತಿಯಾದ ಯುಯುಧಾನನು (ಸಾತ್ಯಕಿ) ಹೀಗೆ ಮಾತನಾಡುತ್ತಿರಲು ಎಲ್ಲ ದಿಕ್ಕುಗಳಿಂದಲೂ ಯೋಧರ ಭಯಂಕರವಾದ ಸಿಂಹನಾದವು ಉಂಟಾಯಿತು.

ಸರ್ವೇ ಹಿ ಸರ್ವಶೋ ವೀರಾಃ ತದ್ವಚಃ ಪ್ರತ್ಯಪೂಜಯನ್ ।
ಸಾಧು ಸಾಧ್ವಿತಿ ಶೈನ್ಯೇಯಂ ಹರ್ಷಯಂತೋ ಯುಯುತ್ಸವಃ ॥೨೮॥

ಎಲ್ಲ ವೀರರೂ ಎಲ್ಲ ಕಡೆಗಳಿಂದಲೂ ಯುದ್ಧವನ್ನು ಮಾಡಲು ಬಯಸಿ ಸಾತ್ಯಕಿಯನ್ನು ಸಂತಸಪಡಿಸುತ್ತಾ ಸಾಧು ಸಾಧು ಎಂದು ಹೇಳುತ್ತಾ ಅವನ ಮಾತುಗಳನ್ನು ಗೌರವಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕೋನಾಶೀತಿತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ದಶಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಎಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತನೆಯ ಅಧ್ಯಾಯ

ದ್ರೌಪದಿಯನ್ನು ಸಮಾಧಾನ ಮಾಡಿ,
ಕೃಷ್ಣನಿಂದ ದುರ್ಯೋಧನಾದಿಗಳ ವಧೆಯ ಪ್ರತಿಜ್ಞೆ.

ವೈಶಂಪಾಯನಃ

ರಾಜ್ಞಸ್ತು ವಚನಂ ಶ್ರುತ್ವಾ ಧರ್ಮಾರ್ಥಸಹಿತಂ ಹಿತಮ್ ।
ಕೃಷ್ಣಾ ದಾಶಾರ್ಹಮಾಸೀನಮಬ್ರವೀಚ್ಛೋಕಕರ್ಶಿತಾ ॥೧॥

ವೈಶಂಪಾಯನ– ರಾಜನಾದ ಯುಧಿಷ್ಠಿರನ ಧರ್ಮಾರ್ಥಸಹಿತವಾದ ಮಾತುಗಳನ್ನು ಕೇಳಿ, ಶೋಕದಿಂದ ಬಳಲಿದ ದ್ರೌಪದಿಯು ಕುಳಿತಿದ್ದ ಕೃಷ್ಣನನ್ನು ಕುರಿತು ಮಾತನಾಡಿದಳು.

ಸುತಾ ದ್ರುಪದರಾಜಸ್ಯ ಸ್ವಂಚಿತಾಯತಮೂರ್ಧಜಾ ।
ಸಂಪೂಜ್ಯ ಸಹದೇವಂ ಚ ಸಾತ್ಯಕಿಂ ಚ ಮಹಾರಥಮ್ ॥೨॥

ಭೀಮಸೇನಂ ಚ ಸಂಶಾಂತಂ ದೃಷ್ಟ್ವಾ ಪರಮದುರ್ಮನಾಃ ।
ಅಶ್ರುಪೂರ್ಣೇಕ್ಷಣಾ ವಾಕ್ಯಮುವಾಚೇದಂ ಮನಸ್ವಿನೀ ॥೩॥

ದ್ರುಪದರಾಜಕುಮಾರಿಯಾದ ನೀಳವಾದ ಗುಂಗುರುಕೂದಲುಗಳಿಂದ ಕೂಡಿದ, ಕೇಶವುಳ್ಳ ಅವಳು ಸಹದೇವನನ್ನೂ ಮತ್ತು ಮಹಾರಥನಾದ ಸಾತ್ಯಕಿಯನ್ನೂ ಪೂಜಿಸಿ, ಭೀಮಸೇನನು ಮೃದುವಾಗಿರುವುದನ್ನು ನೋಡಿ, ಬಹಳ ದುಃಖಿತಳಾಗಿ ಮಾನವತಿಯಾದ ಅವಳು ಕಣ್ಣುಗಳಲ್ಲಿ ನೀರನ್ನು ತುಂಬಿಕೊಂಡು ಈ ಮಾತುಗಳನ್ನು ಆಡಿದಳು.

ದ್ರೌಪದೀ

ವಿದಿತಂ ತೇ ಮಹಾಬಾಹೋ ಧರ್ಮಜ್ಞ ಮಧುಸೂದನ ।
ಯಥಾ ನಿಕೃತಿಮಾಸ್ಥಾಯ ಭ್ರಂಶಿತಾಃ ಪಾಂಡವಾಃ ಸುಖಾತ್ ।
ಧೃತರಾಷ್ಟ್ರಸ್ಯ ಪುತ್ರೇಣ ಸಾಮಾತ್ಯೇನ ಜನಾರ್ದನ ॥೪॥

ದ್ರೌಪದೀ– ಎಲೈ ಧರ್ಮಜ್ಞನಾದ ಮಧುಸೂದನನೇ, ಮಹಾಬಾಹುವೇ, ಜನಾರ್ದನನೇ, ಪಾಂಡವರು ಧೃತರಾಷ್ಟ್ರಪುತ್ರನಾದ, ಮಂತ್ರಿಗಳಿಂದ ಸಹಿತನಾದ ದುರ್ಯೋಧನನ ಮೋಸದಿಂದ ಹೇಗೆ ರಾಜ್ಯಭ್ರಷ್ಟರಾದರೆಂದು ನೀನು ತಿಳಿದಿದ್ದೀಯೆ.

ಯಥಾ ಚ ಸಂಜಯೋ ರಾಜ್ಞಾ ಮಂತ್ರಂ ರಹಸಿ ಶ್ರಾವಿತಃ ।
ಯುಧಿಷ್ಠಿರೇಣ ದಾಶಾರ್ಹ ತಚ್ಚಾಪಿ ವಿದಿತಂ ತವ ॥೫॥

ಯಥೋಕ್ತಃ ಸಂಜಯಶ್ಚೈವ ತಚ್ಚ ಸರ್ವಂ ಶ್ರುತಂ ತ್ವಯಾ ॥೬॥

ಎಲೈ ದಾಶಾರ್ಹನೇ, ರಾಜನಾದ ಯುಧಿಷ್ಠಿರನು ಏಕಾಂತದಲ್ಲಿ ಸಂಜಯನಿಗೆ ಯಾವ ಮಂತ್ರಾಲೋಚನೆಯನ್ನು ಹೇಳಿದನು ಎಂಬುದನ್ನು ನೀನು ಕೇಳಿದ್ದೀಯೆ. ಸಂಜಯನು ಅದಕ್ಕೆ ಏನು ಉತ್ತರವನ್ನು ಹೇಳಿದನೆಂಬುದನ್ನೂ ಸಹ ನೀನು ಕೇಳಿದ್ದೀಯೆ.

ಪಂಚ ನಸ್ತಾತ ದೀಯಂತಾಂ ಗ್ರಾಮಾ ಇತಿ ಮಹಾದ್ಯುತೇ ।
ಕುಶಸ್ಥಲಂ ವೃಕಸ್ಥಲಂ ವಾಸಂತೀಂ ವಾರಣಾವತಮ್ ॥೭॥

ಅವಸಾನಂ ಮಹಾಬಾಹೋ ಕಿಂಚಿದೇಕಂ ಚ ಪಂಚಮಮ್ ।
ಇತಿ ದುರ್ಯೋಧನೋ ವಾಚ್ಯಃ ಸುಹೃದಶ್ಚಾಸ್ಯ ಕೇಶವ ॥೮॥

ಪ್ರೀತಿಪಾತ್ರನಾದ ದುರ್ಯೋಧನನೇ, ಮಹಾತೇಜಸ್ವಿಯೇ, ನಮಗೆ ಕುಶಸ್ಥಲ, ವೃಕಸ್ಥಲ, ವಾಸಂತಿ, ವಾರಣಾವತ ಮತ್ತು ಐದನೆಯ ಯಾವುದಾದರೂ ಒಂದು ಗ್ರಾಮ ಇವುಗಳನ್ನು ಕೊಡು ಎಂದು ದುರ್ಯೋಧನಿಗೂ ಮತ್ತು ಅವನ ಸುಹೃದರಿಗೂ ಹೇಳು ಎಂಬುದು ಎಲೈ ಕೇಶವನೇ, ಆ ಮಂತ್ರಾಲೋಚನೆಯಾಗಿದ್ದಿತು.

ನ ಚಾಪಿ ಹ್ಯಕರೋದ್ ವಾಕ್ಯಂ ಶ್ರುತ್ವಾ ಕೃಷ್ಣ ಸುಯೋಧನಃ ।
ಯುಧಿಷ್ಠಿರಸ್ಯ ದಾಶಾರ್ಹ ಶ್ರೀಮತಃ ಸಂಧಿಮಿಚ್ಛತಃ ॥೯॥

ಎಲೈ ಕೃಷ್ಣನೇ, ಎಲೈ ದಾಶಾರ್ಹನೇ, ಸಂಧಿಯನ್ನು ಬಯಸುವ ಕಾಂತಿಯುಕ್ತನಾದ ಯುಧಿಷ್ಠಿರನ ಆ ಮಾತುಗಳನ್ನೂ ಸುಯೋಧನನು ಕೇಳಲಿಲ್ಲ.

ಅಪ್ರದಾನೇನ ರಾಜ್ಯಸ್ಯ ಯದಿ ಕೃಷ್ಣ ಸುಯೋಧನಃ ।
ಸಂಧಿಮಿಚ್ಛೇನ್ನ ಕರ್ತವ್ಯಂ ತತ್ರ ಗತ್ವಾ ಕಥಂಚನ ॥೧೦॥

ರಾಜ್ಯವನ್ನು ಕೊಡದೆ ಸುಯೋಧನನು ಸಂಧಿಯನ್ನು ಬಯಸಿದರೆ ಅಲ್ಲಿಗೆ ಹೋಗಿ ಯಾವ ರೀತಿಯಿಂದಲೂ ನೀನು ಸಂಧಿಯನ್ನು ಮಾಡಿಕೊಳ್ಳಬಾರದು.

ಶಕ್ಷ್ಯಂತಿ ಹಿ ಮಹಾಬಾಹೋ ಪಾಂಡವಾಃ ಸೃಂಜಯೈಃ ಸಹ ।
ಧಾರ್ತರಾಷ್ಟ್ರಬಲಂ ಘೋರಂ ಕ್ರುದ್ಧಂ ಪ್ರತಿಸಮಾಸಿತುಮ್ ॥೧೧॥

ಎಲೈ ಮಹಾಬಾಹುವೇ, ಪಾಂಡವರು ಮತ್ತು ಸೃಂಜಯರು ಸೇರಿ ದುರ್ಯೋಧನನ ಘೋರವಾದ ಮತ್ತು ಕ್ರೋಧದಿಂದ ಕೂಡಿದ ಸೈನ್ಯವನ್ನು ಎದುರಿಸಲು ಸಮರ್ಥರಾಗಿದ್ದಾರೆ.

ನ ಹಿ ಸಾಮ್ನಾ ನ ದಾನೇನ ಶಕ್ಯೋಽರ್ಥಸ್ತೇಷು ಕಶ್ಚನ ।
ತಸ್ಮಾತ್ ತೇಷು ನ ಕರ್ತವ್ಯಾ ಕೃಪಾ ತೇ ಮಧುಸೂದನ ॥೧೨॥

ಸಾಮದಿಂದಲಾಗಲೀ, ದಾನದಿಂದಲಾಗಲೀ ವ್ಯವಹರಿಸಿ ಅವರಿಂದ ಏನೂ ಪಡೆಯಲು ಸಾಧ್ಯವಿಲ್ಲ. ಮಧುಸೂದನನೇ, ಆದ್ದರಿಂದ ಅವರಲ್ಲಿ ದಯೆಯನ್ನು ತೋರಿಸಬಾರದು.

ಸಾಮ್ನಾ ದಾನೇನ ವಾ ಕೃಷ್ಣ ಯೇ ನ ಶಾಮ್ಯಂತಿ ಶತ್ರವಃ ।
ಕ್ಷೇಪ್ತವ್ಯಾಸ್ತೇ ತು ದಂಡೇನ ಜೀವಿತಂ ಪರಿರಕ್ಷತಾ ॥೧೩॥

ಎಲೈ ಕೃಷ್ಣನೇ, ಯಾವ ಶತ್ರುಗಳು ಸಾಮೋಪಾಯದಿಂದ ಅಥವಾ ದಾನೋಪಾಯದಿಂದ ಬಗ್ಗುವುದಿಲ್ಲವೋ ಅವರಿಗೆ ತಾನು ಬದುಕಲು ಬಯಸುವ ಕ್ಷತ್ರಿಯನು ದಂಡವನ್ನೇ ಪ್ರಯೋಗಿಸಬೇಕು.

ತಸ್ಮಾತ್ ತೇಷು ಮಹಾನ್ ದಂಡಃ ಕ್ಷೇಪ್ತವ್ಯಃ ಕ್ಷಿಪ್ರಮಚ್ಯುತ ।
ತ್ವಯಾ ಚೈವ ಮಹಾಬಾಹೋ ಪಾಂಡವೈಃ ಸಹ ಸೃಂಜಯೈಃ ॥೧೪॥

ಎಲೈ ಕೃಷ್ಣನೇ, ಮಹಾಬಾಹುವೇ, ಆದ್ದರಿಂದ ನೀನೂ ಪಾಂಡವರೂ ಮತ್ತು ಸೃಂಜಯರೂ ಸೇರಿ ಅವನಿಗೆ ದೊಡ್ಡ ದಂಡವನ್ನೇ ವಿಧಿಸಬೇಕು.

ಏತತ್ ಸಮರ್ಥಂ ಪಾರ್ಥಾನಾಂ ತವ ಚೈವ ಯಶಸ್ಕರಮ್ ।
ಕ್ರಿಯಮಾಣಂ ಭವೇತ್ ಕೃಷ್ಣ ಕ್ಷತ್ರಸ್ಯ ಚ ಸುಖಾವಹಮ್ ॥೧೫॥

ಎಲೈ ಕೃಷ್ಣನೇ, ಹಾಗೆ ಮಾಡಿದರೆ ಇದು ಪಾಂಡವರಿಗೆ ಯೋಗ್ಯವಾದುದು, ನಿನಗೆ ಕೀರ್ತಿಕರವಾದುದು ಮತ್ತು ಎಲ್ಲಾ ಕ್ಷತ್ರಿಯರಿಗೂ ಸುಖವನ್ನು ಉಂಟುಮಾಡುವಂತಹದಾಗುತ್ತದೆ.

ಕ್ಷತ್ರಿಯೇಣ ಹಿ ಹಂತವ್ಯಃ ಕ್ಷತ್ರಿಯೋ ಲೋಭಮಾಸ್ಥಿತಃ ।
ಅಕ್ಷತ್ರಿಯೋ ವಾ ದಾಶಾರ್ಹ ಸ್ವಧರ್ಮಮನುತಿಷ್ಠತಾ ॥೧೬॥

ಅನ್ಯತ್ರ ಬ್ರಾಹ್ಮಣಾತ್ ತಾತ ಸರ್ವಪಾಪೇಷ್ವವಸ್ಥಿತಮ್ ।
ಗುರುರ್ಹಿ ಸರ್ವವರ್ಣಾನಾಂ ಬ್ರಾಹ್ಮಣಃ ಪ್ರಸೃತಾಗ್ರಭುಕ್ ॥೧೭॥

ಎಲೈ ಕೃಷ್ಣನೇ, ಕ್ಷತ್ರಿಯನಾದವನು ಲೋಭಿಯಾದ ಕ್ಷತ್ರಿಯನನ್ನು ವಧೆ ಮಾಡಬೇಕು. ಪ್ರೀತಿಪಾತ್ರನೇ, ದಾಶಾರ್ಹನೇ, ಅಗ್ರಭೋಜಿಯಾದ ಬ್ರಾಹ್ಮಣನು ಎಲ್ಲ ವರ್ಣದವರಿಗೂ ಗುರುವಾದವನು. ಅವನು ಏನು ಪಾಪವನ್ನು ಮಾಡಿದರೂ ಅವನನ್ನು ಬಿಟ್ಟು ಸ್ವಧರ್ಮದಲ್ಲಿ ನಿರತನಾದ ಕ್ಷತ್ರಿಯನು ಕ್ಷತ್ರಿಯರಲ್ಲದವರನ್ನೂ ದುಷ್ಟರಾದವರನ್ನೂ ವಧೆ ಮಾಡಬೇಕು.

ಯಥಾऽವಧ್ಯೇ ಭವೇದ್ ದೋಷೋ ವಧ್ಯಮಾನೇ ಜನಾರ್ದನ ।
ಸ ವಧ್ಯಸ್ಯಾವಧೇ ದೋಷ ಇತಿ ಧರ್ಮವಿದೋ ವಿದುಃ ॥೧೮॥

ಜನಾರ್ದನನೇ, ಅವಧ್ಯನಾದವನನ್ನು ವಧೆ ಮಾಡಿದರೆ ಹೇಗೆ ದೋಷವಾಗುತ್ತದೆಯೋ ಅದರಂತೆ ವಧ್ಯನಾದವನನ್ನು ವಧೆ ಮಾಡದಿದ್ದರೆ ದೋಷ ಉಂಟಾಗುವುದು ಎಂದು ಧರ್ಮವನ್ನು ತಿಳಿದವರು ಹೇಳುತ್ತಾರೆ (ತಿಳಿದಿದ್ದಾರೆ).

ಯಥಾ ತ್ವಾಂ ನ ಸ್ಪೃಶೇದೇಷ ದೋಷಃ ಕೃಷ್ಣ ತಥಾ ಕುರು ।
ಪಾಂಡವೈಃ ಸಹ ದಾಶಾರ್ಹ ಸೃಂಜಯೈಶ್ಚ ಮಹಾಬಲ ॥೧೯॥

ಎಲೈ ಮಹಾಬಲನಾದ ಕೃಷ್ಣನೇ, ದಾಶಾರ್ಹನೇ, ಪಾಂಡವರು ಮತ್ತು ಸೃಂಜಯರಿಂದ ಕೂಡಿದ ನಿನಗೆ ಈ ದೋಷವು ತಟ್ಟದಂತೆ ನಡೆದುಕೊ.

ಪುನರುಕ್ತಂ ಚ ವಕ್ಷ್ಯಾಮಿ ವಿಸ್ರಂಭೇಣ ಜನಾರ್ದನ ।
ಕಾ ನು ಸೀಮಂತಿನೀ ಮಾದೃಕ್ ಪೃಥಿವ್ಯಾಮಸ್ತಿ ಕೇಶವ ॥೨೦॥

ಎಲೈ ಜನಾರ್ದನನೇ, ಹಿಂದೆ ಹೇಳಿದುದನ್ನೇ ಇನ್ನೊಮ್ಮೆ ಹೇಳುತ್ತಿದ್ದೇನೆ. ಎಲೈ ಕೇಶವನೇ, ಈ ಭೂಮಿಯಲ್ಲಿ ನನ್ನಂತಹ ಸುಮಂಗಲಿಯು ಯಾವಳಿದ್ದಾಳೆ?

ಸುತಾ ದ್ರುಪದರಾಜಸ್ಯ ವೇದಿಮಧ್ಯಾತ್ ಸಮುತ್ಥಿತಾ ।
ಧೃಷ್ಟದ್ಯುಮ್ನಸ್ಯ ಭಗಿನೀ ತವ ಕೃಷ್ಣ ಪ್ರಿಯಾ ಸಖೀ ॥೨೧॥

ಎಲೈ ಕೃಷ್ಣನೇ, ನಾನು ವೇದಿಮಧ್ಯದಿಂದ ಎದ್ದುಬಂದ ದ್ರುಪದರಾಜನ ಮಗಳು, ಧೃಷ್ಟದ್ಯುಮ್ನನ ತಂಗಿ ಮತ್ತು ನಿನ್ನ ಪ್ರಿಯಳಾದ ಸಖೀ.

ಆಜಮೀಢಕುಲಂ ಪ್ರಾಪ್ತಾ ಸ್ನುಷಾ ಪಾಂಡೋರ್ಮಹಾತ್ಮನಃ ।
ಮಹಿಷೀ ಪಾಂಡುಪುತ್ರಾಣಾಂ ಪಂಚೇಂದ್ರಸಮವರ್ಚಸಾಮ್ ॥೨೨॥

ಮಹಾತ್ಮನಾದ ಪಾಂಡುವಿನ ಸೊಸೆಯಾಗಿ ಆಜಮೀಢಕುಲವನ್ನು ಸೇರಿದೆ. ಪಂಚೇಂದ್ರಿಯಗಳಿಗೆ ಸಮಾನವಾದ ತೇಜಸ್ಸುಳ್ಳ ಪಾಂಡುಪುತ್ರರಿಗೆ ಪಟ್ಟದ ರಾಣಿಯಾದೆ.

ಸುತಾ ಮೇ ಪಂಚಭಿರ್ವೀರೈಃ ಪಂಚ ಜಾತಾ ಮಹಾರಥಾಃ ।
ಅಭಿಮನ್ಯುರ್ಯಥಾ ಕೃಷ್ಣ ತಥಾ ತೇ ತವ ಧರ್ಮತಃ ॥೨೩॥

ಎಲೈ ಕೃಷ್ಣನೇ, ನಿನ್ನ ತಂಗಿಯಾದ ಸುಭದ್ರೆಯಲ್ಲಿ ಹೇಗೆ ಅಭಿಮನ್ಯುವು ಧರ್ಮದಿಂದ ಜನಿಸಿದನೋ ಅದರಂತೆ ವೀರರಾದ ಪಂಚಪಾಂಡವರಿಂದ ನನಗೆ ಮಹಾರಥರಾದ ಐದುಮಕ್ಕಳು ಜನಿಸಿದರು.

ಸಾಽಹಂ ಕೇಶಗ್ರಹಂ ಪ್ರಾಪ್ತಾ ಪರಿಕ್ಲಿಷ್ಟಾ ಸಭಾಂ ಗತಾ ।
ಪಶ್ಯತಾಂ ಪಾಂಡುಪುತ್ರಾಣಾಂ ತ್ವಯಿ ಜೀವತಿ ಕೇಶವ ॥೨೪॥

ಅಂತಹ ನಾನು ನೀನು ಬದುಕಿರುವಾಗ, ಪಾಂಡವರು ನೋಡುತ್ತಿರುವಾಗ, ಸಭೆಗೆ ಎಳೆತರಲ್ಪಟ್ಟು, ಕೇಶಗ್ರಹವನ್ನು ಹೊಂದಿ ಬಹಳ ಕ್ಲೇಶಕ್ಕೆ ಒಳಗಾದೆ.

ಜೀವತ್ಸು ಪಾಂಡುಪುತ್ರೇಷು ಪಾಂಚಾಲೇಷ್ವಥ ವೃಷ್ಣಿಷು ।
ದಾಸೀಭೂತಾಽಸ್ಮಿ ಪಾಪಾನಾಂ ಸಭಾಮಧ್ಯೇ ವ್ಯವಸ್ಥಿತಾ ॥೨೫॥

ಪಾಂಡವರೂ ಪಾಂಚಾಲರೂ ಮತ್ತು ವೃಷ್ಣಿಗಳೂ ಬದುಕಿರುವಾಗ ನಾನು ಪಾಪಿಗಳ ಸಭೆಯ ಮಧ್ಯದಲ್ಲಿ ದಾಸಿಯಾಗಿ ಇದ್ದೆನು.

ನಿರಮರ್ಷೇಷ್ವಚೇಷ್ಟೇಷು ಪ್ರೇಕ್ಷಮಾಣೇಷು ಪಾಂಡುಷು ।
ಪಾಹಿ ಮಾಮಿತಿ ಗೋವಿಂದ ಮನಸಾ ಚಿಂತಿತೋಽಸ್ಮಿ ಮೇ ॥೨೬॥

ಕ್ರೋಧಕ್ಕೆ ಒಳಗಾಗದ ಪಾಂಡವರು ನೋಡುತ್ತಾ ಸುಮ್ಮನೆ ಕುಳಿತಿರುವಾಗ ಗೋವಿಂದ, ನನ್ನನ್ನು ರಕ್ಷಿಸು ಎಂದು ನಿನ್ನನ್ನು ಮನಸ್ಸಿನಲ್ಲಿಯೇ ಚಿಂತಿಸಿದೆನು.

ಯತ್ರ ಮಾಂ ಭಗವನ್ ರಾಜಾ ಶ್ವಶುರೋ ವಾಕ್ಯಮಬ್ರವೀತ್ ।
ವರಂ ವೃಣೀಷ್ವ ಪಾಂಚಾಲಿ ವರಾರ್ಹಾಽಸಿ ಮತಾ ಮಮ ॥೨೭॥

ಎಲೈ ಭಗವಂತನೇ, ಅಲ್ಲಿ ಮಾವನಾದ ಧೃತರಾಷ್ಟ್ರರಾಜನು, ಪಾಂಚಾಲಿಯೇ ನೀನು ನನ್ನಿಂದ ವರವನ್ನು ಪಡೆಯಲು ಯೋಗ್ಯಳಾಗಿದ್ದೀಯೆ. ಆದ್ದರಿಂದ ವರವನ್ನು ಕೇಳು ಎಂದು ಹೇಳಿದನು.

ಅದಾಸಾಃ ಪಾಂಡವಾಃ ಸಂತು ಸರಥಾಃ ಸಾಯುಧಾ ಇತಿ ।
ಮಯೋಕ್ತೇ ಯತ್ರ ನಿರ್ಮುಕ್ತಾ ವನವಾಸಾಯ ಕೇಶವ ॥೨೮॥

ತಮ್ಮ ರಥ ಮತ್ತು ಆಯುಧಗಳಿಂದ ಕೂಡಿದ ಪಾಂಡವರು ತಮ್ಮ ದಾಸ್ಯದಿಂದ ನಿವೃತ್ತರಾಗಲಿ ಎಂದು ನಾನು ಹೇಳಿದಾಗ ಪಾಂಡವರು ಬಿಡುಗಡೆ ಹೊಂದಿದರು. ಆದರೆ ಎಲೈ ಕೇಶವನೇ, ಅದು ವನವಾಸಕ್ಕೆ ಹೋಗುವುದರಲ್ಲಿ ಪರ್ಯವಸಾನವನ್ನು ಹೊಂದಿತು.

ಏವಂವಿಧಾನಾಂ ದುಃಖಾನಾಮಭಿಜ್ಞೋಽಸಿ ಜನಾರ್ದನ ।
ತ್ರಾಹಿ ಮಾಂ ಪುಂಡರೀಕಾಕ್ಷ ಸಭರ್ತೃಜ್ಞಾತಿಬಾಂಧವಾಮ್ ॥೨೯॥

ಎಲೈ ಜನಾರ್ದನನೇ, ನಾನು ಅನುಭವಿಸಿದ ಇಂತಹ ದುಃಖಗಳನ್ನು ನೀನು ಚೆನ್ನಾಗಿ ತಿಳಿದಿದ್ದೀಯೆ. ಪುಂಡರೀಕಾಕ್ಷನೇ, ಪತಿಗಳು, ದಾಯಾದಿಗಳು ಮತ್ತು ಬಂಧುಗಳಿಂದ ಕೂಡಿದ ನನ್ನನ್ನು ರಕ್ಷಿಸು.

ನನ್ವಹಂ ಕೃಷ್ಣ ಭೀಷ್ಮಸ್ಯ ಧೃತರಾಷ್ಟ್ರಸ್ಯ ಚೋಭಯೋಃ ।
ಸ್ನುಷಾ ಭವಾಮಿ ಧರ್ಮೇಣ ಸಾಽಹಂ ದಾಸೀಕೃತಾಽಭವಮ್ ॥೩೦॥

ಎಲೈ ಕೃಷ್ಣನೇ, ಧರ್ಮದಿಂದ ನೋಡಿದರೆ ನಾನು ಭೀಷ್ಮ ಮತ್ತು ಧೃತರಾಷ್ಟ್ರರಿಬ್ಬರಿಗೂ ಸೊಸೆಯಷ್ಟೆ! ಅಂತಹ ನಾನು ದಾಸಿಯಾಗಿ ಮಾಡಲ್ಪಟ್ಟೆ.

ಧಿಕ್ ಪಾರ್ಥಸ್ಯ ಧನುಷ್ಮತ್ತಾಂ ಭೀಮಸೇನಸ್ಯ ಧಿಗ್ ಬಲಮ್ ।
ಯತ್ರ ದುರ್ಯೋಧನಃ ಕೃಷ್ಣ ಮುಹೂರ್ತಮಪಿ ಜೀವತಿ ॥೩೧॥

ಎಲೈ ಕೃಷ್ಣನೇ, ದುರ್ಯೋಧನನು ಒಂದು ಮುಹೂರ್ತಕಾಲವಾದರೂ ಜೀವಿಸಿರುವುದಾದರೆ ಅರ್ಜುನನ ಧನುರ್ವಿದ್ಯೆಗೆ ಧಿಕ್ಕಾರವಿರಲಿ. ಭೀಮಸೇನನ ಬಲಕ್ಕೆ ಧಿಕ್ಕಾರವಿರಲಿ.

ಯದಿ ತೇಽಹಮನುಗ್ರಾಹ್ಯಾ ಯದಿ ತೇಽಸ್ತಿ ಕೃಪಾ ಮಯಿ ।
ಧಾರ್ತರಾಷ್ಟ್ರೇಷು ವೈ ಕೋಪಃ ಸರ್ವಃ ಕೃಷ್ಣ ವಿಧೀಯತಾಮ್ ॥೩೨॥

ಎಲೈ ಕೃಷ್ಣನೇ, ನೀನು ನನಗೆ ಅನುಗ್ರಹವನ್ನು ಮಾಡುವುದಾದರೆ, ನಿನಗೆ ನನ್ನಲ್ಲಿ ದಯೆ ಇದ್ದರೆ ನಿನ್ನ ಕೋಪವನ್ನೆಲ್ಲಾ ದುರ್ಯೋಧನಾದಿಗಳ ಮೇಲೆ ತಿರುಗಿಸು.

ವೈಶಂಪಾಯನಃ

ಇತ್ಯುಕ್ತ್ವಾ ಮೃದುಸಂಭಾರಂ ವೃಜಿನಾಗ್ರಂ ಸುದರ್ಶನಮ್ ।
ಸುನೀಲಮಸಿತಾಪಾಂಗೀ ಪುಣ್ಯಗಂಧಾಧಿವಾಸಿತಮ್ ॥೩೩॥

ಸರ್ವಲಕ್ಷಣಸಂಪನ್ನಂ ಮಹಾಭುಜಗವರ್ಚಸಮ್ ।
ಕೇಶಪಕ್ಷಂ ವರಾರೋಹಾ ಗೃಹ್ಯ ಸವ್ಯೇನ ಪಾಣಿನಾ ॥೩೪॥

ಪದ್ಮಾಕ್ಷೀ ಪುಂಡರೀಕಾಕ್ಷಮುಪೇತ್ಯ ಗಜಗಾಮಿನೀ ।
ಅಶ್ರುಪೂರ್ಣೇಕ್ಷಣಾ ಕೃಷ್ಣಾ ಕೃಷ್ಣಂ ವಚನಮಬ್ರವೀತ್ ॥೩೫॥

ವೈಶಂಪಾಯನ– ಹೀಗೆ ಹೇಳಿ ತನ್ನ ಮೃದುವಾದ, ಒಳ್ಳೆಯ ಭಾರವುಳ್ಳ ತುದಿಯ ಮುಂಗುರುಳಿನಿಂದ ಕೂಡಿದ್ದ, ನೋಡಲು ಸುಂದರವಾದ, ಪುಣ್ಯಗಂಧಗಳಿಂದ ಭೂಷಿತವಾದ, ಬಹಳ ಕಪ್ಪಾದ, ಸರ್ವಲಕ್ಷಣಸಂಪನ್ನವಾದ, ದೊಡ್ಡ ಸರ್ಪವನ್ನು ಹೋಲುವ ಕೇಶಸಮೂಹವನ್ನು ತನ್ನ ಎಡಗೈಯಲ್ಲಿ ಹಿಡಿದು ಕಪ್ಪಾದ ಕಣ್ಣುಳ್ಳವಳೂ, ಸುಂದರವಾದ ನಿತಂಬವುಳ್ಳವಳೂ, ಪದ್ಮನೇತ್ರೆಯೂ, ಗಜಗಾಮಿನಿಯೂ ಆದ ದ್ರೌಪದಿಯು ಪುಂಡರೀಕಾಕ್ಷನಾದ ಕೃಷ್ಣನ ಸಮೀಪಕ್ಕೆ ಬಂದು ನೀರುತುಂಬಿದ ಕಣ್ಣುಗಳುಳ್ಳವಳಾಗಿ ಕೃಷ್ಣನನ್ನು ಕುರಿತು ಮಾತನಾಡಿದಳು.

ಅಯಂ ತೇ ಪುಂಡರೀಕಾಕ್ಷ ದುಃಶಾಸನಕರೋದ್ಧೃತಃ ।
ಸ್ಮರ್ತವ್ಯಃ ಸರ್ವಕಾಲೇಷು ಪರೇಷಾಂ ಸಂಧಿಮಿಚ್ಛತಾಮ್ ॥೩೬॥

ಎಲೈ ಪುಂಡರೀಕಾಕ್ಷನೇ, ಶತ್ರುಗಳ ಜೊತೆಯಲ್ಲಿ ಸಂಧಿಯನ್ನು ಬಯಸುವ ಮಾತುಗಳನ್ನು ಆಡುವಾಗಲೆಲ್ಲಾ ದುಶ್ಶಾಸನನ ಕೈಯಲ್ಲಿ ಎತ್ತಲ್ಪಟ್ಟ ಈ ನನ್ನ ಕೇಶಪಾಶಗಳನ್ನು ನೀನು ಸ್ಮರಿಸಿಕೊಳ್ಳಬೇಕು.

ಯದಿ ಭೀಮಾರ್ಜುನೌ ಕೃಷ್ಣ ಕೃಪಣೌ ಸಂಧಿಕಾಮುಕೌ ।
ಪಿತಾ ಮೇ ಯೋತ್ಸ್ಯತೇ ವೃದ್ಧಃ ಸಹ ಪುತ್ರೈರ್ಮಹಾರಥೈಃ ॥೩೭॥

ಎಲೈ ಕೃಷ್ಣನೇ, ಭೀಮಾರ್ಜುನರು ಕಾರ್ಪಣ್ಯದಿಂದ ಸಂಧಿಯನ್ನು ಬಯಸಿದರೆ ವೃದ್ಧನಾದ ನನ್ನ ತಂದೆ, ಮಹಾರಥರಾದ ತನ್ನ ಪುತ್ರರ ಜೊತೆಯಲ್ಲಿ ಯುದ್ಧವನ್ನು ಮಾಡುವನು.

ಪಂಚ ಚೈವ ಮಹಾವೀರ್ಯಾಃ ಪುತ್ರಾ ಮೇ ಮಧುಸೂದನ ।
ಅಭಿಮನ್ಯುಂ ಪುರಸ್ಕೃತ್ಯ ಯೋತ್ಸ್ಯಂತೇ ಕುರುಭಿಃ ಸಹ ॥೩೮॥

ಎಲೈ ಮಧುಸೂದನನೇ, ಮಹಾಪರಾಕ್ರಮಿಗಳಾದ ನನ್ನ ಐದುಜನ ಮಕ್ಕಳು ಅಭಿಮನ್ಯುವನ್ನು ಮುಂದೆ ಮಾಡಿಕೊಂಡು ಕೌರವರ ಜೊತೆಯಲ್ಲಿ ಯುದ್ಧವನ್ನು ಮಾಡುವರು.

ದುಃಶಾಸನಭುಜಂ ಶ್ಯಾಮಂ ಸಂಛಿನ್ನಂ ಪಾಂಸುಕುಂಠಿತಮ್ ।
ಯದ್ಯಹಂ ತು ನ ಪಶ್ಯಾಮಿ ಕಾ ಶಾಂತಿರ್ಹೃದಯಸ್ಯ ಮೇ ॥೩೯॥

ದುಶ್ಶಾಸನನ ಬಾಹುವು ಕತ್ತರಿಸಲ್ಪಟ್ಟು, ಭೂಮಿಯ ಮೇಲೆ ಧೂಳಿನಿಂದ ಆವೃತವಾದುದನ್ನು ನಾನು ನೋಡದಿದ್ದರೆ ನನ್ನ ಮನಸ್ಸಿಗೆ ಹೇಗೆ ಶಾಂತಿಯುಂಟಾಗುತ್ತದೆ?

ತ್ರಯೋದಶ ಹಿ ವರ್ಷಾಣಿ ಪ್ರತೀಕ್ಷಂತ್ಯಾ ಗತಾನಿ ಮೇ ।
ನಿಧಾಯ ಹೃದಯೇ ಮನ್ಯುಂ ಪ್ರದೀಪ್ತಮಿವ ಪಾವಕಮ್ ॥೪೦॥

ಉರಿಯುವ ಅಗ್ನಿಯಂತಿರುವ ಈ ನನ್ನ ಕ್ರೋಧವನ್ನು ಹೃದಯದಲ್ಲಿ ತುಂಬಿಕೊಂಡು, ಇದನ್ನು ನಿರೀಕ್ಷೆಮಾಡುತ್ತಾ ನನಗೆ ಹದಿಮೂರುವರ್ಷಗಳು ಕಳೆದವು.

ವಿದೀರ್ಯತೇ ಮೇ ಹೃದಯಂ ಭೀಮವಾಕ್ಶಲ್ಯಪೀಡಿತಮ್ ।
ಯೋಽಯಮದ್ಯ ಮಹಾಬಾಹುರ್ಧರ್ಮಂ ಸಮನುಪಶ್ಯತಿ ॥೪೧॥

ಮಹಾಬಾಹುವಾದ ಭೀಮಸೇನನು ಈ ದಿನ ಧರ್ಮದ ದೃಷ್ಟಿಯುಳ್ಳವನಾಗಿ ಆಡಿದ ಸಂಧಿಯ ಮಾತುಗಳು ಶಲ್ಯದಿಂದ ಇರಿದಂತೆ ನನ್ನ ಹೃದಯವನ್ನು ಪೀಡಿಸುತ್ತಿವೆ.

ವೈಶಂಪಾಯನಃ

ಇತ್ಯುಕ್ತ್ವಾ ಬಾಷ್ಪಸನ್ನೇನ ಕಂಠೇನಾಯತಲೋಚನಾ ।
ರುರೋದ ಕೃಷ್ಣಾ ಸೋತ್ಕಂಠಂ ಸುಸ್ವರಂ ಬಾಷ್ಪಗದ್ಗದಮ್ ॥೪೨॥

ವೈಶಂಪಾಯನ– ಹೀಗೆ ಹೇಳಿ ವಿಶಾಲನೇತ್ರೆಯಾದ ದ್ರೌಪದಿಯು ಕಣ್ಣೀರಿನಿಂದ ಗದ್ಗದವಾದ ಕಂಠದಿಂದ ಸುಸ್ವರದಿಂದ ಬಹಳ ಉದ್ವೇಗದಿಂದ ಅತ್ತಳು.

ಸ್ತನೌ ಪೀನಾಯತಶ್ರೋಣೀ ಸಹಿತಾವಭಿವರ್ಷತೀ ।
ದ್ರವೀಭೂತಮಿವಾತ್ಯುಷ್ಣಂ ಮುಂಚಂತೀ ವಾರಿ ನೇತ್ರಜಮ್ ॥೪೩॥

ತನ್ನ ಸ್ತನಗಳನ್ನು ಮತ್ತು ವಿಸ್ತಾರವಾದ, ಪೀನವಾದ ನಿತಂಬಗಳನ್ನು ಬಿಸಿಯಾದ ತನ್ನ ಕಣ್ಣೀರಿನಿಂದ ತೋಯಿಸುತ್ತಾ ತನ್ನ ಕಣ್ಣುಗಳಿಂದ ದ್ರವೀಭೂತವಾದ ಕಣ್ಣೀರನ್ನು ಸುರಿಸುತ್ತಾ ಅತ್ತಳು.

ತಾಮುವಾಚ ಮಹಾಬಾಹುಃ ಕೇಶವಃ ಪರಿಸಾಂತ್ವಯನ್ ॥೪೪॥

ಅಚಿರಾದ್ ದ್ರಕ್ಷ್ಯಸೇ ಕೃಷ್ಣೇ ರುದತೀರ್ಭರತಸ್ತ್ರಿಯಃ ॥೪೫॥

ಏವಂ ತಾ ಭೀರು ರೋತ್ಸ್ಯಂತಿ ನಿಹತಜ್ಞಾತಿಬಾಂಧವಾಃ ।
ಹತಮಿತ್ರಾ ಹತಬಲಾ ಯೇಷಾಂ ಕ್ರುದ್ಧಾಽಸಿ ಭಾಮಿನಿ ॥೪೬॥

ಮಹಾಬಾಹುವಾದ ಕೇಶವನು ಅವಳನ್ನು ಸಮಾಧಾನಪಡಿಸುತ್ತಾ ಅವಳನ್ನು ಕುರಿತು ಎಲೌ ಕೃಷ್ಣೆಯೇ, ಭಾಮಿನಿಯೇ, ಶೀಘ್ರದಲ್ಲಿಯೇ ನೀನು ಕೌರವರ ಪತ್ನಿಯರು ಅಳುವುದನ್ನು ನೋಡುವಿ. ನೀನು ಯಾರ ಮೇಲೆ ಕೋಪಗೊಂಡಿದ್ದೀಯೋ ಅಂತಹ ಕೌರವರ ಪತ್ನಿಯರು ತಮ್ಮ ಜ್ಞಾತಿಬಾಂಧವರನ್ನೂ, ಮಿತ್ರರನ್ನೂ ಮತ್ತು ತಮ್ಮ ಸೈನ್ಯಗಳನ್ನೂ ಕಳೆದುಕೊಂಡು ಎಲೌ ಭೀರುವೇ, ನೀನು ಅಳುತ್ತಿರುವಂತೆಯೇ ಅಳುವರು.

ಅಹಂ ಚ ತತ್ ಕರಿಷ್ಯಾಮಿ ಭೀಮಾರ್ಜುನಯಮೈಃ ಸಹ ।
ಯುಧಿಷ್ಠಿರನಿಯೋಗೇನ ದೈವಾಚ್ಚ ವಿಧಿನಿರ್ಮಿತಾತ್ ॥೪೭॥

ನಾನು ಯುಧಿಷ್ಠಿರನ ಆದೇಶದಂತೆ ಮತ್ತು ದೈವಪ್ರೇರಣೆಯಂತೆ, ಭೀಮಾರ್ಜುನ, ನಕುಲ-ಸಹದೇವರ ಸಹಾಯದಿಂದ ಅದನ್ನು ಸಾಧಿಸುವೆನು.

ಧಾರ್ತರಾಷ್ಟ್ರಾಃ ಕಾಲಪಕ್ವಾ ನ ಚೇಚ್ಛ್ರಣ್ವಂತಿ ಮೇ ವಚಃ ।
ಶೇಷ್ಯಂತೇ ನಿಹತಾ ಭೂಮೌ ಶ್ವಸೃಗಾಲಾದನೀಕೃತಾಃ ॥೪೮॥

ಕಾಲಪಕ್ವರಾದ ದುರ್ಯೋಧನಾದಿಗಳು ನನ್ನ ಮಾತನ್ನು ಕೇಳದಿದ್ದರೆ ಮಡಿದು ಭೂಮಿಯಲ್ಲಿ ಮಲಗಿ ನಾಯಿ-ನರಿಗಳಿಗೆ ಆಹಾರವಾಗುತ್ತಾರೆ.

ಚಲೇದ್ಧಿ ಹಿಮವಾನ್ ಶೈಲೋ ಮೇದಿನೀ ಶಕಲೀಭವೇತ್ ।
ದ್ಯೌಃ ಪತೇಚ್ಚ ಸನಕ್ಷತ್ರಾ ನ ಮೇ ಮೋಘಂ ವಚೋ ಭವೇತ್ ॥೪೯॥

ಶುಷ್ಯೇತ್ ತೋಯನಿಧಿಃ ಕೃಷ್ಣೇ ನ ಮೇ ಮೋಘಂ ವಚೋ ಭವೇತ್ ॥

ಹಿಮಾಲಯಪರ್ವತವು ಚಲಿಸೀತು, ಭೂಮಿಯು ಹೋಳುಹೋಳಾದೀತು, ನಕ್ಷತ್ರದಿಂದ ಕೂಡಿದ ಅಂತರಿಕ್ಷವು ಬಿದ್ದೀತು. ಆದರೆ ನನ್ನ ಮಾತು ಸುಳ್ಳಾಗಲಾರದು. ದ್ರೌಪದಿಯೇ, ಸಮುದ್ರವು ಬತ್ತಿ ಹೋಗಬಹುದು, ಆದರೆ ನನ್ನ ಮಾತು ಸುಳ್ಳಾಗುವುದಿಲ್ಲ.

ಸತ್ಯಂ ತೇ ಪ್ರತಿಜಾನಾಮಿ ಕೃಷ್ಣೇ ಬಾಷ್ಪೋ ನಿಗೃಹ್ಯತಾಮ್ ।
ಹತಾಮಿತ್ರಾನ್ ಶ್ರಿಯಾಯುಕ್ತಾನ್ ಅಚಿರಾದ್ ದ್ರಕ್ಷ್ಯಸೇ ಪತೀನ್ ॥

ಎಲೌ ದ್ರೌಪದಿಯೇ, ನಾನು ಪ್ರತಿಜ್ಞೆಯನ್ನು ಮಾಡಿ ಸತ್ಯವನ್ನು ಹೇಳುತ್ತಿದ್ದೇನೆ. ನಿನ್ನ ಕಣ್ಣೀರನ್ನು ತಡೆದುಕೊ. ನಿನ್ನ ಪತಿಗಳು ಶತ್ರುಗಳನ್ನು ಸಂಹರಿಸಿ ಸಂಪದ್ಯುಕ್ತರಾಗಿರುವುದನ್ನು ನೀನು ಬಹಳ ಬೇಗ ನೋಡುವಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಅಶೀತಿತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ಏಕಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಎಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ಸಸಾತ್ಯಕಿಃ ಸ್ಯಂದನವರ್ಯಸಂಸ್ಥಿತಃ
ಪೃಥಾತನೂಜೈರಖಿಲೈಃ ಸ ಭೂಮಿಪೈಃ ।
ಅನ್ವಾಗತೋ ದೂರತರಂ ಗಿರಾ ತಾನ್
ಸಂಸ್ಥಾಪ್ಯ ವಿಪ್ರಪ್ರವರೈರ್ಯಯೌ ಕುರೂನ್ ॥೬೧॥

ಶ್ರೀಕೃಷ್ಣನು ಸಾತ್ಯಕಿಯೊಡನೆ ಉತ್ತಮವಾದ ರಥವೇರಿ ಕುಳಿತ. ಪಾಂಡವರೂ ಎಲ್ಲ ರಾಜರೂ ಬಹಳ ದೂರದವರೆಗೆ ಅವನನ್ನು ಹಿಂಬಾಲಿಸಿದರು. ಅವರನ್ನು ಮಾತಿನಿಂದ ಹಿಂದೆ ನಿಲ್ಲಿಸಿ ಬ್ರಾಹ್ಮಣರೊಂದಿಗೆ ಕೌರವರ ಬಳಿಗೆ ಹೊರಟ ಶ್ರೀಕೃಷ್ಣ.

ಏಕೋಽಪಿ ವಿಷ್ಣುಃ ಸ ತು ಭಾರ್ಗವಾತ್ಮಾ
ವ್ಯಾಸಃ ಸಶಿಷ್ಯಸ್ತದನನ್ಯದೃಶ್ಯಃ ।
ಯಯೌ ತದುಕ್ತೇರ್ಹಿ ಗುಣಾನ್ ಪ್ರವೇತ್ತುಂ
ನಾನ್ಯೋ ಹಿ ಶಕ್ತಸ್ತಮೃತೇ ಯತಃ ಪ್ರಭುಮ್ ॥೬೨॥

ವಿಷ್ಣು ಒಬ್ಬನೇ ಆದರೂ ಕೃಷ್ಣರೂಪನಾದ ಅವನು ಪರಶುರಾಮರೂಪನಾಗಿಯೂ ವೇದವ್ಯಾಸರೂಪನಾಗಿಯೂ ಶ್ರೇಷ್ಠರಾದ ಮುನಿಗಳೊಂದಿಗೆ ಹೊರಟ. ಏಕೆಂದರೆ ವಿಷ್ಣುವಿನ ಮಾತಿನ ಸ್ವಾರಸ್ಯವನ್ನು ತಿಳಿಯಲು ಪ್ರಭುವಾದ ಆ ವಿಷ್ಣು ಒಬ್ಬನೇ ಹೊರತು ಇನ್ನೊಬ್ಬ ಸಮರ್ಥನಾಗಲಾರ.

★ ★ ★ ★ ★

ಎಂಬತ್ತೊಂದನೆಯ ಅಧ್ಯಾಯ

ಯುಧಿಷ್ಠಿರನ ಸಂದೇಶದೊಂದಿಗೆ ಹಸ್ತಿನಪುರಕ್ಕೆ ಕೃಷ್ಣನ ಪ್ರಯಾಣ.
ಮಾರ್ಗಮಧ್ಯದಲ್ಲಿ ಋಷಿಗಳ ಜೊತೆಯಲ್ಲಿ ಸಂವಾದ.

ಯುಧಿಷ್ಠಿರಃ

ಕುರೂಣಾಮಿವ ಸರ್ವೇಷಾಂ ಭವಾನ್ ಸುಹೃದನುತ್ತಮಃ ।
ಸಂಬಂಧೀ ದಯಿತೋ ನಿತ್ಯಮುಭಯೋಃ ಪಕ್ಷಯೋರಪಿ ॥೧॥

ಯುಧಿಷ್ಠಿರ– ಎಲೈ ಕೃಷ್ಣನೇ, ಎಲ್ಲ ಕುರುಗಳಿಗೂ ನೀನು ಶ್ರೇಷ್ಠನಾದ ಸ್ನೇಹಿತನಾಗಿರುವವನು. ಎರಡು ಪಕ್ಷಗಳಿಗೂ ನೀನು ಸಂಬಂಧಿಯಾದವನು ಮತ್ತು ಪ್ರಿಯನಾದವನು.

ಪಾಂಡವೈರ್ಧಾರ್ತರಾಷ್ಟ್ರಾಣಾಂ ಪ್ರತಿಪಾದ್ಯಮನಾಮಯಮ್ ।
ಸಮರ್ಥಃ ಪ್ರಶಮಂ ಚೈಷಾಂ ಕರ್ತುಮರ್ಹಸಿ ಕೇಶವ ॥೨॥

ಪಾಂಡವರಾದ ನಾವು ಧೃತರಾಷ್ಟ್ರಪುತ್ರನಿಗೆ ಕ್ಷೇಮವನ್ನು ಮಾಡಬೇಕು. ಕೇಶವನೇ, ನೀನು ಅವರನ್ನು ಶಾಂತಗೊಳಿಸಲು ಸಮರ್ಥನಾಗಿದ್ದೀಯೆ. ನೀನು ಅದನ್ನು ಮಾಡಬೇಕು.

ತ್ವಮಿತಃ ಪುಂಡರೀಕಾಕ್ಷ ಸುಯೋಧನಮಮರ್ಷಣಮ್ ।
ಶಾಂತ್ಯರ್ಥಂ ಭ್ರಾತರಂ ಬ್ರೂಯಾ ಯದ್ವಾಚ್ಯಮಿಹ ಶತ್ರುಹನ್ ॥೩॥

ಎಲೈ ಪುಂಡರೀಕಾಕ್ಷನೇ, ಶತ್ರುಸಂಹಾರಕನೇ, ನೀನು ಇಲ್ಲಿಂದ ಕ್ರೋಧಶೀಲನಾದ ಸುಯೋಧನನ ಬಳಿಗೆ ಹೋಗಿ, ತಮ್ಮನಾದ ಅವನಿಗೆ ಶಾಂತಿಯ ಸಲುವಾಗಿ ಏನನ್ನು ಮಾತನಾಡಬೇಕೋ ಅದೆಲ್ಲವನ್ನೂ ಮಾತನಾಡುವವನಾಗು.

ತ್ವಯಾ ಧರ್ಮಾರ್ಥಯುಕ್ತಂ ಚೇದುಕ್ತಂ ಶಿವಮನಾಮಯಮ್ ।
ಹಿತಂ ನಾದಾಸ್ಯತೇ ಬಾಲೋ ದಿಷ್ಟಸ್ಯ ವಶಮೇಷ್ಯತಿ ।
ಧರ್ಮ್ಯಮಸ್ಮದ್ಧಿತಂ ಚೈವ ಕುರೂಣಾಂ ಯದನಾಮಯಮ್ ॥೪॥

ನೀನು ಆಡುವ ಕ್ಷೇಮಕರವಾದ, ಮಂಗಳವಾದ, ಧರ್ಮಾರ್ಥಯುಕ್ತವಾದ, ಧರ್ಮಕ್ಕೆ ಅನುಗುಣವಾದ, ನಮಗೆ ಹಿತವನ್ನು ಮಾಡುವ ಮತ್ತು ಕೌರವರಿಗೂ ಕ್ಷೇಮವನ್ನು ಮಾಡುವ ಮಾತುಗಳನ್ನು ಬಾಲಿಶತನದಿಂದ ಅವನು ಸ್ವೀಕರಿಸದಿದ್ದರೆ ವಿಧಿಸಂಕಲ್ಪಕ್ಕೆ ಒಳಗಾಗುವನು.

ಶ್ರೀವಾಸುದೇವಃ

ಏಷ ಯಾಸ್ಯಾಮಿ ರಾಜಾನಂ ಧೃತರಾಷ್ಟ್ರಮಭೀಪ್ಸಯಾ ॥೫॥

ಶ್ರೀವಾಸುದೇವ– ಧೃತರಾಷ್ಟ್ರನನ್ನು ಒಲಿಸುವ ಸಲುವಾಗಿ ಈಗ ನಾನು ಹೊರಡುವೆನು.

ವೈಶಂಪಾಯನಃ

ತತೋ ವ್ಯಪೇತೇ ತಮಸಿ ಸೂರ್ಯೇ ವಿಮಲ ಉದ್ಗತೇ ।
ಮೈತ್ರೇ ಮುಹೂರ್ತೇ ಸಂಪ್ರಾಪ್ತೇ ಋದ್ಧಾರ್ಚಿಷಿ ದಿವಾಕರೇ ॥೬॥

ಕೌಮುದೇ ಮಾಸಿ ರೇವತ್ಯಾಂ ಶರದಂತೇ ಹಿಮಾಗತೇ ।
ಸ್ಫೀತಸಸ್ಯಮುಖೇ ಕಾಲೇ ಕಲ್ಯಃ ಸತ್ವವತಾಂ ವರಃ ॥೭॥

ಮಂಗಲ್ಯಾಃ ಪುಣ್ಯನಿರ್ಘೋಷಾ ವಾಚಃ ಶೃಣ್ವಂಶ್ಚ ಸೂನೃತಾಃ ।
ಬ್ರಾಹ್ಮಣಾನಾಂ ಪ್ರತೀತಾನಾಮೃಷೀಣಾಮಿವ ವಾಸವಃ ॥೮॥

ಕೃತ್ವಾ ಪೌರ್ವಾಹ್ಣಿಕಂ ಕೃತ್ಯಂ ಸ್ನಾತಃ ಶುಚಿರಲಂಕೃತಃ ।
ಉಪತಸ್ಥೇ ವಿವಸ್ವಂತಂ ಪಾವಕಂ ಚ ಜನಾರ್ದನಃ ॥೯॥

ವೈಶಂಪಾಯನ– ಅನಂತರ ಕತ್ತಲೆಯು ಕಳೆದು ಸೂರ್ಯನು ಉದಯಿಸಿ, ಕ್ರಮವಾಗಿ ಸಮೃದ್ಧಕಿರಣಗಳಿಂದ ಕೂಡಿ ಸ್ನೇಹಕರವಾದ ಮುಹೂರ್ತವು ಒದಗುತ್ತಿರಲು ಕಾರ್ತಿಕಮಾಸದಲ್ಲಿ ಶರದೃತುವಿನ ಕೊನೆಯಲ್ಲಿ ಹೇಮಂತ ಋತುವು ಸನ್ನಿಹಿತವಾಗುತ್ತಿರಲು, ಚಂದ್ರನು ರೋಹಿಣೀ ನಕ್ಷತ್ರದಲ್ಲಿ ಇರುತ್ತಿರಲು, ಸಸ್ಯಗಳೆಲ್ಲಾ ಸಮೃದ್ಧವಾಗಿ ಸುಖವಾಗಿರಲು, ಮಂಗಳಪ್ರದನೂ, ಬಲಿಷ್ಠರಲ್ಲಿ ಶ್ರೇಷ್ಠನೂ ಆದ ಕೃಷ್ಣನು ಮಂಗಳಕರವಾದ, ಪುಣ್ಯಮಯವಾದ ಒಳ್ಳೆಯ ಮಾತುಗಳನ್ನು ಬ್ರಾಹ್ಮಣರ ಮುಖದಿಂದ ಇಂದ್ರನು ಋಷಿಗಳ ಮುಖದಿಂದ ಕೇಳುವಂತೆ ಕೇಳುವವನಾಗಿ, ಸ್ನಾನವನ್ನು ಮಾಡಿ, ಶುಚಿಯಾಗಿ ಅಲಂಕೃತನಾಗಿ ಪ್ರಾತಃ ಆಹ್ನಿಕವನ್ನು ಮಾಡಿ ಸೂರ್ಯನ ಮತ್ತು ಅಗ್ನಿಯ ಉಪಸ್ಥಾನವನ್ನು ಮಾಡಿದನು.

ವೃಷಭಂ ಪೃಷ್ಠ ಆಲಭ್ಯ ಬ್ರಾಹ್ಮಣಾನಭಿವಾದ್ಯ ಚ ।
ಅಗ್ನಿಂ ಪ್ರದಕ್ಷಿಣಂ ಕೃತ್ವಾ ಪಶ್ಯನ್ ಕಲ್ಯಾಣಮಗ್ರತಃ ॥೧೦॥

ತತ್ ಪ್ರತಿಜ್ಞಾಯ ವಚನಂ ಪಾಂಡವಸ್ಯ ಜನಾರ್ದನಃ ।
ಶಿನೇರ್ನಪ್ತಾರಮಾಸೀನಮಭ್ಯಭಾಷತ ಸಾತ್ಯಕಿಮ್ ॥೧೧॥

ರಥ ಆರೋಪ್ಯತಾಂ ಶಂಖಶ್ಚಕ್ರಂ ಚ ಗದಯಾ ಸಹ ।
ಉಪಾಸಂಗಾಶ್ಚ ಶಕ್ತಯಶ್ಚ ಸರ್ವಪ್ರಹರಣಾನಿ ಚ ॥೧೨॥

ವೃಷಭದ ಬಾಲವನ್ನು ಸ್ಪರ್ಶಮಾಡಿ, ಬ್ರಾಹ್ಮಣರಿಗೆ ನಮಸ್ಕಾರವನ್ನು ಮಾಡಿ, ಅಗ್ನಿಗೆ ಪ್ರದಕ್ಷಿಣೆಯನ್ನು ಮಾಡಿ, ಮುಂದೆ ಇಟ್ಟಿರುವ ಮಂಗಳವಸ್ತುಗಳನ್ನು ನೋಡಿ, ಜನಾರ್ದನನು ಪಾಂಡವನಾದ ಧರ್ಮರಾಜನ ಮಾತನ್ನು ನಡೆಸುವುದಾಗಿ ಪ್ರತಿಜ್ಞೆಯನ್ನು ಮಾಡಿ, ಶೈನೇಯನಾದ ಸಾತ್ಯಕಿಯನ್ನು ಕುರಿತು ರಥದಲ್ಲಿ ಶಂಖ-ಚಕ್ರಗಳನ್ನೂ, ಗದೆಯನ್ನೂ, ಬತ್ತಳಿಕೆಯನ್ನೂ, ಶಕ್ತ್ಯಾಯುಧಗಳನ್ನೂ ಮತ್ತು ಉಳಿದ ಆಯುಧಗಳನ್ನೂ ತುಂಬುವವರಾಗಿ ಎಂದು ಮಾತನಾಡಿದನು.

ದುರ್ಯೋಧನೋ ಹಿ ದುಷ್ಟಾತ್ಮಾ ಕರ್ಣಶ್ಚ ಸಹಸೌಬಲಃ ।
ನ ಚ ಶತ್ರುರವಜ್ಞೇಯೋ ದುರ್ಬಲೋಽಪಿ ಬಲೀಯಸಾ ॥೧೩॥

ದುರ್ಯೋಧನನು, ಕರ್ಣನು ಮತ್ತು ಶಕುನಿಯು ದುಷ್ಟರಾದವರು. ಬಲಿಷ್ಠನಾದವನು ದುರ್ಬಲನಾದ ಶತ್ರುಗಳ ವಿಷಯದಲ್ಲಿಯೂ ಉದಾಸೀನ ಮಾಡಬಾರದು (ಎಂದು ಹೇಳಿದನು).

ವೈಶಂಪಾಯನಃ

ತತಸ್ತನ್ಮತಮಾಜ್ಞಾಯ ಕೇಶವಸ್ಯ ಪುರಸ್ಸರಾಃ ।
ಪ್ರಸಸ್ರುರ್ಯೋಜಯಿಷ್ಯಂತೋ ರಥಂ ಚಕ್ರಗದಾಭೃತಃ ॥೧೪॥

ವೈಶಂಪಾಯನ– ಅನಂತರ ಚಕ್ರಗದಾಧಾರಿಯಾದ ಕೇಶವನ ಸೇವಕರು ರಥದಲ್ಲಿ ಎಲ್ಲಾ ಆಯುಧಗಳನ್ನೂ ಇಡಲು ಹೊರಟರು.

ತಂ ದೀಪ್ತಮಿವ ಕಾಲಾಗ್ನಿಮಾಕಾಶಗಮಿವಾಧ್ವಗಮ್ ।
ಸೂರ್ಯಚಂದ್ರಪ್ರಕಾಶಾಭ್ಯಾಂ ಚಕ್ರಾಭ್ಯಾಂ ಸಮಲಂಕೃತಮ್ ॥೧೫॥

ಅರ್ಧಚಂದ್ರೈಶ್ಚ ಚಂದ್ರೈಶ್ಚ ಮತ್ಸ್ಯೈಶ್ಚ ಮೃಗಪಕ್ಷಿಭಿಃ ।
ಪುಷ್ಪೈಶ್ಚ ವಿವಿಧೈಶ್ಚಿತ್ರೈರ್ಮಣಿರತ್ನೈಶ್ಚ ಸರ್ವಶಃ ॥೧೬॥

ತರುಣಾದಿತ್ಯಸಂಕಾಶಂ ಬೃಹಂತಂ ಚಾರುದರ್ಶನಮ್ ।
ಮಣಿಹೇಮವಿಚಿತ್ರಾಂಗಂ ಸುಧ್ವಜಂ ಸುಪತಾಕಿನಮ್ ॥೧೭॥

ಸೂಪಸ್ಕರಮನಾಧೃಷ್ಯಂ ವೈಯಾಘ್ರಪರಿವಾರಣಮ್ ।
ಯಶೋಘ್ನಂ ಪ್ರತ್ಯಮಿತ್ರಾಣಾಂ ಬಂಧೂನಾಂ ನಂದಿವರ್ಧನಮ್ ॥೧೮॥

ವಾಜಿಭಿಃ ಸೈನ್ಯಸುಗ್ರೀವಮೇಘಪುಷ್ಪಬಲಾಹಕೈಃ ।
ಸೂತಃ ಸಂಪಾದಯಾಂಚಕ್ರೇ ಸಂಪನ್ನೈಃ ಸರ್ವಸಂಪದಾ ॥೧೯॥

ಕಾಲಾಗ್ನಿಯಂತೆ ದೀಪ್ತವಾಗಿದ್ದ, ಆಕಾಶದಲ್ಲಿ ಹೋದಂತೆ ಭೂಮಿಯಲ್ಲಿ ಹೋಗುವ, ಸೂರ್ಯ-ಚಂದ್ರರ ಪ್ರಕಾಶವನ್ನುಳ್ಳ ಚಕ್ರಗಳಿಂದ ಕೂಡಿದ, ಅರ್ಧಚಂದ್ರಗಳಿಂದಲೂ, ಪೂರ್ಣಚಂದ್ರಗಳಿಂದಲೂ, ಮತ್ಸ್ಯಗಳಿಂದಲೂ, ಮೃಗ-ಪಕ್ಷಿಗಳಿಂದಲೂ, ಪುಷ್ಪಗಳಿಂದಲೂ, ಅನೇಕವಿಧವಾದ ಮಣಿಗಳಿಂದಲೂ ಮತ್ತು ರತ್ನಗಳಿಂದಲೂ ಎಲ್ಲಕಡೆಯಲ್ಲಿಯೂ ಚೆನ್ನಾಗಿ ಅಲಂಕೃತವಾದ, ಉದಯಿಸಿದ ಸೂರ್ಯನ ಪ್ರಕಾಶವನ್ನು ಹೊಂದಿದ್ದ, ದೊಡ್ಡದೂ ಮತ್ತು ನೋಡಲು ಸುಂದರವೂ ಆದ, ಮಣಿಸುವರ್ಣಗಳಿಂದ ಶೋಭಿಸುವ, ದೇದೀಪ್ಯವಾದ ಅಂಗಗಳುಳ್ಳ, ಒಳ್ಳೆಯ ಧ್ವಜ ಮತ್ತು ಪತಾಕೆಗಳಿಂದ ಕೂಡಿದ, ಒಳ್ಳೆಯ ಉಪಕರಣಗಳಿಂದ ಕೂಡಿದ, ಯಾರಿಂದಲೂ ಸೋಲಿಸಲ್ಪಡದ, ವ್ಯಾಘ್ರಚರ್ಮದಿಂದ ಸುತ್ತಲೂ ಆವೃತ್ತವಾದ, ಶತ್ರುಗಳ ಯಶಸ್ಸನ್ನು ನಾಶಮಾಡುವ, ಬಾಂಧವರ ಸಂತೋಷವನ್ನು ಅಭಿವೃದ್ಧಿಗೊಳಿಸುವ, ಎಲ್ಲ ಸಂಪತ್ತುಗಳಿಂದಲೂ ಕೂಡಿದ, ಸೈನ್ಯ ಸುಗ್ರೀವ ಮೇಘಪುಷ್ಪಬಲಾಹಕ ಕುದುರೆಗಳಿಂದ ಹೂಡಲ್ಪಟ್ಟ ರಥವನ್ನು ಸೂತನು ಸಿದ್ಧಗೊಳಿಸಿದನು.

ಮಹಿಮಾನಂ ಚ ಕೃಷ್ಣಸ್ಯ ಭೂಯ ಏವಾಭಿವರ್ಧಯನ್ ।
ಸುಘೋಷಃ ಪತಗೇಂದ್ರೇಣ ಧ್ವಜೇನ ಯುಯಜೇ ರಥಃ ॥೨೦॥

ಕೃಷ್ಣನ ಮಹಿಮೆಯನ್ನು ಪುನಃ ಹೆಚ್ಚಿಸುವುದಾಗಿ ಒಳ್ಳೆಯ ಘೋಷವುಳ್ಳ ಗರುಡನು ರಥದ ಧ್ವಜದಲ್ಲಿ ಯೋಜಿಸಲ್ಪಟ್ಟನು.

ತಂ ಮೇರುಶಿಖರಪ್ರಖ್ಯಂ ಮೇಘದುಂದುಭಿನಿಸ್ವನಮ್ ।
ಆರುರೋಹ ರಥಂ ಶೌರಿರ್ವಿಮಾನಮಿವ ಪುಣ್ಯಕೃತ್ ॥೨೧॥

ಪುಣ್ಯವನ್ನು ಸಂಪಾದಿಸಿದವನು ವಿಮಾನವನ್ನು ಏರುವಂತೆ ಕೃಷ್ಣನು ಮೇರುಶಿಖರದಂತಿದ್ದ, ಮೇಘದುಂದುಭಿಗಳ ಸ್ವರದಿಂದ ಕೂಡಿದ ಆ ರಥವನ್ನು ಏರಿದನು.

ತತಃ ಸಾತ್ಯಕಿಮಾರೋಪ್ಯ ಪ್ರಯಯೌ ಪುರುಷೋತ್ತಮಃ ।
ಪೃಥಿವೀಂ ಚಾಂತರಿಕ್ಷಂ ಚ ರಥಘೋಷೇಣ ನಾದಯನ್ ॥೨೨॥

ಅನಂತರ ಪುರುಷೋತ್ತಮನಾದ ಅವನು ಸಾತ್ಯಕಿಯನ್ನು ರಥದಲ್ಲಿ ಕುಳ್ಳಿರಿಸಿಕೊಂಡು, ಭೂಮಿಯನ್ನು ಮತ್ತು ಅಂತರಿಕ್ಷವನ್ನು ರಥಘೋಷದಿಂದ ಪ್ರತಿಧ್ವನಿಸುತ್ತಾ ಹೊರಟನು.

ವ್ಯಪೇತಾಭ್ರಘನಃ ಕಾಲಃ ಕ್ಷಣೇನ ಸಮಜಾಯತ ।
ಶಿವಶ್ಚಾನುವವೌ ವಾಯುಃ ಪ್ರಶಾಂತಮಭವದ್ ರಜಃ ॥೨೩॥

ಒಂದುಕ್ಷಣದಲ್ಲಿ ಆಕಾಶವು ಬಿಳಿಯ ಮತ್ತು ಕಪ್ಪು ಮೋಡಗಳಿಂದ ರಹಿತವಾಯಿತು. ವಾಯುವು ಮಂಗಳಕರವಾಗಿ ಬೀಸಿತು. ಧೂಳು ಅಡಗಿತು.

ಪ್ರದಕ್ಷಿಣಾನುಲೋಮಾಶ್ಚ ಮಂಗಲ್ಯಾ ಮೃಗಪಕ್ಷಿಣಃ ।
ಪ್ರಯಾಣೇ ವಾಸುದೇವಸ್ಯ ಬಭೂವುರನುಯಾಯಿನಃ ॥೨೪॥

ವಾಸುದೇವನು ಪ್ರಯಾಣ ಮಾಡುವಾಗ ಮಂಗಳಕರವಾದ ಮೃಗ-ಪಕ್ಷಿಗಳು ಅವನ ಬಲಭಾಗದಲ್ಲಿ ಅನುಕೂಲವಾಗಿ ಬಂದು ಹಿಂದಿನಿಂದ ಅವನನ್ನು ಹಿಂಬಾಲಿಸಿದವು.

ಮಂಗಲ್ಯಾರ್ಥಪ್ರದೈಃ ಶಬ್ದೈರನ್ವವರ್ತಂತ ಸರ್ವಶಃ ।
ಸಾರಸಾಃ ಶತಪತ್ರಾಶ್ಚ ಹಂಸಾಶ್ಚ ಮಧುಸೂದನಮ್ ॥೨೫॥

ಸಾರಸ, ಚಕ್ರವಾಕ, ಹಂಸ ಮೊದಲಾದ ಪಕ್ಷಿಗಳು ಮಂಗಲಾರ್ಥವನ್ನು ಸೂಚಿಸುವ ತಮ್ಮ ನಾದಗಳಿಂದ ಎಲ್ಲ ಕಡೆಗಳಿಂದಲೂ ಮಧುಸೂದನನನ್ನು ಹಿಂಬಾಲಿಸಿದವು.

ಮಂತ್ರಾಹುತಿಮಹಾಹೋಮೈರ್ಹೂಯಮಾನಶ್ಚ ಪಾವಕಃ ।
ಪ್ರದಕ್ಷಿಣಶಿಖೋ ಭೂತ್ವಾ ವಿಧೂಮಃ ಸಮಪದ್ಯತ ॥೨೬॥

ಮಂತ್ರಸಹಿತವಾದ ಮಹಾಹೋಮಗಳಲ್ಲಿ ಹೋಮಮಾಡಲ್ಪಟ್ಟ ಅಗ್ನಿಯು ಪ್ರದಕ್ಷಿಣಾಕಾರದ ಜ್ವಾಲೆಯುಳ್ಳವನಾಗಿ ಧೂಮರಹಿತನಾಗಿ ಸಿದ್ಧನಾದನು.

ವಸಿಷ್ಠೋ ವಾಮದೇವಶ್ಚ ಭೂರಿದ್ಯುಮ್ನೋ ಗಯಃ ಕ್ರಥಃ ।
ಶುಕನಾರದವಾಲ್ಮೀಕಾ ಮರುತ್ತಃ ಕುಶಿಕೋ ಭೃಗುಃ ॥೨೭॥

ದೇವಬ್ರಹ್ಮರ್ಷಯಶ್ಚೈವ ಕೃಷ್ಣಂ ಯದುಸುಖಾವಹಮ್ ।
ಪ್ರದಕ್ಷಿಣಮವರ್ತಂತ ಸಹಿತಾ ವಾಸವಾನುಜಮ್ ॥೨೮॥

ವಸಿಷ್ಠ, ವಾಮದೇವ, ಭೂರಿದ್ಯುಮ್ನ, ಗಯ, ಕ್ರಥ, ಸುಖ, ನಾರದ, ವಾಲ್ಮೀಕ, ಮರುತ್ತ, ಕುಶಿಕ, ಭೃಗು, ದೇವರ್ಷಿಗಳು ಮತ್ತು ಬ್ರಹ್ಮರ್ಷಿಗಳು ಯದುಕುಲಕ್ಕೆ ಸುಖವನ್ನು ನೀಡುವ, ಇಂದ್ರನ ತಮ್ಮನಾದ ಕೃಷ್ಣನ ಬಲಭಾಗದಲ್ಲಿ ಒಟ್ಟಿಗೆ ಸೇರಿದರು.

ಏವಮೇತೈರ್ಮಹಾಭಾಗೈರ್ಮಹರ್ಷಿಗಣಸಾಧುಭಿಃ ।
ಪೂಜಿತಃ ಪ್ರಯಯೌ ಕೃಷ್ಣಃ ಕುರೂಣಾಂ ಸದನಂ ಪ್ರತಿ ॥೨೯॥

ಹೀಗೆ ಈ ಮಹಾನುಭಾವರಾದ, ಸಜ್ಜನರಾದ ಮಹರ್ಷಿಗಳ ಗಣದಿಂದ ಪೂಜಿತನಾಗಿ ಕೃಷ್ಣನು ಕುರುಗಳ ಪಟ್ಟಣವನ್ನು ಕುರಿತು ಹೊರಟನು.

ದೇವತಾಭ್ಯೋ ನಮಸ್ಕೃತ್ಯ ಬ್ರಾಹ್ಮಣಾನ್ ಸ್ವಸ್ತಿವಾಚ್ಯ ಚ ।
ಪ್ರಯಯೌ ಪುಂಡರೀಕಾಕ್ಷ ಸಾತ್ಯಕೇನ ಸಹಾಚ್ಯುತಃ ॥೩೦॥

ದೇವತೆಗಳನ್ನು ನಮಸ್ಕರಿಸಿ, ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸಿಕೊಂಡು, ಸಾತ್ಯಕಿಯ ಜೊತೆಯಲ್ಲಿ ಪುಂಡರೀಕಾಕ್ಷನಾದ ಅಚ್ಯುತನು ಹೊರಟನು.

ತಂ ಪ್ರಯಾಂತಮನುಪ್ರಾಯಾತ್ ಕುಂತೀಪುತ್ರೋ ಯುಧಿಷ್ಠಿರಃ ।
ಭೀಮಸೇನಾರ್ಜುನೌ ಚೋಭೌ ಮಾದ್ರೀಪುತ್ರೌ ಚ ಪಾಂಡವೌ ॥೩೧॥

ಚೇಕಿತಾನಶ್ಚ ವಿಕ್ರಾಂತೋ ಧೃಷ್ಟಕೇತುಶ್ಚ ಚೇದಿಪಃ ।
ದ್ರುಪದಃ ಕಾಶಿರಾಜಶ್ಚ ಶಿಖಂಡೀ ಚ ಮಹಾರಥಃ ॥೩೨॥

ಕುಂತೀಪುತ್ರನಾದ ಯುಧಿಷ್ಠಿರ, ಭೀಮಸೇನಾರ್ಜುನರು, ಪಾಂಡವರಾದ ನಕುಲ-ಸಹದೇವರು, ಪರಾಕ್ರಮಶಾಲಿಯಾದ ಚೇಕಿತಾನ, ಚೇದಿರಾಜನಾದ ಧೃಷ್ಟಕೇತು, ದ್ರುಪದ, ಕಾಶಿರಾಜ, ಮಹಾರಥನಾದ ಶಿಖಂಡಿ ಎಲ್ಲರೂ ಪ್ರಯಾಣ ಮಾಡುವ ಕೃಷ್ಣನ ಹಿಂದೆ ಹೋದರು.

ಧೃಷ್ಟದ್ಯುಮ್ನಃ ಸಪುತ್ರಶ್ಚ ವಿರಾಟಃ ಕೇಕಯೈಃ ಸಹ ।
ಸಂಸಾಧನಾರ್ಥಂ ಪ್ರಯಯುಃ ಕ್ಷತ್ರಿಯಾಃ ಕ್ಷತ್ರಿಯರ್ಷಭಮ್ ॥೩೩॥

ಧೃಷ್ಟದ್ಯುಮ್ನ, ತನ್ನ ಮಕ್ಕಳಿಂದ ಕೂಡಿದ ವಿರಾಟ, ಕೇಕಯರ ಜೊತೆಯಲ್ಲಿ ಸೇರಿದ ಕ್ಷತ್ರಿಯರು ಎಲ್ಲರೂ ಕ್ಷತ್ರಿಯವೃಷಭನಾದ ಕೃಷ್ಣನನ್ನು ಬೀಳ್ಕೊಡುವ ಸಲುವಾಗಿ ಅವನನ್ನು ಹಿಂಬಾಲಿಸಿದರು.

ತತೋಽನುವ್ರಜ್ಯ ಗೋವಿಂದಂ ಧರ್ಮರಾಜೋ ಯುಧಿಷ್ಠಿರಃ ।
ರಾಜ್ಞಾಂ ಸಕಾಶೇ ದ್ಯುತಿಮಾನುವಾಚೇದಂ ವಚಸ್ತದಾ ॥೩೪॥

ಧರ್ಮರಾಜನೂ, ಕಾಂತಿಯುಕ್ತನೂ ಆದ ಯುಧಿಷ್ಠಿರನು ಗೋವಿಂದನನ್ನು ಹಿಂಬಾಲಿಸಿ, ರಾಜರ ಎದುರಿನಲ್ಲಿ ಆಗ ಈ ಮಾತುಗಳನ್ನು ಆಡಿದನು.

ಯೋ ವೈ ನ ಕಾಮಾನ್ನ ಭಯಾನ್ನ ಲೋಭಾನ್ನಾರ್ಥಕಾರಣಾತ್ ।
ಅನ್ಯಾಯಮನುವರ್ತೇತ ಸ್ಥಿರಬುದ್ಧಿರಲೋಲುಪಃ ॥೩೫॥

ಧರ್ಮಜ್ಞೋ ಧೃತಿಮಾನ್ ಪ್ರಾಜ್ಞಃ ಸರ್ವಭೂತೇಷು ಕೇಶವಃ ।
ಈಶ್ವರಃ ಸರ್ವಭೂತಾನಾಂ ದೇವದೇವಃ ಪ್ರತಾಪವಾನ್ ॥೩೬॥

ತಂ ಸರ್ವಗುಣಸಂಪನ್ನಂ ಶ್ರೀವತ್ಸಕೃತಲಕ್ಷಣಮ್ ।
ಸಂಪರಿಷ್ವಜ್ಯ ಗೋವಿಂದಂ ಸಂದೇಷ್ಟುಮುಪಚಕ್ರಮೇ ॥೩೭॥

ಯಾವನು ಕಾಮದಿಂದಾಗಲೀ, ಭಯದಿಂದಾಗಲೀ, ಲೋಭದಿಂದಾಗಲೀ, ದ್ರವ್ಯದ ಆಸೆಯಿಂದಾಗಲೀ ಅನ್ಯಾಯವನ್ನು ಅನುಸರಿಸುವುದಿಲ್ಲವೋ, ಯಾವನು ಸ್ಥಿರಬುದ್ಧಿಯುಳ್ಳವನೋ, ವಿಷಯಲೋಲುಪನಲ್ಲವೋ, ಧರ್ಮಜ್ಞನೋ, ಧೈರ್ಯಶಾಲಿಯೋ, ಪ್ರಾಜ್ಞನೋ, ಸರ್ವಭೂತದಯಾಪರನೋ, ಸರ್ವಭೂತಗಳಿಗೆ ಒಡೆಯನೋ, ದೇವದೇವನೋ, ಪ್ರತಾಪಶಾಲಿಯೋ, ಶ್ರೀವತ್ಸಭೂಷಣನೋ ಅಂತಹ ಸರ್ವಗುಣಸಂಪನ್ನನಾದ ಗೋವಿಂದನನ್ನು ಆಲಿಂಗಿಸಿ ಸಂದೇಶವನ್ನು ಕೊಡಲು ಆರಂಭಿಸಿದನು.

ಯಾ ಸಾ ಬಾಲ್ಯಾತ್ ಪ್ರಭೃತ್ಯಸ್ಮಾನ್ ಪರ್ಯವರ್ಧಯತಾಬಲಾ ।
ಉಪವಾಸತಪಃಶೀಲಾ ಗುರೂಣಾಂ ಪೂಜನೇ ರತಾ ॥೩೮॥

ದೇವತಾತಿಥಿಪೂಜಾಸು ಭೃತ್ಯಾನಾಂ ಪೋಷಣೇ ರತಾ ।
ವತ್ಸಲಾ ಪ್ರಿಯಪುತ್ರಾ ಚ ಮಾತಾऽಸ್ಮಾಕಂ ಜನಾರ್ದನ ॥೩೯॥

ಸುಯೋಧನಭಯಾದ್ ಯಾ ನಃ ಸ್ಥಾಪಿತಾऽಮಿತ್ರಕರ್ಶನ ।
ಮಹತೋ ಮೃತ್ಯುಸಂಬಾಧಾದ್ ದುಸ್ತರಾನ್ನೌರಿವಾರ್ಣವಾತ್ ॥೪೦॥

ಅಸ್ಮತ್ಕೃತೇ ಚ ಸತತಂ ಯಯಾ ದುಃಖಾನಿ ಮಾಧವ ।
ಅನುಭೂತಾನ್ಯದುಃಖಾರ್ಹಾಂ ತಾಂ ಸ್ಮ ಪೃಚ್ಛೇರನಾಮಯಮ್ ॥೪೧॥

ಎಲೈ ಜನಾರ್ದನನೇ, ಶತ್ರುಕರ್ಶನನೇ, ಮಾಧವನೇ, ಯಾವ ನಮ್ಮ ತಾಯಿಯು ಬಾಲ್ಯದಿಂದಲೂ ನಮ್ಮನ್ನು ಪೋಷಿಸಿದಳೋ, ಉಪವಾಸ ತಪಶ್ಶೀಲಳಾಗಿ ಹಿರಿಯರ ಪೂಜೆಯಲ್ಲಿ ರತಳಾಗಿದ್ದಾಳೆಯೋ, ದೇವತಾತಿಥಿಗಳ ಪೂಜೆಯಲ್ಲಿಯೂ, ಸೇವಕರ ರಕ್ಷಣೆಯಲ್ಲಿಯೂ ನಿರತಳಾಗಿದ್ದಾಳೆಯೋ, ವಾತ್ಸಲ್ಯವುಳ್ಳವಳೋ, ಪುತ್ರಸ್ನೇಹವುಳ್ಳವಳೂ ಆಗಿದ್ದಾಳೆಯೋ, ಯಾರನ್ನು ದುರ್ಯೋಧನನಿಂದ ಉಂಟಾಗಬಹುದಾದ ದೊಡ್ಡ ಮೃತ್ಯುಭಯದಿಂದ ರಕ್ಷಿಸಲು ಸಮುದ್ರವನ್ನು ದಾಟುವ ನೌಕೆಯನ್ನು ಸ್ಥಾಪಿಸಿದಂತೆ ನಾವು ನಗರದಲ್ಲಿಯೇ ಉಳಿಸಿದೆವೋ, ನಮ್ಮ ಸಲುವಾಗಿ ದುಃಖಕ್ಕೆ ಅರ್ಹಳಲ್ಲದ ಯಾವಳು ಅನೇಕ ದುಃಖವನ್ನು ಅನುಭವಿಸಿದಳೋ ಅವಳ ಕುಶಲವನ್ನು ಕೇಳುವವನಾಗು.

ಭೃಶಮಾಶ್ವಾಸಯೇಶ್ಚೈನಾಂ ಪುತ್ರಶೋಕಪರಿಪ್ಲುತಾಮ್ ।
ಅಭಿವಾದ್ಯ ಸ್ವಜೇಥಾಸ್ತ್ವಂ ಪಾಂಡವಾನ್ ಪರಿಕೀರ್ತಯನ್ ॥೪೨॥

ಪುತ್ರಶೋಕದಿಂದ ಬಳಲಿದ ಅವಳಿಗೆ ನಮಸ್ಕಾರವನ್ನು ಮಾಡಿ, ಅವಳನ್ನು ಆಲಿಂಗಿಸಿ, ಪಾಂಡವರ ಕ್ಷೇಮವನ್ನು ಹೇಳುತ್ತಾ ಅವಳನ್ನು ಸಮಾಧಾನಗೊಳಿಸುವವನಾಗು.

ಊಢಾತ್ಪ್ರಭೃತಿ ದುಃಖಾನಿ ಸ್ವಸುತಾನಾಮರಿಂದಮ ।
ನಿಕಾರಾನತದರ್ಹಾ ಚ ಪಶ್ಯಂತೀ ದುಃಖಮಶ್ನುತೇ ॥೪೩॥

ಎಲೈ ಅರಿಂದಮನೇ, ವಿವಾಹವಾದ ದಿನದಿಂದಲೂ ಅವಮಾನಕ್ಕೆ ಅರ್ಹಳಲ್ಲದ ಅವಳು ತನ್ನ ಮಕ್ಕಳ ಕ್ಷೇಮವನ್ನು ಚಿಂತಿಸಿ, ತನಗೆ ಉಂಟಾದ ಅಪಮಾನವನ್ನು ನೋಡಿ ದುಃಖವನ್ನು ಪಡುತ್ತಿದ್ದಾಳೆ.

ಅಪಿ ಜಾತು ಸ ಕಾಲಃ ಸ್ಯಾತ್ ಕೃಷ್ಣಾಹಂ ಭೃಶದುಃಖಿತಾಮ್ ।
ಯದೇನಾಂ ಮಾತರಂ ಕ್ಲಿಷ್ಟಾಂ ಸುಖೇ ದಧ್ಯಾಮರಿಂದಮ ॥೪೪॥

ಎಲೈ ಕೃಷ್ಣನೇ, ಅರಿಂದಮನೇ, ಕ್ಲೇಶಕ್ಕೆ ಒಳಗಾಗಿ ಬಹಳ ದುಃಖವನ್ನು ಅನುಭವಿಸುತ್ತಿರುವ ನಮ್ಮ ತಾಯಿಯನ್ನು ಎಂದಾದರೂ ಸುಖದಲ್ಲಿಡುವ ಕಾಲವು ನನಗೆ ಒದಗಿ ಬರುತ್ತದೆಯೇ?

ಪ್ರವ್ರಜತ್ಯನ್ವಧಾವತ್ ಸಾ ಕೃಪಣಾ ಪುತ್ರಗರ್ಧಿನೀ ।
ರುದತೀಮಪಹಾಯೈನಾಮಗಚ್ಛಾಮೈವ ಯದ್ವನಮ್ ॥೪೫॥

ಮಕ್ಕಳ ಮೇಲೆ ಸ್ನೇಹವುಳ್ಳವಳೂ, ಕೃಪಣಳೂ ಆದ ಅವಳು ನಾವು ಕಾಡಿಗೆ ಹೋಗುವಾಗ ಅಳುತ್ತಾ ನಮ್ಮ ಹಿಂದೆ ಓಡಿಬಂದಳು. ಆದರೆ ನಾವು ಅವಳನ್ನು ಬಿಟ್ಟೇ ಕಾಡಿಗೆ ಹೋದೆವು.

ಸಾ ನೂನಂ ಮ್ರಿಯತೇ ದುಃಖೈಃ ಸಾ ಚೇಜ್ಜೀವತಿ ಕೇಶವ ।
ಪೃಥಾ ಪುತ್ರಾಧಿಭಿರ್ಗಾಢಮಾರ್ಯಾ ಮಾತಾ ಚ ಸತ್ಕೃತಾ ॥೪೬॥

ಅಭಿವಾದ್ಯಾऽಥ ಸಾ ಕುಂತೀ ತ್ವಯಾ ಮದ್ವಚನಾದ್ ವಿಭೋ ।
ಸಂಕ್ಷಮ್ಯಾಥ ನಮಸ್ಕಾರ್ಯಾ ಸರ್ವೇಷಾಂ ವಚನಾದಪಿ ॥೪೭॥

ಖಂಡಿತವಾಗಿ ಅವಳು ದುಃಖಗಳಿಂದ ಮರಣವನ್ನು ಹೊಂದುತ್ತಾಳೆ. ಎಲೈ ಕೇಶವನೇ, ಮಕ್ಕಳ ಚಿಂತೆಯಿಂದ ಗಾಢವಾಗಿ ಬಳಲಿದ, ನಮ್ಮಿಂದ ಸತ್ಕೃತಳಾದ, ಪೂಜ್ಯಳಾದ ತಾಯಿಯಾದ ನಮ್ಮ ಕುಂತಿಯು ಬದುಕಿದ್ದರೆ ಎಲೈ ವಿಭುವೇ, ನನ್ನ ಮಾತುಗಳಂತೆ ಅವಳಿಗೆ ನಮಸ್ಕಾರವನ್ನು ಮಾಡುವವನಾಗು ಮತ್ತು ಅವಳನ್ನು ಸಮೀಪಿಸಿ ಎಲ್ಲರ ಮಾತಿನಂತೆಯೂ ಸಹ ಅವಳಿಗೆ ನಮಸ್ಕಾರವನ್ನು ಮಾಡುವವನಾಗು.

ಧೃತರಾಷ್ಟ್ರಂ ಚ ಕೌರವ್ಯಂ ರಾಜಾನಂ ಚ ವಯೋಧಿಕಮ್ ।
ಭೀಷ್ಮಂ ದ್ರೋಣಂ ಕೃಪಂ ಚೈವ ಮಹಾರಾಜಂ ಚ ಬಾಹ್ಲಿಕಮ್ ॥೪೮॥

ದ್ರೌಣಿಂ ಚ ಸೋಮದತ್ತಂ ಚ ಸರ್ವಾಂಶ್ಚ ಭರತಾನ್ ಪ್ರತಿ ।
ಯಥಾವಯೋ ಯಥಾಸ್ಥಾನಂ ಪೂಜಯಸ್ವ ಜನಾರ್ದನ ॥೪೯॥

ಎಲೈ ಜನಾರ್ದನನೇ, ಕೌರವನೂ, ವಯೋವೃದ್ಧನೂ ಆದ ಧೃತರಾಷ್ಟ್ರರಾಜ, ಭೀಷ್ಮ ದ್ರೋಣ ಕೃಪ ಬಾಹ್ಲಿಕಮಹಾರಾಜ ಅಶ್ವತ್ಥಾಮ ಸೋಮದತ್ತ ಮತ್ತು ಎಲ್ಲಾ ಭರತರನ್ನೂ ಅವರ ವಯಸ್ಸಿಗೆ ಮತ್ತು ಅವರ ಸ್ಥಾನಕ್ಕೆ ಅನುಗುಣವಾಗಿ ಪೂಜಿಸುವವನಾಗು.

ವಿದುರಂ ಚ ಮಹಾಪ್ರಾಜ್ಞಂ ಕುರೂಣಾಂ ಮಂತ್ರಧಾರಿಣಮ್ ।
ಅಗಾಧಬುದ್ಧಿಂ ಧರ್ಮಜ್ಞಂ ಸ್ವಜೇಥಾ ಮಧುಸೂದನ ॥೫೦॥

ಎಲೈ ಮಧುಸೂದನನೇ, ಕುರುಗಳ ಮಂತ್ರಿಯಾದ ಮಹಾಪ್ರಾಜ್ಞನಾದ ಅಗಾಧಬುದ್ಧಿಯುಳ್ಳ ಧರ್ಮಜ್ಞನಾದ ವಿದುರನನ್ನು ಆಲಿಂಗಿಸುವವನಾಗು.

ಇತ್ಯುಕ್ತ್ವಾ ಕೇಶವಂ ತತ್ರ ರಾಜ್ಞಾಂ ಮಧ್ಯೇ ಯುಧಿಷ್ಠಿರಃ ।
ಅನುಜ್ಞಾತೋ ನಿವವೃತೇ ಕೃಷ್ಣಂ ಕೃತ್ವಾ ಪ್ರದಕ್ಷಿಣಮ್ ॥೫೧॥

ಅಲ್ಲಿ ರಾಜರ ಮಧ್ಯೆ ಕೃಷ್ಣನಿಗೆ ಇಷ್ಟು ಮಾತುಗಳನ್ನು ಹೇಳಿ, ಯುಧಿಷ್ಠಿರನು ಅವನ ಅನುಮತಿಯನ್ನು ಪಡೆದು ಕೃಷ್ಣನಿಗೆ ಪ್ರದಕ್ಷಿಣೆಯನ್ನು ಮಾಡಿ ಹಿಂದೆ ಬಂದನು.

ವ್ರಜನ್ನೇವ ತು ಬೀಭತ್ಸುಃ ಸಖಾಯಂ ಪುರುಷರ್ಷಭಮ್ ।
ಅಬ್ರವೀತ್ ಪರವೀರಘ್ನಂ ದಾಶಾರ್ಹಮಪರಾಜಿತಮ್ ॥೫೨॥

ಕೃಷ್ಣನು ಹೋಗುತ್ತಿರುವಂತೆಯೇ ಅವನ ಸ್ನೇಹಿತನಾದ ಅರ್ಜುನನು ತನ್ನ ಸ್ನೇಹಿತನೂ ಪುರುಷಶ್ರೇಷ್ಠನೂ, ಪರವೀರಘಾತಿಯೂ, ಅಪರಾಜಿತನೂ ಆದ ದಾಶಾರ್ಹನನ್ನು ಕುರಿತು ಮಾತನಾಡಿದನು.

ಯದಸ್ಮಾಕಂ ವಿಭೋ ವೃತ್ತಂ ಪುರಾ ವೈ ಮಂತ್ರನಿಶ್ಚಯೇ ।
ಅರ್ಧರಾಜ್ಯಸ್ಯ ಗೋವಿಂದ ವಿದಿತಂ ಸರ್ವರಾಜಸು ॥೫೩॥

ಎಲೈ ವಿಭುವೇ, ಗೋವಿಂದನೇ, ಎಲ್ಲ ರಾಜರೂ ಸೇರಿದಾಗ ನಾವು ಹಿಂದೆ ಅರ್ಧರಾಜ್ಯವನ್ನು ಕೊಡುವ ವಿಷಯದಲ್ಲಿ ಯಾವ ಮಂತ್ರಾಲೋಚನೆಯನ್ನು ನಡೆಸಿದೆವೋ ಅದು ನಿನಗೆ ತಿಳಿದಿದೆ.

ತಚ್ಚೇದ್ ದದ್ಯುರಸಂಗೇನ ಸತ್ಕೃತ್ಯಾನವಮತ್ಯ ಚ ।
ಪ್ರಿಯಂ ಮೇ ಸ್ಯಾನ್ಮಹಾಬಾಹೋ ಮುಚ್ಯೇರನ್ ಮಹತೋ ಭಯಾತ್ ॥

ಎಲೈ ಮಹಾಬಾಹುವೇ, ನಮ್ಮನ್ನು ಸತ್ಕರಿಸಿ ಅವಮಾನವನ್ನು ಮಾಡದೆ, ರಾಜ್ಯ ಲೋಭವನ್ನು ಮಾಡದೆ, ಅರ್ಧರಾಜ್ಯವನ್ನು ಕೊಡುವುದಾದರೆ ಅದು ನನಗೆ ಪ್ರಿಯವಾದೀತು ಮತ್ತು ಒದಗಿದ ದೊಡ್ಡ ಭಯದಿಂದ ಕೌರವರೂ ಮುಕ್ತರಾದಾರು.

ಅತಶ್ಚೇದನ್ಯಥಾ ಕರ್ತಾ ಧಾರ್ತರಾಷ್ಟ್ರೋಽನುಪಾಯವಿತ್ ।
ಅಂತಂ ನೂನಂ ಕರಿಷ್ಯಾಮಿ ಕ್ಷತ್ರಿಯಾಣಾಂ ಜನಾರ್ದನ ॥೫೫॥

ಉಪಾಯವನ್ನು ತಿಳಿಯದ ದುರ್ಯೋಧನನು ಅದನ್ನು ಬಿಟ್ಟು ಬೇರೆ ರೀತಿಯಲ್ಲಿ ನಡೆದುಕೊಂಡರೆ ಎಲೈ ಜನಾರ್ದನನೇ, ನಾನು ಖಂಡಿತವಾಗಿ ಕ್ಷತ್ರಿಯರ ವಿನಾಶವನ್ನು ಮಾಡುವೆನು.

ವೈಶಂಪಾಯನಃ

ಏವಮುಕ್ತೇ ಪಾಂಡವೇನ ಸಮಹೃಷ್ಯದ್ ವೃಕೋದರಃ ।
ಮುಹುರ್ಮುಹುಃ ಕ್ರೋಧವಶಾತ್ ಪ್ರಾವೇಪತ ಚ ಪಾಂಡವಃ ॥೫೬॥

ವೈಶಂಪಾಯನ– ಅರ್ಜುನನು ಹೀಗೆ ಹೇಳುತ್ತಿರಲು ವೃಕೋದರನು ಹರ್ಷಗೊಂಡನು. ಪಾಂಡವನಾದ ಅವನು ಕ್ರೋಧಕ್ಕೆ ವಶನಾಗಿ ಮತ್ತೆ ಮತ್ತೆ ನಡುಗಿದನು.

ವೇಪಮಾನಶ್ಚ ಕೌಂತೇಯಃ ಪ್ರಾಕ್ರೋಶನ್ಮಹತೋ ರವಾನ್ ।
ಧನಂಜಯವಚಃ ಶ್ರುತ್ವಾ ಹರ್ಷೋತ್ಸಿಕ್ತಮನಾ ಭೃಶಮ್ ॥೫೭॥

ಧನಂಜಯನ ಮಾತುಗಳನ್ನು ಕೇಳಿ ಬಹಳ ಹರ್ಷದಿಂದ ತುಂಬಿದ ಕುಂತೀಪುತ್ರನಾದ ಅವನು ನಡುಗುತ್ತಾ ಅನೇಕ ಭೈರವ ನಾದಗಳನ್ನು ಮಾಡಿದನು.

ತಸ್ಯ ತಂ ನಿನದಂ ಶ್ರುತ್ವಾ ಸಂಪ್ರಾವೇಪಂತ ಧನ್ವಿನಃ ।
ವಾಹನಾನಿ ಚ ಸರ್ವಾಣಿ ಶಕೃನ್ಮೂತ್ರೇ ಪ್ರಸುಸ್ರುವುಃ ॥೫೮॥

ಅವನ ಆ ನಾದವನ್ನು ಕೇಳಿ ಧನುರ್ಧಾರಿಗಳು ನಡುಗಿಹೋದರು. ಅಶ್ವ-ಗಜ ಮೊದಲಾದ ವಾಹನಗಳು ಮಲ-ಮೂತ್ರಗಳನ್ನು ವಿಸರ್ಜಿಸಿದವು.

ಇತ್ಯುಕ್ತ್ವಾ ಕೇಶವಂ ತತ್ರ ತಥಾ ಚೋಕ್ತ್ವಾ ವಿನಿಶ್ಚಯಮ್ ।
ಅನುಜ್ಞಾತೋ ನಿವವೃತೇ ಪರಿಷ್ವಜ್ಯ ಜನಾರ್ದನಮ್ ॥೫೯॥

ಅರ್ಜುನನು ಕೃಷ್ಣನನ್ನು ಕುರಿತು ಹೀಗೆ ಮಾತನಾಡಿ, ತನ್ನ ನಿರ್ಧಾರವನ್ನು ತಿಳಿಸಿ, ಜನಾರ್ದನನನ್ನು ಆಲಿಂಗಿಸಿ, ಅವನ ಅನುಜ್ಞೆಯನ್ನು ಪಡೆದು ಹಿಂದಕ್ಕೆ ಬಂದನು.

ತೇಷು ರಾಜಸು ಸರ್ವೇಷು ನಿವೃತ್ತೇಷು ಜನಾರ್ದನಃ ।
ತೂರ್ಣಮಭ್ಯಗಮದ್ ಹೃಷ್ಟಃ ಸೈನ್ಯಸುಗ್ರೀವವಾಹನಃ ॥೬೦॥

ರಾಜರೆಲ್ಲರೂ ಹಿಂದಿರುಗಿದ ಮೇಲೆ ಜನಾರ್ದನನು ಸೈನ್ಯಸುಗ್ರೀವಾದಿಗಳನ್ನು ಹೂಡಿದ ತನ್ನ ರಥದಲ್ಲಿ ಶೀಘ್ರವಾಗಿ ಸಂತೋಷದಿಂದ ಹೊರಟನು.

ತೇ ಹಯಾ ವಾಸುದೇವಸ್ಯ ದಾರುಕೇಣ ಪ್ರಚೋದಿತಾಃ ।
ಪಂಥಾನಮಾಚೇಮುರಿವ ಗ್ರಸಮಾನಾ ಇವಾಂಬರಮ್ ॥೬೧॥

ದಾರುಕರಿಂದ ಪ್ರಚೋದಿಸಲ್ಪಟ್ಟ ಆ ಕುದುರೆಗಳು ಮಾರ್ಗವನ್ನು ಕುಡಿಯುವಂತೆ, ಆಕಾಶವನ್ನು ನುಂಗುವಂತೆ ಮುಂದೆ ನಡೆದವು.

ಅಥಾಪಶ್ಯನ್ಮಹಾಬಾಹುಃ ಋಷೀನಧ್ವನಿ ಕೇಶವಃ ।
ಬ್ರಾಹ್ಮ್ಯಾ ಶ್ರಿಯಾ ದೀಪ್ಯಮಾನಾನ್ ಸ್ಥಿತಾನುಭಯತಃ ಪಥಿ ॥೬೨॥

ಮುಂದೆ ಹೋಗುತ್ತಾ ಮಹಾಬಾಹುವಾದ ಕೇಶವನು ಮಾರ್ಗದ ಎರಡು ಕಡೆಯಲ್ಲಿಯೂ ಇದ್ದ ಬ್ರಹ್ಮತೇಜಸ್ಸಿನಿಂದ ಬೆಳಗುವ ಋಷಿಗಳನ್ನು ನೋಡಿದನು.

ಸೋಽವತೀರ್ಯ ರಥಾತ್ ತೂರ್ಣಮಭಿವಾದ್ಯ ಜನಾರ್ದನಃ ।
ಯಥಾವತ್ ತಾನೃಷೀನ್ ಸರ್ವಾನ್ ಅಭ್ಯಭಾಷತ ಪೂಜಯನ್ ॥೬೩॥

ಜನಾರ್ದನನು ಶೀಘ್ರವಾಗಿ ರಥದಿಂದ ಇಳಿದು, ಅವರಿಗೆ ನಮಸ್ಕಾರವನ್ನು ಮಾಡಿ, ಗೌರವವನ್ನು ಸಲ್ಲಿಸುತ್ತಾ, ಆ ಎಲ್ಲ ಋಷಿಗಳನ್ನು ಕುರಿತು ಯಥಾಯೋಗ್ಯವಾಗಿ ಮಾತನಾಡಿದನು.

ಕಚ್ಚಿಲ್ಲೋಕೇಷು ಕುಶಲಂ ಕಚ್ಚಿದ್ ಧರ್ಮಃ ಸನುಷ್ಠಿತಃ ।
ಬ್ರಾಹ್ಮಣಾನಾಂ ತ್ರಯೋ ವರ್ಣಾಃ ಕಚ್ಚಿತ್ ತಿಷ್ಠತಿ ಶಾಸನೇ ॥೬೪॥

ಪಿತೃದೇವಾತಿಥಿಭ್ಯಶ್ಚ ಕಚ್ಚಿತ್ ಪೂಜಾ ಸ್ವನುಷ್ಠಿತಾ ॥೬೫॥

ಎಲ್ಲ ಲೋಕಗಳಲ್ಲಿಯೂ ಕ್ಷೇಮವೇ? ನಿಮ್ಮ ಧರ್ಮವು ಚೆನ್ನಾಗಿ ಅನುಷ್ಠಾನ ಮಾಡಲ್ಪಡುತ್ತಿದೆಯೇ? ಉಳಿದ ಮೂರು ವರ್ಣದವರೂ ಬ್ರಾಹ್ಮಣರ ಆಜ್ಞೆಯನ್ನು ಪಾಲಿಸುತ್ತಿದ್ದಾರೆಯೇ? ಪಿತೃಗಳ, ದೇವತೆಗಳ ಮತ್ತು ಅತಿಥಿಗಳ ಪೂಜೆಯು ಚೆನ್ನಾಗಿ ನಡೆಯುತ್ತಿದೆಯೇ? (ಎಂದು ಕೇಳಿದನು).

ವೈಶಂಪಾಯನಃ

ತೇಭ್ಯಃ ಪ್ರಯುಜ್ಯ ತಾಂ ಪೂಜಾಂ ಪ್ರೋವಾಚ ಮಧುಸೂದನಃ ॥೬೬॥

ಭಗವಂತಃ ಕ್ವ ಸಂಸಿದ್ಧಾಃ ಕೋಽವಧಿರ್ಭವತಾಮಿಹ ।
ಕಿಂ ವಾ ಕಾರ್ಯಂ ಭಗವತಾಮಹಂ ಕಿಂ ಕರವಾಣಿ ವಃ ॥೬೭॥

ಕೇನಾರ್ಥೇನೋಪಸಂಪ್ರಾಪ್ತಾ ಭಗವಂತೋ ಮಹೀತಳಮ್ ॥೬೮॥

ವೈಶಂಪಾಯನ– ಮಧುಸೂದನನು, ಅವರಿಗೆ ಆ ಸತ್ಕಾರವನ್ನು ಮಾಡಿ, ಪೂಜ್ಯರಾದ ತಾವು ಎಲ್ಲಿಂದ ಬರುತ್ತಿದ್ದೀರಿ? ನೀವು ಹೋಗಬೇಕಾದ ಸ್ಥಳವು ಯಾವುದು? ಪೂಜ್ಯರಾದ ನಿಮಗೆ ನನ್ನಿಂದ ಏನಾದರೂ ಆಗಬೇಕಾಗಿದೆಯೇ? ಯಾವ ಉದ್ದೇಶದಿಂದ ಪೂಜ್ಯರಾದ ನೀವು ಭೂಮಿಗೆ ಬಂದಿದ್ದೀರಿ? ಎಂದು ಕೇಳಿದನು.

ಏವಮುಕ್ತಾಃ ಕೇಶವೇನ ಮುನಯಃ ಸಂಶಿತವ್ರತಾಃ ।
ನಾರದಪ್ರಮುಖಾಃ ಸರ್ವೇ ಪ್ರತ್ಯನಂದಂತ ಕೇಶವಮ್ ॥೬೯॥

ಹೀಗೆ ಕೇಶವನಿಂದ ಕೇಳಲ್ಪಟ್ಟ ಶ್ರೇಷ್ಠವ್ರತಶೀಲರಾದ ನಾರದ ಮೊದಲಾದ ಮುನಿಗಳೆಲ್ಲರೂ ಕೇಶವನನ್ನು ಅಭಿನಂದಿಸಿದರು.

ಅಧಃಶಿರಾಃ ಸರ್ಪಮಾಲೀ ಮಹರ್ಷಿಃ ಸ ಹಿ ದೇವಲಃ ।
ಅರ್ವಾವಸುಃ ಸುಜಾನುಶ್ಚ ಮೈತ್ರೇಯಃ ಶುನಕೋ ಬಲೀ ॥೭೦॥

ಬಕೋ ದಾಲ್ಭ್ಯಃ ಸ್ಥೂಲಶಿರಾಃ ಕೃಷ್ಣದ್ವೈಪಾಯನಸ್ತಥಾ ।
ಆಯೋದಧೌಮ್ಯೋ ಧೌಮ್ಯಶ್ಚ ಆಣಿಮಾಂಡವ್ಯಕೌಶಿಕೌ ॥೭೧॥

ದಾಮೋಷ್ಣೀಷಸ್ತ್ರಿಷವಣಃ ಪರ್ಣಾದೋ ಘಟಜಾನುಕಃ ।
ಮೌಂಜಾಯನೋ ವಾಯುಭಕ್ಷಃ ಪರಾಶರ್ಯೋಽಥ ಶಾರಿಕಃ ॥೭೨॥

ಶೀಲವಾನಶನಿರ್ಧಾತಾ ಶೂನ್ಯಪಾಲೋಽಕೃತವ್ರಣಃ ।
ಶ್ವೇತಕೇತುಃ ಕಹೋಳಶ್ಚ ರಾಮಶ್ಚೈವ ಮಹಾತಪಾಃ ॥೭೩॥

ಯಾವಾಗಲೂ ತಲೆಕೆಳಗಾಗಿ ಇದ್ದು ಸರ್ಪಮಾಲೆಯನ್ನು ಧರಿಸಿರುವ ದೇವಲ ಮಹರ್ಷಿಗಳು, ಅರ್ವಾವಸು, ಸುಜಾನು, ಮೈತ್ರೇಯ, ಶುನಕ, ಬಲೀ, ದಾಲ್ಭ್ಯ, ಬಕ, ಸ್ಥೂಲಶಿರಾ, ಕೃಷ್ಣದ್ವೈಪಾಯನ, ಆಯೋದಧೌಮ್ಯ, ಧೌಮ್ಯ, ಆಣಿಮಾಂಡವ್ಯ, ವಿಶ್ವಾಮಿತ್ರ, ದಾಮೋಷ್ಣೀಷ, ತ್ರಿಷವಣ, ಪರ್ಣಾದ, ಘಟಜಾನು, ಮೌಂಜಾಯನ, ವಾಯುಭಕ್ಷ, ಪರಾಶರ್ಯ, ಶಾರಿಕ, ಶೀಲವಾನ್, ಅಶನಿ, ಧಾತಾ, ಶೂನ್ಯಪಾಲ, ಅಕೃತವ್ರಣ, ಶ್ವೇತಕೇತು, ಕಹೋಳ, ಮಹಾತಪಸ್ವಿಯಾದ ಪರಶುರಾಮ (ಎಲ್ಲರೂ ಕೃಷ್ಣನನ್ನು ಅಭಿನಂದಿಸಿದರು).

ತಮಬ್ರವೀಜ್ಜಾಮದಗ್ನ್ಯ ಉಪೇತ್ಯ ಮಧುಸೂದನಮ್ ।
ಪರಿಷ್ವಜ್ಯ ಚ ಗೋವಿಂದಂ ಪುರಾಣಚರಿತೇ ಸಖಾ ॥೭೪॥

ಜಮದಗ್ನಿಗಳ ಪುತ್ರನಾದ ಪರಶುರಾಮನು, ಪುರಾಣಚರಿತೆಗಳಲ್ಲಿ ಸ್ನೇಹಿತನಾದ ಮಧುಸೂದನನಾದ ಗೋವಿಂದನನ್ನು ಸಮೀಪಿಸಿ, ಅವನನ್ನು ಆಲಿಂಗಿಸಿ ಮಾತನಾಡಿದನು.

ದೇವರ್ಷಯಃ ಪುಣ್ಯಕೃತೋ ಬ್ರಾಹ್ಮಣಾಶ್ಚ ಬಹುಶ್ರುತಾಃ ।
ರಾಜರ್ಷಯಶ್ಚ ಮಾನಾರ್ಹಂ ಮಾನಯಂತಿ ತಪಸ್ವಿನಃ ॥೭೫॥

ದೇವರ್ಷಿಗಳೂ, ಪುಣ್ಯಶೀಲರಾದ ಬ್ರಾಹ್ಮಣರೂ, ಬಹುಶ್ರುತರಾದ ರಾಜರ್ಷಿಗಳೂ ಮತ್ತು ತಪಸ್ವಿಗಳೂ, ಸತ್ಕಾರಕ್ಕೆ ಯೋಗ್ಯರಾದ ನಿನ್ನನ್ನು ಸತ್ಕರಿಸುತ್ತಿದ್ದಾರೆ.

ದೇವಾಸುರಸ್ಯ ದ್ರಷ್ಟಾರಃ ಪುರಾಣಾಶ್ಚ ಮಹಾದ್ಯುತೇ ।
ಸಮೇತಂ ಪಾರ್ಥಿವಂ ಕ್ಷತ್ರಂ ದಿದೃಕ್ಷಂತಶ್ಚ ಸರ್ವಶಃ ॥೭೬॥

ಸಭಾಸದಶ್ಚ ರಾಜಾನಃ ತ್ವಾಂ ಚ ಸತ್ಯಂ ಜನಾರ್ದನಮ್ ॥೭೭॥

ಎಲೈ ಮಹಾದ್ಯುತಿಯೇ, ದೇವಾಸುರರನ್ನು ನೋಡಿರುವ ಪ್ರಾಚೀನರಾದ ಇವರು ಭೂಮಿಯಲ್ಲಿ ಒಂದುಗೂಡಿದ ಸಮಸ್ತ ಕ್ಷತ್ರಿಯರನ್ನೂ ನೋಡುವ ಆಸೆಯುಳ್ಳವರಾಗಿದ್ದಾರೆ. ಸಭಾಸದರಾದ ರಾಜರನ್ನೂ, ಸತ್ಯನಾದ ಜನಾರ್ದನನಾದ ನಿನ್ನನ್ನೂ ನೋಡಲು ಬಯಸುತ್ತಾರೆ.

ಏತನ್ಮಹತ್ ಪ್ರೇಕ್ಷಣೀಯಂ ದ್ರಷ್ಟುಂ ಗಚ್ಛಾಮ ಕೇಶವ ।
ಧರ್ಮಾರ್ಥಸಹಿತಾ ವಾಚಃ ಶ್ರೋತುಮಿಚ್ಛಾಮ ಮಾಧವ ॥೭೮॥

ತ್ವಯೋಚ್ಯಮಾನಾಃ ಕುರುಷು ರಾಜಮಧ್ಯೇ ಪರಂತಪ ॥೭೯॥

ಎಲೈ ಕೇಶವನೇ, ನೋಡಬೇಕಾದ ಈ ದೊಡ್ಡ ದೃಶ್ಯವನ್ನು ನೋಡಲು ಹೋಗುವೆವು ಮತ್ತು ಮಾಧವನೇ, ಪರಂತಪನೇ, ಕುರುಗಳ ಮತ್ತು ರಾಜರ ಮಧ್ಯದಲ್ಲಿ ನೀನು ಆಡುವ ಧರ್ಮಾರ್ಥಸಹಿತವಾದ ಮಾತುಗಳನ್ನು ಕೇಳಲು ಬಯಸುತ್ತೇವೆ.

ಸಭಾಯಾಂ ಮಧುರಾ ವಾಚಃ ಶುಶ್ರೂಷಂತಸ್ತ್ವಯೇರಿತಾಃ ।
ಕುರೂಣಾಂ ಪ್ರತಿಪತ್ತಿಂ ಚ ಶ್ರೋತುಮಿಚ್ಛಾಮ ಮಾಧವ ॥೮೦॥

ಎಲೈ ಮಾಧವನೇ, ಸಭೆಯಲ್ಲಿ ನೀನು ಆಡುವ ಮಧುರವಾದ ಮಾತುಗಳನ್ನೂ ಮತ್ತು ಕೌರವರ ಅಭಿಪ್ರಾಯವನ್ನೂ ಕೇಳಲು ಬಯಸುತ್ತೇವೆ.

ಭೀಷ್ಮದ್ರೋಣಾದಯಶ್ಚೈವ ವಿದುರಶ್ಚ ಮಹಾಮತಿಃ ।
ತ್ವಂ ಚ ಯಾದವಶಾರ್ದೂಲ ಸಭಾಯಾಂ ವೈ ಸಮೇಷ್ಯಥ ॥೮೧॥

ಎಲೈ ಯಾದವಶಾರ್ದೂಲನೇ, ಭೀಷ್ಮ-ದ್ರೋಣಾದಿಗಳೂ, ಮಹಾಮತಿಯಾದ ವಿದುರನೂ ಮತ್ತು ನೀನೂ ಸಹ ಸಭೆಯಲ್ಲಿ ಒಟ್ಟಿಗೆ ಸೇರುವಿರಿ.

ತವ ವಾಕ್ಯಾನಿ ಸರ್ವಾಣಿ ತಥಾ ತೇಷಾಂ ಚ ಮಾಧವ ।
ಶ್ರೋತುಮಿಚ್ಛಾಮ ಗೋವಿಂದ ಸತ್ಯಾನಿ ಚ ಶುಭಾನಿ ಚ ॥೮೨॥

ಆಪೃಷ್ಟೋಽಸಿ ಮಹಾಬಾಹೋ ಪುನರ್ದರ್ಶ್ಯಮಹೇ ವಯಮ್ ॥

ಎಲೈ ಗೋವಿಂದನೇ, ನಿನ್ನ ಮತ್ತು ಅವರ ಸತ್ಯವಾದ ಮತ್ತು ಶುಭವಾದ ಎಲ್ಲ ಮಾತುಗಳನ್ನೂ ಕೇಳಲು ನಾವು ಇಚ್ಛಿಸುತ್ತೇವೆ. ಎಲೈ ಮಹಾಬಾಹುವೇ, ನಾವು ನಿನಗೆ ಅನುಮತಿಯನ್ನು ಕೊಡುತ್ತಿದ್ದೇವೆ. ಪುನಃ ಸಭೆಯಲ್ಲಿ ನೋಡುವೆವು.

ಯಾಹ್ಯವಿಘ್ನೇನ ವೈ ವೀರ ದ್ರಕ್ಷ್ಯಾಮಸ್ತ್ವಾಂ ಸಭಾಗತಮ್ ।
ಆಸೀನಮಾಸನೇ ದಿವ್ಯೇ ಜ್ವಲಂತಂ ತೇಜಸಾऽಚ್ಯುತ ॥೮೪॥

ಎಲೈ ವೀರನೇ, ನಿರ್ವಿಘ್ನವಾಗಿ ಪ್ರಯಾಣ ಮಾಡುವವನಾಗು. ಎಲೈ ಅಚ್ಯುತನೇ, ನೀನು ಸಭೆಯಲ್ಲಿ ದಿವ್ಯಾಸನದಲ್ಲಿ ಕುಳಿತು ತೇಜಸ್ಸಿನಿಂದ ಬೆಳಗುವುದನ್ನು ನಾವು ನೋಡುವೆವು.

ವೈಶಂಪಾಯನಃ

ಪ್ರಯಾಂತಂ ದೇವಕೀಪುತ್ರಂ ಪರವೀರರುಜೋ ದಶ ।
ಮಹಾರಥಾ ಮಹಾಬಾಹುಮನ್ವಯುಃ ಶಸ್ತ್ರಪಾಣಯಃ ॥೮೫॥

ಪದಾತೀನಾಂ ಸಹಸ್ರಂ ಚ ಸಾದಿನಾಂ ಚ ಪರಂತಪ ।
ಭೋಜ್ಯಂ ಚ ವಿಪುಲಂ ರಾಜನ್ ಪ್ರೇಷ್ಯಾಶ್ಚ ಶತಶೋऽಪರೇ ॥೮೬॥

ವೈಶಂಪಾಯನ– ಎಲೈ ಪರಂತಪನೇ, ರಾಜನೇ, ಅಲ್ಲಿಂದ ಮುಂದೆ ದೇವಕೀಪುತ್ರನಾದ ಕೃಷ್ಣನು ಹೊರಟಾಗ ಮಹಾಬಾಹುವಾದ ಅವನನ್ನು ಪರವೀರಘಾತಕರಾದ ಹತ್ತು ಮಹಾರಥರೂ, ಶಸ್ತ್ರಪಾಣಿಗಳಾದ ಸಹಸ್ರ ಪದಾತಿಗಳೂ, ಸಹಸ್ರ ಅಶ್ವಾರೋಹಿಗಳೂ, ವಿಪುಲವಾದ ಭೋಜನಪದಾರ್ಥಗಳೂ ಮತ್ತು ನೂರಾರು ಸೇವಕರು ಹಿಂಬಾಲಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕಾಶೀತಿತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ದ್ವಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಎಂಬತ್ತೊಂದನೆ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೆರಡನೆಯ ಅಧ್ಯಾಯ

ಕುಶಸ್ಥಲದಲ್ಲಿ ಕೃಷ್ಣನ ವಿಶ್ರಾಂತಿ. ಗ್ರಾಮಸ್ಥ ಬ್ರಾಹ್ಮಣರಿಂದ ಅವನ ಪೂಜೆ.

ಜನಮೇಜಯಃ

ಕಥಂ ಪ್ರಯಾತೋ ದಾಶಾರ್ಹೋ ಮಹಾತ್ಮಾ ಮಧುಸೂದನಃ ।
ಕಾನಿ ವಾ ವ್ರಜತಸ್ತಸ್ಯ ನಿಮಿತ್ತಾನಿ ಮಹೌಜಸಃ ॥೧॥

ಜನಮೇಜಯ– ಮಹಾತ್ಮನಾದ, ದಾಶಾರ್ಹನಾದ ಮಧುಸೂದನನು ಉಪಪ್ಲಾವ್ಯನಗರದಿಂದ ಹೇಗೆ ಹೊರಟನು? ಮಹಾಪರಾಕ್ರಮಶಾಲಿಯಾದ ಅವನು ಹೊರಟಾಗ ಉಂಟಾದ ಶಕುನಗಳು ಯಾವುವು?

ವೈಶಂಪಾಯನಃ

ತಸ್ಯ ಪ್ರಯಾತೋ ಯಾನ್ಯಾಸನ್ ನಿಮಿತ್ತಾನಿ ಮಹಾತ್ಮನಃ ।
ತಾನಿ ಮೇ ಶೃಣು ದಿವ್ಯಾನಿ ದೈವಾನ್ಯೌತ್ಪಾತಿಕಾನಿ ಚ ॥೨॥

ವೈಶಂಪಾಯನ– ಮಹಾತ್ಮನಾದ ಕೃಷ್ಣನು ಹೊರಟಾಗ ಎಂತಹ ದೈವಕೃತವಾದ ದಿವ್ಯವಾದ ಅಪಶಕುನಗಳು (ಮತ್ತು ಶಕುನಗಳು) ಉಂಟಾದವೆಂದು ಹೇಳುತ್ತೇನೆ, ಕೇಳು.

ಅನಭ್ರೇಽಶನಿನಿರ್ಘೋಷಃ ಸವಿದ್ಯುತ್ ಸಮಜಾಯತ ।
ಅನ್ವಗೇವ ಚ ಪರ್ಜನ್ಯಃ ಪ್ರಾವರ್ಷದ್ ವಿಘನೇ ಭೃಶಮ್ ॥೩॥

ಮೋಡವಿಲ್ಲದ ಆಕಾಶದಲ್ಲಿ ಮಿಂಚಿನಿಂದ ಕೂಡಿದ ಸಿಡಿಲುಗಳ ಘೋಷವು ಕೇಳಿಬಂದಿತು. ತಕ್ಷಣವೇ ಮೋಡವಿಲ್ಲದ ಆಕಾಶದಿಂದ ಪರ್ಜನ್ಯನು ಜೋರಾದ ಮಳೆಯನ್ನು ಸುರಿಸಿದನು.

ಪ್ರತ್ಯಗೂಹುರ್ಮಹಾನದ್ಯಃ ಪ್ರಾಙ್ಮುಖಾಃ ಸಿಂಧುಸತ್ತಮಾಃ ।
ವಿಪರೀತಾ ದಿಶಃ ಸರ್ವಾ ನ ಪ್ರಾಜ್ಞಾಯತ ಕಿಂಚನ ॥೪॥

ಸಮುದ್ರಪತ್ನಿಯರಾದ ಪೂರ್ವಾಭಿಮುಖವಾಗಿ ಹರಿಯುವ ಮಹಾನದಿಗಳು ಪಶ್ಚಿಮಾಭಿಮುಖವಾಗಿ ಹರಿದವು. ದಿಕ್ಕುಗಳು ವಿಪರೀತವಾಗಿ ತೋರಿದವು. ಏನೂ ತಿಳಿಯದಂತೆ ಆಯಿತು.

ಪ್ರಾಜ್ವಲನ್ ನಾಗ್ನಯೋ ರಾಜನ್ ಪೃಥಿವೀ ಸಮಕಂಪತ ।
ಉದಪಾನಾಶ್ಚ ಕುಂಭಾಶ್ಚ ಪ್ರಾಸಿಂಚನ್ ಶತಶೋ ಜಲಮ್ ॥೫॥

ಎಲೈ ರಾಜನೇ, ಅಗ್ನಿಗಳು ಪ್ರಜ್ವಲಿಸಲಿಲ್ಲ, ಭೂಮಿಯು ನಡುಗಿತು, ಸರೋವರಗಳಿಂದ ಮತ್ತು ನೀರು ತುಂಬಿದ ಗಡಿಗೆಗಳಿಂದ ಜಲವು ನೂರಾರು ಧಾರೆಗಳಲ್ಲಿ ಹರಿಯಿತು.

ತಮಃಸಂವೃತಮಪ್ಯಾಸೀತ್ ಸರ್ವಂ ಜಗದಿದಂ ತದಾ ।
ನ ದಿಶೋ ವಿದಿಶೋ ರಾಜನ್ ಪ್ರಜ್ಞಾಯಂತೇ ಸ್ಮ ರೇಣುನಾ ॥೬॥

ಈ ಜಗತ್ತೆಲ್ಲವೂ ಕತ್ತಲಿನಿಂದ ಆವೃತವಾಯಿತು. ಎಲೈ ರಾಜನೇ, ಎಲ್ಲ ಕಡೆಯೂ ಧೂಳು ತುಂಬಿಕೊಂಡು ದಿಕ್ಕುಗಳಾಗಲೀ ಅಥವಾ ವಿದಿಕ್ಕುಗಳಾಗಲೀ ತಿಳಿಯಲಿಲ್ಲ.

ಪ್ರಾದುರಾಸೀನ್ಮಹಾನ್ ಶಬ್ದಃ ಖೇ ಶರೀರಮದೃಶ್ಯತ ।
ಸರ್ವೇಷು ರಾಜನ್ ದೇಶೇಷು ತದದ್ಭುತಮಿವಾಭವನ್ ॥೭॥

ದೊಡ್ಡ ಶಬ್ದಗಳು ಉಂಟಾದವು. ಎಲೈ ರಾಜನೇ, ಎಲ್ಲ ದೇಶಗಳಲ್ಲಿಯೂ ಆಕಾಶದಲ್ಲಿ ಶರೀರಗಳು ಕಂಡುಬಂದವು. ಅದು ಅದ್ಭುತವಾಗಿದ್ದಿತು.

ಪ್ರಾಮಥ್ನಾದ್ ಹಸ್ತಿನಪುರಂ ವಾತೋ ದಕ್ಷಿಣಪಶ್ಚಿಮಃ ।
ಆರುಜನ್ ಗಣಶೋ ವೃಕ್ಷಾನ್ ಪರುಷೋ ಭೀಮನಿಸ್ವನಃ ॥೮॥

ನೈಋತ್ಯ ಮಾರುತವು ಹಸ್ತಿನಪುರವನ್ನು ಮರ್ದನಮಾಡಿತು. ಭಯಂಕರವಾದ ಶಬ್ದದಿಂದ ಕೂಡಿದ ಉಗ್ರವಾದ ಆ ವಾತವು ಮರಗಳ ಸಮೂಹಗಳನ್ನು ಉರುಳಿಸಿತು.

ಯತ್ರ ಯತ್ರ ಚ ವಾರ್ಷ್ಣೇಯೋ ವರ್ತತೇ ಪಥಿ ಭಾರತ ।
ತತ್ರ ತತ್ರ ಸುಖೋ ವಾಯುಃ ಸರ್ವಂ ಚಾಸೀತ್ ಪ್ರದಕ್ಷಿಣಮ್ ॥೯॥

ಎಲೈ ಭಾರತನೇ, ಆದರೆ ಮಾರ್ಗದಲ್ಲಿ ಎಲ್ಲೆಲ್ಲಿ ವಾರ್ಷ್ಣೇಯನಾದ ಕೃಷ್ಣನು ಹೋಗುತ್ತಾನೆಯೋ ಅಲ್ಲಿ ವಾಯುವು ಸುಖಕರವಾಗಿ ಬೀಸಿತು. ಎಲ್ಲವೂ ಕೂಡ ಅನುಕೂಲವಾಗಿದ್ದಿತು.

ವವರ್ಷ ಪುಷ್ಪವರ್ಷಂ ಚ ಕಮಲಾನಿ ಚ ಭೂರಿಶಃ ।
ಸಮಶ್ಚ ಪಂಥಾ ನಿರ್ದುಃಖೋ ವ್ಯಪೇತಕುಶಕಂಟಕಃ ॥೧೦॥

ಕಮಲಗಳಿಂದ ಕೂಡಿದ ಪುಷ್ಪವರ್ಷವು ಅನೇಕಬಾರಿ ಉಂಟಾಯಿತು. ಮಾರ್ಗವು ಸಮವಾಗಿದ್ದು ಕುಶ-ಕಂಟಕಗಳಿಲ್ಲದೆ ಸುಖಕರವಾಗಿದ್ದಿತು.

ಸಂಥನ್ನೋ ಬ್ರಾಹ್ಮಣೈಃ ರಾಜನ್ ತತ್ರ ತತ್ರ ಮಹಾಭುಜಃ ।
ಅರ್ಚ್ಯತೇ ಮಧುಪರ್ಕೈಶ್ಚ ವಸುಭಿಶ್ಚ ವಸುಪ್ರದಃ ॥೧೧॥

ಎಲೈ ರಾಜನೇ, ಮಹಾಭುಜನಾದ, ವಸುಪ್ರದನಾದ ಕೃಷ್ಣನು ಅಲ್ಲಲ್ಲಿ ಬ್ರಾಹ್ಮಣರಿಂದ ಸುತ್ತುವರಿಯಲ್ಪಟ್ಟು, ಮಧುಪರ್ಕಗಳಿಂದಲೂ ಮತ್ತು ದ್ರವ್ಯಗಳಿಂದಲೂ ಪೂಜಿಸಲ್ಪಟ್ಟನು.

ತಂ ಕಿರಂತಿ ಮಹಾತ್ಮಾನಂ ವನ್ಯೈಃ ಪುಷ್ಪೈಃ ಸುಗಂಧಿಭಿಃ ।
ಸ್ತ್ರಿಯಃ ಪಥಿ ಸಮಾಗಮ್ಯ ಸರ್ವಭೂತಹಿತೇ ರತಮ್ ॥೧೨॥

ಸ್ತ್ರೀಯರು ಸರ್ವಭೂತಹಿತದಲ್ಲಿ ರತನಾದ, ಮಹಾತ್ಮನಾದ ಕೃಷ್ಣನನ್ನು ಮಾರ್ಗದಲ್ಲಿ ಸಂಧಿಸಿ, ಸುಗಂಧಯುಕ್ತವಾದ ಅರಣ್ಯಪುಷ್ಪಗಳಿಂದ ಅವನ ಮೇಲೆ ಪುಷ್ಪಗಳ ಮಳೆಯನ್ನು ಸುರಿಸಿದರು.

ಸ ಶಾಲಿಭವನಂ ರಮ್ಯಂ ಸರ್ವಸಸ್ಯಸಮಾಚಿತಮ್ ।
ಸುಖಂ ಪರಮಧರ್ಮಿಷ್ಠಮತ್ಯಗಾನ್ಮಧುಸೂದನಃ ॥೧೩॥

ಮಧುಸೂದನನು ಸರ್ವಸಸ್ಯಗಳಿಂದ ತುಂಬಿದ, ಪರಮಧರ್ಮಿಷ್ಠವಾದ, ಮನೋಹರವಾದ ಸುಖಕರವಾದ ಶಾಲಿಭವನ ಎಂಬ ಪ್ರದೇಶವನ್ನು ದಾಟಿ ಮುಂದೆ ಬಂದನು.

ಪಶ್ಯನ್ ಬಹುಪಶೂನ್ ಗ್ರಾಮಾನ್ ರಮ್ಯಾನ್ ಹೃದಯತೋಷಣಾನ್।
ಪುರಾಣಿ ವ್ಯತಿಚಕ್ರಾಮ ರಾಷ್ಟ್ರಾಣಿ ನಗರಾಣಿ ಚ ॥೧೪॥

ನಿತ್ಯಂ ಹೃಷ್ಟಾಃ ಸುಮನಸೋ ಭಾರತೈರಭಿರಕ್ಷಿತಾಃ ।
ನೋದ್ವಿಗ್ನಾಃ ಪರಚಕ್ರೇಭ್ಯೋ ಹ್ಯನಯಾನಾಮಕೋವಿದಾಃ ॥೧೫॥

ಅನೇಕವಿಧವಾದ ಪಶುಗಳನ್ನೂ, ಮನೋಹರವಾದ ಸುಂದರವಾದ ಗ್ರಾಮಗಳನ್ನೂ, ಪಟ್ಟಣಗಳನ್ನೂ, ರಾಷ್ಟ್ರಗಳನ್ನೂ, ನಗರಗಳನ್ನೂ, ಭಾರತರಿಂದ ರಕ್ಷಿತವಾದ ಒಳ್ಳೆಯ ಮನಸ್ಸುಳ್ಳ ಸಂತೋಷಗೊಂಡ ಉದ್ವೇಗರಹಿತವಾದ ಪರರಾಜರ ಭಯವಿಲ್ಲದ ಅನೀತಿಯನ್ನು ತಿಳಿಯದ ಜನರಿಂದ ತುಂಬಿದ (ನಗರಗಳನ್ನೂ) ನೋಡುತ್ತಾ ಮುಂದೆ ಸಾಗಿದನು.

ಉಪಪ್ಲಾವ್ಯಾದಥಾಗಮ್ಯ ಜನಾಃ ಪುರನಿವಾಸಿನಃ ।
ಪಶ್ಯತಿಷ್ಠಂತ ಸಹಿತಾ ವಿಷ್ವಕ್ಸೇನದಿದೃಕ್ಷಯಾ ॥೧೬॥

ಕೃಷ್ಣನು ಉಪಪ್ಲಾವ್ಯದಿಂದ ಹೊರಟಾಗ, ವಿಷ್ವಕ್ಸೇನನಾದ ಅವನನ್ನು ನೋಡುವ ಆಸೆಯಿಂದ ಪುರನಿವಾಸಿಗಳು ಒಟ್ಟಿಗೆ ಸೇರಿ ಮಾರ್ಗದಲ್ಲಿ ನಿಂತರು.

ತೇ ತು ಸರ್ವೇ ಸುನಾಮಾನಮಗ್ನಿಮಿದ್ಧಮಿವ ಪ್ರಭುಮ್ ।
ಅರ್ಚಯಾಮಾಸುರರ್ಚಾರ್ಹಂ ದೇಶಾತಿಥಿಮುಪಸ್ಥಿತಮ್ ॥೧೭॥

ಅವರೆಲ್ಲರೂ ಒಳ್ಳೆಯ ನಾಮವನ್ನು ಧರಿಸಿದ, ಪೂಜೆಗೆ ಅರ್ಹನಾದ ಜ್ವಲಿಸುವ ಅಗ್ನಿಯಂತಿರುವ ಪ್ರಭುವಾದ ದೇಶಾತಿಥಿಯಾಗಿ ಬಂದ ಕೃಷ್ಣನನ್ನು ಪೂಜಿಸಿದರು.

ಕುಶಸ್ಥಲಂ ಸಮಾಸಾದ್ಯ ಕೇಶವಃ ಪರವೀರಹಾ ।
ಪ್ರಕೀರ್ಣರಶ್ಮಾವಾದಿತ್ಯೇ ವಿಮಲೇ ಲೋಹಿತಾಯತಿ ॥೧೮॥

ಅವತೀರ್ಯ ರಥಾತ್ ತೂರ್ಣಂ ಕೃತ್ವಾ ಶೌಚಂ ಯಥಾವಿಧಿ ।
ರಥಮೋಚನಮಾದಿಶ್ಯ ಸಂಧ್ಯಾಮುಪವಿವೇಶ ಹ ॥೧೯॥

ಕುಶಸ್ಥಲ ಗ್ರಾಮಕ್ಕೆ ಬಂದಾಗ ಪರವೀರಹಂತಕನಾದ ಕೇಶವನು, ತನ್ನ ಕಿರಣಗಳನ್ನು ಹರಡಿ, ನಿರ್ಮಲವಾದ ಆದಿತ್ಯನು ಕೆಂಪುಬಣ್ಣಕ್ಕೆ ತಿರುಗುತ್ತಿರಲು, ಶೀಘ್ರವಾಗಿ ರಥದಿಂದ ಇಳಿದು ವಿಧಿಪ್ರಕಾರವಾಗಿ ಶೌಚವನ್ನು ಆಚರಿಸಿ, ರಥವನ್ನು ಬಿಚ್ಚುವಂತೆ ಆದೇಶವನ್ನು ನೀಡಿ ಸಂಧ್ಯಾವಂದನೆಯನ್ನು ಮಾಡಿದನು.

ದಾರುಕೋऽಪಿ ಹಯಾನ್ ಮುಕ್ತ್ವಾ ಪರಿವಾರ್ಯ ಚ ಶಾಸ್ತ್ರತಃ ।
ಮುಮೋಚ ಸರ್ವವರ್ಮಾಣಿ ಮುಕ್ತ್ವಾ ಚೈತಾನವಾಸೃಜತ್ ॥೨೦॥

ದಾರುಕನಾದರೂ ಕುದುರೆಗಳನ್ನು ಬಿಚ್ಚಿ, ಶಾಸ್ತ್ರೀತಿಯಲ್ಲಿ ಅವುಗಳಿಗೆ ಪ್ರದಕ್ಷಿಣೆಯನ್ನು ಮಾಡಿ, ಅವುಗಳ ಎಲ್ಲಾ ಕವಚಗಳನ್ನೂ ತೆಗೆದು ಅವುಗಳನ್ನು ಸ್ವತಂತ್ರವಾಗಿ ಬಿಟ್ಟನು.

ಅಭ್ಯತೀತ್ಯ ತು ತತ್ ಸರ್ವಮುವಾಚ ಮಧುಸೂದನಃ ॥೨೧॥

ಯುಧಿಷ್ಠಿರಸ್ಯ ಕಾರ್ಯಾರ್ಥಮಿಹ ವತ್ಸ್ಯಾಮಹೇ ವಯಮ್ ॥೨೨॥

ಅಷ್ಟು ನಗರಗಳನ್ನು ದಾಟಿ ಬಂದ ಮಧುಸೂದನನು ಕುಶಸ್ಥಲನಿವಾಸಿಗಳನ್ನೂ ಕುರಿತು, ಯುಧಿಷ್ಠಿರನ ಕಾರ್ಯದ ನಿಮಿತ್ತದಿಂದ ನಾವು ಇಲ್ಲಿಗೆ ಬಂದಿದ್ದೇವೆ. ಈ ದಿನ ಇಲ್ಲಿಯೇ ವಾಸಮಾಡುವೆವು ಎಂದು ಹೇಳಿದನು.

ತಸ್ಯ ತನ್ಮತಮಾಜ್ಞಾಯ ಚಕ್ರುರಾವಸಥಂ ನರಾಃ ।
ಕ್ಷಣೇನ ಚಾನ್ನಪಾನಾನಿ ರಸವಂತಿ ಸಮಾರ್ಜಯನ್ ॥೨೩॥

ಅದನ್ನು ಕೇಳಿದ ಆ ಗ್ರಾಮನಿವಾಸಿಗಳು ತಕ್ಷಣ ಬಿಡಾರಗಳನ್ನು ಕಲ್ಪಿಸಿ, ಒಂದು ಕ್ಷಣದಲ್ಲಿ ರಸಭರಿತವಾದ ಅನ್ನ-ಪಾನಗಳನ್ನು ಸಿದ್ಧಪಡಿಸಿದರು.

ತಸ್ಮಿನ್ ಗ್ರಾಮೇ ಪ್ರಧಾನಾಸ್ತು ಯ ಆಸನ್ ಬ್ರಾಹ್ಮಣಾ ನೃಪ ।
ಆರ್ಯಾಃ ಕುಲೀನಾ ಹ್ರೀಮಂತೋ ಬ್ರಾಹ್ಮೀಂ ವೃತ್ತಿಮನುಷ್ಠಿತಾಃ ॥೨೪॥

ತೇऽಭಿಗಮ್ಯ ಮಹಾತ್ಮಾನಂ ಹೃಷೀಕೇಶಮರಿಂದಮಮ್ ।
ಪೂಜಾಂ ಚಕ್ರುರ್ಯಥಾನ್ಯಾಯಮಾಶೀರ್ಮಂಗಲಸಂಯುತಮ್ ॥೨೫॥

ಆ ಗ್ರಾಮದಲ್ಲಿದ್ದ ಬ್ರಾಹ್ಮಣವೃತ್ತಿಯನ್ನು ಅನುಸರಿಸುವ ಮಾನವಂತರೂ, ಕುಲೀನರೂ, ಶ್ರೇಷ್ಠನಡತೆಯುಳ್ಳವರೂ ಆದ ಬ್ರಾಹ್ಮಣರು ಎಲೈ ರಾಜನೇ, ಅರಿಂದಮನಾದ, ಮಹಾತ್ಮನಾದ ಹೃಷೀಕೇಶನ ಬಳಿಗೆ ಬಂದು, ವಿಧಿಗೆ ಅನುಸಾರವಾಗಿ ಮಂಗಲಯುಕ್ತವಾದ ಆಶೀರ್ವಾದಗಳನ್ನು ಮಾಡಿ ಪೂಜೆಯನ್ನು ಮಾಡಿದರು.

ತೇ ಪೂಜಯಿತ್ವಾ ದಾಶಾರ್ಹಂ ಸರ್ವಲೋಕೇಷು ಪೂಜಿತಮ್ ।
ನ್ಯವೇದಯಂತ ವೇಶ್ಮಾನಿ ಗುಣವಂತಿ ಮಹಾಂತಿ ಚ ॥೨೬॥

ಅವರು ಸರ್ವಲೋಕಪೂಜಿತನಾದ, ದಾಶಾರ್ಹನಾದ ಕೃಷ್ಣನನ್ನು ಪೂಜಿಸಿ ಸಿದ್ಧಪಡಿಸಿದ ಶ್ರೇಷ್ಠವಾದ ದೊಡ್ಡದಾದ ತಮ್ಮ ಬಿಡಾರಗಳನ್ನು ನಿವೇದಿಸಿದರು.

ತಾನ್ ಪ್ರಭುಃ ಕೃತಮಿತ್ಯುಕ್ತ್ವಾ ಸತ್ಕೃತ್ಯ ಚ ಯಥಾರ್ಹತಃ ।
ಅಭ್ಯೇತ್ಯ ಚೈಷಾಂ ವೇಶ್ಮಾನಿ ಪುನರಾಯಾತ್ ಸಹೈವ ತೈಃ ॥೨೭॥

ಪ್ರಭುವಾದ ಕೃಷ್ಣನು ಅವರನ್ನು ಚೆನ್ನಾಗಿ ಮಾಡಿದ್ದೀರಿ ಎಂದು ಹೇಳಿ, ಯೋಗ್ಯವಾಗಿ ಸತ್ಕರಿಸುತ್ತಾ ಆ ಗೃಹಗಳಿಗೆ ಹೋಗಿ ಪುನಃ ಅವರ ಜೊತೆಯಲ್ಲಿ ಹೊರಬಂದನು.

ಸುಮೃಷ್ಟಂ ಭೋಜಯಿತ್ವಾ ಚ ಬ್ರಾಹ್ಮಣಾಂಸ್ತತ್ರ ಕೇಶವಃ ।
ಭುಕ್ತ್ವಾ ಚ ಸಹ ತೈಃ ಸರ್ವೈರವಸತ್ ತಾಂ ಕ್ಷಪಾಂ ಸುಖಮ್ ॥೨೮॥

ಕೇಶವನು ಅಲ್ಲಿ ಆ ಬ್ರಾಹ್ಮಣರಿಗೆ ಮೃಷ್ಟಾನ್ನಭೋಜನವನ್ನು ಮಾಡಿಸಿ, ಅವರ ಜೊತೆಯಲ್ಲಿ ತಾನೂ ಭೋಜನವನ್ನು ಮಾಡಿ, ಅವರ ಜೊತೆಯಲ್ಲಿಯೇ ಆ ರಾತ್ರಿಯನ್ನು ಅಲ್ಲಿ ಸುಖವಾಗಿ ಕಳೆದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ದ್ವ್ಯಶೀತಿತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ತ್ರಯೋದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಎಂಬತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ಮೂರನೆಯ ಅಧ್ಯಾಯ

ಧೃತರಾಷ್ಟ್ರನ ಆದೇಶದಂತೆ ಕೃಷ್ಣನು ಬರುವ ಮಾರ್ಗದಲ್ಲಿ
ದುರ್ಯೋಧನನಿಂದ ವಿಚಿತ್ರ ಸಭೆಗಳ ನಿರ್ಮಾಣ.
ಅವುಗಳನ್ನು ನೋಡದೆ ಕೃಷ್ಣನಿಂದ ಕುರುರಾಜ್ಯಪ್ರವೇಶ.

ವೈಶಂಪಾಯನಃ

ತದಾ ದೂತೈಃ ಸಮಾಜ್ಞಾಯ ಆಯಾಂತಂ ಮಧುಸೂದನಮ್ ।
ಧೃತರಾಷ್ಟ್ರೋऽಬ್ರವೀದ್ ಭೀಷ್ಮಮರ್ಚಯಿತ್ವಾ ಮಹಾಭುಜಮ್ ॥೧॥

ವೈಶಂಪಾಯನ– ಆಗ ಧೃತರಾಷ್ಟ್ರನು ಮಧುಸೂದನನು ಬರುತ್ತಿರುವ ವಾರ್ತೆಯನ್ನು ತನ್ನ ದೂತರಿಂದ ತಿಳಿದು ಮಹಾಭುಜನಾದ ಭೀಷ್ಮನನ್ನು ಅರ್ಚಿಸಿ ಮಾತನಾಡಿದನು.

ದ್ರೋಣಂ ಚ ಸಂಜಯಂ ಚೈವ ವಿದುರಂ ಚ ಮಹಾಮತಿಮ್ ।
ದುರ್ಯೋಧನಂ ಸಹಾಮಾತ್ಯಂ ಹೃಷ್ಟರೋಮಾऽಬ್ರವೀದಿದಮ್ ॥೨॥

ದ್ರೋಣರು, ಸಂಜಯ ಮತ್ತು ಮಹಾಮತಿಯಾದ ವಿದುರ ಇವರ ಸನ್ನಿಧಿಯಲ್ಲಿ ರೋಮಾಂಚಗೊಂಡು, ಮಂತ್ರಿಗಳಿಂದ ಸಹಿತನಾದ ದುರ್ಯೋಧನನನ್ನು ಕುರಿತು ಹೀಗೆ ಮಾತನಾಡಿದನು.

ಅದ್ಭುತಂ ಮಹದಾಶ್ಚರ್ಯಂ ಶ್ರೂಯತೇ ಕುರುನಂದನ ।
ಸ್ತ್ರಿಯೋ ಬಾಲಾಶ್ಚ ವೃದ್ಧಾಶ್ಚ ಕಥಯಂತಿ ಗೃಹೇ ಗೃಹೇ ॥೩॥

ಎಲೈ ಕುರುನಂದನನೇ, ಅದ್ಭುತವಾದ ಬಹಳ ಆಶ್ಚರ್ಯಕರವಾದ ವಿಷಯವು ಕೇಳಿ ಬರುತ್ತಿದೆ. ಮನೆ ಮನೆಗಳಲ್ಲಿ ಸ್ತ್ರೀಯರು, ಬಾಲಕರು ಮತ್ತು ವೃದ್ಧರು ಅದನ್ನು ಹೇಳುತ್ತಿದ್ದಾರೆ.

ಸತ್ಕೃತ್ಯಾಚಕ್ಷತೇ ಚಾನ್ಯೇ ತಥೈವಾನ್ಯೇ ಸಮಾಗತಾಃ ।
ಪೃಥಗ್ವಾದಾಶ್ಚ ವರ್ತಂತೇ ಚತ್ವರೇಷು ಸಭಾಸು ಚ ॥೪॥

ಒಬ್ಬರನ್ನೊಬ್ಬರು ಸತ್ಕರಿಸಿ ಮಾತನಾಡುತ್ತಿದ್ದಾರೆ. ಬೇರೆ ದೇಶದಿಂದ ಬಂದವರೂ ಮಾತನಾಡುತ್ತಿದ್ದಾರೆ. ಸಭೆಗಳಲ್ಲಿ ಮತ್ತು ಚತುಷ್ಪಥಗಳಲ್ಲಿ ಸಹ ಎಲ್ಲರೂ ಬೇರೆ ಬೇರೆ ಮಾತನಾಡುತ್ತಿದ್ದಾರೆ.

ಉಪಯಾಸ್ಯತಿ ದಾಶಾರ್ಹಃ ಪಾಂಡವಾರ್ಥೇ ಪರಾಕ್ರಮೀ ।
ಸ ನೋ ಮಾನ್ಯಶ್ಚ ಪೂಜ್ಯಶ್ಚ ಸರ್ವಥಾ ಮಧುಸೂದನಃ ॥೫॥

ಆ ಆಶ್ಚರ್ಯವಾದ ಘಟನೆ ಎಂದರೆ ಪರಾಕ್ರಮಶಾಲಿಯಾದ ದಾಶಾರ್ಹನು ಪಾಂಡವರ ಸಲುವಾಗಿ ಇಲ್ಲಿಗೆ ಬರುತ್ತಿದ್ದಾನೆ. ಮಧುಸೂದನನಾದ ಅವನು ಸರ್ವಥಾ ನಮ್ಮ ಗೌರವಕ್ಕೆ ಪಾತ್ರನಾದವನು ಮತ್ತು ಪೂಜನೀಯನಾದವನು.

ತಸ್ಮಿನ್ ಹಿ ಯಾತ್ರಾ ಲೋಕಸ್ಯ ಭೂತಾನಾಮಿಶ್ವರೋ ಹಿ ಸಃ ।
ತಸ್ಮಿನ್ ಧೃತಿಶ್ಚ ವೀರ್ಯಂ ಚ ಪ್ರಜ್ಞಾ ಚೌಜಶ್ಚ ಮಾಧವೇ ॥೬॥

ಅವನು ಲೋಕದ ನಡತೆಯ ಮರ್ಯಾದೆಯನ್ನು ಸ್ಥಾಪಿಸುವವನು. ಅವನು ಎಲ್ಲರಿಗೂ ಪ್ರಭುವಾದವನು. ಆ ಮಾಧವನಲ್ಲಿ ಧೈರ್ಯವೂ, ವೀರ್ಯವೂ, ಪ್ರಜ್ಞೆಯೂ ಮತ್ತು ಬಲವೂ ನೆಲೆಗೊಂಡಿವೆ.

ಸ ಮಾನ್ಯತಾಂ ನರಶ್ರೇಷ್ಠಃ ಸ ಹಿ ಧರ್ಮಃ ಸನಾತನಃ ।
ಪೂಜಿತೋ ಹಿ ಸುಖಾಯ ಸ್ಯಾದಸುಖಾಯಾಪ್ಯಪೂಜಿತಃ ॥೭॥

ನರಶ್ರೇಷ್ಠನಾದ ಅವನು ಗೌರವಿಸಲ್ಪಡಲಿ. ಅವನೇ ಸನಾತನ ಧರ್ಮ ಎನಿಸುವವನು. ಅವನನ್ನು ಪೂಜಿಸಿದರೆ ಸುಖವುಂಟಾಗುತ್ತದೆ. ಪೂಜಿಸದಿದ್ದರೆ ದುಃಖವುಂಟಾಗುತ್ತದೆ.

ಸ ಚೇತ್ ತುಷ್ಯತಿ ದಾಶಾರ್ಹ ಉಪಚಾರೈರರಿಂದಮಃ ।
ಕೃಷ್ಣಾತ್ ಸರ್ವಾನಭಿಪ್ರಾಯಾನ್ ವಯಂ ಲಪ್ಸ್ಯಾಮಹೇ ನೃಪು ॥೮॥

ಅರಿಂದಮನಾದ ಆ ದಾಶಾರ್ಹನು ನಾವು ಮಾಡುವ ಉಪಚಾರಗಳಿಂದ ಪ್ರಸನ್ನನಾದರೆ ಆ ಕೃಷ್ಣನಿಂದ ನಾವು ನಮ್ಮ ಎಲ್ಲಾ ಅಭೀಷ್ಟಗಳನ್ನೂ ಪಡೆಯುವೆವು.

ತಸ್ಯ ಪೂಜಾರ್ಥಮದ್ಯೈವ ಸಂವಿಧತ್ಸ್ವ ಪರಂತಪ ।
ಸಭಾಃ ಪಥಿ ವಿಧೀಯಂತಾಂ ಸರ್ವಕಾಮಸಮನ್ವಿತಾಃ ॥೯॥

ಎಲೈ ಪರಂತಪನೇ, ಅವನ ಪೂಜೆಯ ಸಲುವಾಗಿ ಈ ದಿನವೇ ಅವನು ಬರುವ ಮಾರ್ಗದಲ್ಲಿ ಸರ್ವಭೋಗಸಮನ್ವಿತವಾದ ಸಭೆಗಳನ್ನು ನಿರ್ಮಿಸುವವನಾಗು.

ಯಥಾ ಪ್ರೀತಿರ್ಮಹಾಬಾಹೋ ತ್ವಯಿ ಜಾಯೇತ ತಸ್ಯ ವೈ ।
ತಥಾ ಕುರುಷ್ವ ಗಾಂಧಾರೇ ಕಥಂ ವಾ ಭೀಷ್ಮ ಮನ್ಯಸೇ ॥೧೦॥

ಎಲೈ ಗಾಂಧಾರಿ ಪುತ್ರನೇ, ಮಹಾಬಾಹುವೇ, ಹೇಗೆ ಮಾಡಿದರೆ ನಿನ್ನಲ್ಲಿ ಅವನಲ್ಲಿ ಪ್ರೀತಿಯುಂಟಾಗುತ್ತದೆಯೋ ಅದರಂತೆ ನಡೆದುಕೊ. ಭೀಷ್ಮನೇ, ನಿನ್ನ ಅಭಿಪ್ರಾಯವಾದರೂ ಏನು?

ವೈಶಂಪಾಯನಃ

ತತೋ ಭೀಷ್ಮಾದಯಃ ಸರ್ವೇ ಧೃತರಾಷ್ಟ್ರಂ ಜನಾಧಿಪಮ್ ।
ಊಚುಃ ಪರಮಮಿತ್ಯೇವ ಪೂಜಯಂತೋಽಸ್ಯ ತದ್ವಚಃ ॥೧೧॥

ವೈಶಂಪಾಯನ– ಆಗ ಭೀಷ್ಮಾದಿಗಳೆಲ್ಲರೂ ಧೃತರಾಷ್ಟ್ರನ ಆ ಮಾತುಗಳನ್ನು ಗೌರವಿಸುತ್ತಾ, ರಾಜನಾದ ಅವನನ್ನು ಕುರಿತು ಇದು ಶ್ರೇಷ್ಠವಾದ ಸಲಹೆ ಎಂದು ಹೇಳಿದರು.

ತೇಷಾಮನುಮತಂ ಜ್ಞಾತ್ವಾ ರಾಜಾ ದುರ್ಯೋಧನಸ್ತದಾ ।
ಸಭಾವಾಸ್ತೂನಿ ರಮ್ಯಾಣಿ ಪ್ರದೇಷ್ಟುಮುಪಚಕ್ರಮೇ ॥೧೨॥

ಅವರ ಅಭಿಪ್ರಾಯವನ್ನು ತಿಳಿದ ರಾಜನಾದ ದುರ್ಯೋಧನನು ಆಗ ಮನೋಹರವಾದ ಸಭಾನಿರ್ಮಾಣ ವಸ್ತುಗಳನ್ನು ಕಳುಹಿಸಲು ಪ್ರಾರಂಭಿಸಿದನು.

ತತೋ ದೇಶೇಷು ದೇಶೇಷು ರಮಣೀಯೇಷು ಭಾಗಶಃ ।
ಸರ್ವರತ್ನಸಮಾಕೀರ್ಣಾಃ ಸಭಾಶ್ಚಕ್ರುರನೇಕಶಃ ॥೧೩॥

ಅನಂತರ ಕೃಷ್ಣನು ಬರುವ ಮಾರ್ಗಗಳಲ್ಲಿ ದೇಶದೇಶಗಳಲ್ಲಿ ರಮಣೀಯವಾದ ಭಾಗಗಳಲ್ಲಿ ಸರ್ವರತ್ನಗಳಿಂದ ತುಂಬಿದ ಅನೇಕ ಸಭೆಗಳನ್ನು ನಿರ್ಮಿಸಿದರು.

ಆಸನಾನಿ ವಿಚಿತ್ರಾಣಿ ಯುತಾನಿ ವಿವಿಧೈರ್ಗುಣೈಃ ।
ಸ್ತ್ರಿಯೋ ಗಂಧಾನಲಂಕಾರಾನ್ ವಾಸಾಂಸಿ ವಿವಿಧಾನಿ ಚ ॥೧೪॥

ಗುಣವಂತ್ಯನ್ನಪಾನಾನಿ ಭೋಜ್ಯಾನಿ ವಿವಿಧಾನಿ ಚ ।
ಮಾಲ್ಯಾನಿ ಚ ಸುಗಂಧೀನಿ ತಾನಿ ರಾಜಾ ದದೌ ತತಃ ॥೧೫॥

ಅಲ್ಲಿ ಅನೇಕ ಗುಣಗಳಿಂದ ಕೂಡಿದ ವಿಚಿತ್ರವಾದ ಆಸನಗಳನ್ನೂ, ಪರಿಚಾರಿಕೆಯರಾದ ಸ್ತ್ರೀಯರನ್ನೂ, ಗಂಧಾಲಂಕಾರಗಳನ್ನೂ, ವಿವಿಧ ವಸ್ತ್ರಗಳನ್ನೂ, ಶ್ರೇಷ್ಠವಾದ ಅನ್ನ-ಪಾನಗಳನ್ನೂ, ವಿಧವಿಧವಾದ ಭೋಜ್ಯಗಳನ್ನೂ, ಸುಗಂಧಯುಕ್ತವಾದ ಪುಷ್ಪಮಾಲೆಗಳನ್ನೂ ರಾಜನು ಒದಗಿಸಿದನು.

ವಿಶೇಷತಶ್ಚ ವಾಸಾರ್ಥಂ ಸಭಾಂ ಗ್ರಾಮೇ ಕುಶಸ್ಥಲೇ ।
ವಿದಧೇ ಕೌರವೋ ರಾಜಾ ಬಹುರತ್ನಾಂ ಮನೋರಮಾಮ್ ॥೧೬॥

ವಿಶೇಷವಾಗಿ ಕುಶಸ್ಥಲಗ್ರಾಮದಲ್ಲಿ ದುರ್ಯೋಧನನು ಬಹುರತ್ನ ವಿಚಿತ್ರವಾದ ಮನೋಹರವಾದ ಸಭೆಯನ್ನು ಕೃಷ್ಣನ ವಾಸಕ್ಕಾಗಿ ಮಾಡಿಸಿದನು (ಕುಶಸ್ಥಲವೆಂದರೆ ಪಾಂಡವರು ಕೇಳಿದ ಐದುಗ್ರಾಮಗಳಲ್ಲಿ ಒಂದು, ದ್ವಾರಕೆಯಲ್ಲ).

ಏತದ್ ವಿಧಾಯ ವೈ ಸರ್ವಂ ದೇವಾರ್ಹಮತಿಮಾನುಷಮ್ ।
ಆಚಖ್ಯೌ ಧೃತರಾಷ್ಟ್ರಾಯ ರಾಜಾ ದುರ್ಯೋಧನಸ್ತಥಾ ॥೧೭॥

ದುರ್ಯೋಧನನು ಮನುಷ್ಯರಿಗೆ ಮೀರಿದ, ದೇವತೆಗಳಿಗೆ ಯೋಗ್ಯವಾದ, ಈ ಎಲ್ಲಾ ವಸ್ತುಗಳನ್ನು ಮಾಡಿಸಿ ಧೃತರಾಷ್ಟ್ರನಿಗೆ ನಿವೇದಿಸಿದನು.

ತಾಃ ಸಭಾಃ ಕೇಶವಃ ಸರ್ವಾ ರತ್ನಾನಿ ವಿವಿಧಾನಿ ಚ ।
ಅಸಮೀಕ್ಷ್ಯೈವ ದಾಶಾರ್ಹ ಉಪಾಯಾತ್ ಕುರುಸದ್ಮ ತತ್ ॥೧೮॥

ದಾಶಾರ್ಹನಾದ ಕೃಷ್ಣನು ರತ್ನಮಯವಾದ ವಿವಿಧವಾದ ಆ ಸಭೆಗಳನ್ನು ಕಣ್ಣಿನಿಂದಲೂ ನೋಡದೆ ಆ ಕುರುರಾಜ್ಯವನ್ನು ಪ್ರವೇಶಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ತ್ರ್ಯಶೀತಿತಮೋऽಧ್ಯಾಯಃ ॥

ಭಗವದ್ಯಾನಪರ್ವಣಿ ಚತುರ್ದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಎಂಬತ್ಮೂರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ನಾಲ್ಕನೆಯ ಅಧ್ಯಾಯ

ಧೃತರಾಷ್ಟ್ರನಿಂದ ಕೃಷ್ಣನಿಗೆ ತಾನು ಮಾಡುವ ಪೂಜೆಯ ಪ್ರಕಾರದ ಕಥನ. ಅದಕ್ಕೆ ವಿದುರನ ಉತ್ತರ.

ಧೃತರಾಷ್ಟ್ರಃ

ಉಪಪ್ಲಾವ್ಯಾದಿಹ ಕ್ಷತ್ತರುಪಯಾತೋ ಜನಾರ್ದನಃ ।
ಕುಶಸ್ಥಲೇ ನಿವಸತಿ ಸ ಚ ಪ್ರಾತರಿಹೈಷ್ಯತಿ ॥೧॥

ಧೃತರಾಷ್ಟ್ರ– ಎಲೈ ವಿದುರನೇ, ಜನಾರ್ದನನು ಉಪಪ್ಲಾವ್ಯನಗರದಿಂದ ಹೊರಟು ಕುಶಸ್ಥಲಕ್ಕೆ ಬಂದು ತಂಗಿದ್ದಾನೆ. ನಾಳೆ ಪ್ರಾತಃಕಾಲದಲ್ಲಿ ಇಲ್ಲಿಗೆ ಬರುವನು.

ಆಹುಕಾನಾಮಧಿಪತಿಃ ಪುರೋಗಃ ಸರ್ವಸಾತ್ವತಾಮ್ ।
ಮಹಾಮನಾ ಮಹಾವೀರ್ಯೋ ಮಹಾಮಾತ್ರೋ ಜನಾರ್ದನಃ ॥೨॥

ಜನಾರ್ದನನು ಆಹುಕರಿಗೆ ಅಧಿಪತಿ. ಸರ್ವಸಾತ್ವತರಿಗೆ ನಾಯಕನಾದವನು. ದೊಡ್ಡಮನಸ್ಸುಳ್ಳವನು. ಮಹಾಪರಾಕ್ರಮಿ ಮತ್ತು ಮಹಾಮಾತ್ರನಾದವನು.

ಸ್ಫೀತಸ್ಯ ವೃಷ್ಣಿವಂಶಸ್ಯ ಭರ್ತಾ ಗೋಪ್ತಾ ಚ ಮಾಧವಃ ।
ತ್ರಯಾಣಾಮಪಿ ಲೋಕಾನಾಂ ಭಗವಾನ್ ಪ್ರಪಿತಾಮಹಃ ॥೩॥

ಮಾಧವನು ಪರಿಶುದ್ಧವಾದ ವೃಷ್ಣಿವಂಶಕ್ಕೆ ಧಾರಕನಾದವನು ಮತ್ತು ರಕ್ಷಕನಾದವನು. ಭಗವಂತನಾದ ಅವನು ಮೂರುಲೋಕಗಳಿಗೂ ಪ್ರಪಿತಾಮಹನಾಗಿದ್ದಾನೆ.

ವೃಷ್ಣ್ಯಂಧಕಾಃ ಸುಮನಸೋ ಯಸ್ಯ ಪ್ರಜ್ಞಾಮುಪಾಸತೇ ।
ಆದಿತ್ಯಾ ವಸವೋ ರುದ್ರಾ ಯಥಾ ಬುದ್ಧಿಂ ಬೃಹಸ್ಪತೇಃ ॥೪॥

ವಸುರುದ್ರಾದಿತ್ಯರು ಬೃಹಸ್ಪತಿಯ ಬುದ್ಧಿಯನ್ನು ಆಶ್ರಯಿಸಿದಂತೆ ಒಳ್ಳೆಯ ಮನಸ್ಸುಳ್ಳ ವೃಷ್ಣ್ಯಂಧಕರು ಅವನ ಪ್ರಜ್ಞೆಯನ್ನು ಆಶ್ರಯಿಸುತ್ತಾರೆ.

ತಸ್ಮೈ ಪೂಜಾಂ ಪ್ರಯೋಕ್ಷ್ಯಾಮಿ ದಾಶಾರ್ಹಾಯ ಮಹಾತ್ಮನೇ ।
ಪ್ರತ್ಯಕ್ಷಂ ತವ ಧರ್ಮಜ್ಞ ತನ್ಮೇ ಕಥಯತಃ ಶೃಣು ॥೫॥

ಎಲೈ ಧರ್ಮಜ್ಞನೇ, ಮಹಾತ್ಮನಾದ ದಾಶಾರ್ಹನಿಗೆ ನಾನು ನಿನ್ನ ಎದುರಿನಲ್ಲಿ ಪೂಜೆಯನ್ನು ಮಾಡುವೆನು. ಆ ಪ್ರಕಾರವನ್ನು ನನ್ನಿಂದ ಕೇಳುವವನಾಗು.

ಏಕವರ್ಣೈಃ ಸುಪುಷ್ಟಾಂಗೈರ್ಬಾಹ್ಲಿಕೈಶ್ಚ ಹಯೋತ್ತಮೈಃ ।
ಚತುರ್ಯುಕ್ತಾನ್ ರಥಾಂಸ್ತಸ್ಮೈ ರೌಗ್ಮಾನ್ ದಾಸ್ಯಾಮಿ ಷೋಡಶ ॥

ಒಂದೇ ಬಣ್ಣದ ಪುಷ್ಟವಾದ ಅವಯವವುಳ್ಳ ಬಾಹ್ಲಿಕದೇಶದ ಶ್ರೇಷ್ಠವಾದ ನಾಲ್ಕು ಅಶ್ವಗಳಿಂದ ಹೂಡಿದ ಹದಿನಾರು ಸುವರ್ಣಮಯವಾದ ರಥಗಳನ್ನು ಅವನಿಗೆ ಕೊಡುವೆನು.

ನಿತ್ಯಪ್ರಭಿನ್ನಾನ್ ಮಾತಂಗಾನ್ ಈಷಾದಂತಾನ್ ಪ್ರಹಾರಿಣಃ ।
ಅಷ್ಟಾನುಚರಮೇಕೈಕಮಷ್ಟೌ ದಾಸ್ಯಾಮಿ ಕೇಶವೇ ॥೭॥

ನಿತ್ಯವೂ ಮದಿಸಿದ, ಬಾಣದಷ್ಟು ದೊಡ್ಡದಾದ ದಂತವುಳ್ಳ, ಯುದ್ಧದಲ್ಲಿ ಪಳಗಿರುವ, ಒಂದೊಂದಕ್ಕೂ ಎಂಟುಜನ ಸೇವಕರಿರುವ ಎಂಟು ಆನೆಗಳನ್ನು ಕೇಶವನಿಗೆ ಕೊಡುವೆನು.

ದಾಸೀನಾಮಪ್ರಜಾತಾನಾಂ ಶುಭಾನಾಂ ರುಗ್ಮವರ್ಚಸಾಮ್ ।
ಶತಮಸ್ಮೈ ಪ್ರದಾಸ್ಯಾಮಿ ದಾಸಾನಾಮಪಿ ತಾವತಾಮ್ ॥೮॥

ಮಕ್ಕಳನ್ನು ಹಡೆಯದ, ಯುವತಿಯರಾದ, ಸುವರ್ಣಕಾಂತಿಯುಳ್ಳ ಒಳ್ಳೆಯ ನೂರುದಾಸಿಯರನ್ನು ಮತ್ತು ಅಷ್ಟೇ ದಾಸರನ್ನು ಕೊಡುವೆನು.

ಆವಿಕಂ ಚ ಸುಖಿಸ್ಪರ್ಶಂ ಪಾರ್ವತೀಯೈರುಪಾಹೃತಮ್ ।
ತದಪ್ಯಸ್ಮೈ ಪ್ರದಾಸ್ಯಾಮಿ ಸಹಸ್ರಾಣಿ ದಶಾಷ್ಟ ಚ ॥೯॥

ಪರ್ವತಪ್ರದೇಶದ ರಾಜರು ಉಪಾಯನವಾಗಿ ಕೊಟ್ಟಿರುವ ಸುಖಿಸ್ಪರ್ಶವುಳ್ಳ ಹದಿನೆಂಟು ಸಾವಿರ ಉಣ್ಣೆಯ ವಸ್ತ್ರಗಳನ್ನು ಅವನಿಗೆ ಕೊಡುವೆನು.

ಅಜಿನಾನಾಂ ಸಹಸ್ರಾಣಿ ಚೀನದೇಶೋದ್ಭವಾನಿ ಚ ।
ತಾನ್ಯಪ್ಯಸ್ಮೈ ಪ್ರದಾಸ್ಯಾಮಿ ಯಾವದರ್ಹತಿ ಕೇಶವಃ ॥೧೦॥

ಚೀನದೇಶದಿಂದ ಬಂದ ಸಹಸ್ರ ಅಜಿನಗಳನ್ನೂ ಅವನಿಗೆ ಕೊಡುವೆನು. ಕೇಶವನು ಎಲ್ಲದಕ್ಕೂ ಅರ್ಹನಾಗಿದ್ದಾನೆ.

ದಿವಾ ರಾತ್ರೌ ಚ ಭಾತ್ಯೇಷ ಸುತೇಜಾ ವಿಮಲೋ ಮಣಿಃ ।
ತಮಪ್ಯಸ್ಮೈ ಪ್ರದಾಸ್ಯಾಮಿ ತಮಪ್ಯರ್ಹತಿ ಕೇಶವಃ ॥೧೧॥

ಹಗಲೂ ಮತ್ತು ರಾತ್ರಿಯೂ ಹೊಳೆಯುವ ಒಳ್ಳೆಯ ತೇಜಸ್ಸುಳ್ಳ ಪರಿಶುದ್ಧವಾದ ಈ ಮಣಿಯನ್ನು ಅವನಿಗೆ ಕೊಡುವೆನು. ಕೇಶವನು ಅದಕ್ಕೂ ಅರ್ಹನಾಗುತ್ತಾನೆ.

ಏಕೇನಾಭಿಪತತ್ಯಹ್ನಾ ಯೋಜನಾನಿ ಚತುರ್ದಶ ।
ಯಾನಮಶ್ವತರೀಯುಕ್ತಂ ತದಪ್ಯಸ್ಮೈ ದದಾಮ್ಯಹಮ್ ॥೧೨॥

ಒಂದು ದಿನದಲ್ಲಿ ಹದಿನಾಲ್ಕು ಯೋಜನಗಳನ್ನು ಪ್ರಯಾಣ ಮಾಡುವ ಹೇಸರಗತ್ತೆಗಳನ್ನು ಹೂಡಿದ ಯಾನವನ್ನೂ ಸಹ ಅವನಿಗೆ ಕೊಡುವೆನು.

ಯಾವಂತಿ ವಾಹನಾನ್ಯಸ್ಯ ಯಾವಂತಃ ಪುರುಷಾಶ್ಚ ವೈ ।
ತತೋಽಷ್ಟಗುಣಮಪ್ಯಸ್ಮೈ ಭೋಜ್ಯಂ ದಾಸ್ಯಾಮ್ಯಹಂ ಸದಾ ॥೧೩॥

ಅವನು ಎಷ್ಟು ವಾಹನಗಳನ್ನು ತಂದಿರುತ್ತಾನೆಯೋ ಮತ್ತು ಎಷ್ಟು ಪುರುಷರನ್ನು ತಂದಿರುತ್ತಾನೆಯೋ ಅದರ ಎಂಟುಪಟ್ಟು ಭೋಜ್ಯವಸ್ತುಗಳನ್ನು ಯಾವಾಗಲೂ ಅವನಿಗೆ ಕೊಡುವೆನು.

ಮಮ ಪುತ್ರಾಶ್ಚ ಪೌತ್ರಾಶ್ಚ ಸರ್ವೇ ದುರ್ಯೋಧನಾದೃತೇ ।
ಪ್ರತ್ಯುದ್ಯಾಸ್ಯಂತಿ ದಾಶಾರ್ಹಂ ರಥೈರ್ಮುಷ್ಟ್ಯಃ ಸ್ವಲಂಕೃತಾಃ ॥೧೪॥

ದುರ್ಯೋಧನನೊಬ್ಬನನ್ನು ಬಿಟ್ಟು ನನ್ನ ಎಲ್ಲಾ ಮಕ್ಕಳೂ ಮತ್ತು ಮೊಮ್ಮಕ್ಕಳೂ ಅಲಂಕೃತರಾಗಿ, ಅಲಂಕೃತವಾದ ರಥಗಳಿಂದ ದಾಶಾರ್ಹನನ್ನು ಎದುರುಗೊಳ್ಳುತ್ತಾರೆ.

ಸ್ವಲಂಕೃತಾಶ್ಚ ಕಲ್ಯಾಣ್ಯಃ ಪಾದ್ಯೈರೇವ ಸಹಸ್ರಶಃ ।
ವಾರಮುಖ್ಯಾ ಮಹಾಭಾಗಂ ಪ್ರತ್ಯುದ್ಯಾಸ್ಯಂತಿ ಕೇಶವಮ್ ॥೧೫॥

ಚೆನ್ನಾಗಿ ಅಲಂಕೃತರಾದ, ಮಂಗಳಪ್ರದರಾದ ಸಹಸ್ರವೇಶ್ಯೆಯರು ಬರಿಗಾಲಿನಲ್ಲಿ ನಡೆದು ಮಹಾನುಭಾವನಾದ ಕೇಶವನನ್ನು ಎದುರುಗೊಳ್ಳುತ್ತಾರೆ.

ನಗರಾದಪಿ ಯಾಃ ಕಾಶ್ಚಿದ್ ಗಮಿಷ್ಯಂತಿ ಜನಾರ್ದನಮ್ ।
ದ್ರಷ್ಟುಂ ಕನ್ಯಾಶ್ಚ ಕಲ್ಯಾಣ್ಯಃ ತಾಶ್ಚ ಯಾಸ್ಯಂತ್ಯನಾವೃತಾಃ ॥೧೬॥

ಜನಾರ್ದನನನ್ನು ನೋಡಲು ನಗರದಿಂದ ಹೊರಡುವ ಮಂಗಳರೂಪರಾದ ಕನ್ಯೆಯರೆಲ್ಲರೂ ಯಾವ ಆವರಣವೂ (ಮುಖ ಪರದೆಯೂ) ಇಲ್ಲದೆ ಹೋಗುವರು.

ಸಸ್ತ್ರೀಪುರುಷಬಾಲಂ ಚ ನಗರಂ ಮಧುಸೂದನಮ್ ।
ಉದೀಕ್ಷತಾಂ ಮಹಾತ್ಮಾನಂ ಭಾನುಮಂತಮಿವ ಪ್ರಜಾಃ ॥೧೭॥

ಪ್ರಜೆಗಳು ಸೂರ್ಯನನ್ನು ನೋಡಿದಂತೆ ನಗರದ ಸ್ತ್ರೀ-ಪುರುಷ-ಬಾಲಕರೆಲ್ಲರೂ ಮಹಾತ್ಮನಾದ ಮಧುಸೂದನನನ್ನು ನೋಡಲಿ.

ಮಹಾಧ್ವಜಪತಾಕಾಶ್ಚ ಕ್ರಿಯಂತಾಂ ಸರ್ವತೋ ದಿಶಃ ।
ಜಲಾವಸಿಕ್ತೋ ವಿರಜಾಃ ಪಂಥಾ ಕಾರ್ಯಸ್ತು ಸರ್ವತಃ ॥೧೮॥

ಎಲ್ಲ ಕಡೆಗಳಲ್ಲಿಯೂ ದೊಡ್ಡ ಧ್ವಜಗಳನ್ನೂ ಪತಾಕೆಗಳನ್ನೂ ನಿರ್ಮಿಸಿ, ಮಾರ್ಗಗಳನ್ನು ಧೂಳಿಲ್ಲದಂತೆ ಗುಡಿಸಿ, ಸುಗಂಧಯುಕ್ತವಾದ ಜಲಗಳಿಂದ ಸಿಂಪಡಿಸಿ.

ದುಃಶಾಸನಸ್ಯ ಚ ಗೃಹಂ ದುರ್ಯೋಧನಗೃಹಾದ್ ವರಮ್ ।
ತದದ್ಯ ಕ್ರಿಯತಾಂ ಕ್ಷಿಪ್ರಂ ಸುಸಮ್ಮೃಷ್ಟಮಲಂಕೃತಮ್ ॥೧೯॥

ದುಶ್ಶಾಸನನ ಗೃಹವು ದುರ್ಯೋಧನನ ಗೃಹಕ್ಕಿಂತಲೂ ಶ್ರೇಷ್ಠವಾದುದು. ಅದನ್ನು ಬೇಗ ಶುದ್ಧಿಮಾಡಿ ಅಲಂಕರಿಸಿ ಸಿದ್ಧಪಡಿಸಿ.

ಏತದ್ಧಿ ರುಚಿರಾಕಾರೈಃ ಪ್ರಾಸಾದೈರುಪಶೋಭಿತಮ್ ।
ಶಿವಂ ಚ ರಮಣೀಯಂ ಚ ಸರ್ವತ್ರ ಸುಮನೋರಮಮ್ ॥೨೦॥

ಅದು ಮನೋಹರವಾದ ಅನೇಕ ಉಪ್ಪರಿಗೆಯಿಂದ ಕೂಡಿದ್ದು ಎಲ್ಲ ಕಡೆಗಳಲ್ಲಿಯೂ ಮನೋಹರವೂ, ರಮಣೀಯವೂ ಮತ್ತು ಮಂಗಳಪ್ರದವೂ ಆಗಿದೆ.

ಸರ್ವಮಸ್ಮಿನ್ ಗೃಹೇ ರತ್ನಂ ಮಮ ದುರ್ಯೋಧನಸ್ಯ ಚ ।
ಯದ್ಯದರ್ಹತಿ ವಾರ್ಷ್ಣೇಯಃ ತತ್ತದ್ ದೇಯಮಸಂಶಯಮ್ ॥೨೧॥

ಆ ಮನೆಯಲ್ಲಿ ನನ್ನ ಮತ್ತು ದುರ್ಯೋಧನನ ಎಲ್ಲ ರತ್ನಗಳೂ ಇವೆ. ವಾರ್ಷ್ಣೇಯನಾದ ಕೃಷ್ಣನು ಯಾವ ಯಾವುದಕ್ಕೆ ಅರ್ಹನಾಗಿದ್ದಾನೆಯೋ ಅವೆಲ್ಲವನ್ನೂ ನಿಸ್ಸಂಶಯವಾಗಿ ಅವನಿಗೆ ಕೊಡತಕ್ಕದ್ದು.

ವಿದುರಃ

ರಾಜನ್ ಬಹುಮತಶ್ಚಾಸಿ ತ್ರೈಲೋಕ್ಯಸ್ಯಾಪಿ ಸತ್ತಮಃ ।
ಸಂಭಾವಿತಶ್ಚ ಲೋಕಸ್ಯ ಸಮ್ಮತಶ್ಚಾಸಿ ಭಾರತ ॥೨೩॥

ವಿದುರ– ರಾಜನೇ, ನೀನು ಮೂರುಲೋಕಗಳಲ್ಲಿಯೂ ಬಹುಮತನಾಗಿದ್ದೀಯೆ. ಶ್ರೇಷ್ಠ ಸಜ್ಜನನಾಗಿದ್ದೀಯೆ. ಎಲೈ ಭಾರತನೇ, ನೀನು ಜನರಿಂದ ಸಂಭಾವಿತನೂ ಅವರಿಗೆ ಸಮ್ಮತನೂ ಆಗಿದ್ದೀಯೆ.

ಯತ್ ತ್ವಮೇವಂ ಗತೇ(ತಂ) ಬ್ರೂಯಾಃ ಪಶ್ಚಿಮೇ ವಯಸಿ ಸ್ಥಿತಃ ।
ಶಾಸ್ತ್ರಾದ್ವಾ ಕಾರಣಾದ್ವಾಪಿ ಸುಸ್ಥಿರಃ ಸ್ಥವಿರೋ ಹ್ಯಸಿ ॥೨೪॥

ಪಶ್ಚಿಮ ವಯಸ್ಸಿನಲ್ಲಿರುವ ನೀನು ಶಾಸ್ತ್ರವಚನದಿಂದಾಗಲೀ ಅಥವಾ ನಿನ್ನ ಯೋಗ್ಯತೆಯ ಕಾರಣದಿಂದಾಗಲೀ ಹೀಗೆ ಮಾತನಾಡುತ್ತಿರುವುದು ಸ್ಥಿರವಾಗಿರಲಿ. ನೀನು ನಿಜವಾಗಿಯೂ ಈಗ ವೃದ್ಧನಾಗಿದ್ದೀಯೆ.

ಲೇಖಾಽಶ್ಮನೀವ ಭಾಃ ಸೂರ್ಯೇ ಮಹೋರ್ಮಿರಿವ ಸಾಗರೇ ।
ಧರ್ಮಸ್ತ್ವಯಿ ಮಹಾರಾಜ ಇತಿ ವ್ಯವಸಿತಾಃ ಪ್ರಜಾಃ ॥೨೪॥

ಎಲೈ ಮಹಾರಾಜನೇ, ಶಿಲೆಯಲ್ಲಿ ಬರೆದ ಶಾಸನದಂತೆ, ಸೂರ್ಯನ ಕಾಂತಿಯಂತೆ, ಸಾಗರದ ದೊಡ್ಡ ಅಲೆಯಂತೆ ನಿನ್ನಲ್ಲಿ ಧರ್ಮವಿದೆ ಎಂದು ಪ್ರಜೆಗಳು ತಿಳಿದಿದ್ದಾರೆ.

ಸದೈವ ಭಾವಿತೋ ಲೋಕೋ ಗುಣೌಘೈಸ್ತವ ಪಾರ್ಥಿವ ।
ಗುಣಾನಾಂ ರಕ್ಷಣೇ ನಿತ್ಯಂ ಪ್ರಯತಸ್ವ ಸಬಾಂಧವಃ ॥೨೫॥

ಆರ್ಜವಂ ಪ್ರತಿಪದ್ಯಸ್ವ ಮಾ ಬಾಲ್ಯಾದ್ ಬಹುಧಾ ನಶೀಃ ॥೨೬॥

ಎಲೈ ರಾಜನೇ, ನಿನ್ನ ಗುಣಸಮೂಹಗಳಿಂದ ಪ್ರಜೆಗಳನ್ನು ಯಾವಾಗಲೂ ರಕ್ಷಿಸಿದ್ದೀಯೆ (ಗೌರವಿಸಿದ್ದೀಯೆ). ಬಾಂಧವಸಹಿತನಾದ ನೀನು ನಿನ್ನ ಗುಣಗಳನ್ನು

ರಕ್ಷಿಸಿಕೊಳ್ಳಲು ಯಾವಾಗಲೂ ಪ್ರಯತ್ನವನ್ನು ಪಡುವವನಾಗು. ಮನೋವಾಕ್ ಕಾಯಗಳಲ್ಲಿ ಆರ್ಜವ (ನೇರತನ)ವನ್ನು ಹೊಂದುವವನಾಗು. ಬಾಲಬುದ್ಧಿಯಿಂದ ಬಹುಪ್ರಕಾರವಾಗಿ ನಾಶವನ್ನು ಹೊಂದಬೇಡ.

ರಾಜನ್ ಪುತ್ರಾಂಶ್ಚ ಪೌತ್ರಾಂಶ್ಚ ಸುಹೃದಶ್ಚೈವ ಸುಪ್ರಿಯಾನ್ ।
ಯತ್ ತ್ವಂ ದಿತ್ಸಸಿ ಕೃಷ್ಣಾಯ ರಾಜನ್ನತಿಥಯೇ ಬಹು ॥೨೭॥

ಏತದನ್ಯಚ್ಚ ದಾಶಾರ್ಹಃ ಪೃಥಿವೀಮಪಿ ಚಾರ್ಹತಿ ॥೨೮॥

ರಾಜನೇ, ಅತಿಥಿಯಾದ ಕೃಷ್ಣನಿಗೆ ಪುತ್ರರು, ಪೌತ್ರರು, ಪ್ರಿಯರಾದ ಸುಹೃಜ್ಜನರು ಇವರನ್ನು ನೀನು ಏನು ನಿವೇದಿಸಲು ಬಯಸಿದ್ದೀಯೋ ದಾಶಾರ್ಹನಾದ ಕೃಷ್ಣನು ಅವುಗಳನ್ನೂ ಮತ್ತು ಅದಕ್ಕಿಂತ ದೊಡ್ಡದಾದ ಪೃಥಿವಿಯನ್ನೂ ಸ್ವೀಕರಿಸಲು ಅರ್ಹನಾಗಿದ್ದಾನೆ.

ನ ತು ತ್ವಂ ಧರ್ಮಮುದ್ದಿಶ್ಯ ತಸ್ಯಾ ವಾ ಪ್ರಿಯಕಾರಣಾತ್ ।
ಏತದ್ ದಿತ್ಸಸಿ ಕೃಷ್ಣಾಯ ಸತ್ಯೇನಾತ್ಮಾನಮಾಲಭೇ ॥೨೯॥

ಆದರೆ ನೀನು ಧರ್ಮವನ್ನು ಉದ್ದೇಶಿಸಿ ಅಥವಾ ಕೃಷ್ಣನ ಪ್ರೀತಿಯನ್ನು ಉದ್ದೇಶಿಸಿ ಈ ಯಾವುದನ್ನೂ ಅವನಿಗೆ ಕೊಡುತ್ತಿಲ್ಲವೆಂದು ನಾನು ನನ್ನ ಮೇಲೆ ಆಣೆಯನ್ನು ಮಾಡಿ ಹೇಳುತ್ತೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಚತುರಶೀತಿತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಪಂಚದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಎಂಬತ್ನಾಲ್ಕನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೈದನೆಯ ಅಧ್ಯಾಯ

ಧೃತರಾಷ್ಟ್ರನನ್ನು ಕುರಿತು ವಿದುರನ ಮಾತುಗಳು.

ವಿದುರಃ

ಮಾಯೈಷಾ ಸತ್ಯಮೇವೈತದ್ ಭದ್ಯೈತದ್ ಭೂರಿದಕ್ಷಿಣಾ ।
ಜಾನಾಮಿ ತೇ ಮತಂ ರಾಜನ್ ಗೂಢಂ ಬಾಹ್ಯೇನ ಕರ್ಮಣಾ ॥೧॥

ವಿದುರ– ಈ ಭೂರಿದಕ್ಷಿಣೆಯ ಮಾತುಗಳು ಮೋಸ ಮತ್ತು ಕಪಟ. ಇದನ್ನು ಸತ್ಯವಾಗಿ ಹೇಳುತ್ತಿದ್ದೇನೆ. ರಾಜನೇ, ಬಾಹ್ಯವಾದ ಈ ಕರ್ಮದಿಂದ ನಿನ್ನ ಮನಸ್ಸಿನಲ್ಲಿ ಗೂಢವಾದ ಅಭಿಪ್ರಾಯವೇನಿದೆ ಎಂದು ನಾನು ತಿಳಿದಿದ್ದೇನೆ.

ಪಂಚ ಪಂಚೈವ ಲಿಪ್ಸಂತಿ ಗ್ರಾಮಕಾನ್ ಪಾಂಡವಾ ನೃಪ ।
ನ ಚ ದಿತ್ಸಸಿ ತೇಭ್ಯಸ್ತಾನ್ ತತ್ಸಮಂ ಕಿಂ ಕರಿಷ್ಯತಿ ॥೨॥

ಎಲೈ ರಾಜನೇ, ಪಂಚಪಾಂಡವರು ಐದು ಸಣ್ಣಗ್ರಾಮಗಳನ್ನು ಮಾತ್ರ ಪಡೆಯಲು ಬಯಸುತ್ತಾರೆ. ನೀನು ಅವರಿಗೆ ಅದನ್ನು ಕೊಡಲು ಬಯಸುವುದಿಲ್ಲ. ಅದಕ್ಕೆ ಸಮನಾದುದನ್ನು ಬೇರೆ ಏನನ್ನು ಮಾಡುವಿ?

ಅರ್ಥೇನ ತು ಮಹಾಬಾಹುಂ ವಾರ್ಷ್ಣೇಯಂ ತ್ವಂ ಜಿಹೀರ್ಷಸಿ ।
ಅನೇನ ಚಾಪ್ಯುಪಾಯೇನ ಪಾಂಡವೇಭ್ಯಃ ಪ್ರದೀಯತಾಮ್ ॥೩॥

ಮಹಾಬಾಹುವಾದ ಕೃಷ್ಣನಿಗೆ ದ್ರವ್ಯವನ್ನು ಕೊಟ್ಟು, ಅವನನ್ನು ಪಾಂಡವರಿಂದ ಬೇರ್ಪಡಿಸಲು ನೀನು ಬಯಸುತ್ತಿದ್ದೀಯೆ. ಈ ಉಪಾಯದ ಬದಲು ಪಾಂಡವರಿಗೆ ಕೊಡಬೇಕಾದುದನ್ನು ಕೊಡು.

ನ ಚ ವಿತ್ತೇನ ಶಕ್ಯೋಽಸೌ ನೋದ್ಯಮೇನ ನ ಗರ್ಹಯಾ ।
ಅನ್ಯೋ ಧನಂಜಯಾತ್ ಕರ್ತುಮೇತತ್ ತತ್ತ್ವಂ ಬ್ರವೀಮಿ ತೇ ॥೪॥

ವಿತ್ತದಿಂದಾಗಲೀ, ಬೇರೆ ಪ್ರಯತ್ನದಿಂದಾಗಲೀ ಅಥವಾ ನಿಂದನೆಯಿಂದಾಗಲೀ ಕೃಷ್ಣನನ್ನು ಅರ್ಜುನನಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಇದನ್ನು ನಿನಗೆ ಸತ್ಯವಾಗಿ ಹೇಳುತ್ತಿದ್ದೇನೆ.

ವೇದ ಕೃಷ್ಣಸ್ಯ ಮಾಹಾತ್ಮ್ಯಂ ವೇದಾಸ್ಯ ದೃಢಭಕ್ತಿತಾಮ್ ।
ಅನನ್ಯಮಸ್ಯ ಜಾನಾಮಿ ಪ್ರಾಣೈಸ್ತುಲ್ಯಂ ಧನಂಜಯಮ್ ॥೫॥

ಅರ್ಜುನನು ಕೃಷ್ಣನ ಮಹಿಮೆಯನ್ನೂ, ಕೃಷ್ಣನಿಗೆ ತನ್ನಲ್ಲಿರುವ ಅನುರಾಗವನ್ನೂ ತಿಳಿದಿದ್ದಾನೆ. ಅರ್ಜುನನು ಕೃಷ್ಣನಿಂದ ಅನನ್ಯನಾದವನು, ಅವನ ಪ್ರಾಣಗಳಿಗೆ ಸಮನಾದವನು ಎಂದು ನಾನು ತಿಳಿದಿದ್ದೇನೆ.

ಅನ್ಯತ್ ಪೂರ್ಣಾದಪಾಂ ಕುಂಭಾದ್ ಅನ್ಯತ್ ಪಾದಾವನೇಜನಾತ್ ।
ಅನ್ಯತ್ ಕುಶಲಸಂಪ್ರಶ್ನಾನ್ನ ಚೇಚ್ಛತಿ ಜನಾರ್ದನಃ ॥೬॥

ಪೂರ್ಣಕುಂಭಸ್ವಾಗತ, ಪಾದಪ್ರಕ್ಷಾಳನೆ ಮತ್ತು ಕುಶಲಪ್ರಶ್ನೆಯನ್ನು ಬಿಟ್ಟು ಕೃಷ್ಣನು ಬೇರೆ ಏನನ್ನೂ ಬಯಸುವುದಿಲ್ಲ.

ಯತ್ತ ಸ್ಯ ಪ್ರಿಯಮಾತಿಥ್ಯಂ ಮಾನಾರ್ಹಸ್ಯ ಮಹಾತ್ಮನಃ ।
ತದಸ್ಮೈ ಕ್ರಿಯತಾಂ ರಾಜನ್ ಮಾನಾರ್ಹೋಽಸೌ ಜನಾರ್ದನಃ ॥೭॥

ಎಲೈ ರಾಜನೇ, ಗೌರವಕ್ಕೆ ಯೋಗ್ಯನಾದ, ಮಹಾತ್ಮನಾದ ಅವನಿಗೆ ಪ್ರಿಯವಾದ ಆತಿಥ್ಯವೇನಿದೆಯೋ ಅದನ್ನು ಮಾಡು. ಈ ಜನಾರ್ದನನು ಎಲ್ಲ ಗೌರವಕ್ಕೂ ಅರ್ಹನಾದವನು.

ಆಶಂಸಮಾನಃ ಕಲ್ಯಾಣಂ ಕುರೂನಭ್ಯೇತಿ ಕೇಶವಃ ।
ಯೇನೈವ ರಾಜನ್ನರ್ಥೇನ ತಮೇವಾಸ್ಮಾ ಉಪಾಕುರು ॥೮॥

ಎಲೈ ರಾಜನೇ, ಕೌರವರಿಗೆ ಕ್ಷೇಮವನ್ನು ಬಯಸಿ ಯಾವ ಅಭಿಪ್ರಾಯದಿಂದ ಕೇಶವನು ಇಲ್ಲಿಗೆ ಬರುತ್ತಿದ್ದಾನೆಯೋ ಅದನ್ನೇ ಅವನಿಗೆ ಉಪಾಯನವನ್ನಾಗಿ ಕೊಡು.

ಶಮಮಿಚ್ಛತಿ ದಾಶಾರ್ಹಃ ತವ ದುರ್ಯೋಧನಸ್ಯ ಚ ।
ಪಾಂಡವಾನಾಂ ಚ ರಾಜೇಂದ್ರ ತದಸ್ಯ ವಚನಂ ಕುರು ॥೯॥

ಎಲೈ ರಾಜೇಂದ್ರನೇ, ದಾಶಾರ್ಹನಾದ ಅವನು ನಿನಗೂ, ದುರ್ಯೋಧನನಿಗೂ ಮತ್ತು ಪಾಂಡವರಿಗೂ ಶಾಂತಿಯನ್ನು ಬಯಸುತ್ತಾನೆ. ಅವನ ಆ ಮಾತನ್ನು ನಡೆಸು.

ಪಿತಾऽಸಿ ರಾಜನ್ ಪುತ್ರಾಸ್ತೇ ವೃದ್ಧಸ್ತ್ವಂ ಶಿಶವಃ ಪರೇ ।
ವರ್ತಸ್ವ ಪಿತೃವತ್ ತೇಷು ವರ್ತಂತೇ ತೇ ಹಿ ಪುತ್ರವತ್ ॥೧೦॥

ರಾಜನೇ, ನೀನು ತಂದೆಯಾಗಿದ್ದೀಯೆ. ಪಾಂಡವರು ನಿನ್ನ ಮಕ್ಕಳು. ನೀನು ವೃದ್ಧನಾಗಿದ್ದೀಯೆ. ಅವರು ನಿನ್ನ ಶಿಶುಗಳು. ಅವರಲ್ಲಿ ನೀನು ತಂದೆಯಂತೆ ನಡೆದುಕೊ, ಅವರು ನಿನ್ನಲ್ಲಿ ಮಕ್ಕಳಂತೆ ನಡೆದುಕೊಳ್ಳುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪಂಚಾಶೀತಿತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಷೋಡಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಎಂಬತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತಾರನೆಯ ಅಧ್ಯಾಯ

ದುರ್ಯೋಧನನ ಕೃಷ್ಣಬಂಧನ ಸಂಕಲ್ಪ. ಭೀಷ್ಮರ ಸಭಾತ್ಯಾಗ.

ದುರ್ಯೋಧನಃ

ಯದಾಹ ವಿದುರಃ ಕೃಷ್ಣೇ ಸರ್ವಂ ತತ್ ಸತ್ಯಮುಚ್ಯತೇ ।
ಅನುರಕ್ತೋऽಪ್ಯಸಂಹಾರ್ಯಃ ಪಾರ್ಥಾನ್ ಪ್ರತಿ ಜನಾರ್ದನಃ ॥೧॥

ದುರ್ಯೋಧನ– ವಿದುರನು ಕೃಷ್ಣನ ವಿಷಯದಲ್ಲಿ ಏನು ಹೇಳಿದನೋ ಅದೆಲ್ಲವೂ ಸತ್ಯವಾಗಿದೆ. ನಾವು ಮಾಡುವ ಪೂಜೆಯಿಂದ ಕೃಷ್ಣನು ನಮ್ಮಲ್ಲಿ ಪ್ರೀತಿಯನ್ನು ಹೊಂದಿದರೂ ಪಾಂಡವರಿಂದ ಅವನನ್ನು ಬೇರ್ಪಡಿಸಲು ಸಾಧ್ಯವಿಲ್ಲ.

ಯತ್ತತ್ ಸತ್ಕಾರಸಂಯುಕ್ತಂ ದೇಯಂ ವಸು ಜನಾರ್ದನೇ ।
ಅನೇಕರೂಪಂ ರಾಜೇಂದ್ರ ತನ್ನ ದೇಯಂ ಕದಾಚನ ॥೨॥

ಎಲೈ ರಾಜೇಂದ್ರನೇ, ನೀನು ಸತ್ಕಾರಸಹಿತವಾಗಿ ಕೃಷ್ಣನಿಗೆ ಅನೇಕವಿಧವಾದ ದ್ರವ್ಯಗಳನ್ನು ಕೊಡಬೇಕೆಂದು ಏನು ಯೋಚಿಸಿದ್ದಿಯೋ ಅದು ಯಾವುದನ್ನೂ ಖಂಡಿತವಾಗಿ ಕೊಡಬಾರದು.

ದೇಶಃ ಕಾಲಸ್ತಥಾ ಯುಕ್ತೋ ನ ಹಿ ನಾರ್ಹತಿ ಕೇಶವಃ ।
ಮಂಸ್ಯತ್ಯಧೋಕ್ಷಜೋ ರಾಜನ್ ಭಯಾದರ್ಚತಿ ಮಾಮಿತಿ ॥೩॥

ದೇಶ-ಕಾಲಗಳು ಹಾಗೆ ಕೂಡಿಬಂದಿವೆ. ಕೇಶವನು ಅದಕ್ಕೆ ಅರ್ಹನಲ್ಲ ಎಂದಲ್ಲ. ಆದರೆ ರಾಜನೇ, ಅವರು ನನ್ನನ್ನು ಭಯದಿಂದ ಅರ್ಚಿಸುತ್ತಿದ್ದಾರೆ ಎಂದು ಕೃಷ್ಣನು ತಿಳಿಯುವನು.

ಅವಮಾನಶ್ಚ ಯತ್ರ ಸ್ಯಾತ್ ಕ್ಷತ್ರಿಯಸ್ಯ ವಿಶಾಂಪತೇ ।
ನ ತತ್ ಕುರ್ಯಾದ್ ಬುಧಃ ಕಾರ್ಯಮಿತಿ ಮೇ ನಿಶ್ಚಿತಾ ಮತಿಃ ॥೪॥

ಎಲೈ ರಾಜನೇ, ಕ್ಷತ್ರಿಯನಿಗೆ ಯಾವ ಕಾರ್ಯದಿಂದ ಅವಮಾನ ಉಂಟಾಗುತ್ತದೆಯೋ ಅಂತಹ ಕಾರ್ಯವನ್ನು ವಿವೇಕಿಯಾದ ಕ್ಷತ್ರಿಯನು ಮಾಡಬಾರದು ಎಂದು ನನ್ನ ನಿಶ್ಚಿತವಾದ ಅಭಿಪ್ರಾಯ.

ಸ ಹಿ ಪೂಜ್ಯತಮೋ ದೇವಃ ಕೃಷ್ಣಃ ಕಮಲಲೋಚನಃ ।
ತ್ರಯಾಣಾಮಪಿ ಲೋಕಾನಾಂ ವಿದಿತಂ ಮಮ ಸರ್ವಥಾ ॥೫॥

ಕಮಲಲೋಚನನಾದ, ದೇವನಾದ ಕೃಷ್ಣನು ಮೂರುಲೋಕಗಳಿಗೂ ಅತ್ಯಂತ ಪೂಜ್ಯನಾದವನು ಎಂಬು ನಾನು ಚೆನ್ನಾಗಿ ತಿಳಿದಿದ್ದೇನೆ.

ನ ತು ತಸ್ಮೈ ಪ್ರದೇಯಂ ಸ್ಯಾತ್ ತಥಾ ಕಾರ್ಯಗತಿಃ ಪ್ರಭೋ ।
ವಿಗ್ರಹಃ ಸಮುಪಾರಬ್ಧೋ ನ ಹಿ ಶಾಮ್ಯತಿ ವಿಗ್ರಹಾತ್ ॥೬॥

ಆದರೆ ಅವನಿಗೆ ಏನನ್ನೂ ಕೊಡಬಾರದು. ಎಲೈ ಪ್ರಭುವೇ, ಪರಿಸ್ಥಿತಿಯು ಹಾಗಿದೆ. ಯುದ್ಧವು ಉಪಕ್ರಾಂತವಾಗಿದೆ. ಯುದ್ಧವನ್ನು ತ್ಯಜಿಸುವುದನ್ನು ಬಿಟ್ಟು ಬೇರೆ ಯಾವುದರಿಂದಲೂ ಅವನು ಪ್ರಸನ್ನನಾಗುವುದಿಲ್ಲ.

ವೈಶಂಪಾಯನಃ

ತಸ್ಯ ತದ್ವಚನಂ ಶ್ರುತ್ವಾ ಭೀಷ್ಮಃ ಕುರುಪಿತಾಮಹಃ ।
ವೈಚಿತ್ರವೀರ್ಯಂ ರಾಜಾನಮಿದಂ ವಚನಮಬ್ರವೀತ್ ॥೭॥

ವೈಶಂಪಾಯನ– ಆ ಮಾತುಗಳನ್ನು ಕೇಳಿ ಕುರುಪಿತಾಮಹನಾದ ಭೀಷ್ಮನು ವಿಚಿತ್ರವೀರ್ಯನ ಪುತ್ರನಾದ ಧೃತರಾಷ್ಟ್ರರಾಜನನ್ನು ಕುರಿತು ಹೀಗೆ ಮಾತನಾಡಿದನು.

ಸತ್ಕೃತೋಽಸತ್ಕೃತೋ ವಾಽಪಿ ನ ಕ್ರುದ್ಧ್ಯೇತ ಜನಾರ್ದನಃ ।
ನಾವಮಂಸ್ಯತ್ಯವಜ್ಞಾತ್ಸ್ತಾನ್ ಅವಜ್ಞಾತೋಽಪಿ ಕೇಶವಃ ॥೮॥

ಗೌರವಿಸಿದರೂ ಅಥವಾ ಗೌರವಿಸದಿದ್ದರೂ ಕೃಷ್ಣನು ಕೋಪಗೊಳ್ಳುವುದಿಲ್ಲ. ಅವನಿಗೆ ಅವಮಾನವನ್ನು ಮಾಡಿದರೂ ಕೃಷ್ಣನು ಅವಮಾನ ಮಾಡಿದವರಿಗೆ ಪ್ರತಿಯಾಗಿ ಅವಮಾನವನ್ನು ಮಾಡುವುದಿಲ್ಲ.

ಯತ್ತು ಕಾರ್ಯಂ ಮಹಾಬಾಹೋ ಮನಸಾ ಕಾರ್ಯತಾಂ ಗತಮ್ ।
ಸರ್ವೋಪಾಯೈರ್ನ ತಚ್ಚಕ್ಯಂ ಕೇನಚಿತ್ ಕರ್ತುಮನ್ಯಥಾ ॥೯॥

ಎಲೈ ಮಹಾಬಾಹುವೇ, ಯಾವುದನ್ನು ಮಾಡತಕ್ಕದ್ದು ಎಂದು ಅವನು ಮನಸ್ಸಿನಲ್ಲಿ ನಿರ್ಧರಿಸುತ್ತಾನೆಯೋ ಅದನ್ನು ಯಾವ ಉಪಾಯದಿಂದಲೂ ಯಾರಿಂದಲೂ ಬದಲಾಯಿಸಲು ಸಾಧ್ಯವಿಲ್ಲ.

ಸ ಯದ್ ಬ್ರೂಯಾನ್ಮಹಾಬಾಹುಸ್ತತ್ ಕಾರ್ಯಮವಿಶಂಕಯಾ ।
ವಾಸುದೇವೇನ ತೀರ್ಥೇನ ಕ್ಷಿಪ್ರಂ ಸಂಶಾಮ್ಯ ಪಾಂಡವೈಃ ॥೧೦॥

ಮಹಾಬಾಹುವಾದ ಅವನು ಏನನ್ನು ಮಾಡಬೇಕೆಂದು ಹೇಳುತ್ತಾನೆಯೋ ಅದನ್ನು ಶಂಕೆಯನ್ನು ಮಾಡದೆ ಮಾಡಬೇಕು. ಪೂಜ್ಯನಾದ, ಗುರುವಾದ ಕೃಷ್ಣನ ನಿಮಿತ್ತದಿಂದಾಗಿ ಪಾಂಡವರ ಜೊತೆಯಲ್ಲಿ ಶೀಘ್ರವಾಗಿ ಶಾಂತಿಯನ್ನು ಹೊಂದುವವನಾಗು.

ಧರ್ಮ್ಯಮರ್ಥ್ಯಂ ಚ ಧರ್ಮಾತ್ಮಾ ಧ್ರುವಂ ವಕ್ತಾ ಜನಾರ್ದನಃ ।
ತಸ್ಮಿನ್ ವಾಚ್ಯಾಃ ಪ್ರಿಯಾ ವಾಚೋ ಭವತಾ ಬಾಂಧವೈಃ ಸಹ ॥೧೧॥

ಧರ್ಮಾತ್ಮನಾದ ಜನಾರ್ದನನು ಖಂಡಿತವಾಗಿ ಧರ್ಮಸಹಿತವಾದ ಮತ್ತು ಅರ್ಥಸಾಧಕವಾದ ಮಾತುಗಳನ್ನು ಆಡುವನು. ಅವನಿಗೆ ನೀನೂ ಮತ್ತು ನಿನ್ನ ಬಾಂಧವರೂ ಸಹ ಪ್ರಿಯವಾದ ಮಾತುಗಳನ್ನೇ ಆಡಬೇಕು.

ದುರ್ಯೋಧನಃ

ನ ಪರ್ಯಾಪ್ತೋಽಸ್ಮಿ ಯದ್ ರಾಜನ್ ಶ್ರಿಯಂ ನಿಷ್ಕೇವಲಾಮಹಮ್।
ತೈಃ ಸಹೇಮಾಮುಪಾಶ್ನೀಯಾಂ ಯಾವಜ್ಜೀವಂ ಪಿತಾಮಹ ॥೧೨॥

ದುರ್ಯೋಧನ– ಎಲೈ ರಾಜನೇ, ಇನ್ನೊಬ್ಬರ ಜೊತೆಯಲ್ಲಿ ಹಂಚಿಕೊಳ್ಳುವ ಸಂಪತ್ತು ನನಗೆ ಎಂದೂ ತೃಪ್ತಿಯನ್ನು ಉಂಟುಮಾಡುವುದಿಲ್ಲ. ಪಿತಾಮಹನೇ, ಬದುಕಿರುವವರೆಗೆ ನಾನು ಪಾಂಡವರ ಜೊತೆಯಲ್ಲಿ ಹಂಚಿಕೊಂಡು ಈ ಭೂಮಿಯನ್ನು ಭೋಗಿಸಲಾರೆ.

ಇದಂ ತು ಸುಮಹತ್ ಕಾರ್ಯಂ ಶೃಣು ಮೇ ಯತ್ ಸಮರ್ಥಿತಮ್।
ಪರಾಯಣಂ ಪಾಂಡವಾನಾಂ ನಿಯಂಸ್ಯಾಮಿ ಜನಾರ್ದನಮ್ ॥೧೩॥

ನಾನು ಸಂಕಲ್ಪಿಸಿರುವ ಈ ದೊಡ್ಡಕಾರ್ಯವನ್ನು ಕೇಳುವವನಾಗು. ಪಾಂಡವರಿಗೆ ದೊಡ್ಡ ಆಶ್ರಯನಾದ ಕೃಷ್ಣನನ್ನು ನಾನು ಬಂಧಿಸುವೆನು.

ತಸ್ಮಿನ್ ಬದ್ಧೇ ಭವಿಷ್ಯಂತಿ ವೃಷ್ಣಯಃ ಪೃಥಿವೀ ತಥಾ ।
ಪಾಂಡವಾಶ್ಚ ವಿಧೇಯಾ ಮೇ ಸ ಚ ಪ್ರಾತರಿಹೈಷ್ಯತಿ ॥೧೪॥

ಕೃಷ್ಣನು ಬದ್ಧನಾದರೆ ಎಲ್ಲ ವೃಷ್ಣಿಗಳೂ, ಪೃಥಿವಿಯೂ ಮತ್ತು ಪಾಂಡವರೂ ನನಗೆ ವಿಧೇಯರಾಗುವರು. ಅವನು ನಾಳೆ ಪ್ರಾತಃಕಾಲದಲ್ಲಿ ಇಲ್ಲಿಗೆ ಬರುವನು.

ಅತ್ರೋಪಾಯಾನ್ ಯಥಾ ಸಮ್ಯಙ್ ನ ಬುದ್ಧ್ಯೇತ ಜನಾರ್ದನಃ ।
ಯ ಉಪಾಯೋ ಭವೇತ್ ಕಶ್ಚಿತ್ ತದ್ ಭವಾನ್ ಪ್ರಬ್ರವೀತು ಮೇ ॥

ನಾನು ಅವನನ್ನು ಬಂಧಿಸಲು ಮಾಡುವ ಒಳ್ಳೆಯ ಉಪಾಯಗಳನ್ನು ಅವನು ತಿಳಿಯದಂತೆ ಏನು ಮಾರ್ಗವಿದೆಯೋ ಅದನ್ನು ನನಗೆ ಹೇಳುವವನಾಗು.

ವೈಶಂಪಾಯನಃ

ತಸ್ಯ ತದ್ವಚನಂ ಶ್ರುತ್ವಾ ಘೋರಂ ಕೃಷ್ಣೇಽಭಿಸಂಹಿತಮ್ ।
ಧೃತರಾಷ್ಟ್ರಃ ಸಹಾಮಾತ್ಯೋ ವ್ಯಥಿತೋ ವಿಮನಾ ಭವತ್ ॥೧೬॥

ತತೋ ದುರ್ಯೋಧನಮಿದಂ ಧೃತರಾಷ್ಟ್ರೋಽಬ್ರವೀದ್ ವಚಃ ॥೧೭॥

ವೈಶಂಪಾಯನ– ಕೃಷ್ಣನ ವಿಷಯದಲ್ಲಿ ಅವನು ಆಡಿದ ಘೋರವಾದ ಮಾತುಗಳನ್ನು ಕೇಳಿ, ಅಮಾತ್ಯಸಹಿತನಾದ ಧೃತರಾಷ್ಟ್ರನು ವ್ಯಥಿತನಾಗಿ ವಿಷಾದವನ್ನು ಹೊಂದಿದನು. ದುರ್ಯೋಧನನನ್ನು ಕುರಿತು ಹೀಗೆ ಮಾತನಾಡಿದನು.

ಮೈವಂ ವೋಚಃ ಪ್ರಜಾಪಾಲ ನೈಷ ಧರ್ಮಃ ಸನಾತನಃ ।
ದೂತಶ್ಚ ಹಿ ಹೃಷೀಕೇಶಃ ಸಂಬಂಧೀ ಚ ಪ್ರಿಯಶ್ಚ ನಃ ॥೧೮॥

ಅಪಾಪಃ ಕೌರವೇಯೇಷು ಸ ಕಥಂ ಬಂಧಮರ್ಹತಿ ॥೧೯॥

ಎಲೈ ಪ್ರಜಾಪಾಲಕನೇ, ಹೀಗೆ ಮಾತನಾಡಬೇಡ. ಇದು ಸನಾತನ ಧರ್ಮವಲ್ಲ. ಹೃಷೀಕೇಶನು ದೂತನಾಗಿ ಬರುತ್ತಿದ್ದಾನೆ. ಜೊತೆಗೆ ನಮ್ಮ ಸಂಬಂಧಿ ಮತ್ತು ನಮಗೆ ಪ್ರಿಯನಾದವನು. ಕೌರವರಿಗೆ ಏನೂ ಕೇಡನ್ನು ಮಾಡದಿದ್ದ ಅವನು ಹೇಗೆ ಬಂಧನಕ್ಕೆ ಅರ್ಹನಾಗುತ್ತಾನೆ?

ಭೀಷ್ಮಃ

ಪರೀತಸ್ತವ ಪುತ್ರೋಽಯಂ ಧೃತರಾಷ್ಟ್ರ ಸುಮಂದಧೀಃ ।
ವೃಣೋತ್ಯನರ್ಥಂ ನೈವಾರ್ಥಂ ಯಾಚ್ಯಮಾನಃ ಸುಹೃಜ್ಜನೈಃ ॥೨೦॥

ಭೀಷ್ಮ– ಎಲೈ ಧೃತರಾಷ್ಟ್ರನೇ, ಮಂದಬುದ್ಧಿಯುಳ್ಳ ಈ ನಿನ್ನ ಪುತ್ರನು ಮೃತ್ಯುಗ್ರಸ್ತನಾಗಿದ್ದಾನೆ. ಸುಹೃಜ್ಜನರು ಬೇಡಿದರೂ ಅರ್ಥವನ್ನು ಸ್ವೀಕರಿಸುತ್ತಿಲ್ಲ, ಅನರ್ಥವನ್ನೇ ಆರಿಸುತ್ತಿದ್ದಾನೆ.

ಕೃಷ್ಣಮಕ್ಲಿಷ್ಟಕರ್ಮಾಣಮಾಸಾದ್ಯಾಯಂ ಸುದುರ್ಮತಿಃ ।
ತವ ಪುತ್ರಃ ಸಹಾಮಾತ್ಯಃ ಕ್ಷಣೇನ ನ ಭವಿಷ್ಯತಿ ॥೨೧॥

ಈ ನಿನ್ನ ಅತ್ಯಂತ ದುರ್ಮತಿಯುಳ್ಳ ಪುತ್ರನು ಅನಾಯಾಸದಲ್ಲಿ ಎಲ್ಲವನ್ನೂ ಮಾಡುವ ಕೃಷ್ಣನನ್ನು ಸಮೀಪಿಸಿ ಒಂದು ಕ್ಷಣದಲ್ಲಿ ಅಮಾತ್ಯರ ಜೊತೆಯಲ್ಲಿ ನಾಶವನ್ನು ಹೊಂದುವನು.

ಪಾಪಸ್ಯಾಸ್ಯ ನೃಶಂಸಸ್ಯ ತ್ಯಕ್ತಧರ್ಮಸ್ಯ ದುರ್ಮತೇಃ ।
ನೋತ್ಸಹೇಽನರ್ಥಸಂಯುಕ್ತಾಃ ಶ್ರೋತುಂ ವಾಚಃ ಕಥಂಚನ ॥೨೨॥

ಪಾಪಿಯೂ, ಧರ್ಮತ್ಯಾಗವನ್ನು ಮಾಡಿದವನೂ, ಕ್ರೂರನೂ, ದುರ್ಮತಿಯೂ ಆದ ಇವನ ಅನರ್ಥಕರವಾದ ಮಾತುಗಳನ್ನು ಯಾವ ರೀತಿಯಲ್ಲೂ ಕೇಳಲು ನಾನು ಬಯಸುವುದಿಲ್ಲ.

ವೈಶಂಪಾಯನಃ

ಇತ್ಯುಕ್ತ್ವಾ ಭರತಶ್ರೇಷ್ಠೋ ವೃದ್ಧಃ ಪರಮಮನ್ಯುಮಾನ್ ।
ಉತ್ಥಾಯ ತಸ್ಮಾತ್ ಪ್ರಾತಿಷ್ಠದ್ ಭೀಷ್ಮಃ ಸತ್ಯಪರಾಕ್ರಮಃ ॥೨೩॥

ವೈಶಂಪಾಯನ– ಹೀಗೆ ಹೇಳಿ ಪರಮಕೋಪದಿಂದ ಕೂಡಿದ ಭರತಶ್ರೇಷ್ಠನೂ, ವೃದ್ಧನೂ, ಸತ್ಯಪರಾಕ್ರಮವುಳ್ಳವನೂ ಆದ ಭೀಷ್ಮನು ಎದ್ದು ಆ ಸಭೆಯಿಂದ ಹೊರಗೆ ಹೋದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಷಡಶೀತಿತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಸಪ್ತದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಎಂಬತ್ತಾರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೇಳನೆಯ ಅಧ್ಯಾಯ

ಕೌರವರ ಅರಮನೆಯನ್ನು ಪ್ರವೇಶಿಸಿ, ಯಥೋಚಿತಸತ್ಕಾರವನ್ನು ಸ್ವೀಕರಿಸಿ, ಕೃಷ್ಣನ ವಿದುರಗೃಹಗಮನ. ವಿದುರನಿಂದ ಅವನ ಪೂಜೆ.

ವೈಶಂಪಾಯನಃ

ಪ್ರಾತರುತ್ಥಾಯ ಕೃಷ್ಣಸ್ತು ಕೃತವಾನ್ ಸರ್ವಮಾಹ್ನಿಕಮ್ ।
ಬ್ರಾಹ್ಮಣೈರಭ್ಯನುಜ್ಞಾತಃ ಪ್ರಯಯೌ ನಗರಂ ಪ್ರತಿ ॥೧॥

ವೈಶಂಪಾಯನ– ಕೃಷ್ಣನು ಪ್ರಾತಃಕಾಲದಲ್ಲಿ ಎದ್ದು ಎಲ್ಲಾ ಆಹ್ನಿಕಗಳನ್ನೂ ಮಾಡಿ ಬ್ರಾಹ್ಮಣರ ಅನುಮತಿಯನ್ನು ಪಡೆದು (ಹಸ್ತಿನಪುರಕ್ಕೆ) ಹೊರಟನು.

ತಂ ಪ್ರಯಾಂತಂ ಮಹಾಬಾಹುಮನುಜ್ಞಾಪ್ಯ ತತೋ ನೃಪ ।
ಪರ್ಯವರ್ತಂತ ತೇ ಸರ್ವೇ ಕುಶಸ್ಥಲನಿವಾಸಿನಃ ॥೨॥

ಎಲೈ ಮಹಾಬಾಹುವೇ, ಕುಶಸ್ಥಲವಾಸಿಗಳಾದ ಆ ಬ್ರಾಹ್ಮಣರೆಲ್ಲರೂ ಆ ಮಹಾನುಭಾವನಾದ ಕೃಷ್ಣನಿಗೆ ಅನುಮತಿಯನ್ನು ಕೊಟ್ಟು ಹಿಂದಿರುಗಿದರು.

ಪ್ರದದೌ ಪುಂಡರೀಕಾಕ್ಷೋ ರತ್ನಾನಿ ಚ ಧನಾನಿ ಚ ।
ಪ್ರಯಯೌ ಪುಂಡರೀಕಾಕ್ಷಃ ಕುರೂಣಾಂ ಸದನಂ ಪ್ರತಿ ॥೩॥

ಪುಂಡರೀಕಾಕ್ಷನು ಅವರಿಗೆ ರತ್ನಗಳನ್ನೂ ಮತ್ತು ಧನಗಳನ್ನೂ ಕೊಟ್ಟು, ಕುರುಗಳ ಅರಮನೆಯನ್ನು ಕುರಿತು ಹೊರಟನು.

ಪಂಥಾನಮಾಚೇಮುರಿವ ಗ್ರಸಮಾನಾ ಇವಾಂಬರಮ್ ।
ದಾರುಕೇಣ ಪ್ರಚುದಿತಾ ಹಯಾಸ್ತಸ್ಯ ಮಹಾತ್ಮನಃ ॥೪॥

ದಾರುಕನಿಂದ ಪ್ರಚೋದಿತನಾದ ಆ ಮಹಾತ್ಮನ ಅಶ್ವಗಳು ಮಾರ್ಗಗಳನ್ನು ಕುಡಿಯುವಂತೆ, ಆಕಾಶವನ್ನು ನುಂಗುವಂತೆ ಮುಂದೆ ನಡೆದವು.

ಅನ್ನಾನಿ ಶಯ್ಯಾ ವಾಸಾಂಸಿ ತಥಾ ರತ್ನಾನಿ ಸರ್ವಶಃ ।
ದುರ್ಯೋಧನೇನ ಕೃಷ್ಣಾರ್ಥಂ ಪಥಿ ಸನ್ನಿಹಿತಂ ಬಹು ॥೫॥

ನಾಭ್ಯನಂದನ್ಮಹಾಬಾಹುರುಪಾಯಾತ್ ಕುರುಸಂಸದಮ್ ॥೬॥

ದುರ್ಯೋಧನನಿಂದ ಕೃಷ್ಣನ ಸಲುವಾಗಿ ಮಾರ್ಗದಲ್ಲಿ ಬಹುವಿಧವಾದ ಅನ್ನಗಳೂ, ಶಯನಗಳೂ, ವಸ್ತ್ರಗಳೂ ಮತ್ತು ಎಲ್ಲಾ ವಿಧವಾದ ರತ್ನಗಳೂ ಇಡಲ್ಪಟ್ಟಿದ್ದವು. ಮಹಾಬಾಹುವಾದ ಅವನು ಅವುಗಳನ್ನು ನೋಡಿ ಸಂತೋಷಪಡದೆ ಕೌರವರ ಸಭೆಗೆ ಬಂದನು.

ಧಾರ್ತರಾಷ್ಟ್ರಸ್ತಮಾಯಾಂತಂ ಪ್ರತ್ಯುಜ್ಜಗ್ಮುಃ ಸ್ವಲಂಕೃತಾಃ ।
ದುರ್ಯೋಧನಾದೃತೇ ಸರ್ವೇ ಭೀಷ್ಮದ್ರೋಣಕೃಪಾದಯಃ ॥೭॥

ಕೃಷ್ಣನು ಬರುತ್ತಿರಲು ದುರ್ಯೋಧನನನ್ನು ಬಿಟ್ಟು ಉಳಿದ ಎಲ್ಲಾ ಧೃತರಾಷ್ಟ್ರಪುತ್ರರೂ ಭೀಷ್ಮದ್ರೋಣಕೃಪಾದಿಗಳೆಲ್ಲರೂ ಅಲಂಕೃತರಾಗಿ ಎದುರಿಗೆ ಬಂದರು.

ಪೌರಾಶ್ಚ ಬಹುಲಾ ರಾಜನ್ ಹೃಷೀಕೇಶದಿದೃಕ್ಷವಃ ।
ಯಾನೈರ್ಬಹುವಿಧೈರನ್ಯೇ ಪದ್ಭಿರೇವ ತಥಾऽಪರೇ ॥೮॥

ಎಲೈ ರಾಜನೇ, ಕೃಷ್ಣನನ್ನು ನೋಡುವ ಆಸೆಯಿಂದ ಪೌರರಲ್ಲಿ ಕೆಲವರು ಬಹುವಿಧ ವಾಹನಗಳಿಂದ ಬಂದರು, ಇನ್ನು ಕೆಲವರು ನಡೆದುಕೊಂಡೇ ಬಂದರು.

ಸ ವೈ ಪಥಿ ಸಮಾಗಮ್ಯ ಭೀಷ್ಮೇಣಾಕ್ಲಿಷ್ಟಕರ್ಮಣಾ ।
ದ್ರೋಣೇನ ಧಾರ್ತರಾಷ್ಟ್ರೈಶ್ಚ ತೈರ್ವೃತೋ ನಗರಂ ಯಯೌ ॥೯॥

ಕೃಷ್ಣನು ಮಾರ್ಗದಲ್ಲಿ ಅಕ್ಲಿಷ್ಟಕಾರಿಯಾದ ಭೀಷ್ಮರಿಂದಲೂ, ದ್ರೋಣರಿಂದಲೂ ಮತ್ತು ಧೃತರಾಷ್ಟ್ರಪುತ್ರರಿಂದಲೂ ಸಮಾಗಮವನ್ನು ಹೊಂದಿ, ಅವರಿಂದ ಪರಿವೃತನಾಗಿ ನಗರವನ್ನು ಪ್ರವೇಶಿಸಿದನು.

ಕೃಷ್ಣಸಮ್ಮಾನನಾರ್ಥಂ ಚ ನಗರಂ ಸಮಲಂಕೃತಮ್ ।
ಬಭೂವ ರಾಜಮಾರ್ಗಾಶ್ಚ ಬಹುರತ್ನಸಮಾಚಿತಾಃ ॥೧೦॥

ಕೃಷ್ಣನನ್ನು ಗೌರವಿಸುವ ಸಲುವಾಗಿ ನಗರವು ಅಲಂಕೃತವಾಗಿದ್ದಿತು. ರಾಜಮಾರ್ಗಗಳು ಅನೇಕ ರತ್ನಗಳಿಂದ ಅಲಂಕರಿಸಲ್ಪಟ್ಟಿದ್ದವು.

ನ ಚ ಕಶ್ಚಿದ್ ಗೃಹೇ ರಾಜನ್ ತದಾऽऽಸೀತ್ ಭರತರ್ಷಭ ।
ನ ಸ್ತ್ರೀ ನ ವೃದ್ಧೋ ನ ಶಿಶುಃ ವಾಸುದೇವದಿದೃಕ್ಷಯಾ ॥೧೧॥

ಎಲೈ ರಾಜನೇ, ಭರತರ್ಷಭನೇ, ಆಗ ವಾಸುದೇವನನ್ನು ನೋಡುವ ಆಸೆಯಿಂದ ಯಾವ ಸ್ತ್ರೀಯಾಗಲೀ, ವೃದ್ಧನಾಗಲೀ, ಶಿಶುವಾಗಲೀ ಮನೆಯ ಒಳಗೆ ಇರಲಿಲ್ಲ.

ರಾಜಮಾರ್ಗೇ ನರಾಸ್ತಸ್ಮಿನ್ ಸಂಭವಂತ್ಯವನಿಂ ಗತಾಃ ।
ತಥಾ ಸಮಭವದ್ ರಾಜನ್ ಹೃಷೀಕೇಶಪ್ರವೇಶನೇ ॥೧೨॥

ಆ ರಾಜಮಾರ್ಗದಲ್ಲಿ ಮನುಷ್ಯರು ಭೂಮಿಯ ಮೇಲೆ ತುಂಬಿಹೋಗಿದ್ದರು. ಎಲೈ ರಾಜನೇ, ಕೃಷ್ಣನು ಬರುವಾಗ ಅಂತಹ ಸಂಮರ್ದವು ಉಂಟಾಯಿತು.

ಆವೃತಾನಿ ವರಸ್ತ್ರೀಭಿಃ ಗೃಹಾಣಿ ಸುಮಹಾಂತ್ಯಪಿ ।
ಪ್ರಚಲಂತೀವ ಭಾರೇಣ ತತ್ರ ತತ್ರ ಮಹೀತಳೇ ॥೧೩॥

ದೊಡ್ಡದೊಡ್ಡ ಮನೆಗಳೂ ಸಹ ಸುಂದರಸ್ತ್ರೀಯರಿಂದ ತುಂಬಿಹೋಗಿ, ಭಾರದಿಂದ ಭೂಮಿಯ ಮೇಲೆ ಚಲಿಸುವಂತೆ ತೋರುತ್ತಿದ್ದಿತು.

ತಥಾ ಚ ಗತಿಮಂತಸ್ತೇ ವಾಸುದೇವಸ್ಯ ವಾಜಿನಃ ।
ಸುಮಂದಗತಯೋಽಭೂವನ್ ರಾಜಮಾರ್ಗೇ ನರೈರ್ವೃತೇ ॥೧೪॥

ಅಂತಹ ಶೀಘ್ರಗತಿಯುಳ್ಳ ಕೃಷ್ಣನ ಅಶ್ವಗಳು ಮನುಷ್ಯರಿಂದ ತುಂಬಿದ ರಾಜಮಾರ್ಗದಲ್ಲಿ ಬಹಳ ನಿಧಾನವಾದ ಗತಿಯಲ್ಲಿ ನಡೆದವು.

ಸ ಗೃಹಂ ಧೃತರಾಷ್ಟ್ರಸ್ಯ ಪ್ರಾವಿಶಚ್ಛತ್ರುಕರ್ಶನಃ ।
ಪಾಂಡರಂ ಪುಂಡರೀಕಾಕ್ಷಃ ಪ್ರಾಸಾದೈರುಪಶೋಭಿತಮ್ ॥೧೫॥

ಶತ್ರುಕರ್ಶನನಾದ ಪುಂಡರೀಕಾಕ್ಷನು ಅನೇಕ ಉಪ್ಪರಿಗೆಗಳಿಂದ ಶೋಭಿತವಾದ, ಶುಭ್ರಶ್ವೇತವರ್ಣದ ಧೃತರಾಷ್ಟ್ರನ ಗೃಹವನ್ನು ಪ್ರವೇಶಿಸಿದನು.

ತಿಸ್ರಃ ಕಕ್ಷ್ಯಾ ವ್ಯತಿಕ್ರಮ್ಯ ಕೇಶವೋ ರಾಜವೇಶ್ಮನಃ ।
ವೈಚಿತ್ರವೀರ್ಯಂ ರಾಜಾನಮಭ್ಯಗಚ್ಛದರಿಂದಮಃ ॥೧೬॥

ಅರಿಂದಮನಾದ ಕೇಶವನು ಅರಮನೆಯ ಮೂರುಕಕ್ಷೆಗಳನ್ನು ದಾಟಿ ರಾಜನಾದ ಧೃತರಾಷ್ಟ್ರನನ್ನು ಸಮೀಪಿಸಿದನು.

ಅಭ್ಯಾಗಚ್ಛತಿ ದಾಶಾರ್ಹೇ ಪ್ರಜ್ಞಾಚಕ್ಷುರ್ನರಾಧಿಪಃ ।
ಸಹೈವ ದ್ರೋಣಭೀಷ್ಮಾಭ್ಯಾಮುದತಿಷ್ಠನ್ ಮಹಾಯಶಾಃ ॥೧೭॥

ಕೃಷ್ಣನು ಸಮೀಪಕ್ಕೆ ಬರುತ್ತಿರಲು ಪ್ರಜ್ಞಾಚಕ್ಷುಸ್ಸನ್ನು ಹೊಂದಿದ, ಮಹಾಕೀರ್ತಿವಂತನಾದ ರಾಜನು ಭೀಷ್ಮ-ದ್ರೋಣರ ಜೊತೆಯಲ್ಲಿ ಎದ್ದುನಿಂತನು.

ಕೃಪಶ್ಚ ಸೋಮದತ್ತಶ್ಚ ಮಹಾರಾಜಶ್ಚ ಬಾಹ್ಲಿಕಃ ।
ಆಸನೇಭ್ಯೋಽಚಲನ್ ಸರ್ವೇ ಪೂಜಯಂತೋ ಜನಾರ್ದನಮ್ ॥೧೮॥

ಕೃಪ, ಸೋಮದತ್ತ, ಬಾಹ್ಲಿಕಮಹಾರಾಜ- ಎಲ್ಲರೂ ಕೃಷ್ಣನಿಗೆ ಗೌರವವನ್ನು ಸಲ್ಲಿಸುತ್ತಾ ತಮ್ಮ ಆಸನಗಳಿಂದ ಎದ್ದುನಿಂತರು.

ತತೋ ರಾಜಾನಮಾಸಾದ್ಯ ಧೃತರಾಷ್ಟ್ರಂ ಯಶಸ್ವಿನಮ್ ।
ಸಭೀಷ್ಮಂ ಪೂಜಯಾಮಾಸ ವಾರ್ಷ್ಣೇಯೋ ವಾಗ್ಭಿರಂಜಸಾ ॥೧೯॥

ತೇ ಸ್ವಧರ್ಮಾನಕುರ್ವಂತ ಸಂಪೂಜ್ಯ ಮಧುಸೂದನಮ್ ॥೨೦॥

ಅನಂತರ ಕೃಷ್ಣನು ಕೀರ್ತಿವಂತನಾದ ಧೃತರಾಷ್ಟ್ರನ ಸಮೀಪಕ್ಕೆ ಹೋಗಿ, ಭೀಷ್ಮರಿಂದ ಸಹಿತನಾದ ಅವನನ್ನು ತನ್ನ ಒಳ್ಳೆಯ ಮಾತುಗಳಿಂದ ಪೂಜಿಸಿದನು. ಅವರೂ ಕೂಡ ಕೃಷ್ಣನನ್ನು ಪೂಜಿಸಿ ತಮ್ಮ ಸ್ವಧರ್ಮವನ್ನು ಅನುಷ್ಠಾನ ಮಾಡಿದರು.

ತೇಷು ಧರ್ಮಾನುಪೂರ್ವಂ ತಾಂ ಪ್ರಯುಜ್ಯ ಮಧುಸೂದನಃ ।
ಯಥಾವಯಃ ಸಮೀಯಾಯ ರಾಜಭಿಃ ಸಹ ಮಾಧವಃ ॥೨೧॥

ಮಧುಸೂದನನು ಧರ್ಮಕ್ಕೆ ಅನುಗುಣವಾಗಿ ಅವರ ಜೊತೆಯಲ್ಲಿ ನಡೆದುಕೊಂಡು ಉಳಿದ ರಾಜರ ಜೊತೆಯಲ್ಲಿ ವಯಸ್ಸಿಗೆ ಅನುಗುಣವಾಗಿ ಸಮಾಗಮವನ್ನು ಹೊಂದಿದನು.

ಅಥ ದ್ರೋಣಂ ಸಬಾಹ್ಲೀಕಂ ಸಪುತ್ರಂ ಚ ಯಶಸ್ವಿನಮ್ ।
ಕೃಪಂ ಚ ಸೋಮದತ್ತಂ ಚ ಸಮೀಯಾಯ ಜನಾರ್ದನಃ ॥೨೨॥

ಅನಂತರ ಜನಾರ್ದನನು ಬಾಹ್ಲೀಕ ಮತ್ತು ಅಶ್ವತ್ಥಾಮರಿಂದ ಸಹಿತರಾದ, ಕೀರ್ತಿಶಾಲಿಗಳಾದ ದ್ರೋಣ, ಕೃಪ ಮತ್ತು ಸೋಮದತ್ತರ ಜೊತೆಯಲ್ಲಿ ಸಮಾಗಮವನ್ನು ಹೊಂದಿದನು.

ತತ್ರಾಸೀದೂರ್ಜಿತಂ ಮೃಷ್ಟಂ ಕಾಂಚನಂ ಮಹದಾಸನಮ್ ।
ಶಾಸನಾದ್ ಧೃತರಾಷ್ಟ್ರಸ್ಯ ತತ್ರೋಪಾವಿಶದಚ್ಯುತಃ ॥೨೩॥

ಅಲ್ಲಿ ಧೃತರಾಷ್ಟ್ರನ ಶಾಸನದಂತೆ ಎತ್ತರವಾದ, ಪರಿಶುದ್ಧವಾದ, ಸುವರ್ಣಮಯವಾದ ದೊಡ್ಡ ಆಸನವಿದ್ದಿತು. ಕೃಷ್ಣನು ಅದರಲ್ಲಿ ಕುಳಿತನು.

ಅಥ ಗಾಂ ಮಧುಪರ್ಕಂ ಚಾಪ್ಯುದಕಂ ಚ ಜನಾರ್ದನೇ ।
ಉಪಜಹ್ರುರ್ಯಥಾನ್ಯಾಯಂ ಧೃತರಾಷ್ಟ್ರಪುರೋಹಿತಾಃ ॥೨೪॥

ಅನಂತರ ಧೃತರಾಷ್ಟ್ರನ ಪುರೋಹಿತರು ವಿಧಿಗೆ ಅನುಗುಣವಾಗಿ ಕೃಷ್ಣನಿಗೆ ಗೋವನ್ನೂ, ಮಧುಪರ್ಕವನ್ನೂ ಮತ್ತು ಉದಕವನ್ನೂ ನೀಡಿದರು.

ಕೃತಾತಿಥ್ಯಸ್ತು ಗೋವಿಂದಃ ಸರ್ವಾನ್ ಪರಿಹಸನ್ ಕುರೂನ್ ।
ಆಸ್ತೇ ಸಂಬಂಧಕಂ ಕುರ್ವನ್ ಕುರುಭಿಃ ಪರಿವಾರಿತಃ ॥೨೫॥

ಆತಿಥ್ಯವನ್ನು ಸ್ವೀಕರಿಸಿದ ಗೋವಿಂದನು ಕೌರವರಿಂದ ಪರಿವಾರಿತನಾಗಿ, ಎಲ್ಲಾ ಕೌರವರನ್ನು ನೋಡಿ ನಗುತ್ತಾ ತನ್ನ ಸಂಬಂಧವನ್ನು ಸೂಚಿಸುತ್ತಿದ್ದನು.

ಸೋಽರ್ಚಿತೋ ಧೃತರಾಷ್ಟ್ರೇಣ ಪೂಜಿತಶ್ಚ ಮಹಾಯಶಾಃ ।
ರಾಜಾನಂ ಸಮನುಜ್ಞಾಪ್ಯ ನಿರಕ್ರಾಮದರಿಂದಮಃ ॥೨೬॥

ಧೃತರಾಷ್ಟ್ರನಿಂದ ಗೌರವದಿಂದ ಪೂಜಿಸಲ್ಪಟ್ಟ, ಮಹಾಕೀರ್ತಿಶಾಲಿಯಾದ, ಅರಿಂದಮನಾದ ಅವನು ರಾಜನ ಅನುಮತಿಯನ್ನು ಪಡೆದು ಹೊರಗೆ ಬಂದನು.

ತೈಃ ಸಮೇತ್ಯ ಯಥಾನ್ಯಾಯಂ ಕುರುಭಿಃ ಕುರುಸಂಸದಿ ।
ವಿದುರಾವಸಥಂ ರಮ್ಯಮುಪಾತಿಷ್ಠತ ಮಾಧವಃ ॥೨೭॥

ಕುರುಸಭೆಯಲ್ಲಿ ಕೌರವರ ಜೊತೆಯಲ್ಲಿ ಯಥಾಯೋಗ್ಯವಾಗಿ ಸಮಾಗಮವನ್ನು ಹೊಂದಿ ಕೃಷ್ಣನು ವಿದುರನ ಮನೋಹರವಾದ ಮನೆಗೆ ಹೊರಟನು.

ವಿದುರಃ ಸರ್ವಕಲ್ಯಾಣೈರಭಿಗಮ್ಯ ಜನಾರ್ದನಮ್ ।
ಅರ್ಚಯಾಮಾಸ ದಾಶಾರ್ಹಂ ಸರ್ವಕಾಮೈರುಪಸ್ಥಿತಮ್ ॥೨೮॥

ವಿದುರನು ಎಲ್ಲ ಮಂಗಳಪದಾರ್ಥವನ್ನೂ ತೆಗೆದುಕೊಂಡು ಕೃಷ್ಣನ ಎದುರಿಗೆ ಬಂದು, ಅವನನ್ನು ಎಲ್ಲ ಕಾಮಗಳಿಂದಲೂ ಸಮೃದ್ಧವಾದ ತನ್ನ ಮನೆಯೊಳಗೆ ಕರೆದುಕೊಂಡು ಹೋದನು.

ಕೃತಾತಿಥ್ಯಂ ತು ಗೋವಿಂದಂ ವಿದುರಃ ಸರ್ವಧರ್ಮವಿತ್ ।
ಕುಶಲಂ ಪಾಂಡುಪುತ್ರಾಣಾಂ ಪಪ್ರಚ್ಛ ಮಧುಸೂದನಮ್ ॥೨೯॥

ಗೋವಿಂದನು ಆತಿಥ್ಯವನ್ನು ಸ್ವೀಕರಿಸಿದ ಮೇಲೆ ಸರ್ವಧರ್ಮವನ್ನೂ ತಿಳಿದ ವಿದುರನು ಮಧುಸೂದನನನ್ನು ಕುರಿತು ಪಾಂಡುಪುತ್ರರ ಕ್ಷೇಮವನ್ನು ವಿಚಾರಿಸಿದನು.

ಪ್ರೀಯಮಾಣಸ್ಯ ಸುಹೃದೋ ವಿದುರೋ ಬುದ್ಧಿಮತ್ತರಃ ॥೩೦॥

ಧರ್ಮನಿತ್ಯಸ್ಯ ತು ಸತೋ ಗತರೋಷಸ್ಯ ಧೀಮತಃ ।
ತಸ್ಯ ಸರ್ವಂ ಸವಿಸ್ತಾರಂ ಪಾಂಡವಾನಾಂ ವಿಚೇಷ್ಟಿತಮ್ ॥೩೧॥

ಕ್ಷತ್ತುರಾಚಷ್ಟ ದಾಶಾರ್ಹೋ ಯಥಾ ಪ್ರತ್ಯಕ್ಷದರ್ಶಿವಾನ್ ॥೩೨॥

ಶ್ರೇಷ್ಠಬುದ್ಧಿಯುಳ್ಳ ವಿದುರನು ನಿತ್ಯವೂ ಧರ್ಮಶೀಲನೂ, ಸಂತೋಷಗೊಂಡವನೂ, ಮೇಧಾವಿಯೂ, ದೋಷರಹಿತನೂ ಮತ್ತು ಒಳ್ಳೆಯ ಮನಸ್ಸುಳ್ಳವನೂ ಆದ ಕೃಷ್ಣನನ್ನು ಪ್ರಶ್ನಿಸಿದನು. ದಾಶಾರ್ಹನಾದ ಕೃಷ್ಣನು ವಿದುರನಿಗೆ ತಾನು ಪ್ರತ್ಯಕ್ಷವಾಗಿ ನೋಡಿದಂತೆ ಪಾಂಡವರ ಎಲ್ಲಾ ವ್ಯಾಪಾರಗಳನ್ನೂ ವಿಸ್ತಾರವಾಗಿ ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಸಪ್ತಾಶೀತಿತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಅಷ್ಟಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಎಂಬತ್ತೇಳನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೆಂಟನೆಯ ಅಧ್ಯಾಯ

ಕೃಷ್ಣನ ಮುಂದೆ ಕುಂತಿಯ ವಿಲಾಪ

ವೈಶಂಪಾಯನಃ

ಅಥೋಪಗಮ್ಯ ವಿದುರಮಪರಾಹ್ಣೇ ಜನಾರ್ದನಃ ।
ಪಿತೃಷ್ವಸಾರಂ ಸ ಪೃಥಾಮಭ್ಯಗಚ್ಛದರಿಂದಮಃ ॥೧॥

ವೈಶಂಪಾಯನ– ಅರಿಂದಮನಾದ ಕೃಷ್ಣನು ಅನಂತರ ಮಧ್ಯಾಹ್ನ ಕಾಲದಲ್ಲಿ ವಿದುರನನ್ನು ಸಂಧಿಸಿ, ಸೋದರತ್ತೆಯಾದ ಕುಂತಿಯ ಬಳಿಗೆ ಹೋದನು.

ಸಾ ದೃಷ್ಟ್ವಾ ಕೃಷ್ಣಮಾಯಾಂತಂ ಪ್ರಸನ್ನಾದಿತ್ಯವರ್ಚಸಮ್ ।
ಕಂಠೇ ಗೃಹೀತ್ವಾ ಪ್ರಾಕ್ರೋಶತ್ ಸ್ಮರಂತೀ ತನಯಾನ್ ಪೃಥಾ ॥೨॥

ಪ್ರಸನ್ನನಾದ ಸೂರ್ಯನ ಕಾಂತಿಯನ್ನು ಹೊಂದಿದ್ದ ಕೃಷ್ಣನು ಬರುವುದನ್ನು ನೋಡಿ ಅವಳು ತನ್ನ ಮಕ್ಕಳನ್ನು ಸ್ಮರಿಸಿ ಅವನ ಕಂಠವನ್ನು ಹಿಡಿದು ರೋದಿಸಿದಳು.

ತೇಷಾಂ ಸತ್ತ್ವವತಾಂ ಮಧ್ಯೇ ಗೋವಿಂದಂ ಸಹಚಾರಿಣಮ್ ।
ಚಿರಸ್ಯ ದೃಷ್ಟ್ವಾ ವಾರ್ಷ್ಣೇಯಂ ಬಾಷ್ಪಮಾಹಾರಯತ್ ಪೃಥಾ ॥೩॥

ಬಹಳ ಸಮಯದ ಮೇಲೆ ಆ ಬಲಶಾಲಿಗಳಾದ ಸಹಚರರ ಮಧ್ಯದಲ್ಲಿ ವೃಷ್ಣಿಕುಲ ಸಮುದ್ಭೂತನಾದ ಗೋವಿಂದನನ್ನು ನೋಡಿ ಕಣ್ಣಿನಲ್ಲಿ ನೀರು ತುಂಬಿಕೊಂಡಳು.

ಸಾಽಬ್ರವೀತ್ ಕೃಷ್ಣಮಾಸೀನಂ ಕೃತಾತಿಥ್ಯಂ ಯುಧಾಂಪತಿಮ್ ।
ಬಾಷ್ಪಗದ್ಗದಪೂರ್ಣೇನ ಮುಖೇನ ಪರಿಶುಷ್ಯತಾ ॥೪॥

ಯುದ್ಧಪತಿಯಾದ ಕೃಷ್ಣನು ಆತಿಥ್ಯವನ್ನು ಸ್ವೀಕರಿಸಿ ಕುಳಿತುಕೊಂಡ ಮೇಲೆ, ಒಣಗಿ ಹೋಗುತ್ತಿದ್ದ ಮುಖದಿಂದ, ಬಾಷ್ಪಗದ್ಗದವಾದ ಕಂಠದಿಂದ ಅವಳು ಕೃಷ್ಣನನ್ನು ಕುರಿತು ಮಾತನಾಡಿದಳು.

ಏತೇ ಬಾಲ್ಯಾತ್ ಪ್ರಭೃತ್ಯೇವ ಗುರುಶುಶ್ರೂಷಣೇ ರತಾಃ ।
ಪರಸ್ಪರಸ್ಯ ಸುಹೃದಃ ಸಮ್ಮತಾಃ ಸಮಚೇತಸಃ ॥೫॥

ನಿಕೃತ್ಯಾ ಭ್ರಂಶಿತಾ ರಾಜ್ಯಾತ್ ಜನಾರ್ಹಾ ನಿರ್ಜನಂ ಗತಾಃ ॥೬॥

ಈ ನನ್ನ ಮಕ್ಕಳು ಬಾಲ್ಯದಿಂದಲೂ ಹಿರಿಯರ ಸೇವೆಯಲ್ಲಿ ನಿರತರಾದವರು. ಪರಸ್ಪರ ಪ್ರೀತಿಯುಳ್ಳವರು. ಎಲ್ಲರಿಗೂ ಸಮ್ಮತರಾದವರು ಮತ್ತು ಸಮಾಧಾನಚಿತ್ತವುಳ್ಳವರು. ಅಂತಹ ಅವರು ಮೋಸದಿಂದ ರಾಜ್ಯಭ್ರಷ್ಟರಾಗಿ ಪಟ್ಟಣದಲ್ಲಿ ವಾಸಿಸಬೇಕಾದವರು ನಿರ್ಜನವಾದ ಕಾಡಿಗೆ ಹೋದರು.

ವಿಜಿತಕ್ರೋಧಹರ್ಷಾಶ್ಚ ಬ್ರಹ್ಮಣ್ಯಾಃ ಸತ್ಯವಾದಿನಃ ।
ತ್ಯಕ್ತ್ವಾ ಪ್ರಿಯಸುಖೇ ಪಾರ್ಥಾ ರುದತೀಮಪಹಾಯ ಮಾಮ್ ॥೭॥

ಅಹಾರ್ಷುಶ್ಚ ವನಂ ಯಾಂತಃ ಸಮೂಲಂ ಹೃದಯಂ ಮಮ ॥೮॥

ಕ್ರೋಧ-ಹರ್ಷಗಳನ್ನು ಜಯಿಸಿ, ಬ್ರಾಹ್ಮಣವತ್ಸಲರಾಗಿ, ಸತ್ಯವಾದಿಗಳಾಗಿ, ಪ್ರಿಯಸುಖಗಳನ್ನು ತ್ಯಜಿಸಿ, ಅಳುತ್ತಿದ್ದ ನನ್ನನ್ನೂ ಬಿಟ್ಟು ಕಾಡಿಗೆ ಹೋಗುತ್ತಾ ಮೂಲಸಹಿತವಾಗಿ ನನ್ನ ಹೃದಯವನ್ನೇ ಅಪಹರಿಸಿದರು.

ಅತದರ್ಹಾ ಮಹಾತ್ಮಾನಃ ಕಥಂ ಕೇಶವ ಪಾಂಡವಾಃ ।
ಊಷುರ್ಮಹಾವನೇ ತಾತ ಸಿಂಹವ್ಯಾಘ್ರಗಜಾಕುಲೇ ॥೯॥

ಪ್ರೀತಿಪಾತ್ರನಾದ ಕೇಶವನೇ, ವನವಾಸಕ್ಕೆ ಅರ್ಹರಲ್ಲದ ಮಹಾತ್ಮರಾದ ಪಾಂಡವರು ಸಿಂಹ, ಗಜಗಳಿಂದ ತುಂಬಿದ ದೊಡ್ಡ ಕಾಡಿನಲ್ಲಿ ಹೇಗೆ ವಾಸಿಸಿದರು?

ಬಾಲಾ ವಿಹೀನಾಃ ಪಿತ್ರಾ ಮೇ ಮಯಾ ಸತತಲಾಳಿತಾಃ ।
ಅಪಶ್ಯಂತಶ್ಚ ಪಿತರೌ ಕಥಮೂಷುರ್ಮಹಾವನೇ ॥೧೦॥

ತಂದೆಯಿಂದ ವಿಹೀನರಾದ ಅವರನ್ನು ನಾನು ಸತತವಾಗಿ ಲಾಲಿಸಿದೆ. ತಂದೆ ತಾಯಿಗಳನ್ನು ಕಾಣದ ಅವರು ದೊಡ್ಡ ಕಾಡಿನಲ್ಲಿ ಹೇಗೆ ವಾಸಿಸಿದರು?

ಶಂಖದುಂದುಭಿನಿರ್ಘೋಷೈರ್ಮೃದಂಗೈರ್ವೇಣುವೈರಪಿ ।
ಪಾಂಡವಾಃ ಸಮಬೋಧ್ಯಂತ ಬಾಲ್ಯಾತ್ ಪ್ರಭೃತಿ ಕೇಶವ ॥೧೧॥

ಎಲೈ ಕೇಶವನೇ, ಬಾಲ್ಯದಿಂದಲೂ ಆರಂಭಿಸಿ ಪಾಂಡವರು ಶಂಖ-ದುಂದುಭಿಗಳ ಘೋಷದಿಂದಲೂ ಮೃದಂಗ-ವೇಣುಗಳ ನಾದದಿಂದಲೂ ಎಚ್ಚರಗೊಳ್ಳುತ್ತಿದ್ದರು.

ಯೇ ಸ್ಮ ವಾರಣಶಬ್ದೇನ ಹಯಾನಾಂ ಹ್ರೇಷಿತೇನ ಚ ।
ರಥನೇಮಿನಿನಾದೈಶ್ಚ ವ್ಯಬೋಧ್ಯಂತ ಸದಾ ಗೃಹೇ ॥೧೨॥

ಅವರು ಮನೆಯಲ್ಲಿ ಯಾವಾಗಲೂ ಆನೆಗಳ ಹೀಂಕಾರದಿಂದಲೂ, ಕುದುರೆಗಳ ಹ್ರೇಷಶಬ್ದಗಳಿಂದಲೂ, ರಥದ ಆಕ್ಷಗಳ ಶಬ್ದದಿಂದಲೂ ಎಚ್ಚರಗೊಳ್ಳುತ್ತಿದ್ದರು.

ಪುಣ್ಯಾಹಘೋಷಮಿಶ್ರೈಶ್ಚ ಪೂಜ್ಯಮಾನಾ ದ್ವಿಜಾತಿಭಿಃ ।
ವಸ್ತ್ರೈ ರತ್ನೈರಲಂಕಾರೈಃ ಪೂಜಯಂತೋ ದ್ವಿಜನ್ಮನಃ ॥೧೩॥

ಪುಣ್ಯಾಹಘೋಷಮಿಶ್ರವಾದ ಅಂತಹ ಶಬ್ದಗಳಿಂದ ಎದ್ದು, ಬ್ರಾಹ್ಮಣರಿಂದ ಪೂಜಿಸಲ್ಪಟ್ಟು, ಬ್ರಾಹ್ಮಣರನ್ನು ವಸ್ತ್ರಗಳಿಂದಲೂ ರತ್ನಗಳಿಂದಲೂ ಅಲಂಕಾರಗಳಿಂದಲೂ ಪೂಜಿಸುತ್ತಿದ್ದರು.

ಗೀರ್ಭಿರ್ಮಂಗಲಯುಕ್ತಾಭಿಃ ಬ್ರಾಹ್ಮಣಾನಾಂ ಮಹಾತ್ಮನಾಮ್ ।
ಅರ್ಚಿತೈರರ್ಚನಾರ್ಹೈಶ್ಚ ಸ್ತುವದ್ಭಿರಭಿನಂದಿತಾಃ ॥೧೪॥

ಪ್ರಾಸಾದಾಗ್ರೇಷ್ವಬೋಧ್ಯಂತ ರಾಂಕವಾಜಿನಶಾಯಿನಃ ॥೧೫॥

ಮಹಾತ್ಮರಾದ ಬ್ರಾಹ್ಮಣರ, ಮಂಗಳಕರವಾದ ಆಶೀರ್ವಾದ ಶಬ್ದಗಳಿಂದ, ಸತ್ಕಾರಕ್ಕೆ ಯೋಗ್ಯವಾಗಿ ಸತ್ಕರಿಸಲ್ಪಟ್ಟ ಸ್ತೋತ್ರಮಾಡುವ ಅವರಿಂದ ಅಭಿನಂದಿತರಾಗಿ ರಾಂಕಚರ್ಮದ ಹಾಸಿಗೆಗಳ ಮೇಲೆ ಮಲಗಿದ ಅವರು ಉಪ್ಪರಿಗೆಗಳಲ್ಲಿ ಎಚ್ಚರಿಕೆಗೊಳ್ಳುತ್ತಿದ್ದರು.

ಕ್ರೂರಂ ಚ ನಿನದಂ ಶ್ರುತ್ವಾ ಶ್ವಾಪದಾನಾಂ ಮಹಾವನೇ ।
ನ ಸ್ಮೋಪಯಾಂತಿ ನಿದ್ರಾಂ ತೇ ನತದರ್ಹಾ ಜನಾರ್ದನ ॥೧೬॥

ಎಲೈ ಜನಾರ್ದನನೇ, ಅಂತಹ ಅವರು ಮಹಾವನದಲ್ಲಿ ಮಾಂಸಾಹಾರಿ ಪ್ರಾಣಿಗಳ ಕ್ರೂರಶಬ್ದಗಳನ್ನು ಕೇಳಿ ಆ ದುಃಖಕ್ಕೆ ಅರ್ಹರಲ್ಲದ ಅವರು ನಿದ್ರೆಯನ್ನೇ ಮಾಡುವುದಿಲ್ಲ.

ಭೇರೀಮೃದಂಗಪಣವೈಃ ಶಂಖವೈಣವನಿಸ್ವನೈಃ ।
ಸ್ತ್ರೀಣಾಂ ಗೀತಿನಿನಾದೈಶ್ಚ ಮಧುರೈರ್ಮಧುಸೂದನ ॥೧೭॥

ವಂದಿಮಾಗಧಸೂತೈಶ್ಚ ಸ್ತುವದ್ಭಿರ್ಬೋಧಿತಾಃ ಕಥಮ್ ।
ಮಹಾವನೇಷ್ವಬೋಧ್ಯಂತ ಶ್ವಾಪದಾನಾಂ ರುತೈಸ್ತು ತೇ ॥೧೮॥

ಎಲೈ ಮಧುಸೂದನನೇ, ಭೇರೀ-ಪಣವ-ಮೃದಂಗಶಬ್ದಗಳಿಂದಲೂ, ಶಂಖವೇಣುಶಬ್ದಗಳಿಂದಲೂ, ಸ್ತ್ರೀಯರ ಮಧುರವಾದ ಗಾನಶಬ್ದಗಳಿಂದಲೂ,

ವಂದಿಮಾಗಧಸೂತರ ಸ್ತೋತ್ರಗಳಿಂದಲೂ ಎಚ್ಚರಗೊಳ್ಳುತ್ತಿದ್ದ ಅವರು ಕಾಡಿನಲ್ಲಿ ಕ್ರೂರಪ್ರಾಣಿಗಳ ಗರ್ಜನೆಗಳಿಂದ ಹೇಗೆ ಎಚ್ಚರಗೊಂಡರು?

ಹ್ರೀಮಾನ್ ಸತ್ಯಧೃತಿರ್ದಾಂತೋ ಭೂತಾನಾಮನುಕಂಪಿತಾ ।
ಕಾಮದ್ವೇಷೌ ವಶೇ ಕೃತ್ವಾ ಸತಾಂ ವರ್ತ್ಮಾನುವರ್ತತೇ ॥೧೯॥

ದಾಕ್ಷಿಣ್ಯಸ್ವಭಾವದವನೂ, ಸತ್ಯವಾದ ಸ್ಥೈರ್ಯವುಳ್ಳವನೂ, ಇಂದ್ರಿಯನಿಗ್ರಹವುಳ್ಳವನೂ, ಸರ್ವಪ್ರಾಣಿಗಳಲ್ಲಿ ದಯೆಯುಳ್ಳವನೂ ಆದ ಯುಧಿಷ್ಠಿರನು ಕಾಮಕ್ರೋಧವನ್ನು ತನ್ನ ವಶದಲ್ಲಿಟ್ಟುಕೊಂಡು ಸಜ್ಜನರ ಮಾರ್ಗವನ್ನು ಅನುಸರಿಸುತ್ತಾನೆ.

ಅಂಬರೀಷಶ್ಚ ಮಾಂಧಾತುಃ ಯಯಾತೇರ್ನಹುಷಸ್ಯ ಚ ।
ಭರತಸ್ಯ ದಿಲೀಪಸ್ಯ ಶಿಬೇರೌಶೀನರಸ್ಯ ಚ ॥೨೦॥

ರಾಜರ್ಷೀಣಾಂ ಪುರಾಣಾನಾಂ ಧುರಂ ಧುರ್ಯ ಇವೋದ್ವಹನ್ ।
ಶೀಲವೃತ್ತೋಪಸಂಪನ್ನೋ ಧರ್ಮಜ್ಞಃ ಸತ್ಯಸಂಗರಃ ॥೨೧॥

ಪ್ರಾಚೀನರಾಜರ್ಷಿಗಳಾದ ಅಂಬರೀಷ, ಮಾಂಧಾತಾ, ಯಯಾತಿ, ನಹುಷ, ಭರತ, ದಿಲೀಪ, ಔಶೀನರನಾದ ಶಿಬಿ ಮೊದಲಾದವರ ರಾಜ್ಯಭಾರದ ಕ್ರಮದ ಭಾರವನ್ನು ಹೊತ್ತು ಒಳ್ಳೆಯ ಶೀಲ ಮತ್ತು ನಡತೆಗಳಿಂದ ಕೂಡಿದವನಾಗಿ ಧರ್ಮಜ್ಞನೂ, ಸತ್ಯವಾದ ಯುದ್ಧವನ್ನು ಮಾಡುವವನೂ ಆಗಿದ್ದಾನೆ.

ರಾಜಾ ಸರ್ವಗುಣೋಪೇತಃ ತ್ರೈಲೋಕ್ಯಸ್ಯಾಪಿ ಯೋ ಭವೇತ್ ।
ಅಜಾತಶತ್ರುರ್ಧರ್ಮಾತ್ಮಾ ಶುದ್ಧಜಾಂಬೂನದಪ್ರಭಃ ॥೨೨॥

ಶ್ರೇಷ್ಠಃ ಕುರುಷು ಸರ್ವೇಷು ಧರ್ಮಜ್ಞಃ ಶ್ರುತವಿತ್ತಮಃ ।
ಸುದರ್ಶನೋ ದೀರ್ಘಬಾಹುಃ ಕಥಂ ಕೃಷ್ಣ ಯುಧಿಷ್ಠಿರಃ ॥೨೩॥

ಸರ್ವಗುಣೋಪೇತನಾದ ಅವನು ಮೂರುಲೋಕಗಳಿಗೂ ರಾಜನಾಗಲು ಅರ್ಹನಾಗಿದ್ದಾನೆ. ಅಂತಹ ಶುದ್ಧಸುವರ್ಣವರ್ಣದ, ಧರ್ಮಾತ್ಮನಾದ, ಅಜಾತಶತ್ರುವಾದ, ಎಲ್ಲ ಕುರುಗಳಲ್ಲಿಯೂ ಶ್ರೇಷ್ಠನಾದ, ಧರ್ಮಜ್ಞನಾದ,

ವಿದ್ಯಾವಂತರಲ್ಲಿ ಶ್ರೇಷ್ಠನಾದ, ಒಳ್ಳೆಯ ಆಕೃತಿಯನ್ನು ಹೊಂದಿದ, ದೀರ್ಘಬಾಹುವಾದ ಯುಧಿಷ್ಠಿರನು ಎಲೈ ಕೃಷ್ಣನೇ, ಹೇಗಿದ್ದಾನೆ?

ಯಃ ಸ ನಾಗಾಯುತಪ್ರಾಣೋ ವಾತರಂಹಾ ವೃಕೋದರಃ ।
ಸಾಮರ್ಷಃ ಪಾಂಡವೋ ನಿತ್ಯಂ ಪ್ರಿಯೋ ಭ್ರಾತುಃ ಪ್ರಿಯಂಕರಃ ॥೨೪॥

ಹತ್ತುಸಹಸ್ರ ಆನೆಗಳ ಬಲವುಳ್ಳವನೂ, ವಾಯುವೇಗವುಳ್ಳವನೂ, ಕ್ರೋಧಶೀಲನೂ, ಅಣ್ಣನಿಗೆ ಪ್ರಿಯವನ್ನು ಮಾಡುವವನೂ ಮತ್ತು ಅಣ್ಣನಿಗೆ ನಿತ್ಯವೂ ಪ್ರಿಯನಾದವನೂ ಆದ ಪಾಂಡುಪುತ್ರನಾದ ಯಾವ ವೃಕೋದರನಿದ್ದಾನೆಯೋ;

ಕೀಚಕಸ್ಯ ತು ಸಜ್ಞಾತೇಃ ಯೋ ಹಂತಾ ಮಧುಸೂದನ ।
ಶೂರಃ ಕ್ರೋಧವಶಾನಾಂ ಚ ಹಿಡಿಂಬಸ್ಯ ಬಕಸ್ಯ ಚ ॥೨೫॥

ಎಲೈ ಮಧುಸೂದನನೇ, ಯಾವ ಶೂರನು ಬಾಂಧವಸಹಿತರಾದ ಕೀಚಕನನ್ನು ಕೊಂದನೋ, ಕ್ರೋಧವಶದೈತ್ಯರನ್ನೂ, ಹಿಡಿಂಬನನ್ನೂ ಮತ್ತು ಬಕನನ್ನೂ ಸಂಹರಿಸಿದನೋ;

ಪರಾಕ್ರಮೇ ಶಕ್ರಸಮೋ ವಾಯುವೇಗಸಮೋ ಜವೇ ।
ಮಹೇಶ್ವರಸಮಃ ಕ್ರೋಧೇ ಭೀಮಃ ಪ್ರಹರತಾಂ ವರಃ ॥೨೬॥

ಕ್ರೋಧಂ ಬಲಮಮರ್ಷಂ ಚ ಯೋ ನಿಧಾಯ ಪರಂತಪಃ ।
ಜಿತಾತ್ಮಾ ಪಾಂಡವೋಽಮರ್ಷೀ ಭ್ರಾತುಸ್ತಿಷ್ಠತಿ ಶಾಸನೇ ॥೨೭॥

ಪರಾಕ್ರಮದಲ್ಲಿ ಇಂದ್ರನಿಗೆ ಸಮನಾದ, ವೇಗದಲ್ಲಿ ವಾಯುವೇಗಕ್ಕೆ ಸಮನಾದ, ಕ್ರೋಧದಲ್ಲಿ ರುದ್ರನಿಗೆ ಸಮನಾದ, ಯುದ್ಧಮಾಡುವುದರಲ್ಲಿ ಶ್ರೇಷ್ಠನಾದ ಪರಂತಪನಾದ ಅಂತಹ ಭೀಮಸೇನನು ತನ್ನ ಕ್ರೋಧವನ್ನೂ, ಬಲವನ್ನೂ, ರೋಷವನ್ನೂ ಒಂದುಕಡೆ ಇಟ್ಟು, ಜಿತಮನಸ್ಕನಾಗಿ ಅಣ್ಣನ ಶಾಸನದಲ್ಲಿ ನಿಷ್ಠನಾಗಿದ್ದಾನೆ.

ತೇಜೋರಾಶಿಂ ಮಹಾತ್ಮಾನಂ ಬಲೌಘಮಮಿತೌಜಸಮ್ ।
ಭೀಮಂ ಪ್ರದರ್ಶನೇನಾಪಿ ಭೀಮಸೇನಂ ಜನಾರ್ದನ ॥೨೮॥

ತಂ ಮಮಾಚಕ್ಷ್ವ ವಾರ್ಷ್ಣೇಯ ಕಥಮದ್ಯ ವೃಕೋದರಃ ।
ಆಸ್ತೇ ಪರಿಘಬಾಹುಃ ಸ ಮಧ್ಯಮಃ ಪಾಂಡವೋಽಚ್ಯುತ ॥೨೯॥

ಎಲೈ ಜನಾರ್ದನನೇ, ತೇಜೋರಾಶಿಯೂ, ಮಹಾತ್ಮನೂ, ಬಲರಾಶಿಯೂ, ಅಮಿತಪರಾಕ್ರಮಿಯೂ, ದರ್ಶನಮಾತ್ರದಿಂದಲೂ ಭಯಂಕರನೂ, ಒನಕೆಯಂತಹ ಬಾಹುವುಳ್ಳವನೂ ಆದ, ಪಾಂಡುಪುತ್ರರಲ್ಲಿ ಮಧ್ಯನಾದ ವೃಕೋದರನು, ಎಲೈ ಅಚ್ಯುತನೇ, ವಾರ್ಷ್ಣೇಯನೇ, ಈ ದಿನ ಹೇಗಿದ್ದಾನೆ?

ಅರ್ಜುನೇನಾರ್ಜುನೋ ಯೋಽಸೌ ಕೃಷ್ಣ ಬಾಹುಸಹಸ್ರಿಣಾ ।
ದ್ವಿಬಾಹುಃ ಸ್ಪರ್ಧತೇ ನಿತ್ಯಮತೀತೇನಾಪಿ ಕೇಶವ ॥೩೦॥

ಎಲೈ ಕೇಶವನೇ, ಕೃಷ್ಣನೇ, ಯಾವ ಎರಡು ಬಾಹುಗಳುಳ್ಳ ಅರ್ಜುನನು, ಸಹಸ್ರಬಾಹುಗಳನ್ನು ಹೊಂದಿದ್ದ ಹಿಂದಿನ ಕಾಲದಲ್ಲಿದ್ದ ಕಾರ್ತವೀರ್ಯಾರ್ಜುನನ ಜೊತೆಯಲ್ಲಿ ಸ್ಪರ್ಧಿಸುತ್ತಾನೆಯೋ;

ಕ್ಷಿಪತ್ಯೇಕೇನ ವೇಗೇನ ಪಂಚಬಾಣಶತಾನಿ ಯಃ ।
ಇಷ್ವಸ್ತ್ರೇ ಸದೃಶೋ ರಾಜ್ಞಃ ಕಾರ್ತವೀರ್ಯಸ್ಯ ಪಾಂಡವಃ ॥೩೧॥

ತೇಜಸಾಽಽದಿತ್ಯಸದೃಶೋ ಮಹರ್ಷಿಪ್ರತಿಮೋ ದಮೇ ।
ಕ್ಷಮಯಾ ಪೃಥಿವೀತುಲ್ಯೋ ಮಹೇಂದ್ರಸಮವಿಕ್ರಮಃ ॥೩೨॥

ಯಾವನು ಒಂದೇ ವೇಗದಿಂದ ಐದುನೂರುಬಾಣಗಳನ್ನು ಪ್ರಯೋಗಿಸುತ್ತಾನೆಯೋ, ಧನುರ್ವಿದ್ಯೆಯಲ್ಲಿಯೂ ಮತ್ತು ಅಸ್ತ್ರವಿದ್ಯೆಯಲ್ಲಿಯೂ ಕಾರ್ತವೀರ್ಯಾರ್ಜುನನಿಗೆ ಸಮನಾಗಿದ್ದಾನೆಯೋ, ತೇಜಸ್ಸಿನಲ್ಲಿ ಸೂರ್ಯನಿಗೆ ಸದೃಶನಾಗಿದ್ದಾನೆಯೋ, ಇಂದ್ರಿಯನಿಗ್ರಹದಲ್ಲಿ ಮಹರ್ಷಿಗಳಿಗೆ ಸದೃಶನಾಗಿದ್ದಾನೆಯೋ, ಕ್ಷಮೆಯಲ್ಲಿ ಭೂಮಿಗೆ ಸದೃಶನಾಗಿದ್ದಾನೆಯೋ, ವಿಕ್ರಮದಲ್ಲಿ ದೇವೇಂದ್ರನಿಗೆ ಸದೃಶನಾಗಿದ್ದಾನೆಯೋ;

ಆಧಿರಾಜ್ಯಂ ಮಹದ್ ದೀಪ್ತಂ ಪಾರ್ಥಿವಂ ಮಧುಸೂದನ ।
ಆಹೃತಂ ಯೇನ ವಿಕ್ರಮ್ಯ ಕುರೂಣಾಂ ಸರ್ವರಾಜಸು ॥೩೩॥

ಯಸ್ಯ ಬಾಹುಬಲಂ ಘೋರಂ ಕೌರವಾಃ ಪರ್ಯುಪಾಸತೇ ।
ಸ ಸರ್ವರಥಿನಾಂ ಶ್ರೇಷ್ಠಃ ಪಾಂಡವಃ ಸತ್ಯವಿಕ್ರಮಃ ॥೩೪॥

ಎಲೈ ಮಧುಸೂದನನೇ, ಯಾವನು ಬೇರೆ ರಾಜರ ದೀಪ್ತವಾದ ಸಾಮ್ರಾಜ್ಯವನ್ನು ಎಲ್ಲ ರಾಜರಲ್ಲಿಯೂ ತನ್ನ ಪರಾಕ್ರಮವನ್ನು ತೋರಿಸಿ ಕುರುಗಳಿಗೆ ತಂದು ಒಪ್ಪಿಸಿದನೋ, ಯಾವನ ಘೋರವಾದ ಬಾಹುಬಲವನ್ನು ಕೌರವರೆಲ್ಲರೂ ಆಶ್ರಯಿಸಿದ್ದಾರೆಯೋ, ಯಾವ ಪಾಂಡುಪುತ್ರನು ಎಲ್ಲ ರಥಿಗಳಲ್ಲಿ ಶ್ರೇಷ್ಠನೋ ಮತ್ತು ಸತ್ಯವಿಕ್ರಮನೋ;

ಯಂ ಗತ್ವಾಽಭಿಮುಖಃ ಸಂಖೇ ನ ಜೀವನ್ ಕಶ್ಚಿದಾವ್ರಜೇತ್ ।
ಯೋ ಜೇತಾ ಸರ್ವಭೂತಾನಾಮಜೇಯೋ ಜಿಷ್ಣುರಚ್ಯುತ ॥೩೫॥

ಯೋಽಪಾಶ್ರಯಃ ಪಾಂಡವಾನಾಂ ದೇವಾನಾಮಿವ ವಾಸವಃ ।
ಸ ತೇ ಭ್ರಾತಾ ಸಖಾ ಚೈವ ಕಥಮದ್ಯ ಧನಂಜಯಃ ॥೩೬॥

ಯುದ್ಧದಲ್ಲಿ ಯಾವನಿಗೆ ಎದುರಾಗಿ ಹೋಗಿ ಯಾವನೂ ಜೀವಸಹಿತನಾಗಿ ಹಿಂದಿರುಗುವುದಿಲ್ಲವೋ, ಯಾವ ಅರ್ಜುನನು ಇನ್ನೊಬ್ಬರಿಂದ ಅಜೇಯನಾಗಿ ಎಲ್ಲರನ್ನೂ ಜಯಿಸುವವನೋ, ಯಾವ ಅವನು ದೇವತೆಗಳಿಗೆ ಇಂದ್ರನು ಆಶ್ರಯನಾದಂತೆ ಪಾಂಡವರಿಗೆ ಆಶ್ರಯನಾಗಿದ್ದಾನೆಯೋ, ಅಂತಹ ನಿನ್ನ ತಮ್ಮನೂ ಸ್ನೇಹಿತನೂ ಆದ ಧನಂಜಯನು ಹೇಗಿದ್ದಾನೆ?

ದಯಾವಾನ್ ಸರ್ವಭೂತೇಷು ಹ್ರೀನಿಷೇವೋ ಮಹಾಸ್ತ್ರವಿತ್ ।
ಮೃದುಶ್ಚ ಸುಕುಮಾರಶ್ಚ ಧಾರ್ಮಿಕಶ್ಚ ಪ್ರಿಯಶ್ಚ ಮೇ ॥೩೭॥

ಸಹದೇವೋ ಮಹೇಶ್ವಾಸಃ ಶೂರಃ ಸಮಿತಿಶೋಭನಃ ।
ಭ್ರಾತೄಣಾಂ ಕೃಷ್ಣ ಶುಶ್ರೂಷುಃ ಧರ್ಮಾರ್ಥಕುಶಲೋ ಯುವಾ ॥೩೮॥

ಸರ್ವಭೂತಗಳಲ್ಲಿ ದಯೆಯುಳ್ಳವನೂ, ದಾಕ್ಷಿಣ್ಯಸ್ವಭಾವದವನೂ, ಮಹಾಸ್ತ್ರವಿದ್ಯೆಗಳನ್ನು ಬಲ್ಲವನೂ, ಮೃದುವೂ, ಸುಕುಮಾರನೂ, ಧಾರ್ಮಿಕನೂ, ನನಗೆ ಪ್ರಿಯನಾದವನೂ, ದೊಡ್ಡಧನುರ್ಧಾರಿಯೂ, ಶೂರನೂ, ಎಲ್ಲಸಭೆಗಳಲ್ಲಿಯೂ ಶೋಭಿಸುವವನೂ, ಅಣ್ಣಂದಿರ ಮಾತುಗಳನ್ನು ಕೇಳುವವನೂ, ಧರ್ಮಾರ್ಥ ಕುಶಲನೂ, ಯುವಕನೂ ಆದ ಸಹದೇವನು;

ಸದೈವ ಸಹದೇವಸ್ಯ ಭ್ರಾತರೋ ಮಧುಸೂದನ ।
ವೃತ್ತಂ ಕಲ್ಯಾಣವೃತ್ತಸ್ಯ ಪೂಜಯಂತಿ ಮಹಾತ್ಮನಃ ॥೩೯॥

ಜ್ಯೇಷ್ಠೋಪಚಾಯಿನಂ ವೀರಂ ಸಹದೇವಂ ಯುಧಾಂಪತಿಮ್ ।
ಶುಶ್ರೂಷುಂ ಮಮ ವಾಷ್ಣೇಯ ಮಾದ್ರೀಪುತ್ರಂ ಪ್ರಚಕ್ಷ್ವ ಮೇ ॥೪೦॥

ಎಲೈ ಮಧುಸೂದನನೇ, ಮಹಾತ್ಮನೂ, ಕಲ್ಯಾಣನಡತೆಯುಳ್ಳವನೂ ಆದ ಸಹದೇವನನ್ನು ಅವನ ಅಣ್ಣಂದಿರು ಯಾವಾಗಲೂ ಪೂಜಿಸುತ್ತಾರೆ. ಅಂತಹ ಹಿರಿಯರನ್ನು ಸತ್ಕರಿಸುವ, ಯುದ್ಧಪತಿಯಾದ, ವೀರನಾದ, ನನ್ನ ಸೇವೆಯನ್ನು ಮಾಡುವ ಮಾದ್ರೀಪುತ್ರನಾದ ಸಹದೇವನ ಕ್ಷೇಮವನ್ನು ನನಗೆ ಹೇಳುವವನಾಗು.

ಸುಕುಮಾರೋ ಯುವಾ ಶೂರೋ ದರ್ಶನೀಯಶ್ಚ ಪಾಂಡವಃ ।
ಭ್ರಾತೄಣಾಂ ಕೃಷ್ಣ ಸರ್ವೇಷಾಂ ಪ್ರಿಯಃ ಪ್ರಾಣೋ ಬಹಿಶ್ಚರಃ ॥೪೧॥

ಚಿತ್ರಯೋಧೀ ಚ ನಕುಲೋ ಮಹೇಷ್ವಾಸೋ ಮಹಾಬಲಃ ।
ಕಚ್ಚಿತ್ ಸ ಕುಶಲೀ ಕೃಷ್ಣ ವತ್ಸೋ ಮಮ ಸುಖೈಧಿತಃ ॥೪೨॥

ಸುಕುಮಾರನೂ, ಯುವಕನೂ, ಶೂರನೂ, ಸುಂದರನೂ, ಎಲ್ಲಾ ಸಹೋದರರಿಗೂ ಪ್ರಿಯನಾದವನೂ, ಹೊರಗೆ ಚಲಿಸುವ ನನ್ನ ಪ್ರಾಣದಂತೆ ಪ್ರಿಯನಾದವನೂ, ಚಿತ್ರಯೋಧಿಯೂ, ದೊಡ್ಡಧನುರ್ಧಾರಿಯೂ, ಮಹಾಬಲನೂ, ಪಾಂಡುಪುತ್ರನೂ ಆದ ನಕುಲನು ಕ್ಷೇಮದಿಂದಿದ್ದಾನೆಯೇ? ಕೃಷ್ಣನೇ, ಸುಖದಿಂದ ಬೆಳೆದ ನನ್ನ ಮಗುವಾದ ನಕುಲನು ಕ್ಷೇಮದಿಂದಿದ್ದಾನೆಯೇ?

ಸುಖೋಚಿತಮದುಃಖಾರ್ಹಂ ಸುಕುಮಾರಂ ಮಹಾರಥಮ್ ।
ಅಪಿ ಜಾತು ಮಹಾಬಾಹೋ ಪಶ್ಯೇಯಂ ನಕುಲಂ ಪುನಃ ॥೪೩॥

ದುಃಖಕ್ಕೆ ಅರ್ಹನಲ್ಲದ, ಸುಖಕ್ಕೆ ಯೋಗ್ಯನಾದ ಸುಕುಮಾರನೂ, ಮಹಾರಥನೂ ಆದ ನಕುಲನನ್ನು ಎಲೈ ಮಹಾಬಾಹುವೇ, ನಾನು ಇಂದಾದರೂ ನೋಡುವೆನೆ?

ಪಕ್ಷ್ಮಸಂಪಾತಜೇ ಕಾಲೇ ನಕುಲೇನ ವಿನಾಕೃತಾ ।
ನ ಲಭಾಮಿ ಸುಖಂ ವೀರ ಸಾऽದ್ಯ ಜೀವಾಮಿ ಪಶ್ಯ ಮಾಮ್ ॥೪೪॥

ಒಂದು ರೆಪ್ಪೆಯನ್ನು ಮುಚ್ಚುವ ಕಾಲದಷ್ಟು ಸಮಯದಲ್ಲಿ ನಕುಲನನ್ನು ನೋಡದಿದ್ದರೆ ನನ್ನ ಮನಸ್ಸಿಗೆ ಸುಖವಾಗುವುದಿಲ್ಲ. ಎಲೈ ವೀರನಾದ ಕೃಷ್ಣನೇ, ಅಂತಹ ನಾನು ಈ ದಿನ ಬದುಕಿದ್ದೇನೆ, ನನ್ನನ್ನು ನೋಡು.

ಸರ್ವೇಃ ಪುತ್ರೈಃ ಪ್ರಿಯತರಾ ದ್ರೌಪದೀ ಮೇ ಜನಾರ್ದನ ।
ಕುಲೀನಾ ಶೀಲಸಂಪನ್ನಾ ಸರ್ವೈಃ ಸಮುದಿತಾ ಗುಣೈಃ ॥೪೫॥

ಎಲೈ ಜನಾರ್ದನನೇ, ನನ್ನ ಎಲ್ಲ ಪುತ್ರರಿಗಿಂತಲೂ ನನಗೆ ಅತ್ಯಂತ ಪ್ರಿಯಳಾದವಳು ದ್ರೌಪದಿ. ಒಳ್ಳೆಯ ಕುಲದಿಂದ ಬಂದವಳೂ, ಶೀಲಸಂಪನ್ನಳೂ ಮತ್ತು ಸಾಧ್ವಿಗೆ ಇರಬೇಕಾದ ಎಲ್ಲ ಗುಣಗಳಿಂದಲೂ ಕೂಡಿದವಳು.

ಪುತ್ರೀ ದ್ರುಪದರಾಜಸ್ಯ ವಿಖ್ಯಾತಾ ಸತ್ಯವಾದಿನೀ ।
ಪತಿಲೋಕಾನ್ ಪುತ್ರಲೋಕಾನ್ ವೃಣ್ವಾನಾ ಸತ್ಯವಾದಿನೀ ॥೪೬॥

ಪ್ರಿಯಾನ್ ಪುತ್ರಾನ್ ಪರಿತ್ಯಜ್ಯ ಪಾಂಡವಾನನ್ವವರ್ತತ ॥೪೭॥

ದ್ರುಪದರಾಜನ ಪ್ರಖ್ಯಾತಳಾದ ಪುತ್ರಿ, ಸತ್ಯವನ್ನು ನುಡಿಯುವವಳು, ಸತ್ಯವನ್ನು ನುಡಿದು ಪತಿಲೋಕವನ್ನೂ ಮತ್ತು ಪುತ್ರಲೋಕವನ್ನೂ ಬಯಸುವವಳು. ತನಗೆ ಪ್ರಿಯರಾದ ಮಕ್ಕಳನ್ನು ಬಿಟ್ಟು ಅವಳು ಪಾಂಡವರನ್ನು ಹಿಂಬಾಲಿಸಿದಳು.

ಮಹಾಭಿಜನಸಂಪನ್ನಾ ಸರ್ವಕಾಮೈಃ ಸುಖೈಧಿತಾ ।
ಈಶ್ವರೀ ಸರ್ವಕಲ್ಯಾಣೀ ದ್ರೌಪದೀ ಕಥಮಚ್ಯುತ ॥೪೮॥

ಎಲೈ ಅಚ್ಯುತನೇ, ಮಹಾಕುಲದಲ್ಲಿ ಜನಿಸಿದ, ಎಲ್ಲ ಭೋಗಗಳಿಂದಲೂ ಸಮೃದ್ಧವಾಗಿ ಬೆಳೆದ, ಎಲ್ಲ ಮಂಗಳಗಳಿಗೆ ಒಡೆಯಳಾದ ದ್ರೌಪದಿಯು ಹೇಗಿದ್ದಾಳೆ?

ಪತಿಭಿಃ ಪಂಚಭಿಃ ಶೂರೈರಗ್ನಿಕಲ್ಪೈಃ ಪ್ರಹಾರಿಭಿಃ ।
ಉಪಪನ್ನಾ ಮಹೇಷ್ವಾಸೈಃ ದ್ರೌಪದೀ ದುಃಖಭಾಗಿನೀ ॥೪೯॥

ಅಗ್ನಿಗೆ ಸಮಾನರಾದ, ಯುದ್ಧದಲ್ಲಿ ಎಲ್ಲರನ್ನೂ ಸದೆಬಡಿಯುವ ಮಹಾಧನುರ್ಧಾರಿಗಳಾದ ಐವರು ಪತಿಗಳನ್ನು ಹೊಂದಿದ ದ್ರೌಪದಿಯು ದುಃಖವನ್ನು ಅನುಭವಿಸುತ್ತಿದ್ದಾಳೆ.

ಚತುರ್ದಶಮಿಮಂ ವರ್ಷಂ ಯಾಂ ನ ಪಶ್ಯಾಮ್ಯರಿಂದಮ ।
ಪುತ್ರಾದಿಭಿಃ ಪರಿದ್ಯೂನಾಂ ದ್ರೌಪದೀಂ ಸತ್ಯವಾದಿನೀಮ್ ॥೫೦॥

ಎಲೈ ಅರಿಂದಮನೇ, ಪುತ್ರಾದಿಗಳಿಂದ ದೂರಳಾಗಿ ಸತ್ಯವಾದಿನಿಯಾದ ದ್ರೌಪದಿಯನ್ನು ನೋಡದೆ ನಾನು ಈ ಹದಿನಾಲ್ಕನೆಯ ವರ್ಷವನ್ನು ಕಳೆಯುತ್ತಿದ್ದೇನೆ.

ನ ನೂನಂ ಕರ್ಮಭಿಃ ಶುಕ್ಲೈರಶ್ನುವಂತಿ ಸ್ತ್ರಿಯಃ ಸುಖಮ್ ।
ದ್ರೌಪದೀ ಚೇತ್ ತಥಾವೃತ್ತಾ ನಾಶ್ನುತೇ ಸುಖಮವ್ಯಯಮ್ ॥೫೧॥

ಅಂತಹ ನಡತೆಯುಳ್ಳ ದ್ರೌಪದಿಯು ನಿತ್ಯವಾದ ಸುಖವನ್ನು ಪಡೆಯದಿದ್ದರೆ ಶುಭವಾದ ಕರ್ಮಗಳಿಂದ ಸ್ತ್ರೀಯರು ಸುಖವನ್ನು ಪಡೆಯುತ್ತಾರೆ ಎಂದು ನಾನು ಭಾವಿಸುವುದಿಲ್ಲ.

ನ ಮೇ ಪ್ರಿಯಾ ದ್ರೌಪದೇಯಾ ನ ಬೀಭತ್ಸುರ್ಯುಧಿಷ್ಠಿರೌ ।
ನ ಭೀಮಸೇನೋ ನ ಯಮೌ ಯದಪಶ್ಯಂ ಸಭಾಗತಾಮ್ ॥೫೨॥

ನ ಮೇ ದುಃಖತರಂ ಕಿಂಚಿದ್ ಭೂತಪೂರ್ವಂ ತತೋऽಧಿಕಮ್॥೫೩॥

ನಾನು ಸಭೆಯಲ್ಲಿ ಎಳೆದು ತಂದ ಅವಳನ್ನು ನೋಡಿದುದರಿಂದ ನನಗೆ ದ್ರೌಪದಿಯ ಮಕ್ಕಳೂ ಪ್ರಿಯರಲ್ಲ, ಅರ್ಜುನ-ಯುಧಿಷ್ಠಿರರೂ ಪ್ರಿಯರಲ್ಲ, ಭೀಮಸೇನ-ನಕುಲ ಸಹದೇವರೂ ಪ್ರಿಯರಲ್ಲ. ನನಗೆ ಅಲ್ಲಿಯವರೆಗೆ ಹಿಂದೆ ಎಂದೂ ಅದಕ್ಕಿಂತ ದೊಡ್ಡ ದುಃಖವು ಆಗಿರಲಿಲ್ಲ.

ಸ್ತ್ರೀಧರ್ಮಿಣೀಂ ದ್ರೌಪದೀಂ ಚೇತ್ ಶ್ವಶುರಾಣಾಂ ಸಮೀಪಗಾಮ್ ।
ಆನಾಯಿತಾಮನಾರ್ಯೇಣ ಕ್ರೋಧಲೋಭಾನುವರ್ತಿನಾ ॥೫೪॥

ಸರ್ವೇ ಪ್ರೈಕ್ಷಂತ ಕುರವ ಏಕವಸ್ತ್ರಾಂ ಸಭಾಗತಾಮ್ ॥೫೫॥

ರಜಸ್ವಲೆಯಾದ ದ್ರೌಪದಿಯನ್ನು ಅತ್ತೆ-ಮಾವಂದಿರ ಎದುರಿನಲ್ಲಿ, ಕ್ರೋಧ ಲೋಭಗಳಿಗೆ ವಶನಾದ, ಅನಾರ್ಯನಾದ ದುಶ್ಶಾಸನನು ಎಳೆದು ತರುತ್ತಿರಲು, ಏಕವಸ್ತ್ರವನ್ನು ಧರಿಸಿ ಸಭೆಯ ಮಧ್ಯದಲ್ಲಿದ್ದ ಅವಳನ್ನು ಎಲ್ಲ ಕೌರವರೂ ನೋಡಿದರು.

ತತ್ರೈವ ಧೃತರಾಷ್ಟ್ರಸ್ಯ ಮಹಾರಾಜಶ್ಚ ಬಾಹ್ಲಿಕಃ ।
ಕೃಪಶ್ಚ ಸೋಮದತ್ತಶ್ಚ ನಿರ್ವಿಣ್ಣಾಃ ಕುರವಸ್ತಥಾ ॥೫೬॥

ಅಲ್ಲಿಯೇ ಧೃತರಾಷ್ಟ್ರನೂ, ಬಾಹ್ಲೀಕ ಮಹಾರಾಜನೂ, ಕೃಪರೂ ಮತ್ತು ಸೋಮದತ್ತನೂ ಇದ್ದರು. ಕುರುಗಳೆಲ್ಲರೂ ಆಗ ವಿಷಾದಗೊಂಡರು.

ತಸ್ಯಾಂ ಸಂಸದಿ ಸರ್ವೇಷಾಂ ಕ್ಷತ್ತಾರಂ ಪೂಜಯಾಮ್ಯಹಮ್ ।
ವೃತ್ತೇನ ಹಿ ಭವತ್ಯಾರ್ಯೋ ನ ಧನೇನ ನ ವಿದ್ಯಯಾ ॥೫೭॥

ಆ ಸಭೆಯಲ್ಲಿ ಇದ್ದ ಎಲ್ಲರಿಗಿಂತಲೂ ನಾನು ವಿದುರನನ್ನು ಗೌರವಿಸುತ್ತೇನೆ. ಮನುಷ್ಯನು ತನ್ನ ನಡತೆಯಿಂದ ದೊಡ್ಡವನಾಗುತ್ತಾನೆ. ಧನದಿಂದಲಾಗಲೀ, ವಿದ್ಯೆಯಿಂದಾಗಲೀ ಅಲ್ಲ.

ತಸ್ಯ ಕೃಷ್ಣ ಮಹಾಬುದ್ಧೇಃ ಗಂಭೀರಸ್ಯ ಮಹಾತ್ಮನಃ ।
ಕ್ಷತ್ತುಃ ಶೀಲಮಲಂಕಾರೋ ಲೋಕಾನ್ ವಿಷ್ಟಭ್ಯ ತಿಷ್ಠತಿ ॥೫೮॥

ಎಲೈ ಕೃಷ್ಣನೇ, ಮಹಾಬುದ್ಧಿಯುಳ್ಳ, ಗಂಭೀರನೂ ಮತ್ತು ಮಹಾತ್ಮನೂ ಆದ ಆ ವಿದುರನ ಅಲಂಕಾರರೂಪವಾದ ನಡತೆಯು ಲೋಕಗಳನ್ನು ಮೆಟ್ಟಿನಿಲ್ಲುತ್ತದೆ.

ವೈಶಂಪಾಯನಃ

ಸಾ ಶೋಕಾರ್ತಾ ಚ ಹೃಷ್ಟಾ ಚ ದೃಷ್ಟ್ವಾ ಗೋವಿಂದಮಾಗತಮ್ ।
ನಾನಾವಿಧಾನಿ ದುಃಖಾನಿ ಸರ್ವಾಣ್ಯೇವಾನ್ವಕೀರ್ತಯತ್ ॥೫೯॥

ವೈಶಂಪಾಯನ– ಅವಳು ಗೋವಿಂದನು ಬಂದಿರುವುದನ್ನು ನೋಡಿ ಹರ್ಷವನ್ನೂ ಮತ್ತು ದುಃಖವನ್ನೂ ಹೊಂದಿದವಳಾಗಿ ತಾನು ಅನುಭವಿಸಿದ ನಾನಾ ದುಃಖಗಳನ್ನು ಆಡಿದಳು.

ಪೂರ್ವೈರಾಚರಿತಂ ಯತ್ತತ್ ಕುರಾಜಾಭಿರರಿಂದಮ ।
ಅಕ್ಷದ್ಯೂತಂ ಮೃಗವಧಃ ಕಚ್ಚಿದೇಷಾಂ ಸುಖಾವಹಮ್ ॥೬೦॥

ಎಲೈ ಅರಿಂದಮನೇ, ಪೂರ್ವದಲ್ಲಿ ದುಷ್ಟರಾಜರು ಆಚರಿಸಿದಂತಹ ಅಕ್ಷದ್ಯೂತ, ಬೇಟೆ ಮೊದಲಾದವುಗಳು ಅವರಿಗೆ ಏನಾದರೂ ಸುಖವನ್ನು ಕೊಟ್ಟಿತೆ?

ತನ್ಮಾಂ ದಹತಿ ಯಾ ಕೃಷ್ಣಾ ಸಭಾಯಾಂ ಕುರುಸನ್ನಿಧೌ ।
ಧಾರ್ತರಾಷ್ಟ್ರೈಃ ಪರಿಕ್ಲಿಷ್ಟಾ ಯಥಾ ನಕುಲಜಾ ತಥಾ ॥೬೧॥

ದ್ರೌಪದಿಯು ಸಭೆಯ ಮಧ್ಯದಲ್ಲಿ, ಕುರುಗಳ ಸನ್ನಿಧಿಯಲ್ಲಿ, ಕುಲೀನಳಲ್ಲದವಳಂತೆ ದುರ್ಯೋಧನಾದಿಗಳಿಂದ ಅನುಭವಿಸಿದ ಕ್ಲೇಶವು ನನ್ನನ್ನು ಸುಡುತ್ತದೆ.

ನಿರ್ವಾಸನಂ ಚ ನಗರಾತ್ ಪ್ರವ್ರಜ್ಯಾ ಚ ಪರಂತಪ ।
ನಾನಾವಿಧಾನಾಂ ದುಃಖಾನಾಮಾವಾಸೋಽಸ್ಮಿ ಜನಾರ್ದನ ॥೬೨॥

ಎಲೈ ಪರಂತಪನೇ, ಜನಾರ್ದನನೇ, ಮಕ್ಕಳ ನಗರದಿಂದ ಹೊರಗೆ ವಾಸದಿಂದ ಮತ್ತು ಅವರ ಕಾಡಿನ ವಾಸದಿಂದ ಏನು ನಾನಾವಿಧ ದುಃಖಗಳಾಗಿವೆಯೋ ಎಲ್ಲದಕ್ಕೂ ನಾನು ಆಶ್ರಯಳಾಗಿದ್ದೇನೆ.

ಅಜ್ಞಾತಚರ್ಯಾ ಬಾಲಾನಾಮವರೋಧಶ್ಚ ಮಾಧವ ।
ನ ಮೇ ಕ್ಲೇಶತಮಂ ತತ್ ಸ್ಯಾತ್ ಪುತ್ರೈಃ ಸಹ ಪರಂತಪ ॥೬೩॥

ಎಲೈ ಮಾಧವನೇ, ನಾನು ಜೊತೆಯಲ್ಲಿದ್ದಿದ್ದರೆ ಮಕ್ಕಳ ಜೊತೆ ಅಜ್ಞಾತವಾಸವಾಗಲೀ ಅಥವಾ ವನವಾಸವಾಗಲೀ ಅಷ್ಟು ಕ್ಲೇಶ ಕೊಡುತ್ತಿರಲಿಲ್ಲ.

ದುರ್ಯೋಧನೇನ ನಿಕೃತಾ ವರ್ಷಮದ್ಯ ಚತುರ್ದಶಮ್ ।
ದುಃಖಾದಪಿ ಸುದುಃಖಂ ಸ್ಯಾದ್ ಯದಿ ಪುಣ್ಯಫಲಕ್ಷಯಃ ॥೬೪॥

ದುರ್ಯೋಧನನಿಂದ ಮೋಸಕ್ಕೆ ಒಳಗಾಗಿ ಇಂದಿಗೆ ಹದಿನಾಲ್ಕು ವರ್ಷವಾದವು. ನಮ್ಮ ಪುಣ್ಯಫಲವೆಲ್ಲವೂ ನಾಶವನ್ನು ಹೊಂದಿದ್ದರೆ ಅದು ದುಃಖಕ್ಕಿಂತಲೂ ಹೆಚ್ಚು ದುಃಖಕರವಾದುದು.

ನ ಮೇ ವಿಶೇಷೋ ಜಾತ್ವಾಸೀದ್ ಧಾರ್ತರಾಷ್ಟ್ರೇಷು ಪಾಂಡವೈಃ ॥೬೫॥

ತೇನ ಸತ್ಯೇನ ಕೃಷ್ಣ ತ್ವಾಂ ಹತಾಮಿತ್ರಂ ಶ್ರಿಯಾ ವೃತಮ್ ।
ಅಸ್ಮಾದ್ ವಿಮುಕ್ತಂ ಸಂಗ್ರಾಮಾತ್ ಪಶ್ಯೇಯಂ ಪಾಂಡವೈಃ ಸಹ ॥೬೬॥

ನನಗೆ ದುರ್ಯೋಧನಾದಿಗಳಿಗೂ ಮತ್ತು ಪಾಂಡವರಿಗೂ ಯಾವ ವ್ಯತ್ಯಾಸವೂ ಎಂದೂ ಇರಲಿಲ್ಲ. ಎಲೈ ಕೃಷ್ಣನೇ, ಆ ಸತ್ಯದಿಂದ ಈ ಕಷ್ಟದಿಂದ ಪಾರಾಗಿ,

ಯುದ್ಧದಿಂದ ಪಾರಾಗಿ, ಶತ್ರುಗಳನ್ನು ಸಂಹರಿಸಿ, ಐಶ್ವರ್ಯಯುಕ್ತವಾದ ಪಾಂಡವರನ್ನು ಪುನಃ ನೋಡಿಯೇನು!

ನೈವಂ ಶಕ್ಯಾಃ ಪರಾಜೇತುಂ ಸತ್ವಂ ತೇಷಾಂ ತಥಾವಿಧಮ್ ॥೬೭॥

ಅವರನ್ನು ಯಾರೂ ಸೋಲಿಸಲು ಸಾಧ್ಯವಿಲ್ಲ. ಅವರ ಬಲವು ಅಂತಹ ರೀತಿಯಾದುದು.

ಪಿತರಂ ಚೈವ ಗರ್ಹಾಮಿ ನಾತ್ಮಾನಂ ನ ಸುಯೋಧನಮ್ ।
ಯೇನಾಹಂ ಕುಂತಿಭೋಜಾಯ ಧನಂ ಧೂರ್ತೈರಿವಾರ್ಪಿತಾ ॥೬೮॥

ನಾನು ನನ್ನ ತಂದೆಯನ್ನೇ ನಿಂದಿಸುತ್ತೇನೆ. ನನ್ನನ್ನಾಗಲೀ ಅಥವಾ ಸುಯೋಧನನ್ನಾಗಲೀ ನಿಂದಿಸುವುದಿಲ್ಲ. ಏಕೆಂದರೆ ದುಷ್ಟರಿಗೆ ಧನವನ್ನು ಕೊಟ್ಟಂತೆ ಕುಂತಿಭೋಜನಿಗೆ ನನ್ನನ್ನು ಅರ್ಪಿಸಿದನು.

ಬಾಲಾಂ ಮಮಾರ್ಯಕಸ್ತುಷ್ಯನ್ ಕ್ರೀಡಂತೀಂ ಕಂದುಹಸ್ತಿಕಾಮ್ ।
ಅದಾತ್ತು ಕುಂತಿಭೋಜಾಯ ಸಖಾ ಸಖ್ಯೇ ಮಹಾತ್ಮನೇ ॥೬೯॥

ಬಾಲೆಯಾಗಿ ಕೈಯಲ್ಲಿ ಚೆಂಡುಹಿಡಿದು ಆಟವಾಡುತ್ತಿದ್ದ ನನ್ನನ್ನು ಪೂಜ್ಯನಾದ ಅವನು ಮಹಾತ್ಮನಾದ, ಸ್ನೇಹಿತನಾದ ಕುಂತಿಭೋಜನಿಗೆ ಕೊಟ್ಟುಬಿಟ್ಟನು.

ಸಾऽಹಂ ಪಿತ್ರಾ ಚ ನಿಕೃತಾ ಶ್ವಶುರೈಶ್ಚ ಪರಂತಪ ।
ಅತ್ಯಂತದುಃಖಿತಾ ಕೃಷ್ಣ ಕಿಂ ಜೀವಿತಫಲಂ ಮಮ ॥೭೦॥

ಅಂತಹ ನಾನು ತಂದೆಯಿಂದಲೂ ಅವಮಾನಿತಳಾಗಿ, ಅತ್ತೆ-ಮಾವಂದಿರಿಂದಲೂ ಅವಮಾನಿತಳಾಗಿ ಅತ್ಯಂತ ದುಃಖಿತಳಾಗಿದ್ದೇನೆ. ಪರಂತಪನಾದ ಕೃಷ್ಣನೇ, ನಾನು ಬದುಕಿ ಏನು ಫಲವಿದೆ?

ಯನ್ಮಾಂ ವಾಗಬ್ರವೀನ್ನಕ್ತಂ ಸೂತಕೇ ಸವ್ಯಸಾಚಿನಃ ।
ಪುತ್ರಸ್ತೇ ಪೃಥಿವೀಂ ಜೇತಾ ಯಶಶ್ಚಾಸ್ಯ ದಿವಂ ಸ್ಪೃಶೇತ್ ॥೭೧॥

ಹತ್ವಾ ಕುರೂನ್ ಮಹಾಜನ್ಯೇ ರಾಜ್ಯಂ ಪ್ರಾಪ್ಯ ಧನಂಜಯಃ ।
ಭ್ರಾತೃಭಿಃ ಸಹ ಕೌಂತೇಯಃ ತ್ರೀನ್ ಮೇಧಾನಾಹರಿಷ್ಯತಿ ॥೭೨॥

ಅರ್ಜುನನು ಜನಿಸಿದಾಗ ಸಾಯಂಕಾಲದಲ್ಲಿ ನನ್ನನ್ನು ಕುರಿತು ನಿನ್ನ ಮಗನು ಭೂಮಿಯನ್ನು ಜಯಿಸುತ್ತಾನೆ, ಅವನ ಕೀರ್ತಿಯು ಸ್ವರ್ಗವನ್ನು ಮುಟ್ಟುತ್ತದೆ. ಅವನು ದೊಡ್ಡ ಯುದ್ಧದಲ್ಲಿ ಕೌರವರನ್ನು ಸಂಹರಿಸಿ, ರಾಜ್ಯವನ್ನು ಸಂಪಾದಿಸಿ, ಸಹೋದರರ ಜೊತೆಯಲ್ಲಿ ಮೂರು ಅಶ್ವಮೇಧಯಾಗವನ್ನು ಮಾಡುವನು ಎಂದು ಅಶರೀರವಾಣಿ ಆಯಿತಷ್ಟೆ?

ನಾಹಂ ತಾಮಭ್ಯಸೂಯಾಮಿ ನಮೋ ಧರ್ಮಾಯ ವೇಧಸೇ ।
ಕೃಷ್ಣಾಯ ಮಹತೇ ನಿತ್ಯಂ ಧರ್ಮೋ ಧಾರಯತಿ ಪ್ರಜಾಃ ॥೭೩॥

ನಾನು ಆ ಅಶರೀರವಾಣಿಯನ್ನೂ ದೂಷಿಸುವುದಿಲ್ಲ. ಎಲ್ಲವನ್ನೂ ವಿಧಿಸುವ ಧರ್ಮಕ್ಕೆ ನಮಸ್ಕಾರ. ಮಹಾತ್ಮನಾದ ಕೃಷ್ಣನಾದ ನಿನಗೆ ನಮಸ್ಕಾರ. ಯಾವಾಗಲೂ ಧರ್ಮವೇ ಪ್ರಜೆಗಳನ್ನು ರಕ್ಷಿಸುತ್ತದೆ.

ಧರ್ಮಶ್ಚೇದಸ್ತಿ ವಾರ್ಷ್ಣೇಯ ಯಥಾ ವಾಗಭ್ಯಭಾಷತ ।
ತ್ವಂ ಚಾಪಿ ತತ್ ತಥಾ ಕೃಷ್ಣ ಸರ್ವಂ ಸಂಪಾದಯಿಷ್ಯಸಿ ॥೭೪॥

ಎಲೈ ವಾರ್ಷ್ಣೇಯನೇ, ಕೃಷ್ಣನೇ, ಧರ್ಮವು ಇರುವುದಾದರೆ ಅಶರೀರವಾಣಿಯು ನುಡಿದಂತೆ ನೀನೂ ಸಹ ಎಲ್ಲವನ್ನೂ ಸಂಪಾದಿಸುವಿ.

ನ ಮಾಂ ಮಾಧವ ವೈಧವ್ಯಂ ನಾರ್ಥನಾಶೋ ನ ವೈರಿತಾ ।
ತಥಾ ಶೋಕಾಯ ದಹತಿ ಯಥಾ ಪುತ್ರೈರ್ವಿನಾಭವಃ ॥೭೫॥

ಎಲೈ ಮಾಧವನೇ, ಮಕ್ಕಳನ್ನು ಬಿಟ್ಟು ಬದುಕುವುದರಿಂದ ಎಂತಹ ಶೋಕವು ದಹಿಸುತ್ತಿದೆಯೋ ಅಂತಹ ಶೋಕವು ವೈದವ್ಯದಿಂದಾಗಲೀ, ರಾಜ್ಯನಾಶದಿಂದಾಗಲೀ ಅಥವಾ ಶತ್ರುದ್ವೇಷದಿಂದಾಗಲೀ ಉಂಟಾಗಲಿಲ್ಲ.

ಯಾಽಹಂ ಗಾಂಡೀವಧನ್ವಾನಂ ಸರ್ವಶಸ್ತ್ರಭೃತಾಂ ವರಮ್ ।
ಧನಂಜಯಂ ನ ಪಶ್ಯಾಮಿ ಕಾ ಶಾಂತಿರ್ಹೃದಯಸ್ಯ ಮೇ ॥೭೬॥

ಯಾವ ನಾನು ಗಾಂಡೀವಧನುರ್ಧಾರಿಯಾದ, ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಅರ್ಜುನನನ್ನು ನೋಡುತ್ತಿಲ್ಲವೋ ಅಂತಹ ನನ್ನ ಮನಸ್ಸಿಗೆ ಯಾವ ಶಾಂತಿ ಇದೆ?

ಇಮಂ ಚತುರ್ದಶಂ ವರ್ಷಂ ಯನ್ನಾಪಶ್ಯಂ ಯುಧಿಷ್ಠಿರಮ್ ।
ಧನಂಜಯಂ ಚ ಗೋವಿಂದ ಯಮೌ ತಂ ಚ ವೃಕೋದರಮ್ ॥೭೭॥

ಅರ್ಥತಸ್ತೇ ಮಮ ಮೃತಾಃ ತೇಷಾಂ ಚಾಹಂ ಜನಾರ್ದನ ॥೭೮॥

ಎಲೈ ಗೋವಿಂದನೇ, ಈ ಹದಿನಾಲ್ಕನೆಯ ವರ್ಷದವರೆಗೆ ಯುಧಿಷ್ಠಿರನನ್ನಾಗಲೀ, ಅರ್ಜುನನನ್ನಾಗಲೀ, ಭೀಮಸೇನನನ್ನಾಗಲೀ, ನಕುಲ-ಸಹದೇವರನ್ನಾಗಲೀ ನೋಡದಿರುವುದರಿಂದ ನನ್ನ ಪಾಲಿಗೆ ಅವರು ಮೃತರಾದಂತೆಯೇ. ಅವರ ಪಾಲಿಗೆ ನಾನೂ ಪ್ರಯೋಜನ ದೃಷ್ಟಿಯಿಂದ ಮೃತಳಾದಂತೆಯೇ.

ಬ್ರೂಯಾ ಮಾಧವ ರಾಜಾನಂ ಧರ್ಮಾತ್ಮಾನಂ ಯುಧಿಷ್ಠಿರಮ್ ॥೭೯॥

ಬ್ರೂಯಾಸ್ತೇ ಹೀಯತೇ ಧರ್ಮೋ ಮಾ ಪುತ್ರಕ ವೃಥಾ ಕೃಥಾಃ ।
ಪರಾಶ್ರಯಾ ವಾಸುದೇವ ಯಾ ಜೀವತಿ ಧಿಗಸ್ತು ಮಾಮ್ ॥೮೦॥

ಎಲೈ ಮಾಧವನೇ, ಧರ್ಮಾತ್ಮನಾದ ಯುಧಿಷ್ಠಿರನಿಗೆ ಹೀಗೆ ಹೇಳು. ನಿನ್ನ ಧರ್ಮವು ನಾಶ ಹೊಂದುತ್ತಿದೆ. ಎಲೈ ಪುತ್ರನೇ, ವ್ಯರ್ಥವಾಗಿ ಸಮಯವನ್ನು ಕಳೆಯಬೇಡ ಎಂದು (ನಾನು ಹೇಳಿದೆನೆಂದು) ಹೇಳು. ಎಲೈ ವಾಸುದೇವನೇ, ಇನ್ನೊಬ್ಬರ ಆಶ್ರಯದಲ್ಲಿ ಬದುಕಿರುವ ನನಗೆ ಧಿಕ್ಕಾರವಿರಲಿ.

ವೃತ್ತೇಃ ಕಾರ್ಪಣ್ಯಲಬ್ಧಾಯಾ ಅಪ್ರತಿಷ್ಠೈವ ಜ್ಯಾಯಸೀ ।
ಅಥೋ ಧನಂಜಯಂ ಬ್ರೂಯಾ ನಿತ್ಯೋದ್ಯುಕ್ತಂ ವೃಕೋದರಮ್॥೮೧॥

ಕಾರ್ಪಣ್ಯಸಹಿತವಾಗಿ ಜೀವಿಸುವುದಕ್ಕಿಂತಲೂ, ಅನಿಶ್ಚಯದಿಂದ ಜೀವಿಸುವುದೇ ಶ್ರೇಷ್ಠವಾದುದು. ಆದ್ದರಿಂದ ನಿತ್ಯೋತ್ಥಾನಶೀಲರಾದ ಅರ್ಜುನನನ್ನು ಮತ್ತು ಭೀಮಸೇನನನ್ನು ಕುರಿತು ಹೀಗೆ ಹೇಳುವವನಾಗು.

ಯದರ್ಥಂ ಕ್ಷತ್ರಿಯಾ ಸೂತೇ ತಸ್ಯ ಕಾಲೋಽಯಮಾಗತಃ ॥೮೨॥

ಅಸ್ಮಿಂಶ್ಚೈದಾಗತೇ ಕಾಲೇ ಕಾಲೋ ವೋಽತಿಕ್ರಮಿಷ್ಯತಿ ।
ಲೋಕಸಂಭಾವಿತಾಃ ಸಂತಃ ಆನೃಶಂಸ್ಯಂ ಕರಿಷ್ಯಥ ॥೮೩॥

ಕ್ಷತ್ರಿಯ ಸ್ತ್ರೀಯು ಯಾವ ಉದ್ದೇಶದಿಂದ ಮಗನನ್ನು ಪಡೆಯುತ್ತಾಳೆಯೋ ಅದರ ಪರೀಕ್ಷೆಯ ಕಾಲವು ಈಗ ಬಂದೊದಗಿದೆ. ಹೀಗೆ ಬಂದೊದಗಿದ ಕಾಲದಲ್ಲಿ ನೀವು ಪ್ರಯತ್ನವನ್ನು ಮಾಡದೆ ಕಾಲವು ಮೀರಿಹೋದರೆ ಲೋಕಪೂಜಿತರಾಗಿ ಬೆಳೆದ ನೀವು ಲೋಕನಿಂದೆಗೆ ಒಳಗಾಗುವಿರಿ.

ನೃಶಂಸೇನ ಚ ವೋ ಯುಕ್ತಾನ್ ತ್ಯಜೇಯಂ ಶಾಶ್ವತೀಃ ಸಮಾಃ ।
ಕಾಲೇ ಹಿ ಸಮನುಪ್ರಾಪ್ತೇ ತ್ಯಕ್ತವ್ಯಮಪಿ ಜೀವಿತಮ್ ॥೮೪॥

ಅಂತಹ ಲೋಕನಿಂದೆ ಮತ್ತು ಕ್ರೌರ್ಯಕ್ಕೆ ಒಳಗಾದ ನಿಮ್ಮನ್ನು ನಾನು ಪೂರ್ಣವಾಗಿ ತ್ಯಜಿಸುವೆನು. ಕಾಲವು ಪ್ರಾಪ್ತವಾದಾಗ ಜೀವನವನ್ನೂ ತ್ಯಜಿಸಬೇಕಷ್ಟೆ? (ಎಂದು ಹೇಳು).

ಮಾದ್ರೀಪುತ್ರೌ ಚ ವಕ್ತವ್ಯೌ ಕ್ಷತ್ರಧರ್ಮರತೌ ಸದಾ ॥೮೫॥

ವಿಕ್ರಮೇಣಾರ್ಜಿತಾನ್ ಲೋಕಾನ್ ವೃಣೀತಂ ಜೀವಿತಾದಪಿ ॥೮೬॥

ಸದಾ ಕ್ಷತ್ರಧರ್ಮನಿರತರಾದ, ಮಾದ್ರೀಪುತ್ರರಾದ ನಕುಲ-ಸಹದೇವರನ್ನು ಕುರಿತು ಹೀಗೆ ಹೇಳಬೇಕು. ಬದುಕಿರುವುದಕ್ಕಿಂತಲೂ ವಿಕ್ರಮದಿಂದ ಸಂಪಾದಿಸಿದ ಪರಲೋಕವನ್ನು ಬಯಸುವವರಾಗಿ.

ವಿಕ್ರಮಾಧಿಗತಾ ಹ್ಯರ್ಥಾಃ ಕ್ಷತ್ರಧರ್ಮೇಣ ಜೀವತಃ ।
ಮನೋ ಮನುಷ್ಯಸ್ಯ ಸದಾ ಪ್ರೀಣಂತಿ ಪುರುಷೋತ್ತಮ ॥೮೭॥

ಎಲೈ ಪುರುಷೋತ್ತಮನೇ, ಕ್ಷತ್ರಿಯಧರ್ಮದಿಂದ ಜೀವಿಸುವ ಮನುಷ್ಯನಿಗೆ ಪರಾಕ್ರಮದಿಂದ ಸಂಪಾದಿಸಿದ ಪದಾರ್ಥಗಳು ಯಾವಾಗಲೂ ಮನಸ್ಸಿಗೆ ಸಂತೋಷವನ್ನು ಕೊಡುತ್ತವೆ.

ಗತ್ವಾ ಬ್ರೂಹಿ ಮಹಾಬಾಹೋ ಸರ್ವಶಸ್ತ್ರಭೃತಾಂ ವರಮ್ ।
ಅರ್ಜುನಂ ಪಾಂಡವಂ ವೀರಂ ದ್ರೌಪದ್ಯಾಃ ಪದವೀಂ ಚರ ॥೮೮॥

ಎಲೈ ಮಹಾಬಾಹುವೇ, ನೀನು ಹೋಗಿ ಸರ್ವಶಸ್ತ್ರಗಳಲ್ಲಿ ಶ್ರೇಷ್ಠನಾದ, ವೀರನಾದ ಪಾಂಡುಪುತ್ರನಾದ ಅರ್ಜುನನಿಗೆ ದ್ರೌಪದಿಯ ಮಾರ್ಗದಲ್ಲಿ ನಡೆ ಎಂದು ಹೇಳು.

ವಿದಿತೌ ಹಿ ತವಾತ್ಯಂತಂ ಕ್ರುದ್ಧಾವಿವ ಯಥಾಽಂತಕೌ ।
ಭೀಮಾರ್ಜುನೌ ನಯೇತಾಂ ಹಿ ದೇವಾನಪಿ ಪರಾಭವಮ್ ॥೮೯॥

ತಯೋಶ್ಚೈತದವಜ್ಞಾತಂ ಯತ್ ಸಾ ಕೃಷ್ಣಾ ಸಭಾಂ ಗತಾ ॥೯೦॥

ಭೀಮಾರ್ಜುನರು ಕೋಪಗೊಂಡ ಯಮನಂತೆ ದೇವತೆಗಳನ್ನೂ ಸಹ ಸೋಲಿಸಲು ಶಕ್ತರಾದವರು ಎಂದು ನೀನು ಚೆನ್ನಾಗಿ ತಿಳಿದಿದ್ದೀಯೆ. ದ್ರೌಪದಿಯು ಸಭೆಯಲ್ಲಿ ಎಳೆತರಲ್ಪಟ್ಟದ್ದು ಅವರಿಬ್ಬರ ಔದಾಸೀನ್ಯದಿಂದ.

ದುಃಶಾಸನಶ್ಚ ಕರ್ಣಶ್ಚ ಪರುಷಾಣ್ಯಭ್ಯಭಾಷತಾಮ್ ।
ದುರ್ಯೋಧನೋ ಭೀಮಸೇನಮಭ್ಯಗರ್ಜತ್ ಸಭಾಂ ಗತಮ್ ॥೯೧॥

ಪಶ್ಯತಾಂ ಕುರುಮುಖ್ಯಾನಾಂ ತಸ್ಯ ದ್ರಕ್ಷ್ಯತಿ ಯತ್ ಫಲಮ್ ॥೯೨॥

ದುಶ್ಶಾಸನ ಮತ್ತು ಕರ್ಣರು ಕ್ರೂರವಾದ ಮಾತುಗಳನ್ನು ಆಡಿದರು. ದುರ್ಯೋಧನನು ಸಭೆಯಲ್ಲಿದ್ದ ಭೀಮಸೇನನನ್ನು ಉದ್ದೇಶಿಸಿ ಗರ್ಜಿಸಿದನು. ಇವೆರಡೂ ಕೌರವಶ್ರೇಷ್ಠರು ನೋಡುತ್ತಿರುವಂತೆಯೇ ನಡೆಯಿತು. ಅದರ ಫಲವನ್ನು ದುರ್ಯೋಧನನು ಕಾಣುವನು.

ನ ಹಿ ವೈರಂ ಸಮಾಸಾದ್ಯ ಪ್ರಶಾಮ್ಯತಿ ವೃಕೋದರಃ ॥೯೩॥

ಸುಚಿರಾದಪಿ ಭೀಮಸ್ಯ ನ ಹಿ ವೈರಂ ಪ್ರಶಾಮ್ಯತಿ ।
ಯಾವದಂತಂ ನ ನಯತಿ ಶಾತ್ರವಾನ್ ಶತ್ರುಕರ್ಶನಃ ॥೯೪॥

ವೈರವನ್ನು ಹೊಂದಿದ ವೃಕೋದರನು ಎಂದೂ ಶಾಂತಿಯನ್ನು ಹೊಂದುವುದಿಲ್ಲ. ಎಷ್ಟೇ ಕಾಲವಾದರೂ ಶತ್ರುಕರ್ಶನನಾದ ಅವನು ಶತ್ರುಗಳನ್ನು ನಾಶ ಮಾಡುವವರೆಗೆ ಅವನ ವೈರವು ಶಾಂತವಾಗುವುದಿಲ್ಲ.

ನ ದುಃಖಂ ರಾಜ್ಯಹರಣಂ ನ ಚ ದ್ಯೂತೇ ಪರಾಜಯಃ ।
ಪ್ರವ್ರಾಜನಂ ಚ ಪುತ್ರಾಣಾಂ ನ ಮೇ ತದ್ ದುಃಖಕಾರಣಮ್ ॥೯೫॥

ಯತ್ತು ಸಾ ಬೃಹತೀ ಶ್ಯಾಮಾ ಏಕವಸ್ತ್ರಾ ಸಭಾಗತಾ ।
ಅಶೃಣೋತ್ ಪರುಷಾ ವಾಚಃ ಕಿಂ ನು ದುಃಖತರಂ ತತಃ ॥೯೬॥

ರಾಜ್ಯದ ಅಪಹರಣವು ದುಃಖವಲ್ಲ, ದ್ಯೂತದಲ್ಲಿ ಪರಾಜಯವು ದುಃಖವಲ್ಲ, ಮಕ್ಕಳು ಕಾಡಿಗೆ ಹೋದುದು ನನ್ನ ದುಃಖಕ್ಕೆ ಕಾರಣವಲ್ಲ. ಆದರೆ ಆ ದೊಡ್ಡ ನಡತೆಯುಳ್ಳವಳೂ, ಸುಂದರಿಯೂ ಆದ ದ್ರೌಪದಿಯು ಏಕವಸ್ತ್ರವನ್ನುಟ್ಟು ಸಭೆಗೆ ಬಂದು ಕ್ರೂರವಾದ ಮಾತುಗಳನ್ನು ಕೇಳಿದಳಷ್ಟೆ? ಅದಕ್ಕಿಂತ ದುಃಖತರವಾದುದು ಏನಿದೆ?

ಸ್ತ್ರೀಧರ್ಮಿಣೀ ವರಾರೋಹಾ ಕ್ಷತ್ರಧರ್ಮರತಾ ಸದಾ ।
ನಾಧ್ಯಗಚ್ಛತ್ ತದಾ ನಾಥಂ ಕೃಷ್ಣಾ ನಾಥವತೀ ಸತೀ ॥೯೭॥

ರಜಸ್ವಲೆಯೂ, ಸುಂದರಿಯೂ, ಯಾವಾಗಲೂ ಕ್ಷತ್ರಧರ್ಮದಲ್ಲಿ ರತಳಾದವಳೂ, ಆದ ಪಂಚಪತಿಗಳನ್ನು ಹೊಂದಿದ ದ್ರೌಪದಿಯು ಆ ಸಭೆಯಲ್ಲಿ ಯಾವ ನಾಥನನ್ನೂ ಹೊಂದಲಿಲ್ಲ.

ಯಸ್ಯಾ ಮಮ ಸಪುತ್ರಾಯಾಃ ತ್ವಂ ನಾಥೋ ಮಧುಸೂದನ ।
ರಾಮಶ್ಚ ಬಲಿನಾಂ ಶ್ರೇಷ್ಠಃ ಪ್ರದ್ಯುಮ್ನಶ್ಚ ಮಹಾರಥಃ ॥೯೮॥

ಸಾಽಹಮೇವಂವಿಧಂ ದುಃಖಂ ಸಹೇಯಂ ಪುರುಷೋತ್ತಮ ।
ಭೀಮೇ ಜೀವತಿ ದುರ್ಧರ್ಷೇ ವಿಜಯೇ ಚಾಪಲಾಯಿನಿ ॥೯೯॥

ಎಲೈ ಮಧುಸೂದನನೇ, ಮಕ್ಕಳಿಂದ ಸಹಿತಳಾದ ನನಗೆ ಯಾವ ನೀನು ನಾಥನಾಗಿದ್ದೀಯೋ, ಬಲಿಷ್ಠರಲ್ಲಿ ಶ್ರೇಷ್ಠನಾದ ಬಲರಾಮನೂ, ಮಹಾರಥನಾದ ಪ್ರದ್ಯುಮ್ನನೂ ನಾಥರಾಗಿದ್ದಾರೆಯೋ ಅಂತಹ ನಾನು ಎಲೈ ಪುರುಷೋತ್ತಮನೇ, ಭೀಮನು ಬದುಕಿರುವಾಗ ಎಂದೂ ಸೋಲದ ಅರ್ಜುನನು ಎಲ್ಲಿಯೂ ಪಲಾಯನ ಮಾಡದಿರುವಾಗ ಇಂತಹ ರೀತಿಯ ದುಃಖಗಳನ್ನು ಸಹಿಸುತ್ತಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಅಷ್ಟಾಶೀತಿತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ಏಕೋನಪಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಎಂಬತ್ತೆಂಟನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಎಂಬತ್ತೊಂಬತ್ತನೆಯ ಅಧ್ಯಾಯ

ಕೃಷ್ಣನಿಂದ ಕುಂತಿಯ ಸಮಾಶ್ವಾಸನೆ.

ವೈಶಂಪಾಯನಃ

ತತ ಆಶ್ವಾಸಯಾಮಾಸ ಪುತ್ರಾಧಿಭಿರಭಿಪ್ಲುತಾಮ್ ।
ಪಿತೃಷ್ವಸಾರಂ ಶೋಚಂತೀಂ ಪೃಥಾಂ ಪಾರ್ಥಸಖೋ ಹರಿಃ ॥೧॥

ವೈಶಂಪಾಯನ– ಅನಂತರ ಪಾರ್ಥಸಖನಾದ ಹರಿಯು ಮಕ್ಕಳ ವಿಷಯವಾದ ಮನೋರೋಗದಿಂದ ತುಂಬಿಹೋಗಿ ಶೋಕಪಡುತ್ತಿದ್ದ ತನ್ನ ಸೋದರತ್ತೆಯಾದ ಕುಂತಿಯನ್ನು ಸಮಾಧಾನಪಡಿಸಿದನು.

ಕಾ ನು ಸೀಮಂತಿನೀ ತ್ವಾದೃಗ್ ಲೋಕೇಷ್ವಸ್ತಿ ಪಿತೃಷ್ವಸಃ ।
ಶೂರಸ್ಯ ರಾಜ್ಞೋ ದುಹಿತಾ ಅಜಮೀಢಕುಲಂ ಗತಾ ॥೨॥

ಮಹಾ ಕುಲೀನಾ ಭವತೀ ಹ್ರದಾದ್ ಹ್ರದಮಿವಾಗತಾ ।
ಈಶ್ವರೀ ಸರ್ವಕಲ್ಯಾಣೀ ಭರ್ತ್ರಾ ಪರಮಪೂಜಿತಾ ॥೩॥

ವೀರಸೂರ್ವೀರಪತ್ನೀ ತ್ವಂ ಸರ್ವೈಃ ಸಮುದಿತಾ ಗುಣೈಃ ।
ಸುಖದುಃಖೇ ಮಹಾಪ್ರಾಜ್ಞೇ ತ್ವಾದೃಶೀ ಸೋಢುಮರ್ಹತಿ ॥೪॥

ಸೋದರತ್ತೆಯೇ, ಈ ಲೋಕದಲ್ಲಿ ಯಾವ ಹೆಂಗಸು ನಿನ್ನಂತೆ ಇದ್ದಾಳೆ? ಶೂರ ರಾಜನ ಮಗಳಾಗಿ ಜನಿಸಿ, ಅಜಮೀಢಕುಲವನ್ನು ಸೇರಿದೆ. ಮಹಾಕುಲದಲ್ಲಿ ಜನಿಸಿದ ನೀನು ಒಂದು ಸರೋವರದಿಂದ ಇನ್ನೊಂದು ಸರೋವರಕ್ಕೆ ಬಂದಂತಾಯಿತು. ಎಲ್ಲ ಮಂಗಳಗಳಿಗೂ ನೀನು ಪ್ರಭುವಾಗಿದ್ದೆ. ಪತಿಯಿಂದ ಅತ್ಯಂತ ಪೂಜಿತಳಾಗಿದ್ದೆ. ವೀರರಾದ ಮಕ್ಕಳನ್ನು ಪಡೆದೆ. ವೀರನ ಪತ್ನಿಯಾದೆ. ಎಲ್ಲ ಗುಣಗಳಿಂದಲೂ ಕೂಡಿದವಳಾಗಿದ್ದೀಯೆ. ಮಹಾಪ್ರಾಜ್ಞೆಯೇ, ನಿನ್ನಂತಹವಳು ಸುಖ-ದುಃಖಗಳನ್ನು ಸಹಿಸಬೇಕು.

ನಿದ್ರಾತಂದ್ರೇ ಕ್ರೋಧಹರ್ಷೌ ಕ್ಷುತ್ಪಿಪಾಸೇ ಹಿಮಾತಪೌ ।
ಏತಾನಿ ಪಾರ್ಥಾ ನಿರ್ಜಿತ್ಯ ನಿತ್ಯಂ ವೀರಾಃ ಸುಖೇ ರತಾಃ ॥೫॥

ನಿನ್ನ ಪುತ್ರರು ನಿದ್ರಾಲಸ್ಯಗಳನ್ನೂ, ಕ್ರೋಧ-ಹರ್ಷಗಳನ್ನೂ, ಹಸಿವು-ನೀರಡಿಕೆಗಳನ್ನೂ, ಚಳಿ-ಬಿಸಿಲುಗಳನ್ನೂ ಜಯಿಸಿ ವೀರರಾದ ಅವರು ಸುಖವಾಗಿದ್ದಾರೆ.

ತ್ಯಕ್ತಗ್ರಾಮ್ಯಸುಖಾಃ ಪಾರ್ಥಾ ನಿತ್ಯಂ ವೀರಸುಖಪ್ರಿಯಾಃ ।
ನ ತೇ ಸ್ವಲ್ಪೇನ ತುಷ್ಯೇಯುಃ ಮಹೋತ್ಸಾಹಾ ಮಹಾಬಲಾಃ ॥೬॥

ಗ್ರಾಮದಲ್ಲಿ ದೊರಕುವ ಸುಖಗಳನ್ನು ತ್ಯಜಿಸಿ, ನಿತ್ಯವೂ ವೀರಸುಖಪ್ರಿಯರಾದ ಮಹೋತ್ಸಾಹಶಾಲಿಗಳಾದ, ಮಹಾಬಲವುಳ್ಳ ಪಾಂಡವರು ಅಲ್ಪದಿಂದ ತೃಪ್ತರಾಗುವವರಲ್ಲ.

ಅಂತಂ ಧೀರಾ ನಿಷೇವಂತೇ ಮಧ್ಯಂ ಗ್ರಾಮ್ಯಸುಖಪ್ರಿಯಾಃ ।
ಉತ್ತಮಾಶ್ಚ ಪರಿಕ್ಲೇಶಾನ್ ಭೋಗಾಂಶ್ಚೈವಾತಿಮಾನುಷಾನ್ ॥೭॥

ಧರ್ಮ-ಅರ್ಥ-ಕಾಮ-ಮೋಕ್ಷಗಳಲ್ಲಿ ಗ್ರಾಮ್ಯಸುಖಪ್ರಿಯರಾದವರು ಮಧ್ಯದಲ್ಲಿರುವ ಅರ್ಥ-ಕಾಮಗಳನ್ನು ಬಯಸುತ್ತಾರೆ. ಧೀರರಾದ ಉತ್ತಮ ಪುರುಷರು ಧರ್ಮ-ಮೋಕ್ಷಗಳಲ್ಲಿ ರತರಾಗಿ ಈ ಲೋಕದಲ್ಲಿ ಪರಿಕ್ಲೇಶಗಳನ್ನೂ, ಪರಲೋಕದಲ್ಲಿ ಮನುಷ್ಯರಿಗೆ ಮೀರಿದ ಉತ್ತಮಭೋಗಗಳನ್ನೂ ಅನುಭವಿಸುತ್ತಾರೆ.

ಅಂತೇಷು ರೇಮಿರೇ ಧೀರಾ ನ ತೇ ಮಧ್ಯೇಷು ರೇಮಿರೇ ।
ಅಂತಪ್ರಾಪ್ತಿಂ ಸುಖಂ ಪ್ರಾಹುರ್ದುಃಖಮಂತರಮಂತಯೋಃ ॥೮॥

ಧೀರರಾದ ಅವರು ಕೊನೆಯಲ್ಲಿರುವ ಧರ್ಮ-ಮೋಕ್ಷಗಳಲ್ಲಿ ಆಸಕ್ತರಾಗಿರುತ್ತಾರೆ. ಅವರು ಮಧ್ಯದಲ್ಲಿರುವ ಅರ್ಥ-ಕಾಮಗಳಲ್ಲಿ ಸಂತೋಷಪಡುವುದಿಲ್ಲ. ಜ್ಞಾನಿಗಳು ಕೊನೆಯಲ್ಲಿರುವ ಧರ್ಮ-ಮೋಕ್ಷದ ಪ್ರಾಪ್ತಿಯು ಸುಖವೆಂದೂ, ಮಧ್ಯದಲ್ಲಿರುವ ಅರ್ಥ-ಕಾಮಗಳ ಪ್ರಾಪ್ತಿಯು ದುಃಖವೆಂದೂ ಹೇಳುತ್ತಾರೆ.

ಅಭಿವಾದಯಂತಿ ಭವತೀಂ ಪಾಂಡವಾಃ ಸಹ ಕೃಷ್ಣಯಾ ।
ಆತ್ಮಾನಂ ತೇ ಕುಶಲಿನಂ ನಿವೇದ್ಯಾಹುರನಾಮಯಮ್ ॥೯॥

ಪಾಂಡವರು ಮತ್ತು ದ್ರೌಪದಿಯು ನಿನಗೆ ನಮಸ್ಕಾರವನ್ನು ತಿಳಿಸುತ್ತಾರೆ. ತಾವು ಸುಖವಾಗಿದ್ದೇವೆಂದು ತಿಳಿಸಿ ತಮ್ಮ ಕ್ಷೇಮವನ್ನು ನಿವೇದಿಸುತ್ತಾರೆ.

ಅರೋಗಾನ್ ಸರ್ವಸಿದ್ಧಾರ್ಥಾನ್ ಕ್ಷಿಪ್ರಂ ದ್ರಕ್ಷ್ಯಸಿ ಪಾಂಡವಾನ್ ।
ಈಶ್ವರಾನ್ ಸರ್ವಲೋಕಸ್ಯ ಹತಾಮಿತ್ರಾನ್ ಶ್ರಿಯಾ ವೃತಾನ್ ॥೧೦॥

ನೀನು ಶೀಘ್ರದಲ್ಲಿಯೇ ಆರೋಗ್ಯವಂತರಾದ, ಸರ್ವಾರ್ಥಗಳನ್ನೂ ಸಂಪಾದಿಸಿದ, ಶತ್ರುಗಳನ್ನು ಜಯಿಸಿದ, ಸಂಪತ್ತಿನಿಂದ ಕೂಡಿದ, ಸರ್ವಲೋಕಕ್ಕೂ ಪ್ರಭುಗಳಾದ ಪಾಂಡವರನ್ನು ನೋಡುವಿ.

ವೈಶಂಪಾಯನಃ

ಏವಮಾಶ್ವಾಸಿತಾ ಕುಂತೀ ಪ್ರತ್ಯುವಾಚ ಜನಾರ್ದನಮ್ ।
ಪುತ್ರಾಧಿಭಿರಭಿಧ್ವಸ್ತಾ ನಿಗೃಹ್ಯಾಬುದ್ಧಿಜಂ ತಮಃ ॥೧೧॥

ವೈಶಂಪಾಯನ– ಹೀಗೆ ಕೃಷ್ಣನಿಂದ ಸಮಾಧಾನಪಡಿಸಲ್ಪಟ್ಟವಳಾಗಿ ಮಕ್ಕಳ ಚಿಂತೆಯಿಂದ ಕಂಗೆಟ್ಟಿದ್ದ ಕುಂತಿಯು ಅವಿವೇಕದಿಂದ ಉಂಟಾದ ತನ್ನ ಅಜ್ಞಾನವನ್ನು ನಿಗ್ರಹಿಸಿ ಅವನನ್ನು ಕುರಿತು ಮಾತನಾಡಿದಳು.

ಯದ್ಯತ್ ತೇಷಾಂ ಮಹಾಬಾಹೋ ಪಥ್ಯಂ ಸ್ಯಾನ್ಮಧುಸೂದನ ।
ಯಥಾ ಯಥಾ ತ್ವಂ ಮನ್ಯೇಥಾಃ ಕುರ್ಯಾಃ ಕೃಷ್ಣ ತಥಾ ತಥಾ ॥೧೨॥

ಅವಿಲೋಪೇನ ಧರ್ಮಸ್ಯ ಅನಿಕೃತ್ಯಾ ಪರಂತಪ ॥೧೩॥

ಎಲೈ ಮಹಾಬಾಹುವೇ, ಮಧುಸೂದನನೇ, ಕೃಷ್ಣನೇ, ಯಾವ ಯಾವುದು ಅವರಿಗೆ ಹಿತವಾಗುವುದೆಂದು ನೀನು ಭಾವಿಸುವಿಯೋ ಅದನ್ನು ಹಾಗೆಯೇ ಮಾಡುವವನಾಗು. ಎಲೈ ಪರಂತಪನೇ, ಧರ್ಮಕ್ಕೆ ಲೋಪವಿಲ್ಲದಂತೆ ಕಪಟವನ್ನು ಆಶ್ರಯಿಸದೆ ಹಾಗೆಯೇ ಮಾಡುವವನಾಗು.

ಪ್ರಭಾವಜ್ಞಾಽಸ್ಮಿ ತೇ ಕೃಷ್ಣ ಸತ್ಯಸ್ಯಾಭಿಜನಸ್ಯ ಚ ।
ವ್ಯವಸಾಯಸ್ಯ ಮಿತ್ರೇಷು ಬುದ್ಧಿವಿಕ್ರಮಯೋಸ್ತಥಾ ॥೧೪॥

ಎಲೈ ಕೃಷ್ಣನೇ, ನಿನ್ನ ಪರಿಶುದ್ಧವಾದ ಕುಲವನ್ನೂ, ನಿನ್ನ ಪ್ರಭಾವವನ್ನೂ, ನಿನ್ನ ನಿರ್ಧಾರವನ್ನೂ, ಮಿತ್ರರಿಗೆ ಉಪಕಾರಮಾಡುವ ನಿನ್ನ ಬುದ್ಧಿ ಮತ್ತು ಪರಾಕ್ರಮಗಳನ್ನೂ ನಾನು ಚೆನ್ನಾಗಿ ತಿಳಿದಿದ್ದೇನೆ.

ತ್ವಮೇವ ನಃ ಕುಲೇ ಧರ್ಮಃ ತ್ವಂ ಸತ್ಯಂ ತ್ವಂ ತಪೋ ಮಹತ್ ।
ತ್ವಂ ಧಾತಾ ತ್ವಂ ಮಹದ್‌ಬ್ರಹ್ಮ ತ್ವಯಿ ಸರ್ವಂ ಪ್ರತಿಷ್ಠಿತಮ್ ॥೧೫॥

ಯಥೈವಾತ್ಥ ತಥೈವೈತತ್ ತ್ವಯಿ ಸತ್ಯಂ ಭವಿಷ್ಯತಿ ॥೧೬॥

ಕೃಷ್ಣನೇ, ನೀನೇ ನಮ್ಮ ಕುಲದಲ್ಲಿ ಧರ್ಮ, ನೀನೇ ಸತ್ಯ, ನೀನೇ ಮಹತ್ತಾದ ತಪಸ್ಸು, ನೀನೇ ಎಲ್ಲವನ್ನೂ ಕೊಡುವವನು, ನೀನೇ ಪರಬ್ರಹ್ಮ, ಎಲ್ಲವೂ ನಿನ್ನನ್ನು ಆಶ್ರಯಿಸಿದೆ, ನೀನು ಹೇಳಿದಂತೆಯೇ ಎಲ್ಲವೂ ನಡೆಯುತ್ತದೆ, ಸತ್ಯವು ನಿನ್ನಲ್ಲಿ ಪ್ರತಿಷ್ಠಿತವಾಗಿದೆ.

ಕುರೂಣಾಂ ಪಾಂಡವಾನಾಂ ಚ ಲೋಕಾನಾಂ ಚಾಪರಾಜಿತ ।
ಸರ್ವಸ್ಯೈತಸ್ಯ ವಾರ್ಷ್ಣೇಯ ಗತಿಸ್ತ್ವಮಸಿ ಮಾಧವ ॥೧೭॥

ಪ್ರಭಾವೋ ಬುದ್ಧಿವೀರ್ಯಂ ಚ ತಾದೃಶಂ ತವ ಕೇಶವ ॥೧೮॥

ಎಲೈ ಅಪರಾಜಿತನೇ, ಮಾಧವನೇ, ಕೌರವರಿಗೂ ಪಾಂಡವರಿಗೂ, ಈ ಎಲ್ಲಾ ಲೋಕಗಳಿಗೂ ನೀನೇ ಗತಿಯಾಗಿದ್ದೀಯೆ. ಎಲೈ ವಾರ್ಷ್ಣೇಯನೇ, ಎಲೈ ಕೇಶವನೇ, ನಿನ್ನ ಸಾಮರ್ಥ್ಯವು, ಬುದ್ಧಿಯು ಮತ್ತು ಪರಾಕ್ರಮವು ಅಂತಹದಾಗಿದೆ.

ವೈಶಂಪಾಯನಃ

ತಾಮಾಮಂತ್ರ್ಯ ಚ ಗೋವಿಂದಃ ಕೃತ್ವಾ ಚಾಪಿ ಪ್ರದಕ್ಷಿಣಮ್ ।
ಪ್ರಾತಿಷ್ಠತ ಮಹಾಬಾಹುಃ ದುರ್ಯೋಧನಗೃಹಾನ್ ಪ್ರತಿ ॥೧೯॥

ವೈಶಂಪಾಯನ– ಮಹಾಬಾಹುವಾದ ಗೋವಿಂದನು ಅವಳ ಅನುಮತಿಯನ್ನು ಪಡೆದು, ಅವಳಿಗೆ ಪ್ರದಕ್ಷಿಣೆಯನ್ನು ಮಾಡಿ ದುರ್ಯೋಧನನ ಮನೆಯನ್ನು ಕುರಿತು ಹೊರಟನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕೋನನವತಿತಮೋऽಧ್ಯಾಯಃ ॥
॥ ಭಗವದ್ಯಾನಪರ್ವಣಿ ವಿಂಶೋऽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ಎಂಬತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ಸ ವಂದ್ಯಮಾನೋಽಖಿಲರಾಷ್ಟ್ರವಾಸಿಭಿಃ
ಪ್ರಸೂನವರ್ಷೈರಭಿವರ್ಷಿತಃ ಸುರೈಃ ।
ಸಂಸ್ತೂಯಮಾನಃ ಪ್ರಣತೋಽಬ್ಜಜಾದಿಭಿ-
ರ್ಗಜಾಹ್ವಯಂ ಪ್ರಾಪ ಪರೋಽಪ್ರಮೇಯಃ ॥೬೩॥

ಅಪ್ರಮೇಯನಾದ ಸರ್ವೋತ್ತಮನಾದ ಶ್ರೀಕೃಷ್ಣ ಸಕಲ ದೇಶವಾಸಿಗಳು ವಂದಿಸುತ್ತಿದ್ದಂತೆ, ದೇವತೆಗಳು ಹೂಮಳೆಗರೆಯುತ್ತಾ ಚೆನ್ನಾಗಿ ಸ್ತೋತ್ರ ಮಾಡುತ್ತಿದ್ದಂತೆ, ಬ್ರಹ್ಮಾದಿಗಳು ನಮಿಸುತ್ತಿದ್ದಂತೆ ಹಸ್ತಿನಾವತಿ ನಗರವನ್ನು ಸೇರಿದ.

ಸ ಭೀಷ್ಮಮುಖ್ಯೈಃ ಸರಸಾಽಭಿಯಾತಃ
ಸಹೈವ ತೈಃ ಪ್ರಯಯೌ ರಾಜಮಾರ್ಗೇ ।
ದಿದೃಕ್ಷವಸ್ತಂ ಜಗದೇಕಸುಂದರಂ
ಗುಣಾರ್ಣವಂ ಪ್ರಾಯಯುರತ್ರ ಸರ್ವೇ ॥೬೪॥

ಭೀಷ್ಮ ಮುಂತಾದವರು ಶ್ರೀಕೃಷ್ಣನನ್ನು ಪ್ರೀತಿಯಿಂದ ಇದಿರುಗೊಂಡರು. ಶ್ರೀಕೃಷ್ಣ ಅವರೊಂದಿಗೆ ರಾಜಮಾರ್ಗದಲ್ಲಿ ನಡೆದ. ಜಗದೇಕಸುಂದರನಾದ, ಸದ್ಗುಣ ಸಾಗರನಾದ ಆತನನ್ನು ಕಾಣಲು ಬಯಸಿ ಪ್ರಜೆಗಳೆಲ್ಲರೂ ಆ ರಾಜಮಾರ್ಗಕ್ಕೆ ಬಂದರು.

ಸಭಾಜಿತಸ್ತೈಃ ಪರಮಾದರೇಣ
ವಿವೇಶ ಗೇಹಂ ನೃಪತೇರನಂತಃ ।
ಸ ಭೀಷ್ಮಮುಖ್ಯಾನ್ ಪುರತೋ ನಿಧಾಯ
ವೈಚಿತ್ರವೀರ್ಯೇಣ ಸಮರ್ಚಿತೋಽಜಃ ॥೬೫॥

ರೌಕ್ಮೇ ನಿಷಣ್ಣಃ ಪರಮಾಸನೇ ಪ್ರಭು-
ರ್ಬಭೌ ಸ್ವಭಾಸಾ ಕಕುಭೋಽವಭಾಸಯನ್ ॥೬೬॥

ಎಲ್ಲರಿಂದಲೂ ಪರಮಾದರದಿಂದ ಆದರಿಸಲ್ಪಡುತ್ತ ಶ್ರೀಕೃಷ್ಣ ಧೃತರಾಷ್ಟ್ರನ ಅರಮನೆಯನ್ನು ಪ್ರವೇಶಿಸಿದ. ಧೃತರಾಷ್ಟ್ರನು ಭೀಷ್ಮ ಮುಂತಾದವರನ್ನು ಮುಂದೆ

ಮಾಡಿಕೊಂಡು ಬಂದು ಕೃಷ್ಣನನ್ನು ಸತ್ಕರಿಸಿದ. ಪ್ರಭು ಶ್ರೀಕೃಷ್ಣ ತನ್ನ ಕಾಂತಿಯಿಂದ ದಿಕ್ಕುಗಳನ್ನು ಬೆಳಗುತ್ತ ಬಂಗಾರದ ಉತ್ತಮ ಆಸನದಲ್ಲಿ ಕುಳಿತು ಶೋಭಿಸಿದ.

ಯಥೋಚಿತಂ ತೇಷು ವಿಧಾಯ ಕೇಶವೋ
ದೌರ್ಯೋಧನಂ ಪ್ರಾಪ್ಯ ಗೃಹಂ ಚ ಪೂಜಿತಃ ।
ಪೂಜಾಂ ತದೀಯಾಂ ಗುಣವದ್ ದ್ವಿಡಿತ್ಯಸೌ
ಜಗ್ರಾಹ ನೋ ವಿದುರಂ ಚಾಜಗಾಮ ॥೬೭॥

ಶ್ರೀಕೃಷ್ಣ ಭೀಷ್ಮ ಮುಂತಾದವರಲ್ಲಿ ಯಥಾಯೋಗ್ಯವಾಗಿ ಗೌರವ ಸಲ್ಲಿಸಿ ದುರ್ಯೋಧನನ ಮನೆಗೆ ಹೋಗಿ, ಅಲ್ಲಿ ಅವನು ಸತ್ಕರಿಸಿದರೂ ಆತ ಗುಣವಂತರಾದ ಪಾಂಡವರ ದ್ವೇಷಿ ಎಂಬ ಕಾರಣದಿಂದ ಅವನ ಆ ಸತ್ಕಾರವನ್ನು ಸ್ವೀಕರಿಸಲಿಲ್ಲ. ಬೇಗನೆ ವಿದುರನ ಮನೆಗೆ ನಡೆದ.

ಸ ಭೀಷ್ಮಮುಖ್ಯೈರಭಿಯಾಚಿತೋಽಪಿ
ಜಗಾಮ ನೈಷಾಂ ಗೃಹಮಾದಿದೇವಃ ।
ಉಪೇಕ್ಷಿತಾ ದ್ರೌಪದೀತ್ಯಪ್ರಮೇಯೋ
ಜಗಾಮ ಗೇಹಂ ವಿದುರಸ್ಯ ಶೀಘ್ರಮ್ ॥೬೮॥

ಆದಿ ದೇವನಾದ ಶ್ರೀಕೃಷ್ಣ ಭೀಷ್ಮ ಮುಂತಾದವರಿಂದ ಪ್ರಾರ್ಥಿತನಾದರೂ ದ್ರೌಪದಿಯನ್ನು ಅವರು ಉಪೇಕ್ಷಿಸಿದರೆಂದು ಅವರ ಮನೆಗೆ ಹೋಗಲಿಲ್ಲ. ವಿದುರನ ಮನೆಗೇ ಬೇಗನೆ ನಡೆದ.

ಸ ತೇನ ಭಕ್ತ್ಯಾಽಭಿಗತಃ ಪ್ರಸನ್ನಃ
ಪ್ರವಿಶ್ಯ ಚಾಂತರ್ಗೃಹಮೀಶ್ವರೋಽಜಃ ।
ಭಕ್ತ್ಯಾಽಭಿಪೂರ್ಣೇನ ಸಸಂಭ್ರಮೇಣ
ಸಂಪೂಜಿತಃ ಸರ್ವಸಮರ್ಪಣೇನ ॥೬೯॥

ಆದಿದೇವನಾದ ಶ್ರೀಕೃಷ್ಣ ಭೀಷ್ಮ ಮುಂತಾದವರಿಂದ ಪ್ರಾರ್ಥಿತನಾದರೂ ದ್ರೌಪದಿಯನ್ನು ಅವರು ಉಪೇಕ್ಷಿಸಿದರೆಂದು ಅವರ ಮನೆಗೆ ಹೋಗಲಿಲ್ಲ. ವಿದುರನ ಮನೆಗೇ ಬೇಗನೆ ನಡೆದ.

★ ★ ★ ★ ★

ತೊಂಬತ್ತನೆಯ ಅಧ್ಯಾಯ

ದುರ್ಯೋಧನನ ಮನೆಯ ಭೋಜನವನ್ನು ನಿರಾಕರಿಸಿದ
ಕೃಷ್ಣನಿಗೆ ವಿದುರನ ಮನೆಯಲ್ಲಿ ಸತ್ಕಾರ.

ವೈಶಂಪಾಯನಃ

ಪೃಥಾಮಾಮಂತ್ರ್ಯ ಗೋವಿಂದಃ ಕೃತ್ವಾ ಚಾಪಿ ಪ್ರದಕ್ಷಿಣಮ್ ।
ದುರ್ಯೋಧನಗೃಹಂ ಶೌರಿರಭ್ಯಗಚ್ಛದರಿಂದಮಃ ॥೧॥

ವೈಶಂಪಾಯನ– ಅರಿಂದಮನೂ, ಶೌರಿಯೂ ಆದ ಗೋವಿಂದನು ಕುಂತಿಯ ಅನುಮತಿಯನ್ನು ಪಡೆದು, ಅವಳಿಗೆ ಪ್ರದಕ್ಷಿಣೆಯನ್ನು ಮಾಡಿ ದುರ್ಯೋಧನನ ಮನೆಗೆ ಹೊರಟನು.

ಲಕ್ಷ್ಮ್ಯಾ ಪರಮಯಾ ಯುಕ್ತಂ ಪುರಂದರಗೃಹೋಪಮಮ್ ।
ವಿಚಿತ್ರೈರಾಸನೈರ್ಯುಕ್ತಂ ಪ್ರವಿವೇಶ ಜನಾರ್ದನಃ ॥೨॥

ಇಂದ್ರನ ಅರಮನೆಯಂತಿದ್ದ, ಮಹಾಸಂಪತ್ತಿನಿಂದ ಕೂಡಿದ, ವಿಚಿತ್ರವಾದ ಆಸನಗಳನ್ನು ಹೊಂದಿದ್ದ ಆ ಗೃಹವನ್ನು ಕೃಷ್ಣನು ಪ್ರವೇಶಿಸಿದನು.

ತಸ್ಯ ಕಕ್ಷ್ಯಾ ವ್ಯತಿಕ್ರಮ್ಯ ತಿಸ್ರೋ ದ್ವಾಃಸ್ಥೈರವಾರಿತಃ ।
ತತೋऽಭ್ರಘನಸಂಕಾಶಂ ಗಿರಿಕೂಟಮಿವೋಚ್ಛ್ರಿತಮ್ ॥೩॥

ಶ್ರಿಯಾ ಜ್ವಲಂತಂ ಪ್ರಾಸಾದಮಾರುರೋಹ ಮಹಾಯಶಾಃ ॥೪॥

ದ್ವಾರಪಾಲಕರಿಂದ ತಡೆಯಲ್ಪಡದೆ, ಆ ಮನೆಯ ಮೂರುಹಂತಗಳನ್ನು ದಾಟಿ, ಪರ್ವತಶಿಖರದಂತೆ ಎತ್ತರವಾಗಿದ್ದ, ಬಿಳಿಯ ಮೋಡಗಳಂತೆ ಶೋಭಿಸುವ, ಕಾಂತಿಯಿಂದ ಬೆಳಗುವ ಉಪ್ಪರಿಗೆಯನ್ನು ಕೀರ್ತಿವಂತನಾದ ಅವನು ಏರಿದನು.

ತತ್ರ ರಾಜಸಹಸ್ರೈಶ್ಚ ಕುರುಭಿಶ್ಚಾಪಿ ಸಂವೃತಮ್ ।
ಧಾರ್ತರಾಷ್ಟ್ರಂ ಮಹಾಬಾಹುಂ ದದರ್ಶಾಸೀನಮಾಸನೇ ॥೫॥

ಅಲ್ಲಿ ಸಹಸ್ರರಾಜರಿಂದಲೂ, ಕೌರವರಿಂದಲೂ ಸುತ್ತುವರಿಯಲ್ಪಟ್ಟ, ಮಹಾಬಾಹುವಾದ ದುರ್ಯೋಧನನು ಆಸನದಲ್ಲಿ ಕುಳಿತಿರುವುದನ್ನು ನೋಡಿದನು.

ಮಾಡಿಕೊಂಡು ಬಂದು ಕೃಷ್ಣನನ್ನು ಸತ್ಕರಿಸಿದ. ಪ್ರಭು ಶ್ರೀಕೃಷ್ಣ ತನ್ನ ಕಾಂತಿಯಿಂದ ದಿಕ್ಕುಗಳನ್ನು ಬೆಳಗುತ್ತ ಬಂಗಾರದ ಉತ್ತಮ ಆಸನದಲ್ಲಿ ಕುಳಿತು ಶೋಭಿಸಿದ.

ಯಥೋಚಿತಂ ತೇಷು ವಿಧಾಯ ಕೇಶವೋ
ದೌರ್ಯೋಧನಂ ಪ್ರಾಪ್ಯ ಗೃಹಂ ಚ ಪೂಜಿತಃ ।
ಪೂಜಾಂ ತದೀಯಾಂ ಗುಣವದ್ ದ್ವಿಡಿತ್ಯಸೌ
ಜಗ್ರಾಹ ನೋ ವಿದುರಂ ಚಾಜಗಾಮ ॥೬೭॥

ಶ್ರೀಕೃಷ್ಣ ಭೀಷ್ಮ ಮುಂತಾದವರಲ್ಲಿ ಯಥಾಯೋಗ್ಯವಾಗಿ ಗೌರವ ಸಲ್ಲಿಸಿ ದುರ್ಯೋಧನನ ಮನೆಗೆ ಹೋಗಿ, ಅಲ್ಲಿ ಅವನು ಸತ್ಕರಿಸಿದರೂ ಆತ ಗುಣವಂತರಾದ ಪಾಂಡವರ ದ್ವೇಷಿ ಎಂಬ ಕಾರಣದಿಂದ ಅವನ ಆ ಸತ್ಕಾರವನ್ನು ಸ್ವೀಕರಿಸಲಿಲ್ಲ. ಬೇಗನೆ ವಿದುರನ ಮನೆಗೆ ನಡೆದ.

ಸ ಭೀಷ್ಮಮುಖ್ಯೈರಭಿಯಾಚಿತೋಽಪಿ
ಜಗಾಮ ನೈಷಾಂ ಗೃಹಮಾದಿದೇವಃ ।
ಉಪೇಕ್ಷಿತಾ ದ್ರೌಪದೀತ್ಯಪ್ರಮೇಯೋ
ಜಗಾಮ ಗೇಹಂ ವಿದುರಸ್ಯ ಶೀಘ್ರಮ್ ॥೬೮॥

ಆದಿ ದೇವನಾದ ಶ್ರೀಕೃಷ್ಣ ಭೀಷ್ಮ ಮುಂತಾದವರಿಂದ ಪ್ರಾರ್ಥಿತನಾದರೂ ದ್ರೌಪದಿಯನ್ನು ಅವರು ಉಪೇಕ್ಷಿಸಿದರೆಂದು ಅವರ ಮನೆಗೆ ಹೋಗಲಿಲ್ಲ. ವಿದುರನ ಮನೆಗೇ ಬೇಗನೆ ನಡೆದ.

ಸ ತೇನ ಭಕ್ತ್ಯಾಽಭಿಗತಃ ಪ್ರಸನ್ನಃ
ಪ್ರವಿಶ್ಯ ಚಾಂತರ್ಗೃಹಮೀಶ್ವರೋಽಜಃ ।
ಭಕ್ತ್ಯಾಽಭಿಪೂರ್ಣೇನ ಸಸಂಭ್ರಮೇಣ
ಸಂಪೂಜಿತಃ ಸರ್ವಸಮರ್ಪಣೇನ ॥೬೯॥

ಆದಿದೇವನಾದ ಶ್ರೀಕೃಷ್ಣ ಭೀಷ್ಮ ಮುಂತಾದವರಿಂದ ಪ್ರಾರ್ಥಿತನಾದರೂ ದ್ರೌಪದಿಯನ್ನು ಅವರು ಉಪೇಕ್ಷಿಸಿದರೆಂದು ಅವರ ಮನೆಗೆ ಹೋಗಲಿಲ್ಲ. ವಿದುರನ ಮನೆಗೇ ಬೇಗನೆ ನಡೆದ.

★ ★ ★ ★ ★

ತೊಂಬತ್ತನೆಯ ಅಧ್ಯಾಯ

ದುರ್ಯೋಧನನ ಮನೆಯ ಭೋಜನವನ್ನು ನಿರಾಕರಿಸಿದ
ಕೃಷ್ಣನಿಗೆ ವಿದುರನ ಮನೆಯಲ್ಲಿ ಸತ್ಕಾರ.

ವೈಶಂಪಾಯನಃ

ಪೃಥಾಮಾಮಂತ್ರ್ಯ ಗೋವಿಂದಃ ಕೃತ್ವಾ ಚಾಪಿ ಪ್ರದಕ್ಷಿಣಮ್ ।
ದುರ್ಯೋಧನಗೃಹಂ ಶೌರಿರಭ್ಯಗಚ್ಛದರಿಂದಮಃ ॥೧॥

ವೈಶಂಪಾಯನ– ಅರಿಂದಮನೂ, ಶೌರಿಯೂ ಆದ ಗೋವಿಂದನು ಕುಂತಿಯ ಅನುಮತಿಯನ್ನು ಪಡೆದು, ಅವಳಿಗೆ ಪ್ರದಕ್ಷಿಣೆಯನ್ನು ಮಾಡಿ ದುರ್ಯೋಧನನ ಮನೆಗೆ ಹೊರಟನು.

ಲಕ್ಷ್ಮ್ಯಾ ಪರಮಯಾ ಯುಕ್ತಂ ಪುರಂದರಗೃಹೋಪಮಮ್ ।
ವಿಚಿತ್ರೈರಾಸನೈರ್ಯುಕ್ತಂ ಪ್ರವಿವೇಶ ಜನಾರ್ದನಃ ॥೨॥

ಇಂದ್ರನ ಅರಮನೆಯಂತಿದ್ದ, ಮಹಾಸಂಪತ್ತಿನಿಂದ ಕೂಡಿದ, ವಿಚಿತ್ರವಾದ ಆಸನಗಳನ್ನು ಹೊಂದಿದ್ದ ಆ ಗೃಹವನ್ನು ಕೃಷ್ಣನು ಪ್ರವೇಶಿಸಿದನು.

ತಸ್ಯ ಕಕ್ಷ್ಯಾ ವ್ಯತಿಕ್ರಮ್ಯ ತಿಸ್ರೋ ದ್ವಾಃಸ್ಥೈರವಾರಿತಃ ।
ತತೋಽಭ್ರಘನಸಂಕಾಶಂ ಗಿರಿಕೂಟಮಿವೋಚ್ಛ್ರಿತಮ್ ॥೩॥

ಶ್ರಿಯಾ ಜ್ವಲಂತಂ ಪ್ರಾಸಾದಮಾರುರೋಹ ಮಹಾಯಶಾಃ ॥೪॥

ದ್ವಾರಪಾಲಕರಿಂದ ತಡೆಯಲ್ಪಡದೆ, ಆ ಮನೆಯ ಮೂರುಹಂತಗಳನ್ನು ದಾಟಿ, ಪರ್ವತಶಿಖರದಂತೆ ಎತ್ತರವಾಗಿದ್ದ, ಬಿಳಿಯ ಮೋಡಗಳಂತೆ ಶೋಭಿಸುವ, ಕಾಂತಿಯಿಂದ ಬೆಳಗುವ ಉಪ್ಪರಿಗೆಯನ್ನು ಕೀರ್ತಿವಂತನಾದ ಅವನು ಏರಿದನು.

ತತ್ರ ರಾಜಸಹಸ್ರೈಶ್ಚ ಕುರುಭಿಶ್ಚಾಪಿ ಸಂವೃತಮ್ ।
ಧಾರ್ತರಾಷ್ಟ್ರಂ ಮಹಾಬಾಹುಂ ದದರ್ಶಾಸೀನಮಾಸನೇ ॥೫॥

ಅಲ್ಲಿ ಸಹಸ್ರರಾಜರಿಂದಲೂ, ಕೌರವರಿಂದಲೂ ಸುತ್ತುವರಿಯಲ್ಪಟ್ಟ, ಮಹಾಬಾಹುವಾದ ದುರ್ಯೋಧನನು ಆಸನದಲ್ಲಿ ಕುಳಿತಿರುವುದನ್ನು ನೋಡಿದನು.

ದುಃಶಾಸನಂ ಚ ಕರ್ಣಂ ಚ ಶಕುನಿಂ ಚಾಪಿ ಸೌಬಲಮ್ ।
ದುರ್ಯೋಧನಸಮೀಪೇ ತಾನ್ ಆಸನಸ್ಥಾನ್ ದದರ್ಶ ಸಃ ॥೬॥

ದುಶ್ಶಾಸನ, ಕರ್ಣ ಮತ್ತು ಶಕುನಿ ಇವರು ದುರ್ಯೋಧನನ ಸಮೀಪದಲ್ಲಿ ಆಸನದಲ್ಲಿ ಕುಳಿತಿರುವುದನ್ನು ಅವನು ನೋಡಿದನು.

ಅಭ್ಯಾಗಚ್ಛತಿ ದಾಶಾರ್ಹೇ ಧಾರ್ತರಾಷ್ಟ್ರೋ ಮಹಾಮನಾಃ ।
ಉದತಿಷ್ಠತ್ ಸಹಾಮಾತ್ಯಃ ಪೂಜಯನ್ ಮಧುಸೂದನಮ್ ॥೭॥

ಕೃಷ್ಣನು ಬರುತ್ತಿರಲು ಮಹಾಮನನಾದ ದುರ್ಯೋಧನನು ಕೃಷ್ಣನನ್ನು ಗೌರವಿಸುತ್ತಾ ಅಮಾತ್ಯರ ಜೊತೆಯಲ್ಲಿ ಎದ್ದುನಿಂತನು.

ಸಮೇತ್ಯ ಧಾರ್ತರಾಷ್ಟ್ರೇಣ ಸಾಮಾತ್ಯೇನ ಪರಂತಪಃ ।
ರಾಜಭಿಸ್ತತ್ರ ವಾರ್ಷ್ಣೇಯಃ ಸಮಾಗಚ್ಛದ್ ಯಥಾವಯಃ ॥೮॥

ಪರಂತಪನಾದ ಕೃಷ್ಣನು ದುರ್ಯೋಧನನ ಜೊತೆಯಲ್ಲಿ ಸಮಾಗಮವನ್ನು ಹೊಂದಿ ಅನಂತರ ವಯಸ್ಸಿಗೆ ಅನುಗುಣವಾಗಿ ಅಲ್ಲಿ ನೆರೆದ ಎಲ್ಲ ರಾಜರಿಂದಲೂ ಸಮಾಗಮವನ್ನು ಹೊಂದಿದನು.

ತತ್ರ ಜಾಂಬೂನದಮಯಂ ಪರ್ಯಂಕಂ ಸುಪರಿಷ್ಕೃತಮ್ ।
ವಿವಿಧಾಸ್ತರಣಾಸ್ತೀರ್ಣಮಾವಿವೇಶ ಗದಾಗ್ರಜಃ ॥೯॥

ಅಲ್ಲಿ ಸುವರ್ಣಮಯವಾದ, ಚೆನ್ನಾಗಿ ಅಲಂಕರಿಸಿದ, ಅನೇಕ ಹಾಸುಗಳಿಂದ ಹಾಸಲ್ಪಟ್ಟ ಮಂಚದಲ್ಲಿ ಗದಾಗ್ರಜನಾದ ಕೃಷ್ಣನು ಕುಳಿತನು.

ತಸ್ಮೈ ಗಾಂ ಮಧುಪರ್ಕಂ ಚ ಉದಕಂ ಚ ಜನಾರ್ದನೇ ।
ನಿವೇದಯಾಮಾಸ ತದಾ ಗೃಹಾನ್ ರಾಜ್ಯಂ ಚ ಕೌರವಃ ॥೧೦॥

ಜನಾರ್ದನನಾದ ಕೃಷ್ಣನಿಗೆ ದುರ್ಯೋಧನನು ಗೋವನ್ನೂ, ಮಧುಪರ್ಕವನ್ನೂ ಮತ್ತು ಉದಕವನ್ನೂ ನೀಡಿ, ತನ್ನ ಮನೆಯನ್ನು ಮತ್ತು ರಾಜ್ಯವನ್ನೂ ನಿವೇದಿಸಿದನು.

ಆಸನಂ ಸರ್ವತೋಭದ್ರಂ ಸರ್ವರತ್ನವಿಭೂಷಿತಮ್ ।
ಕೃಷ್ಣಾರ್ಥಮೇವ ಸಂಸಿದ್ಧಂ ಧಾರ್ತರಾಷ್ಟ್ರಸ್ಯ ಶಾಸನಾತ್ ॥೧೧॥

ತತ್ರ ಗೋವಿಂದಮಾಸೀನಂ ಪ್ರಸನ್ನಾದಿತ್ಯವರ್ಚಸಮ್ ।
ಉಪಾಸಾಂಚಕ್ರಿರೇ ಸರ್ವೇ ಕುರವೋ ರಾಜಭಿಃ ಸಹ ॥೧೨॥

ದುರ್ಯೋಧನನ ಶಾಸನದಿಂದಲೇ ನಿರ್ಮಿತವಾದ, ಬಹಳ ಮನೋಹರವಾದ, ಸರ್ವರತ್ನಗಳಿಂದ ಭೂಷಿತವಾದ, ಕೃಷ್ಣನಿಗಾಗಿಯೇ ಸಿದ್ಧಪಡಿಸಿದ ಆಸನದಲ್ಲಿ ಪ್ರಸನ್ನನಾಗಿ ಆದಿತ್ಯನ ಕಾಂತಿಯನ್ನು ಹೊಂದಿದ್ದಂತಹ ಆಸೀನನಾದ ಕೃಷ್ಣನನ್ನು ಕೌರವರು ಮತ್ತು ಉಳಿದ ಎಲ್ಲಾ ರಾಜರು ಗೌರವಿಸಿದರು.

ತತೋ ದುರ್ಯೋಧನೋ ರಾಜಾ ವಾರ್ಷ್ಣೇಯಂ ಜಯತಾಂ ವರಮ್।
ನ್ಯಮಂತ್ರಯದ್ ಭೋಜನೇನ ನಾಭ್ಯನಂದಚ್ಚ ಕೇಶವಃ ॥೧೩॥

ಅನಂತರ ದುರ್ಯೋಧನನು ಜಯಶಾಲಿಗಳಲ್ಲಿ ಶ್ರೇಷ್ಠನಾದ ಕೃಷ್ಣನನ್ನು ಭೋಜನಕ್ಕಾಗಿ ಆಮಂತ್ರಿಸಿದನು, ಕೃಷ್ಣನು ಅದನ್ನು ಸ್ವೀಕರಿಸಲಿಲ್ಲ.

ತತೋ ದುರ್ಯೋಧನಃ ಕೃಷ್ಣಮಬ್ರವೀತ್ ಕುರುಸಂಸದಿ ।
ಮೃದುಪೂರ್ವಂ ಶಠೋದರ್ಕಂ ಕರ್ಣಮಾಭಾಷ್ಯ ಕೌರವಃ ॥೧೪॥

ಆಗ ಕೌರವನಾದ ದುರ್ಯೋಧನನು ಕರ್ಣನ ಮುಖವನ್ನು ನೋಡುತ್ತಾ ಕುರುಸಭೆಯಲ್ಲಿ ಕೃಷ್ಣನನ್ನು ಕುರಿತು ಮೊದಲು ಮನೋಮೃದುವಾಗಿ ಅನಂತರ ಶಾಠ್ಯದಿಂದ ಕೂಡಿದುದಾಗಿದ್ದ ಮಾತುಗಳನ್ನು ಆಡಿದನು.

ಕಸ್ಮಾದನ್ನಾನಿ ಪಾನಾನಿ ವಾಸಾಂಸಿ ಶಯನಾನಿ ಚ ।
ತ್ವದರ್ಥಮುಪನೀತಾನಿ ನಾಭುಂಕ್ಥಾಸ್ತ್ವಂ ಜನಾರ್ದನ ॥೧೫॥

ಎಲೈ ಜನಾರ್ದನನೇ, ನಾವು ನಿನಗಾಗಿ ಸಿದ್ಧಪಡಿಸಿದ ಅನ್ನ-ಪಾನಗಳನ್ನೂ ವಸ್ತ್ರಗಳನ್ನೂ ಮತ್ತು ಶಯನಗಳನ್ನೂ ನೀನು ಏಕೆ ಸ್ವೀಕರಿಸಲಿಲ್ಲ?

ಭೀಷ್ಮದ್ರೋಣಾವತಿಕ್ರಮ್ಯ ಮಾಂ ಚೈವ ಮಧುಸೂದನ ।
ಕಿಮರ್ಥಂ ಪುಂಡರೀಕಾಕ್ಷ ಭುಕ್ತಂ ವೃಷಲಭೋಜನಮ್ ॥೧೬॥

ಎಲೈ ಮಧುಸೂದನನೇ, ಭೀಷ್ಮ-ದ್ರೋಣರನ್ನು ಮೀರಿ, ನನ್ನನ್ನೂ ಮೀರಿ, ಎಲೈ ಪುಂಡರೀಕಾಕ್ಷನೇ, ಏಕೆ ಶೂದ್ರಾನ್ನವನ್ನು ಭೋಜನ ಮಾಡಿದೆ?

ಉಭಯೋಶ್ಚ ದದತ್ ಸಾಹ್ಯಮುಭಯೋಶ್ಚ ಹಿತೇ ರತಃ ।
ಸಂಬಂಧೀ ದಯಿತಶ್ಚಾಸಿ ಧೃತರಾಷ್ಟ್ರಸ್ಯ ಮಾಧವ ॥೧೭॥

ಎಲೈ ಮಾಧವನೇ, ಕೌರವ-ಪಾಂಡವರಿಬ್ಬರಿಗೂ ಸಹಾಯವನ್ನು ಮಾಡಿರುವ, ಇಬ್ಬರ ಹಿತದಲ್ಲೂ ನಿರತನಾದ ನೀನು ಧೃತರಾಷ್ಟ್ರನಿಗೆ ಸಂಬಂಧಿಯೂ ಮತ್ತು ಪ್ರಿಯನೂ ಆಗಿದ್ದೀಯೆ.

ತ್ವಂ ಹಿ ಗೋವಿಂದ ಧರ್ಮಾರ್ಥೌ ವೇತ್ಥ ತತ್ತ್ವೇನ ಸರ್ವಶಃ ।
ತತ್ರ ಕಾರಣಮಿಚ್ಛಾಮಿ ಶ್ರೋತುಂ ತವ ಜನಾರ್ದನ ॥೧೮॥

ಎಲೈ ಗೋವಿಂದನೇ, ನೀನು ಧರ್ಮಾರ್ಥಗಳನ್ನು ಚೆನ್ನಾಗಿ ತಿಳಿದಿದ್ದೀಯೆ. ಎಲೈ ಜನಾರ್ದನನೇ, ನೀನು ನಮ್ಮ ಸತ್ಕಾರವನ್ನು ನಿರಾಕರಿಸಲು ಕಾರಣವನ್ನು ಕೇಳಲು ಬಯಸುತ್ತೇನೆ.

ಸ ಏವಮುಕ್ತೋ ಗೋವಿಂದಃ ಪ್ರತ್ಯುವಾಚ ಮಹಾಮನಾಃ ।
ಓಘಮೇಘಸ್ವನಃ ಕಾಲೇ ಪ್ರಗೃಹ್ಯ ವಿಪುಲಂ ಭುಜಮ್ ॥೧೯॥

ಅನಂಬೂಕೃತಮತ್ರಸ್ತಮನಿಸ್ತಮಸಕುಂಡಲಃ ।
ರಾಜೀವನೇತ್ರೋ ರಾಜಾನಂ ಹೇತುಮದ್‌ವಾಕ್ಯಮುತ್ತಮಮ್ ॥೨೦॥

ಹೀಗೆ ಪ್ರಶ್ನಿಸಲ್ಪಟ್ಟ ಮಹಾಮನನಾದ ರಾಜೀವನೇತ್ರನೂ, ಪ್ರಕಾಶನಮಾನವಾದ ಕರ್ಣಕುಂಡಲಗಳನ್ನು ಧರಿಸಿದವನೂ ಆದ ಗೋವಿಂದನು ಭುಜವನ್ನು ಎತ್ತಿ ದುರ್ಯೋಧನನನ್ನು ಕುರಿತು, ಮೇಘಗಂಭೀರವಾದ ತನ್ನ ವಾಣಿಯಿಂದ ಅಬದ್ಧವಲ್ಲದ ನಿರ್ಭಯವಾದ ಶ್ರೇಷ್ಠವಾದ ಕಾರಣಸಹಿತವಾದ ಮಾತುಗಳನ್ನು ಮಾತನಾಡಿದನು.

ಕೃತಾರ್ಥಾ ಭುಂಜತೇ ದೂತಾಃ ಪೂಜಾಂ ಗೃಹ್ಣಂತಿ ಚೈವ ಹಿ ।
ಕೃತಾರ್ಥಂ ಮಾ ಸಹಾಮಾತ್ಯಂ ಸಮರ್ಚಿಷ್ಯಸಿ ಭಾರತ ॥೨೧॥

ದೂತರು ತಮ್ಮ ಕಾರ್ಯವು ಸಿದ್ಧಿಸಿದ ಮೇಲೆ ಭೋಜನವನ್ನು ಮಾಡುತ್ತಾರೆ ಮತ್ತು ಸತ್ಕಾರವನ್ನೂ ಸ್ವೀಕರಿಸುತ್ತಾರೆ. ಎಲೈ ಭಾರತನೇ, ಹಾಗೆ ಕೃತಾರ್ಥನಾದ ನನ್ನನ್ನು ಅಮಾತ್ಯರ ಜೊತೆಯಲ್ಲಿ ಪೂಜಿಸುವಿ.

ವೈಶಂಪಾಯನಃ

ಏವಮುಕ್ತಃ ಪ್ರತ್ಯುವಾಚ ಧಾರ್ತರಾಷ್ಟ್ರೋ ಜನಾರ್ದನಮ್ ॥೨೨॥

ನ ಯುಕ್ತಂ ಭವತಾऽಸ್ಮಾಸು ಪ್ರತಿವಕ್ತುಮಸಾಂಪ್ರತಮ್ ॥೨೩॥

ವೈಶಂಪಾಯನ– ಹೀಗೆ ಹೇಳಲ್ಪಟ್ಟ ದುರ್ಯೋಧನನು ಕೃಷ್ಣನನ್ನು ಕುರಿತು ನಮ್ಮ ವಿಷಯದಲ್ಲಿ ನೀನು ಹೀಗೆ ಮಾತನಾಡುವುದು ಉಚಿತವಲ್ಲ ಎಂದು ಹೇಳಿದನು.

ಕೃತಾರ್ಥಂ ವಾऽಕೃತಾರ್ಥಂ ವಾ ತ್ವಾಂ ವಯಂ ಮಧುಸೂದನ ।
ಯತಾಮಹೇ ಪೂಜಯಿತುಂ ದಾಶಾರ್ಹ ನ ಚ ಶಕ್ನುಮಃ ॥೨೪॥

ಎಲೈ ಮಧುಸೂದನನೇ, ನೀನು ಕೃತಾರ್ಥನಾಗಲಿ ಅಥವಾ ಅಕೃತಾರ್ಥನಾಗಲಿ ನಿನ್ನನ್ನು ಪೂಜಿಸಲು ನಾವು ಪ್ರಯತ್ನಪಡುತ್ತೇವೆ. ಆದರೆ ದಾಶಾರ್ಹನೇ, ಅದನ್ನು ಮಾಡಲು ಸಾಧ್ಯವಾಗುತ್ತಿಲ್ಲ.

ನ ಚ ತತ್ಕಾರಣಂ ವಿದ್ಮೋ ಯಸ್ಮಾನ್ನೋ ಮಧುಸೂದನ ।
ಪೂಜಾಂ ಕೃತಾಂ ಪ್ರೀಯಮಾಣೈರ್ನ ಭುಂಜೀಥಾಃ ಪರಂತಪ ॥೨೫॥

ಎಲೈ ಮಧುಸೂದನನೇ, ಪರಂತಪನೇ, ನಾವು ಪ್ರೀತಿಯಿಂದ ಮಾಡಿದ ಪೂಜೆಯನ್ನು ನೀನು ಸ್ವೀಕರಿಸದೇ ಇರುವುದಕ್ಕೆ ನಾವು ಕಾರಣವನ್ನೂ ತಿಳಿಯುತ್ತಿಲ್ಲ.

ವೈರಂ ನೋ ನಾಸ್ತಿ ಭವತಾ ಗೋವಿಂದ ನ ಚ ವಿಗ್ರಹಃ ।
ಸ ಭವಾನ್ ಪ್ರಸಮೀಕ್ಷ್ಯೈತನ್ನೇದೃಶಂ ವಕ್ತುಮರ್ಹತಿ ॥೨೬॥

ಗೋವಿಂದನೇ, ನಿನ್ನ ಜೊತೆಯಲ್ಲಿ ನಮಗೆ ವೈರವಾಗಲೀ, ವಿರೋಧವಾಗಲೀ ಇಲ್ಲ. ನೀನು ಇದನ್ನು ಗಮನಿಸಿ ಹೀಗೆ ಮಾತನಾಡುವುದು ಯೋಗ್ಯವಲ್ಲ.

ಏವಮುಕ್ತಃ ಪ್ರತ್ಯುವಾಚ ಧಾರ್ತರಾಷ್ಟ್ರಂ ಜನಾರ್ದನಃ ।
ಅಭಿವೀಕ್ಷ್ಯ ಸಹಾಮಾತ್ಯಂ ದಾಶಾರ್ಹಃ ಪ್ರಹಸನ್ನಿವ ॥೨೭॥

ದುರ್ಯೋಧನನು ಹೀಗೆ ಮಾತನಾಡಿದಾಗ ದಾಶಾರ್ಹನಾದ ಜನಾರ್ದನನು ನಗುತ್ತಾ ಅಮಾತ್ಯರ ಜೊತೆಯಲ್ಲಿದ್ದ ದುರ್ಯೋಧನನನ್ನು ನೋಡಿ ಮಾತನಾಡಿದನು.

ನಾಹಂ ಕಾಮಾನ್ನ ಸಂರಂಭಾನ್ನ ದ್ವೇಷಾನ್ನಾರ್ಥಕಾರಣಾತ್ ।
ನ ಹೇತುವಾದಾಲ್ಲೋಭಾದ್ವಾ ಧರ್ಮಂ ಜಹ್ಯಾಂ ಕಥಂಚನ ॥೨೮॥

ನಾನು ಕಾಮದಿಂದಾಗಲೀ, ಕ್ರೋಧದಿಂದಾಗಲೀ, ದ್ವೇಷದಿಂದಾಗಲೀ, ಪ್ರಯೋಜನದ ಅಪೇಕ್ಷೆಯಿಂದಾಗಲೀ, ಹೇತುವಾದದಿಂದಾಗಲೀ, ಲೋಭದಿಂದಾಗಲೀ ಎಂದೂ ಧರ್ಮವನ್ನು ಬಿಡುವವನಲ್ಲ.

ಸಂಪ್ರೀತಿಭೋಜ್ಯಾನ್ಯನ್ನಾನಿ ಆಪದ್ಭೋಜ್ಯಾನಿ ವಾ ಪುನಃ ।
ನ ಚ ಸಂಪ್ರೀಯಸೇ ರಾಜನ್ ನ ಚೈವಾಪದ್ಗತಾ ವಯಮ್ ॥೨೯॥

ಸಂಪ್ರೀತಿ ಇರುವಲ್ಲಿ ಭೋಜನವನ್ನು ಮಾಡಬೇಕು ಅಥವಾ ಆಪತ್ತಿನಲ್ಲಿ ಭೋಜನವನ್ನು ಮಾಡಬೇಕು. ಎಲೈ ರಾಜನೇ, ನೀನು ನಮ್ಮ ಮೇಲೆ ಪ್ರೀತಿಯುಳ್ಳವನಲ್ಲ ಮತ್ತು ನಮಗೆ ಆಪತ್ತೂ ಒದಗಿಲ್ಲ.

ಅಕಸ್ಮಾದ್ ದ್ವಿಷಸೇ ರಾಜನ್ ಜನ್ಮಪ್ರಭೃತಿ ಪಾಂಡವಾನ್ ।
ಪ್ರಿಯಾನುವರ್ತಿನೋ ಭ್ರಾತೄನ್ ಸರ್ವೈಃ ಸಮುದಿತಾನ್ ಗುಣೈಃ॥೩೦॥

ಎಲೈ ರಾಜನೇ, ನೀನು ಹುಟ್ಟಿದಾಗಿನಿಂದಲೂ ನಿಷ್ಕಾರಣವಾಗಿ ಸರ್ವಗುಣಗಳಿಂದಲೂ ಕೂಡಿದ, ಪ್ರಿಯವನ್ನು ಮಾಡುವ ನಿನ್ನ ಸಹೋದರರಾದ ಪಾಂಡವರನ್ನು ದ್ವೇಷಿಸುತ್ತಿದ್ದೀಯೆ.

ಅಕಸ್ಮಾಚ್ಚೈವ ಪಾರ್ಥಾನಾಂ ದ್ವೇಷಣಂ ನೋಪಪದ್ಯತೇ ।
ಧರ್ಮೇ ಸ್ಥಿತಾಃ ಪಾಂಡವೇಯಾಃ ಕಸ್ತಾನ್ ಕಿಂ ವಕ್ತುಮರ್ಹತಿ ॥೩೧॥

ನಿಷ್ಕಾರಣವಾಗಿ ಪಾಂಡವರನ್ನು ದ್ವೇಷಿಸುವುದು ಸರಿಯಲ್ಲ. ಪಾಂಡವರು ಧರ್ಮದಲ್ಲಿ ಸ್ಥಿತರಾದವರು. ಯಾವನು ತಾನೇ ಅವರ ವಿಷಯದಲ್ಲಿ ಏನನ್ನು ಹೇಳಲು ಸಾಧ್ಯ ?

ಯಸ್ತಾನ್ ದ್ವೇಷ್ಟಿ ಸ ಮಾಂ ದ್ವೇಷ್ಟಿ ಯಸ್ತಾನನು ಸ ಮಾಮನು ।
ಏಕಾತ್ಮ್ಯಂ ಮಾಂ ಗತಂ ವಿದ್ಧಿ ಪಾಂಡವೈರ್ಧರ್ಮಚಾರಿಭಿಃ ॥೩೨॥

ಯಾವನು ಪಾಂಡವರನ್ನು ದ್ವೇಷಿಸುತ್ತಾನೆಯೋ ಅವನು ನನ್ನನ್ನು ದ್ವೇಷಿಸುತ್ತಾನೆ. ಯಾವನು ಪಾಂಡವರಿಗೆ ಹಿತನೋ ಅವನು ನನಗೂ ಹಿತನು. ಧರ್ಮಶೀಲರಾದ ಪಾಂಡವರ ಜೊತೆಯಲ್ಲಿ ನಾನು ಏಕಾತ್ಮಭಾವವನ್ನು ಹೊಂದಿದ್ದೇನೆಂದು ತಿಳಿ.

ಕಾಮಕ್ರೋಧಾನುವರ್ತೀ ಹಿ ಯೋ ಮೋಹಾದ್ ವಿರುರುತ್ಸತೇ ।
ಗುಣವಂತಂ ಚ ಯೋ ದ್ವೇಷ್ಟಿ ತಮಾಹುಃ ಪುರುಷಾಧಮಮ್ ॥೩೩॥

ಯಾವನು ಕಾಮ-ಕ್ರೋಧಗಳಿಗೆ ವಶನಾಗಿ ಮೋಹದಿಂದ ಗುಣವಂತನನ್ನು ದ್ವೇಷಮಾಡಿ, ಅವನಿಗೆ ವಿರೋಧವನ್ನು ಮಾಡಲು ಬಯಸುತ್ತಾನೆಯೋ ಅವನನ್ನು ಪುರುಷಾಧಮನೆಂದು ಕರೆಯುತ್ತಾರೆ.

ಯಃ ಕಲ್ಯಾಣಗುಣಂ ರಾಜನ್ ಮೋಹಾನ್ನೋತ ದಿದೃಕ್ಷತೇ ।
ಸೋಽಜಿತಾತ್ಮಾಽಜಿತಕ್ರೋಧೋ ನ ಚಿರಂ ತಿಷ್ಠತೇ ಶ್ರಿಯಾ ॥೩೪॥

ಎಲೈ ರಾಜನೇ, ಯಾವನು ತನ್ನ ಮೋಹದಿಂದ (ಮಿಥ್ಯಾಜ್ಞಾನದಿಂದ) ಕಲ್ಯಾಣಗುಣಗಳು ಇರುವ ಕಡೆ ಗಮನಿಸಲು ಬಯಸುವುದಿಲ್ಲವೋ ಅಂತಹ ಮನೋಜಯವಿಲ್ಲದ, ಕ್ರೋಧವನ್ನು ಜಯಿಸದ ಮನುಷ್ಯನು ಬಹಳ ಕಾಲ ಸಂಪತ್ತನ್ನು ಹೊಂದಿರುವುದಿಲ್ಲ.

ಅಥ ಯೋ ಗುಣಸಂಪನ್ನಾನ್ ಹೃದಯಸ್ಯಾಪ್ರಿಯಾನಪಿ ।
ಪ್ರಿಯೇಣ ಕುರುತೇ ವಶ್ಯಾನ್ ಚಿರಂ ಯಶಸಿ ತಿಷ್ಠತಿ ॥೩೫॥

ಮತ್ತು ಯಾವನು ತನ್ನ ಮನಸ್ಸಿಗೆ ಅಪ್ರಿಯವಾದರೂ ಗುಣಸಂಪನ್ನರಿಗೆ ಪ್ರಿಯವನ್ನು ಮಾಡಿ ಅವರನ್ನು ವಶೀಕರಿಸಿಕೊಳ್ಳುತ್ತಾನೆಯೋ ಅವನು ಬಹುಕಾಲ ಕೀರ್ತಿಯನ್ನು ಪಡೆಯುತ್ತಾನೆ.

ದ್ವಿಷದನ್ನಂ ನ ಭೋಕ್ತವ್ಯಂ ದ್ವಿಷಂತಂ ನೈವ ಭೋಜಯೇತ್ ।
ಪಾಂಡವಾನ್ ದ್ವಿಷಸೇ ರಾಜನ್ ಮಮ ಪ್ರಾಣಾ ಹಿ ಪಾಂಡವಾಃ ॥

ದ್ವೇಷವನ್ನು ಮಾಡುವವನ ಮನೆಯ ಅನ್ನವನ್ನು ಭುಂಜಿಸಬಾರದು ಮತ್ತು ದ್ವೇಷವನ್ನು ಮಾಡುವವನಿಗೆ ಅನ್ನವನ್ನೂ ಕೊಡಬಾರದು. ರಾಜನೇ, ನೀನು ಪಾಂಡವರನ್ನು ದ್ವೇಷಿಸುತ್ತೀಯೆ. ಆದರೆ ಪಾಂಡವರು ನನ್ನ ಪ್ರಾಣರಾದವರು.

ಸರ್ವಮೇತನ್ನ ಭೋಕ್ತವ್ಯಮನ್ನಂ ದುಷ್ಟಾಭಿಸಂಹಿತಮ್ ।
ಕ್ಷತ್ತುರೇಕಸ್ಯ ಭೋಕ್ತವ್ಯಮಿತಿ ಮೇ ಧೀಯತೇ ಮತಿಃ ॥೩೭॥

ದುರುದ್ದೇಶದಿಂದ ಕೂಡಿದ ನೀನು ಮಾಡಿದ ಈ ಯಾವ ಅನ್ನವನ್ನೂ ತಿನ್ನಬಾರದು. ವಿದುರನೊಬ್ಬನ ಅನ್ನವನ್ನು ಸ್ವೀಕರಿಸಬೇಕೆಂದು ನನ್ನ ಅಭಿಪ್ರಾಯ.

ಏವಮುಕ್ತ್ವಾ ಮಹಾಬಾಹುಃ ದುರ್ಯೋಧನಮಮರ್ಷಣಮ್ ।
ನಿಶ್ಚಕ್ರಾಮ ತತಃ ಶುಭ್ರಾದ್ ಧಾರ್ತರಾಷ್ಟ್ರನಿವೇಶನಾತ್ ॥೩೮॥

ಮಹಾಬಾಹುವಾದ ಕೃಷ್ಣನು ರೋಷಶೀಲನಾದ ದುರ್ಯೋಧನನಿಗೆ ಹೀಗೆ ಮಾತನಾಡಿ ಶುಭ್ರವಾದ ದುರ್ಯೋಧನನ ಮನೆಯಿಂದ ಹೊರಗೆ ಬಂದನು.

ನಿರ್ಯಾಯ ಚ ಮಹಾಬಾಹುಃ ವಾಸುದೇವೋ ಮಹಾಮನಾಃ ।
ನಿವೇಶಾಯ ಯಯೌ ವೇಶ್ಮ ವಿದುರಸ್ಯ ಮಹಾತ್ಮನಃ ॥೩೯॥

ಹೊರಗೆ ಬಂದ ಮಹಾಬಾಹುವಾದ, ಮಹಾಮನನಾದ ವಾಸುದೇವನು ಮಹಾತ್ಮನಾದ ವಿದುರನ ಮನೆಗೆ ಹೋದನು.

ತಮಭ್ಯಗಚ್ಛದ್ ದ್ರೋಣಶ್ಚ ಕೃಪೋ ಭೀಷ್ಮೋಽಥ ಬಾಹ್ಲಿಕಃ ।
ಕುರವಶ್ಚ ಮಹಾಬಾಹುಂ ವಿದುರಸ್ಯ ಗೃಹಾತಿಥಿಮ್ ॥೪೦॥

ದ್ರೋಣ, ಕೃಪ, ಭೀಷ್ಮ, ಬಾಹ್ಲೀಕ ಮತ್ತು ಕುರುಗಳು ವಿದುರನ ಮನೆಗೆ ಅತಿಥಿಯಾಗಿ ಬಂದ ಆ ಮಹಾಬಾಹುವನ್ನು ಹಿಂಬಾಲಿಸಿದರು.

ತೇಽಭಿಗಮ್ಯಾಬ್ರುವಂಸ್ತತ್ರ ಕುರವೋ ಮಧುಸೂದನಮ್ ॥೪೧॥

ನಿವೇದಯಾಮೋ ವಾರ್ಷ್ಣೇಯ ಸರತ್ನಾಂಸ್ತೇ ಗೃಹಾನ್ ವಯಮ್ ॥

ಆ ಕೌರವರು ಮಧುಸೂದನನನ್ನು ಸಮೀಪಿಸಿ ಅಲ್ಲಿ ಎಲೈ ಕೃಷ್ಣನೇ, ರತ್ನಸಹಿತವಾದ ನಮ್ಮ ಮನೆಗಳನ್ನು ನಿನಗೆ ನಿವೇದಿಸುತ್ತೇವೆ ಎಂದು ಹೇಳಿದರು.

ತಾನುವಾಚ ಮಹಾತೇಜಾಃ ಕೌರವಾನ್ ಮಧುಸೂದನ ॥೪೩॥

ಸರ್ವೇ ಭವಂತೋ ಗಚ್ಛಂತು ಸರ್ವಾ ಮೇಽಪಚಿತಿಃ ಕೃತಾ ॥೪೪॥

ಮಹಾತೇಜಸ್ವಿಯಾದ ಮಧುಸೂದನನು ಆ ಕೌರವರನ್ನು ಕುರಿತು ನೀವೆಲ್ಲರೂ ಹೊರಟುಹೋಗಿ ನನಗೆ ಎಲ್ಲಾ ಪೂಜೆಯೂ ಸಂದಿದೆ ಎಂದು ಹೇಳಿದನು.

ವೈಶಂಪಾಯನ

ಯಾತೇಷು ಕುರುಷು ಕೃತ್ತಾ ದಾಶಾರ್ಹಮಪರಾಜಿತಮ್ ।
ಅಭ್ಯರ್ಚಯಾಮಾಸ ತದಾ ಸರ್ವಕಾಮೈರುಪಸ್ಥಿತಃ ॥೪೫॥

ವೈಶಂಪಾಯನ– ಕೌರವರು ಹೊರಟು ಹೋದ ಮೇಲೆ ವಿದುರನು ಅಪರಾಜಿತನಾದ ಕೃಷ್ಣನನ್ನು ಸರ್ವವಸ್ತುಗಳಿಂದಲೂ ಸಿದ್ಧನಾಗಿ ಪೂಜಿಸಿದನು.

ತತಃ ಕೃತ್ತಾಽನ್ನಪಾನಾನಿ ಶುಚೀನಿ ಗುಣವಂತಿ ಚ ।
ಉಪಾಹರದನೇಕಾನಿ ಕೇಶವಾಯ ಮಹಾತ್ಮನೇ ॥೪೬॥

ಆಗ ವಿದುರನು ಮಹಾತ್ಮನಾದ ಕೇಶವನಿಗೆ ಶುಚಿಯಾದ, ಗುಣದಿಂದ ಕೂಡಿದ ಅನೇಕ ಬಗೆಯ ಅನ್ನ-ಪಾನಗಳನ್ನು ನೀಡಿದನು.

ತೈಸ್ತರ್ಪಯಿತ್ವಾ ಪ್ರಥಮಂ ಬ್ರಾಹ್ಮಣಾನ್ ಮಧುಸೂದನಃ ।
ವೇದವಿದ್ಭ್ಯೋ ದದೌ ಕೃಷ್ಣಃ ಪರಮದ್ರವಿಣಾನ್ಯಪಿ ॥೪೭॥

ಮಧುಸೂದನನಾದ ಕೃಷ್ಣನು ಮೊದಲು ಆ ಅನ್ನ-ಪಾನಗಳಿಂದ ಬ್ರಾಹ್ಮಣರನ್ನು ತೃಪ್ತಿಪಡಿಸಿ, ವೇದವೇತ್ತರಾದ ಅವರಿಗೆ ಶ್ರೇಷ್ಠವಾದ ದ್ರವ್ಯಗಳನ್ನು ದಾನಮಾಡಿದನು.

ಭುಕ್ತವತ್ಸು ದ್ವಿಜಾಗ್ರ್ಯೇಷು ನಿಷಣ್ಣೇಷು ವರಾಸನೇ ।
ಶುಚಿಃ ಸುಪ್ರಯತೋ ಭೂತ್ವಾ ವಿದುರೋಽನ್ನಮುಪಾಹರತ್ ॥೪೮॥

ಶ್ರದ್ಧಯಾ ಪರಯಾ ಯುಕ್ತ ಇದಂ ವಚನಮಬ್ರವೀತ್ ॥೪೯॥

ಬ್ರಾಹ್ಮಣರು ಭೋಜನವನ್ನು ಮಾಡಿ ಶ್ರೇಷ್ಠವಾದ ಆಸನಗಳ ಮೇಲೆ ಕುಳಿತ ಮೇಲೆ ವಿದುರನು ಶುಚಿಯಾಗಿ, ಪರಮಶ್ರದ್ಧೆಯಿಂದ ಕೂಡಿದವನಾಗಿ ಎಚ್ಚರಿಕೆಯಿಂದ ಅನ್ನವನ್ನು ಬಡಿಸುತ್ತಾ ಹೀಗೆ ಮಾತನಾಡಿದನು.

ಸಂಭ್ರಮೈಸ್ತುಷ್ಯ ಗೋವಿಂದ ಏತನ್ನಃ ಪರಮಂ ಧನಮ್ ।
ಅನ್ಯಥಾ ಹಿ ವಿಶೇಷೇಣ ಕಸ್ತ್ವಮರ್ಚಿತುಮರ್ಹತಿ ॥೫೦॥

ಗೋವಿಂದನೇ, ನಮ್ಮ ಭಕ್ತಿಉದ್ರೇಕದಿಂದಲೇ ನೀನು ತೃಪ್ತಿಪಡಬೇಕು. ಇದೇ ನಮ್ಮ ಶ್ರೇಷ್ಠವಾದ ಧನ. ಇಲ್ಲದಿದ್ದರೆ ಯಾರು ನಿನ್ನನ್ನು ವಿಶೇಷವಾಗಿ ಪೂಜಿಸಲು ಸಮರ್ಥರಾಗುತ್ತಾರೆ?

ವೈಶಂಪಾಯನಃ

ತತೋಽನುಯಾಯಿಭಿಃ ಸಾರ್ಧಂ ನಿಷಣ್ಣಃ ಪರಮಾಸನೇ ।
ವಿದುರಾನ್ನಾನಿ ಬುಭುಜೇ ಶುಚೀನಿ ಗುಣವಂತಿ ಚ ॥೫೧॥

ವೈಶಂಪಾಯನ– ಅನಂತರ ಶ್ರೇಷ್ಠವಾದ ಆಸನದಲ್ಲಿ ಕುಳಿತ ಕೃಷ್ಣನು ತನ್ನ ಅನುಚರರಿಂದ ಸಹಿತನಾಗಿ ಶುಚಿಯೂ, ಗುಣಪೂರಿತವೂ ಆಗಿದ್ದ ವಿದುರನ ಅನ್ನಗಳನ್ನು ಭುಂಜಿಸಿದನು.

ತಂ ಭುಕ್ತವಂತಂ ವಿವಿಧಾಃ ಸುಶಬ್ದಾಃ ಸೂತಮಾಗಧಾಃ ।
ಅಭಿತುಷ್ಟುವುರಾಸೀನಂ ದಾಶಾರ್ಹಮಪರಾಜಿತಮ್ ॥೫೨॥

ಕೃಷ್ಣನು ಭೋಜನವನ್ನು ಮಾಡಿ ಕುಳಿತಿರಲು ಅಪರಾಜಿತನಾದ ಆ ದಾಶಾರ್ಹನನ್ನು ಸೂತ-ಮಾಗಧರು ಅನೇಕ ವಿಧವಾದ ಒಳ್ಳೆಯ ಶಬ್ದಗಳಿಂದ ಕೂಡಿದ ಸ್ತೋತ್ರಗಳಿಂದ ಸ್ತೋತ್ರ ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ನವತಿತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ಏಕಪಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೊಂದನೆಯ ಅಧ್ಯಾಯ

ಉದ್ಧತನಾದ ದುರ್ಯೋಧನನ ಬಳಿಗೆ ಸಂಧಿಗಾಗಿ
ಹೋಗದಿರುವಂತೆ ಕೃಷ್ಣನ ಬಳಿ ವಿದುರನ ಒತ್ತಾಯ.

ವೈಶಂಪಾಯನಃ

ತಂ ಭುಕ್ತವಂತಮಾಶಸ್ತಂ ನಿಶಾಯಾಂ ವಿದುರೋಽಬ್ರವೀತ್ ।
ನೇದಂ ಸಮ್ಯಗ್ ವ್ಯವಸಿತಂ ಕೇಶವಾಗಮನಂ ತವ ॥೧॥

ವೈಶಂಪಾಯನ– ಭೋಜನವನ್ನು ಮಾಡಿ ವಿಶ್ರಾಂತಿಯನ್ನು ಪಡೆಯುತ್ತಿದ್ದ ಕೃಷ್ಣನನ್ನು ಕುರಿತು ರಾತ್ರಿಯ ವೇಳೆಯಲ್ಲಿ ವಿದುರನು ಕೇಶವನೇ, ನೀನು ಇಲ್ಲಿಗೆ ಬಂದುದು ಸರಿಯಾದ ನಿರ್ಧಾರವಲ್ಲ ಎಂದು ಹೇಳಿದನು.

ಅರ್ಥಧರ್ಮಾತಿಗೋ ಮೂಢಃ ಸಂರಂಭೀ ಚ ಜನಾರ್ದನ ।
ಮಾನಘ್ನೋ ಮಾನಕಾಮಶ್ಚ ವೃದ್ಧಾನಾಂ ಶಾಸನಾತಿಗಃ ॥೨॥

ಎಲೈ ಜನಾರ್ದನನೇ, ದುರ್ಯೋಧನನು ಅರ್ಥ-ಧರ್ಮಗಳೆರಡನ್ನೂ ಮೀರಿದವನು, ಮೂಢನಾದವನು, ಕ್ರೋಧವುಳ್ಳವನು, ಇನ್ನೊಬ್ಬರಿಗೆ ಮರ್ಯಾದೆಯನ್ನು ಕೊಡದವನು. ತಾನು ಮಾತ್ರ ಎಲ್ಲರಿಂದಲೂ ಗೌರವವನ್ನು ಅಪೇಕ್ಷಿಸುವವನು ಮತ್ತು ದೊಡ್ಡವರ ಮಾತನ್ನು ಮೀರುವವನು.

ಧರ್ಮಶಾಸ್ತ್ರಾತಿಗೋ ಮಂದೋ ದುರಾತ್ಮಾ ಪ್ರಗ್ರಹಂ ಗತಃ ।
ಅನೇಯಃ ಶ್ರೇಯಸಾಂ ಪಾಪೋ ಧಾರ್ತರಾಷ್ಟ್ರೋ ಜನಾರ್ದನ ॥೩॥

ಜನಾರ್ದನನೇ, ಅವನು ಧರ್ಮಶಾಸ್ತ್ರವನ್ನು ಮೀರಿದವನು, ಮಂದನಾದವನು, ದುಷ್ಟನೂ, ಕೆಟ್ಟಹಠವನ್ನು ಹೊಂದಿದವನೂ, ಶ್ರೇಯೋಮಾರ್ಗದಲ್ಲಿ ನಡೆಯದವನೂ ಮತ್ತು ಪಾಪಿಯೂ ಆಗಿದ್ದಾನೆ.

ಕಾಮಾತ್ಮಾ ಪ್ರಾಜ್ಞಮಾನೀ ಚ ಮಿತ್ರಧ್ರುಕ್ ಸರ್ವಶಂಕಿತಾ ।
ಅಕರ್ತಾ ಚಾಕೃತಜ್ಞಶ್ಚ ತ್ಯಕ್ತಧರ್ಮಾ ಪ್ರಿಯಾನೃತಃ ॥೪॥

ಭೋಗದಲ್ಲಿ ಮನಸ್ಸುಳ್ಳವನೂ, ತನ್ನನ್ನು ಪ್ರಾಜ್ಞನೆಂದು ತಿಳಿದವನೂ, ಮಿತ್ರದ್ರೋಹಿಯೂ, ಎಲ್ಲರಲ್ಲಿಯೂ ಸಂಶಯಪಡುವವನೂ, ಒಳ್ಳೆಯ ಕೆಲಸವನ್ನು ಮಾಡದವನೂ, ಕೃತಜ್ಞನಲ್ಲದವನೂ, ಧರ್ಮವನ್ನು ತ್ಯಜಿಸಿದವನೂ ಮತ್ತು ಅನೃತಪ್ರಿಯನೂ ಆಗಿದ್ದಾನೆ.

ಗೂಢಶ್ಚಾಕೃತಬುದ್ಧಿಶ್ಚ ಇಂದ್ರಿಯಾಣಾಮನೀಶ್ವರಃ ।
ಕಾಮಾನುಸಾರೀ ಕೃತ್ಯೇಷು ಸರ್ವೇಷು ಕೃತನಿಶ್ಚಯಃ ॥೫॥

ತನ್ನ ಮನಸ್ಸಿನ ಅಭಿಪ್ರಾಯವನ್ನು ಇನ್ನೊಬ್ಬರಿಗೆ ಹೇಳದವನೂ, ಅಸಂಸ್ಕೃತ ಬುದ್ಧಿಯುಳ್ಳವನೂ, ಇಂದ್ರಿಯಜಯವಿಲ್ಲದವನೂ, ಕಾಮಕ್ಕೆ ವಶನಾದವನೂ ಮತ್ತು ಎಲ್ಲಾ ಕಾರ್ಯಗಳನ್ನೂ ತಾನು ಹೇಳಿದಂತೆಯೇ ಮಾಡಬೇಕೆಂಬ ಹಠವುಳ್ಳವನು.

ಏತೈಶ್ಚಾನ್ಯೈಶ್ಚ ಬಹುಭಿಃ ದೋಷೈರೇವ ಸಮನ್ವಿತಃ ।
ತವಯೋಚ್ಯಮಾನಂ ಶ್ರೇಯೋಽಪಿ ಸಂರಂಭಾನ್ನ ಕರಿಷ್ಯತಿ ॥೬॥

ಇವುಗಳಿಂದ ಮತ್ತು ಇನ್ನೂ ಅನೇಕ ದೋಷಗಳಿಂದ ಕೂಡಿದ ಅವನು ತನ್ನ ಕೋಪದಿಂದ ನೀನು ಹೇಳುವ ಶ್ರೇಯೋಮಾರ್ಗವನ್ನು ಅನುಸರಿಸುವುದಿಲ್ಲ.

ಭೀಷ್ಮೇ ದ್ರೋಣೇ ಕೃಪೇ ಕರ್ಣೇ ದ್ರೋಣಪುತ್ರೇ ಜಯದ್ರಥೇ ।
ಭೂಯಸೀ ವರ್ತತೇ ವೃತ್ತಿಃ ನ ಶಮೇ ಕುರುತೇ ಮನಃ ॥೭॥

ಭೀಷ್ಮ, ದ್ರೋಣ, ಕೃಪ, ಕರ್ಣ, ಅಶ್ವತ್ಥಾಮ ಮತ್ತು ಜಯದ್ರಥ ಇವರು ಅವನು ಕೊಟ್ಟ ಧನ-ದಾನಾದಿಗಳಿಂದ ಅವನನ್ನು ಬಹಳವಾಗಿ ಅನುಸರಿಸುತ್ತಾರೆ. ಆದ್ದರಿಂದ ಅವನು ಸಂಧಿಯನ್ನು ಒಪ್ಪುವುದಿಲ್ಲ.

ನಿಶ್ಚಿತಂ ಧಾರ್ತರಾಷ್ಟ್ರಾಣಾಂ ಸಕರ್ಣಾನಾಂ ಜನಾರ್ದನ ।
ಭೀಷ್ಮದ್ರೋಣಮುಖಾನ್ ಪಾರ್ಥಾ ನ ಶಕ್ತಾಃ ಪ್ರತಿವೀಕ್ಷಿತುಮ್ ॥೮॥

ಎಲೈ ಜನಾರ್ದನನೇ, ಭೀಷ್ಮ-ದ್ರೋಣಾದಿಗಳನ್ನು ಪಾಂಡವರು ಕಣ್ಣಿನಿಂದ ನೋಡುವುದಕ್ಕೂ ಅಸಮರ್ಥರು ಎಂದು ಕರ್ಣಸಹಿತರಾದ ಧೃತರಾಷ್ಟ್ರಪುತ್ರರೆಲ್ಲರಿಗೂ ಇರುವ ನಿಶ್ಚಯ.

ಸೇನಾಸಮುದಯಂ ದೃಷ್ಟ್ವಾ ಪಾರ್ಥಿವಂ ಮಧುಸೂದನ ।
ಕೃತಾರ್ಥಂ ಮನ್ಯತೇ ಬಾಲ ಆತ್ಮಾನಮವಿಚಕ್ಷಣಃ ॥೯॥

ಬಾಲನೂ, ಅವಿವೇಕಿಯೂ ಆದ ದುರ್ಯೋಧನನು ಎಲೈ ಮಧುಸೂದನನೇ, ರಾಜರ ಸೇನಾಸಮುದಾಯವನ್ನು ನೋಡಿ ತನ್ನನ್ನು ಕೃತಾರ್ಥನೆಂದು ಭಾವಿಸಿದ್ದಾನೆ.

ಏಕಃ ಕರ್ಣಃ ಪರಾನ್ ಜೇತುಂ ಸಮರ್ಥ ಇತಿ ನಿಶ್ಚಯಃ ।
ಧಾರ್ತರಾಷ್ಟ್ರಸ್ಯ ದುರ್ಬುದ್ಧೇಃ ಸ ಶಮಂ ನೋಪಲಪ್ಸ್ಯತೇ ॥೧೦॥

ದುರ್ಬುದ್ಧಿಯುಳ್ಳ ದುರ್ಯೋಧನನಿಗೆ ಕರ್ಣನೊಬ್ಬನೇ ಎಲ್ಲಾ ಶತ್ರುಗಳನ್ನೂ ಜಯಿಸಲು ಸಮರ್ಥನೆಂಬ ನಿಶ್ಚಯವಿದೆ. ಅವನು ಸಂಧಿಯನ್ನು ಒಪ್ಪುವುದಿಲ್ಲ.

ನಿಶ್ಚಿತಂ ಧಾರ್ತರಾಷ್ಟ್ರಾಣಾಂ ಸರ್ವೇಷಾಮೇವ ಕೇಶವ ।
ಶಮೇ ಪ್ರಯತಮಾನಸ್ಯ ತವ ಶಾಸನಲಂಘನಮ್ ॥೧೧॥

ಎಲೈ ಕೇಶವನೇ, ಸಂಧಿಗಾಗಿ ಪ್ರಯತ್ನಪಡುವ ನಿನ್ನ ಶಾಸನವನ್ನು ಎಲ್ಲ ಧೃತರಾಷ್ಟ್ರ ಪುತ್ರರೂ ಮೀರುತ್ತಾರೆ ಎಂಬುದು ನಿಶ್ಚಿತವಾಗಿದೆ.

ನ ಪಾಂಡವಾನಾಮಸ್ಮಾಭಿಃ ಪ್ರತಿದೇಯಂ ಯಥೋಚಿತಮ್ ।
ಇತಿ ವ್ಯವಸಿತಾಸ್ತೇಷು ವಚನಂ ಸ್ಯಾನ್ನಿರರ್ಥಕಮ್ ॥೧೨॥

ಪಾಂಡವರಿಗೆ ನಾವು ಯೋಗ್ಯವಾದ ರಾಜ್ಯಾಂಶವನ್ನು ಕೊಡಬಾರದು ಎಂದು ಅವರ ನಿರ್ಧಾರವಿದೆ. ನಿನ್ನ ಮಾತುಗಳು ಅವರಲ್ಲಿ ವ್ಯರ್ಥವಾಗುತ್ತವೆ.

ಯತ್ರ ಸೂಕ್ತಂ ದುರುಕ್ತಂ ಚ ಸಮಂ ಸ್ಯಾನ್ಮಧುಸೂದನ ।
ನ ತತ್ರ ಪ್ರಲಪೇತ್ ಪ್ರಾಜ್ಞೋ ಬಧಿರೇಷ್ವಿವ ಗಾಯನಃ ॥೧೩॥

ಎಲೈ ಮಧುಸೂದನನೇ, ಎಲ್ಲಿ ಒಳ್ಳೆಯ ಮಾತುಗಳು ಮತ್ತು ಕೆಟ್ಟ ಮಾತುಗಳು ಸಮಾನವಾಗುತ್ತವೆಯೋ ಅಲ್ಲಿ ವಿವೇಕಿಯಾದವನು ಸಂಗೀತಗಾರನು ಕಿವುಡನ ಮುಂದೆ ಗಾನವನ್ನು ಮಾಡಿದಂತೆ ಮಾತನಾಡಬಾರದು.

ಅವಿಜಾನತ್ಸು ಮೂಢೇಷು ನಿರ್ಮರ್ಯಾದೇಷು ಮಾಧವ ।
ತತ್ತ್ವಂ ವಾಕ್ಯಂ ಬ್ರುವನ್ ನಿಂದ್ಯಃ ಚಂಡಾಲೇಷು ದ್ವಿಜೋ ಯಥಾ ॥

ಎಲೈ ಮಾಧವನೇ, ಜ್ಞಾನರಹಿತರಾದ, ಮೂಢರಾದ, ಮರ್ಯಾದಾರಹಿತರಾದ ವ್ಯಕ್ತಿಗಳಿಗೆ ತತ್ತ್ವೋಪದೇಶವನ್ನು ಮಾಡುವವನು, ಚಂಡಾಲನಿಗೆ ವೇದೋಪದೇಶವನ್ನು ಮಾಡುವ ದ್ವಿಜನಂತೆ ನಿಂದ್ಯನಾಗುತ್ತಾನೆ.

ಸೋಽಯಂ ಬಲಸ್ಥೋ ಮೂಢಶ್ಚ ನ ಕರಿಷ್ಯತಿ ತೇ ವಚಃ ।
ತಸ್ಮಿನ್ ನಿರರ್ಥಕಂ ವಾಕ್ಯಮುಕ್ತಂ ಸಂಪತ್ಸ್ಯತೇ ತವ ॥೧೫॥

ಅಂತಹ ಈ ದುರ್ಯೋಧನನು ಸೈನ್ಯದ ಮಧ್ಯದಲ್ಲಿದ್ದಾನೆ ಮತ್ತು ಮೂಢನಾಗಿದ್ದಾನೆ. ನಿನ್ನ ಮಾತುಗಳನ್ನು ನಡೆಸುವುದಿಲ್ಲ. ನೀನು ಆಡುವ ಮಾತುಗಳು ಅವನಲ್ಲಿ ನಿರರ್ಥಕವಾಗುವುವು.

ತೇಷಾಂ ಸಮುಪವಿಷ್ಟಾನಾಂ ಸರ್ವೇಷಾಂ ಪಾಪಚೇತಸಾಮ್ ।
ತವ ಮಧ್ಯಾವತರಣಂ ಮಮ ಕೃಷ್ಣ ನ ರೋಚತೇ ॥೧೬॥

ಎಲೈ ಕೃಷ್ಣನೇ, ಪಾಪಬುದ್ಧಿಯುಳ್ಳ ಅವರೆಲ್ಲರೂ ಒಟ್ಟಿಗೆ ಕುಳಿತಿರುವಾಗ ಮಧ್ಯದಲ್ಲಿ ನೀನು ಹೋಗುವುದು ನನಗೆ ಇಷ್ಟವಾಗುವುದಿಲ್ಲ.

ದುರ್ಬುದ್ಧೀನಾಮಶಿಷ್ಟಾನಾಂ ಬಹೂನಾಂ ಪಾಪಚೇತಸಾಮ್ ।
ಪ್ರತೀಪಂ ವಚನಂ ಮಧ್ಯೇ ತವ ಕೃಷ್ಣ ನ ರೋಚತೇ ॥೧೭॥

ಎಲೈ ಕೃಷ್ಣನೇ, ದುರ್ಬುದ್ಧಿಗಳೂ, ಅಶಿಷ್ಟರೂ, ಪಾಪಬುದ್ಧಿಯುಳ್ಳವರೂ ಆದ ಅನೇಕ ಜನರ ಮುಂದೆ ನೀನು ಆಡುವ ವಿರೋಧಿಯಾದ ಮಾತುಗಳು ನನಗೆ ಇಷ್ಟವಾಗುವುದಿಲ್ಲ.

ಅನುಪಾಸಿತವೃದ್ಧತ್ವಾತ್ ಶ್ರಿಯೋ ಮೋಹೇನ ದರ್ಪಿತಃ ।
ವಯೋದರ್ಪಾದಮರ್ಷಾಚ್ಚ ನ ತೇ ಶ್ರೇಯೋ ಗ್ರಹೀಷ್ಯತಿ ॥೧೮॥

ದೊಡ್ಡವರ ಸೇವೆಯನ್ನು ಮಾಡದೆ ಸಂಪತ್ತಿನ ಮೋಹದಿಂದ ದರ್ಪಿಷ್ಠನಾದ ಅವನು ವಯಸ್ಸು, ದರ್ಪ ಮತ್ತು ರೋಷದಿಂದ ಕೂಡಿದವನಾಗಿ ನೀನು ಹೇಳುವ ಶ್ರೇಯಸ್ಸನ್ನು ಗ್ರಹಿಸುವುದಿಲ್ಲ.

ವಚೋ ಬಲವದಪ್ಯಸ್ಯ ಯದಿ ವಕ್ಷ್ಯಸಿ ಮಾಧವ ।
ತ್ವಯ್ಯಸ್ಯ ಮಹತೀ ಶಂಕಾ ನ ಕರಿಷ್ಯತಿ ತೇ ವಚಃ ॥೧೯॥

ಎಲೈ ಮಾಧವನೇ, ನೀನು ಅವನಿಗೆ ಪ್ರಬಲವಾದ ಮಾತುಗಳನ್ನು ಹೇಳಿದರೂ ಅವನಿಗೆ ನಿನ್ನಲ್ಲಿ ದೊಡ್ಡಸಂಶಯವೇ ಉಂಟಾಗುತ್ತದೆ. ನಿನ್ನ ಮಾತುಗಳನ್ನು ಕೇಳುವುದಿಲ್ಲ.

ನೇದಮಸ್ಯ ಯುಧಾ ಶಕ್ಯಮಿಂದ್ರೇಣಾಪಿ ಸಹಾಮರೈಃ ।
ಇತಿ ವ್ಯವಸಿತಾಃ ಸರ್ವೇ ಧಾರ್ತರಾಷ್ಟ್ರಾ ಜನಾರ್ದನ ॥೨೦॥

ಎಲೈ ಜನಾರ್ದನನೇ, ದುರ್ಯೋಧನನ ರಾಜ್ಯವನ್ನು ಇಂದ್ರಾದಿ ದೇವತೆಗಳೂ ಸಹ ಯುದ್ಧದಲ್ಲಿ ಗೆಲ್ಲಲು ಸಾಧ್ಯವಿಲ್ಲ ಎಂದು ದುರ್ಯೋಧನಾದಿಗಳೆಲ್ಲರ ನಿಶ್ಚಿತವಾದ ಅಭಿಪ್ರಾಯವಿದೆ.

ತೇಷ್ವೇವಮುಪಪನ್ನೇಷು ಕಾಮಕ್ರೋಧಾನುವರ್ತಿಷು ।
ಸಮರ್ಥಮಪಿ ತೇ ವಾಕ್ಯಮಸಮರ್ಥಂ ಭವಿಷ್ಯತಿ ॥೨೧॥

ಕಾಮ-ಕ್ರೋಧಗಳಿಗೆ ವಶರಾದ ಅವರು ಇಂತಹ ಬುದ್ಧಿಯನ್ನು ಹೊಂದಿರುವಾಗ ಸಮರ್ಥವಾದರೂ ನಿನ್ನ ಮಾತುಗಳು ಅಸಮರ್ಥವಾಗುತ್ತವೆ.

ಮಧ್ಯೇ ತಿಷ್ಠನ್ ಹಸ್ತಿಯೂಥಸ್ಯ ಮಂದೋ
ರಥಾಶ್ವಯುಕ್ತಸ್ಯ ಬಲಸ್ಯ ಮೂಢಃ ।
ದುರ್ಯೋಧನೋ ಮನ್ಯತೇ ವೀತಮನ್ಯುಃ
ಕೃತ್ಸ್ನಾ ಮಮೇಯಂ ಪೃಥಿವೀ ಜಿತೇತಿ ॥೨೨॥

ಮೂಢನೂ, ಮಂದನೂ ಆದ ದುರ್ಯೋಧನನು ಪಾಂಡವರ ಮೇಲೆ ಬಹಳ ಕೋಪವನ್ನು ಹೊಂದಿದವನಾಗಿ, ರಥಾಶ್ವಯುಕ್ತವಾದ ಗಜಗಳ ಮಧ್ಯೆ ಇದ್ದು, ನಾನು ಸಮಸ್ತವಾದ ಪೃಥಿವಿಯನ್ನೂ ಗೆದ್ದಿದ್ದೇನೆ ಎಂದೇ ತಿಳಿದಿದ್ದಾನೆ.

ಆಶಂಸತೇ ವೈ ಧೃತರಾಷ್ಟ್ರಸ್ಯ ಪುತ್ರೋ
ಮಹದ್ ರಾಜ್ಯಮಸಪತ್ನಂ ಪೃಥಿವ್ಯಾಮ್ ।

ಎಲೈ ಮಾಧವನೇ, ಜ್ಞಾನರಹಿತರಾದ, ಮೂಢರಾದ, ಮರ್ಯಾದಾರಹಿತರಾದ ವ್ಯಕ್ತಿಗಳಿಗೆ ತತ್ತ್ವೋಪದೇಶವನ್ನು ಮಾಡುವವನು, ಚಂಡಾಲನಿಗೆ ವೇದೋಪದೇಶವನ್ನು ಮಾಡುವ ದ್ವಿಜನಂತೆ ನಿಂದ್ಯನಾಗುತ್ತಾನೆ.

ಸೋಽಯಂ ಬಲಸ್ಥೋ ಮೂಢಶ್ಚ ನ ಕರಿಷ್ಯತಿ ತೇ ವಚಃ ।
ತಸ್ಮಿನ್ ನಿರರ್ಥಕಂ ವಾಕ್ಯಮುಕ್ತಂ ಸಂಪತ್ಸ್ಯತೇ ತವ ॥೧೫॥

ಅಂತಹ ಈ ದುರ್ಯೋಧನನು ಸೈನ್ಯದ ಮಧ್ಯದಲ್ಲಿದ್ದಾನೆ ಮತ್ತು ಮೂಢನಾಗಿದ್ದಾನೆ. ನಿನ್ನ ಮಾತುಗಳನ್ನು ನಡೆಸುವುದಿಲ್ಲ. ನೀನು ಆಡುವ ಮಾತುಗಳು ಅವನಲ್ಲಿ ನಿರರ್ಥಕವಾಗುವುವು.

ತೇಷಾಂ ಸಮುಪವಿಷ್ಟಾನಾಂ ಸರ್ವೇಷಾಂ ಪಾಪಚೇತಸಾಮ್ ।
ತವ ಮಧ್ಯಾವತರಣಂ ಮಮ ಕೃಷ್ಣ ನ ರೋಚತೇ ॥೧೬॥

ಎಲೈ ಕೃಷ್ಣನೇ, ಪಾಪಬುದ್ಧಿಯುಳ್ಳ ಅವರೆಲ್ಲರೂ ಒಟ್ಟಿಗೆ ಕುಳಿತಿರುವಾಗ ಮಧ್ಯದಲ್ಲಿ ನೀನು ಹೋಗುವುದು ನನಗೆ ಇಷ್ಟವಾಗುವುದಿಲ್ಲ.

ದುರ್ಬುದ್ಧೀನಾಮಶಿಷ್ಟಾನಾಂ ಬಹೂನಾಂ ಪಾಪಚೇತಸಾಮ್ ।
ಪ್ರತೀಪಂ ವಚನಂ ಮಧ್ಯೇ ತವ ಕೃಷ್ಣ ನ ರೋಚತೇ ॥೧೭॥

ಎಲೈ ಕೃಷ್ಣನೇ, ದುರ್ಬುದ್ಧಿಗಳೂ, ಅಶಿಷ್ಟರೂ, ಪಾಪಬುದ್ಧಿಯುಳ್ಳವರೂ ಆದ ಅನೇಕ ಜನರ ಮುಂದೆ ನೀನು ಆಡುವ ವಿರೋಧಿಯಾದ ಮಾತುಗಳು ನನಗೆ ಇಷ್ಟವಾಗುವುದಿಲ್ಲ.

ಅನುಪಾಸಿತವೃದ್ಧತ್ವಾತ್ ಶ್ರಿಯೋ ಮೋಹೇನ ದರ್ಪಿತಃ ।
ವಯೋದರ್ಪಾದಮರ್ಷಾಚ್ಚ ನ ತೇ ಶ್ರೇಯೋ ಗ್ರಹೀಷ್ಯತಿ ॥೧೮॥

ದೊಡ್ಡವರ ಸೇವೆಯನ್ನು ಮಾಡದೆ ಸಂಪತ್ತಿನ ಮೋಹದಿಂದ ದರ್ಪಿಷ್ಠನಾದ ಅವನು ವಯಸ್ಸು, ದರ್ಪ ಮತ್ತು ರೋಷದಿಂದ ಕೂಡಿದವನಾಗಿ ನೀನು ಹೇಳುವ ಶ್ರೇಯಸ್ಸನ್ನು ಗ್ರಹಿಸುವುದಿಲ್ಲ.

ವಚೋ ಬಲವದಪ್ಯಸ್ಯ ಯದಿ ವಕ್ಷ್ಯಸಿ ಮಾಧವ ।
ತ್ವಯ್ಯಸ್ಯ ಮಹತೀ ಶಂಕಾ ನ ಕರಿಷ್ಯತಿ ತೇ ವಚಃ ॥೧೯॥

ಎಲೈ ಮಾಧವನೇ, ನೀನು ಅವನಿಗೆ ಪ್ರಬಲವಾದ ಮಾತುಗಳನ್ನು ಹೇಳಿದರೂ ಅವನಿಗೆ ನಿನ್ನಲ್ಲಿ ದೊಡ್ಡಸಂಶಯವೇ ಉಂಟಾಗುತ್ತದೆ. ನಿನ್ನ ಮಾತುಗಳನ್ನು ಕೇಳುವುದಿಲ್ಲ.

ನೇದಮಸ್ಯ ಯುಧಾ ಶಕ್ಯಮಿಂದ್ರೇಣಾಪಿ ಸಹಾಮರೈಃ ।
ಇತಿ ವ್ಯವಸಿತಾಃ ಸರ್ವೇ ಧಾರ್ತರಾಷ್ಟ್ರಾ ಜನಾರ್ದನ ॥೨೦॥

ಎಲೈ ಜನಾರ್ದನನೇ, ದುರ್ಯೋಧನನ ರಾಜ್ಯವನ್ನು ಇಂದ್ರಾದಿ ದೇವತೆಗಳೂ ಸಹ ಯುದ್ಧದಲ್ಲಿ ಗೆಲ್ಲಲು ಸಾಧ್ಯವಿಲ್ಲ ಎಂದು ದುರ್ಯೋಧನಾದಿಗಳೆಲ್ಲರ ನಿಶ್ಚಿತವಾದ ಅಭಿಪ್ರಾಯವಿದೆ.

ತೇಷ್ವೇವಮುಪಪನ್ನೇಷು ಕಾಮಕ್ರೋಧಾನುವರ್ತಿಷು ।
ಸಮರ್ಥಮಪಿ ತೇ ವಾಕ್ಯಮಸಮರ್ಥಂ ಭವಿಷ್ಯತಿ ॥೨೧॥

ಕಾಮ-ಕ್ರೋಧಗಳಿಗೆ ವಶರಾದ ಅವರು ಇಂತಹ ಬುದ್ಧಿಯನ್ನು ಹೊಂದಿರುವಾಗ ಸಮರ್ಥವಾದರೂ ನಿನ್ನ ಮಾತುಗಳು ಅಸಮರ್ಥವಾಗುತ್ತವೆ.

ಮಧ್ಯೇ ತಿಷ್ಠನ್ ಹಸ್ತಿಯೂಥಸ್ಯ ಮಂದೋ
ರಥಾಶ್ವಯುಕ್ತಸ್ಯ ಬಲಸ್ಯ ಮೂಢಃ ।
ದುರ್ಯೋಧನೋ ಮನ್ಯತೇ ವೀತಮನ್ಯುಃ
ಕೃತ್ಸ್ನಾ ಮಮೇಯಂ ಪೃಥಿವೀ ಜಿತೇತಿ ॥೨೨॥

ಮೂಢನೂ, ಮಂದನೂ ಆದ ದುರ್ಯೋಧನನು ಪಾಂಡವರ ಮೇಲೆ ಬಹಳ ಕೋಪವನ್ನು ಹೊಂದಿದವನಾಗಿ, ರಥಾಶ್ವಯುಕ್ತವಾದ ಗಜಗಳ ಮಧ್ಯೆ ಇದ್ದು, ನಾನು ಸಮಸ್ತವಾದ ಪೃಥಿವಿಯನ್ನೂ ಗೆದ್ದಿದ್ದೇನೆ ಎಂದೇ ತಿಳಿದಿದ್ದಾನೆ.

ಆಶಂಸತೇ ವೈ ಧೃತರಾಷ್ಟ್ರಸ್ಯ ಪುತ್ರೋ
ಮಹದ್ ರಾಜ್ಯಮಸಪತ್ನಂ ಪೃಥಿವ್ಯಾಮ್ ।

ತಸ್ಮಿನ್ ಶಮಃ ಕೇವಲೋ ನೋಪಲಭ್ಯೋ
ಯಶ್ಚಾಶಮಂ ಮನ್ಯತೇ ಪ್ರಾಪ್ತಮರ್ಥಮ್ ॥೨೩॥

ಧೃತರಾಷ್ಟ್ರಪುತ್ರನಾದ ದುರ್ಯೋಧನನು ಸಮಸ್ತ ಪೃಥಿವಿಯ ರಾಜ್ಯವು ಶತ್ರುರಹಿತವಾಗಿ ತನಗೇ ಸೇರಿದುದೆಂದು ಬಯಸುತ್ತಾನೆ. ಅವನು ಸಂಧಿಯನ್ನು ಮಾಡಿಕೊಳ್ಳದಿರುವುದೇ ಪ್ರಯೋಜನವೆಂದು ತಿಳಿದಿದ್ದಾನೆ. ಅವನಲ್ಲಿ ಸಂಧಿಯು ಯಾವ ರೀತಿಯಿಂದಲೂ ಸಾಧ್ಯವಾಗುವುದಿಲ್ಲ.

ಪರ್ಯಾಪ್ತೇಯಂ ಪೃಥಿವೀ ಕಾಲಪಕ್ವಾ
ದುರ್ಯೋಧನಾರ್ಥೇ ಪಾಂಡವಾನ್ ಯೋದ್ಧುಕಾಮಾಃ ।
ಸಮಾಗತಾಃ ಸರ್ವಯೋಧಾಃ ಪೃಥಿವ್ಯಾಂ
ರಾಜಾನಶ್ಚ ಕ್ಷಿತಿಪಾಸ್ತೈಃ ಸಮೇತಾಃ ॥೨೪॥

ಈ ಭೂಮಿಯು ದುರ್ಯೋಧನನ ಸಲುವಾಗಿ ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸಿದ ರಾಜರಿಂದ ತುಂಬಿ ಹೋಗಿ ಕಾಲ ಪಕ್ವವಾಗಿದೆ. ಪೃಥಿವಿಯಲ್ಲಿರುವ ಎಲ್ಲಾ ಯೋಧರ ಸಹಿತವಾಗಿ ಭೂಮಿಗೆ ಒಡೆಯರಾದ ರಾಜರು ಬಂದು ನೆರೆದಿದ್ದಾರೆ. ಅಂತಹ ರಾಜರಿಂದ ಭೂಮಿಯು ತುಂಬಿಹೋಗಿದೆ.

ಸರ್ವೇ ಚೈತೇ ಕೃತವೈರಾಃ ಪುರಸ್ತಾತ್
ತ್ವಯಾ ರಾಜಾನೋ ಹೃತಸಾರಾಶ್ಚ ಕೃಷ್ಣ ।
ತವೋದ್ವೇಗಾತ್ ಸಂಶ್ರಿತಾ ಧಾರ್ತರಾಷ್ಟ್ರಾನ್
ಸುಸಂಹತಾಃ ಸಹ ಕರ್ಣೇನ ವೀರಾಃ ॥೨೫॥

ಎಲೈ ಕೃಷ್ಣನೇ, ಅವರೆಲ್ಲರೂ ನಿನ್ನಲ್ಲಿ ವೈರವನ್ನು ಮಾಡಿದವರು. ಹಿಂದೆ ಆ ರಾಜರೆಲ್ಲರೂ ನಿನಗೆ ಸೋತು ನೀನು ಅವರ ಸಂಪತ್ತನ್ನು ಪಡೆದಿದ್ದೀಯೆ. ನಿನ್ನ ಮೇಲಿನ ಕೋಪದಿಂದ ವೀರರಾದ ಅವರೆಲ್ಲರೂ ಕರ್ಣನ ಜೊತೆಯಲ್ಲಿ ಸೇರಿ ಧೃತರಾಷ್ಟ್ರ ಪುತ್ರರನ್ನು ಆಶ್ರಯಿಸಿದ್ದಾರೆ.

ತ್ಯಕ್ತಾತ್ಮಾನಃ ಸಹ ದುರ್ಯೋಧನೇನ
ಹೃಷ್ಟಾ ಯೋದ್ಧುಂ ಪಾಂಡವಾನ್ ಸರ್ವಯೋಧಾಃ ।

ಮೃತ್ಯುರ್ಜಯೋ ವೇತಿ ಕೃತೇ ಕೃತಾಶಾಃ
ಕಾಮಾತ್ಮಾನೋ ಮನ್ಯುವಶಾವಿನೀತಾಃ ॥೨೬॥

ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡಲು ಹರ್ಷಪಡುವ ಎಲ್ಲ ಯೋಧರೂ ದುರ್ಯೋಧನನಂತೆ ತಮ್ಮ ಜೀವದ ಹಂಗನ್ನು ತೊರೆದಿದ್ದಾರೆ. ಕಾಮಾತ್ಮರೂ, ಮನ್ಯುವಶರೂ ಮತ್ತು ಅವಿನೀತರೂ ಆದ ಅವರು ಮೃತ್ಯುವಾಗಲಿ ಅಥವಾ ಜಯವಾಗಲಿ ಉಂಟಾಗಲಿ ಎಂದು ಯುದ್ಧದಲ್ಲಿಯೇ ಆಸೆಯನ್ನು ಉಳ್ಳವರಾಗಿದ್ದಾರೆ.

ತೇಷಾಂ ಮಧ್ಯೇ ಪ್ರವಿಶೇಥಾ ಯದಿ ತ್ವಂ
ನ ತನ್ಮತಂ ಮಮ ದಾಶಾರ್ಹವೀರ ॥೨೭॥

ಎಲೈ ದಾಶಾರ್ಹವೀರನೇ, ನೀನು ಅವರ ಮಧ್ಯದಲ್ಲಿ ಪ್ರವೇಶ ಮಾಡುವುದು ನನಗೆ ಸಮ್ಮತವಲ್ಲ.

ತೇಷಾಂ ಸಮುಪವಿಷ್ಟಾನಾಂ ಬಹೂನಾಂ ದುಷ್ಟಚೇತಸಾಮ್ ।
ಕಥಂ ಮಧ್ಯೇ ಪ್ರಪದ್ಯೇಥಾಃ ಶತ್ರೂಣಾಂ ಶತ್ರುಕರ್ಶನ ॥೨೮॥

ಎಲೈ ಶತ್ರುಕರ್ಶನನೇ, ದುಷ್ಟಬುದ್ಧಿಯಿಂದ ಕುಳಿತಿರುವ ಅನೇಕ ಶತ್ರುಗಳ ಮಧ್ಯೆ ನೀನು ಹೇಗೆ ಪ್ರವೇಶ ಮಾಡುವಿ?

ಸರ್ವಥಾ ತ್ವಂ ಮಹಾಬಾಹೋ ದೇವೈರಪಿ ದುರುತ್ಸಹಃ ।
ಪ್ರಭಾವಂ ಪೌರುಷಂ ಬುದ್ಧಿಂ ಜಾನಾಮಿ ತವ ಶತ್ರುಹನ್ ॥೨೯॥

ಎಲೈ ಮಹಾಬಾಹುವೇ, ದೇವತೆಗಳೂ ಸಹ ಯಾವ ರೀತಿಯಿಂದಲೂ ನಿನ್ನನ್ನು ಸೋಲಿಸಲಾರರು. ಎಲೈ ಶತ್ರುಹಂತಕನೇ, ನಿನ್ನ ಸಾಮರ್ಥ್ಯವನ್ನೂ, ಪರಾಕ್ರಮವನ್ನೂ ಮತ್ತು ಬುದ್ಧಿಯನ್ನೂ ನಾನು ತಿಳಿದಿದ್ದೇನೆ.

ಯಾ ಮೇ ಪ್ರೀತಿಃ ಪಾಂಡವೇಷು ಭೂಯಃ ಸಾ ತ್ವಯಿ ಮಾಧವ ।
ಪ್ರೇಮ್ಣಾ ಚ ಬಹುಮಾನಾಚ್ಚ ಸೌಹೃದಾಚ್ಚ ಬ್ರವೀಮ್ಯಹಮ್ ॥೩೦॥

ಎಲೈ ಮಾಧವನೇ, ನನಗೆ ಪಾಂಡವರಲ್ಲಿ ಎಷ್ಟು ಪ್ರೀತಿ ಇದೆಯೋ, ಅದಕ್ಕಿಂತಲೂ ಹೆಚ್ಚು ಪ್ರೀತಿ ನಿನ್ನಲ್ಲಿದೆ. ಆ ಪ್ರೇಮದಿಂದಲೂ, ನಿನ್ನ ಮೇಲಿನ ಗೌರವದಿಂದಲೂ ಮತ್ತು ಸ್ನೇಹದಿಂದಲೂ ಈ ಮಾತುಗಳನ್ನು ಆಡುತ್ತಿದ್ದೇನೆ.

ಯಾ ಮೇ ಪ್ರೀತಿಃ ಪುಷ್ಕರಾಕ್ಷ ತ್ವದ್ದರ್ಶನಸಮುದ್ಭವಾ ।
ಸಾ ಕಿಮಾಖ್ಯಾಯತೇ ತುಭ್ಯಮಂತರಾತ್ಮಾऽಸಿ ದೇಹಿನಾಮ್ ॥೩೧॥

ಎಲೈ ಪುಷ್ಕರಾಕ್ಷನೇ, ನಿನ್ನ ದರ್ಶನದಿಂದ ನನಗೆ ಎಂತಹ ಸಂತೋಷ ಉಂಟಾಗಿದೆ ಎಂದು ನಾನು ನಿನಗೆ ಹೇಗೆ ಹೇಳಲಿ? ನೀನು ಎಲ್ಲ ಜೀವರ ಅಂತರ್ಯಾಮಿಯಾಗಿದ್ದೀಯೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕನವತಿತಮೋऽಧ್ಯಾಯಃ ॥

ಭಗವದ್ಯಾನಪರ್ವಣಿ ದ್ವಾವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ತೊಂಬತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೆರಡನೆಯ ಅಧ್ಯಾಯ

ವಿದುರನ ಮಾತುಗಳಿಗೆ ಕೃಷ್ಣನ ಉತ್ತರ.

ವೈಶಂಪಾಯನಃ

ವಿದುರಸ್ಯ ವಚಃ ಶ್ರುತ್ವಾ ಪ್ರಶ್ರಿತಂ ಪುರುಷೋತ್ತಮಃ ।
ಇದಂ ಹೋವಾಚ ವಚನಂ ಭಗವಾನ್ ಮಧುಸೂದನಃ ॥೧॥

ವೈಶಂಪಾಯನ– ವಿದುರನ ವಿನಯದ ಮಾತುಗಳನ್ನು ಕೇಳಿ ಭಗವಂತನೂ, ಪುರುಷೋತ್ತಮನೂ ಆದ ಮಧುಸೂದನನು ಈ ಮಾತುಗಳನ್ನು ಆಡಿದನು.

ಯಥಾ ಬ್ರೂಯಾನ್ಮಹಾಪ್ರಾಜ್ಞೋ ಯಥಾ ಬ್ರೂಯಾದ್ ವಿಚಕ್ಷಣಃ ।
ಯಥಾ ವಾಚ್ಯಸ್ತ್ವದ್ವಿಧೇನ ಸುಹೃದಾ ಮದ್ವಿಧಃ ಕೃತಮ್ ॥೨॥

ಧರ್ಮಾರ್ಥಯುಕ್ತಂ ತಥ್ಯಂ ಚ ತಥಾ ತ್ವಯ್ಯುಪಪದ್ಯತೇ ।
ತಥಾ ವಚನಮುಕ್ತೋಽಸ್ಮಿ ತ್ವಯೈತತ್ ಪಿತೃಮಾತೃವತ್ ॥೩॥

ಮಹಾಪ್ರಾಜ್ಞನಾದವನೂ, ವಿಚಕ್ಷಣನಾದವನೂ, ಸುಹೃಜ್ಜನನೂ ಆದ ನಿನ್ನಂತಹವನು ನನ್ನ ಜೊತೆಯಲ್ಲಿ ಹೇಗೆ ಮಾತನಾಡಬೇಕೋ ಅದರಂತೆ ಧರ್ಮಾರ್ಥಯುಕ್ತವಾದ ಸತ್ಯವಾದ ಮಾತುಗಳು ನಿನ್ನಲ್ಲಿ ಉಪಪನ್ನವಾಗುತ್ತವೆ. ತಂದೆ-ತಾಯಿಗಳಂತೆ ನೀನು ನನ್ನನ್ನು ಕುರಿತು ಅಂತಹ ಮಾತುಗಳನ್ನು ಆಡಿದ್ದೀಯೆ.

ಸರ್ವಂ ಪ್ರಾಪ್ತಂ ಚ ಯುಕ್ತಂ ಚ ಏವಮೇವ ಯಥಾಽಽತ್ಥ ಮಾಮ್ ।
ಶೃಣುಷ್ವಾಗಮನೇ ಹೇತುಂ ವಿದುರಾವಹಿತೋ ಮಮ ॥೪॥

ನೀನು ಆಡಿದ ಮಾತುಗಳೆಲ್ಲವೂ ಸಮಯೋಚಿತವಾಗಿವೆ ಮತ್ತು ಯುಕ್ತವಾಗಿವೆ. ನೀನು ಹೇಳಿದ ಮಾತುಗಳು ಎಲ್ಲವೂ ಅದರಂತೆಯೇ ಸರಿ. ಎಲೈ ವಿದುರನೇ, ನಾನು ಇಲ್ಲಿಗೆ ಬರಲು ಕಾರಣವನ್ನು ಹೇಳುತ್ತೇನೆ, ಅವಧಾನದಿಂದ ಕೇಳು.

ಗ್ರಹೀತುಂ ಧಾರ್ತರಾಷ್ಟ್ರಾಣಾಂ ಪಾಂಡವಾನಾಂ ಚ ವೈರಿತಾಮ್ ।
ಸರ್ವಮೇತದಹಂ ಜಾನನ್ ಕ್ಷತ್ತಃ ಪ್ರಾಪ್ತೋಽದ್ಯ ಕೌರವಾನ್ ॥೫॥

ಎಲೈ ವಿದುರನೇ, ನಾನು ಎಲ್ಲವನ್ನೂ ತಿಳಿದಿದ್ದರೂ ಪಾಂಡವರಿಗೆ ಮತ್ತು ಕೌರವರಿಗೆ ಇರುವ ವೈರವನ್ನು ಜಗತ್ತಿಗೆ ತಿಳಿಸಲು ಈ ದಿನ ಕೌರವರ ಬಳಿಗೆ ಬಂದಿದ್ದೇನೆ.

ಪರ್ಯಸ್ತಾಂ ಪೃಥಿವೀಂ ಸರ್ವಾಂ ಸಾಶ್ವಾಂ ಸರಥಕುಂಜರಾಮ್ ।
ಯೋ ಮೋಚಯೇನ್ಮೃತ್ಯುಪಾಶಾತ್ ಪ್ರಾಪ್ನುಯಾದ್ ಧರ್ಮಮುತ್ತಮಮ್॥

ರಥಾಶ್ವಕುಂಜರಗಳಿಂದ ತುಂಬಿರುವ ಈ ಸಮಸ್ತವಾದ ಪೃಥಿವಿಯನ್ನು ಯಾವನು ಮೃತ್ಯುಪಾಶದಿಂದ ಬಿಡಿಸುವನೋ ಅವನು ಶ್ರೇಷ್ಠವಾದ ಧರ್ಮವನ್ನು ಹೊಂದಿಯಾನು.

ಧರ್ಮಕಾರ್ಯೇ ಯತಾತ್ಮಾ ಯೋ ನ ಚೇಚ್ಚಕ್ನೋತಿ ಮಾನವಃ ।
ಪ್ರಾಪ್ತೋ ಭವತಿ ತತ್ತುಲ್ಯಮತ್ರ ಮೇ ನಾಸ್ತಿ ಸಂಶಯಃ ॥೭॥

ಯಾವ ಮನುಷ್ಯನು ಧರ್ಮಕಾರ್ಯವನ್ನು ಮಾಡಲು ಪ್ರಯತ್ನಪಟ್ಟರೂ ಅದನ್ನು ಮಾಡಲು ಸಮರ್ಥನಾಗುವುದಿಲ್ಲವೋ ಅವನಿಗೂ ಧರ್ಮಕಾರ್ಯವನ್ನು ಮಾಡಿದ ಪುಣ್ಯವು ಉಂಟಾಗುತ್ತದೆ ಎಂಬುದರಲ್ಲಿ ನನಗೆ ಸಂಶಯವಿಲ್ಲ.

ಮನಸಾ ಚಿಂತಯನ್ ಪಾಪಂ ಕರ್ಮಣಾ ನಾಭಿರೋಚಯನ್ ।
ನ ಪ್ರಾಪ್ನೋತಿ ಫಲಂ ತಸ್ಯೇತ್ಯೇವಂ ಧರ್ಮವಿದೋ ವಿದುಃ ॥೮॥

ಒಂದು ಕಾರ್ಯವು ಪಾಪವೆಂದು ಮನಸ್ಸಿನಲ್ಲಿ ಚಿಂತನೆ ಮಾಡಿ ಅದನ್ನು ಪರಿಹರಿಸುವ ಕಾರ್ಯವನ್ನು ಮಾಡಲು ಇಷ್ಟಪಡದವನು ಕರ್ಮವನ್ನು ಪರಿಹಾರ ಮಾಡಿದ ಪುಣ್ಯಫಲವನ್ನು ಹೊಂದುವುದಿಲ್ಲ ಎಂದು ಧರ್ಮವನ್ನು ತಿಳಿದವರು ಹೇಳುತ್ತಾರೆ.

ಸೋಽಹಂ ಯತಿಷ್ಯೇ ಪ್ರಶಮಂ ಕ್ಷತ್ತಃ ಕರ್ತುಮಮಾಯಯಾ ।
ಕುರೂಣಾಂ ಸೃಂಜಯಾನಾಂ ಚ ಸಂಗ್ರಾಮೇ ವಿನಶಿಷ್ಯತಾಮ್ ॥೯॥

ಎಲೈ ವಿದುರನೇ, ಅಂತಹ ನಾನು ಯುದ್ಧದಲ್ಲಿ ನಾಶಹೊಂದಲಿರುವ ಕುರುಗಳಿಗೂ ಮತ್ತು ಸೃಂಜಯರಿಗೂ ಸಂಧಿಯನ್ನು ಉಂಟುಮಾಡಲು ನಿಷ್ಕಪಟವಾಗಿ ಪ್ರಯತ್ನವನ್ನು ಮಾಡುವೆನು.

ಸೇಯಮಾಪನ್ಮಹಾಘೋರಾ ಕುರುಷ್ವೇವ ಸಮುತ್ಥಿತಾ ।
ಕರ್ಣದುರ್ಯೋಧನಕೃತಾ ಸರ್ವೇ ಹ್ಯೇತೇ ತದನ್ವಯಾಃ ॥೧೦॥

ಈಗ ಒದಗಿ ಬಂದಿರುವ ಮಹಾಘೋರವಾದ ಈ ಆಪತ್ತು ಕುರುಗಳಲ್ಲಿಯೇ ಉತ್ಪನ್ನವಾಗಿದೆ. ಇದು ಕರ್ಣ-ದುರ್ಯೋಧನರಿಂದ ಉಂಟಾಗಿದೆ. ಉಳಿದುದೆಲ್ಲವೂ ಅವರನ್ನು ಅನುಸರಿಸಿಕೊಂಡು ಬಂದಿವೆ.

ವ್ಯಸನೇ ಕ್ಲಿಶ್ಯಮಾನಂ ಹಿ ಯೋ ಮಿತ್ರಂ ನಾಭಿಪದ್ಯತೇ ।
ಅನುನೀಯ ಯಥಾಶಕ್ತಿ ತಂ ನೃಶಂಸಂ ವಿದುರ್ಬುಧಾಃ ॥೧೧॥

ವ್ಯಸನದಲ್ಲಿ ಸಿಲುಕಿ ಕ್ಲೇಶಪಡುವ ಮಿತ್ರರನ್ನು ಯಾವನು ಸಮೀಪಿಸಿ ತನ್ನ ಶಕ್ತಿ ಇದ್ದಷ್ಟು ಅನುನಯ (ಸಮಾಧಾನ) ಮಾಡುವುದಿಲ್ಲವೋ ಅವನನ್ನು ವಿವೇಕಿಗಳು ಕ್ರೂರಿ ಎಂದು ಹೇಳುತ್ತಾರೆ.

ಆಕೇಶಗ್ರಹಣಾನ್ಮಿತ್ರಮಕಾರ್ಯಾತ್ ಸನ್ನಿವರ್ತಯನ್ ।
ಅವಾಚ್ಯಃ ಕಸ್ಯಚಿದ್ ಭವತಿ ಕೃತಯತ್ನೋ ಯಥಾಬಲಮ್ ॥೧೨॥

ತನ್ನ ತಲೆಯ ಕೂದಲನ್ನು ಹಿಡಿಯುವವರೆಗೆ ಮಿತ್ರನನ್ನು ಅಯೋಗ್ಯವಾದ ಕಾರ್ಯದಿಂದ ನಿವರ್ತಿಸಲು ತನ್ನ ಶಕ್ತಿ ಇದ್ದಷ್ಟು ಪ್ರಯತ್ನ ಪಡುವವನು ಯಾರಿಂದಲೂ ನಿಂದಿತನಾಗುವುದಿಲ್ಲ.

ತತ್ ಸಮರ್ಥಂ ಶುಭಂ ವಾಕ್ಯಂ ಧರ್ಮಾರ್ಥಸಹಿತಂ ಹಿತಮ್ ।
ಧಾರ್ತರಾಷ್ಟ್ರಃ ಸಹಾಮಾತ್ಯೋ ಗ್ರಹೀತುಂ ವಿದುರಾರ್ಹತಿ ॥೧೩॥

ಆದ್ದರಿಂದ ಸಮರ್ಥವಾದ ಶುಭವಾದ ಹಿತವಾದ ಧರ್ಮಾರ್ಥಸಹಿತವಾದ ಮಾತುಗಳನ್ನು ಎಲೈ ವಿದುರನೇ, ದುರ್ಯೋಧನನೂ ಮತ್ತು ಅವನ ಅಮಾತ್ಯರೂ ಸ್ವೀಕರಿಸಬೇಕಾಗುತ್ತದೆ.

ಹಿತಂ ಹಿ ಧಾರ್ತರಾಷ್ಟ್ರಾಣಾಂ ಪಾಂಡವಾನಾಮಥೋ ಹಿತಮ್ ।
ಪೃಥಿವ್ಯಾಂ ಕ್ಷತ್ರಿಯಾಣಾಂ ಚ ಯತಿಷ್ಯೇಽಹಮಮಾಯಯಾ ॥೧೪॥

ದುರ್ಯೋಧನಾದಿಗಳಿಗೆ ಹಿತವಾದುದನ್ನೂ, ಪಾಂಡವರಿಗೆ ಹಿತವಾದುದನ್ನೂ ಮತ್ತು ಭೂಮಿಯಲ್ಲಿರುವ ಎಲ್ಲಾ ಕ್ಷತ್ರಿಯರಿಗೆ ಹಿತವಾದುದನ್ನೂ ಸಂಪಾದಿಸಲು ನಾನು ನಿಷ್ಕಪಟವಾಗಿ ಪ್ರಯತ್ನಪಡುವೆನು.

ಹಿತೇ ಪ್ರಯತಮಾನಂ ಮಾಂ ಶಂಕೇದ್ ದುರ್ಯೋಧನೋ ಯದಿ ।
ಹೃದಯಸ್ಯ ಚ ಮೇ ಪ್ರೀತಿರಾನೃಣ್ಯಂ ಚ ಭವಿಷ್ಯತಿ ॥೧೫॥

ಅವನ ಹಿತದಲ್ಲಿ ಪ್ರಯತ್ನಪಡುವ ನನ್ನನ್ನು ದುರ್ಯೋಧನನು ಶಂಕಿಸುವುದಾದರೆ ನನ್ನ ಮನಸ್ಸಿಗೆ ಸಂತೋಷವುಂಟಾಗುತ್ತದೆ. ನಾನು ಋಣಮುಕ್ತವಾಗುವೆನು.

ಜ್ಞಾತೀನಾಂ ಹಿ ಮಿಥೋ ಭೇದೇ ಯನ್ಮಿತ್ರಂ ನಾಭಿಪದ್ಯತೇ ।
ಸರ್ವಯತ್ನೇನ ಮಾಧ್ಯಸ್ಥ್ಯಂ ನ ತನ್ಮಿತ್ರಂ ವಿದುರ್ಬುಧಾಃ ॥೧೬॥

ದಾಯಾದಿಗಳಿಗೆ ಪರಸ್ಪರ ವೈರ ಉಂಟಾದಾಗ ಯಾವ ಸ್ನೇಹಿತನು ತಟಸ್ಥನಾಗಿ ಅವರನ್ನು ಸಮೀಪಿಸಿ, ಸರ್ವಪ್ರಯತ್ನದಿಂದ ವಿರೋಧವನ್ನು ಪರಿಹರಿಸಲು ಪ್ರಯತ್ನ ಪಡುವುದಿಲ್ಲವೋ ಅವನು ಸ್ನೇಹಿತನಲ್ಲ ಎಂದು ಜ್ಞಾನಿಗಳು ಹೇಳುತ್ತಾರೆ.

ನ ಮಾಂ ಬ್ರೂಯುರಧರ್ಮಿಷ್ಠಾ ಮೂಢಾ ಹ್ಯಸುಹೃದಸ್ತಥಾ ।
ಶಕ್ತೋ ನಾವಾರಯತ್ ಕೃಷ್ಣಃ ಸಂರಬ್ಧಾನ್ ಕುರುಪಾಂಡವಾನ್ ॥೧೭॥

ಅಧರ್ಮಿಷ್ಠರೂ, ಮೂಢರೂ, ಸುಹೃಜ್ಜನರಲ್ಲದವರೂ ಆದವರು ಕೃಷ್ಣನು ಸಮರ್ಥನಾಗಿದ್ದರೂ ಕೋಪಗೊಂಡ ಕುರು-ಪಾಂಡವರನ್ನು ಯುದ್ಧದಿಂದ ಹಿಮ್ಮೆಟ್ಟಿಸಲಿಲ್ಲ ಎಂದು ಹೇಳುವಂತೆ ಆಗಬಾರದು.

ಉಭಯೋಃ ಸಾಧಯನ್ನರ್ಥಮಹಮಾಗತ ಇತ್ಯುತ ।
ತತ್ರ ಯತ್ನಮಹಂ ಕೃತ್ವಾ ಧರ್ಮಸ್ಯಾನೃಣ್ಯತಾಮಿಯಾಮ್ ॥೧೮॥

ಎರಡು ಪಕ್ಷಗಳಿಗೂ ಹಿತವನ್ನು ಸಾಧಿಸಲು ನಾನು ಇಲ್ಲಿಗೆ ಬಂದಿದ್ದೇನೆ. ಆದ್ದರಿಂದ ನಾನು ಆ ಪ್ರಯತ್ನವನ್ನು ಮಾಡಿ ಧರ್ಮದ ದೃಷ್ಟಿಯಲ್ಲಿ ಋಣಮುಕ್ತನಾಗುವೆನು.

ಮಮ ಧರ್ಮಾರ್ಥಯುಕ್ತಂ ಹಿ ಶ್ರುತ್ವಾ ವಾಕ್ಯಮನಾಮಯಮ್ ।
ನ ಚೇದಾದಾಸ್ಯತೇ ಬಾಲೋ ದಿಷ್ಟಸ್ಯ ವಶಮೇಷ್ಯತಿ ॥೧೯॥

ಬಾಲನಾದ ದುರ್ಯೋಧನನು ಧರ್ಮಾರ್ಥಯುಕ್ತವಾದ ಮತ್ತು ನಿರ್ದುಷ್ಟವಾದ ನನ್ನ ಮಾತುಗಳನ್ನು ಸ್ವೀಕರಿಸದಿದ್ದರೆ ವಿಧಿಯ ವಶನಾಗುವನು.

ಅಹಾಪಯನ್ ಪಾಂಡವಾನಾಂ ಹಿತಾರ್ಥಂ
ಶಮಂ ಕುರೂಣಾಂ ಸಹ ಸರ್ವರಾಜಭಿಃ ।
ಪುಣ್ಯಂ ಚ ಮೇ ಸ್ಯಾಚ್ಚರಿತಂ ಮಹಾರ್ಥಂ
ಮುಚ್ಯೇರಂಶ್ಚ ಕುರವೋ ಮೃತ್ಯುಪಾಶಾತ್ ॥೨೦॥

ಪಾಂಡವರ ಹಿತವನ್ನು ತ್ಯಜಿಸದೇ, ಕೌರವರಿಗೂ, ಸರ್ವರಾಜರಿಗೂ ಮತ್ತು ಪಾಂಡವರಿಗೂ ಸಂಧಿಯನ್ನು ಉಂಟುಮಾಡಿದರೆ ನಾನು ದೊಡ್ಡಕಾರ್ಯವನ್ನು ಸಾಧಿಸಿದ ಪುಣ್ಯವನ್ನು ಹೊಂದುವೆನು. ಕೌರವರೆಲ್ಲರೂ ಮೃತ್ಯುಪಾಶದಿಂದ ಮುಕ್ತರಾದಾರು.

ಅಪಿ ವಾಚಂ ಭಾಷಮಾಣಸ್ಯ ಕಾಮ್ಯಾಂ
ಧರ್ಮಾರಾಮಾಮರ್ಥವತೀಮಹಿಂಸ್ರಾಮ್ ।

ಅಪೇಕ್ಷೇರನ್ ಧಾರ್ತರಾಷ್ಟ್ರಾಃ ಸಮಗ್ರಾಂ
ಮಾಂ ಚ ಪ್ರಾಪ್ತಂ ಕುರವಃ ಪೂಜಯೇಯುಃ ॥೨೧॥

ಅವರಿಗೆ ಹಿತವಾದ ಧರ್ಮಸಮ್ಮತವಾದ ಅರ್ಥಸಾಧಕವಾದ ಹಿಂಸೆಯನ್ನು ಮಾಡದ ಮಾತುಗಳನ್ನು ನಾನು ಆಡಿದರೆ ಧೃತರಾಷ್ಟ್ರಪುತ್ರರೆಲ್ಲರೂ ಆ ಮಾತುಗಳನ್ನು ಸ್ವೀಕರಿಸುತ್ತಾರೆಯೇ? ಅಲ್ಲಿಗೆ ಬಂದ ನನ್ನನ್ನು ಗೌರವಿಸುತ್ತಾರೆಯೇ? (ಎಂದು ನೋಡಬೇಕಾಗಿದೆ)

ನ ಚಾಪಿ ಮಮ ಪರ್ಯಾಪ್ತಾಃ ಸಹಿತಾಃ ಸರ್ವಪಾರ್ಥಿವಾಃ ।
ಕ್ರುದ್ಧಸ್ಯ ಪ್ರಮುಖೇ ಸ್ಥಾತುಂ ಸಿಂಹಸ್ಯೇವೇತರೇ ಮೃಗಾಃ ॥೨೨॥

ಸಿಂಹದ ಎದುರಿನಲ್ಲಿ ಇತರ ಪ್ರಾಣಿಗಳು ನಿಲ್ಲಲು ಸಾಧ್ಯವಾಗದಂತೆ ಕೋಪಗೊಂಡ ನನ್ನ ಎದುರು ನಿಲ್ಲಲು ಎಲ್ಲ ರಾಜರು ಒಟ್ಟುಗೂಡಿದರೂ ಸಾಧ್ಯವಾಗುವುದಿಲ್ಲ.

ಇತ್ಯೇವಮುಕ್ತ್ವಾ ವಚನಂ ವೃಷ್ಣೀನಾಮೃಷಭಸ್ತದಾ ।
ಶಯನೇ ಸುಖಸಂಸ್ಪರ್ಶೇ ಶಿಶ್ಯೇ ಯದುಸುಖಾವಹಃ ॥೨೩॥

ವೃಷ್ಣಿಗಳ ನಾಯಕನಾದ ಕೃಷ್ಣನು ಹೀಗೆ ಮಾತನಾಡಿ ಸುಖಸ್ಪರ್ಶವುಳ್ಳ ಹಾಸಿಗೆಯಲ್ಲಿ ಮಲಗಿ, ಯದುಗಳಿಗೆ ಸುಖಪ್ರದನಾದ ಅವನು ನಿದ್ರೆಯನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ದ್ವಿನವತಿತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ತ್ರಯೋವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ತೊಂಬತ್ತೆರಡನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ಪರೇ ದಿನೇಽಸೌ ಧೃತರಾಷ್ಟ್ರಸೂನುನಾ
ಸಮಾನೀತಃ ಸಂಸದಿ ಕೌರವಾಣಾಮ್ ।
ವಿವೇಶ ದಿವ್ಯೇ ಮಣಿಕಾಂಚನಾಸನೇ
ಸಾರ್ಧಂ ಮುನೀಂದ್ರೈಃ ಪರಮಾರ್ಥವೇದಿಭಿಃ ॥೭೦॥

ಮರುದಿನ ಶ್ರೀಕೃಷ್ಣ ಕೌರವರ ಸಭೆಯಲ್ಲಿ ದುರ್ಯೋಧನನಿಂದ ಕರೆಸಲ್ಪಟ್ಟ ಮಹಾತತ್ವಜ್ಞರಾದ ಮುನೀಶ್ವರರೊಂದಿಗೆ ದಿವ್ಯ ರತ್ನ ಸುವರ್ಣಮಯ ಆಸನದಲ್ಲಿ ಕುಳಿತ.

★ ★ ★ ★ ★

ತೊಂಬತ್ತೂರನೆಯ ಅಧ್ಯಾಯ

ಕೃಷ್ಣನ ಧೃತರಾಷ್ಟ್ರಸಭಾಪ್ರವೇಶ.

ವೈಶಂಪಾಯನಃ

ತಥಾ ಕಥಯತೋರೇವ ತಯೋರ್ಬುದ್ಧಿಮತೋಸ್ತದಾ ।
ಶಿವಾ ನಕ್ಷತ್ರಸಂಪನ್ನಾ ಸಾ ವ್ಯತೀತಾಯ ಶರ್ವರೀ ॥೧॥

ವೈಶಂಪಾಯನ– ಮೇಧಾವಿಗಳಾದ ಅವರಿಬ್ಬರೂ ಹಾಗೆ ಮಾತನಾಡುತ್ತಿರುವಂತೆಯೇ ನಕ್ಷತ್ರಗಳಿಂದ ಕೂಡಿದ ಮಂಗಳಕರವಾದ ಆ ರಾತ್ರಿಯು ಕಳೆದುಹೋಯಿತು.

ಧರ್ಮ್ಯಾ ರಮ್ಯಾಶ್ಚಾರ್ಥವತೀಃ ವಿಚಿತ್ರಾರ್ಥಪದಾಕ್ಷರಾಃ ।
ಶೃಣ್ವತೋ ವಿವಿಧಾ ವಾಚೋ ವಿದುರಸ್ಯ ಮಹಾತ್ಮನಃ ॥೨॥

ಕಥಾಭಿರನುಕೂಲಾಭೀ ರಕ್ತಸ್ಯಾಮಿತತೇಜಸಃ ।
ಅಕಾಮಸ್ಯೈವ ಕೃಷ್ಣಸ್ಯ ಸಾ ವ್ಯತೀತಾಯ ಶರ್ವರೀ ॥೩॥

ಮಹಾತ್ಮನಾದ ವಿದುರನ ಧರ್ಮಸಂಬಂಧಿಯಾದ ಮನೋಹರವಾದ ಶ್ರೇಷ್ಠವಾದ ಅರ್ಥವನ್ನು ಹೊಂದಿದ ವಿಚಿತ್ರ ಪದಾಕ್ಷರಗಳಿಂದ ಕೂಡಿದ ವಾರ್ತೆಗಳಿಂದ ಕೂಡಿದ

ಅನುಕೂಲವಾದ ಅನೇಕ ಕಥೆಗಳನ್ನು ಕೇಳುತ್ತಾ ಅದರಲ್ಲಿಯೇ ಆಸಕ್ತವಾದ ಮನಸ್ಸುಳ್ಳ ಅಮಿತ ತೇಜಸ್ವಿಯಾದ ಕೃಷ್ಣನಿಗೆ ಇಚ್ಛೆಯಿಲ್ಲದಂತೆಯೇ ಆ ರಾತ್ರಿಯು ಕಳೆಯಿತು.

ತತಸ್ತು ಸ್ವರಸಂಪನ್ನಾ ಬಹವಃ ಸೂತಮಾಗಧಾಃ ।
ಶಂಖದುಂದುಭಿನಿರ್ಘೋಷೈಃ ಕೇಶವಂ ಪ್ರತ್ಯಬೋಧಯನ್ ॥೪॥

ಅನಂತರ ಮಧುರಸ್ವರದಿಂದ ಕೂಡಿದ ಅನೇಕ ಸೂತ-ಮಾಗಧರು ಶಂಖ ದುಂದುಭಿಘೋಷಗಳ ಜೊತೆಯಲ್ಲಿ ಕೇಶವನನ್ನು ಎಬ್ಬಿಸಿದರು.

ಬ್ರಹ್ಮಾದಿವಾಸುದೇವಾಂತಂ ವಂಶಂ ಸಮನುಕೀರ್ತಯನ್ ।
ತುಷ್ಟುವುಃ ಪುಂಡರೀಕಾಕ್ಷಂ ಬಹವಃ ಸೂತಮಾಗಧಾಃ ॥೫॥

ಅನೇಕ ಸೂತ-ಮಾಗಧರು ಬ್ರಹ್ಮದೇವರಿಂದ ಹಿಡಿದು ಕೃಷ್ಣನವರೆಗಿನ ವಂಶವನ್ನು ಹೇಳುತ್ತಾ ಪುಂಡರೀಕಾಕ್ಷನನ್ನು ಸ್ತೋತ್ರ ಮಾಡಿದರು.

ತತ ಉತ್ಥಾಯ ದಾಶಾರ್ಹ ಋಷಭಃ ಸರ್ವಸಾತ್ವತಾಮ್ ।
ಸರ್ವಮಾವಶ್ಯಕಂ ಚಕ್ರೇ ಪ್ರಾತಃಕಾರ್ಯಂ ಜನಾರ್ದನಃ ॥೬॥

ಅನಂತರ ಸರ್ವಸಾತ್ವತಶ್ರೇಷ್ಠನಾದ ದಾಶಾರ್ಹನಾದ ಜನಾರ್ದನನು ಶಯನದಿಂದ ಎದ್ದು ಅವಶ್ಯಕವಾದ ಎಲ್ಲಾ ಪ್ರಾತಃಕಾರ್ಯಗಳನ್ನು ಮಾಡಿದನು.

ಕೃತೋದಕಃ ಕೃತಜಪೋ ಹುತಾಗ್ನಿಃ ಸಮಲಂಕೃತಃ ।
ತತ ಆದಿತ್ಯಮುದ್ಯಂತಮುಪಾತಿಷ್ಠತ ಮಾಧವಃ ॥೭॥

ಸ್ನಾನವನ್ನು ಮಾಡಿ, ಜಪವನ್ನು ಮುಗಿಸಿ, ಅಗ್ನಿಯಲ್ಲಿ ಹೋಮವನ್ನು ಮಾಡಿ ಅಲಂಕೃತನಾಗಿ ಅನಂತರ ಉದಯಿಸುವ ಸೂರ್ಯನನ್ನು ಮಾಧವನು ಸ್ತೋತ್ರ ಮಾಡಿದನು.

ಅಥ ದುರ್ಯೋಧನಃ ಕರ್ಣಃ ಶಕುನಿಶ್ಚಾಪಿ ಸೌಬಲಃ ।
ಸಂಧ್ಯಾಂ ತಿಷ್ಠಂತಮಭ್ಯಾಯನ್ ದಾಶಾರ್ಹಮಪರಾಜಿತಮ್ ॥೮॥

ಅಪರಾಜಿತನಾದ ದಾಶಾರ್ಹನು ಸಂಧ್ಯಾವಂದನೆಯನ್ನು ಮಾಡುತ್ತಿರುವಂತೆಯೇ ದುರ್ಯೋಧನ, ಕರ್ಣ ಮತ್ತು ಸೌಬಲನಾದ ಶಕುನಿಯು ಅಲ್ಲಿಗೆ ಬಂದರು.

ಆಚಖ್ಯುಸ್ತೇ ತು ಕೃಷ್ಣಸ್ಯ ಧೃತರಾಷ್ಟ್ರಂ ಸಭಾಗತಮ್ ।
ಕುರೂಂಶ್ಚ ಭೀಷ್ಮಪ್ರಮುಖಾನ್ ರಾಜ್ಞಃ ಸರ್ವಾಂಶ್ಚ ಪಾರ್ಥಿವಾನ್ ॥೯॥

ಅವರು ಭೀಷ್ಮ ಮೊದಲಾದ ಕೌರವರೂ, ಭೂಮಿಯ ಎಲ್ಲಾ ಪ್ರದೇಶದ ರಾಜರೂ ಮತ್ತು ಧೃತರಾಷ್ಟ್ರನೂ ಸಭೆಗೆ ಬಂದಿದ್ದಾರೆಂದು ಕೃಷ್ಣನಿಗೆ ಹೇಳಿದರು.

ತ್ವಾಮರ್ಥಯಂತೇ ಗೋವಿಂದ ದಿವಿ ಶಕ್ರಮಿವಾಮರಾಃ ।
ತಾನಭ್ಯನಂದದ್ ಗೋವಿಂದಃ ಸಾಮ್ನಾ ಪರಮವಲ್ಗುನಾ ॥೧೦॥

ಗೋವಿಂದನೇ, ಸ್ವರ್ಗದಲ್ಲಿ ಇಂದ್ರನನ್ನು ದೇವತೆಗಳು ನಿರೀಕ್ಷಿಸಿದಂತೆ ನಿನ್ನನ್ನು ನಿರೀಕ್ಷಿಸುತ್ತಿದ್ದಾರೆ ಎಂದು ಹೇಳಿದರು. ಗೋವಿಂದನು ಬಹಳ ಮಧುರವಾದ ಮೃದುವಾದ ಮಾತುಗಳಿಂದ ಅವರನ್ನು ಅಭಿನಂದಿಸಿದನು.

ತತೋ ವಿಮಲ ಆದಿತ್ಯೇ ಬ್ರಾಹ್ಮಣೇಭ್ಯೋ ಜನಾರ್ದನಃ ।
ದದೌ ಹಿರಣ್ಯಂ ವಾಸಾಂಸಿ ಗವಾಶ್ವಾಂಶ್ಚ ಪರಂತಪಃ ॥೧೧॥

ಅನಂತರ ಸೂರ್ಯನು ಶ್ವೇತವರ್ಣಕ್ಕೆ ತಿರುಗುತ್ತಿರಲು ಪರಂತಪನಾದ ಜನಾರ್ದನನು ಬ್ರಾಹ್ಮಣರಿಗೆ ಹಿರಣ್ಯವನ್ನೂ, ವಸ್ತ್ರಗಳನ್ನೂ, ಗೋವುಗಳನ್ನೂ ಮತ್ತು ಅಶ್ವಗಳನ್ನೂ ನೀಡಿದನು.

ವಿಸೃಷ್ಟವಂತಂ ರತ್ನಾನಿ ದಾಶಾರ್ಹಮಪರಾಜಿತಮ್ ।
ತಿಷ್ಠಂತಮುಪಸಂಗಮ್ಯ ವವಂದೇ ಸಾರಥಿಸ್ತದಾ ॥೧೨॥

ರತ್ನವನ್ನು ದಾನಮಾಡಿ ನಿಂತಿದ್ದ ಅಪರಾಜಿತನಾದ ದಾಶಾರ್ಹನನ್ನು ಸಮೀಪಿಸಿ ಸಾರಥಿಯು ಅವನಿಗೆ ನಮಸ್ಕಾರವನ್ನು ಮಾಡಿದನು.

ತತೋ ರಥೇನ ಶುಭ್ರೇಣ ಮಹತಾ ಕಿಂಕಿಣೀಕಿನಾ ।
ಹಯೋತ್ತಮಯುಜಾ ಶೀಘ್ರಮುಪಾತಿಷ್ಠತ ದಾರುಕಃ ॥೧೩॥

ಅನಂತರ ಶುಭ್ರವಾದ ದೊಡ್ಡದಾದ, ಸಣ್ಣಬಟ್ಟೆಗಳಿಂದ ಅಲಂಕೃತವಾದ ಶ್ರೇಷ್ಠ ಅಶ್ವಗಳನ್ನು ಹೂಡಿದ ರಥವನ್ನು ದಾರುಕನು ಶೀಘ್ರವಾಗಿ ಸಮೀಪಕ್ಕೆ ತಂದನು.

ತಸ್ಯೈ ರಥವರೋ ಯುಕ್ತಃ ಶುಶುಭೇ ಲೋಕವಿಶ್ರುತಃ ।
ವಾಜಿಭಿಃ ಸೈನ್ಯಸುಗ್ರೀವಮೇಘಪುಷ್ಪಬಲಾಹಕೈಃ ॥೧೪॥

ಸೈನ್ಯ, ಸುಗ್ರೀವ, ಮೇಘಪುಷ್ಪ, ಬಲಾಹಕಗಳಿಂದ ಹೂಡಲ್ಪಟ್ಟ ಲೋಕವಿಶ್ರುತವಾದ ಕೃಷ್ಣನ ಶ್ರೇಷ್ಠವಾದ ರಥವು ಶೋಭಿಸಿತು.

ಸೈನ್ಯಸ್ತು ಶುಕಪತ್ರಾಭಃ ಸುಗ್ರೀವಃ ಕಿಂಶುಕಪ್ರಭಃ ।
ಮೇಘಪುಷ್ಪೋ ಮೇಘವರ್ಣಃ ಪಾಂಡರಸ್ತು ಬಲಾಹಕಃ ॥೧೫॥

ಸೈನ್ಯವೆಂಬ ಅಶ್ವವು ಗಿಣಿಯ ರೆಕ್ಕೆಯ ಬಣ್ಣವನ್ನೂ, ಸುಗ್ರೀವಾಶ್ವವು ಮುತ್ತುಗದ ಹೂವಿನ ಬಣ್ಣವನ್ನೂ, ಮೇಘಪುಷ್ಪವು ಮೋಡದ ಬಣ್ಣವನ್ನೂ, ಬಲಾಹಕವು ಶ್ವೇತವರ್ಣವನ್ನೂ ಹೊಂದಿದ್ದಿತು.

ದಕ್ಷಿಣಂ ಚಾವಹತ್ ಸೈನ್ಯಃ ಸುಗ್ರೀವಃ ಸವ್ಯತೋಽವಹತ್ ।
ಪೃಷ್ಠವಾಹೌ ತಯೋರಾಸ್ತಾಂ ಮೇಘಪುಷ್ಪಬಲಾಹಕೌ ॥೧೬॥

ರಥದ ಮುಂಭಾಗದಲ್ಲಿ ಬಲಗಡೆಯಲ್ಲಿ ಸೈನ್ಯವೂ, ಎಡಗಡೆಯಲ್ಲಿ ಸುಗ್ರೀವವೂ, ಪಕ್ಕಗಳಲ್ಲಿ ಮೇಘಪುಷ್ಪ-ಬಲಾಹಕಗಳೂ ಇದ್ದವು.

ವಿಶ್ವಕರ್ಮಕೃತಾಪೀಡಾ ರತ್ನಜಾಲವಿಭೂಷಿತಾ ।
ಆಶ್ರಿತಾ ವೈ ರಥೇ ತಸ್ಮಿನ್ ಧ್ವಜಯಷ್ಟಿರಶೋಭತ ॥೧೭॥

ವಿಶ್ವಕರ್ಮನಿಂದ ಅಲಂಕೃತವಾದ, ರತ್ನಸಮೂಹಗಳಿಂದ ಭೂಷಿತವಾದ ಧ್ವಜಯಷ್ಟಿಯು ಆ ರಥವನ್ನು ಆಶ್ರಯಿಸಿ ಶೋಭಿಸುತ್ತಿದ್ದಿತು.

ವೈನತೇಯಃ ಸ್ಥಿತಸ್ತಸ್ಯಾಂ ಪ್ರಭಾಕರಮಿವ ಸ್ಪೃಶನ್ ।
ತಸ್ಯ ಸತ್ವವತಃ ಕೇತೌ ಭುಜಗಾರಿರಶೋಭತ ॥೧೮॥

ಬಲಿಷ್ಠವಾದ ಆ ರಥದ ಧ್ವಜದಲ್ಲಿ ಸರ್ಪಶತ್ರುವಾದ ಗರುಡನು ಸೂರ್ಯನನ್ನು ಮುಟ್ಟುವಂತೆ ದೊಡ್ಡರೂಪವನ್ನು ತೆಗೆದುಕೊಂಡು ಶೋಭಿಸಿದನು.

ತಸ್ಯ ಕೀರ್ತಿಮತಸ್ತೇನ ಭಾಸ್ವರೇಣ ವಿರಾಜತಾ ।
ಶುಶುಭೇ ಸ್ಯಂದನಶ್ರೇಷ್ಠಃ ಪತಗೇಂದ್ರೇಣ ಕೇತುನಾ ॥೧೯॥

ಕೀರ್ತಿಶಾಲಿಯಾದ ಕೃಷ್ಣನ ಶ್ರೇಷ್ಠವಾದ ಆ ರಥವು ಪ್ರಕಾಶಿಸುತ್ತಾ ಶೋಭಿಸುವ ಗರುಡಧ್ವಜದಿಂದ ಶೋಭಿಸಿತು.

ರುಗ್ಮಜಾಲೈಃ ಪತಾಕಾಭಿಃ ಸೌವರ್ಣೇನ ಚ ಕೇತುನಾ ।
ಬಭೂವ ಸ ರಥಶ್ರೇಷ್ಠಃ ಕಾಲಸೂರ್ಯ ಇವೋದಿತಃ ॥೨೦॥

ಸುವರ್ಣಜಾಲಗಳಿಂದಲೂ, ಪತಾಕೆಗಳಿಂದಲೂ, ಸುವರ್ಣಮಯವಾದ ಧ್ವಜದಿಂದಲೂ ಕೂಡಿದ ಆ ಶ್ರೇಷ್ಠವಾದ ರಥವು ಉದಯಿಸಿದ ಕಾಲಸೂರ್ಯನಂತೆ ಇದ್ದಿತು.

ಪಕ್ಷಿಪಕ್ಷವಿತಾನೈಶ್ಚ ರುಗ್ಮಜಾಲಕೃತಾಂತರೈಃ ।
ದಂಡಮಾರ್ಗವಿಭಾಗೈಶ್ಚ ಸುಕೃತೈರ್ವಿಶ್ವಕರ್ಮಣಾ ॥೨೧॥

ಗರುಡನ ವಿಶಾಲವಾದ ರೆಕ್ಕೆಗಳ ಆಶ್ರಯದಲ್ಲಿ ಸುವರ್ಣಜಾಲಗಳ ಮಧ್ಯದಲ್ಲಿ ಅಂತರಗಳಿಂದ ಕೂಡಿ ಮತ್ತು ವಿಶ್ವಕರ್ಮನು ಚೆನ್ನಾಗಿ ನಿರ್ಮಿಸಿದ ದಂಡಮಾರ್ಗ ವಿಭಾಗದಿಂದಲೂ ಕೂಡಿ ಆ ರಥವು ಶೋಭಿಸಿತು.

ಪ್ರವಾಲಮಣಿಹೇಮೈಶ್ಚ ಮುಕ್ತಾವೈಡೂರ್ಯಭೂಷಣೈಃ ।
ಕಿಂಕಿಣೀಶತಸಂಘೈಶ್ಚ ವಾಲಜಾಲಕೃತಾಂತರೈಃ ॥೨೨॥

ಕಾರ್ತಸ್ವರಮಯೀಭಿಶ್ಚ ಪದ್ಮಿನೀಭಿರಲಂಕೃತಃ ।
ಶುಶುಭೇ ಸ್ಯಂದನಶ್ರೇಷ್ಠಃ ತಪನೀಯೈಶ್ಚ ಪಾದಪೈಃ ॥೨೩॥

ಹವಳ, ನವರತ್ನಗಳು ಮತ್ತು ಸುವರ್ಣದಿಂದಲೂ, ಮುತ್ತು ಮತ್ತು ವೈಡೂರ್ಯಗಳ ಆಭರಣಗಳಿಂದಲೂ, ನೂರಾರು ಸಣ್ಣಗಂಟೆಗಳ ಸಮೂಹದಿಂದಲೂ, ಅಲ್ಲಲ್ಲಿ ಸ್ಥಾಪಿಸಿದ ಚಾಮರಗಳ ಸಮೂಹದಿಂದಲೂ, ಸುವರ್ಣಮಯವಾದ ಪದ್ಮಗಳಿಂದಲೂ, ಸುವರ್ಣಮಯವಾದ ವೃಕ್ಷಗಳಿಂದಲೂ ಆ ಶ್ರೇಷ್ಠವಾದ ರಥವು ಶೋಭಿಸಿತು.

ವ್ಯಾಘ್ರಸಿಂಹವರಾಹೈಶ್ಚ ಗೋವೃಷೈರ್ಮೃಗಪಕ್ಷಿಭಿಃ ।
ತಾರಾಭಿರ್ಭಾಸ್ಕರೈಶ್ಚಾಪಿ ವಾರಣೈಶ್ಚ ಹಿರಣ್ಮಯೈಃ ॥೨೪॥

ಆ ರಥದಲ್ಲಿ ವ್ಯಾಘ್ರಸಿಂಹವರಾಹಗಳ ವೃಷಭಗಳ ಮೃಗಪಕ್ಷಿಗಳ ನಕ್ಷತ್ರಗಳ ಸೂರ್ಯನ ಮತ್ತು ಆನೆಗಳ ಸುವರ್ಣಮಯವಾದ ಕೃತ್ರಿಮಪ್ರತಿಮೆಗಳು ಇದ್ದವು.

ವಜ್ರಾಂಕುಶವಿಮಾನೈಶ್ಚ ಕೂಬರಾವರ್ತಸಂಧಿಷು ।
ಸಮುಚ್ಛ್ರಿತಮಹಾನಾಭಿಃ ಸ್ತನಯಿತ್ನುಮಹಾಸ್ವನಃ ॥೨೫॥

ತಮುಪಸ್ಥಿತಮಾಜ್ಞಾಯ ರಥಂ ದಿವ್ಯಂ ಮಹಾಮನಾಃ ।
ಮಹಾಭ್ರಘನಸಂಕಾಶಂ ಸರ್ವರತ್ನವಿಭೂಷಿತಮ್ ॥೨೬॥

ಅಗ್ನಿಂ ಪ್ರದಕ್ಷಿಣಂ ಕೃತ್ವಾ ಬ್ರಾಹ್ಮಣಾಂಶ್ಚ ಜನಾರ್ದನಃ ।
ಕೌಸ್ತುಭಂ ಮಣಿಮಾಬಧ್ಯ ಶ್ರಿಯಾ ಪರಮಯಾ ಜ್ವಲನ್ ॥೨೭॥

ಕುರುಭಿಃ ಸಂವೃತಃ ಕೃಷ್ಣೋ ವೃಷ್ಣಿಭಿಶ್ಚಾಭಿರಕ್ಷಿತಃ ।
ಆತಿಷ್ಠತ ರಥಂ ಶೌರಿಃ ಸರ್ವಯಾದವನಂದನಃ ॥೨೮॥

ಕೂಬರ, ಆವರ್ತಗಳ ಸಂಧಿಗಳಲ್ಲಿ ವಜ್ರಾಂಕುಶವಿಮಾನಗಳ ಚಿಹ್ನೆಗಳಿಂದ ಕೂಡಿದ ಎತ್ತರವಾದ ದೊಡ್ಡ ಆಕ್ಷಪ್ರದೇಶವುಳ್ಳ ಸಿಡಿಲಿನ ಮಹಾಗರ್ಜನೆಯನ್ನು ಹೊಂದಿದ ಘನವಾದ ಮೋಡಗಳ ಕಾಂತಿಯನ್ನು ಹೊಂದಿದ ಸರ್ವರತ್ನವಿಭೂಷಿತವಾದ ಆ ದಿವ್ಯವಾದ ರಥವು ಸಮೀಪಕ್ಕೆ ಬಂದುದನ್ನು ತಿಳಿದು ಮಹಾಮನನಾದ ಜನಾರ್ದನನು ಅಗ್ನಿಗೆ ಮತ್ತು ಬ್ರಾಹ್ಮಣರಿಗೆ ಪ್ರದಕ್ಷಿಣೆಯನ್ನು ಮಾಡಿ ಕೌಸ್ತುಭ ಮಣಿಯನ್ನು ಕಂಠದಲ್ಲಿ ಧರಿಸಿ ಪರಮಕಾಂತಿಯಿಂದ ಶೋಭಿಸುತ್ತಾ, ಕೌರವರಿಂದಲೂ, ವೃಷ್ಣಿಗಳಿಂದಲೂ ರಕ್ಷಿಸಲ್ಪಟ್ಟವನಾಗಿ, ಸರ್ವಯಾದವರಿಗೂ ಸಂತೋಷವನ್ನು ಕೊಡುವ ಶೌರಿಯಾದ ಕೃಷ್ಣನು ರಥವನ್ನು ಏರಿದನು.

ಅನ್ವಾರುರೋಹ ದಾಶಾರ್ಹಂ ವಿದುರಃ ಸರ್ವಧರ್ಮವಿತ್ ।
ಸರ್ವಪ್ರಾಣಭೃತಾಂ ಶ್ರೇಷ್ಠಂ ಸರ್ವಬುದ್ಧಿಮತಾಂ ವರಮ್ ॥೨೯॥

ಸರ್ವಧರ್ಮವನ್ನೂ ತಿಳಿದ ವಿದುರನು, ಸರ್ವಚೇತನರಲ್ಲಿ ಶ್ರೇಷ್ಠನಾದ, ಸರ್ವಬುದ್ಧಿವಂತರಲ್ಲಿ ಶ್ರೇಷ್ಠನಾದ, ದಾಶಾರ್ಹನಾದ ಕೃಷ್ಣನ ನಂತರ ಆ ರಥವನ್ನು ಏರಿದನು.

ತತೋ ದುರ್ಯೋಧನಃ ಕರ್ಣಃ ಶಕುನಿಶ್ಚಾಪಿ ಸೌಬಲಃ ।
ದ್ವಿತೀಯೇನ ರಥೇನೈನಮನ್ವಯುಸ್ತೇ ಪರಂತಪಮ್ ॥೩೦॥

ಅನಂತರ ದುರ್ಯೋಧನ, ಕರ್ಣ ಮತ್ತು ಸೌಬಲನಾದ ಶಕುನಿ ಇವರು ಇನ್ನೊಂದು ರಥದಿಂದ ಪರಂತಪನಾದ ಕೃಷ್ಣನನ್ನು ಹಿಂಬಾಲಿಸಿದರು.

ಸಾತ್ಯಕಿಃ ಕೃತವರ್ಮಾ ಚ ವೃಷ್ಣೀನಾಂ ಚ ಮಹಾರಥಾಃ ।
ಪೃಷ್ಠತೋಽನುಯಯುಃ ಕೃಷ್ಣಂ ಗಜೈರಶ್ವೈ ರಥೈರಪಿ ॥೩೧॥

ಸಾತ್ಯಕಿ, ಕೃತವರ್ಮ ಮತ್ತು ವೃಷ್ಣಿಗಳ ಮಹಾರಥರು ಗಜಗಳಿಂದಲೂ, ಅಶ್ವಗಳಿಂದಲೂ ಮತ್ತು ರಥಗಳಿಂದಲೂ ಕೃಷ್ಣನನ್ನು ಹಿಂಬಾಲಿಸಿದರು.

ತೇಷಾಂ ಹೇಮಪರಿಷ್ಕಾರೈರ್ಯುಕ್ತಾಃ ಪರಮವಾಜಿಭಿಃ ।
ಯಾಸ್ಯತಾಂ ಘೋಷಿಣಶ್ಚಿತ್ರಾಃ ಚಾರು ಬಭ್ರಾಜಿರೇ ರಥಾಃ ॥೩೨॥

ಸುವರ್ಣ ಅಲಂಕಾರಗಳಿಂದಲೂ, ಶ್ರೇಷ್ಠವಾದ ಅಶ್ವಗಳಿಂದಲೂ ಕೂಡಿದ ಅವರ ಸುಂದರವಾದ ರಥಗಳು ಅವರು ಹೋಗುತ್ತಿರುವಾಗ ವಿಚಿತ್ರವಾದ ಶಬ್ದಗಳನ್ನು ಮಾಡುತ್ತಾ ಶೋಭಿಸಿದವು.

ಸಮ್ಮೃಷ್ಟಸಂಸಿಕ್ತರಜಃ ಪ್ರತಿಪೇದೇ ಮಹಾಪಥಮ್ ।
ರಾಜರ್ಷಿಚರಿತಂ ಕಾಲೇ ಕೃಷ್ಣೋ ಧೀಮಾನ್ ಶ್ರಿಯಾ ಜ್ವಲನ್ ॥೩೩॥

ಮೇಧಾವಿಯಾದ ಕೃಷ್ಣನು ಕಾಂತಿಯಿಂದ ಕಂಗೊಳಿಸುತ್ತಾ ಸ್ವಲ್ಪ ಸಮಯದಲ್ಲಿ ರಾಜರ್ಷಿಗಳು ನಡೆದ, ಸಾರಿಸಿ ಗಂಧವನ್ನು ಚುಮುಕಿಸಿದ ರಾಜಮಾರ್ಗವನ್ನು ಪ್ರವೇಶಿಸಿದನು.

ತತಃ ಪ್ರಯಾತೇ ದಾಶಾರ್ಹೇ ಪ್ರವಾದ್ಯಂತೇ ಸ್ಮ ಪುಷ್ಕರಾಃ ।
ಶಂಖಾಶ್ಚ ದಧ್ಮಿರೇ ತತ್ರ ವಾದ್ಯಾನ್ಯನ್ಯಾನಿ ಯಾನಿ ಚ ॥೩೪॥

ದಾಶಾರ್ಹನಾದ ಕೃಷ್ಣನು ಹೋಗುತ್ತಿರಲು ಅಲ್ಲಿ ಪುಷ್ಕರ, ಶಂಖ ಮತ್ತು ಇತರ ವಾದ್ಯಗಳೂ ಮೊಳಗಿದವು.

ಪ್ರವೀರಾಃ ಸರ್ವಲೋಕಸ್ಯ ಯುವಾನಃ ಸಿಂಹವಿಕ್ರಮಾಃ ।
ಪರಿವಾರ್ಯ ರಥಂ ಶೌರೇರಗಚ್ಛಂತ ಪರಂತಪಾಃ ॥೩೫॥

ಸರ್ವಲೋಕದ ವೀರರೂ, ಸಿಂಹ ಪರಾಕ್ರಮವುಳ್ಳ ಯುವಕರೂ, ಪರಂತಪರೂ ಆದ ರಾಜರು ಕೃಷ್ಣನ ರಥವನ್ನು ಸುತ್ತುಗಟ್ಟಿ ಮುಂದೆ ಸಾಗಿದರು.

ತತೋಽನ್ಯೇ ಬಹುಸಾಹಸ್ರಾ ವಿಚಿತ್ರಾದ್ಭುತವಾಸಸಃ ।
ಅಸಿಪ್ರಾಸಾಯುಧಧರಾಃ ಕೃಷ್ಣಸ್ಯಾಸನ್ ಪುರಸ್ಸರಾಃ ॥೩೬॥

ಇನ್ನು ಅನೇಕ ಸಹಸ್ರ ಯೋಧರು ವಿಚಿತ್ರವಾದ ಅದ್ಭುತವಾದ ವೇಷವನ್ನು ಧರಿಸಿ ಅಸಿ, ಪ್ರಾಸ ಮೊದಲಾದ ಆಯುಧಗಳನ್ನು ಹಿಡಿದು ಕೃಷ್ಣನ ಮುಂಭಾಗದಲ್ಲಿ ನಡೆದರು.

ಗಜಾಃ ಪಂಚಶತಾಸ್ತತ್ರ ರಥಾಶ್ಚಾಸನ್ ಸಹಸ್ರಶಃ ।
ಪ್ರಯಾಂತಮನ್ವಯುರ್ವೀರಂ ದಾಶಾರ್ಹಮಪರಾಜಿತಮ್ ॥೩೭॥

ಅಪರಾಜಿತನಾದ ಕೃಷ್ಣನು ಹೋಗುತ್ತಿರುವಾಗ ವೀರನಾದ ಅವನನ್ನು ಐದು ನೂರು ಗಜಗಳು ಮತ್ತು ಸಹಸ್ರಾರು ರಥಗಳು ಹಿಂಬಾಲಿಸಿದವು.

ಪುರಂ ಕುರೂಣಾಂ ಸಂವೃತ್ತಂ ದ್ರಷ್ಟುಕಾಮಂ ಜನಾರ್ದನಮ್ ।
ಆಬಾಲವೃದ್ಧಂ ಸಸ್ತ್ರೀಕಂ ರಥ್ಯಾಗತಮರಿಂದಮಮ್ ॥೩೮॥

ಮಹಾಮಾರ್ಗವನ್ನು ಪ್ರವೇಶಿಸಿದ ಅರಿಂದಮನಾದ ಕೃಷ್ಣನನ್ನು ನೋಡುವ ಆಸೆಯಿಂದ ಕೌರವರ ಆ ಪಟ್ಟಣವು ಬಾಲಕರಿಂದ ಹಿಡಿದು ವೃದ್ಧರವರೆಗೆ ಎಲ್ಲರಿಂದಲೂ ಮತ್ತು ಸ್ತ್ರೀಯರಿಂದಲೂ ತುಂಬಿಹೋಯಿತು.

ವೇದಿಕಾಮಾಶ್ರಿತಾಭಿಶ್ಚ ಸಮಾಕ್ರಾಂತಾನ್ಯನೇಕಶಃ ।
ಪ್ರಚಲಂತೀವ ಭಾರೇಣ ಯೋಷಿದ್ಭಿರ್ಭವನಾನ್ಯುತ ॥೩೯॥

ಸಂಪೂಜ್ಯಮಾನಃ ಕುರುಭಿಃ ಸಂಶೃಣ್ವನ್ ವಿವಿಧಾಃ ಕಥಾಃ ।
ಯಥಾರ್ಹಂ ಪ್ರತಿಸತ್ಕುರ್ವನ್ ಪ್ರೇಕ್ಷಮಾಣಃ ಶನೈರ್ಯಯೌ ॥೪೦॥

ಅಲ್ಲಲ್ಲಿ ಎತ್ತರವಾದ ವೇದಿಕೆಗಳ ಮೇಲೆ ಅನೇಕ ಜನರು ಗುಂಪು ಗುಂಪಾಗಿ ನಿಂತಿದ್ದರು. ಮನೆಗಳು ಸ್ತ್ರೀಯರ ಭಾರದಿಂದ ಚಲಿಸುವಂತೆ ತೋರುತ್ತಿದ್ದಿತು. ಕೃಷ್ಣನು

ಕೌರವರಿಂದ ಪೂಜಿಸಲ್ಪಟ್ಟು ತನ್ನ ಪ್ರಶಂಸಾ ರೂಪವಾದ ಅನೇಕ ಮಾತುಗಳನ್ನು ಕೇಳುತ್ತಾ ಯಥಾಯೋಗ್ಯವಾಗಿ ಅವರನ್ನು ನೋಡಿ ಸತ್ಕಾರವನ್ನು ಮಾಡುತ್ತಾ ನಿಧಾನವಾಗಿ ಸಾಗಿದನು.

ತತಃ ಸಭಾಂ ಸಮಾಸಾದ್ಯ ಕೇಶವಸ್ಯಾನುಯಾಯಿನಃ ।
ಸಶಂಖ್ಯೈರ್ವೇಣುನಿಘೋಷೈಃ ದಿಶಃ ಸರ್ವಾ ವ್ಯನಾದಯನ್ ॥೪೧॥

ಅನಂತರ ಸಭೆಯನ್ನು ಸೇರಿದ ಕೃಷ್ಣನನ್ನು ಹಿಂಬಾಲಿಸಿದ ಯೋಧರು ಶಂಖ, ವೇಣುಗಳ ನಾದದಿಂದ ಎಲ್ಲ ದಿಕ್ಕುಗಳೂ ಪ್ರತಿಧ್ವನಿಸುವಂತೆ ಮಾಡಿದರು.

ತತಃ ಸಾ ಸಮಿತಿಃ ಸರ್ವಾ ರಾಜ್ಞಾಮಮಿತತೇಜಸಾಮ್ ।
ಸಂಪ್ರಾಕಂಪತ ಹರ್ಷೇಣ ಕೃಷ್ಣಾಗಮನಕಾಂಕ್ಷಯಾ ॥೪೨॥

ಅನಂತರ ಕೃಷ್ಣನ ಆಗಮನವನ್ನು ನಿರೀಕ್ಷಿಸುತ್ತಿದ್ದ ಅಮಿತತೇಜಸ್ವಿಗಳಾದ ಆ ಎಲ್ಲಾ ರಾಜರ ಸಭೆಯು ಸಂತೋಷದಿಂದ ಕಂಪಿಸಿತು.

ತತೋಽಭ್ಯಾಶಂ ಗತೇ ಕೃಷ್ಣೇ ಸಮಹೃಷ್ಯನ್ ನರಾಧಿಪಾಃ ।
ಶ್ರುತ್ವಾ ತಂ ರಥನಿರ್ಘೋಷಂ ಪರ್ಜನ್ಯನಿನದೋಪಮಮ್ ॥೪೩॥

ಕೃಷ್ಣನು ಸಮೀಪಕ್ಕೆ ಬರುತ್ತಿರುವಾಗಲೇ ಪರ್ಜನ್ಯನಿನಾದದಂತಿದ್ದ ರಥಘೋಷವನ್ನು ಕೇಳಿ ರಾಜರೆಲ್ಲರೂ ಸಂತೋಷಪಟ್ಟರು.

ಆಸಾದ್ಯ ತು ಸಭಾದ್ವಾರಮ್ ಋಷಭಃ ಸರ್ವಸಾತ್ವತಾಮ್ ।
ಅವತೀರ್ಯ ರಥಾಚ್ಛೌರಿಃ ಕೈಲಾಸಶಿಖರೋಪಮಾತ್ ॥೪೪॥

ನಗಮೇಘಪ್ರತೀಕಾಶಂ ಜ್ವಲಂತಮಿವ ತೇಜಸಾ ।
ಮಹೇಂದ್ರಸದನಪ್ರಖ್ಯಂ ಪ್ರವಿವೇಶ ಸಭಾಂ ತತಃ ॥೪೫॥

ಸರ್ವಸಾತ್ವತಶ್ರೇಷ್ಠನಾದ ಶೌರಿಯು ಕೈಲಾಸಶಿಖರದಂತೆ ಎತ್ತರವಾಗಿದ್ದ ಸಭೆಯ ದ್ವಾರಕ್ಕೆ ಬಂದು ರಥದಿಂದ ಇಳಿದು ಮೇಘಸಹಿತವಾದ ಪರ್ವತವನ್ನು ಹೋಲುವ ಕಾಂತಿಯಿಂದ ಬೆಳಗುವ ಮಹೇಂದ್ರಭವನವನ್ನು ಹೋಲುವ ಸಭೆಯನ್ನು ಪ್ರವೇಶಿಸಿದನು.

ಪಾಣೌ ಗೃಹೀತ್ವಾ ವಿದುರಂ ಸಾತ್ಯಕಿಂ ಚ ಮಹಾಯಶಾಃ ।
ಜ್ಯೋತೀಂಷ್ಯಾದಿತ್ಯವದ್ ರಾಜನ್ ಕುರೂನ್ ಪ್ರಾಚ್ಛಾದಯಚ್ಛ್ರಿಯಾ ॥

ಮಹಾಕೀರ್ತಿವಂತನಾದ ಕೃಷ್ಣನು ತನ್ನ ಕೈಗಳಿಂದ ಒಂದುಕಡೆ ಸಾತ್ಯಕಿಯನ್ನೂ, ಇನ್ನೊಂದು ಕಡೆ ವಿದುರನನ್ನೂ ಹಿಡಿದು ಎಲೈ ರಾಜನೇ, ಸೂರ್ಯನು ಉಳಿದ ಗ್ರಹಗಳನ್ನು ತನ್ನ ಕಾಂತಿಯಿಂದ ಮುಚ್ಚುವಂತೆ ಕೌರವರನ್ನು ತನ್ನ ಕಾಂತಿಯಿಂದ ಮುಚ್ಚಿದನು.

ಅಗ್ರತೋ ವಾಸುದೇವಸ್ಯ ಕರ್ಣದುರ್ಯೋಧನಾವುಭೌ ।
ವೃಷ್ಣಯಃ ಕೃತವರ್ಮಾ ಚಾಪ್ಯಾಸನ್ ಕೃಷ್ಣಸ್ಯ ಪೃಷ್ಠತಃ ॥೪೭॥

ಕೃಷ್ಣನ ಮುಂಭಾಗದಲ್ಲಿ ಕರ್ಣ-ದುರ್ಯೋಧನರಿಬ್ಬರೂ ಮತ್ತು ಕೃಷ್ಣನ ಹಿಂಭಾಗದಲ್ಲಿ ವೃಷ್ಣಿಗಳೂ ಮತ್ತು ಕೃತವರ್ಮನೂ ಇದ್ದನು.

ಧೃತರಾಷ್ಟ್ರಂ ಪುರಸ್ಕೃತ್ಯ ಭೀಷ್ಮದ್ರೋಣಾದಯಶ್ಚ ತೇ ।
ಆಸನೇಭ್ಯೋಽಚಲನ್ ಸರ್ವೇ ಪೂಜಯಂತೋ ಜನಾರ್ದನಮ್॥೪೮॥

ಧೃತರಾಷ್ಟ್ರನನ್ನು ಮುಂದೆ ಮಾಡಿಕೊಂಡು ಆ ಭೀಷ್ಮ-ದ್ರೋಣಾದಿಗಳೆಲ್ಲರೂ ಕೃಷ್ಣನಿಗೆ ಗೌರವವನ್ನು ಸಲ್ಲಿಸುತ್ತಾ ತಮ್ಮ ಆಸನಗಳಿಂದ ಎದ್ದರು.

ಅಭ್ಯಾಗಚ್ಛತಿ ದಾಶಾರ್ಹೇ ಪ್ರಜ್ಞಾಚಕ್ಷುರ್ಮಹಾಮನಾಃ ।
ಸಹೈವ ದ್ರೋಣಭೀಷ್ಮಾಭ್ಯಾಮುದತಿಷ್ಠನ್ ಮಹಾಯಶಾಃ ॥೪೯॥

ಕೃಷ್ಣನು ಸಭೆಯನ್ನು ಪ್ರವೇಶಿಸುತ್ತಿರಲು ಮಹಾಕೀರ್ತಿವಂತನೂ, ಪ್ರಜ್ಞಾಚಕ್ಷುವೂ, ಉದಾರವಾದ ಮನಸ್ಸುಳ್ಳವನೂ ಆದ ಧೃತರಾಷ್ಟ್ರನು ಭೀಷ್ಮ-ದ್ರೋಣರ ಜೊತೆಯಲ್ಲಿ ಎದ್ದು ನಿಂತನು.

ಉತ್ತಿಷ್ಠತಿ ಮಹಾರಾಜೇ ಧೃತರಾಷ್ಟ್ರೇ ಜನೇಶ್ವರೇ ।
ತಾನಿ ರಾಜಸಹಸ್ರಾಣಿ ಸಮುತ್ತಸ್ಥುಃ ಸಮಂತತಃ ॥೫೦॥

ಮಹಾರಾಜನಾದ ಎಲ್ಲ ಜನರಿಗೆ ಪ್ರಭುವಾದ ಧೃತರಾಷ್ಟ್ರನು ಎದ್ದು ನಿಲ್ಲುತ್ತಿರಲು ಸುತ್ತಲೂ ಇದ್ದ ಆ ಸಹಸ್ರಾರು ರಾಜರು ಎದ್ದು ನಿಂತರು.

ಆಸನಂ ಸರ್ವತೋಭದ್ರಂ ಜಾಂಬೂನದಪರಿಷ್ಕೃತಮ್ ।
ಕೃಷ್ಣಾರ್ಥೇ ಕಲ್ಪಿತಂ ತತ್ರ ಧೃತರಾಷ್ಟ್ರಸ್ಯ ಶಾಸನಾತ್ ॥೫೧॥

ಧೃತರಾಷ್ಟ್ರನ ಶಾಸನದಂತೆ ಅಲ್ಲಿ ಕೃಷ್ಣನಿಗಾಗಿ ಸರ್ವಮಂಗಳಕರವಾದ ಸುವರ್ಣಾಲಂಕೃತವಾದ ಆಸನ ಒಂದನ್ನು ಸಿದ್ಧಪಡಿಸಿದ್ದರು.

ಸ್ಮಯಮಾನಸ್ತು ರಾಜಾನಂ ಭೀಷ್ಮದ್ರೌಣೀ ಚ ಮಾಧವಃ ।
ಅಭ್ಯಭಾಷತ ಧರ್ಮಾತ್ಮಾ ರಾಜ್ಞಶ್ಚಾನ್ಯಾನ್ ಯಥಾವಯಃ ॥೫೨॥

ಮಾಧವನು ಧೃತರಾಷ್ಟ್ರನನ್ನೂ, ಭೀಷ್ಮ-ದ್ರೋಣರನ್ನೂ ನೋಡಿ ಮುಗುಳ್ನಗೆಯನ್ನು ಸೂಚಿಸುತ್ತಾ ಧರ್ಮಾತ್ಮನಾದ ಅವನು ಉಳಿದ ರಾಜರ ಜೊತೆಯಲ್ಲಿ, ಅವರ ವರ ವಯಸ್ಸಿಗೆ ಅನುಗುಣವಾಗಿ ಮಾತನಾಡಿದನು.

ತತ್ರ ಕೇಶವಮಾನರ್ಚುಃ ಸಮ್ಯಗಭ್ಯಾಗತಂ ಸಭಾಮ್ ।
ರಾಜಾನಃ ಪಾರ್ಥಿವಾಃ ಸರ್ವೇ ಕುರವಶ್ಚ ಜನಾರ್ದನಮ್ ॥೫೩॥

ಭೂಮಿಯ ಎಲ್ಲಾ ರಾಜರು ಮತ್ತು ಎಲ್ಲಾ ಕೌರವರು ಅಭ್ಯಾಗತನಾಗಿ ಸಭೆಯನ್ನು ಪ್ರವೇಶಿಸಿದ ಜನಾರ್ದನನಾದ ಕೃಷ್ಣನನ್ನು ಅರ್ಚಿಸಿದರು.

ತತ್ರ ತಿಷ್ಠನ್ ಸ ದಾಶಾರ್ಹೋ ರಾಜಮಧ್ಯೇ ಪರಂತಪಃ ।
ಅಪಶ್ಯದಂತರಿಕ್ಷಸ್ಥಾನ್ ಋಷೀನ್ ಪರಪುರಂಜಯಃ ॥೫೪॥

ರಾಜರ ಮಧ್ಯದಲ್ಲಿ ನಿಂತ ಪರಂತಪನೂ, ಪರಪುರಂಜಯನೂ ಆದ ಕೃಷ್ಣನು ಅಂತರಿಕ್ಷದಲ್ಲಿ ನಿಂತ ಋಷಿಗಳನ್ನು ನೋಡಿದನು.

ತತಸ್ತಾನಭಿಸಂಪ್ರೇಕ್ಷ್ಯ ನಾರದಪ್ರಮುಖಾನ್ ಋಷೀನ್ ।
ಅಭ್ಯಭಾಷತ ದಾಶಾರ್ಹೋ ಭೀಷ್ಮಂ ಶಾಂತನವಂ ಶನೈಃ ॥೫೫॥

ಆ ನಾರದ ಮೊದಲಾದ ಋಷಿಗಳನ್ನು ನೋಡಿದ ಕೃಷ್ಣನು ಶಂತನು ಪುತ್ರನಾದ ಭೀಷ್ಮನನ್ನು ಕುರಿತು ಮೆಲ್ಲನೆ (ಹೀಗೆ) ಮಾತನಾಡಿದನು.

ಪಾರ್ಥಿವೀಂ ಸಮಿತಿಂ ದ್ರಷ್ಟುಮ್ ಋಷಯೋऽಭ್ಯಾಗತಾ ನೃಪ ।
ನಿಮಂತ್ರ್ಯಂತಾಮಾಸನೈಶ್ಚ ಸತ್ಕಾರೇಣ ಚ ಭೂಯಸಾ ॥೫೬॥

ಎಲೈ ರಾಜನೇ, ಭೂಮಿಯಲ್ಲಿರುವ ಸಭೆಯನ್ನು ನೋಡಲು ಋಷಿಗಳು ಬಂದಿದ್ದಾರೆ. ಅವರನ್ನು ಆಸನ ಮತ್ತು ಬಹಳ ಸತ್ಕಾರಗಳಿಂದ ಆಮಂತ್ರಿಸುವವನಾಗು.

ನೈತೇಷ್ವನುಪವಿಷ್ಟೇಷು ಶಕ್ಯಂ ಕೇನಚಿದಾಸಿತುಮ್ ।
ಪೂಜಾ ಪ್ರಯುಜ್ಯತಾಮಾಶು ಮುನೀನಾಂ ಭಾವಿತಾತ್ಮನಾಮ್ ॥೫೭॥

ಅವರು ಕುಳಿತುಕೊಳ್ಳುವವರೆಗೆ ಯಾರೂ ಕುಳಿತುಕೊಳ್ಳಲು ಸಾಧ್ಯವಿಲ್ಲ. ಪರಿಶುದ್ಧವಾದ ಮನಸ್ಸುಳ್ಳ ಈ ಋಷಿಗಳಿಗೆ ಬೇಗ ಪೂಜೆಯನ್ನು ಸಲ್ಲಿಸುವವನಾಗು.

ವೈಶಂಪಾಯನಃ

ಋಷೀನ್ ಶಾಂತನವೋ ದೃಷ್ಟ್ವಾ ಸಭಾದ್ವಾರಮುಪಸ್ಥಿತಾನ್ ।
ತ್ವರಮಾಣಸ್ತತೋ ಭೃತ್ಯಾನ್ ಆಸನಾನೀತ್ಯಚೋದಯತ್ ॥೫೮॥

ವೈಶಂಪಾಯನ– ಸಭಾದ್ವಾರವನ್ನು ಸಮೀಪಿಸಿದ ಋಷಿಗಳನ್ನು ನೋಡಿ ಶಂತನು ಪುತ್ರನಾದ ಭೀಷ್ಮನು ತ್ವರೆಮಾಡುತ್ತಾ ಭೃತ್ಯರನ್ನು ಕುರಿತು ಆಸನಗಳನ್ನು ತನ್ನಿ ಎಂದು ಹೇಳಿದನು.

ಆಸನಾನ್ಯಥ ಮೃಷ್ಟಾನಿ ಮಹಾಂತಿ ವಿಪುಲಾನಿ ಚ ।
ಮಣಿಕಾಂಚನಚಿತ್ರಾಣಿ ಸಮಾಜಹ್ರುಸ್ತತಸ್ತತಃ ॥೫೯॥

ಆಗ ಸೇವಕರು ಶುದ್ಧವಾದ ವಿಸ್ತಾರವಾದ ಮಣಿಸುವರ್ಣಗಳಿಂದ ಅಲಂಕೃತವಾದ ದೊಡ್ಡ ಆಸನಗಳನ್ನು ಬೇರೆ ಬೇರೆ ಕಡೆಗಳಿಂದ ತೆಗೆದುಕೊಂಡು ಬಂದರು.

ತೇಷು ತತ್ರೋಪವಿಷ್ಟೇಷು ಗೃಹೀತಾರ್ಘ್ಯೇಷು ಭಾರತ ।
ನಿಷಸಾದಾಸನೇ ಕೃಷ್ಣೋ ರಾಜಾನಶ್ಚ ಯಥಾಸನಮ್ ॥೬೦॥

ಎಲೈ ಭಾರತನೇ, ಋಷಿಗಳು ಅಲ್ಲಿ ಕುಳಿತು ಅರ್ಘ್ಯವನ್ನು ಸ್ವೀಕರಿಸಿದ ಮೇಲೆ ಕೃಷ್ಣನು ತನ್ನ ಆಸನದಲ್ಲಿ ಕುಳಿತುಕೊಂಡನು. ಉಳಿದ ರಾಜರು ತಮ್ಮ ತಮ್ಮ ಆಸನಗಳಲ್ಲಿ ಕುಳಿತುಕೊಂಡರು.

ದುಃಶಾಸನಃ ಸಾತ್ಯಕಯೇ ದದಾವಾಸನಮುತ್ತಮಮ್ ।
ವಿವಿಂಶತಿರ್ದದೌ ಪೀಠಂ ಕಾಂಚನಂ ಕೃತವರ್ಮಣೇ ॥೬೧॥

ದುಶ್ಶಾಸನನು ಸಾತ್ಯಕಿಗೆ ಶ್ರೇಷ್ಠವಾದ ಆಸನವನ್ನು ಕೊಟ್ಟನು. ವಿವಿಂಶತಿಯು ಕೃತವರ್ಮನಿಗೆ ಸುವರ್ಣಮಯವಾದ ಆಸನವನ್ನು ಕೊಟ್ಟನು.

ಅವಿದೂರೇ ತು ಕೃಷ್ಣಸ್ಯ ಕರ್ಣದುರ್ಯೋಧನಾವುಭೌ ।
ಏಕಾಸನೇ ಮಹಾತ್ಮಾನೌ ನಿಷೀದತುರರಿಂದಮೌ ॥೬೨॥

ಕೃಷ್ಣನಿಗೆ ಸಮೀಪದಲ್ಲಿ ಅರಿಂದಮರಾದ ಮಹಾಪ್ರಯತ್ನಶಾಲಿಗಳಾದ ಕರ್ಣ-ದುರ್ಯೋಧನರಿಬ್ಬರೂ ಒಂದೇ ಆಸನದಲ್ಲಿ ಕುಳಿತರು.

ಗಾಂಧಾರರಾಜಃ ಶಕುನಿಃ ಗಾಂಧಾರೈರಭಿರಕ್ಷಿತಃ ।
ನಿಷಸಾದಾಸನೇ ರಾಜಾ ಸಹಪುತ್ರೈರ್ವಿಶಾಂಪತೇ ॥೬೩॥

ಎಲೈ ರಾಜನೇ, ಗಾಂಧಾರರಾಜನಾದ ಶಕುನಿಯು ಗಾಂಧಾರಯೋಧರಿಂದ ರಕ್ಷಿಸಲ್ಪಟ್ಟವನಾಗಿ ತನ್ನ ಪುತ್ರರ ಜೊತೆಯಲ್ಲಿ ಆಸನದಲ್ಲಿ ಕುಳಿತುಕೊಂಡನು.

ವಿದುರೋ ಮಣಿಪೀಠೇ ತು ಶುಕ್ಲಸ್ಪರ್ಧ್ಯಜಿನೋತ್ತರೇ ।
ಸಂಸ್ಪೃಶನ್ನಾಸನಂ ಶೌರೇಃ ಮಹಾಮತಿರುಪಾವಿಶತ್ ॥೬೪॥

ಮಹಾಮತಿಯಾದ ವಿದುರನು ಕೃಷ್ಣನ ಆಸನವನ್ನು ಮುಟ್ಟಿ ಅತ್ಯಂತ ಬಿಳಿಯಾದ ಚರ್ಮವನ್ನು ಹಾಸಿದ ಮಣಿಪೀಠದಲ್ಲಿ ಕುಳಿತುಕೊಂಡನು.

ಚಿರಸ್ಯ ದೃಷ್ಟ್ವಾ ದಾಶಾರ್ಹಂ ರಾಜಾನಃ ಸರ್ವಪಾರ್ಥಿವಾಃ ।
ಅಮೃತಸ್ಯೇವ ನಾತೃಪ್ಯನ್ ಪ್ರೇಕ್ಷಮಾಣಾ ಜನಾರ್ದನಮ್ ॥೬೫॥

ಭೂಮಿಯಲ್ಲಿದ್ದ ಎಲ್ಲ ರಾಜರು ಬಹುಕಾಲದಮೇಲೆ ಕೃಷ್ಣನನ್ನು ನೋಡಿ ಅಮೃತವನ್ನು ಕುಡಿದಂತೆ ಕೃಷ್ಣನನ್ನು ನೋಡುತ್ತಾ ತೃಪ್ತಿಯನ್ನೇ ಹೊಂದಲಿಲ್ಲ.

ಅಸತೀಪುಷ್ಪಸಂಕಾಶಃ ಪೀತವಾಸಾ ಜನಾರ್ದನಃ ।
ವ್ಯಭ್ರಾಜತ ಸಭಾಮಧ್ಯೇ ಹೇಮ್ನೀವೋಪಹಿತೋ ಮಣಿಃ ॥೬೬॥

ಅಗಸೆಯ ಹೂವಿನ ಕಾಂತಿಯುಳ್ಳ ಪೀತಾಂಬರಧಾರಿಯಾದ ಕೃಷ್ಣನು ಆ ಸಭೆಯ ಮಧ್ಯದಲ್ಲಿ ಸುವರ್ಣಮಧ್ಯದಲ್ಲಿರುವ ಮರಕತಮಣಿಯಂತೆ ಶೋಭಿಸಿದನು.

ತತಸ್ತೂಷ್ಣೀಂ ಸರ್ವಮಾಸೀದ್ ಗೋವಿಂದಗತಮಾನಸಮ್ ।
ನ ತತ್ರ ಕಶ್ಚಿದ್ ಕಿಂಚಿದ್ವಾ ವ್ಯಾಜಹಾರ ಪುಮಾನ್ ಕ್ವಚಿತ್ ॥೬೭॥

ಅನಂತರ ಅಲ್ಲಿದ್ದ ಎಲ್ಲರೂ ಕೃಷ್ಣನಲ್ಲಿ ನೆಟ್ಟಮನಸ್ಸುಳ್ಳವರಾಗಿ ಮೌನದಿಂದ ಕುಳಿತರು. ಯಾವ ಪುರುಷನೂ ಏನನ್ನೂ ಮಾತನಾಡಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ತ್ರಿನವತಿತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ಚತುರ್ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ತೊಂಬತ್ಮೂರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ

ಸಂಪೂಜಿತೋ ಭೀಷ್ಮಮುಖ್ಯೈಃ ಸಮಸ್ತೈ
ರರಾಜ ರಾಜೀವಸಮಾನನೇತ್ರಃ ।
ಯಥೋಚಿತಾಸ್ತತ್ರ ವಿಧಾಯ ವಾರ್ತಾ
ಜಗಾದ ಕಾಲೇ ಕಲಿಕಲ್ಮಷಾಪಹಃ ॥೭೧॥

ಕಲಿಕಲ್ಮಷವನ್ನು ಕಳೆವ ಕಮಲಲೋಚನನಾದ ಶ್ರೀಕೃಷ್ಣ ಭೀಷ್ಮಾದಿಗಳೆಲ್ಲರಿಂದಲೂ ಸತ್ಕೃತನಾಗಿ ಸಂದರ್ಭೋಚಿತವಾದ ಮಾತುಗಳನ್ನಾಡಿ ಯೋಗ್ಯಕಾಲದಲ್ಲಿ ಹೀಗೆ ನುಡಿದ.

ವೈಚಿತ್ರವೀರ್ಯ ಸ್ವಕುಲಸ್ಯ ವೃದ್ಧ್ಯೈ
ಪ್ರದೇಹಿ ರಾಜ್ಯಂ ತವ ಸತ್ಸುತಾಯ ।
ಯಶಶ್ಚ ಧರ್ಮಂ ಪರಮಂ ಪ್ರಸಾದಂ
ಮಮ ತ್ವಮಾಪ್ನೋಷಿ ತದೈವ ರಾಜನ್ ॥೭೨॥

'ಧೃತರಾಷ್ಟ್ರ! ನಿನ್ನ ಕುಲದ ಏಳಿಗೆಗಾಗಿ ನಿನ್ನ ಸುಪುತ್ರರಿಗೆ ರಾಜ್ಯನೀಡು. ಆಗಲೆ ನೀನು ಕೀರ್ತಿಯನ್ನೂ ಪುಣ್ಯವನ್ನೂ ನನ್ನ ಪರಮಾನುಗ್ರಹವನ್ನೂ ಪಡೆಯುವಿ'.

ಅತೋಽನ್ಯಥಾ ಯಶಸೋ ಧರ್ಮತಶ್ಚ
ಹೀನಃ ಪ್ರತೀಪತ್ವಮುಪೈಷಿ ಮೇಽತಃ ।
ಇತೀರಿತಃ ಪ್ರಾಹ ಮಮಾತಿವರ್ತಿನಂ
ಸುತಂ ಸ್ವಯಂ ಮೇ ಪ್ರತಿಬೋಧಯೇತಿ ॥೭೩॥

'ಹಾಗೆ ಮಾಡದಿದ್ದರೆ ಕೀರ್ತಿಯನ್ನೂ ಪುಣ್ಯವನ್ನೂ ಕಳೆದುಕೊಂಡು ನನಗೆ ವಿರೋಧಿ ಎನಿಸುವೆ' ಕೃಷ್ಣ ಹೀಗೆ ಹೇಳಿದಾಗ ಧೃತರಾಷ್ಟ್ರನೆಂದ, 'ನನ್ನ ಮಗ ನನ್ನ ಮಾತನ್ನು ಮೀರುತ್ತಾನೆ. ಸ್ವಯಂ ನೀನೇ ತಿಳಿಯ ಹೇಳು'.

★ ★ ★ ★ ★

ತೊಂಬತ್ನಾಲ್ಕನೆಯ ಅಧ್ಯಾಯ

ಧೃತರಾಷ್ಟ್ರನನ್ನು ಕುರಿತು ಕೃಷ್ಣನಿಂದ ಸಂಧಿಯ ಗುಣಗಳ ಮತ್ತು ಯುದ್ಧದ ದೋಷಗಳ ಉಪದೇಶ.

ವೈಶಂಪಾಯನಃ

ತೇಷ್ವಾಸೀನೇಷು ಸರ್ವೇಷು ತೂಷ್ಣೀಂಭೂತೇಷು ರಾಜಸು ।
ವಾಕ್ಯಮಭ್ಯಾದದೇ ಕೃಷ್ಣಃ ಸುದಂಷ್ಟ್ರೋ ದುಂದುಭಿಸ್ವನಃ ॥೧॥

ವೈಶಂಪಾಯನ– ಎಲ್ಲ ರಾಜರು ಅಲ್ಲಿ ಮೌನವಾಗಿ ಕುಳಿತಿರಲು ಒಳ್ಳೆಯ ದಂತಶೋಭಿತನಾದ, ದುಂದುಭಿಯ ಧ್ವನಿಯುಳ್ಳ ಕೃಷ್ಣನು ಮಾತನಾಡಲು ಆರಂಭಿಸಿದನು.

ಜೀಮೂತ ಇವ ಘರ್ಮಾಂತೇ ಸರ್ವಾಂ ಸಂಶ್ರಾವಯನ್ ಸಭಾಮ್ ।
ಧೃತರಾಷ್ಟ್ರಮಭಿಪ್ರೇಕ್ಷ್ಯ ಸಮಭಾಷತ ಮಾಧವಃ ॥೨॥

ಬೇಸಿಗೆಯ ನಂತರ ಮಳೆಗಾಲದಲ್ಲಿ ಗುಡುಗುವ ಮೋಡದಂತೆ ಮಾಧವನು ಎಲ್ಲಾ ಸಭೆಗೂ ಕೇಳಿಸುವಂತೆ ಧೃತರಾಷ್ಟ್ರನನ್ನು ನೋಡಿ ಮಾತನಾಡಿದನು.

ಕುರೂಣಾಂ ಪಾಂಡವಾನಾಂ ಚ ಶಮಃ ಸ್ಯಾದಿತಿ ಭಾರತ ।
ಅಪ್ರಣಾಶೇನ ವೀರಾಣಾಮೇತದ್ ಯಾಚಿತುಮಾಗತಃ ॥೩॥

ಎಲೈ ಭಾರತನೇ, ವೀರರಿಗೆ ನಾಶವಾಗದಿರುವಂತೆ ಕೌರವರಿಗೂ ಮತ್ತು ಪಾಂಡವರಿಗೂ ಸಂಧಿ ಉಂಟಾಗಲೆಂದು ಇದನ್ನು ಬೇಡಲು ನಾನು ಇಲ್ಲಿಗೆ ಬಂದಿದ್ದೇನೆ.

ರಾಜನ್ ನಾನ್ಯತ್ ಪ್ರವಕ್ತವ್ಯಂ ತವ ನೈಶ್ರೇಯಸಂ ವಚಃ ।
ವಿದಿತಂ ಹ್ಯೇವ ತೇ ಸರ್ವಂ ವೇದಿತವ್ಯಮರಿಂದಮ ॥೪॥

ಎಲೈ ರಾಜನೇ, ಇದನ್ನು ಬಿಟ್ಟು ನಿನಗೆ ಶ್ರೇಯಸ್ಕರವಾದ ಬೇರೆ ಮಾತುಗಳನ್ನು ಆಡುವ ಅವಶ್ಯಕತೆ ಇಲ್ಲ. ಎಲೈ ಅರಿಂದಮನೇ, ತಿಳಿಯಬೇಕಾದುದನ್ನೆಲ್ಲಾ ನೀನು ತಿಳಿದೇ ಇದ್ದೀಯೆ.

ಇದಂ ಹ್ಯದ್ಯ ಕುಲಂ ಶ್ರೇಷ್ಠಂ ಪೃಥಿವ್ಯಾಂ ಸರ್ವರಾಜಸು ।
ಶ್ರುತವೃತ್ತೋಪಸಂಪನ್ನಂ ಸರ್ವೈಃ ಸಮುದಿತಂ ಗುಣೈಃ ॥೫॥

ಈ ನಿಮ್ಮ ಕುಲವು ಒಳ್ಳೆಯ ಗುಣ ಮತ್ತು ವಿದ್ಯೆಗಳಿಂದಲೂ ಮತ್ತು ಎಲ್ಲಾ ಶ್ರೇಷ್ಠವಾದ ಗುಣಗಳಿಂದಲೂ ಕೂಡಿದುದಾಗಿ ಭೂಮಿಯಲ್ಲಿ ಎಲ್ಲ ರಾಜಕುಲಗಳಿಗಿಂತ ಶ್ರೇಷ್ಠವಾಗಿದೆ.

ಕೃಪಾಽನುಕಂಪಾ ಕಾರುಣ್ಯಮಾನೃಶಂಸ್ಯಂ ಚ ಭಾರತ ।
ತಥಾಽಽರ್ಜವಂ ಕ್ಷಮಾ ಸತ್ಯಂ ಕುರುಷ್ವೇವ ವಿಭಾವ್ಯತೇ ॥೬॥

ಎಲೈ ಭಾರತನೇ, ದಯೆ, ಅನುಕಂಪ, ಕರುಣೆ, ಅಕ್ರೌರ್ಯ, ಆರ್ಜವ, ಕ್ಷಮೆ, ಸತ್ಯ ಇವೆಲ್ಲವೂ ಕುರುಗಳಲ್ಲಿಯೇ ಕಂಡುಬರುತ್ತವೆ.

ತಸ್ಮಿನ್ನೇವಂವಿಧೇ ರಾಜನ್ ಕುಲೇ ಮಹತಿ ತಿಷ್ಠತಿ ।
ತ್ವನ್ನಿಮಿತ್ತಂ ವಿಶೇಷೇಣ ನೇಹ ಯುಕ್ತಮಸಾಂಪ್ರತಮ್ ॥೭॥

ಎಲೈ ರಾಜನೇ, ಇಂತಹ ದೊಡ್ಡ ಕುಲವು ಇರುತ್ತಿರಲು ನಿನ್ನ ನಿಮಿತ್ತದಿಂದ ವಿಶೇಷವಾಗಿ ಯಾವ ಅನುಚಿತವಾದದ್ದೂ ಸಂಭವಿಸಬಾರದು.

ತ್ವಂ ಹಿ ವಾರಯಿತಾ ಶ್ರೇಷ್ಠಃ ಕುರೂಣಾಂ ಕುರುಸತ್ತಮ ।
ಮಿಥ್ಯಾ ಪ್ರಚರತಾಂ ತಾತ ಬಾಹ್ಯೇಷ್ವಾಭ್ಯಂತರೇಷು ಚ ॥೮॥

ಎಲೈ ಕುರುಶ್ರೇಷ್ಠನೇ, ಪ್ರೀತಿಪಾತ್ರನೇ, ಶ್ರೇಷ್ಠನಾದ ನೀನು ಮೋಸವನ್ನು ಮಾಡುವ ಅಂತರಂಗದ ಮತ್ತು ಬಹಿರಂಗದ ಜನರನ್ನು ತಡೆಯುವವನಾಗಬೇಕಷ್ಟೆ?

ಪುತ್ರಾಸ್ತವ ತು ಕೌರವ್ಯ ದುರ್ಯೋಧನಪುರೋಗಮಾಃ ।
ಧರ್ಮಾರ್ಥೌ ಪೃಷ್ಠತಃ ಕೃತ್ವಾ ಪ್ರಚರಂತಿ ನೃಶಂಸವತ್ ॥೯॥

ಎಲೈ ಕೌರವ್ಯನೇ, ದುರ್ಯೋಧನ ಮೊದಲಾದ ನಿನ್ನ ಮಕ್ಕಳು ಧರ್ಮಾರ್ಥಗಳನ್ನು ಹಿಂದಕ್ಕೆ ಹಾಕಿ ಕ್ರೂರವಾಗಿ ನಡೆದುಕೊಳ್ಳುತ್ತಿದ್ದಾರೆ.

ಅಶಿಷ್ಟಾ ಗತಮರ್ಯಾದಾ ಲೋಭೇನ ಹೃಷ್ಟಚೇತಸಃ ।
ಸ್ವೇಷು ಬಂಧುಷು ಮುಖ್ಯೇಷು ತದ್ ವೇತ್ಥ ಪುರುಷರ್ಷಭ ॥೧೦॥

ಎಲೈ ಪುರುಷರ್ಷಭನೇ, ಅವರು ಶಿಷ್ಟಾಚಾರವನ್ನು ಮೀರಿ ಯಾವ ಮರ್ಯಾದೆಯೂ ಇಲ್ಲದೆ ಲೋಭದಿಂದ ಕೂಡಿದ ಮನಸ್ಸುಳ್ಳವರಾಗಿ ತಮ್ಮ ಮುಖ್ಯಬಂಧುಗಳ ವಿಷಯದಲ್ಲಿಯೇ ಹೀಗೆ ನಡೆದುಕೊಳ್ಳುತ್ತಿದ್ದಾರೆಂಬುದನ್ನು ನೀನು ತಿಳಿದಿದ್ದೀಯೆ.

ಸೇಯಮಾಪನ್ಮಹಾಘೋರಾ ಕುರುಷ್ವೇವ ಸಮುತ್ಥಿತಾ ।
ಉಪೇಕ್ಷ್ಯಮಾಣಾ ಕೌರವ್ಯ ಪೃಥಿವೀಂ ಘಾತಯಿಷ್ಯತಿ ॥೧೧॥

ಎಲೈ ಕೌರವ್ಯನೇ, ಈ ಘೋರವಾದ ದೊಡ್ಡ ಆಪತ್ತು ಕುರುಗಳಲ್ಲಿಯೇ ಉದ್ಭವಿಸಿದೆ. ಇದನ್ನು ಉದಾಸೀನ ಮಾಡಿದರೆ ಪೃಥಿವಿಯನ್ನೇ ನಾಶಪಡಿಸುತ್ತದೆ.

ಶಕ್ಯಾ ಚೇಯಂ ಶಮಯಿತುಂ ತ್ವಂ ಚೇದಿಚ್ಛಸಿ ಭಾರತ ।
ಸುದುಷ್ಕರೋಽಪ್ಯತ್ರ ಶಮೋ ಮತೋ ಮೇ ಭರತರ್ಷಭ ॥೧೨॥

ಎಲೈ ಭಾರತನೇ, ನಿನಗೆ ಮನಸ್ಸಿದ್ದರೆ ಈ ಆಪತ್ತನ್ನು ನಿವಾರಿಸಲು ಸಾಧ್ಯ. ಎಲೈ ಭರತರ್ಷಭನೇ, ಬಹಳ ಕಷ್ಟವಾದರೂ ಸಂಧಿಯು ಅಸಾಧ್ಯವಲ್ಲ ಎಂದು ನನ್ನ ಅಭಿಪ್ರಾಯ.

ತ್ವದಧೀನಃ ಶಮೋ ರಾಜನ್ ಮಯಿ ಚೈವ ವಿಶಾಂಪತೇ ।
ಪುತ್ರಾನ್ ಸ್ಥಾಪಯ ಕೌರವ್ಯ ಸ್ಥಾಪಯಿಷ್ಯಾಮ್ಯಹಂ ಪರಾನ್ ॥೧೩॥

ಎಲೈ ರಾಜನೇ, ಈ ಸಂಧಿಯು ನಿನ್ನನ್ನು ಮತ್ತು ನನ್ನನ್ನು ಅವಲಂಬಿಸಿದೆ. ಎಲೈ ಕೌರವ್ಯನೇ, ನೀನು ನಿನ್ನ ಮಕ್ಕಳನ್ನು ತಡೆಯುವವನಾಗು. ನಾನು ಬೇರೆಯವರಾದ ಪಾಂಡವರನ್ನು ನಿಲ್ಲಿಸುವೆನು.

ಅನುಜ್ಞಾತಂ ಹಿ ಭವತಾ ಸರ್ವೈಃ ಪುತ್ರೈಃ ಸಹಾನುಗೈಃ ।
ಹಿತಂ ಬಲವದಪ್ಯೇಷಾಂ ತಿಷ್ಠತಾಂ ತವ ಶಾಸನೇ ॥೧೪॥

ನೀನು ಅನುಮತಿಯನ್ನು ಕೊಟ್ಟರೆ ನಿನ್ನ ಶಾಸನದಲ್ಲಿರುವ ನಿನ್ನ ಎಲ್ಲಾ ಪುತ್ರರೂ ಮತ್ತು ಅವರ ಅನುಚರರೂ ದೊಡ್ಡ ಹಿತವನ್ನು ಪಡೆಯುವವರಾಗಲಿ.

ಹಿತಂ ಹಿ ಧಾರ್ತರಾಷ್ಟ್ರಾಣಾಂ ಪಾಂಡವಾನಾಂ ತಥಾ ಹಿತಮ್ ।
ಶಮೇ ಪ್ರಯತಮಾನಸ್ಯ ತವ ಶಾಸನಕಾಂಕ್ಷಿಣಃ ॥೧೪॥

ಸಂಧಿಯನ್ನು ಮಾಡಲು ಪ್ರಯತ್ನಪಟ್ಟು ನಿನ್ನ ಆದೇಶವನ್ನು ನಿರೀಕ್ಷಿಸುತ್ತಿರುವ ನನಗೆ ನಿನ್ನ ಪುತ್ರರಿಗೂ ಮತ್ತು ಪಾಂಡವರಿಗೂ ಹಿತವಾಗುತ್ತದೆ (ಎಂಬ ನಿಶ್ಚಯವಿದೆ).

ತೇಷಾಂ ನಿಷ್ಕಲ್ಮಷಂ ರಾಜನ್ ಸಂವಿಧತ್ಸ್ವ ವಿಶಾಂಪತೇ ।
ಸಹಭೂತಾಸ್ತು ಭರತಾಃ ತವೈವ ಸ್ಯುರ್ಜನಾಧಿಪ ॥೧೫॥

ಎಲೈ ರಾಜನೇ, ಪ್ರಜಾಪತಿಯೇ, ನಿನ್ನ ಪುತ್ರರು ನಿಷ್ಕಲ್ಮಷರಾಗಿರುವಂತೆ ಮಾಡು. ಎಲೈ ರಾಜನೇ, ಭರತರೆಲ್ಲರೂ ಒಂದುಗೂಡಿದರೆ ಅದು ನಿನಗೇ ಲಾಭವಾಗುತ್ತದೆ.

ಧರ್ಮಾರ್ಥಯೋಸ್ತಿಷ್ಠ ರಾಜನ್ ಪಾಂಡವೈರಭಿರಕ್ಷಿತಃ ।
ನ ಹಿ ಶಕ್ಯಾಸ್ತಥಾಭೂತಾ ಯತ್ನಾದಪಿ ನರಾಧಿಪ ॥೧೬॥

ಎಲೈ ರಾಜನೇ, ಪಾಂಡವರಿಂದ ರಕ್ಷಿತನಾಗಿ ಧರ್ಮಾರ್ಥಗಳನ್ನು ಅನುಷ್ಠಾನ ಮಾಡುವವನಾಗು. ಎಲೈ ನರಾಧಿಪನೇ, ಅಂತಹ ಪಾಂಡವರು ಪ್ರಯತ್ನಪಟ್ಟರೂ ಯಾರಿಗೂ ಸೋಲುವವರಲ್ಲ.

ನ ಹಿ ತ್ವಾಂ ಪಾಂಡವೈರ್ಜೇತುಂ ರಕ್ಷ್ಯಮಾಣಂ ಮಹಾತ್ಮಭಿಃ ।
ಇಂದ್ರೋಽಪಿ ದೇವೈಃ ಸಹಿತಃ ಪ್ರಸಹೇತ ಕುತೋ ನೃಪಾಃ ॥೧೭॥

ಮಹಾತ್ಮರಾದ ಪಾಂಡವರಿಂದ ರಕ್ಷಿಸಲ್ಪಡುವ ನಿನ್ನನ್ನು ದೇವತೆಗಳಿಂದ ಸಹಿತನಾದ ಇಂದ್ರನೂ ಸಹ ಜಯಿಸಲು ಸಮರ್ಥನಾಗಲಾರ. ಇನ್ನು ಉಳಿದ ರಾಜರು ಹೇಗೆ ಜಯಿಸಬಹುದು?

ಯತ್ರ ಭೀಷ್ಮಶ್ಚ ದ್ರೋಣಶ್ಚ ಕೃಪಃ ಕರ್ಣೋ ವಿವಿಂಶತಿಃ ।
ಅಶ್ವತ್ಥಾಮಾ ವಿಕರ್ಣಶ್ಚ ಸೋಮದತ್ತೋಽಥ ಬಾಹ್ಲಿಕಃ ॥೧೮॥

ಸೈಂಧವಶ್ಚ ಕಳಿಂಗಶ್ಚ ಕಾಂಭೋಜಶ್ಚ ಸುದಕ್ಷಿಣಃ ।
ಯುಧಿಷ್ಠಿರೋ ಭೀಮಸೇನಃ ಸವ್ಯಸಾಚೀ ಯಮೌ ತಥಾ ॥೧೯॥

ಸಾತ್ಯಕಿಶ್ಚ ಮಹಾತೇಜಾ ಯುಯುತ್ಸುಶ್ಚ ಮಹಾರಥಃ ।
ತತ್ರ ಯುಧ್ಯೇತ ಕೋ ರಾಜನ್ ಜೀವಿತಪ್ರೇಪ್ಸುರಾಹವೇ ॥೨೦॥

ಎಲ್ಲಿ ಭೀಷ್ಮರು, ದ್ರೋಣರು, ಕೃಪ, ಕರ್ಣ, ವಿವಿಂಶತಿ, ಅಶ್ವತ್ಥಾಮ, ವಿಕರ್ಣ, ಸೋಮದತ್ತ, ಬಾಹ್ಲೀಕ, ಸೈಂಧವ, ಕಳಿಂಗ, ಕಾಂಭೋಜದೇಶದ ಸುದಕ್ಷಿಣ, ಯುಧಿಷ್ಠಿರ, ಭೀಮಸೇನ, ಅರ್ಜುನ, ನಕುಲ-ಸಹದೇವರು, ಮಹಾತೇಜಸ್ವಿಯಾದ ಸಾತ್ಯಕಿ, ಮಹಾರಥನಾದ ಯುಯುತ್ಸು ಇವರು ಇರುತ್ತಾರೆಯೋ ಅಂತಹ ವರ ಎದುರಿನಲ್ಲಿ ಬದುಕಲು ಬಯಸುವ ಯಾವನು ತಾನೆ ಯುದ್ಧವನ್ನು ಮಾಡಿಯಾನು?

ಗೌರವಂ ಸರ್ವರಾಜ್ಞಾಂ ಹಿ ಶತ್ರುಭಿಶ್ಚಾಪ್ರಧೃಷ್ಯತಾಮ್ ।
ಪ್ರಾಪ್ಸ್ಯಸಿ ತ್ವಮಮಿತ್ರಘ್ನ ಸಹಿತಃ ಕುರುಪಾಂಡವೈಃ ॥೨೧॥

ಎಲೈ ಶತ್ರುಸಂಹಾರಕನೇ, ನೀನು ಕುರು-ಪಾಂಡವರಿಂದ ಸಹಿತನಾದರೆ ಎಲ್ಲ ರಾಜರಿಂದ ಗೌರವವನ್ನೂ ಮತ್ತು ಶತ್ರುಗಳಿಂದ ಅಜೇಯತ್ವವನ್ನೂ ಹೊಂದುವಿ.

ತಸ್ಯ ತೇ ಪೃಥಿವೀಪಾಲಾಃ ತ್ವತ್ತಸ್ಮಾಃ ಪೃಥಿವೀಪತೇ ।
ಶ್ರೇಯಾಂಸಶ್ಚೈವ ರಾಜಾನಃ ಸಂಧಾಸ್ಯಂತೇ ಪರಂತಪ ॥೨೨॥

ಎಲೈ ಪರಂತಪನೇ, ಎಲೈ ಪೃಥಿವೀಪತಿಯೇ, ನಿನಗೆ ಸಮನಾದ ಮತ್ತು ನಿನಗಿಂತ ಅಧಿಕರಾದ ಎಲ್ಲ ರಾಜರೂ ಆಗ ನಿನ್ನ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳುವರು.

ಸ ತ್ವಂ ಪುತ್ರೈಶ್ಚ ಪೌತ್ರೈಶ್ಚ ಪಿತೃಭಿರ್ಭ್ರಾತೃಭಿಸ್ತಥಾ ।
ಸುಹೃದ್ಭಿಃ ಸರ್ವತೋ ಗುಪ್ತಃ ಸುಖಂ ಶಕ್ಷ್ಯಸಿ ಜೀವಿತುಮ್ ॥೨೩॥

ನೀನು ಪುತ್ರ-ಪೌತ್ರರಿಂದಲೂ, ಪಿತೃ-ಭ್ರಾತೃಗಳಿಂದಲೂ, ಸುಹೃಜ್ಜನರಿಂದಲೂ ಎಲ್ಲ ರೀತಿಯಿಂದಲೂ ರಕ್ಷಿತನಾಗಿ ಸುಖವಾಗಿ ಜೀವಿಸಲು ಸಾಧ್ಯವಾಗುತ್ತದೆ.

ಏತಾನೇವ ಪುರೋಧಾಯ ಸತ್ಕೃತ್ಯ ಚ ಯಥಾ ಪುರಾ ।
ಅಖಿಲಾಂ ಭೋಕ್ಷ್ಯಸೇ ಸರ್ವಾಂ ಪೃಥಿವೀಂ ಪೃಥಿವೀಪತೇ ॥೨೪॥

ಎಲೈ ಪೃಥಿವೀಪತಿಯೇ, ಹಿಂದಿನಂತೆ ಇವರನ್ನೇ (ಪಾಂಡವರನ್ನೇ) ಸತ್ಕರಿಸಿ ಮುಂದೆ ಇಟ್ಟುಕೊಂಡು ಅಖಂಡವಾದ ಎಲ್ಲಾ ಪೃಥಿವಿಯನ್ನೂ ಭೋಗಿಸುವಿ.

ಏತೈರ್ಹಿ ಸಹಿತಃ ಸರ್ವೈಃ ಪಾಂಡವೈಃ ಸ್ವೈಶ್ಚ ಭಾರತ ।
ಅನ್ಯಾನ್ ವಿಜೇಷ್ಯಸೇ ಶತ್ರೂನ್ ಏಷ ಸ್ವಾರ್ಥಸ್ತವಾಖಿಲಃ ॥೨೫॥

ಎಲೈ ಭಾರತನೇ, ಈ ಎಲ್ಲ ಪಾಂಡವರಿಂದಲೂ ಮತ್ತು ನಿನ್ನ ಮಕ್ಕಳಿಂದಲೂ ಸಹಿತನಾದ ನೀನು ಉಳಿದ ಶತ್ರುಗಳನ್ನು ಜಯಿಸುವಿ. ಆದ್ದರಿಂದ ಈ ಸಂಧಿಯು ನಿನಗೇ ಹೆಚ್ಚಿನ ಸ್ವಾರ್ಥವನ್ನು ಉಂಟುಮಾಡುವಂತಹದು.

ತೈರೇವೋಪಾರ್ಜಿತಾಂ ಭೂಮಿಂ ಭೋಕ್ಷ್ಯಸೇ ಚ ಪರಂತಪ ।
ಯದಿ ಸಂಧಿತ್ಸಸೇ ರಾಜನ್ ಪಾಂಡವೈಶ್ಚ ಪರಂತಪ ॥೨೬॥

ಎಲೈ ಪರಂತಪನೇ, ರಾಜನೇ, ಪಾಂಡವರ ಜೊತೆಯಲ್ಲಿ ನೀನು ಸಂಧಿಯನ್ನು ಮಾಡಿಕೊಂಡರೆ ಅವರೇ ಸಂಪಾದಿಸಿದ ಭೂಮಿಯನ್ನು ನೀನು ಭೋಗಿಸುವಿ.

ಸಂಯುಗೇ ವೈ ಮಹಾರಾಜ ದೃಶ್ಯತೇ ವೈ ಮಹಾನ್ ಕ್ಷಯಃ ।
ಕ್ಷಯೇ ಚೋಭಯತೋ ರಾಜನ್ ಕಂ ಧರ್ಮಮನುಪಶ್ಯಸಿ ॥೨೭॥

ಎಲೈ ಮಹಾರಾಜನೇ, ಯುದ್ಧ ಉಂಟಾದರೆ ದೊಡ್ಡ ವಿನಾಶವು ಕಂಡುಬರುತ್ತದೆ. ರಾಜನೇ, ಎರಡು ಪಕ್ಷಗಳಲ್ಲಿಯೂ ವಿನಾಶವನ್ನು ಉಂಟುಮಾಡುವುದರಲ್ಲಿ ಯಾವ ಧರ್ಮವಿದೆ ಎಂದು ತಿಳಿಯುತ್ತೀಯೆ?

ಪಾಂಡವೈರ್ನಿಹತೈಃ ಸಂಖೇ ಪುತ್ರೈರ್ವಾऽಪಿ ಮಹಾಬಲೈಃ ।
ಯದ್ ಏಂದೇಥಾಃ ಸುಖಂ ರಾಜನ್ ತದ್ ಬ್ರೂಹಿ ಭರತರ್ಷಭ ॥

ಎಲೈ ಭರತರ್ಷಭನೇ, ಯುದ್ಧದಲ್ಲಿ ಪಾಂಡವರು ಹತರಾದರೂ ಅಥವಾ ಮಹಾಬಲರಾದ ನಿನ್ನ ಪುತ್ರರು ಹತರಾದರೂ ನಿನಗೆ ಏನು ಸುಖವುಂಟಾಗುತ್ತದೆ ಎಂಬುದನ್ನು ಹೇಳು.

ಶೂರಾಶ್ಚ ಹಿ ಕೃತಾಸ್ತ್ರಾಶ್ಚ ಸರ್ವೇ ಯುದ್ಧಾಭಿಕಾಂಕ್ಷಿಣಃ ।
ಪಾಂಡವಾಸ್ತಾವಕಾಶ್ಚೈವ ತಾನ್ ರಕ್ಷ ಮಹತೋ ಭಯಾತ್ ॥೨೯॥

ಶೂರರೂ, ಶಸ್ತ್ರಸಂಪನ್ನರೂ ಆದ ಪಾಂಡವರು ಮತ್ತು ಕೌರವರು ಎಲ್ಲರೂ ಯುದ್ಧವನ್ನು ಬಯಸುತ್ತಿದ್ದಾರೆ. ಅವರನ್ನು ದೊಡ್ಡ ಭಯದಿಂದ ಪಾರುಮಾಡುವವನಾಗು.

ನ ಪಶ್ಯೇಮ ಕುರೂನ್ ಸರ್ವಾನ್ ಪಾಂಡವಾಂಶ್ಚೈವ ಸಂಯುಗೇ ।
ಕ್ಷೀಣಾನುಭಯತಃ ಶೂರಾನ್ ರಥಿನೋ ರಥಿಭಿರ್ಹತಾನ್ ॥೩೦॥

ರಥಿಕರೂ, ಶೂರರಾದ ಪಾಂಡವ-ಕೌರವರೆಲ್ಲರೂ ಯುದ್ಧದಲ್ಲಿ ರಥಿಕರಿಂದ ಹತರಾಗಿ, ಇಬ್ಬರೂ ಕ್ಷಯವನ್ನು ಹೊಂದುವುದನ್ನು ನಾವು ನೋಡುವುದು ಬೇಡ.

ಸಮವೇತಾಃ ಪೃಥಿವ್ಯಾಂ ಹಿ ರಾಜಾನೋ ರಾಜಸತ್ತಮ ।
ಅಮರ್ಷವಶಮಾಪನ್ನಾ ನಾಶಯೇಯುರಿಮಾಃ ಪ್ರಜಾಃ ॥೩೧॥

ಎಲೈ ರಾಜಶ್ರೇಷ್ಠನೇ, ಭೂಮಿಯಲ್ಲಿರುವ ಕ್ರೋಧವಶರಾದ ಎಲ್ಲ ರಾಜರೂ ಒಂದುಗೂಡಿದ್ದಾರೆ. ಅವರು ಎಲ್ಲಾ ಪ್ರಜೆಗಳನ್ನೂ ನಾಶಮಾಡಿಯಾರು.

ತ್ರಾಹಿ ರಾಜನ್ನಿಮಂ ಲೋಕಂ ನ ನಶ್ಯೇಯುರಿಮಾಃ ಪ್ರಜಾಃ ।
ತ್ವಯಿ ಪ್ರಕೃತಿಮಾಪನ್ನೇ ಶೇಷಂ ಸ್ಯಾತ್ ಕುರುನಂದನ ॥೩೨॥

ರಾಜನೇ, ಈ ಲೋಕವನ್ನು ರಕ್ಷಿಸುವವನಾಗು. ಈ ಪ್ರಜೆಗಳು ನಾಶ ಹೊಂದದಿರಲಿ. ಎಲೈ ಕುರುನಂದನನೇ, ನೀನು ಸಮಾಧಾನವನ್ನು ಹೊಂದಿದರೆ ಉಳಿದುದೆಲ್ಲವೂ ಸುಗಮವಾಗುತ್ತದೆ.

ಶುದ್ಧಾ ವದಾನ್ಯಾ ಹ್ರೀಮಂತ ಆರ್ಯಾಃ ಪುಣ್ಯಾಭಿಜಾತಯಃ ।
ಅನ್ಯೋನ್ಯಸಚಿವಾ ರಾಜನ್ ತಾನ್ ಪಾಹಿ ಮಹತೋ ಭಯಾತ್ ॥

ಎಲೈ ರಾಜನೇ, ಈ ರಾಜರು ಶುದ್ಧರೂ, ಉದಾರಿಗಳೂ, ದಾಕ್ಷಿಣ್ಯಸ್ವಭಾವದವರೂ ಶ್ರೇಷ್ಠವಾದ ನಡತೆಯುಳ್ಳವರೂ, ಪವಿತ್ರವಾದ ಕುಲದಲ್ಲಿ ಜನಿಸಿದವರೂ ಮತ್ತು ಪರಸ್ಪರ ಸಚಿವರೂ ಆಗಿದ್ದಾರೆ. ಅವರನ್ನು ದೊಡ್ಡ ಭಯದಿಂದ ರಕ್ಷಿಸುವವನಾಗು.

ಸುಖೇನೇಮೇ ಭೂಮಿಪಾಲಾಃ ಪರಿಷ್ವಜ್ಯ ಪರಸ್ಪರಮ್ ।
ಸಹ ಭುಕ್ತ್ವಾ ಚ ಪೀತ್ವಾ ಚ ಪ್ರತಿಯಾಂತು ಯಥಾಗೃಹಮ್ ॥೩೪॥

ಸುವಾಸಸಃ ಸ್ರಗ್ವಿಣಶ್ಚ ಸತ್ಕೃತಾ ಭರತರ್ಷಭ ।
ಅಮರ್ಷಂ ಚ ನಿರಾಕೃತ್ಯ ವೈರಾಣಿ ಚ ಪರಂತಪ ॥೩೫॥

ಎಲೈ ಭರತರ್ಷಭನೇ, ಪರಂತಪನೇ, ಈ ಎಲ್ಲ ರಾಜರು ಒಳ್ಳೆಯ ವಸ್ತ್ರಗಳನ್ನು ಧರಿಸಿ, ನಿನ್ನಿಂದ ಸತ್ಕೃತರಾಗಿ, ರೋಷಗಳನ್ನೂ ಮತ್ತು ದ್ವೇಷವನ್ನೂ ಬಿಟ್ಟು ಪರಸ್ಪರವಾಗಿ ಆಲಿಂಗಿಸಿ, ಜೊತೆಯಲ್ಲಿ ಕುಳಿತು ಭೋಜನವನ್ನು ಮಾಡಿ, ಪಾನವನ್ನು ಮಾಡಿ ತಮ್ಮ ತಮ್ಮ ಮನೆಗಳಿಗೆ ಹಿಂದಿರುಗಲಿ.

ಹಾರ್ದಂ ಯತ್ ಪಾಂಡವೇಷ್ವಾಸೀತ್ ಪ್ರಾಕ್ ತಸ್ಮಿನ್ ನಾಗಸಾಹ್ವಯೇ ।
ತದೇವ ತೇ ಭವತ್ವದ್ಯ ಸಂಧತ್ಸ್ವ ಭರತರ್ಷಭ ॥೩೬॥

ಎಲೈ ಭರತರ್ಷಭನೇ, ಹಿಂದೆ ಹಸ್ತಿನಪುರದಲ್ಲಿದ್ದಾಗ ಪಾಂಡವರ ಜೊತೆಯಲ್ಲಿ ಯಾವ ಪ್ರೀತಿ ಇದ್ದಿತೋ ಈ ದಿನವೂ ಆ ಪ್ರೀತಿಯೇ ಇರಲಿ. ಅವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳುವವನಾಗು.

ಬಾಲಾ ವಿಹೀನಾಃ ಪಿತ್ರಾ ತೇ ತ್ವಯ್ಯೇವ ಪರಿವರ್ಧಿತಾಃ ।
ತಾನ್ ಪಾಲಯ ಯಥಾನ್ಯಾಯಂ ಪುತ್ರಾಂಶ್ಚ ಭರತರ್ಷಭ ॥೩೭॥

ಅವರು ಬಾಲಕರು, ತಂದೆಯನ್ನು ಕಳೆದುಕೊಂಡವರು, ಅವರನ್ನು ನೀನೇ ಪೋಷಿಸಿದ್ದೀಯೆ. ಎಲೈ ಭರತರ್ಷಭನೇ, ನಿನ್ನ ಮಕ್ಕಳಾದ ಅವರನ್ನು ನ್ಯಾಯದಿಂದ ಪಾಲನೆ ಮಾಡುವವನಾಗು.

ಭವತ್ಯೈವ ಹಿ ರಕ್ಷ್ಯಾಸ್ತೇ ವ್ಯಸನೇಷು ವಿಶೇಷತಃ ।
ಮಾ ತೇ ಧರ್ಮಸ್ತಥೈವಾರ್ಥೋ ನಶ್ಯೇತ ಭರತರ್ಷಭ ॥೩೮॥

ಅವರಿಗೆ ಸಂಕಟ ಒದಗಿದಾಗ ನೀನೇ ರಕ್ಷಣೆ ಮಾಡಬೇಕಾದವನು. ಎಲೈ ಭರತರ್ಷಭನೇ, ನಿನ್ನ ಧರ್ಮವಾಗಲೀ ಅಥವಾ ಅರ್ಥವಾಗಲೀ ನಾಶವನ್ನು ಹೊಂದದಿರಲಿ.

ಆಹುಸ್ತಾ ತ್ವಂ ಪಾಂಡವಾ ರಾಜನ್ನಭಿವಾದ್ಯ ಪ್ರಸಾದ್ಯ ಚ ।
ಭವತಃ ಶಾಸನಾದ್ ದುಃಖಮನುಭೂತಂ ಸಹಾನುಗೈಃ ॥೩೯॥

ಎಲೈ ರಾಜನೇ, ಪಾಂಡವರು ನಿನಗೆ ನಮಸ್ಕರಿಸಿ, ಪ್ರಸನ್ನೀಕರಿಸಿಕೊಂಡು ಹೀಗೆ ಹೇಳುತ್ತಾರೆ. ನಿನ್ನ ಶಾಸನಕ್ಕೆ ಅನುಗುಣವಾಗಿ ನಾವೂ ಮತ್ತು ನಮ್ಮ ಅನುಚರರೂ ದುಃಖಗಳನ್ನು ಅನುಭವಿಸಿದೆವು.

ದ್ವಾದಶೈತಾನಿ ವರ್ಷಾಣಿ ವನೇ ನಿರ್ವ್ಯುಷಿತಾನಿ ನಃ ।
ತ್ರಯೋದಶಂ ತಥಾऽಜ್ಞಾತೈಃ ಉಷಿತಃ ಪರಿವತ್ಸರಮ್ ॥೪೦॥

ಈ ಹನ್ನೆರಡು ವರ್ಷಗಳನ್ನು ವನವಾಸದಲ್ಲಿ ಕಳೆದೆವು. ಅದರಂತೆ ಹದಿಮೂರನೆಯ ವರ್ಷದಲ್ಲಿ ಒಂದು ವರ್ಷದ ಕಾಲ ಅಜ್ಞಾತವಾಸವನ್ನೂ ಮಾಡಿದೆವು.

ಸ್ಥಾತಾ ನಃ ಸಮಯೇ ತಸ್ಮಿನ್ ಪಿತೇತಿ ಕೃತನಿಶ್ಚಯಾಃ ।
ತೀರ್ಣಾಃ ಸ್ಮ ಸಮಯಂ ರಾಜನ್ ತಚ್ಚ ನೋ ಬ್ರಾಹ್ಮಣಾ ವಿದುಃ ॥

ನಮ್ಮ ತಂದೆಯು ಹಿಂದೆ ಮಾಡಿದ ಪ್ರತಿಜ್ಞೆಯಂತೆ ನಡೆದುಕೊಳ್ಳುತ್ತಾನೆ ಎಂದು ನಿಶ್ಚಯಿಸಿ ನಾವು ನಮ್ಮ ಪ್ರತಿಜ್ಞೆಯನ್ನು ನೆರವೇರಿಸಿದೆವು. ಎಲೈ ರಾಜನೇ, ಅದನ್ನು ಬ್ರಾಹ್ಮಣರು ತಿಳಿದಿದ್ದಾರೆ.

ತಸ್ಮಿನ್ ನಃ ಸಮಯೇ ತಿಷ್ಠ ಸ್ಥಿತಾನಾಂ ಭರತರ್ಷಭ ।
ನಿತ್ಯಂ ಸಂಕ್ಲೇಶಿತಾ ರಾಜನ್ ಸ್ವಾರಾಜ್ಯಾಂಶಂ ಲಭೇಮಹಿ ॥೪೨॥

ಧರ್ಮಮರ್ಥಂ ಚ ಯುಂಜಾನಃ ಸಮ್ಯಙ್ ನಸ್ತ್ರಾತುಮರ್ಹಸಿ ॥೪೩॥

ಎಲೈ ಭರತರ್ಷಭನೇ, ನಮ್ಮ ಪ್ರತಿಜ್ಞೆಯನ್ನು ಪರಿಪಾಲನೆ ಮಾಡಿದ ನಮ್ಮ ವಿಷಯದಲ್ಲಿ ನಿನ್ನ ಪ್ರತಿಜ್ಞೆಯಂತೆ ನಡೆದುಕೊ. ಎಲೈ ರಾಜನೇ, ನಿತ್ಯವೂ ಕ್ಲೇಶಕ್ಕೆ ಒಳಗಾದ ನಾವು ನಮ್ಮ ರಾಜ್ಯಾಂಶವನ್ನು ಪಡೆದೇವು. ಧರ್ಮವನ್ನೂ ಮತ್ತು ಅರ್ಥವನ್ನೂ ಅನುಷ್ಠಾನ ಮಾಡುವವನಾಗಿ ನಮ್ಮನ್ನು ಚೆನ್ನಾಗಿ ರಕ್ಷಿಸು.

ಗುರುತ್ವಂ ಭವತಿ ಪ್ರೇಕ್ಷ್ಯ ಬಹೂನ್ ಕ್ಲೇಶಾನ್ ಸಹಾಮಹೇ ।
ಸ ಭವಾನ್ ಮಾತೃಪಿತೃವದ್ ಅಸ್ಮಾಸು ಪ್ರತಿಪದ್ಯತಾಮ್ ॥೪೪॥

ನೀನು ನಮ್ಮ ಗುರುವೆಂದು ಭಾವಿಸಿ ಅನೇಕ ಕ್ಲೇಶಗಳನ್ನು ಸಹಿಸಿದ್ದೇವೆ. ಅಂತಹ ನೀನು ನಮ್ಮಲ್ಲಿ ತಾಯಿಯಂತೆ, ತಂದೆಯಂತೆ ನಡೆದುಕೊಳ್ಳುವವನಾಗು.

ಗುರೋರ್ಗರೀಯಸೀ ವೃತ್ತಿಃ ಯಾ ಚ ಶಿಷ್ಯಸ್ಯ ಭಾರತ ।
ವರ್ತಾಮಹೇ ತ್ವಯಿ ಚ ತಾಂ ತ್ವಂ ಚ ವರ್ತಸ್ವ ನಸ್ತಥಾ ॥೪೫॥

ಎಲೈ ಭಾರತನೇ, ಶಿಷ್ಯನಾದವನು ಗುರುವಿನ ವಿಷಯದಲ್ಲಿ ಯಾವ ಶ್ರೇಷ್ಠವಾದ ನಡತೆಯನ್ನು ಹೊಂದಿರಬೇಕೋ ಅಂತಹ ನಡತೆಯನ್ನು ನಾವು ನಿನ್ನ ವಿಷಯದಲ್ಲಿ ಹೊಂದಿದ್ದೇವೆ. ನೀನೂ ಸಹ ನಮ್ಮನ್ನು ಹಾಗೆಯೇ ನೋಡಿಕೊಳ್ಳುವವನಾಗು.

ಪಿತ್ರಾ ಸ್ಥಾಪಯಿತವ್ಯಾ ಹಿ ವಯಮುತ್ಪಥಮಾಸ್ಥಿತಾಃ ।
ಸಂಸ್ಥಾಪಯ ಪಥಿಷ್ವಸ್ಮಾನ್ ತಿಷ್ಠ ಧರ್ಮೇ ಸ್ವವರ್ತ್ಮನಿ ॥೪೬॥

ಮಕ್ಕಳು ದುರ್ಮಾರ್ಗಕ್ಕೆ ಹೋದರೆ ತಂದೆಯು ಅವರನ್ನು ಸನ್ಮಾರ್ಗದಲ್ಲಿ ಸ್ಥಾಪಿಸಬೇಕು. ನಮ್ಮನ್ನು ಸನ್ಮಾರ್ಗದಲ್ಲಿ ಸ್ಥಾಪಿಸುವವನಾಗು. ನೀನೂ ಸಹ ನಿನ್ನ ಧರ್ಮ ಮಾರ್ಗದಲ್ಲಿ ನಡೆಯುವವನಾಗು.

ಆಹುಶ್ಚೇಮಾಂ ಪರಿಷದಂ ಪುತ್ರಾಸ್ತೇ ಭರತರ್ಷಭ ।
ಧರ್ಮಜ್ಞೇಷು ಸಭಾಸತ್ಸು ನೇಹ ಯುಕ್ತಮಸಾಂಪ್ರತಮ್ ॥೪೭॥

ಎಲೈ ಭರತರ್ಷಭನೇ, ನಿನ್ನ ಪುತ್ರರು ಈ ಸಭೆಯನ್ನು ಪರಿಷತ್ತೆಂದು ಹೇಳುತ್ತಾರೆ (ಪರಿಷತ್ತೆಂದರೆ ಧರ್ಮವನ್ನು ತಿಳಿದವರು ಇರುವ ಸಭಾಸದರ ಸಭೆ). ಧರ್ಮಜ್ಞರಾದ ಸಭಾಸದರು ಇರುವ ಈ ಸ್ಥಳದಲ್ಲಿ ಅನುಚಿತವಾದುದು ಏನೂ ನಡೆಯಬಾರದು.

ಯತ್ರ ಧರ್ಮೋ ಹ್ಯಧರ್ಮೇಣ ಸತ್ಯಂ ಯತ್ರಾನೃತೇನ ಚ ।
ಹನ್ಯತೇ ಪ್ರೇಕ್ಷಮಾಣಾನಾಂ ಹತಾಸ್ತತ್ರ ಸಭಾಸದಃ ॥೪೮॥

ಎಲ್ಲಿ ಸಭಾಸದರು ನೋಡುತ್ತಿರುವಂತೆಯೇ ಧರ್ಮವು ಅಧರ್ಮದಿಂದ ನಾಶವನ್ನು ಹೊಂದುತ್ತದೆಯೋ, ಸತ್ಯವು ಅನೃತದಿಂದ ನಾಶವನ್ನು ಹೊಂದುತ್ತದೆಯೋ ಅಲ್ಲಿ ಸಭಾಸದರು ಹತರಾದಂತೆಯೇ.

ವಿದ್ಧೋ ಧರ್ಮೋ ಹ್ಯಧರ್ಮೇಣ ಸಭಾಂ ಯತ್ರ ಪ್ರಪದ್ಯತೇ ॥೪೯॥
ಧರ್ಮ ಏತಾನಾರುಜತಿ ಯಥಾ ನದ್ಯನುಕೂಲಜಾನ್ ॥೫೦॥

ಯಾವ ಸಭೆಯಲ್ಲಿ ಧರ್ಮವು ಅಧರ್ಮದಿಂದ ಪೀಡಿತವಾಗುತ್ತದೆಯೋ ಅಲ್ಲಿ ಧರ್ಮವೇ ನದಿಯು ತೀರದಲ್ಲಿ ಬೆಳೆದ ಮರಗಳನ್ನು ಕೊಚ್ಚಿಕೊಂಡು ಹೋಗುವಂತೆ ಸಭಾಸದರನ್ನು ಕೊಚ್ಚಿಕೊಂಡು ಹೋಗುತ್ತದೆ.

ಯೇ ಧರ್ಮಮನುಪಶ್ಯಂತಃ ತೂಷ್ಣೀಂ ಧ್ಯಾಯಂತ ಆಸತೇ ।
ತೇ ಸತ್ಯಮಾಹುರ್ಧರ್ಮ್ಯಂ ಚ ನ್ಯಾಯ್ಯಂ ಚ ಭರತರ್ಷಭ ॥೫೧॥

ಎಲೈ ಭರತರ್ಷಭನೇ, ಯಾರು ಧರ್ಮವನ್ನು ತಿಳಿದು ಮೌನವಾಗಿ ಧ್ಯಾನ ಮಾಡುತ್ತಾ ಕುಳಿತಿದ್ದಾರೆಯೋ ಅವರನ್ನು ಕೇಳಿದರೆ ಮಾತ್ರ ಅವರು ಸತ್ಯವನ್ನೂ, ಧರ್ಮವನ್ನೂ ಮತ್ತು ನ್ಯಾಯವನ್ನೂ ಹೇಳುತ್ತಾರೆ.

ಶಕ್ಯಂ ಕಿಮನ್ಯದ್ ವಕ್ತುಂ ತೇ ದಾನಾದನ್ಯದ್ ಜನೇಶ್ವರ ।
ಬ್ರುವಂತು ವಾ ಮಹೀಪಾಲಾಃ ಸಭಾಯಾಂ ಯೇ ಸಮಾಸತೇ ॥೫೨॥

ಎಲೈ ರಾಜನೇ, ಪಾಂಡವರಿಗೆ ಅವರ ರಾಜ್ಯಾಂಶವನ್ನು ಕೊಡು ಎಂದು ಹೇಳುವುದನ್ನು ಬಿಟ್ಟು ನಾನು ನಿನಗೆ ಬೇರೆ ಏನನ್ನು ಹೇಳಲು ಸಾಧ್ಯ ? ನಾನೇನಾದರೂ ತಪ್ಪು ಮಾತನಾಡಿದ್ದರೆ ಸಭೆಯಲ್ಲಿ ಕುಳಿತಿರುವ ರಾಜರು ಹೇಳಲಿ.

ಧರ್ಮಾರ್ಥೌ ಸಂಪ್ರಧಾರ್ಯೈವ ಯದಿ ಸತ್ಯಂ ಬ್ರವೀಮ್ಯಹಮ್ ।
ಪ್ರಮುಂಚೇಮಾನ್ ಮೃತ್ಯುಪಾಶಾತ್ ಕ್ಷತ್ರಿಯಾನ್ ಪುರುಷರ್ಷಭ॥೫೩॥
ಪ್ರಶಾಮ್ಯ ಭರತಶ್ರೇಷ್ಠ ಮಾ ಮನ್ಯುವಶಮನ್ವಗಾಃ ॥೫೪॥

ಎಲೈ ಪುರುಷರ್ಷಭನೇ, ಧರ್ಮಾರ್ಥಗಳನ್ನು ನಿಶ್ಚಯಿಸಿಯೇ ನಾನು ಮಾತನಾಡುತ್ತಿದ್ದೇನೆಂದು ನೀನು ತಿಳಿಯುವುದಾದರೆ ಈ ಕ್ಷತ್ರಿಯರನ್ನು ಮೃತ್ಯುಪಾಶದಿಂದ ಬಿಡುಗಡೆಗೊಳಿಸುವವನಾಗು. ಎಲೈ ಭರತಶ್ರೇಷ್ಠನೇ, ಸಂಧಿಯನ್ನು ಮಾಡಿಕೊಳ್ಳುವವನಾಗು, ಕ್ರೋಧಕ್ಕೆ ವಶನಾಗಬೇಡ.

ಪಿತ್ರ್ಯಂ ತೇಭ್ಯಃ ಪ್ರದಾಯಾಂಶಂ ಪಾಂಡವೇಭ್ಯೋ ಯಥೋಚಿತಮ್ ।
ತತಃ ಸಪುತ್ರಃ ಸಿದ್ಧಾರ್ಥೋ ಭುಂಕ್ಷ್ವ ಭೋಗಾನ್ ಪರಂತಪ ॥೫೫॥

ಎಲೈ ಪರಂತಪನೇ, ಪಾಂಡವರ ಪಿತ್ರಂಶವನ್ನು ಕೌರವರಿಂದ ಯಥೋಚಿತವಾಗಿ ತೆಗೆದು ಪಾಂಡವರಿಗೆ ಕೊಟ್ಟು ಅನಂತರ ಪುತ್ರರಿಂದೊಡಗೂಡಿ ಸಿದ್ಧಾರ್ಥನಾಗಿ ಭೋಗಗಳನ್ನು ಭೋಗಿಸು.

ಅಜಾತಶತ್ರುಂ ಜಾನೀಷೇ ಸ್ಥಿತಂ ಧರ್ಮೇ ಸತಾಂ ಸದಾ ।
ಸಪುತ್ರೇ ತ್ವಯಿ ವೃತ್ತಿಂ ಚ ವರ್ತತೇ ಯಾಂ ನರಾಧಿಪ ॥೫೬॥

ಎಲೈ ನರಾಧಿಪನೇ, ಯಾವಾಗಲೂ ಸಜ್ಜನರ ಧರ್ಮದಲ್ಲಿಯೇ ಇರುವ ಅಜಾತಶತ್ರುವು ಪುತ್ರರಿಂದ ಕೂಡಿದ ನಿನ್ನಲ್ಲಿ ಹೇಗೆ ನಡೆದುಕೊಂಡಿದ್ದಾನೆ ಎಂಬುದು ನೀನೇ ತಿಳಿದಿರುವ ವಿಷಯ.

ದ್ರೋಹಿತಶ್ಚ ನಿರಸ್ತಶ್ಚ ತ್ವಾಮೇವೋಪಾಶ್ರಿತಃ ಪುನಃ ।
ಇಂದ್ರಪ್ರಸ್ಥಂ ತ್ವಯ್ಯೈವಾಸೌ ಸಪುತ್ರೇಣ ವಿವಾಸಿತಃ ॥೫೭॥

ದ್ರೋಹವನ್ನು ಮಾಡಿ ನಿರಾಕರಿಸಿದ್ದರೂ ಅವನು ಪುನಃ ನಿನ್ನನ್ನೇ ಆಶ್ರಯಿಸುತ್ತಿದ್ದಾನೆ. ನೀನೂ ಮತ್ತು ನಿನ್ನ ಪುತ್ರರೂ ಸೇರಿ ಅವನನ್ನು ಮೊದಲು ಇಂದ್ರಪ್ರಸ್ಥಕ್ಕೆ ಗಡೀಪಾರು ಮಾಡಿದಿರಿ.

ಸ ತತ್ರ ನಿರ್ವಸನ್ ಸರ್ವಾನ್ ವಶಮಾನೀಯ ಪಾರ್ಥಿವಾನ್ ।
ತ್ವನ್ಮುಖಾನಕರೋದ್ ರಾಜನ್ ನ ಚ ತ್ವಾಮತ್ಯವರ್ತತ ॥೫೮॥

ಅವನು ಅಲ್ಲಿಯೇ ವಾಸಮಾಡಿ ಎಲ್ಲ ರಾಜರನ್ನೂ ವಶಮಾಡಿಕೊಂಡು ಎಲ್ಲರೂ ನಿನಗೆ ವಶವಾಗಿರುವಂತೆ ಮಾಡಿದನು. ರಾಜನೇ, ನಿನ್ನನ್ನು ಎಂದೂ ಮೀರಲಿಲ್ಲ.

ತಸ್ಯೈವಂ ವರ್ತಮಾನಸ್ಯ ಸೌಬಲೇನ ಜಿಹೀರ್ಷತಾ ।
ರಾಷ್ಟ್ರೇ ಧನಧಾನ್ಯಂ ಚ ಪ್ರಯುಕ್ತಃ ಪರಮೋಪಧಿಃ ॥೫೯॥

ಹೀಗಿದ್ದ ಅವನ ರಾಷ್ಟ್ರವನ್ನೂ ಮತ್ತು ಧನ-ಧಾನ್ಯಗಳನ್ನೂ ಅಪಹರಿಸುವ ಇಚ್ಛೆಯಿಂದ ಶಕುನಿಯು ದೊಡ್ಡ ಮೋಸವನ್ನು ಹೂಡಿದನು.

ಸ ತಾಮವಸ್ಥಾಂ ಸಂಪ್ರಾಪ್ಯ ಕೃಷ್ಣಾಂ ಪ್ರೇಕ್ಷ್ಯ ಸಭಾಗತಾಮ್ ।
ಕ್ಷತ್ರಧರ್ಮಾದಮೇಯಾತ್ಮಾ ನಾಕಂಪತ ಯುಧಿಷ್ಠಿರಃ ॥೬೦॥

ಅವನು ಅಂತಹ ದುರವಸ್ಥೆಯನ್ನು ಹೊಂದಿದರೂ, ಸಭೆಗೆ ಬಂದ ದ್ರೌಪದಿಯನ್ನು ನೋಡಿದರೂ, ಹೇಳಲು ಅಸಾಧ್ಯವಾದ ಸದ್ಗುಣವುಳ್ಳ ಯುಧಿಷ್ಠಿರನು ಕ್ಷತ್ರಿಯ ಧರ್ಮದಿಂದ ಅಲುಗಾಡಲಿಲ್ಲ.

ಅಹಂ ತು ತವ ತೇಷಾಂ ಚ ಶ್ರೇಯ ಇಚ್ಛಾಮಿ ಭಾರತ ।
ಧರ್ಮಾದರ್ಥಾತ್ ಸುಖಾಚ್ಚೈವ ರಾಜನ್ ಮಾ ನೀನಶಃ ಪ್ರಜಾಃ ॥

ಎಲೈ ಭಾರತನೇ, ನಾನು ನಿನಗೂ ಮತ್ತು ಅವರಿಗೂ ಶ್ರೇಯಸ್ಸನ್ನು ಬಯಸುತ್ತೇನೆ. ರಾಜನೇ, ಪ್ರಜೆಗಳನ್ನು ಧರ್ಮದಿಂದಲೂ, ಅರ್ಥದಿಂದಲೂ ಮತ್ತು ಸುಖದಿಂದಲೂ ಭ್ರಂಶಿತರನ್ನಾಗಿ ಮಾಡಬೇಡ.

ಅನರ್ಥಮರ್ಥಂ ಮನ್ವಾನೋಽಪ್ಯರ್ಥಂ ಚಾನರ್ಥಮಾತ್ಮನಃ ।
ಲೋಭೇಽತಿಪ್ರಸೃತಾನ್ ಪುತ್ರಾನ್ ನಿಗೃಹ್ಣೀಷ್ವ ವಿಶಾಂಪತೇ ॥೬೨॥

ಎಲೈ ರಾಜನೇ, ಅರ್ಥವನ್ನು ಅನರ್ಥವೆಂದೂ, ಅನರ್ಥವನ್ನು ಅರ್ಥವೆಂದೂ ತಿಳಿದು ಲೋಭದಲ್ಲಿ ಆಸಕ್ತರಾಗಿರುವ ನಿನ್ನ ಮಕ್ಕಳನ್ನು ತಡೆಯುವವನಾಗು.

ಸ್ಥಿತಾಃ ಶುಶ್ರೂಷಿತುಂ ಪಾರ್ಥಾಃ ಸ್ಥಿತಾ ಯೋದ್ಧುಮರಿಂದಮಾಃ ।
ಯತ್ ತೇ ಪಥ್ಯತಮಂ ರಾಜನ್ ತಸ್ಮಿಂಸ್ತಿಷ್ಠ ಪರಂತಪ ॥೬೩॥

ಪಾಂಡವರು ನಿನ್ನ ಸೇವೆಯನ್ನು ಮಾಡಲು ಸಿದ್ಧರಾಗಿದ್ದಾರೆ. ಅರಿಂದಮರಾದ ಅವರು ಯುದ್ಧವನ್ನು ಮಾಡಲೂ ಸಿದ್ಧರಾಗಿದ್ದಾರೆ. ಎಲೈ ರಾಜನೇ, ಪರಂತಪನೇ, ನೀನು ಯಾವುದನ್ನು ಹಿತವೆಂದು ತಿಳಿಯುತ್ತೀಯೋ ಅದನ್ನು ಆಚರಿಸುವವನಾಗು.

ವೈಶಂಪಾಯನಃ

ತದ್ವಾಕ್ಯಂ ಪಾರ್ಥಿವಾಃ ಸರ್ವೇ ಹೃದಯೈಃ ಸಮಪೂಜಯನ್ ।
ನ ತತ್ರ ಕಶ್ಚಿದ್ ವಕ್ತುಂ ಹಿ ವಾಚಂ ಪ್ರಾಕ್ರಾಮದಗ್ರತಃ ॥೬೪॥

ವೈಶಂಪಾಯನ– ಕೃಷ್ಣನ ಆ ಮಾತುಗಳನ್ನು ಎಲ್ಲ ರಾಜರು ತಮ್ಮ ಮನಸ್ಸಿನಲ್ಲಿಯೇ ಗೌರವಿಸಿದರು. ಆದರೆ ಎದುರಿಗೆ ಯಾವನೂ ಯಾವ ಮಾತನ್ನೂ ಆಡಲು ಪ್ರಯತ್ನಿಸಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಚತುರ್ನವತಿತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಪಂಚವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ತೊಂಬತ್ನಾಲ್ಕನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೈದನೆಯ ಅಧ್ಯಾಯ

ಪರಶುರಾಮರು ದಂಭೋದ್ಭವ ಕಥೆಯನ್ನು ಹೇಳಿ,
ಕೃಷ್ಣಾರ್ಜುನರು ನರ-ನಾರಾಯಣರೆಂದು ನಿರೂಪಣ ಮಾಡುವರು.

ವೈಶಂಪಾಯನಃ

ತಸ್ಮಿನ್ನಭಿಹಿತೇ ವಾಕ್ಯೇ ಕೇಶವೇನ ಮಹಾತ್ಮನಾ ।
ಸ್ತಿಮಿತಾ ಹೃಷ್ಟರೋಮಾಣ ಆಸನ್ ಸರ್ವೇ ಸಭಾಸದಃ ॥೧॥

ವೈಶಂಪಾಯನ– ಮಹಾತ್ಮನಾದ ಕೇಶವನು ಆ ಮಾತುಗಳನ್ನು ಆಡುತ್ತಿರಲು ಎಲ್ಲ ಸಭಾಸದರು ರೋಮಾಂಚಗೊಂಡು ಮೌನವನ್ನು ತಾಳಿದರು.

ಕಶ್ಚಿದುತ್ತರಮೇತೇಷಾಂ ವಕ್ತುಂ ನೋತ್ಸಹತೇ ಪುಮಾನ್ ।
ಇತಿ ಸರ್ವೇ ಮನೋಭಿಸ್ತೇ ಚಿಂತಯಂತಿ ಸ್ಮ ಪಾರ್ಥಿವಾಃ ॥೨॥

ಈ ಮಾತುಗಳಿಗೆ ಯಾವನೂ ಉತ್ತರವನ್ನು ಕೊಡುವ ಪ್ರಯತ್ನವನ್ನು ಮಾಡುತ್ತಿಲ್ಲ ಎಂದು ಆ ಎಲ್ಲ ರಾಜರೂ ತಮ್ಮ ಮನಸ್ಸಿನಲ್ಲಿ ಚಿಂತಿಸಿದರು.

ತಥಾ ತೇಷು ಚ ಸರ್ವೇಷು ತೂಷ್ಣೀಂಭೂತೇಷು ರಾಜಸು ।
ಜಾಮದಗ್ನ್ಯ ಇದಂ ವಾಕ್ಯಮಬ್ರವೀತ್ ಕುರುಸಂಸದಿ ॥೩॥

ಆ ರೀತಿಯಲ್ಲಿ ಕೌರವಸಭೆಯಲ್ಲಿ ಎಲ್ಲ ರಾಜರೂ ಸುಮ್ಮನೆ ಇರುತ್ತಿರಲು ಪರುಶುರಾಮರು ಈ ಮಾತುಗಳನ್ನು ಆಡಿದರು.

ಇಮಾಂ ಮೇ ಸೋಪಮಾಂ ವಾಚಂ ಶೃಣು ಸತ್ಯಾಮಶಂಕಿತಃ ।
ತಾಂ ಶ್ರುತ್ವಾ ಶ್ರೇಯ ಆದತ್ಸ್ವ ಯದಿ ಸಾಧ್ವಿತಿ ಮನ್ಯಸೇ ॥೪॥

ಈ ನನ್ನ ಸತ್ಯವಾದ ಮತ್ತು ದೃಷ್ಟಾಂತಸಹಿತವಾದ ಮಾತನ್ನು ನಿಶ್ಶಂಕೆಯಿಂದ ಕೇಳು. ಅದನ್ನು ಕೇಳಿ ಅದು ನಿನಗೆ ಸರಿ ಎನಿಸಿದರೆ ಶ್ರೇಯಸ್ಸಿನ ಮಾರ್ಗವನ್ನು ಹಿಡಿಯುವವನಾಗು.

ರಾಜಾ ದಂಭೋದ್ಭವೋ ನಾಮ ಸಾರ್ವಭೌಮಃ ಪುರಾऽಭವತ್ ।
ಅಖಿಲಾಂ ಬುಭುಜೇ ಸರ್ವಾಂ ಪೃಥಿವೀಮಿತಿ ನಃ ಶ್ರುತಮ್ ॥೫॥

ಹಿಂದೆ ದಂಭೋದ್ಭವನೆಂಬ ಸಾರ್ವಭೌಮನಾದ ರಾಜನಿದ್ದನು. ಅವನು ಸಮಸ್ತವಾದ ಪೃಥಿವಿಯನ್ನು ಭೋಗಿಸುತ್ತಿದ್ದನೆಂದು ನಾವು ಕೇಳಿದ್ದೇವೆ.

ಸ ಸ್ಮ ನಿತ್ಯಂ ನಿಶಾಪಾಯೇ ಪ್ರಾತರುತ್ಥಾಯ ವೀರ್ಯವಾನ್ ।
ಬ್ರಾಹ್ಮಣಾನ್ ಕ್ಷತ್ರಿಯಾನ್ ವೈಶ್ಯಾನ್ ಪೃಚ್ಛನ್ನಾಸ್ತೇ ಮಹಾರಥಃ ॥೬॥

ಅಸ್ತಿ ಕಶ್ಚಿದ್ ವಿಶಿಷ್ಟೋ ವಾ ಮದ್ವಿಧೋ ವಾ ಭವೇದ್ ಯುಧಿ ।
ಶೂದ್ರೋ ವೈಶ್ಯಃ ಕ್ಷತ್ರಿಯೋ ವಾ ಬ್ರಾಹ್ಮಣೋ ವಾऽಪಿ ಶಸ್ತ್ರಭೃತ್ ॥೭॥

ಪರಾಕ್ರಮಶಾಲಿಯೂ, ಮಹಾರಥನೂ ಆದ ಅವನು ರಾತ್ರಿಯು ಕಳೆದ ಮೇಲೆ ನಿತ್ಯವೂ ಪ್ರಾತಃಕಾಲದಲ್ಲಿ ಎದ್ದು ಬ್ರಾಹ್ಮಣರನ್ನೂ, ಕ್ಷತ್ರಿಯರನ್ನೂ, ವೈಶ್ಯರನ್ನೂ ಮತ್ತು ಶೂದ್ರರನ್ನು ಯುದ್ಧದಲ್ಲಿ ನನಗೆ ಸಮಾನನಾದ ಅಥವಾ ನನಗಿಂತ ಶ್ರೇಷ್ಠನಾದ ಶಸ್ತ್ರಧಾರಿಯಾದ ಶೂದ್ರನಾಗಲೀ, ವೈಶ್ಯನಾಗಲೀ, ಕ್ಷತ್ರಿಯನಾಗಲೀ ಅಥವಾ ಬ್ರಾಹ್ಮಣನಾಗಲೀ ಇದ್ದಾನೆಯೇ ಎಂದು ಕೇಳುತ್ತಿದ್ದನು.

ಇತಿ ಬ್ರುವನ್ನನ್ವಚರತ್ ಸ ರಾಜಾ ಪೃಥಿವೀಮಿಮಾಮ್ ।
ದರ್ಪೇಣ ಮಹತಾ ಮತ್ತಃ ಕಂಚಿದನ್ಯಮಚಿಂತಯನ್ ॥೮॥

ಆ ರಾಜನು ಹೀಗೆ ಹೇಳುತ್ತಾ ಇನ್ನೊಬ್ಬನನ್ನು ಲೆಕ್ಕಿಸದೆ ಬಹಳ ದರ್ಪದಿಂದ ಕೂಡಿದವನಾಗಿ ಮತ್ತನಾಗಿ ಈ ಭೂಮಿಯಲ್ಲಿ ಸಂಚರಿಸಿದನು.

ತಂ ಸ್ಮ ವೈದ್ಯಾ ಅಕೃಪಣಾ ಬ್ರಾಹ್ಮಣಾಃ ಸರ್ವತೋಽಭಯಾಃ ।
ಪ್ರತ್ಯಷೇಧಂತ ರಾಜಾನಂ ಶ್ಲಾಘಮಾನಂ ಪುನಃ ಪುನಃ ॥೯॥

ಮತ್ತೆ ಮತ್ತೆ ತನ್ನನ್ನೇ ಹೊಗಳಿಕೊಳ್ಳುತ್ತಿದ್ದ ರಾಜನನ್ನು ನೋಡಿ ವಿದ್ವಾಂಸರೂ, ಕೃಪಣರಲ್ಲದವರೂ, ಎಲ್ಲರಿಗೂ ಅಭಯವನ್ನು ಕೊಡುವವರೂ ಆದ ಬ್ರಾಹ್ಮಣರು ಅವನನ್ನು ನಿಷೇಧಿಸಿದರು.

ನಿಷಿದ್ಧ್ಯಮಾನೋಽಪ್ಯಸಕೃತ್ ಪೃಚ್ಛತ್ಯೇವ ಸ ವೈ ದ್ವಿಜಾನ್ ।
ಅಭಿಮಾನೀ ಶ್ರಿಯಾ ಮತ್ತಃ ತಮೂಚುರ್ಬ್ರಾಹ್ಮಣಾಸ್ತದಾ ॥೧೦॥

ತಪಸ್ವಿನೋ ಮಹಾತ್ಮಾನೋ ವೇದವ್ರತಸಮನ್ವಿತಾಃ ।
ಉದೀರ್ಯಮಾಣಂ ರಾಜಾನಂ ಕ್ರೋಧದೀಪ್ತಾ ದ್ವಿಜಾತಯಃ ॥೧೧॥

ಅನೇಕಜನನಂ ಸಖ್ಯಂ ಯಯೋಃ ಪುರುಷಸಿಂಹಯೋಃ ।
ತಯೋಸ್ತ್ವಂ ನ ಸಮೋ ಯುದ್ಧೇ ಭವಿತಾಸಿ ಕದಾಚನ ॥೧೨॥

ಅವರು ನಿನ್ನನ್ನು ಹೊಗಳಿಕೊಳ್ಳಬೇಡ ಎಂದು ಅನೇಕ ಬಾರಿ ನಿಷೇಧಿಸುತ್ತಿದ್ದರೂ ಅಹಂಕಾರಿಯೂ, ಸಂಪತ್ತಿನಿಂದ ಮತ್ತನೂ ಆದ ಅವನು ಬ್ರಾಹ್ಮಣರನ್ನು ಕೇಳುತ್ತಲೇ ಇದ್ದನು. ಆಗ ತಪಸ್ವಿಗಳೂ, ಮಹಾತ್ಮರೂ, ವೇದವ್ರತಗಳಿಂದ ಕೂಡಿದವರೂ ಆದ ಬ್ರಾಹ್ಮಣರು ಕ್ರೋಧದಿಂದ ಕೂಡಿದವರಾಗಿ ಅಹಂಕಾರದಿಂದ ಬಿರಿದು ಹೋಗುತ್ತಿದ್ದ ರಾಜನನ್ನು ಕುರಿತು ಯಾವ ಇಬ್ಬರು ಪುರುಷಸಿಂಹರಿಗೆ ಅನೇಕ ಜನ್ಮಗಳ ಸಖ್ಯವಿದೆಯೋ ಅಂತಹ ಪುರುಷಸಿಂಹರಿಗೆ ನೀನು ಯುದ್ಧದಲ್ಲಿ ಎಂದೂ ಸಮನಾಗುವುದಿಲ್ಲ ಎಂದು ಹೇಳಿದರು.

ಏವಮುಕ್ತಃ ಸ ರಾಜಾ ತು ಪುನಃ ಪಪ್ರಚ್ಛ ತಾನ್ ದ್ವಿಜಾನ್ ॥೧೩॥

ಕ್ವ ತೌ ವೀರೌ ಕ್ವಜನ್ಮಾನೌ ಕಿಂಕರ್ಮಾಣೌ ಚ ಕೌ ಚ ತೌ ॥೧೪॥

ಹೀಗೆ ಹೇಳಲ್ಪಟ್ಟ ಆ ರಾಜನು ಪುನಃ ಬ್ರಾಹ್ಮಣರನ್ನು ಕುರಿತು ಆ ವೀರರು ಎಲ್ಲಿದ್ದಾರೆ? ಎಲ್ಲಿ ಜನಿಸಿದ್ದಾರೆ? ಏನು ಮಾಡುತ್ತಾರೆ? ಮತ್ತು ಅವರು ಯಾರು ಎಂದು ಕೇಳಿದನು.

ಬ್ರಾಹ್ಮಣಾಃ

ನರೋ ನಾರಾಯಣಶ್ಚೈವ ತಾಪಸಾವಿತಿ ನಃ ಶ್ರುತಮ್ ।
ಅಜಾತೌ ಮಾನುಷೇ ಲೋಕೇ ತಾಭ್ಯಾಂ ಯುದ್ಧ್ಯಸ್ವ ಪಾರ್ಥಿವ ॥೧೫॥

ಬ್ರಾಹ್ಮಣರು– ಅವರು ತಪಸ್ವಿಗಳಾದ ನರ-ನಾರಾಯಣರೆಂದು ನಾವು ಕೇಳಿದ್ದೇವೆ. ಅವರು ಮನುಷ್ಯಲೋಕದಲ್ಲಿ ಜನಿಸಿಲ್ಲ. ಎಲೈ ರಾಜನೇ, ಅವರ ಜೊತೆಯಲ್ಲಿ ಯುದ್ಧವನ್ನು ಮಾಡು.

ಶ್ರೂಯತೇ ತೌ ಮಹಾತ್ಮಾನೌ ನರನಾರಾಯಣಾವುಭೌ ।
ತಪೋ ಘೋರಮನಿರ್ದೇಶ್ಯಂ ತಪ್ಯೇತೇ ಗಂಧಮಾದನೇ ॥೧೬॥

ಮಹಾತ್ಮರಾದ ಆ ನರ-ನಾರಾಯಣರಿಬ್ಬರೂ ಗಂಧಮಾದನಪರ್ವತದಲ್ಲಿ ಘೋರವಾದ ಮತ್ತು ವರ್ಣಿಸಲು ಅಸಾಧ್ಯವಾದ ತಪಸ್ಸನ್ನು ಮಾಡುತ್ತಿದ್ದಾರೆಂದು ಕೇಳುತ್ತಿದ್ದೇವೆ.

ಜಾಮದಗ್ನ್ಯಃ

ಸ ರಾಜಾ ಮಹತೀಂ ಸೇನಾಂ ಯೋಜಯಿತ್ವಾ ಷಡಂಗಿನೀಮ್ ।
ಅಮೃಷ್ಯಮಾಣಃ ಸಂಪ್ರಾಯಾದ್ ಯತ್ರ ತಾವಪರಾಜಿತೌ ॥೧೭॥

ಜಾಮದಗ್ನ್ಯ– ಆ ರಾಜನು ಆ ಮಾತನ್ನು ಕೇಳಿ ಸಹಿಸದೆ ದೊಡ್ಡ ಷಡಂಗ ಸೈನ್ಯವನ್ನು ಹೂಡಿ ಅಪರಾಜಿತರಾದ ಅವರಿಬ್ಬರೂ ಇರುವಲ್ಲಿಗೆ ಹೊರಟನು.

ಸ ಗತ್ವಾ ವಿಷಮಂ ಘೋರಂ ಪರ್ವತಂ ಗಂಧಮಾದನಮ್ ।
ಮಾರ್ಗಮಾಣೋऽಭ್ಯಗಚ್ಛದ್ ತೌ ತಾಪಸಾವಪರಾಜಿತೌ ॥೧೮॥

ಅವನು ವಿಷಮವೂ, ಘೋರವೂ ಆದ ಗಂಧಮಾದನಪರ್ವತವನ್ನು ಸೇರಿ, ಎಲ್ಲ ಕಡೆಗಳಲ್ಲಿ ಹುಡುಕುತ್ತಾ ಅಪರಾಜಿತರಾದ, ತಪಸ್ವಿಗಳಾದ ಅವರಿಬ್ಬರ ಸಮೀಪಕ್ಕೆ ಹೋದನು.

ತೌ ದೃಷ್ಟ್ವಾ ಕ್ಷುತ್ತಿಪಾಸಾಭ್ಯಾಂ ಕೃಶೌ ಧಮನಿಸಂತತೌ ।
ಶೀತವಾತಾತಪೈರುಗ್ರೈಃ ಕರ್ಶಿತೌ ಪುರುಷೋತ್ತಮೌ ॥೧೯॥

ಅಭಿವಾದ್ಯೋಪಸಂಗೃಹ್ಯ ಪರ್ಯಪೃಚ್ಛದನಾಮಯಮ್ ॥೨೦॥

ಹಸಿವು, ನೀರಡಿಕೆಗಳಿಂದ ಕೃಶರಾದವರೂ, ಮತ್ತು ದೇಹದಲ್ಲಿ ಎದ್ದು ಕಾಣುವ ನರವುಳ್ಳವರೂ, ಉಗ್ರವಾದ ಚಳಿ-ಮಳೆ-ಬಿಸಿಲುಗಳಿಂದ ಬಳಲಿದವರೂ ಆದ ಆ ಪುರುಷೋತ್ತಮರನ್ನು ನೋಡಿ ಅವರಿಗೆ ನಮಸ್ಕಾರವನ್ನು ಮಾಡಿ, ಅವರನ್ನು ಸಮೀಪಿಸಿ ಅವರ ಕುಶಲವನ್ನು ವಿಚಾರಿಸಿದನು.

ತಮರ್ಚಿತ್ವಾ ಮೂಲಫಲೈರಾಸನೇನೋದಕೇನ ಚ ।
ಅಬ್ರೂತಾಂ ಪರವೀರಘ್ನಂ ಕಿಂ ಕಾರ್ಯಂ ಕ್ರಿಯತಾಮಿತಿ ॥೨೧॥

ಅವರು ಶತ್ರುವೀರ ಹಂತಕನಾದ ಅವನನ್ನು ಆಸನ, ಉದಕ ಮತ್ತು ಮೂಲಫಲಗಳಿಂದ ಅರ್ಚಿಸಿ ಪೂಜಿಸಿ ನಿನಗೆ ನಮ್ಮಿಂದ ಏನಾಗಬೇಕಾಗಿದೆ ಎಂದು ಕೇಳಿದರು.

ದಂಭೋದ್ಭವಃ

ಬಾಹುಭ್ಯಾಂ ಮೇ ಜಿತಾ ಭೂಮಿರ್ನಿಹತಾಃ ಸರ್ವಶತ್ರವಃ ।
ಭವದ್ಭ್ಯಾಂ ಯುದ್ಧಮಾಕಾಂಕ್ಷನ್ನುಪಯಾತೋಽಸ್ಮಿ ಪರ್ವತಮ್ ॥೨೨॥

ಆತಿಥ್ಯಂ ದೀಯತಾಮೇತತ್ ಕಾಂಕ್ಷಿತಂ ಮೇ ಚಿರಂ ಪ್ರತಿ ॥೨೩॥

ದಂಭೋದ್ಭವ– ನಾನು ನನ್ನ ಬಾಹುಗಳಿಂದ ಭೂಮಿಯನ್ನು ಗೆದ್ದಿದ್ದೇನೆ. ಎಲ್ಲ ಶತ್ರುಗಳನ್ನೂ ಸಂಹರಿಸಿದ್ದೇನೆ. ನಿಮ್ಮ ಜೊತೆಯಲ್ಲಿ ಯುದ್ಧವನ್ನು ಬಯಸುತ್ತಾ ಈ ಗಂಧಮಾದನ ಪರ್ವತಕ್ಕೆ ಬಂದಿದ್ದೇನೆ. ನಾನು ಬಹುಕಾಲದಿಂದ ಬಯಸಿದ ಈ ಯುದ್ಧರೂಪವಾದ ಆತಿಥ್ಯವನ್ನು ನನಗೆ ಕೊಡಿ.

ನರನಾರಾಯಣೌ

ಅಪೇತಕ್ರೋಧಲೋಭೋಽಯಮಾಶ್ರಮೋ ರಾಜಸತ್ತಮ ॥೨೪॥

ನ ಹ್ಯಸ್ಮಿನ್ನಾಶ್ರಮೇ ಯುದ್ಧಂ ಕುತಃ ಶಸ್ತ್ರಂ ಕುತೋಽನೃಜುಃ ।
ಅನ್ಯತ್ರ ಯುದ್ಧಮಾಕಾಂಕ್ಷ ಬಹವಃ ಕ್ಷತ್ರಿಯಾಃ ಕ್ಷಿತೌ ॥೨೫॥

ನರ-ನಾರಾಯಣರು– ಎಲೈ ರಾಜಶ್ರೇಷ್ಠನೇ, ಈ ಆಶ್ರಮವು ಕ್ರೋಧ ಲೋಭಗಳಿಂದ ರಹಿತವಾದುದು. ಈ ಆಶ್ರಮದಲ್ಲಿ ಯುದ್ಧವು ನಡೆಯುವುದಿಲ್ಲ. ಇನ್ನು ಶಸ್ತ್ರವಾಗಲೀ, ಕ್ರೋಧಾದಿಗಳಿಗೆ ಪಾತ್ರನಾದ ವಕ್ರಪುರುಷನಾಗಲೀ ಎಲ್ಲಿಂದ ಬರಬೇಕು? ಭೂಮಿಯಲ್ಲಿ ಅನೇಕ ಜನ ಕ್ಷತ್ರಿಯರಿದ್ದಾರೆ. ಅವರ ಜೊತೆಯಲ್ಲಿ ಯುದ್ಧವನ್ನು ಬಯಸುವವನಾಗು.

ಜಾಮದಗ್ನ್ಯಃ

ಉಚ್ಯಮಾನಸ್ತಥಾऽಪಿ ಸ್ಮ ಭೂಯ ಏವಾಭ್ಯಭಾಷತ ।
ಪುನಃ ಪುನಃ ಕ್ಷಾಮ್ಯಮಾಣಃ ಸಾಂತ್ವ್ಯಮಾನಶ್ಚ ಭಾರತ ॥೨೬॥

ದಂಭೋದ್ಭವೋ ಯುದ್ಧಮಿಚ್ಛನ್ನಾಹ್ವಯತ್ಯೇವ ತಾಪಸೌ ॥೨೭॥

ಜಾಮದಗ್ನ್ಯ– ಅವನನ್ನು ಕುರಿತು ಹಾಗೆ ಹೇಳಿದರೂ ಮತ್ತು ಪುನಃ ಪುನಃ ಶಾಂತಿಯನ್ನು ಹೊಂದು ಎಂದು ಸಮಾಧಾನ ಮಾಡಿದರೂ ಅವನು ಪುನಃ ಹಾಗೆಯೇ ಮಾತನಾಡಿದನು. ಎಲೈ ಭಾರತನೇ, ದಂಭೋದ್ಭವನು ಯುದ್ಧವನ್ನು ಬಯಸಿ ಆ ತಪಸ್ವಿಗಳನ್ನು ಆಹ್ವಾನ ಮಾಡುತ್ತಲೇ ಇದ್ದನು.

ತತೋ ನರಸ್ತ್ವಷೀಕಾಣಾಂ ಮುಷ್ಟಿಮಾದಾಯ ಭಾರತ ।
ಅಬ್ರವೀದೇಹಿ ಯುದ್ಧ್ಯಸ್ವ ಯುದ್ಧಕಾಮ ಮಯಾ ಸಹ ॥೨೮॥

ಎಲೈ ಭಾರತನೇ, ಆಗ ನರನು ಒಂದು ಹಿಡಿ ಹಂಚಿಕಡ್ಡಿಗಳನ್ನು ತೆಗೆದುಕೊಂಡು ಎಲೈ ಯುದ್ಧವನ್ನು ಬಯಸುವವನೇ, ಬಾ, ನನ್ನ ಜೊತೆಯಲ್ಲಿ ಯುದ್ಧವನ್ನು ಮಾಡು ಎಂದು ಹೇಳಿದನು.

ಸರ್ವಶಸ್ತ್ರಾಣಿ ಚಾದತ್ಸ್ವ ಯೋಜಯಸ್ವ ಚ ವಾಹಿನೀಮ್ ।
ಸನ್ನಹ್ಯಸ್ವ ಚ ವರ್ಮಾಣಿ ಯಾನಿ ಚಾನ್ಯಾನಿ ಸಂತಿ ತೇ ॥೨೯॥

ಅಹಂ ಹಿ ತೇ ವಿನೇಷ್ಯಾಮಿ ಯುದ್ಧಶ್ರದ್ಧಾಮಿತಃ ಪರಮ್ ।
ಯದಾಹ್ವಯಸಿ ದರ್ಪೇಣ ಬ್ರಾಹ್ಮಣಪ್ರಮುಖಾನ್ ಜನಾನ್ ॥೩೦॥

ನಿನ್ನ ಎಲ್ಲಾ ಆಯುಧಗಳನ್ನೂ ತೆಗೆದುಕೊ, ಸೈನ್ಯವನ್ನು ಹೂಡು, ಕವಚಗಳನ್ನು ಧರಿಸು, ಬೇರೆ ಕವಚಗಳಿದ್ದರೆ ಅವುಗಳನ್ನೂ ಧರಿಸು. ನೀನು ದರ್ಪದಿಂದ ಬ್ರಾಹ್ಮಣರೇ

ಮೊದಲಾದ ಜನರನ್ನು ಯುದ್ಧಕ್ಕೆ ಆಹ್ವಾನ ಮಾಡುತ್ತಿರುವುದರಿಂದ ನಾನು ನಿನ್ನ ಯುದ್ಧದ ಬಯಕೆಯನ್ನು ಈ ದಿನ ಹೋಗಲಾಡಿಸುತ್ತೇನೆ.

ದಂಭೋದ್ಭವಃ

ಯದ್ಯೇತದಸ್ತ್ರಮಸ್ಮಾಸು ಯುಕ್ತಂ ತಾಪಸ ಮನ್ಯಸೇ ।
ಏತೇನಾಪಿ ತ್ವಯಾ ಯೋತ್ಸ್ಯೇ ಯುದ್ಧಾರ್ಥೀ ಹ್ಯಹಮಾಗತಃ ॥೩೧॥

ದಂಭೋದ್ಭವ– ಎಲೈ ತಾಪಸನೇ, ನೀನು ನಿನ್ನ ಕೈಯಲ್ಲಿ ಹಿಡಿದಿರುವ ಈ ಕಡ್ಡಿಗಳು ಯೋಗ್ಯವೆಂದು ಭಾವಿಸುವುದಾದರೆ ಯುದ್ಧವನ್ನು ಬಯಸಿ ಬಂದಿರುವ ನಾನು ಈ ಅಸ್ತ್ರದ ಎದುರಾಗಿಯೂ ಸಹ ನಿನ್ನ ಜೊತೆಯಲ್ಲಿ ಯುದ್ಧವನ್ನು ಮಾಡುವೆನು.

ಜಾಮದಗ್ನ್ಯಃ

ಇತ್ಯುಕ್ತ್ವಾ ಶರವರ್ಷೇಣ ಸರ್ವತಃ ಸಮವಾಕಿರತ್ ।
ದಂಭೋದ್ಭವಸ್ತಾಪಸೌ ತೌ ಜಿಘಾಂಸುರ್ಬಲದರ್ಪಿತಃ ॥೩೨॥

ಜಾಮದಗ್ನ್ಯ– ದಂಭೋದ್ಭವನು ಹೀಗೆ ಹೇಳಿ, ಬಲದರ್ಪಿತನಾಗಿ ಅವರಿಬ್ಬರನ್ನೂ ಕೊಲ್ಲಲು ಬಯಸಿ ಆ ತಪಸ್ವಿಗಳ ಮೇಲೆ ಬಾಣಗಳ ಮಳೆಯನ್ನು ಸುರಿಸಿದನು.

ತಸ್ಯ ತಾನಸ್ಯತಃ ಕ್ಷಿಪ್ರಮಿಷೂನ್ ಪರತನುಚ್ಛಿದಃ ।
ಕದರ್ಥೀಕೃತ್ಯ ಸ ಮುನಿರಿಷೀಕಾಭಿರಪಾನುದತ್ ॥೩೩॥

ಶೀಘ್ರವಾಗಿ ಅವನು ಪ್ರಯೋಗಿಸಿದ ಇನ್ನೊಬ್ಬರ ಶರೀರವನ್ನು ಭೇದಿಸುವ ಆ ಬಾಣಗಳನ್ನು ತಾತ್ಸಾರ ಮಾಡಿ ಆ ಋಷಿಯು ಹಂಚಿಕಡ್ಡಿಗಳಿಂದ ಅವುಗಳನ್ನು ಪರಿಹರಿಸಿದನು.

ತತೋಽಸ್ಯೈ ಪ್ರಾಸೃಜದ್ ಘೋರಮೈಷೀಕಮಪರಾಜಿತಃ ।
ಅಸ್ತ್ರಮಪ್ರತಿಸಂಧೇಯಂ ತದದ್ಭುತಮಿವಾಭವತ್ ॥೩೪॥

ಅನಂತರ ದಂಭೋದ್ಭವನನ್ನು ಕುರಿತು ಅಪರಾಜಿತನಾದ ಆ ಮುನಿಯು ಪ್ರತ್ಯಸ್ತ್ರವಿಲ್ಲದ ಘೋರವಾದ ಐಷೀಕಾಸ್ತ್ರವನ್ನು ಪ್ರಯೋಗಿಸಿದನು. ಅದು ಅದ್ಭುತವಾಗಿದ್ದಿತು.

ತೇಷಾಮಕ್ಷೀಣಿ ಕರ್ಣಾಂಶ್ಚ ನಾಸಿಕಾಶ್ಚೈವ ಮಾಯಯಾ ।
ನಿಮಿತ್ತವೇಧೀ ಸ ಮುನಿರಿಷೀಕಾಭಿಃ ಸಮಪರ್ಯತ್ ॥೩೫॥

ಸ ದೃಷ್ಟ್ವಾ ಸ್ಫೀತಮಾಕಾಶಮಿಷೀಕಾಭಿಃ ಸಮಾಚಿತಮ್ ।
ಪಾದಯೋರ್ನ್ಯಪತದ್ ರಾಜಾ ಸ್ವಸ್ತಿ ಮೇಽಸ್ತ್ವಿತಿ ಚಾಬ್ರವೀತ್ ॥೩೬॥

ಎಷ್ಟು ಕಾರಣವಿದೆಯೋ ಅಷ್ಟೇ ಹಿಂಸೆಯನ್ನು ಮಾಡುವ ಆ ಋಷಿಯು ತನ್ನ ಸಾಮರ್ಥ್ಯದಿಂದ ಆ ಹಂಚಿಕಡ್ಡಿಗಳಿಂದ ಯೋಧರ ಮತ್ತು ದಂಭೋದ್ಭವನ ಕಣ್ಣುಗಳನ್ನೂ, ಕಿವಿಗಳನ್ನೂ, ಮೂಗುಗಳನ್ನೂ ತುಂಬಿದನು (ಆ ಹಂಚಿಕಡ್ಡಿಗಳು ಚಕ್ಷುರಾದಿಗಳ ಸ್ಪರ್ಶವನ್ನು ಮಾತ್ರ ಮಾಡಿದವು ಎಲ್ಲೂ ಗಾಯವನ್ನು ಮಾಡಲಿಲ್ಲ–ವಾದಿರಾಜರು).

ತಮಬ್ರವೀನ್ನರೋ ರಾಜನ್ ಶರಣ್ಯಃ ಶರಣೈಷಿಣಾಮ್ ॥೩೭॥

ಶುದ್ಧವಾದ ಆಕಾಶವು ಹಂಚಿಕಡ್ಡಿಗಳಿಂದ ತುಂಬಿ ಹೋಗಿರುವುದನ್ನು ನೋಡಿ ಆ ರಾಜನು ನನಗೆ ಕ್ಷೇಮವಾಗಲಿ ಎಂದು ಹೇಳುತ್ತಾ ಅವನ ಪಾದಗಳ ಮೇಲೆ ಬಿದ್ದನು.

ಬ್ರಹ್ಮಣ್ಯೋ ಭವ ಧರ್ಮಾತ್ಮಾ ಮಾ ಚ ಸ್ಮೈವಂ ಪುನಃ ಕೃಥಾಃ ॥೩೮॥

ಮಾ ಚ ದರ್ಪಸಮಾವಿಷ್ಟಃ ಕ್ಷೇಪ್ತೀಃ ಕಾಂಶ್ಚಿತ್ ಕದಾಚನ ।
ಸದೃಶಾನ್ ಶ್ರೇಯಸೋ ವಾಽಪಿ ತತ್ ತೇ ರಾಜನ್ ಸಮಾಹಿತಮ್ ॥

ಎಲೈ ರಾಜನೇ, ಶರಣಾಗತರಾದವರಿಗೆ ಕ್ಷೇಮವನ್ನು ಉಂಟುಮಾಡುವ ನರನು ಅವನನ್ನು ಕುರಿತು ಬ್ರಾಹ್ಮಣರಲ್ಲಿ ವಾತ್ಸಲ್ಯದಿಂದ ನಡೆದುಕೊ, ಧರ್ಮಾತ್ಮನಾಗಿರು, ಪುನಃ ಹೀಗೆ ಮಾಡಬೇಡ, ದರ್ಪದಿಂದ ಕೂಡಿದವನಾಗಿ ಎಂದೂ ಯಾರನ್ನೂ ನಿಂದಿಸಬೇಡ, ಎಂದೂ ನಿನಗೆ ಸಮನಾದ ಅಥವಾ ಶ್ರೇಷ್ಠರಾದ ಯಾರನ್ನೂ ನಿಂದಿಸಬೇಡ. ಎಲೈ ರಾಜನೇ, ಅದರಿಂದ ನಿನಗೆ ಒಳ್ಳೆಯದಾಗುತ್ತದೆ.

ಜಿತಕ್ರೋಧಃ ಕೃತಪ್ರಜ್ಞೋ ನಿರಹಂಕಾರ ಆತ್ಮವಾನ್ ।
ದಾಂತಃ ಶಾಂತೋ ಮೃದುಃ ಕ್ಷೇಮಂ ಪ್ರಜಾಃ ಪಾಲಯ ಸರ್ವದಾ ॥

ಮಾ ಸ್ಮ ಭೂಯಃ ಕ್ಷಿಪೇಃ ಕಂಚಿದವಿದಿತ್ವಾ ಬಲಾಬಲಮ್ ।
ಅನುಜ್ಞಾತಃ ಸ್ವಸ್ತಿ ಗಚ್ಛ ಸ್ವಗೃಹಂ ರಾಜಸತ್ತಮ ॥೪೧॥

ಕುಶಲಂ ಬ್ರಾಹ್ಮಣಾನ್ ಪೃಚ್ಛೇರಾವಯೋರ್ವಚನಾದ್ ಭೃಶಮ್ ॥೪೨॥

ಕ್ರೋಧವನ್ನು ಜಯಿಸಿ ಒಳ್ಳೆಯ ಪ್ರಜ್ಞೆಯನ್ನು ಹೊಂದಿದವನಾಗಿ, ಅಹಂಕಾರವನ್ನು ಪಡದೇ, ಮನೋನಿಗ್ರಹವನ್ನು ಹೊಂದಿದವನಾಗಿ, ಶಾಂತನೂ, ದಾಂತನೂ, ಮೃದುವೂ ಆಗಿ, ಯಾವಾಗಲೂ ಕ್ಷೇಮದಿಂದ ಪ್ರಜೆಗಳನ್ನು ಪಾಲಿಸುವವನಾಗು. ಎಲೈ ರಾಜಶ್ರೇಷ್ಠನೇ, ಬಲಾಬಲಗಳನ್ನು ತಿಳಿಯದೆ ಪುನಃ ಯಾರನ್ನೂ ನಿಂದಿಸಬೇಡ. ನಿನಗೆ ಅನುಮತಿಯನ್ನು ನೀಡಿದ್ದೇನೆ, ಮಂಗಳವಾಗಲಿ, ಹೋಗಿಬಾ. ನಮ್ಮ ಮಾತಿನಂತೆ ಬ್ರಾಹ್ಮಣರನ್ನು ಕುರಿತು ಚೆನ್ನಾಗಿ ಕುಶಲಪ್ರಶ್ನೆಯನ್ನು ಮಾಡುವವನಾಗು (ಎಂದು ಹೇಳಿದನು).

ಜಾಮದಗ್ನ್ಯಃ

ತತೋ ರಾಜಾ ತಯೋಃ ಪಾದಾವಭಿವಾದ್ಯ ಮಹಾತ್ಮನೋಃ ।
ಪ್ರತ್ಯಾಜಗಾಮ ಸ್ವಪುರಂ ಧರ್ಮಂ ಚೈವಾಚರದ್ ಭೃಶಮ್ ॥೪೩॥

ಜಾಮದಗ್ನ್ಯ– ಅನಂತರ ರಾಜನು ಮಹಾತ್ಮರಾದ ಅವರ ಪಾದಗಳಿಗೆ ನಮಸ್ಕರಿಸಿ ತನ್ನ ಪಟ್ಟಣಕ್ಕೆ ಹಿಂದಿರುಗಿ ಶ್ರೇಷ್ಠವಾದ ಧರ್ಮಾಚರಣೆಯನ್ನು ಮಾಡಿದನು.

ತಸ್ಮಾದ್ ಯಾವದ್ ಧನುಃಶ್ರೇಷ್ಠೇ ಗಾಂಡೀವೇऽಸ್ತ್ರಂ ನ ಯುಜ್ಯತೇ ।
ತಾವತ್ ತ್ವಂ ಮಾನಮುತ್ಸೃಜ್ಯ ಗಚ್ಛ ರಾಜನ್ ಧನಂಜಯಮ್ ॥೪೪॥

ಆದ್ದರಿಂದ ಶ್ರೇಷ್ಠವಾದ ಧನುಸ್ಸಾದ ಗಾಂಡೀವದಲ್ಲಿ ಎಲ್ಲಿಯವರೆಗೆ ಅಸ್ತ್ರವು ಹೂಡಲ್ಪಡುವುದಿಲ್ಲವೋ ಅದಕ್ಕಿಂತ ಮೊದಲೇ ಅಹಂಕಾರವನ್ನು ಬಿಟ್ಟು ಎಲೈ ರಾಜನೇ, ಅರ್ಜುನನ ಬಳಿಗೆ ಹೋಗುವವನಾಗು.

ಕಂಕುದೀಪಂ ಕಂಕುಲಾಸಮಕ್ಷಿಸಂತರ್ಜನಂ ತಥಾ ।
ಸಂತಾನಂ ನರ್ತಕಂ ಘೋರಂ ಹಾಸ್ಯಮೌದಕಮಷ್ಟಮಮ್ ॥೪೫॥

ಕಂಕುದೀಪ= ತಲೆಯಲ್ಲಿ ಅಗ್ನಿಯ ತಾಪವನ್ನು ಮಾಡುವಂತಹದು, ಕಂಕುಲಾಸ= ತಲೆಯನ್ನು ಕುದಿಸುವಂತೆ ಮಾಡುವುದು, ಆಕ್ಷೇಪ= ಎತ್ತಿ ಎಸೆಯುವಂತೆ ಮಾಡುವುದು, ತರ್ಜನ= ಹೆದರಿಸುವುದು, ಸಂತಾನ= ಒಂದು ಬಾಣವನ್ನು ಪ್ರಯೋಗಿಸಿದರೆ ಕೋಟಿ ಬಾಣಗಳನ್ನು ಸೃಷ್ಟಿಸುವುದು, ಘೋರನರ್ತಕ= ಭಯಂಕರವಾಗಿ ನೃತ್ಯವನ್ನು ಮಾಡಿಸುವುದು, ಹಾಸ್ಯ= ಕಾರಣವಿಲ್ಲದೇ ಸದಾ ನಗುವಂತೆ ಮಾಡುವುದು, ಔದಕ= ಯಾವಾಗಲೂ ಮೂತ್ರವನ್ನು ವಿಸರ್ಜಿಸುವಂತೆ ಮಾಡುವುದು, ಇದು ಎಂಟನೆಯದು. ಇವೆಲ್ಲವೂ ಅಸ್ತ್ರವಿಶೇಷಗಳ ಹೆಸರುಗಳು (ವಾದಿರಾಜರು).

ಏತೈರ್ವಿದ್ಧಾಃ ಸರ್ವ ಏವ ಮರಣಂ ಯಾಂತಿ ಮಾನವಾಃ ।
ಉನ್ಮತ್ತಾಶ್ಚ ವಿಚೇಷ್ಟಂತೇ ನಷ್ಟಸಂಜ್ಞಾ ವಿಚೇತಸಃ ॥೪೬॥

ಸ್ವಪಂತಿ ಚ ಪ್ಲವಂತೇ ಚ ಚರ್ದಯಂತಿ ಚ ಮಾನವಾಃ ।
ಮೂತ್ರಯಂತೇ ಚ ಸತತಂ ರುದಂತಿ ಚ ಹಸಂತಿ ಚ ॥೪೭॥

ಈ ಅಸ್ತ್ರಗಳಿಂದ ಪ್ರಹಾರ ಮಾಡಲ್ಪಟ್ಟ ಮಾನವರೆಲ್ಲರೂ ಮರಣವನ್ನು ಹೊಂದುತ್ತಾರೆ. ಹುಚ್ಚರಂತೆ ಚೇಷ್ಟೆಯನ್ನು ಮಾಡುತ್ತಾರೆ. ಸಂಜ್ಞೆಯನ್ನು ಕಳೆದುಕೊಂಡು ಮೂರ್ಛೆಯನ್ನು ಹೊಂದುತ್ತಾರೆ. ನಿದ್ರೆಯನ್ನು ಮಾಡುತ್ತಾರೆ. ಹಾರುತ್ತಾರೆ. ವಮನವನ್ನು ಮಾಡುತ್ತಾರೆ. ಸತತವಾಗಿ ಮೂತ್ರವನ್ನು ಮಾಡುತ್ತಾರೆ. ಹಾಗೆಯೇ ರೋದನವನ್ನು ಮಾಡುತ್ತಾರೆ ಮತ್ತು ನಗುತ್ತಾರೆ.

ಅಸಂಖ್ಯೇಯಾ ಗುಣಾಃ ಪಾರ್ಥೇ ತದ್ವಿಶಿಷ್ಟೋ ಜನಾರ್ದನಃ ।
ತ್ವಮೇವ ಭೂಯೋ ಜಾನಾಸಿ ಕುಂತೀಪುತ್ರಂ ಧನಂಜಯಮ್ ॥೪೮॥

ಅರ್ಜುನನಲ್ಲಿ ಎಣಿಸಲು ಸಾಧ್ಯವಿಲ್ಲದಷ್ಟು ಗುಣಗಳಿವೆ. ಕೃಷ್ಣನು ಅವನಿಗಿಂತಲೂ ಶ್ರೇಷ್ಠನಾದವನು ಮತ್ತು ಕುಂತೀಪುತ್ರನಾದ ಅರ್ಜುನನನ್ನು ನೀನೇ ಚೆನ್ನಾಗಿ ತಿಳಿದಿದ್ದೀಯೆ.

ನರನಾರಾಯಣೌ ಯೌ ತೌ ತಾವೇವಾರ್ಜುನಕೇಶವೌ ।
ವಿಜಾನೀಹಿ ಮಹಾರಾಜ ಪ್ರವೀರೌ ಪುರುಷೋತ್ತಮೌ ॥೪೯॥

ಎಲೈ ಮಹಾರಾಜನೇ, ಮಹಾವೀರರೂ ಪುರುಷೋತ್ತಮರೂ ಆದ ಆ ನರ-ನಾರಾಯಣರೇ ಈ ಅರ್ಜುನ ಮತ್ತು ಕೃಷ್ಣರೆಂದು ತಿಳಿ.

ಯದ್ಯೇತದೇವಂ ಜಾನಾಸಿ ನ ಚ ಮಾಮಭಿಶಂಕಸೇ ।
ಅರ್ಯಾಂ ಮತಿಂ ಸಮಾಸ್ಥಾಯ ಶಾಮ್ಯ ಭಾರತ ಪಾಂಡವೈಃ ॥೫೦॥

ನೀನು ಹೀಗೆ ತಿಳಿದರೆ ನನ್ನನ್ನು ಶಂಕಿಸುವುದಿಲ್ಲ. ಶ್ರೇಷ್ಠವಾದ ಬುದ್ಧಿಯನ್ನು ಹೊಂದಿದವನಾಗಿ ಎಲೈ ಭಾರತನೇ, ಪಾಂಡವರ ಜೊತೆಯಲ್ಲಿ ಶಾಂತಿ ಸಂಧಾನವನ್ನು ಮಾಡಿಕೊ.

ಅಥ ಚೇನ್ಮನ್ಯಸೇ ಶ್ರೇಯೋ ನ ಮೇ ಭೇದೋ ಭವೇದಿತಿ ।
ಪ್ರಶಾಮ್ಯ ಭರತಶ್ರೇಷ್ಠ ಮಾ ಚ ಯುದ್ಧೇ ಮನಃ ಕೃಥಾಃ ॥೫೧॥

ಎಲೈ ಭರತಶ್ರೇಷ್ಠನೇ, ನನಗೆ ಶ್ರೇಯಸ್ಸಾಗಬೇಕು. ನಮಗೆ ಪರಸ್ಪರ ವಿರೋಧ ಉಂಟಾಗಬಾರದು ಎಂದು ನೀನು ಭಾವಿಸುವುದಾದರೆ ಸಂಧಿಯನ್ನು ಮಾಡಿಕೊಳ್ಳುವವನಾಗು. ಯುದ್ಧದಲ್ಲಿ ಮನಸ್ಸನ್ನು ಮಾಡಿಕೊಳ್ಳಬೇಡ.

ನಿರ್ಮಾತಾ ಸರ್ವಲೋಕಾನಾಮೀಶ್ವರಃ ಸರ್ವಲೋಕಕೃತ್ ।
ಯಸ್ಯ ನಾರಾಯಣೋ ಬಂಧುರರ್ಜುನೋ ದುಃಸಹೋ ಯುಧಿ॥೫೨॥

ಯಾವನಿಗೆ ಸರ್ವಲೋಕಸೃಷ್ಟಿಕರ್ತನಾದ, ಸರ್ವಲೋಕಸಂಹಾರಕನಾದ ಪ್ರಭುವಾದ ನಾರಾಯಣನು ಬಂಧುವಾಗಿದ್ದಾನೆಯೋ ಅಂತಹ ಅರ್ಜುನನನ್ನು ಯುದ್ಧದಲ್ಲಿ ಯಾರೂ ಸಹಿಸಲಾರರು.

ಕಃ ಸಮುತ್ಸಹತೇ ಜೇತುಂ ತ್ರಿಷು ಲೋಕೇಷು ಭಾರತ ।
ವೀರಂ ಕಪಿಧ್ವಜಂ ಜಿಷ್ಣುಂ ಯಸ್ಯ ನಾಸ್ತಿ ಸಮೋ ಯುಧಿ ॥೫೩॥

ಎಲೈ ಭಾರತನೇ, ಯಾವ ಕಪಿಧ್ವಜನಾದ, ವೀರನಾದ ಅರ್ಜುನನಿಗೆ ಮೂರು ಲೋಕಗಳಲ್ಲಿಯೂ ಯುದ್ಧದಲ್ಲಿ ಸಮಾನರಾದವರು ಇಲ್ಲವೋ ಅಂತಹ ಅವನನ್ನು ಜಯಿಸಲು ಯಾವನು ಉದ್ಯುಕ್ತನಾಗುತ್ತಾನೆ?

ಭವತಾಂ ಚ ಕುರುಶ್ರೇಷ್ಠ ಕುಲಂ ಬಹುಮತಂ ಭುವಿ ।
ತತ್ ತಥೈವಾಸ್ತು ಭದ್ರಂ ತೇ ಸ್ವಾರ್ಥಮತ್ರಾನುಚಿಂತಯ ॥೫೪॥

ಎಲೈ ಕುರುಶ್ರೇಷ್ಠನೇ, ನಿಮ್ಮ ಕುಲವು ಭೂಮಿಯಲ್ಲಿ ಗೌರವಿಸಲ್ಪಟ್ಟಿದೆ. ಅದು ಹಾಗೆಯೇ ಉಳಿಯಲಿ. ನಿನಗೆ ಮಂಗಳವಾಗಲಿ. ಈ ವಿಷಯದಲ್ಲಿ ನಿನ್ನ ಸ್ವಾರ್ಥವನ್ನಾದರೂ ಚಿಂತಿಸು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪಂಚನವತಿತಮೋऽಧ್ಯಾಯಃ ॥
॥ ಭಗವದ್ಯಾನಪರ್ವಣಿ ಷಡ್‌ವಿಂಶೋऽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ತೊಂಬತ್ತೈದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತಾರನೆಯ ಅಧ್ಯಾಯ

ಕಣ್ವೋಪದೇಶ. ಮಾತಲಿಕನ್ಯಾಕಥಾ.

ವೈಶಂಪಾಯನಃ

ಜಾಮದಗ್ನ್ಯವಚಃ ಶ್ರುತ್ವಾ ಕಣ್ವೋऽಪಿ ಭಗವಾನ್ ಋಷಿಃ ।
ದುರ್ಯೋಧನಮಿದಂ ವಾಕ್ಯಮಬ್ರವೀತ್ ಕುರುಸಂಸದಿ ॥೧॥

ವೈಶಂಪಾಯನ– ಪರಶುರಾಮರ ಮಾತನ್ನು ಕೇಳಿ ಪೂಜ್ಯರಾದ ಕಣ್ವಋಷಿಗಳೂ ಸಹ ಕುರುಸಭೆಯಲ್ಲಿ ದುರ್ಯೋಧನನನ್ನು ಕುರಿತು ಈ ಮಾತನ್ನು ಆಡಿದರು.

ಅಕ್ಷಯಶ್ಚಾವ್ಯಯಶ್ಚೈವ ಬ್ರಹ್ಮಾ ಲೋಕಪಿತಾಮಹಃ ।
ತಥೈವ ಭಗವಂತೌ ತೌ ನರನಾರಾಯಣಾವೃಷೀ ॥೨॥

ಸರ್ವಲೋಕಪಿತಾಮಹನಾದ ಬ್ರಹ್ಮನು ಶಾಶ್ವತನಾದವನು ಮತ್ತು ನಾಶವನ್ನು ಹೊಂದದಿರುವವನು. ಅದರಂತೆಯೇ ಪೂಜ್ಯರಾದ ನರನಾರಾಯಣಋಷಿಗಳೂ ಸಹ.

ಆದಿತ್ಯಾನಾಂ ಹಿ ಸರ್ವೇಷಾಂ ವಿಷ್ಣುರೇಕಃ ಸನಾತನಃ ।
ಅಜಯ್ಯಶ್ಚಾವ್ಯಯಶ್ಚೈವ ಶಾಶ್ವತಃ ಪ್ರಭುರೀಶ್ವರಃ ॥೩॥

ಅದಿತಿಯ ಎಲ್ಲಾ ಮಕ್ಕಳಲ್ಲಿ ವಿಷ್ಣು ಒಬ್ಬನೇ ಸನಾತನನಾದವನು, ಜಯಿಸಲು ಸಾಧ್ಯವಿಲ್ಲದವನು, ನಾಶವಿಲ್ಲದವನು, ಶಾಶ್ವತನಾದವನು, ಪ್ರಭುವಾದವನು ಮತ್ತು ಸಮರ್ಥನಾದವನು.

ನಿಮಿತ್ತಮರಣಾಶ್ಚಾನ್ಯೇ ಚಂದ್ರಸೂರ್ಯೌ ಮಹೀ ಜಲಮ್ ।
ವಾಯುರಗ್ನಿಸ್ತಥಾऽऽಕಾಶಂ ಗ್ರಹಾಸ್ತಾರಾಗಣಾಸ್ತಥಾ ॥೪॥

ಚಂದ್ರ-ಸೂರ್ಯರು, ಭೂಮಿ, ಜಲ, ವಾಯು, ಅಗ್ನಿ, ಆಕಾಶ, ಗ್ರಹಗಳು ಮತ್ತು ನಕ್ಷತ್ರಗಳು ಇವುಗಳಿಗೆಲ್ಲಾ ನಿಮಿತ್ತದಿಂದ (ಪ್ರಳಯಕಾಲರೂಪವಾದ ನಿಮಿತ್ತದಿಂದ) ಮರಣವುಂಟಾಗುತ್ತದೆ.

ತೇ ಚ ಕ್ಷಯಾಂತೇ ಜಗತೋ ಹಿತ್ವಾ ಲೋಕತ್ರಯಂ ಸದಾ ।
ಕ್ಷಯಂ ಗಚ್ಛಂತಿ ವೈ ಸರ್ವೇ ಸೃಜ್ಯಂತೇ ಚ ಪುನಃ ಪುನಃ ॥೫॥

ಇವರಾದರೂ ಪ್ರಳಯಕಾಲದಲ್ಲಿ ಜಗತ್ತಿನ ಕ್ಷಯವುಂಟಾದಾಗ ಲೋಕತ್ರಯವನ್ನು ಬಿಟ್ಟು ನಾಶವನ್ನು ಹೊಂದುತ್ತಾರೆ ಮತ್ತು ಪುನಃ ಪುನಃ ಎಲ್ಲರೂ ಸೃಷ್ಟಿಸಲ್ಪಡುತ್ತಾರೆ.

ಮುಹೂರ್ತಮರಣಾಶ್ಚಾನ್ಯೇ ಮಾನುಷಾ ಮೃಗಪಕ್ಷಿಣಃ ।
ತಿರ್ಯಗ್ಯೋನ್ಯಶ್ಚ ಯೇ ಚಾನ್ಯೇ ಜೀವಲೋಕಚರಾಃ ಸ್ಮೃತಾಃ ॥೬॥

ಇನ್ನು ಮನುಷ್ಯರು, ತಿರ್ಯಗ್ಯೋನಿಗತವಾದ ಮೃಗ-ಪಕ್ಷಿಗಳು ಮುಂತಾದ ಜೀವಲೋಕದಲ್ಲಿ ಸಂಚರಿಸುವ ಜೀವರು ಮುಹೂರ್ತ ಮರಣರೆಂದು ಹೇಳಲ್ಪಡುತ್ತಾರೆ (ಶೀಘ್ರವಾಗಿ ಮರಣ ಹೊಂದುವವರು ಎಂದು ಅಭಿಪ್ರಾಯ).

ಭೂಯಿಷ್ಠೇನ ತು ರಾಜಾನಃ ಶ್ರಿಯಂ ಭುಕ್ತ್ವಾऽऽಯುಷಃ ಕ್ಷಯೇ ।
ಮರಣಂ ಪ್ರತಿಗಚ್ಛಂತಿ ಭೋಕ್ತುಂ ಸುಕೃತದುಷ್ಕೃತೇ ॥೭॥

ರಾಜರು ಹೆಚ್ಚಾಗಿ ಸಂಪತ್ತನ್ನು ಭೋಗಿಸಿ ಆಯುಸ್ಸು ಮುಗಿದಾಗ, ತಾವು ಮಾಡಿದ ಪುಣ್ಯ-ಪಾಪಗಳ ಫಲವನ್ನು ಭೋಗಿಸಲು ಮರಣವನ್ನು ಹೊಂದುತ್ತಾರೆ.

ಸ ಭವಾನ್ ಧರ್ಮಪುತ್ರೇಣ ಶಮಂ ಕರ್ತುಮಿಹಾರ್ಹತಿ ।
ಪಾಂಡವಾಃ ಕುರವಶ್ಚೈವ ಪಾಲಯಂತು ವಸುಂಧರಾಮ್ ॥೮॥

ಅಂತಹ (ಅಲ್ಪಾಯುಷ್ಯವುಳ್ಳ ಮರಣವು ಸನ್ನಿಹಿತವಾದ) ನೀನು ಯುಧಿಷ್ಠಿರನ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳುವುದು ಯೋಗ್ಯವಾದುದು. ಪಾಂಡವರೂ, ಕೌರವರೂ ಸೇರಿ ಭೂಮಿಯನ್ನು ಆಳಲಿ.

ಬಲವಾನಹಮಿತ್ಯೇಷ ನ ಮಂತವ್ಯಂ ಸುಯೋಧನ ।
ಬಲವಂತೋ ಬಲಿಭ್ಯೋ ಹಿ ದೃಶ್ಯಂತೇ ಪುರುಷರ್ಷಭ ॥೯॥

ಎಲೈ ಸುಯೋಧನನೇ, ನಾನು ಬಲಿಷ್ಠ ಎಂದು ಎಂದೂ ತಿಳಿಯಬಾರದು. ಎಲೈ ಪುರುಷರ್ಷಭನೇ, ಲೋಕದಲ್ಲಿ ಬಲಿಷ್ಠರಿಗಿಂತಲೂ ಬಲಾಢ್ಯರಾದವರು ಕಂಡುಬರುತ್ತಾರೆ.

ನ ಬಲಂ ಬಲಿನಾಂ ಮಧ್ಯೇ ಬಲಂ ಭವತಿ ಕೌರವ ।
ಬಲವಂತೋ ಹಿ ತೇ ಸರ್ವೇ ಪಾಂಡವಾ ದೇವವಿಕ್ರಮಾಃ ॥೧೦॥

ಎಲೈ ಕೌರವನೇ, ಬಲಿಷ್ಠರ ಮಧ್ಯದಲ್ಲಿ ಬಲವು ಬಲವಾಗುವುದಿಲ್ಲ. ದೇವಪರಾಕ್ರಮವುಳ್ಳ ಎಲ್ಲಾ ಪಾಂಡವರೂ ಬಹಳ ಬಲಿಷ್ಠರಾದವರಷ್ಟೆ!

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಮಾತಲೇರ್ದಾತುಕಾಮಸ್ಯ ಕನ್ಯಾಂ ಮೃಗಯತೋ ವರಮ್ ॥೧೧॥

ಈ ವಿಷಯದಲ್ಲಿ ಕನ್ಯಾದಾನವನ್ನು ಮಾಡಲು ಬಯಸಿ ವರನನ್ನು ಹುಡುಕುವ ಮಾತಲಿಯ ಪುರಾತನವಾದ ಇತಿಹಾಸವನ್ನು ಹೇಳುತ್ತಾರೆ.

ಮತಸ್ತ್ರಿಲೋಕರಾಜಸ್ಯ ಮಾತಲಿರ್ನಾಮ ಸಾರಥಿಃ ।
ತಸ್ಯೈಕೈವ ಕುಲೇ ಕನ್ಯಾ ರೂಪತೋ ಲೋಕವಿಶ್ರುತಾ ॥೧೨॥

ಮೂರುಲೋಕಗಳಿಗೆ ರಾಜನಾದ ಇಂದ್ರನಿಗೆ ಮಾತಲಿ ಎಂಬ ಸಾರಥಿಯು ಬಹುಮತನಾದವನು. ಅವನ ಕುಲದಲ್ಲಿ ರೂಪದಿಂದ ಲೋಕದಲ್ಲಿ ಪ್ರಖ್ಯಾತಳಾದ ಒಬ್ಬಳೇ ಕನ್ಯೆಯು ಜನಿಸಿದಳು.

ಗುಣಕೇಶೀತಿ ವಿಖ್ಯಾತಾ ನಾಮ್ನಾ ಸಾ ದೇವರೂಪಿಣೀ ।
ಶ್ರಿಯಾ ಚ ವಪುಷಾ ಚೈವ ಸ್ತ್ರಿಯೋಽನ್ಯಾಃ ಸಾಽತಿರಿಚ್ಯತೇ ॥೧೩॥

ಗುಣಕೇಶಿ ಎಂಬ ಹೆಸರಿನಿಂದ ಪ್ರಖ್ಯಾತಳಾದ ಆ ದೇವರೂಪಿಣಿಯಾದ ಕನ್ಯೆಯು ತನ್ನ ಕಾಂತಿಯಿಂದಲೂ, ದೇಹದ ಸೌಂದರ್ಯದಿಂದಲೂ ಉಳಿದ ಸ್ತ್ರೀಯರನ್ನು ಮೀರಿದ್ದಳು.

ತಸ್ಯಾಃ ಪ್ರದಾನಸಮಯಂ ಮಾತಲಿಃ ಸಹ ಭಾರ್ಯಯಾ ।
ಜ್ಞಾತ್ವಾ ವಿಮಮೃಶೇ ರಾಜನ್ ತದ್ಧಿತಂ ಪರಿಚಿಂತಯನ್ ॥೧೪॥

ಅವಳನ್ನು ದಾನಮಾಡುವ ಸಮಯವು ಒದಗಿದೆ ಎಂದು ತಿಳಿದ ಮಾತಲಿಯು ಎಲೈ ರಾಜನೇ, ಅವಳ ಹಿತವನ್ನು ಚಿಂತಿಸುತ್ತಾ ಪತ್ನಿಯ ಜೊತೆಯಲ್ಲಿ ವಿಚಾರ ಮಾಡಿದನು.

ಮಾತಲಿಃ

ಧಿಕ್ ಖಿಲ್ವಲಘುಶೀಲಾನಾಮುಚ್ಚ್ರಿತಾನಾಂ ಯಶಸ್ವಿನಾಮ್ ।
ನರಾಣಾಮೃದ್ಧಸತ್ವಾನಾಂ ಕುಲೇ ಕನ್ಯಾಪ್ರರೋಹಣಮ್ ॥೧೫॥

ಮಾತಲಿ– ಒಳ್ಳೆಯ ಶೀಲವುಳ್ಳ ಶ್ರೇಷ್ಠರಾದ, ಕೀರ್ತಿವಂತರಾದ ಮಹಾಪರಾಕ್ರಮಿಗಳಾದ ಮನುಷ್ಯರ ಕುಲದಲ್ಲಿ ಕನ್ಯೆಯನ್ನು ನೀಡುವುದಕ್ಕೆ ಧಿಕ್ಕಾರವಿರಲಿ.

ಮಾತುಃ ಕುಲಂ ಪಿತೃಕುಲಂ ಯತ್ರ ಚೈವ ಪ್ರದೀಯತೇ ।
ಕುಲತ್ರಯಂ ಸಂಶಯಿತಂ ಕುರುತೇ ಕನ್ಯಕಾ ಸತೀ ॥೧೬॥

ಕನ್ಯೆಯು ಕೊಡುವ ವಿಷಯದಲ್ಲಿ ತನ್ನ ಮಾತೃಕುಲಕ್ಕೂ, ಪಿತೃಕುಲಕ್ಕೂ ಮತ್ತು ಸ್ವೀಕಾರ ಮಾಡುವ ವಿಷಯದಲ್ಲಿ ತಾನು ಯಾವ ಕುಲಕ್ಕೆ ಹೋಗುತ್ತಾಳೆಯೋ ಆ ಕುಲಕ್ಕೂ ಕೊಡಬೇಕೇ ಬೇಡವೇ, ಸ್ವೀಕರಿಸಬೇಕೇ ಬೇಡವೇ ಎಂಬ ಸಂಶಯವನ್ನು ಉಂಟುಮಾಡುತ್ತಾಳೆ.

ದೇವಮಾನುಷಲೋಕೌ ದ್ವೌ ಮನಸಾ ಚೈವ ಚಕ್ಷುಷಾ ।
ಅವಗಾಹ್ಯೈವ ವಿಚಿತೌ ನ ಚ ಮೇ ರೋಚತೇ ವರಃ ॥೧೭॥

ನಾನು ದೇವಲೋಕ ಮತ್ತು ಮನುಷ್ಯಲೋಕ ಇವೆರಡನ್ನೂ ಮನಸ್ಸಿನಿಂದಲೂ ಪ್ರವೇಶ ಮಾಡಿ ಮತ್ತು ಕಣ್ಣಿನಿಂದಲೂ ನೋಡಿ ವಿಚಾರ ಮಾಡಿದೆ. ಯಾವ ವರನೂ ನನಗೆ ಇಷ್ಟವಾಗುವುದಿಲ್ಲ.

ಕಣ್ವಃ

ನ ದೇವಾನ್ ನೈವ ದಿತಿಜಾನ್ ನ ಗಂಧರ್ವಾನ್ ನ ಮಾನುಷಾನ್ ।
ಅರೋಚಯದ್ ವರಕೃತೇ ತ್ರಿಷು ಲೋಕೇಷು ವೈ ಋಷೀನ್ ॥೧೮॥

ಕಣ್ವ– ಅವನು ಮೂರುಲೋಕಗಳಲ್ಲಿ ದೇವತೆಗಳನ್ನಾಗಲೀ, ದೈತ್ಯರನ್ನಾಗಲೀ, ಗಂಧರ್ವರನ್ನಾಗಲೀ, ಮನುಷ್ಯರನ್ನಾಗಲೀ, ಋಷಿಗಳನ್ನಾಗಲೀ ವರನೆಂದು ಇಷ್ಟಪಡಲಿಲ್ಲ.

ಭಾರ್ಯಯಾ ತು ಸ ಸಮ್ಮಂತ್ರ್ಯ ಸಹ ರಾತ್ರ್ಯೌ ಸುಧರ್ಮಯಾ ।
ಮಾತಲಿರ್ನಾಗಲೋಕಾಯ ಚಕಾರ ಗಮನೇ ಮತಿಮ್ ॥೧೯॥

ರಾತ್ರಿಯ ಕಾಲದಲ್ಲಿ ಮಾತಲಿಯು ಸುಧರ್ಮಾ ಎಂಬ ತನ್ನ ಪತ್ನಿಯ ಜೊತೆಯಲ್ಲಿ ಆಲೋಚನೆಯನ್ನು ಮಾಡಿ ನಾಗಲೋಕಕ್ಕೆ ಹೋಗಲು ನಿಶ್ಚಯಿಸಿದನು.

ನ ಮೇ ದೇವಮನುಷ್ಯೇಷು ಗುಣಕೇಶ್ಯಾಃ ಸಮೋ ವರಃ ।
ರೂಪತೋ ದೃಶ್ಯತೇ ಕಶ್ಚಿನ್ನಾಗೇಷು ಭವಿತಾ ಧ್ರುವಮ್ ॥೨೦॥

ನನಗೆ ದೇವತೆಗಳಲ್ಲಿ ಮತ್ತು ಮನುಷ್ಯರಲ್ಲಿ ಗುಣಕೇಶಿಯ ರೂಪಕ್ಕೆ ಸಮನಾದ ವರನು ಯಾವನೂ ಕಾಣುವುದಿಲ್ಲ. ನಾಗಲೋಕದಲ್ಲಿ ಯಾರಾದರೂ ಖಂಡಿತವಾಗಿ ಸಿಗಬಹುದು.

ಇತ್ಯಾಮಂತ್ರ್ಯ ಸುಧರ್ಮಾಂ ಸ ಕೃತ್ವಾ ಚಾಭಿಪ್ರದಕ್ಷಿಣಮ್ ।
ಕನ್ಯಾಂ ಶಿರಸ್ಯುಪಾಘ್ರಾಯ ಪ್ರವಿವೇಶ ಮಹೀತಲಮ್ ॥೨೧॥

ಎಂದು ಮಂತ್ರಾಲೋಚನೆಯನ್ನು ಮಾಡಿ ಸುಧರ್ಮ ಸಭೆಗೆ (ಇಂದ್ರನ ಸಭೆಗೆ ಸುಧರ್ಮ ಎಂದು ಹೆಸರು) ಪ್ರದಕ್ಷಿಣೆಯನ್ನು ಮಾಡಿ ಕನ್ಯೆಯನ್ನು ಶಿರಸ್ಸಿನಲ್ಲಿ ಆಘ್ರಾಣಿಸಿ ಮಹೀತಳವನ್ನು ಪ್ರವೇಶಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಷಣ್ಣವತಿತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಸಪ್ತವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ತೊಂಬತ್ತಾರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೇಳನೆಯ ಅಧ್ಯಾಯ

ನಾರದರಿಂದ ವರುಣಲೋಕದಲ್ಲಿ ಮಾತಲಿಗೆ ಅನೇಕ ವಸ್ತುಗಳ ಪರಿಚಯ.

ಕಣ್ವಃ

ಮಾತಲಿಸ್ತು ವ್ರಜನ್ ಮಾರ್ಗೇ ನಾರದೇನ ಮಹರ್ಷಿಣಾ ।
ವರುಣಂ ಗಚ್ಛತಾ ದ್ರಷ್ಟುಂ ಸಮಾಗಚ್ಛದ್ ಯದೃಚ್ಛಯಾ ॥೧॥

ಕಣ್ವ– ಮಾತಲಿಯು ಮಾರ್ಗದಲ್ಲಿ ಹೋಗುತ್ತಾ ವರುಣನನ್ನು ನೋಡಲು ಹೋಗುತ್ತಿದ್ದ ಮಹರ್ಷಿಗಳಾದ ನಾರದರ ಜೊತೆಗೆ ಅನಿರೀಕ್ಷಿತವಾಗಿ ಸಮಾಗಮವನ್ನು ಹೊಂದಿದನು.

ನಾರದೋऽಬ್ರವೀದೇನಂ ಕ್ವ ಭವಾನ್ ಗಂತುಮುದ್ಯತಃ ।
ಸ್ವೇನ ವಾ ಸೂತ ಕಾರ್ಯೇಣ ಶಾಸನಾದ್ವಾ ಶತಕ್ರತೋಃ ॥೨॥

ನಾರದರು ಅವನನ್ನು ಕುರಿತು ಎಲೈ ಸೂತನೇ, ನೀನು ಎಲ್ಲಿಗೆ ಹೊರಟಿರುವಿ? ನಿನ್ನ ಕಾರ್ಯಕ್ಕಾಗಿಯೋ ಅಥವಾ ಇಂದ್ರನ ಶಾಸನದಿಂದಾಗಿಯೋ ಎಂದು ಕೇಳಿದರು.

ಮಾತಲಿರ್ನಾರದೇನೈವಂ ಸಂಪೃಷ್ಟಃ ಪಥಿ ಗಚ್ಛತಾ ।
ಯಥಾವತ್ ಸರ್ವಮಾಚಷ್ಟ ಸ್ವಕಾರ್ಯಂ ನಾರದಂ ಪ್ರತಿ ॥೩॥

ದಾರಿಯಲ್ಲಿ ಹೋಗುತ್ತಿದ್ದ ನಾರದರಿಂದ ಹೀಗೆ ಕೇಳಲ್ಪಟ್ಟ ಮಾತಲಿಯು ತನ್ನ ಕಾರ್ಯವೆಲ್ಲವನ್ನೂ ನಾರದರಿಗೆ ಸರಿಯಾಗಿ ಹೇಳಿದನು.

ತಮುವಾಚಾಥ ಸ ಮುನಿರ್ಗಚ್ಛಾವಃ ಸಹಿತಾವಿತಿ ॥೪॥

ಸಲಿಲೇಶದಿದೃಕ್ಷಾರ್ಥಮಹಮಪ್ಯುದ್ಯತೋ ದಿವಃ ॥೫॥

ಅದನ್ನು ಕೇಳಿದ ನಾರದರು ಅವನನ್ನು ಕುರಿತು ನಾನೂ ಸಹ ಜಲೇಶ್ವರನಾದ ವರುಣನನ್ನು ನೋಡಲು ಸ್ವರ್ಗದಿಂದ ಬರುತ್ತಿದ್ದೇನೆ. ಇಬ್ಬರೂ ಒಟ್ಟಿಗೆ ಹೋಗೋಣ ಎಂದು ಹೇಳಿದರು.

ಅಹಂ ತೇ ಸರ್ವಮಾಖ್ಯಾಸ್ಯೇ ದರ್ಶಯನ್ ವಸುಧಾತಳೇ ।
ದೃಷ್ಟ್ವಾ ತತ್ರ ವರಂ ಕಂಚಿದ್ ರೋಚಯಿಷ್ಯಾವ ಮಾತಲೇ ॥೬॥

ಎಲೈ ಮಾತಲಿಯೇ, ನಾನು ನಿನಗೆ ಭೂತಳದಲ್ಲಿ ಎಲ್ಲವನ್ನೂ ಪರಿಚಯ ಮಾಡಿಕೊಡುತ್ತೇನೆ. ಅದನ್ನು ನೋಡಿ ಯಾವನಾದರೂ ಒಬ್ಬ ವರನನ್ನು ಆರಿಸೋಣ.

ಕಣ್ವಃ

ಅವಗಾಹ್ಯ ತತೋ ಭೂಮಿಮುಭೌ ಮಾತಲಿನಾರದೌ ।
ದದೃಶಾತೇ ಮಹಾತ್ಮಾನೌ ಲೋಕಪಾಲಮಪಾಂಪತಿಮ್ ॥೭॥

ಕಣ್ವ– ಅನಂತರ ಮಹಾತ್ಮರಾದ ಮಾತಲಿ ನಾರದರಿಬ್ಬರೂ ಭೂಮಿಗಿಳಿದು ಲೋಕಪಾಲಕನಾದ ಜಲಾಧಿಪತಿಯಾದ ವರುಣನನ್ನು ನೋಡಿದರು.

ತತ್ರ ದೇವರ್ಷಿಸದೃಶೀಂ ಪೂಜಾಂ ಸ ಪ್ರಾಪ ನಾರದಃ ।
ಮಹೇಂದ್ರಸದೃಶೀಂ ಚೈವ ಮಾತಲಿಃ ಪ್ರತ್ಯಪದ್ಯತ ॥೮॥

ಅಲ್ಲಿ ನಾರದರು ದೇವರ್ಷಿಗಳಿಗೆ ಉಚಿತವಾದ ಪೂಜೆಯನ್ನೂ ಮಾತಲಿಯು ದೇವೇಂದ್ರನಿಗೆ ಇಷ್ಟವಾದ ಪೂಜೆಯನ್ನೂ ಹೊಂದಿದರು.

ತಾವುಭೌ ಪ್ರೀತಮನಸೌ ಕಾರ್ಯವಂತೌ ನಿವೇದ್ಯ ಹ ।
ವರುಣೇನಾಭ್ಯನುಜ್ಞಾತೌ ನಾಗಲೋಕಂ ವಿಚೇರತುಃ ॥೯॥

ಸಂತೋಷಗೊಂಡ ಅವರಿಬ್ಬರೂ ನಮಗೆ ಬೇರೆ ಕಾರ್ಯವಿದೆ ಎಂದು ಹೇಳಿ ವರುಣನ ಅಪ್ಪಣೆಯನ್ನು ಪಡೆದು ನಾಗಲೋಕದಲ್ಲಿ ಸಂಚರಿಸಿದರು.

ನಾರದಃ ಸರ್ವಭೂತಾನಾಮಂತರ್ಭೂಮಿನಿವಾಸಿನಾಮ್ ।
ಜಾನಂಶ್ಚಕಾರ ವ್ಯಾಖ್ಯಾನಂ ಯಂತುಃ ಸರ್ವಮಜಾನತಃ ॥೧೦॥

ಭೂಮಿಯ ಕೆಳಗೆ ವಾಸಿಸುವ ಎಲ್ಲಾ ಪ್ರಾಣಿಗಳನ್ನೂ ತಿಳಿದಿದ್ದ ನಾರದರು ಅವೆಲ್ಲವನ್ನೂ ತಿಳಿಯದ ಮಾತಲಿಗೆ ಪರಿಚಯ ಮಾಡಿಕೊಟ್ಟರು.

ನಾರದಃ

ದೃಷ್ಟಸ್ತೇ ವರುಣಃ ಸೂತ ಪುತ್ರಪೌತ್ರಸಮಾವೃತಃ ।
ಪಶ್ಯ ತೋಯನಿಧೇಃ ಸ್ಥಾನಂ ಸರ್ವತೋಭದ್ರಮೃದ್ಧಿಮತ್ ॥೧೧॥

ನಾರದ– ಎಲೈ ಸೂತನೇ, ಪುತ್ರಪೌತ್ರಸಮನ್ವಿತನಾದ ವರುಣನನ್ನು ನೀನು ನೋಡಿದೆ. ಎಲ್ಲ ಕಡೆಯಲ್ಲಿಯೂ ಸಮೃದ್ಧಿಯನ್ನು ಹೊಂದಿದ, ಮಂಗಳಕರವಾದ ಸಮುದ್ರದ ಸ್ಥಾನವನ್ನು ನೋಡು.

ಏಷ ಪುತ್ರೋ ಮಹಾಪ್ರಜ್ಞೋ ವರುಣಸ್ಯೇಹ ಗೋಪತೇಃ ।
ಏಷ ವೈ ಶೀಲವೃತ್ತೇನ ಶೌಚೇನ ಚ ವಿಶಿಷ್ಯತೇ ॥೧೨॥

ಇವನು ಜಲಾಧಿಪತಿಯಾದ ವರುಣನ ಜ್ಞಾನವುಳ್ಳ ಪುತ್ರ. ಇವನು ತನ್ನ ಶೌಚದಲ್ಲಿಯೂ ಶೀಲವೃತ್ತಿಗಳಲ್ಲಿಯೂ ಉಳಿದವರನ್ನು ಮೀರುತ್ತಾನೆ.

ಏಷೋಽಸ್ಯ ಪುತ್ರೋಽಭಿಮತಃ ಪುಷ್ಕರಃ ಪುಷ್ಕರೇಕ್ಷಣಃ ।
ರೂಪವಾನ್ ದರ್ಶನೀಯಶ್ಚ ಸೋಮಪುತ್ರ್ಯಾ ವೃತಃ ಪತಿಃ ॥೧೩॥

ಇವನು ಕಮಲನಯನನಾದ ಪುಷ್ಕರನೆಂಬ ಅವನ ಪುತ್ರ. ರೂಪವಂತನೂ ಸುಂದರನೂ ಆದ ಇವನು ಚಂದ್ರನ ಪುತ್ರಿಯಿಂದ ಪತಿಯಾಗಿ ವರಿಸಲ್ಪಟ್ಟಿದ್ದಾನೆ.

ಜ್ಯೋತ್ಸ್ನಾಕಾಲೀತಿ ಯಾಮಾಹುರ್ದ್ವಿತೀಯಾಂ ರೂಪತಃ ಶ್ರಿಯಮ್ ।
ಅದಿತ್ಯಾಶ್ಚೈವ ಗೋಪುತ್ರೋ ಜ್ಯೇಷ್ಠಃ ಪುತ್ರಕೃತೇ ಕೃತಃ ॥೧೪॥

ಚಂದ್ರನ ಪುತ್ರಿಯ ಹೆಸರು ಜ್ಯೋತ್ಸ್ನಾಕಾಲಿ ಎಂದು. ಅವಳು ರೂಪದಲ್ಲಿ ಎಳೆಯ ಲಕ್ಷ್ಮಿಯಂತೆ ಇದ್ದಾಳೆ. ಅದಿತಿಯ ಜ್ಯೇಷ್ಠನಾದ ಗೋಪುತ್ರನನ್ನು ಅವಳು ಪುತ್ರನನ್ನಾಗಿ ಸ್ವೀಕರಿಸಿದಳು.

ಭವನಂ ಪಶ್ಯ ವಾರುಣ್ಯಂ ಯದೇತತ್ ಸರ್ವಕಾಂಚನಮ್ ।
ಯಾಂ ಪ್ರಾಪ್ಯ ಸುರತಾಂ ಪ್ರಾಪ್ತಾಃ ಸುರಾಃ ಸುರಪತೇಃ ಸಖೇ ॥೧೫॥

ದೇವೇಂದ್ರನ ಸ್ನೇಹಿತನೇ, ವರುಣನ ಸರ್ವಸುವರ್ಣಮಯವಾದ ಈ ಭವನವನ್ನು ನೋಡು. ಇಲ್ಲಿ ದೊರೆಯುವ ವಾರುಣೀಮದ್ಯವನ್ನು ಪಡೆದು ದೇವತೆಗಳು ಬಹಳ ಸುಖವನ್ನು ಹೊಂದಿದರು.

ಏತಾನಿ ಹೃತರಾಜ್ಯಾನಾಂ ದೈತೇಯಾನಾಂ ಚ ಮಾತಲೇ ।
ದೀಪ್ಯಮಾನಾನಿ ದೃಶ್ಯಂತೇ ಸರ್ವಪ್ರಹರಣಾನ್ಯುತ ॥೧೬॥

ಎಲೈ ಮಾತಲಿಯೇ, ಇವು ರಾಜ್ಯವನ್ನು ಕಳೆದುಕೊಂಡ ದೈತ್ಯರ ಕಾಂತಿಯುಕ್ತವಾದ ಎಲ್ಲಾ ಆಯುಧಗಳು. ಇವು ಇಲ್ಲಿ ಕಂಡುಬರುತ್ತಿವೆ.

ಅಕ್ಷಯಾಣಿ ಕಿಲೈತಾನಿ ಪ್ರವರ್ತಂತೇ ಸ್ಮ ಮಾತಲೇ ।
ಅನುಭಾವಪ್ರಯುಕ್ತಾನಿ ಸುರೈರವಜಿತಾನಿ ಹ ॥೧೭॥

ಎಲೈ ಮಾತಲಿಯೇ, ಇವು ನಾಶವನ್ನು ಹೊಂದದವುಗಳು. ಸಾಮರ್ಥ್ಯದಿಂದ ಪ್ರಯೋಗಿಸಲ್ಪಡಬೇಕಾದ ಇವುಗಳನ್ನು ದೇವತೆಗಳು ವಶಪಡಿಸಿಕೊಂಡರು.

ಅತ್ರ ರಾಕ್ಷಸಜಾತ್ಯಶ್ಚ ಭೂತಯೋನ್ಯಶ್ಚ ಮಾತಲೇ ।
ದಿವ್ಯಪ್ರಹರಣಾಶ್ಚಾಸನ್ ಪೂರ್ವದೈವತನಿರ್ಮಿತಾಃ ॥೧೮॥

ಎಲೈ ಮಾತಲಿಯೇ, ಇಲ್ಲಿ ರಥಗಳಿಂದ ನಿರ್ಮಿತವಾದ ರಾಕ್ಷಸಜಾತಿಗಳಿಗೆ ಸೇರಿದವೂ ಮತ್ತು ಭೂತಾದಿಗಳ ಜಾತಿಗೆ ಸೇರಿದವೂ ಆದ ದಿವ್ಯವಾದ ಆಯುಧಗಳೂ ಇದ್ದವು.

ಅಗ್ನಿರೇಷ ಮಹಾರ್ಚಿಷ್ಮಾನ್ ಜಾಗರ್ತಿ ವರುಣಹ್ರದೇ ।
ವೈಷ್ಣವಂ ಚಕ್ರಮಾವಿದ್ಧಂ ವಿಧೂಮೇನ ಹವಿಷ್ಮತಾ ॥೧೯॥

ವರುಣಹ್ರದದಲ್ಲಿ ಮಹಾಜ್ವಾಲೆಗಳಿಂದ ಕೂಡಿದ ಈ ಅಗ್ನಿಯು ಯಾವಾಗಲೂ ಉರಿಯುತ್ತಾನೆ. ಧೂಮರಹಿತನಾದ ಈ ಅಗ್ನಿಯಿಂದ ವಿಷ್ಣುವಿನ ಸುದರ್ಶನ ಚಕ್ರವು ಯಾವಾಗಲೂ ಧರಿಸಲ್ಪಟ್ಟಿದೆ.

ಏಷ ಗಾಂಡೀವಕಶ್ಚಾಪೋ ಲೋಕಸಂಹಾರಸಂಭವಃ ।
ರಕ್ಷ್ಯತೇ ದೈವತೈರ್ನಿತ್ಯಂ ಯತಸ್ತದ್ ಗಾಂಡಿವಂ ಧನುಃ ॥೨೦॥

ಇದು ಲೋಕಸಂಹಾರಕ್ಕಾಗಿ ಜನಿಸಿದ ಗಾಂಡೀವ ಧನುಸ್ಸು. ಇದನ್ನು ದೇವತೆಗಳು ಯಾವಾಗಲೂ ರಕ್ಷಿಸುತ್ತಾರೆ. ಅರ್ಜುನನ ಗಾಂಡೀವ ಧನುಸ್ಸೂ ಸಹ ಇದರಿಂದಲೇ ಉಂಟಾಯಿತು.

ಏಷ ಕೃತ್ಯೇ ಸಮುತ್ಪನ್ನೇ ತತ್ತದ್ ಧಾರಯತೇ ಬಲಮ್ ।
ಸಹಸ್ರಶತಸಂಖ್ಯೇನ ಪ್ರಾಣೇನ ಸತತಂ ಧ್ರುವಃ ॥೨೧॥

ಇದು ಅವಶ್ಯಕತೆ ಒದಗಿದಾಗ ನೂರಾರು, ಸಾವಿರಾರು ಧನುಸ್ಸುಗಳ ಬಲವನ್ನು ಹೊಂದುತ್ತದೆ. ಇದರಲ್ಲಿ ಸತತವಾಗಿ ಬಹಳ ಶಕ್ತಿ ಇರುತ್ತದೆ.

ಅಶಿಷ್ಟಾನಪಿ ಶಾಸ್ತ್ಯೇಷ ರಕ್ಷೋಬಂಧುಷು ರಾಜಸು ।
ಸೃಷ್ಟಃ ಪ್ರಥಮಜೋ ದಂಡೋ ಬ್ರಹ್ಮಣಾ ಬ್ರಹ್ಮವಾದಿನಾ ॥೨೨॥

ಇದು ಅಶಿಷ್ಟರನ್ನೂ ಶಾಸನ ಮಾಡುತ್ತದೆ. ಇದನ್ನು ವೇದಗರ್ಭರಾದ ಬ್ರಹ್ಮದೇವರು ರಾಕ್ಷಸಬಂಧುಗಳಾದ ರಾಜರನ್ನು ದಮನ ಮಾಡಲು ಮೊದಲನೆಯ ದಂಡವಾಗಿ ಸೃಷ್ಟಿಸಿದರು.

ಏತಚ್ಚಸ್ತ್ರಂ ನರೇಂದ್ರಾಣಾಂ ಮಹಚ್ಚಕ್ರೇಣ ಭೂಷಿತಮ್ ।
ಪುತ್ರಾಃ ಸಲಿಲರಾಜಸ್ಯ ಧಾರಯಂತಿ ಮಹೋದಯಮ್ ॥೨೩॥

ಇದು ನರೇಂದ್ರರ ಶಸ್ತ್ರ. ದೊಡ್ಡ ಚಕ್ರದಿಂದ ಭೂಷಿತವಾಗಿದೆ. ಮಹಾಸಂಪತ್ತನ್ನು ಕೊಡುವ ಈ ಶಸ್ತ್ರವನ್ನು ಸಲಿಲರಾಜನ ಮಕ್ಕಳು ಧರಿಸುತ್ತಾರೆ.

ಏತತ್ ಸಲಿಲರಾಜಸ್ಯ ಛತ್ರಂ ಛತ್ರಗೃಹೇ ಸ್ಥಿತಮ್ ।
ಸರ್ವತಃ ಸಲಿಲಂ ಶೀತಂ ಜೀಮೂತ ಇವ ವರ್ಷತಿ ॥೨೪॥

ಛತ್ರಗೃಹದಲ್ಲಿರುವ ಇದು ವರುಣನ ಛತ್ರ. ಮೋಡದಂತೆ ಇದು ಎಲ್ಲ ಕಡೆಗಳಿಂದಲೂ ಶೀತವಾದ ಜಲವನ್ನು ಸ್ರವಿಸುತ್ತದೆ.

ಏತಚ್ಛತ್ರಾತ್ ಪರಿಭ್ರಷ್ಟಂ ಸಲಿಲಂ ಸೋಮನಿರ್ಮಲಮ್ ।
ತಮಸಾ ಮಿಶ್ರಿತಂ ಭಾತಿ ಯೇನ ನಾರ್ಛತಿ ದರ್ಶನಮ್ ॥೨೫॥

ಈ ಛತ್ರದಿಂದ ಕೆಳಗೆ ಬೀಳುವ ಜಲವು ಸೋಮರಸದಂತೆ ನಿರ್ಮಲವಾಗಿದ್ದು, ತಮಸ್ಸಿನಿಂದ ಮಿಶ್ರಿತವಾದ ಕಾರಣ ಯಾರ ಕಣ್ಣಿಗೂ ಕಾಣುವುದಿಲ್ಲ.

ಬಹೂನ್ಯದ್ಭುತರೂಪಾಣಿ ದ್ರಷ್ಟವ್ಯಾನೀಹ ಭೂತಳೇ ।
ತವ ಕಾರ್ಯೋಪರೋಧಃ ಸ್ಯಾತ್ ತಸ್ಮಾದ್ ಗಚ್ಛಾವ ಮಾಚಿರಮ್ ॥

ಎಲೈ ಮಾತಲಿಯೇ, ಭೂತಳದಲ್ಲಿ ನೋಡಬೇಕಾದ ಅದ್ಭುತವಾದ ವಸ್ತುಗಳು ಅನೇಕವಿವೆ. ಆದರೆ ನಿನ್ನ ಕಾರ್ಯಕ್ಕೆ ತೊಂದರೆಯಾದೀತು. ಆದ್ದರಿಂದ ಶೀಘ್ರವಾಗಿ ಹೊರಡೋಣ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಸಪ್ತನವತಿತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಅಷ್ಟಾವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ತೊಂಬತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೆಂಟನೆಯ ಅಧ್ಯಾಯ

ಮಾತಲಿಯನ್ನು ಪಾತಾಳಕ್ಕೆ ಕರೆದುಕೊಂಡು ಹೋಗಿ, ಅಲ್ಲಿದ್ದ ವಸ್ತುಗಳನ್ನು ತೋರಿಸಿ, ನಾರದರಿಂದ ಅವುಗಳ ಗುಣನಿರೂಪಣೆ

ನಾರದಃ

ಏತತ್ತು ನಾಗಲೋಕಸ್ಯ ನಾಭಿಸ್ಥಾನೇ ಸ್ಥಿತಂ ಪುರಮ್ ।
ಪಾತಾಳಮಿತಿ ವಿಖ್ಯಾತಂ ದೈತ್ಯದಾನವಸೇವಿತಮ್ ॥೧॥

ಇದು ನಾಗಲೋಕದ ನಾಭಿಸ್ಥಾನದಲ್ಲಿ ಇರುವ ಪಟ್ಟಣ. ದೈತ್ಯ-ದಾನವರಿಂದ ಸೇವಿತವಾದ ಈ ಪಟ್ಟಣವು ಪಾತಾಳವೆಂದು ಪ್ರಸಿದ್ಧವಾಗಿದೆ.

ಇದಮದ್ಭಿಃ ಸಮಂ ಪ್ರಾಪ್ತಾ ಯೇ ಕೇಚಿದ್ ಧ್ರುವಜಂಗಮಾಃ ।
ಪ್ರವಿಶಂತೋ ಮಹಾನಾದಂ ನದಂತಿ ಭಯಪೀಡಿತಾಃ ॥೨॥

ಶುದ್ಧೋದ ಸಮುದ್ರದಿಂದಲೂ, ಕ್ಷೀರಸಮುದ್ರದಿಂದಲೂ ಸೋರುವ ನೀರಿನ ಜೊತೆಯಲ್ಲಿ ಸ್ಥೂಲಶರೀರವುಳ್ಳ ಸ್ಥಿರವಾದ ಪೃಷ್ಠವುಳ್ಳ ಆಮೆ, ಚೇಳು, ಮೊಸಳೆ ಮೊದಲಾದ ಪ್ರಾಣಿಗಳು ಸೋರುವ ಜಲದ ಸಮೀಪದಲ್ಲಿ ಇರುವ ಅಗ್ನಿಜ್ವಾಲೆಗಳನ್ನು ನೋಡಿ ಭಯದಿಂದ ಪೀಡಿತರಾಗಿ ಮಹಾನಾದಗಳನ್ನು ಮಾಡುತ್ತವೆ – **ವಾದಿರಾಜರು.**

ಅತ್ರಾಸುರೋಽಗ್ನಿಃ ಸತತಂ ದೀಪ್ಯತೇ ವಾರಿಭೋಜನಃ ।
ವ್ಯಾಪಾರೇಣ ಮಹಾತ್ಮಾನಂ ನಿಬಧ್ಯ ಸಮಬಧ್ಯತ ॥೩॥

ಇಲ್ಲಿ ಅಸುರಸಂಹಾರಕ್ಕಾಗಿ ನಿರ್ಮಿಸಲ್ಪಟ್ಟ ದಕ್ಷಿಣಾಗ್ನಿಯು ನೀರನ್ನು ಪಾನಮಾಡುತ್ತಾ ಜ್ವಲಿಸುತ್ತಾನೆ. ಅಗ್ನಿಯು ಕಾಡಿನ ಮಧ್ಯದಲ್ಲಿದ್ದ ಒಬ್ಬ ಋಷಿಯ ಸುತ್ತಲೂ ಇದ್ದು ಅವನನ್ನು ಬಂಧಿಸಿ ಕೋಪಗೊಂಡ ಅವನು ಪಾತಾಳಕ್ಕೆ ಬೀಳು ಎಂದು ಶಾಪವನ್ನು ಕೊಟ್ಟಾಗ ಸುತ್ತಲೂ ಬಹುಯೋಜನ ವಿಸ್ತಾರವಾದ ಸಮುದ್ರದ ಅಂಚಿನ ನೀರಿನಲ್ಲಿ ಯಾವಾಗಲೂ ಕಟ್ಟಿಹಾಕಲ್ಪಟ್ಟಿದ್ದಾನೆ – **ವಾದಿರಾಜರು.**

ಅತ್ರಾಮೃತಂ ಸುರೈಃ ಪೀತ್ವಾ ನಿಹಿತಂ ನಿಹತಾರಿಭಿಃ ।
ತತಃ ಸೋಮಸ್ಯ ಹಾನಿಶ್ಚ ವೃದ್ಧಿಶ್ಚೈವ ಪ್ರದೃಶ್ಯತೇ ॥೪॥

ಇಲ್ಲಿ ಪಾತಾಳಮಧ್ಯಪ್ರದೇಶದಲ್ಲಿ ಭಗವದಾಜ್ಞೆಯಿಂದ ಪಾತಾಳದ ಮೇಲೆ ಸಂಚರಿಸುವ ಚಂದ್ರನು ಅಮಾವಾಸ್ಯೆಯವರೆಗೆ ಹೆಚ್ಚಾಗಿ ಹಗಲಿನಲ್ಲಿ ಸಂಚರಿಸುವುದರಿಂದ ಸೂರ್ಯಕಿರಣಗಳಿಂದ ಅವನ ಕಿರಣಗಳು ಮುಚ್ಚಲ್ಪಡುತ್ತಿರಲು ಅಮೃತಸ್ಪರ್ಶವಿಲ್ಲದಿರುವುದರಿಂದ ಕ್ರಮವಾಗಿ ಕಲೆಗಳ ಹಾನಿಯನ್ನು ಹೊಂದುತ್ತಾನೆ. ಪುನಃ ಪೂರ್ಣಿಮಾ ಪರ್ಯಂತವಾಗಿ ರಾತ್ರಿಯಲ್ಲಿಯೇ ಹೆಚ್ಚಾಗಿ ಸಂಚಾರ ಮಾಡುವುದರಿಂದ ಅಮೃತಸ್ಪರ್ಶವು ಕ್ರಮವಾಗಿ ಅಭಿವೃದ್ಧಿಯಾಗುವುದರಿಂದ ಕಲಾಭಿವೃದ್ಧಿಯು ಕಂಡುಬರುತ್ತದೆ – **ವಾದಿರಾಜರು.**

ಅತ್ರ ದಿವ್ಯೋ ಹಯಶಿರಾಃ ಕಾಲೇ ಪರ್ವಣಿ ಪರ್ವಣಿ ।
ಉತ್ತಿಷ್ಠತಿ ಸುವರ್ಣಾಭಃ ಅದ್ಭಿರಾಪೂರಯಜ್ಜಗತ್ ॥೫॥

ಈ ಪಾತಾಳದಲ್ಲಿ ಕುದುರೆಯ ಮುಖವುಳ್ಳ ದಿವ್ಯನಾದ ಸುವರ್ಣೋಪೇತನಾದ ವಡವಾಗ್ನಿಯು ಪೌರ್ಣಮಾಸಿ ಮತ್ತು ಅಮಾವಾಸ್ಯೆಗಳಲ್ಲಿ ಅಭಿವೃದ್ಧಿಯನ್ನು ಹೊಂದುವ ಜಲದ ಪಾನಕ್ಕೋಸ್ಕರವಾಗಿ ಮೊದಲೇ ಇದ್ದ ಅಗ್ನಿಗೆ ಉತ್ತೇಜಕನಾಗಿ ಮೇಲೇಳುತ್ತಾನೆ. ಅನಂತರ ಜಗತ್ತಿನಲ್ಲಿ ಆ ಜಲವನ್ನು ತುಂಬುತ್ತಾನೆ – ವಾದಿರಾಜರು.

ಯಸ್ಮಾದತ್ರ ಸಮಗ್ರಸ್ತಾಃ ಪತಂತಿ ಜಲಮೂರ್ತಯಃ ।
ತಸ್ಮಾತ್ ಪಾತಾಲಮಿತ್ಯೇವ ಖ್ಯಾಯತೇ ಪುರಮುತ್ತಮಮ್ ॥೬॥

ಯಾವ ಕಾರಣದಿಂದ ಇಲ್ಲಿ ಜಲಚರಗಳಿಂದ ಮಿಶ್ರಿತವಾದ ಜಲರಾಶಿಗಳು ಬೀಳುತ್ತವೆಯೋ ಆ ಕಾರಣದಿಂದ ಈ ಪಟ್ಟಣವನ್ನು ಪಾತಾಳ ಎಂದು ಕರೆಯುತ್ತಾರೆ. ಪಾತ= ಜಲಪಾತನಿಮಿತ್ತದಿಂದ, ಅ= ಅಕಾರವಾಚ್ಯನಾದ ನಾರಾಯಣನನ್ನು, ಲ= ತಮ್ಮೊಳಗೆ ಧರಿಸಿಕೊಂಡಿರುವುದರಿಂದ, ಪಾತ+ಅ+ಳ= ಪಾತಾಳ.

ಐರಾವತೋಽಸ್ಮಾತ್ ಸಲಿಲಂ ಪ್ರಗೃಹ್ಯ ಜಗತೋ ಹಿತಮ್ ।
ಮೇಘೇಷ್ವಾಮುಂಚತೇ ಶೀತಂ ಯನ್ಮಹೇಂದ್ರಃ ಪ್ರವರ್ಷತಿ ॥೭॥

ಐರಾವತ ಎಂಬ ಗಜವು ಪಾತಾಳದಲ್ಲಿರುವ ಜಲಾಶಯದಿಂದ ತನ್ನ ಸೊಂಡಿಲಿನ ಮುಖಾಂತರ ನೀರನ್ನು ತೆಗೆದುಕೊಂಡು ಅದನ್ನು ಕೆಲವು ಕಡೆಗಳಲ್ಲಿ ಪಾತಾಳ ಪರ್ಯಂತರವಾಗಿಯೂ ಆಳವಾಗಿರುವ ಲವಣಸಮುದ್ರದ ಜಲದಲ್ಲಿ ಸೇರಿಸಿ ತನ್ಮೂಲಕವಾಗಿ ಮೇಘಗಳಲ್ಲಿ ಸೇರಿಸುತ್ತದೆ. ಮಹೇಂದ್ರನು ಶೀತವಾದ ಆ ಉದಕವನ್ನು ಮಳೆಯ ರೂಪದಲ್ಲಿ ಸುರಿಸುತ್ತಾನೆ – ವಾದಿರಾಜರು.

ಐರಾವತೋ ನಾಗರಾಜೋ ವಾಮನಃ ಕುಮುದೋಽಂಜನಃ ।
ಪ್ರಸೂತಾಃ ಸುಪ್ರತೀಕಸ್ಯ ವಂಶೇ ವಾರಣಸತ್ತಮಾಃ ॥೮॥

ಐರಾವತ, ವಾಮನ, ಕುಮುದ, ಅಂಜನ ಎಂಬ ಶ್ರೇಷ್ಠವಾದ ದಿಗ್ಗಜಗಳು ಸುಪ್ರತೀಕ ಗಜದ ವಂಶದಲ್ಲಿ ಜನಿಸಿವೆ. ಅಲ್ಲಿ ಬೇರೆ ಶ್ರೇಷ್ಠವಾದ ಗಜಗಳೂ ಇವೆ.

ಅತ್ರ ನಾನಾವಿಧಾಕಾರಾಃ ತಿಮಯೋ ನೈಕರೂಪಿಣಃ ।
ಅಪ್ಸು ಸೋಮಪ್ರಭಾಂ ಪೀತ್ವಾ ವಸಂತಿ ಜಲಚಾರಿಣಃ ॥೯॥

ಇಲ್ಲಿ ನಾನಾವಿಧವಾದ ಆಕಾರವನ್ನು ಹೊಂದಿದ, ನಾನಾ ಬಣ್ಣಗಳಿಂದ ಕೂಡಿದ ತಿಮಿಂಗಿಲ ಮೊದಲಾದವುಗಳು ನೀರಿನಲ್ಲಿ ಚಂದ್ರಪ್ರಭೆಯು ಬಿದ್ದುದರಿಂದ ಅಮೃತದಂತಾದ ಜಲಗಳನ್ನು ಕುಡಿದು ವಾಸಮಾಡುತ್ತವೆ.

ಅತ್ರ ಸೂರ್ಯಾಂಶುಭಿರ್ಭಿನ್ನಾಃ ಪಾತಾಳತಳಮಾಶ್ರಿತಾಃ ।
ಮೃತಾ ಹಿ ದಿವಸೇ ಸೂತ ಪುನರ್ಜೀವಂತಿ ವೈ ನಿಶಿ ॥೧೦॥

ಪಾತಾಳದಲ್ಲಿ ದೇವರ ಆಜ್ಞೆಗೆ ಅನುಗುಣವಾಗಿ ಸೂರ್ಯ-ಚಂದ್ರರಂತೆ, ಹತ್ತು ಯೋಜನದ ದೂರದಲ್ಲಿಯೇ ಸಂಚಾರ ಮಾಡುವ ಆ ಸೂರ್ಯನು ಅತಿ ಸಮೀಪದಲ್ಲಿರುವುದರಿಂದ ಅವನ ಅತ್ಯಂತ ಉಷ್ಣವಾದ ಕಿರಣಗಳಿಂದ ತಪ್ತರಾದಂತಹ ಜೀವರು ಮಧ್ಯಾಹ್ನದಲ್ಲಿ ಮೃತರಾಗುತ್ತಾರೆ. ರಾತ್ರಿಯ ವೇಳೆಯಲ್ಲಿ ಚಂದ್ರನೂ ಅತಿಸಮೀಪದಲ್ಲಿ ಸಂಚಾರ ಮಾಡುವುದರಿಂದ ಅವನ ಅಮೃತಕಿರಣಗಳ ಸ್ಪರ್ಶದಿಂದ ಶುಕ್ಲಪಕ್ಷದಲ್ಲಿಯೂ, ಕೃಷ್ಣಪಕ್ಷದಲ್ಲಿ ಶೀತಲವಾಯುವು ತಂದ ಅಮೃತಕಣಗಳಿಂದಲೂ ಬದುಕುತ್ತಾರೆ. ಭೂಮಿಯ ಮೇಲೆ ಜ್ಯೋತಿಶ್ಚಕ್ರದಲ್ಲಿ ಇರುವ ಸೂರ್ಯ-ಚಂದ್ರರು ಆರಹಂ.... ಎಂಬ ಶ್ರುತಿಯಂತೆ ಉತ್ತರದಿಕ್ಕಿಗೆ ಹೋಗಿ ಮೇರುವನ್ನು ಪ್ರದಕ್ಷಿಣೆ ಮಾಡುತ್ತಾರೆ. ಬೇರೆ ರೂಪವನ್ನು ತೆಗೆದುಕೊಂಡು ದೇವರ ಆಜ್ಞೆಯಂತೆ ಪಾತಾಳದಲ್ಲಿ ಸಂಚರಿಸುತ್ತಾರೆ ಎಂದು ತಿಳಿಯಬೇಕು – **ಲಕ್ಷಾಲಂಕಾರ.**

ಉದಯನ್ ನಿತ್ಯಶಶ್ಚಾತ್ರ ಚಂದ್ರಮಾ ರಶ್ಮಿಬಾಹುಭಿಃ ।
ಅಮೃತಂ ಸಂಸ್ಪೃಶನ್ ಸ್ಪರ್ಶಾನ್ ಸಂಜೀವಯತಿ ದೇಹಿನಃ ॥೧೧॥

ಇಲ್ಲಿ ನಿತ್ಯವೂ ಚಂದ್ರನು ಉದಯಿಸುತ್ತಾ ತನ್ನ ರಶ್ಮಿರೂಪವಾದ ಬಾಹುಗಳಿಂದ ಅಮೃತದ ಸ್ಪರ್ಶವನ್ನು ಉಂಟುಮಾಡುತ್ತಾ ಮಧ್ಯಾಹ್ನದಲ್ಲಿ ಮೃತರಾದ ಜೀವರನ್ನು ತನ್ನ ಸ್ಪರ್ಶದಿಂದ ಬದುಕಿಸುತ್ತಾನೆ.

ಅತ್ರ ತೇಽಧರ್ಮನಿರತಾ ಬದ್ಧಾಃ ಕಾಲೇನ ಪೀಡಿತಾಃ ।
ದೈತೇಯಾ ನಿವಸಂತಿ ಸ್ಮ ವಾಸವೇನ ಹೃತಶ್ರಿಯಃ ॥೧೨॥

ಅತ್ರ ಭೂತಪತಿರ್ನಾಮ ಸರ್ವಭೂತಮಹೇಶ್ವರಃ ।
ಭೂತಯೇ ಸರ್ವಭೂತಾನಾಮಚರತ್ ತಪ ಉತ್ತಮಮ್ ॥೧೩॥

ಇಲ್ಲಿ ಅಧರ್ಮನಿರತರಾಗಿ ಇಂದ್ರನಿಗೆ ಸೋತು ತಮ್ಮ ಸಂಪತ್ತನ್ನು ಕಳೆದುಕೊಂಡ ದೈತ್ಯರು ಪಾತಾಳ ಜಲಸಮುದ್ರದಲ್ಲಿ ಮೃತ್ಯುಪಾಶದಿಂದಲೂ ಮತ್ತು ವರುಣಪಾಶದಿಂದಲೂ ಬದ್ಧರಾಗಿ ವಾಸಿಸುತ್ತಾರೆ. ಇಲ್ಲಿ ತನ್ನ ಭೃತ್ಯರ ಜೊತೆಯಲ್ಲಿ ಅಮೃತವನ್ನು ರಕ್ಷಣೆ ಮಾಡುವ ಭೂತಪತಿಯಾದ ಮಹಾದೇವನು ಸರ್ವಜೀವರ ಸಂಪತ್ತಿಗಾಗಿ ಶ್ರೇಷ್ಠವಾದ ತಪಸ್ಸನ್ನು ಆಚರಿಸಿದನು.

ಅತ್ರ ಗೋಪ್ರತಿಮಾ ವಿಪ್ರಾಃ ಸ್ವಾಧ್ಯಾಯಾಮ್ನಾಯಕರ್ಶಿತಾಃ ।
ತ್ಯಕ್ತಪ್ರಾಣಾ ಜಿತಸ್ವರ್ಗಾ ನಿವಸಂತಿ ಮಹರ್ಷಯಃ ॥೧೪॥

ಇಲ್ಲಿ ಗೋವಿನಂತೆ ಪರಮಶಾಂತರಾದ ಸ್ವಾಧ್ಯಾಯ ಮತ್ತು ಶಾಸ್ತ್ರಗಳ ಅಧ್ಯಯನದಿಂದ ಕರ್ಶಿತರಾದ ಮಹರ್ಷಿಗಳಾದ ಬ್ರಾಹ್ಮಣರು ಉಳಿದ ಎಲ್ಲಾ ವ್ಯಾಪಾರವನ್ನೂ ತ್ಯಜಿಸಿ ಸ್ವರ್ಗವನ್ನು ಸಂಪಾದಿಸಿ ವಾಸಮಾಡುತ್ತಾರೆ.

ಯತ್ರತತ್ರಶಯೋ ನಿತ್ಯಂ ಯೇನಕೇನಚಿದಾಶಿತಃ ।
ಯೇನಕೇನಚಿದಾಚ್ಛನ್ನಃ ಸ ಗೋವ್ರತ ಇಹೋಚ್ಯತೇ ॥೧೫॥

ನಿತ್ಯವೂ ಎಲ್ಲಾದರೂ ಮಲಗಿ, ಯಾವುದಾದರೂ ಆಹಾರವನ್ನು ಸೇವಿಸಿ, ಯಾವುದಾದರೂ ವಸ್ತ್ರವನ್ನೋ ನಾರುಮಡಿಯನ್ನೋ ಧರಿಸುವ ವಿರಕ್ತರೂ ಅಸದೃಶರೂ ಆದ ಬ್ರಾಹ್ಮಣರು ಗೋವ್ರತವನ್ನು ಧರಿಸಿದವರು ಎನಿಸುತ್ತಾರೆ.

ಪಶ್ಯ ಯದ್ಯತ್ರ ತೇ ಕಶ್ಚಿದ್ ರೋಚತೇ ಗುಣತೋ ವರಃ ।
ವರಯಿಷ್ಯಾಮಿ ತಂ ಗತ್ವಾ ಯತ್ನಮಾಸ್ಥಾಯ ಮಾತಲೇ ॥೧೬॥

ಎಲೈ ಮಾತಲಿಯೇ, ಇಲ್ಲಿ ಯಾವನಾದರೂ ವರನು ತನ್ನ ಗುಣದಿಂದ ನಿನಗೆ ಇಷ್ಟವಾಗುತ್ತಾನೆಯೇ ಎಂದು ನೋಡು. ನಾನು ಹೋಗಿ ಪ್ರಯತ್ನಪೂರ್ವಕವಾಗಿ ಅವನನ್ನು ಒಲಿಸುವೆನು.

ನಾಸ್ಯ ಜಾತಿಂ ನಿಸರ್ಗಂ ವಾ ಕಥ್ಯಮಾನಂ ಶೃಣೋಮಿ ವೈ ।
ಪಿತರಂ ಮಾತರಂ ಚಾಪಿ ನಾಸ್ಯ ಜಾನಾತಿ ಕಶ್ಚನ ॥೧೭॥

ಇಲ್ಲಿ ವಾಸಮಾಡುವವರ ಜಾತಿಯನ್ನಾಗಲೀ, ಅವರ ಹುಟ್ಟಿದ ರೀತಿಯನ್ನಾಗಲೀ ಯಾರಾದರೂ ಹೇಳುವುದನ್ನು ನಾನು ಕೇಳಿಲ್ಲ. ಪಾತಾಳನಿವಾಸಿಗಳಾದ ಜನರಿಗೆ ತಂದೆ ಯಾರು, ತಾಯಿ ಯಾರು ಎಂದು ಯಾರೂ ತಿಳಿದಿಲ್ಲ.

ಅತಃ ಕಿಲ ಮಹಾನಗ್ನಿರಂತಕಾಲೇ ಸಮುತ್ಥಿತಃ ।
ಧಕ್ಷ್ಯತೇ ಮಾತಲೇ ಸರ್ವಂ ತ್ರೈಲೋಕ್ಯಂ ಸಚರಾಚರಮ್ ॥೧೮॥

ಅಂಶಮೇತಜ್ಜಲೇ ನ್ಯಸ್ತಂ ದೀಪ್ಯಮಾನಮಿವ ಶ್ರಿಯಾ ।
ಅಪ್ರಜಾನಾನ್ನಿಸರ್ಗಾದ್ವೈ ನೋದ್ಬಿದ್ಯತಿ ನ ಸರ್ಪತಿ ॥೧೯॥

ಎಲೈ ಮಾತಲಿಯೇ, ಪ್ರಳಯಕಾಲದಲ್ಲಿ ಈ ಪಾತಾಳ ಲೋಕದಿಂದ ಹುಟ್ಟಿದ ಅಗ್ನಿಯು ಚರಾಚರ ಜೀವಸಹಿತವಾದ ಮೂರುಲೋಕಗಳನ್ನೂ ದಹಿಸುವನು. ಹಿಂದೆ ಹೇಳಿದಂತೆ ಜಲದಲ್ಲಿ ಒಂದು ಅಂಶದಿಂದ ಇಡಲ್ಪಟ್ಟ ಅಗ್ನಿಯು ಇಲ್ಲಿ ಇಂದನವು ಇಲ್ಲದಿರುವುದರಿಂದ ಹೆಚ್ಚು ಪ್ರಕಾಶವನ್ನು ಹೊಂದದೇ ಸ್ವಾಭಾವಿಕವಾಗಿಯೇ ಊರ್ಧ್ವಮುಖವಾಗಿ ಜ್ವಲಿಸುವುದಿಲ್ಲ ಮತ್ತು ಒಂದು ಕಡೆಯಿಂದ ಇನ್ನೊಂದು ಕಡೆಗೂ ಹೋಗುವುದಿಲ್ಲ (ಹಬ್ಬುವುದಿಲ್ಲ).

ಕಣ್ವಃ

ಮಾತಲಿಸ್ತ್ವಬ್ರವೀತ್ ಶ್ರುತ್ವಾ ನಾರದಸ್ಯಾಥ ಭಾಷಿತಮ್ ।
ನ ಮೇऽತ್ರ ರೋಚತೇ ಕಶ್ಚಿದ್ ಅನ್ಯತೋ ವ್ರಜ ಮಾ ಚಿರಮ್ ॥೨೦॥

ಕಣ್ವ– ಅನಂತರ ಮಾತಲಿಯು ನಾರದರ ಮಾತುಗಳನ್ನು ಕೇಳಿ ನನಗೆ ಇಲ್ಲಿ ಯಾರೂ ಇಷ್ಟವಾಗುವುದಿಲ್ಲ. ಬೇಗ ಇನ್ನೊಂದು ಕಡೆಗೆ ಹೋಗು ಎಂದು ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಅಷ್ಟನವತಿತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಏಕೋನತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ತೊಂಬತ್ತೆಂಟನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ತೊಂಬತ್ತೊಂಬತ್ತನೆಯ ಅಧ್ಯಾಯ

ನಾರದರಿಂದ ಮಾತಲಿಗೆ ಹಿರಣ್ಯಪುರ ದರ್ಶನ. ಮಾತಲಿಯಿಂದ ಅಲ್ಲಿ ವರಾನ್ವೇಷಣದ ನಿರಾಕರಣೆ.

ನಾರದಃ

ಹಿರಣ್ಯಪುರಮಿತ್ಯೇತತ್ ಖ್ಯಾತಂ ಪುರವರಂ ಮಹತ್ ।
ದೈತ್ಯಾನಾಂ ದಾನವಾನಾಂ ಚ ಮಾಯಾಶತವಿಹಾರಿಣಮ್ ॥೧॥

ನಾರದ– ಇದು ಹಿರಣ್ಯಪುರವೆಂದು ಪ್ರಖ್ಯಾತವಾದ ದೊಡ್ಡ ಮತ್ತು ಶ್ರೇಷ್ಠವಾದ ಪಟ್ಟಣ. ಇದು ನೂರು ಮಾಯೆಗಳಿಂದ ವಿಹರಿಸುವ ದೈತ್ಯರ ಮತ್ತು ದಾನವರ ಸ್ಥಳವಾಗಿದೆ.

ಅನಲ್ಪೇನ ಪ್ರಯತ್ನೇನ ನಿರ್ಮಿತಂ ವಿಶ್ವಕರ್ಮಣಾ ।
ಮಯೇನ ಮನಸಾ ಸೃಷ್ಟಂ ಪಾತಾಳತಲಮಾಶ್ರಿತಮ್ ॥೨॥

ಬಡಗಿಯಾದ ಮಯನು ಮಹಾಪ್ರಯತ್ನವನ್ನು ಮಾಡಿ, ತನ್ನ ಮನಸ್ಸಿನಿಂದ ಬಹಳ ಯೋಚನೆಯನ್ನು ಮಾಡಿ ಪಾತಾಳತಳದಲ್ಲಿರುವ ಈ ಪಟ್ಟಣವನ್ನು ನಿರ್ಮಿಸಿದನು.

ಅತ್ರ ಮಾಯಾಸಹಸ್ರಾಣಿ ವಿಕುರ್ವಾಣಾ ಮಹೌಜಸಃ ।
ದಾನವಾ ನಿವಸಂತಿ ಸ್ಮ ಶೂರಾ ದತ್ತವರಾಃ ಪುರಾ ॥೩॥

ಇಲ್ಲಿ ಹಿಂದೆ ವರಗಳನ್ನು ಪಡೆದ ಶೂರರೂ, ಮಹಾಸಾಮರ್ಥ್ಯವುಳ್ಳವರೂ ಆದ ದಾನವರು ಒಂದು ಸಹಸ್ರ ಮಾಯೆಗಳನ್ನು ಪ್ರಯೋಗ ಮಾಡುತ್ತಾ ವಾಸಮಾಡುತ್ತಾರೆ.

ನೈತೇ ಶಕ್ರೇಣ ನಾನ್ಯೇನ ಯಮೇನ ವರುಣೇನ ವಾ ।
ಶಕ್ಯಂತೇ ವಶಮಾನೇತುಂ ತಥೈವ ಧನದೇನ ಚ ॥೪॥

ಇಂದ್ರನಾಗಲೀ ಅಥವಾ ಯಮನಾಗಲೀ, ವರುಣನಾಗಲೀ ಅಥವಾ ಕುಬೇರನಾಗಲೀ ಇವರನ್ನು ವಶಪಡಿಸಿಕೊಳ್ಳಲು ಸಾಧ್ಯವಿಲ್ಲ.

ಪೌಲೋಮಾಃ ಕಾಲಕೇಯಾಶ್ಚ ಕಶ್ಯಪಸ್ಯ ಕುಲೋದ್ಭವಾಃ ।
ನೈರ್ಋತಾ ಯಾತುಧಾನಾಶ್ಚ ಬ್ರಹ್ಮಪಾದೋದ್ಭವಾಶ್ಚ ಯೇ ॥೫॥

ದಂಷ್ಟ್ರಿಣೋ ಭೀಮವೇಗಾಶ್ಚ ವಾಯುವೇಗಪರಾಕ್ರಮಾಃ ।
ಮಾಯಾವೀಯೋಪಸಂಪನ್ನಾ ನಿವಸಂತ್ಯಾತ್ಮರಕ್ಷಿಣಃ ॥೬॥

ನಿವಾತಕವಚಾ ನಾಮ ದಾನವಾ ಯುದ್ಧದುರ್ಮದಾಃ ।
ಜಾನಾಸಿ ಚ ಯಥಾ ಶಕ್ರೋ ನೈತಾನ್ ಶಕ್ನೋತಿ ಬಾಧಿತುಮ್ ॥೭॥

ಕೋರೆದಾಡೆಗಳನ್ನು ಹೊಂದಿದ, ಭಯಂಕರ ವೇಗವುಳ್ಳ, ವಾಯುವೇಗವನ್ನೂ ಮತ್ತು ಪರಾಕ್ರಮವನ್ನೂ ಹೊಂದಿರುವ, ಮಹಾಸಾಮರ್ಥ್ಯದಿಂದ ಕೂಡಿದ, ತಮ್ಮನ್ನು ತಾವೇ ರಕ್ಷಿಸಿಕೊಳ್ಳುವ, ಕಶ್ಯಪಕುಲದಲ್ಲಿ ಜನಿಸಿದ ಪೌಲೋಮರೂ ಮತ್ತು ಕಾಲಕೇಯರೂ ಬ್ರಹ್ಮದೇವರ ಪಾದದಿಂದ ಜನಿಸಿದ ನೈಋತರೂ ಮತ್ತು ಯಾತುಧಾನರೂ ಇಲ್ಲಿ ವಾಸಿಸುತ್ತಾರೆ. ನಿವಾತಕವಚರೆಂಬ ಯುದ್ಧದುರ್ಮದರಾದ ದಾನವರೂ ಇಲ್ಲಿ ವಾಸಿಸುತ್ತಾರೆ. ಇಂದ್ರನು ಅವರನ್ನು ಬಾಧಿಸಲು ಶಕ್ತನಾಗುವುದಿಲ್ಲ ಎಂಬುದನ್ನು ನೀನು ತಿಳಿದಿದ್ದೀಯೆ.

ಬಹುಶೋ ಮಾತಲೇ ತ್ವಂ ಚ ತವ ಪುತ್ರಶ್ಚ ಗೋಮುಖಃ ।
ನಿರ್ಭಗ್ನೋ ದೇವರಾಜಶ್ಚ ಸಹಪುತ್ರಃ ಶಚೀಪತಿಃ ॥೮॥

ಎಲೈ ಮಾತಲಿಯೇ, ನೀನೂ ನಿನ್ನ ಪುತ್ರನಾದ ಗೋಮುಖನೂ ಮತ್ತು ತನ್ನ ಪುತ್ರನಾದ ಜಯಂತನಿಂದ ಕೂಡಿದ ದೇವರಾಜನಾದ ಶಚೀಪತಿಯಾದ ಇಂದ್ರನೂ ಸಹ ಅನೇಕ ಬಾರಿ ಇಲ್ಲಿ ಸೋತುಹೋಗಿದ್ದೀರಿ.

ಪಶ್ಯ ವೇಶ್ಮಾನಿ ರೌಗ್ಮಾಣಿ ಮಾತಲೇ ರಾಜತಾನಿ ಚ ।
ಕರ್ಮಣಾ ವಿಧಿಯುಕ್ತೇನ ಯುಕ್ತಾನ್ಯುಪಗತಾನಿ ಚ ॥೯॥

ಎಲೈ ಮಾತಲಿಯೇ, ಇಲ್ಲಿರುವ ಸುವರ್ಣಮಯವಾದ ಮತ್ತು ರಜತಮಯವಾದ ಮನೆಗಳನ್ನು ನೋಡು. ಇವು ವಿಧಿಗೆ ಅನುಗುಣವಾಗಿ ಕಟ್ಟಲ್ಪಟ್ಟು ನಿಬಿಡವಾಗಿವೆ.

ವೈಡೂರ್ಯಹಾರಿತಾನೀವ ಪ್ರವಾಳರುಚಿರಾಣಿ ಚ ।
ಅರ್ಕಸ್ಫಟಿಕಶುಭ್ರಾಣಿ ವಜ್ರಸಾರೋಜ್ಜ್ವಲಾನಿ ಚ ॥೧೦॥

ವೈಡೂರ್ಯಬಣ್ಣದ ಹರಿತಬಣ್ಣದ ಹವಳದಂತೆ ಸುಂದರವಾಗಿರುವ, ಸೂರ್ಯ ಸ್ಫಟಿಕದಂತೆ ಶುಭ್ರವಾಗಿರುವ ಶ್ರೇಷ್ಠವಜ್ರಗಳಂತೆ ಜ್ವಲಿಸುವ ಈ ಮನೆಗಳನ್ನು ನೋಡು.

ಪಾರ್ಥಿವಾನೀವ ಚಾಭಾಂತಿ ಪದ್ಮರಾಗಮಯಾನಿ ಚ ।
ಶೈಲಾನೀವ ಚ ದೃಶ್ಯಂತೇ ತಾರಕಾನೀವ ಚಾಪ್ಯುತ ॥೧೧॥

ಸೂರ್ಯರೂಪಾಣಿ ಚಾಭಾಂತಿ ದೀಪ್ತಾಗ್ನಿಸದೃಶಾನಿ ಚ ।
ಮಣಿಜಾಲವಿಚಿತ್ರಾಣಿ ಪ್ರಾಂಶೂನಿ ವಿವಿಧಾನಿ ಚ ॥೧೨॥

ಪದ್ಮರಾಗದಿಂದ ನಿರ್ಮಿಸಿದ ಈ ಮನೆಗಳು ಮಣ್ಣಿನಿಂದ ನಿರ್ಮಿಸಿದ ಮನೆಗಳಂತೆ ತೋರುತ್ತವೆ. ಕೆಲವು ಪರ್ವತಗಳಂತೆಯೂ ಇನ್ನು ಕೆಲವು ನಕ್ಷತ್ರಗಳಂತೆಯೂ ತೋರುತ್ತವೆ. ಕೆಲವು ಸೂರ್ಯನಂತೆಯೂ, ಇನ್ನು ಕೆಲವು ಜ್ವಲಿಸುವ ಅಗ್ನಿಯಂತೆಯೂ ಇದ್ದು ಮಣಿಜಾಲಗಳಿಂದ ವಿಚಿತ್ರವಾಗಿ ಕಾಣುತ್ತಿದ್ದು ಎತ್ತರವಾಗಿಯೂ ಮತ್ತು ವಿಧವಿಧವಾಗಿಯೂ ಇವೆ.

ನೈತಾನಿ ಶಕ್ಯಂ ನಿರ್ದೇಷ್ಟುಂ ರೂಪತೋ ದ್ರವ್ಯತಸ್ತಥಾ ।
ಗುಣತಶ್ಚೈವ ಸಿದ್ಧಾನಿ ಪ್ರಮಾಣಗುಣವಂತಿ ಚ ॥೧೩॥

ಈ ಮನೆಗಳನ್ನು ಅವುಗಳ ರೂಪದಿಂದಾಗಲೀ, ದ್ರವ್ಯದಿಂದಾಗಲೀ, ಗುಣದಿಂದಾಗಲೀ ಹೀಗೆಯೇ ಇವೆ ಎಂದು ನಿರ್ದೇಶಮಾಡಲು ಸಾಧ್ಯವಿಲ್ಲ. ಇವು ಒಳ್ಳೆಯ ಪ್ರಮಾಣಗಳಲ್ಲಿ ಕಟ್ಟಲ್ಪಟ್ಟಿವೆ.

ಆಕ್ರೀಡಾನ್ ಪಶ್ಯ ದೈತ್ಯಾನಾಂ ತಥೈವ ಶಯನಾನ್ಯುತ ।
ರತ್ನವಂತಿ ಮಹಾರ್ಹಾಣಿ ಭಾಜನಾನ್ಯಾಸನಾನಿ ಚ ॥೧೪॥

ದೈತ್ಯರ ಕ್ರೀಡಾಗಾರಗಳನ್ನು ನೋಡು. ಹಾಗೆಯೇ ಅವರ ಶಯನಗಳನ್ನೂ ನೋಡು. ಬಹಳ ಬೆಲೆಬಾಳುವ ರತ್ನಗಳಿಂದ ಕೂಡಿದ ಅವರ ಪಾತ್ರೆಗಳನ್ನೂ ಮತ್ತು ಆಸನಗಳನ್ನೂ ನೋಡು.

ಜಲದಾಭಾಂಸ್ತಥಾ ಶೈಲಾನ್ ತೋಯಪ್ರಸ್ರವಣಾನ್ವಿತಾನ್ ।
ಕಾಮಪುಷ್ಪಫಲಾಂಶ್ಚಾಪಿ ಪಾದಪಾನ್ ಕಾಮಚಾರಿಣಃ ॥೧೫॥

ನೀರಿನ ಝರಿಗಳಿಂದ ಕೂಡಿದ, ಮೋಡದ ಕಾಂತಿಯನ್ನು ಹೊಂದಿದ ಪರ್ವತಗಳನ್ನು ನೋಡು. ಜ್ವಲಿಸಿದ ಪುಷ್ಪ-ಫಲಗಳನ್ನು ಕೊಡುವ, ತಮ್ಮ ಇಚ್ಛೆಯಂತೆ ಚಲಿಸುವ ವೃಕ್ಷಗಳನ್ನು ನೋಡು.

ಮಾತಲೇ ಕಶ್ಚಿದತ್ರಾಪಿ ರುಚಿರಸ್ತೇ ವರೋ ಭವೇತ್ ।
ಅಥವಾऽನ್ಯಾಂ ದಿಶಂ ಭೂಮೇಃ ಗಚ್ಛಾವ ಯದಿ ಮನ್ಯಸೇ ॥೧೬॥

ಎಲೈ ಮಾತಲಿಯೇ, ಇಲ್ಲಿ ಯಾವನಾದರೂ ವರನು ನಿನಗೆ ಇಷ್ಟವಾಗಬಹುದು ಅಥವಾ ನೀನು ಬಯಸಿದರೆ ಭೂಮಿಯ ಇನ್ನೊಂದು ದಿಕ್ಕಿಗೆ ಹೋಗೋಣ.

ಕಣ್ವಃ

ಮಾತಲಿಸ್ತ ಬ್ರುವೀದೇನಂ ಭಾಷಮಾಣಂ ತಥಾವಿಧಮ್ ॥೧೭॥

ದೇವರ್ಷೇ ನೈವ ಮೇ ಕಾರ್ಯಂ ವಿಪ್ರಿಯಂ ತ್ರಿದಿವೌಕಸಾಮ್ ॥೧೮॥

ಕಣ್ವ– ಹೀಗೆ ಮಾತನಾಡುತ್ತಿದ್ದ ನಾರದರನ್ನು ಕುರಿತು ಮಾತಲಿಯು ದೇವರ್ಷಿಯೇ, ನಾನು ದೇವತೆಗಳಿಗೆ ಯಾವ ವಿಪ್ರಿಯವನ್ನೂ ಮಾಡಬಾರದು ಎಂದು ಹೇಳಿದನು.

ನಿತ್ಯಾನುಷಕ್ತವೈರಾ ಹಿ ಭ್ರಾತರೋ ದೇವದಾನವಾಃ ।
ಅರಿಪಕ್ಷೇಣ ಸಂಬಂಧಂ ರೋಚಯಿಷ್ಯಾಮ್ಯಹಂ ಕಥಮ್ ॥೧೯॥

ಸಹೋದರರಾದ ದೇವ-ದಾನವರು ಯಾವಾಗಲೂ ಪರಸ್ಪರ ವೈರವನ್ನು ಹೊಂದಿದವರು. ಶತ್ರುಪಕ್ಷದ ಜೊತೆಯಲ್ಲಿ ಸಂಬಂಧವನ್ನು ನಾನು ಹೇಗೆ ಬಯಸುವೆನು?

ಅನ್ಯತ್ರ ಸಾಧು ಗಚ್ಛಾಮೋ ದ್ರಷ್ಟುಂ ನಾರ್ಹಸಿ ದಾನವಾನ್ ।
ಜಾನಾಮಿ ತವ ಚಾತ್ಮಾನಂ ಇಚ್ಛಸೇ ಕಲಹಾನಿತಿ ॥೨೦॥

ನಾವು ಬೇರೆ ಕಡೆಗೆ ಹೋಗೋಣ. ನೀನು ದಾನವರನ್ನು ನೋಡಬೇಕಾದುದಿಲ್ಲ. ನಿನ್ನ ಹೃದಯವು ನನಗೆ ಗೊತ್ತಿದೆ. ನೀನು ಕಲಹಪ್ರಿಯನಾದವನು (ಎಂದು ಹೇಳಿದನು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕೋನಶತತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ತೊಂಬತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರನೆಯ ಅಧ್ಯಾಯ

ನಾರದರು ಮಾತಲಿಯನ್ನು ಸುಪರ್ಣಲೋಕಕ್ಕೆ ಕರೆದುಕೊಂಡು ಹೋಗಿ, ಅಲ್ಲಿಂದ ಬೇರೆಯ ಲೋಕಕ್ಕೆ ಗಮನ.

ನಾರದಃ

ಅಯಂ ಲೋಕಃ ಸುಪರ್ಣಾನಾಂ ಪಕ್ಷಿಣಾಂ ಪನ್ನಗಾಶಿನಾಮ್ ।
ವಿಕ್ರಮೇ ಗಮನೇ ಭಾರೇ ನೈಷಾಮಸ್ತಿ ಪರಿಶ್ರಮಃ ॥೧॥

ನಾರದ– ಈ ಲೋಕವು ಸರ್ಪಭಕ್ಷಕರಾದ ಗರುಡನ ಕುಲದ ಪಕ್ಷಿಗಳ ಆವಾಸಸ್ಥಾನ. ಈ ಪಕ್ಷಿಗಳಿಗೆ ಪರಾಕ್ರಮದಿಂದಾಗಲೀ, ದೂರಗಮನದಿಂದಾಗಲೀ, ಭಾರವನ್ನು ಹೊರುವುದರಿಂದಾಗಲೀ ಶ್ರಮವುಂಟಾಗುವುದಿಲ್ಲ.

ವೈನತೇಯಸುತೈಃ ಸೂತ ಷಡ್ಭಿಸ್ತತಮಿದಂ ಕುಲಮ್ ॥೨॥
ಸುಮುಖೇನ ಸುದಾಮ್ನಾ ಚ ಸುನೇತ್ರೇಣ ಸುವರ್ಚಸಾ ।
ಸುರುಚಾ ಪಕ್ಷಿರಾಜೇನ ಸುಬಲೇನ ಚ ಮಾತಲೇ ॥೩॥

ಎಲೈ ಮಾತಲಿಯೇ, ಗರುಡನ ಆರುಮಕ್ಕಳಾದ ಸುಮುಖ, ಸುದಾಮ, ಸುನೇತ್ರ, ಸುವರ್ಚ, ಪಕ್ಷಿರಾಜನಾದ ಸುರುಕ್ ಮತ್ತು ಸುಬಲ ಇವರಿಂದ ಈ ಕುಲವು ವಿಸ್ತಾರವನ್ನು ಹೊಂದಿತು.

ವರ್ಧಿತಾನಿ ಪ್ರಸೂತ್ಯಾ ವೈ ವಿನತಾಕುಲಕರ್ತೃಭಿಃ ।
ಪಕ್ಷಿರಾಜಾಭಿಜಾತ್ಯಾನಾಂ ಸಹಸ್ರಾಣಿ ಶತಾನಿ ಚ ॥೪॥
ಕಶ್ಯಪಸ್ಯ ತತೋ ವಂಶೇ ಜಾತೈರ್ಭೂತಿವಿವರ್ಧನೈಃ ॥೫॥

ವಿನತೆಯ ಕುಲವನ್ನು ಬೆಳೆಸುವ ಪಕ್ಷಿರಾಜನಾದ ಗರುಡನ ಕುಲಕ್ಕೆ ಸೇರಿದ ಸಾವಿರಾರು ನೂರಾರು ವಂಶಗಳು ಕಶ್ಯಪರ ವಂಶದಲ್ಲಿ ಜನಿಸಿದ ಐಶ್ವರ್ಯಸಾಧಕವಾದ ಸಂತತಿ ಪರಂಪರೆಗಳಿಂದ ಅಭಿವೃದ್ಧಿಗೊಳಿಸಲ್ಪಟ್ಟವು.

ಸರ್ವೇ ಹ್ಯೇತೇ ಶ್ರಿಯಾ ಯುಕ್ತಾಃ ಸರ್ವೇ ಶ್ರೀವತ್ಸಲಕ್ಷಣಾಃ ।
ಸರ್ವೇ ಶ್ರಿಯಮಭೀಪ್ಸಂತೋ ಧಾರಯಂತಿ ಬಲಾನ್ಯುತ ॥೬॥

ಇವರೆಲ್ಲರೂ ಶ್ರೀವತ್ಸಲಕ್ಷಣಗಳನ್ನು ಹೊಂದಿ ಸಂಪತ್ತಿನಿಂದ ಕೂಡಿದವರು. ಸಂಪತ್ತನ್ನು ಬಯಸುವ ಇವರೆಲ್ಲರೂ ಬಹಳ ಬಲಿಷ್ಠರಾಗಿದ್ದಾರೆ.

ಕರ್ಮಣಾ ಕ್ಷತ್ರಿಯಾ ಹ್ಯೇತೇ ನಿರ್ಘೃಣಾ ಭೋಗಿಭೋಜಿನಃ ।
ಜಾತಿಸಂಕ್ಷಯಕರ್ತೃತ್ವಾತ್ ಬ್ರಾಹ್ಮಣ್ಯಂ ನ ಲಭಂತಿ ವೈ ॥೭॥

ಸರ್ಪಗಳನ್ನು ಭಕ್ಷಿಸುವ ಇವರು ಕರ್ಮದಿಂದ ಕ್ಷತ್ರಿಯರಾಗಿ ನಿರ್ದಯರಾಗಿದ್ದಾರೆ. ತಮ್ಮ ದಾಯಾದಿಗಳನ್ನೇ ನಾಶಮಾಡುವುದರಿಂದ ಬ್ರಾಹ್ಮಣ ಸ್ವಭಾವವಾದ ಮಾರ್ದವವನ್ನು ಇವರು ಹೊಂದುವುದಿಲ್ಲ.

ನಾಮಾನಿ ಚೈಷಾಂ ವಕ್ಷ್ಯಾಮಿ ಯಥಾ ಪ್ರಾಧಾನ್ಯತಃ ಶೃಣು ।
ಮಾತಲೇ ಶ್ಲಾಘ್ಯಮೇತದ್ಧಿ ಕುಲಂ ವಿಷ್ಣುಪರಿಗ್ರಹಮ್ ॥೮॥

ಎಲೈ ಮಾತಲಿಯೇ, ವಿಷ್ಣುವಿನಿಂದ ಪರಿಗ್ರಹಿಸಲ್ಪಟ್ಟ ಈ ಕುಲವು ಶ್ಲಾಘನೀಯವಾದುದು. ಅವರಲ್ಲಿ ಪ್ರಧಾನರಾದವರ ಹೆಸರುಗಳನ್ನು ಹೇಳುವೆನು, ಕೇಳುವವನಾಗು.

ದೈವತಂ ವಿಷ್ಣುರೇತೇಷಾಂ ವಿಷ್ಣುರೇವ ಪರಾಯಣಮ್ ।
ಹೃದಿ ಚೈಷಾಂ ಸದಾ ವಿಷ್ಣುಃ ವಿಷ್ಣುರೇವ ಗತಿಸ್ತಥಾ ॥೯॥

ಇವರಿಗೆ ದೇವತೆ ಮತ್ತು ಪರಮಾಶ್ರಯ ಎಂದರೆ ವಿಷ್ಣುವೇ. ಇವರ ಮನಸ್ಸಿನಲ್ಲಿ ಯಾವಾಗಲೂ ವಿಷ್ಣುವಿನ ಸ್ಮರಣೆ ಇರುತ್ತದೆ. ವಿಷ್ಣುವೇ ಅವರಿಗೆ ಗತಿಯಾದವನು.

ಸುವರ್ಣಚೂಡೋ ನಾಗಾಶೀ ದಾರುಣಶ್ಚಂಡತುಂಡಕಃ ।
ಅನಿಲಶ್ಚಾನಲಶ್ಚೈವ ವಿಶಾಲಾಕ್ಷೋಽಥ ಕುಂಡಲೀ ॥೧೦॥

ಕಾಶ್ಯಪಿರ್ಧ್ವಜವಿಷ್ಕಂಭೋ ವೈನತೇಯೋಽಥ ವಾಮನಃ ।
ವಾತವೇಗೋ ನಿಶಾಚಕ್ಷುಃ ನಿಮೇಷೋಽನಿಮಿಷಸ್ತಥಾ ॥೧೧॥

ಸುವರ್ಣಚೂಡ, ನಾಗಾಶೀ, ದಾರುಣ, ಚಂಡತುಂಡ, ಅನಿಲ, ಅನಲ, ವಿಶಾಲಾಕ್ಷ, ಕುಂಡಲೀ, ಕಾಶ್ಯಪಿ, ಧ್ವಜವಿಷ್ಕಂಭ, ವೈನತೇಯ, ವಾಮನ, ವಾತವೇಗ, ನಿಶಾಚಕ್ಷು, ನಿಮೇಷ, ಅನಿಮಿಷ;

ತ್ರಿವಾರಃ ಸಪ್ತವಾರಶ್ಚ ವಾಲ್ಮೀಕಿರ್ದ್ವಿಪಕಸ್ತಥಾ ।
ದೈತ್ಯದ್ವೀಪಸ್ತಪೋದ್ವೀಪಃ ಸಾರಸಃ ಪದ್ಮಲೋಚನಃ ॥೧೨॥

ಸುಮುಖಶ್ಚಿತ್ರಕೇತುಶ್ಚ ಚಿತ್ರಬರ್ಹಸ್ತಥಾऽನಘಃ ।
ಮೇಘಹೃತ್ ಕುಮುದೋ ದಕ್ಷಃ ಸರ್ಪಾಂತಃ ಸೋಮಭೋಜನಃ ॥೧೩॥

ತ್ರಿವಾರ, ಸಪ್ತವಾರ, ವಾಲ್ಮೀಕಿ, ದ್ವೀಪಕ, ದೈತ್ಯದ್ವೀಪ, ತಪೋದ್ವೀಪ, ಸಾರಸ, ಪದ್ಮಲೋಚನ, ಸುಮುಖ, ಚಿತ್ರಕೇತು, ಚಿತ್ರಬರ್ಹ, ಅನಘ, ಮೇಘಹೃತ್, ಕುಮುದ, ದಕ್ಷ, ಸರ್ಪಾಂತ, ಸೋಮಭೋಜನ;

ಗುರುಭಾರಃ ಕಪೋತಶ್ಚ ಸೂರ್ಯನೇತ್ರಶ್ಚಿರಾಂತಕಃ ।
ವಿಷ್ಣುಧನ್ವಾ ಕುಮಾರಶ್ಚ ಪರಿಬರ್ಹೋ ಹರಿಸ್ತಥಾ ॥೧೪॥

ಸುಸ್ವರೋ ಮಧುಪರ್ಕಶ್ಚ ಹೇಮವರ್ಣಸ್ತಥೈವ ಚ ।
ಮಲಯೋ ಮಾತರಿಶ್ವಾ ಚ ದಿವಾಕರನಿಶಾಕರೌ ॥೧೫॥

ಗುರುಭಾರ, ಕಪೋತ, ಸೂರ್ಯನೇತ್ರ, ಚಿರಾಂತಕ, ವಿಷ್ಣುಧನ್ವಾ, ಕುಮಾರ, ಪರಿಬರ್ಹ, ಹರಿ, ಸುಸ್ವರ, ಮಧುಪರ್ಕ, ಹೇಮವರ್ಣ, ಮಲಯ, ಮಾತರಿಶ್ವ, ದಿವಾಕರ, ನಿಶಾಕರ;

ಏತೇ ಪ್ರಾದೇಶಮಾತ್ರೇಣ ಮಯೋಕ್ತಾ ಗರುಡಾತ್ಮಜಾಃ ।
ಪ್ರಾಧಾನ್ಯತಸ್ತೇ ಯಶಸಾ ಕೀರ್ತಿತಾಃ ಪಕ್ಷಿಣಶ್ಚ ಯೇ ॥೧೬॥

ಗರುಡವಂಶದಲ್ಲಿ ಪ್ರಸೂತರಾದ ಕೀರ್ತಿವಂತರಾದ ಈ ಕೆಲವು ಪಕ್ಷಿಗಳನ್ನು ಮಾತ್ರ ನಾನು ನಿನಗೆ ಹೇಳಿದ್ದೇನೆ.

ಯದ್ಯತ್ರ ನ ರುಚಿಃ ಕಾಚಿದ್ ಏಹಿ ಗಚ್ಛಾವ ಮಾತಲೇ ।
ತಂ ನಯಿಷ್ಯಾಮಿ ದೇಶಂ ತ್ವಾಂ ವರಂ ಯತ್ರೋಪಲಪ್ಸ್ಯಸೇ ॥೧೭॥

ಎಲೈ ಮಾತಲಿಯೇ, ನಿನಗೆ ಇಲ್ಲಿ ಅಭಿಪ್ರಾಯವಿಲ್ಲದಿದ್ದರೆ ಎಲ್ಲಿ ನೀನು ವರನನ್ನು ಕಾಣಬಹುದೋ ಅಂತಹ ಬೇರೆ ದೇಶಕ್ಕೆ ಕರೆದುಕೊಂಡು ಹೋಗುವೆನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಶತತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಏಕತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಒಂದನೆಯ ಅಧ್ಯಾಯ

ಮಾತಲಿಯನ್ನು ರಸಾತಲಲೋಕಕ್ಕೆ ಕರೆದುಕೊಂಡು ಹೋಗಿ,
ನಾರದರಿಂದ ಸುರಭಿಸಂತತಿಯ ಪ್ರಶಂಸೆ.

ನಾರದಃ

ಇದಂ ರಸಾತಳಂ ನಾಮ ಸಪ್ತಮಂ ಪೃಥಿವೀತಳಮ್ ।
ಯತ್ರಾಸ್ತೇ ಸುರಭಿರ್ಮಾತಾ ಗವಾಮಮೃತಸಂಭವಾ ॥೧॥

ಕ್ಷರಂತೀ ಸತತಂ ಕ್ಷೀರಂ ಪೃಥಿವೀಸಾರಸಂಭವಮ್ ।
ಷಣ್ಣಾಂ ರಸಾನಾಂ ಸಾರೇಣ ರಸಮೇಕಮನುತ್ತಮಮ್ ॥೨॥

ನಾರದ– ಇದು ರಸಾತಳವೆಂಬ ಏಳನೆಯ ಪೃಥಿವೀತಳ. ಇಲ್ಲಿ ಅಮೃತಮಥನ ಕಾಲದಲ್ಲಿ ಜನಿಸಿದ ಗೋಮಾತೆಯಾದ ಸುರಭಿಯು ಆರು ರಸಗಳ ಸಾರದಿಂದ ಕೂಡಿದ, ಪೃಥಿವಿಯ ಸಾರದಿಂದ ಉಂಟಾದ ಶ್ರೇಷ್ಠವಾದ ಒಂದು ಕ್ಷೀರರಸವನ್ನು ಸತತವಾಗಿ ಸುರಿಸುತ್ತಾ ವಾಸಿಸುತ್ತಾಳೆ.

ಅಮೃತೇನಾಭಿತೃಪ್ತಸ್ಯ ವಾಚಮುದ್ಗಿರತಃ ಪುರಾ ।
ಪಿತಾಮಹಸ್ಯ ವಚನಾದ್ ಉದತಿಷ್ಠದನಿಂದಿತಾ ॥೩॥

ಹಿಂದೆ ಅಮೃತವನ್ನು ಪಾನಮಾಡಿ ಮಾತನಾಡುವ ಬ್ರಹ್ಮದೇವರ ಮುಖದಿಂದ ನಿರ್ದುಷ್ಟಳಾದ ಇವಳು ಮೊದಲು ಹೊರಗೆ ಬಂದಳು.

ಯಸ್ಯಾಃ ಕ್ಷೀರಸ್ಯ ಧಾರಾಯಾ ನಿಪತಂತ್ಯಾ ಮಹೀತಳೇ ।
ಹ್ರದಃ ಕೃತಃ ಕ್ಷೀರನಿಧಿಃ ಪವಿತ್ರಂ ಪರಮಂ ಪದಮ್ ॥೪॥

ಭೂಮಿಯ ಮೇಲೆ ಬೀಳುವ ಅವಳ ಕ್ಷೀರಧಾರೆಗಳಿಂದ ಪವಿತ್ರವಾದ ಪರಮಪದವೆನಿಸುವ ಕ್ಷೀರಸಮುದ್ರರೂಪವಾದ ದೊಡ್ಡ ಸರೋವರವು ಉಂಟಾಯಿತು.

ಪುಷ್ಪಿತಸ್ಯೈವ ಫೇನೇನ ಪರ್ಯಂತಮನುವೇಷ್ಟಿತಮ್ ।
ಪಿಬಂತೋ ನಿವಸಂತ್ಯತ್ರ ಫೇನಪಾ ಮುನಿಸತ್ತಮಾಃ ॥೫॥

ಇದು ತೀರದವರೆಗೂ ಸುತ್ತುವರಿದು ಇರುವ ನೊರೆಗಳಿಂದ ಪುಷ್ಪಗಳಿಂದ ಕೂಡಿರುವಂತೆ ಕಾಣುತ್ತದೆ. ಫೇನಪರು ಎಂಬ ಮುನಿಶ್ರೇಷ್ಠರು ಈ ನೊರೆಯನ್ನು ಕುಡಿಯುತ್ತಾ ಇಲ್ಲಿ ವಾಸವನ್ನು ಮಾಡುತ್ತಾರೆ.

ಫೇನಪಾ ನಾಮ ತೇ ಖ್ಯಾತಾಃ ಫೇನಾಹಾರಾಶ್ಚ ಮಾತಲೇ ।
ಉಗ್ರೇ ತಪಸಿ ವರ್ತಂತೇ ಯೇಷಾಂ ಬಿಭೃತಿ ದೇವತಾಃ ॥೬॥

ಎಲೈ ಮಾತಲಿಯೇ, ನೊರೆಯನ್ನೇ ಆಹಾರವಾಗುಳ್ಳ ಫೇನಪರೆಂದು ಪ್ರಖ್ಯಾತರಾದ ಋಷಿಗಳು ಇಲ್ಲಿ ಉಗ್ರವಾದ ತಪಸ್ಸನ್ನು ಆಚರಿಸುತ್ತಾರೆ. ಎಲೈ ಮಾತಲಿಯೇ, ಅವರಿಗೆ ದೇವತೆಗಳೂ ಹೆದರುತ್ತಾರೆ.

ಅಸ್ಯಾಶ್ಚತಸ್ರೋ ಧೇನ್ವೋಽನ್ಯಾ ದಿಕ್ಷು ಸರ್ವಾಸು ಮಾತಲೇ ।
ನಿವಸಂತಿ ದಿಶಾಂ ಪಾಲ್ಯೋ ಧಾರಯಂತ್ಯೋ ದಿಶಃ ಸ್ಮ ತಾಃ ॥೭॥

ಈ ಸುರಭಿಯ ಮಕ್ಕಳಾದ ಬೇರೆಯ ನಾಲ್ಕು ಧೇನುಗಳು ದಿಕ್ಪಾಲಕರಾಗಿ ಆಯಾ ದಿಕ್ಕುಗಳನ್ನು ಧರಿಸುತ್ತಾ ವಾಸಮಾಡುತ್ತವೆ.

ಪೂರ್ವಾಂ ದಿಶಂ ಧಾರಯತೇ ಸುರೂಪಾ ನಾಮ ಸೌರಭೀ ।
ದಕ್ಷಿಣಾಂ ಹಂಸಿಕಾ ನಾಮ ಧಾರಯತ್ಯಪರಾ ದಿಶಮ್ ॥೮॥

ಪೂರ್ವದಿಕ್ಕನ್ನು ಸುರೂಪಾ ಎಂಬ ಸೌರಭಪುತ್ರಿಯೂ, ದಕ್ಷಿಣ ದಿಕ್ಕನ್ನು ಹಂಸಿಕಾ ಎಂಬ ಸೌರಭ ಪುತ್ರಿಯೂ ಧಾರಣೆ ಮಾಡುತ್ತಾರೆ.

ಪಶ್ಚಿಮಾ ವಾರುಣೀ ದಿಕ್ ಚ ಧಾರ್ಯತೇ ವೈ ಸುಭದ್ರಯಾ ।
ಮಹಾನುಭಾವಯಾ ನಿತ್ಯಂ ಮಾತಲೇ ವಿಶ್ವರೂಪಯಾ ॥೯॥

ಎಲೈ ಮಾತಲಿಯೇ, ವರುಣನಿಗೆ ಸಂಬಂಧಿಸಿದ ಪಶ್ಚಿಮ ದಿಕ್ಕನ್ನು ಮಹಾನುಭಾವಳೂ, ಅನೇಕ ರೂಪವನ್ನು ಧರಿಸಿದವನೂ ಆದ ಸುಭದ್ರೆಯು ನಿತ್ಯವೂ ಧರಿಸುತ್ತಾಳೆ.

ಸರ್ವಕಾಮದುಘಾ ನಾಮ ಧೇನುರ್ಧಾರಯತೇ ದಿಶಮ್ ।
ಉತ್ತರಾಂ ಮಾತಲೇ ಧರ್ಮ್ಯಾಂ ತಥೈಲಬಿಲಿಸಂಶ್ರಯಾಮ್ ॥೧೦॥

ಮಾತಲಿಯೇ, ಧರ್ಮಸಂಬಂಧಿಯಾದ ಕುಬೇರನಿಂದ ಆಶ್ರಿತವಾದ ಉತ್ತರದಿಕ್ಕನ್ನು ಸರ್ವಕಾಮದುಘಾ ಎಂಬ ಸುರಭಿಪುತ್ರಿಯು ಧರಿಸುತ್ತಾಳೆ.

ಆಸಾಂ ತು ಪಯಸಾ ಮಿಶ್ರಂ ಪಯೋ ನಿರ್ಮಥ್ಯ ಸಾಗರೇ ।
ಮಂಥಾನಂ ಮಂದರಂ ಕೃತ್ವಾ ದೇವೈರಸುರಸಂಹಿತೈಃ ॥೧೧॥

ಉದ್ಧೃತಾ ವಾರುಣೀ ಲಕ್ಷ್ಮೀಃ ಅಮೃತಂ ಚಾಪಿ ಮಾತಲೇ ।
ಉಚ್ಚೈಃಶ್ರವಾಶ್ಚಾಶ್ವರಾಜೋ ಮಣಿರತ್ನಂ ಚ ಕೌಸ್ತುಭಮ್ ॥೧೨॥

ಇವುಗಳ ಕ್ಷೀರದಿಂದ ಮಿಶ್ರಿತವಾದ ಕ್ಷೀರಸಾಗರವನ್ನು ದೇವತೆಗಳೂ ಮತ್ತು ಅಸುರರೂ ಸೇರಿ ಮಂದರಪರ್ವತವನ್ನು ಕಡೆಗೋಲನ್ನಾಗಿ ಮಾಡಿ ವಾರುಣಿಯನ್ನೂ, ಲಕ್ಷ್ಮಿಯನ್ನೂ, ಅಮೃತವನ್ನೂ, ಉಚ್ಚೈಃಶ್ರವಸ್ ಎಂಬ ಅಶ್ವರಾಜನನ್ನೂ ಮತ್ತು ಮಣಿಶ್ರೇಷ್ಠವಾದ ಕೌಸ್ತುಭವನ್ನೂ ಪಡೆದರು.

ಸುಧಾಹಾರೇಷು ಚ ಸುಧಾಂ ಸ್ವಧಾಭೋಜಿಷು ಚ ಸ್ವಧಾಮ್ ।
ಅಮೃತಂ ಚಾಮೃತಾಶೇಷು ಸುರಭಿಃ ಕ್ಷರತೇ ಪಯಃ ॥೧೩॥

ಸುರಭಿಯು ಅಮೃತಭೋಗಿಗಳಾದ ದೇವತೆಗಳಿಗೆ ಸ್ವಾಹಾರೂಪವಾದ ಅನ್ನವನ್ನೂ, ಸ್ವಧಾಭೋಜಿಗಳಾದ ಪಿತೃಗಳಿಗೆ ಸ್ವಧಾರೂಪವಾದ ಅನ್ನವನ್ನೂ, ಅಮೃತವನ್ನು ಸ್ವೀಕಾರ ಮಾಡುವ ದೇವತೆಗಳಿಗೆ ಅಮೃತರೂಪವಾದ ಅನ್ನವನ್ನೂ, ತನ್ನ ಕ್ಷೀರರೂಪದಲ್ಲಿ ಸ್ರವಿಸುತ್ತದೆ.

ಅತ್ರ ಗಾಥಾ ಪುರಾ ಗೀತಾ ರಸಾತಳನಿವಾಸಿಭಿಃ ।
ಪೌರಾಣೀ ಶ್ರೂಯತೇ ಲೋಕೇ ಗೀಯತೇ ಯಾ ಮನೀಷಿಭಿಃ ॥೧೪॥

ನ ನಾಗಲೋಕೇ ನ ಸ್ವರ್ಗೇ ನ ವಿಮಾನೇ ತ್ರಿವಿಷ್ಟಪೇ ।
ಪರಿವಾಸಃ ಸುಖಸ್ತಾದೃಕ್ ರಸಾತಳತಳೇ ಯಥಾ ॥೧೫॥

ನಾಗಲೋಕದಲ್ಲಾಗಲೀ, ಬಹಳ ಉನ್ನತವಾದ ಮೂರು ಸ್ಥಾನಗಳಿರುವ ಸ್ವರ್ಗದಲ್ಲಾಗಲೀ ವಾಸವು ರಸಾತಳಲೋಕದ ವಾಸದಂತೆ ಸುಖಕರವಲ್ಲ ಎಂಬ ಗೀತೆಯನ್ನು ರಸಾತಳ ಲೋಕದ ನಿವಾಸಿಗಳು ಹಾಡುತ್ತಾರೆ ಎಂಬ ಪ್ರಾಚೀನವಾದ ಕಥೆಯು ಜ್ಞಾನಿಗಳಿಂದ ಹಾಡಲ್ಪಡುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕಶತತಮೋऽಧ್ಯಾಯಃ ॥
॥ ಭಗವದ್ಯಾನಪರ್ವಣಿ ದ್ವಾತ್ರಿಂಶೋऽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಒಂದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎರಡನೆಯ ಅಧ್ಯಾಯ

ನಾರದರಿಂದ ಮಾತಲಿಯನ್ನು ಭೋಗವತಿಗೆ ಕರೆದುಕೊಂಡು ಹೋಗಿ ಸರ್ಪಗಳ ಪರಿಚಯ. ಮಾತಲಿಯಿಂದ ಸುಮುಖನ ದರ್ಶನ.

ನಾರದಃ

ಇಯಂ ಭೋಗವತೀ ನಾಮ ಪುರೀ ವಾಸುಕಿಪಾಲಿತಾ ।
ಯಾದೃಶೀ ದೇವರಾಜಸ್ಯ ಪುರೀ ವರ್ಯಾऽಮರಾವತೀ ॥೧॥

ನಾರದ– ಇದು ಭೋಗವತಿ ಎಂಬ ವಾಸುಕಿಯಿಂದ ಪಾಲಿತವಾದ ಪಟ್ಟಣ. ದೇವರಾಜನ ಅಮರಾವತಿ ಪಟ್ಟಣದಲ್ಲಿರುವ ಅದರಂತೆಯೇ ಇದು ಶ್ರೇಷ್ಠವಾಗಿದೆ.

ಏಷ ಶೇಷಃ ಸ್ಥಿತೋ ನಾಗೋ ಯೇನೇದಂ ಧಾರ್ಯತೇ ಸದಾ ।
ತಪಸಾ ಲೋಕಮುಖ್ಯೇನ ಪ್ರಭಾವಮಹಿತಾ ಮಹೀ ॥೨॥

ತನ್ನ ಸಾಮರ್ಥ್ಯದಿಂದ ಪೂಜಿತವಾದ ಭೂಮಿಯು ಯಾವ ಲೋಕಶ್ರೇಷ್ಠನಾದ ಶೇಷನಿಂದ ತಪೋಬಲದಿಂದ ಧರಿಸಲ್ಪಡುತ್ತದೆಯೋ ಅಂತಹ ಶೇಷನಾಮವುಳ್ಳ ಈ ನಾಗನು ಇಲ್ಲಿ ಇರುತ್ತಾನೆ.

ಶ್ವೇತೋಚ್ಚಯನಿಭಾಕಾರೋ ನಾನಾವಿಧವಿಭೂಷಣಃ ।
ಸಹಸ್ರಂ ಧಾರಯನ್ ಮೂರ್ಧ್ನಾ ಜ್ವಾಲಾಜಿಹ್ವೋ ಮಹಾಬಲಃ ॥೩॥

ಅವನು ಶ್ವೇತಪರ್ವತಕ್ಕೆ ಸದೃಶವಾದ ಆಕಾರವನ್ನು ಹೊಂದಿ, ನಾನಾವಿಧ ಭೂಷಣಗಳಿಂದ ಅಲಂಕೃತನಾಗಿ, ಮಹಾಬಲನಾಗಿ ಜ್ವಾಲೆಯಂತಿರುವ ಜಿಹ್ವೆಗಳನ್ನು ಹೊಂದಿ ತಲೆಗಳ ಮೇಲೆ ಸಹಸ್ರಮಣಿಗಳನ್ನು ಧರಿಸಿದ್ದಾನೆ.

ಇಹ ನಾನಾವಿಧಾಕಾರಾ ನಾನಾವಿಧವಿಭೂಷಣಾಃ ।
ಕಾಶ್ಯಪಸ್ಯ ಸುತಾ ನಾಗಾ ನಿವಸಂತಿ ಗತವ್ಯಥಾಃ ॥೪॥

ಇಲ್ಲಿ ಕಾಶ್ಯಪರ ಪುತ್ರರಾದ ನಾನಾವಿಧವಾದ ಆಕಾರವುಳ್ಳ ಮತ್ತು ನಾನಾ ವಿಧವಾದ ಅಲಂಕಾರವುಳ್ಳ ನಾಗಗಳು ಯಾವ ವ್ಯಥೆಯೂ ಇಲ್ಲದೆ ವಾಸಮಾಡುತ್ತವೆ.

ಮಣಿಸ್ವಸ್ತಿಕಚಕ್ರಾಂಕಕಮಂಡಲುಕಲಕ್ಷಣಾಃ ।
ಸಹಸ್ರಸಂಖ್ಯಾ ಬಲಿನಃ ಸರ್ವೇ ರೌದ್ರಾಃ ಸ್ವಭಾವತಃ ॥೫॥

ನಾಗಮಣಿ, ಸ್ವಸ್ತಿಕ ಚಿಹ್ನೆ ಮತ್ತು ಚಕ್ರಚಿಹ್ನೆಗಳನ್ನು ಧರಿಸಿದ ಶಿರಸ್ಸುಗಳನ್ನು ಹೊಂದಿ ಮಂಡಲಾಕಾರದ ಸ್ವಭಾವವುಳ್ಳ ಸಹಸ್ರಾರು ಸಂಖ್ಯೆಯಲ್ಲಿರುವ ಈ ಸರ್ಪಗಳೆಲ್ಲವೂ ಬಲಿಷ್ಠವಾದವು ಮತ್ತು ಸ್ವಾಭಾವಿಕವಾಗಿಯೇ ಉಗ್ರವಾದವುಗಳು.

ಸಹಸ್ರಶಿರಸಃ ಕೇಚಿತ್ ಕೇಚಿತ್ ಪಂಚಶತಾನನಾಃ ।
ಶತಶೀರ್ಷಾಸ್ತಥಾ ಕೇಚಿತ್ ಕೇಚಿತ್ ತ್ರಿಶಿರಸೋಽಪಿ ಚ ॥೬॥

ತ್ರಿಪಂಚಶಿರಸಃ ಕೇಚಿತ್ ಕೇಚಿತ್ ಸಪ್ತಮುಖಾಸ್ತಥಾ ।
ಮಹಾಬಲಾ ಮಹಾಕಾಯಾಃ ಪನ್ನಗಾ ಭೋಗಭೋಗಿನಃ ॥೭॥

ಕೆಲವು ಸಹಸ್ರಶಿರಸ್ಸುಗಳನ್ನೂ, ಕೆಲವು ಐದುನೂರು ಶಿರಸ್ಸುಗಳನ್ನೂ, ಕೆಲವು ನೂರುಶಿರಸ್ಸುಗಳನ್ನೂ, ಕೆಲವು ಮೂರುಶಿರಸ್ಸುಗಳನ್ನೂ, ಕೆಲವು ಹದಿನೈದು ಶಿರಸ್ಸುಗಳನ್ನೂ, ಕೆಲವು ಸಪ್ತಮುಖಗಳನ್ನೂ ಹೊಂದಿ ಮಹಾಬಲವುಳ್ಳವೂ, ಮಹಾಶರೀರವುಳ್ಳವೂ ಮತ್ತು ಒಳ್ಳೆಯ ಭೋಗಗಳನ್ನು ಅನುಭವಿಸುವವೂ ಆದ ಸರ್ಪಗಳಾಗಿವೆ.

ಬಹೂನೀಹ ಸಹಸ್ರಾಣಿ ಪ್ರಯುತಾನ್ಯರ್ಬುದಾನಿ ಚ ।
ನಾಗಾನಾಮೇಕವಂಶಾನಾಂ ಯಥಾಶ್ರೇಷ್ಠಂ ತು ಮೇ ಶೃಣು ॥೮॥

ಇಲ್ಲಿ ಒಂದೇ ವಂಶಕ್ಕೆ ಸೇರಿದ ಅನೇಕ ಸಹಸ್ರ ಅಥವಾ ಲಕ್ಷ ಅಥವಾ ಅರ್ಬುದ ಸಂಖ್ಯೆಯ ನಾಗಗಳಿವೆ. ಅವುಗಳನ್ನು ಶ್ರೇಷ್ಠತೆಯ ಕ್ರಮದಿಂದ ಹೇಳುತ್ತೇನೆ, ಕೇಳು.

ವಾಸುಕಿಸ್ತಕ್ಷಕಶ್ಚೈವ ಕಾರ್ಕೋಟಕಧನಂಜಯೌ ।
ಕಾಲೀಯೋ ನಹುಷಶ್ಚೈವ ಕಂಬಲಾಶ್ವತರಾವುಭೌ ॥೯॥

ಬಾಹ್ಯಕುಂಡೋ ಮಣಿರ್ನಾಗಃ ತಥೈವಾಪೂರಣಃ ಖಗಃ ।
ವಾಮನಶ್ಚೈಲಪತ್ರಶ್ಚ ಕುಕುರಃ ಕುಕುಣಸ್ತಥಾ ॥೧೦॥

ವಾಸುಕಿ, ತಕ್ಷಕ, ಕಾರ್ಕೋಟಕ, ಧನಂಜಯ, ಕಾಲೀಯ, ನಹುಷ, ಕಂಬಲ ಮತ್ತು ಅಶ್ವತರಗಳು, ಬಾಹ್ಯಕುಂಡ, ಮಣಿ, ನಾಗ, ಆಪೂರಣ, ಖಗ, ವಾಮನ, ಏಲಪತ್ರ, ಕುಕುರ, ಕುಕುಣ;

ಆರ್ಯಕೋ ನಂದಕಶ್ಚೈವ ತಥಾ ಶಲಕಪೋತಕೌ ।
ಕೈಲಾಸಕಃ ಪಿಂಜರಕೋ ನಾಗಶ್ಚೈರಾವತಸ್ತಥಾ ॥೧೧॥

ಸುದಾಮನೋ ದಧಿಮುಖಃ ಶಂಖೋ ನಂದೋಪನಂದಕೌ ।
ಆಪ್ತಃ ಕೋಟರಕಶ್ಚೈವ ಶಿಖಂಡೀ ನಿಷ್ಕುರಸ್ತಥಾ ॥೧೨॥

ಆರ್ಯಕ, ನಂದಕ, ಶಲಕ ಮತ್ತು ಪೋತಕಗಳು, ಕೈಲಾಸಕ, ಪಿಂಜರಕ, ಐರಾವತ, ಸುದಾಮನ, ದಧಿಮುಖ, ಶಂಖ, ನಂದ ಮತ್ತು ಉಪನಂದಕಗಳು, ಆಪ್ತ, ಕೋಟರಕ, ಶಿಖಂಡೀ, ನಿಷ್ಕುರ;

ತಿತ್ತಿರಿರ್ಹಸ್ತಿಭದ್ರಶ್ಚ ಕುಮುದೋ ಮಾಲ್ಯಪಿಂಡಕಃ ।
ದ್ವೌ ಪದ್ಮೌ ಪುಂಡರೀಕಶ್ಚ ಪುಷ್ಪೋ ಮುದ್ಗರಪರ್ಣಕಃ ॥೧೩॥

ಕರವೀರಃ ಪೀಠಕರಃ ಸಂವೃತ್ತೋ ವೃತ್ತ ಏವ ಚ ।
ಪಿಂಡಾರೋ ಬಿಲ್ವಪತ್ರಶ್ಚ ಮೂಷಿಕಾದಃ ಶಿರೀಷಕಃ ॥೧೪॥

ತಿತ್ತಿರಿ, ಹಸ್ತಿಭದ್ರ, ಕುಮುದ, ಮಾಲ್ಯಪಿಂಡಕ, ದ್ವಿಪದ್ಮ, ಪುಂಡರೀಕ, ಪುಷ್ಪ, ಮುದ್ಗರಪರ್ಣ, ಕರವೀರ, ಪೀಠಕರ, ಸಂವೃತ್ತ, ವೃತ್ತ, ಪಿಂಡಾರ, ಬಿಲ್ವಪತ್ರ, ಮೂಷಿಕಾದ, ಶಿರೀಷಕ;

ದಿಲೀಪಃ ಶಂಖಶೀರ್ಷಶ್ಚ ಜ್ಯೋತಿಷ್ಕೋऽಥಾಪರಾಜಿತಃ ।
ಕೌರವ್ಯೋ ಧೃತರಾಷ್ಟ್ರಶ್ಚ ಕುಹಕಃ ಕುಶಕಸ್ತಥಾ ॥೧೫॥

ವಿರಜಾ ಧಾರಣಶ್ಚೈವ ಸುಬಾಹುರ್ಮುಖರೋ ಜಯಃ ।
ಬಧಿರಶ್ಚ ವಿಕುಂಡಶ್ಚ ವಿರಥಃ ಸುರಥಸ್ತಥಾ ॥೧೬॥

ದಿಲೀಪ, ಶಂಖಶೀರ್ಷ, ಜ್ಯೋತಿಷ್ಕ, ಅಪರಾಜಿತ, ಕೌರವ್ಯ, ಧೃತರಾಷ್ಟ್ರ, ಕುಹಕ, ಕುಶಕ, ವಿರಜ, ಧಾರಣ, ಸುಬಾಹು, ಮುಖರ, ಜಯ, ಬಧಿರ, ವಿಕುಂಡ, ವಿರಥ, ಸುರಥ;

ಏತೇ ಚಾನ್ಯೇ ಚ ಬಹವಃ ಕಾಶ್ಯಪಸ್ಯಾತ್ಮಜಾಃ ಸ್ಮೃತಾಃ ।
ಮಾತಲೇ ಪಶ್ಯ ಯದ್ಯತ್ರ ಕಶ್ಚಿತ್ ತೇ ರೋಚತೇ ವರಃ ॥೧೭೭॥

ಇವರು ಮತ್ತು ಇನ್ನೂ ಅನೇಕ ಸರ್ಪಗಳು ಕಾಶ್ಯಪರ ಮಕ್ಕಳೆಂದು ಪ್ರಸಿದ್ಧವಾಗಿವೆ. ಎಲೈ ಮಾತಲಿಯೇ, ನಿನಗೆ ಇಲ್ಲಿ ಯಾವನಾದರೂ ವರನು ಇಷ್ಟನಾಗುವುದಾದರೆ ನೋಡು.

ಕಣ್ವಃ

ಮಾತಲಿಸ್ತ್ವೇವಮವ್ಯಗ್ರಃ ಸತತಂ ಸನ್ನಿರೀಕ್ಷ್ಯ ವೈ ।
ಪಪ್ರಚ್ಛ ನಾರದಂ ತತ್ರ ಪ್ರೀತಿಮಾನಿವ ಚಾಭವತ್ ॥೧೮೮॥

ಕಣ್ವ– ಮಾತಲಿಯು ಸತತವಾಗಿ ಅವಧಾನದಿಂದ (ಲಕ್ಷ್ಯ ವಹಿಸಿ)ಚೆನ್ನಾಗಿ ನೋಡಿ ಸಂತೋಷಗೊಂಡವನಾಗಿ ಅಲ್ಲಿ ನಾರದರನ್ನು ಕೇಳಿದನು.

ಮಾತಲಿಃ

ಸ್ಥಿತೋ ಯ ಏಷ ಪುರತಃ ಕೌರವ್ಯಸ್ಯಾರ್ಯಕಸ್ಯ ತು ।
ದ್ಯುತಿಮಾನ್ ದರ್ಶನೀಯಶ್ಚ ಕಸ್ಯೈಷ ಕುಲನಂದನಃ ॥೧೯೯॥

ಮಾತಲಿ– ಕೌರವ್ಯ ಮತ್ತು ಆರ್ಯಕ ನಾಗಗಳ ಮುಂದೆ ಇರುವ ಕಾಂತಿಮಂತನೂ ಮತ್ತು ಸುಂದರನೂ ಆದ ಈ ನಾಗನು ಯಾರ ಕುಲಕ್ಕೆ ಸಂತೋಷ ಕೊಡುವವನಾಗಿದ್ದಾನೆ?

ಕಃ ಪಿತಾ ಜನನೀ ಚಾಸ್ಯ ಕತಮಸ್ಯೈಷ ಭೋಗಿನಃ ।
ವಂಶಸ್ಯ ಕಸ್ಯೈಷ ಮಹಾನ್ ಕೇತುಭೂತ ಇವ ಸ್ಥಿತಃ ॥೨೦೦॥

ಇವರ ತಂದೆ ಯಾರು? ತಾಯಿ ಯಾರು? ಇವನು ಯಾವ ವಂಶಕ್ಕೆ ಸೇರಿದವನು? ಇವನು ಯಾವ ವಂಶಕ್ಕೆ ಮಹಾಧ್ವಜದಂತೆ ಇದ್ದಾನೆ?

ಪ್ರಣಿಧಾನೇನ ಧೈರ್ಯೇಣ ರೂಪೇಣ ವಚಸಾ ಚ ಮೇ ।
ಮನಃ ಪ್ರವಿಷ್ಟೋ ದೇವರ್ಷೇ ಗುಣಕೇಶ್ಯಾಃ ಪತಿರ್ವರಃ ॥೨೧೧॥

ಎಲೈ ದೇವರ್ಷಿಯೇ, ಇವನು ತನ್ನ ಅವಧಾನದಿಂದ ಧೈರ್ಯದಿಂದ ರೂಪದಿಂದ ಮತ್ತು ವಯಸ್ಸಿನಿಂದ ನನ್ನ ಮನಸ್ಸನ್ನು ಪ್ರವೇಶಿಸಿದ್ದಾನೆ. ಇವನು ಗುಣಕೇಶಿಗೆ ಯೋಗ್ಯವಾದ ಪತಿಯಾಗುವನು.

ಕಣ್ವಃ

ಮಾತಲಿಂ ಪ್ರೀತಮನಸಂ ದೃಷ್ಟ್ವಾ ಸುಮುಖದರ್ಶನಾತ್ ।
ನಿವೇದಯಾಮಾಸ ತದಾ ಮಾಹಾತ್ಮ್ಯಂ ಜನ್ಮ ಕರ್ಮ ಚ ॥೨೨॥

ಕಣ್ವ– ಸುಮುಖನ ದರ್ಶನದಿಂದ ಸಂತೋಷಗೊಂಡ ಮನಸ್ಸುಳ್ಳ ಮಾತಲಿಯನ್ನು ನೋಡಿ ನಾರದರು ಆಗ ಅವನ ಮಹಿಮೆಯನ್ನೂ ಮತ್ತು ಜನ್ಮಕರ್ಮಗಳನ್ನೂ ಹೇಳಿದರು.

ನಾರದಃ

ಐರಾವತಕುಲೇ ಜಾತಃ ಸುಮುಖೋ ನಾಮ ನಾಗರಾಟ್ ।
ಆರ್ಯಕಸ್ಯ ಮತಃ ಪೌತ್ರೋ ದೌಹಿತ್ರೋ ಮೇನಕಸ್ಯ ಚ ॥೨೩॥

ನಾರದ– ಇವನು ಐರಾವತ ಕುಲದಲ್ಲಿ ಜನಿಸಿದ ಸುಮುಖನೆಂಬ ನಾಗರಾಜ. ಆರ್ಯಕನ ಪೌತ್ರನೂ ಮತ್ತು ಮೇನಕನ ದೌಹಿತ್ರನೂ ಆಗಿದ್ದಾನೆ.

ಏತಸ್ಯ ಹಿ ಪಿತಾ ನಾಗಃ ಚಿಕುರೋ ನಾಮ ಮಾತಲೇ ।
ನಚಿರಾದ್ ವೈನತೇಯೇನ ಪಂಚತ್ವಮುಪಪಾದಿತಃ ॥೨೪॥

ಎಲೈ ಮಾತಲಿಯೇ, ಇವನ ತಂದೆಯಾದ ಚಿಕುರ ಎಂಬ ನಾಗನು ಈಚೆಗೆ ಗರುಡನಿಂದ ಮರಣವನ್ನು ಹೊಂದಿದ್ದಾನೆ.

ಕಣ್ವಃ

ತತೋಽಬ್ರವೀತ್ ಪ್ರೀತಮನಾ ಮಾತಲಿರ್ನಾರದಂ ವಚಃ ॥೨೫॥

ಏಷ ಮೇ ರುಚಿತಸ್ತಾತ ಜಾಮಾತಾ ಭುಜಗೋತ್ತಮಃ ॥೨೬॥

ಕ್ರಿಯತಾಮತ್ರ ಯತ್ನೋ ಹಿ ಪ್ರೀತಿಮಾನಸ್ಮ್ಯನೇನ ವೈ ।
ಅಸ್ಯ ನಾಗಪತೇರ್ದಾತುಂ ಪ್ರಿಯಾಂ ದುಹಿತರಂ ಮುನೇ ॥೨೭॥

ಕಣ್ವ– ಆಗ ಮಾತಲಿಯು ಸಂತೋಷಗೊಂಡ ಮನಸ್ಸುಳ್ಳವನಾಗಿ ನಾರದರನ್ನು ಕುರಿತು ಎಲೈ ಪ್ರೀತಿಪಾತ್ರನೇ, ಈ ಭುಜಗಶ್ರೇಷ್ಠನು ನನಗೆ ಅಳಿಯನಾಗಿ ಇಷ್ಟವಾಗುತ್ತಾನೆ. ಇವನನ್ನು ನೋಡಿ ನಾನು ಸಂತೋಷಗೊಂಡಿದ್ದೇನೆ. ಎಲೈ ಋಷಿಯೇ, ಇವನಿಗೆ ನನ್ನ ಮಗಳನ್ನು ಕೊಡಲು ಈ ವಿಷಯದಲ್ಲಿ ಪ್ರಯತ್ನವನ್ನು ಮಾಡು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ದ್ವ್ಯಧಿಕಶತತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ತ್ರಯಸ್ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಎರಡನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರಮೂರನೆಯ ಅಧ್ಯಾಯ

ಸುಮುಖನಿಗೆ ಗರುಡನಿಂದ ಒದಗಲಿರುವ ಪ್ರಾಣಭಯವನ್ನು ತಿಳಿದು ವಿಷ್ಣುಪ್ರೇರಣೆಯಂತೆ ಇಂದ್ರನಿಂದ ಅವನಿಗೆ ದೀರ್ಘಾಯುಷ್ಯ ವರದಾನ ಮತ್ತು ಸುಮುಖ-ಗುಣಕೇಶಿಯರ ವಿವಾಹ.

ಕಣ್ವಃ

ಮಾತಲೇರ್ವಚನಂ ಶ್ರುತ್ವಾ ನಾರದೋ ಮುನಿಸತ್ತಮಃ ।
ಅಬ್ರವೀನ್ನಾಗರಾಜಾನಮಾರ್ಯಕಂ ಕುರುನಂದನ ॥೧॥

ಕಣ್ವ– ಎಲೈ ಕುರುನಂದನನೇ, ಮಾತಲಿಯ ಮಾತುಗಳನ್ನು ಕೇಳಿದ ಮುನಿಶ್ರೇಷ್ಠನಾದ ನಾರದರು ನಾಗರಾಜನಾದ ಆರ್ಯಕನನ್ನು ಕುರಿತು ಮಾತನಾಡಿದರು.

ಸೂತೋಽಯಂ ಮಾತಲಿರ್ನಾಮ ಶಕ್ರಸ್ಯ ದಯಿತಃ ಸುಹೃತ್ ।
ಶುಚಿಃ ಶೀಲಗುಣೋಪೇತಃ ತೇಜಸ್ವೀ ವೀರ್ಯವಾನ್ ಬಲೀ ॥೨॥

ಈ ಮಾತಲಿ ಎಂಬ ಸೂತನು ಇಂದ್ರನ ಪ್ರೀತಿಪಾತ್ರನಾದವನು ಮತ್ತು ಸ್ನೇಹಿತನಾದವನು. ಇವನು ಶುಚಿ, ಶೀಲಗುಣೋಪೇತನಾದವನು, ತೇಜಸ್ವಿ ವೀರ್ಯವಂತ ಮತ್ತು ಬಲಿಷ್ಠನಾದವನು.

ಶಕ್ರಸ್ಯಾಯಂ ಸಖಾ ಚೈವ ಮಂತ್ರೀ ಸಾರಥಿರೇವ ಚ ।
ಅಲ್ಪಾಂತರಪ್ರಭಾವಶ್ಚ ವಾಸವೇನ ಸಮೋ ರಣೇ ॥೩॥

ಇವನು ಇಂದ್ರನಿಗೆ ಸ್ನೇಹಿತ, ಮಂತ್ರಿ ಮತ್ತು ಸಾರಥಿಯೂ ಕೂಡ. ಇಂದ್ರನಿಂದ ಸ್ವಲ್ಪವೇ ಕಡಿಮೆಯಾದ ಪ್ರಭಾವವುಳ್ಳವನು. ಯುದ್ಧದಲ್ಲಿ ಇಂದ್ರನಿಗೆ ಸಮಾನನಾದವನು.

ಅಯಂ ಹರಿಸಹಸ್ರೇಣ ಯುಕ್ತಂ ಚೈಂದ್ರಂ ರಥೋತ್ತಮಮ್ ।
ದೇವಾಸುರೇಷು ಯುದ್ಧೇಷು ಮನಸೈವ ನಿಯಚ್ಛತಿ ॥೪॥

ಇವನು ಸಹಸ್ರ ಅಶ್ವಗಳಿಂದ ಕೂಡಿದ ಇಂದ್ರನ ಶ್ರೇಷ್ಠವಾದ ರಥವನ್ನು ದೇವಾಸುರ ಯುದ್ಧಗಳಲ್ಲಿ ಮನಸ್ಸಿನಿಂದಲೇ ನಿಯಂತ್ರಿಸುತ್ತಾನೆ.

ಅನೇನ ವಿಜಿತಾನಶ್ವೈಃ ದೋರ್ಭ್ಯಾಂ ಜಯತಿ ವಾಸವಃ ।
ಅನೇಹ ಪ್ರಹೃತೇ ಪೂರ್ವಂ ಬಲಭಿತ್ ಪ್ರಹರತ್ಯುತ ॥೫॥

ಇವನು ಮೊದಲು ಅಶ್ವಗಳಿಂದ ಜಯಿಸಿದ ಮೇಲೆ ಇಂದ್ರನು ಬಾಹುಗಳಿಂದ ಜಯಿಸುತ್ತಾನೆ. ಇವನು ಮೊದಲು ಪ್ರಹಾರವನ್ನು ಮಾಡಿದ ಮೇಲೆ ಇಂದ್ರನು ಪ್ರಹಾರವನ್ನು ಮಾಡುತ್ತಾನೆ.

ಅಸ್ಯ ಕನ್ಯಾ ವರಾರೋಹಾ ರೂಪೇಣಾಸದೃಶೀ ಭುವಿ ।
ಸತ್ವಶೀಲಗುಣೋಪೇತಾ ಗುಣಕೇಶೀತಿ ವಿಶ್ರುತಾ ॥೬॥

ಇವನ ಮಗಳು ಸುಂದರಿಯೂ, ಲೋಕದಲ್ಲಿ ಅಸದೃಶವಾದ ರೂಪವುಳ್ಳವಳೂ, ಧೈರ್ಯಶೀಲ ಮೊದಲಾದ ಗುಣಗಳಿಂದ ಕೂಡಿದವಳೂ ಆಗಿ ಗುಣಕೇಶಿಯೆಂಬ ಹೆಸರಿನಿಂದ ಪ್ರಖ್ಯಾತಳಾಗಿದ್ದಾಳೆ.

ತಸ್ಯಾಸ್ಯ ಯತ್ನಾಚ್ಚರತಃ ತ್ರೈಲೋಕ್ಯಮಮರದ್ಯುತೇಃ ।
ಸುಮುಖೋ ಭವತಃ ಪೌತ್ರೋ ರೋಚತೇ ದುಹಿತುಃ ಪತಿಃ ॥೭॥

ಅವಳ ಸಲುವಾಗಿ ಮೂರುಲೋಕಗಳನ್ನು ಪ್ರಯತ್ನಪೂರ್ವಕವಾಗಿ ಸಂಚರಿಸುತ್ತಿರುವ ದೇವಕಾಂತಿಯುಳ್ಳ ಈ ಮಾತಲಿಗೆ ನಿನ್ನ ಪೌತ್ರನಾದ ಸುಮುಖನು ತನ್ನ ಮಗಳಿಗೆ ಪತಿಯಾಗಿ ಇಷ್ಟವಾಗಿದ್ದಾನೆ.

ಯದಿ ತೇ ರೋಚತೇ ಸೌಮ್ಯ ಭುಜಗೋತ್ತಮ ಮಾಚಿರಮ್ ।
ಕ್ರಿಯತಾಮಾರ್ಯಕ ಕ್ಷಿಪ್ರಂ ಬುದ್ಧಿಃ ಕನ್ಯಾಪರಿಗ್ರಹೇ ॥೮॥

ಎಲೈ ಭುಜಗಶ್ರೇಷ್ಠನಾದ ಆರ್ಯಕನೇ, ಸೌಮ್ಯನೇ, ನಿನಗೆ ಈ ಸಂಬಂಧವು ಇಷ್ಟವಾಗುವುದಾದರೆ ಕನ್ಯೆಯನ್ನು ಸ್ವೀಕಾರ ಮಾಡುವ ವಿಷಯದಲ್ಲಿ ಶೀಘ್ರವಾಗಿ ನಿಶ್ಚಯವನ್ನು ಮಾಡುವವನಾಗು.

ಯಥಾ ವಿಷ್ಣುಕುಲೇ ಲಕ್ಷ್ಮೀಃ ಯಥಾ ಸ್ವಾಹಾ ವಿಭಾವಸೌ ।
ಕುಲೇ ತವ ತಥೈವಾಸ್ತು ಗುಣಕೇಶೀ ಸುಮಧ್ಯಮಾ ॥೯॥

ವಿಷ್ಣುವಿನ ಮನೆಯಲ್ಲಿ ಹೇಗೆ ಲಕ್ಷ್ಮಿಯೋ, ಅಗ್ನಿಯ ಜೊತೆಯಲ್ಲಿ ಹೇಗೆ ಸ್ವಾಹಾ ದೇವಿಯೋ ಹಾಗೆ ಸುಂದರಿಯಾದ ಗುಣಕೇಶಿಯು ನಿನ್ನ ಕುಲದಲ್ಲಿ ಇರಲಿ.

ಪೌತ್ರಸ್ಯಾರ್ಥೇ ಭವಾಂಸ್ತಸ್ಮಾದ್ ಗುಣಕೇಶೀಂ ಪ್ರತೀಚ್ಛತು ।
ಸದೃಶೀಂ ಪ್ರತಿರೂಪಸ್ಯ ವಾಸವಸ್ಯ ಶಚೀಮಿವ ॥೧೦॥

ಇಂದ್ರನಿಗೆ ಪ್ರತಿರೂಪದಂತಿರುವ ನಿನ್ನ ಪೌತ್ರನಿಗೆ ಶಚಿಗೆ ಸದೃಶಳಾದ ಗುಣಕೇಶಿಯನ್ನು ನೀನು ಸ್ವೀಕರಿಸುವವನಾಗು.

ಪಿತೃಹೀನಮಪಿ ಹ್ಯೇನಂ ಗುಣತೋ ವರಯಾಮಹೇ ।
ಬಹುಮಾನಾಚ್ಚ ಭವತಃ ತಥೈವೈರಾವತಸ್ಯ ಚ ॥೧೧॥

ಅವನು ಪಿತೃಹೀನನಾದರೂ ಅವನ ಗುಣಗಳ ಕಾರಣದಿಂದ ಮತ್ತು ನಿನ್ನ ಮತ್ತು ಐರಾವತನ ಮೇಲಿನ ಗೌರವದಿಂದ ಅವನನ್ನು ವರಿಸುತ್ತಿದ್ದೇವೆ.

ಸುಮುಖಸ್ಯ ಗುಣೈಶ್ಚೈವ ಶೀಲಶೌಚದಮಾದಿಭಿಃ ।
ಅಭಿಗಮ್ಯ ಸ್ವಯಂ ಕನ್ಯಾಮಯಂ ದಾತುಂ ಸಮುದ್ಯತಃ ॥೧೨॥

ಮಾತಲೇಸ್ತಸ್ಯ ಸಮ್ಮಾನಂ ಕರ್ತುಮರ್ಹೋ ಭವಾನಪಿ ॥೧೩॥

ಸುಮುಖನ ಶೀಲ, ಶೌಚ, ದಮ ಮೊದಲಾದ ಗುಣಗಳ ಕಾರಣದಿಂದ ಈ ಮಾತಲಿಯು ಬಂದು ತಾನೇ ಕನ್ಯೆಯನ್ನು ಕೊಡಲು ಉದ್ಯುಕ್ತನಾಗಿದ್ದಾನೆ. ನೀನಾದರೂ ಈ ಮಾತಲಿಗೆ ಸನ್ಮಾನವನ್ನು ಮಾಡಲು ಅರ್ಹನಾಗಿದ್ದೀಯೆ.

ಕಣ್ವಃ

ಸ ತು ದೀನಃ ಪ್ರಹೃಷ್ಟಶ್ಚ ಪ್ರಾಹ ನಾರದಮಾರ್ಯಕಃ ।
ಮ್ರಿಯಮಾಣೇ ತಥಾ ಪೌತ್ರೇ ಪುತ್ರೇ ಚ ನಿಧನಂ ಗತೇ ॥೧೪॥

ಕಣ್ವ– ತನ್ನ ಪುತ್ರನು ನಿಧನವನ್ನು ಹೊಂದಿ ಪೌತ್ರನು ಹೀಗೆ ವರಿಸಲ್ಪಡುತ್ತಿರಲು ಆರ್ಯಕನು ಸಂತುಷ್ಟನೂ ಮತ್ತು ದುಃಖಿತನೂ ಆಗಿ ನಾರದರನ್ನು ಕುರಿತು ಮಾತನಾಡಿದನು.

ನ ಮೇ ನೈತದ್ ಬಹುಮತಂ ಮಹರ್ಷೇ ವಚನಂ ತವ ।
ಸಖಾ ಶಕ್ರಸ್ಯ ಸಂಯುಕ್ತಃ ಕಸ್ಯಾಯಂ ನೇಪ್ಸಿತೋ ಭವೇತ್ ॥೧೫॥

ಕಾರಣಸ್ಯ ತು ದೌರ್ಬಲ್ಯಾತ್ ಚಿಂತಯಾಮಿ ಮಹಾಮುನೇ ॥೧೬॥

ಎಲೈ ಮಹರ್ಷಿಗಳೇ, ನಿಮ್ಮ ಮಾತುಗಳು ನನಗೆ ಇಷ್ಟವಿಲ್ಲ ಎಂದು ಏನೂ ಅಲ್ಲ. ಇಂದ್ರನ ಸ್ನೇಹಿತನ ಜೊತೆ ಈ ಸಂಬಂಧವು ಯಾರಿಗೆ ಇಷ್ಟವಾಗುವುದಿಲ್ಲ? ಆದರೆ ಮಹಾಮುನಿಗಳೇ, ಕಾರಣವು ದುರ್ಬಲವಾಗಿರುವುದರಿಂದ ನಾನು ಚಿಂತಿಸುತ್ತಿದ್ದೇನೆ.

ಅಸ್ಯ ದೇಹಕರಸ್ತಾತ ಮಮ ಪುತ್ರೋ ಮಹಾಮುನೇ ।
ಭಕ್ಷಿತೋ ವೈನತೇಯೇನ ದುಃಖಾರ್ತಾಸ್ತೇನ ವೈ ವಯಮ್ ॥೧೭॥

ಎಲೈ ಪ್ರೀತಿಪಾತ್ರರಾದ ಮಹರ್ಷಿಗಳೇ, ಇವನ ತಂದೆಯಾದ ನನ್ನ ಪುತ್ರನು ಗರುಡನಿಂದ ಭಕ್ಷಿಸಲ್ಪಟ್ಟಿದ್ದಾನೆ. ಅದರಿಂದ ನಾವು ದುಃಖಾರ್ತರಾಗಿದ್ದೇವೆ.

ಪುನರೇವ ಚ ತೇನೋಕ್ತಂ ವೈನತೇಯೇನ ಗಚ್ಛತಾ ।
ಮಾಸೇನಾನ್ಯೇನ ಸುಮುಖಂ ಭಕ್ಷಯಿಷ್ಯ ಇತಿ ಪ್ರಭೋ ॥೧೮॥

ಪ್ರಭುಗಳೇ, ಅದೂ ಅಲ್ಲದೆ ಗರುಡನು ಹೋಗುತ್ತಾ ಇನ್ನು ಒಂದು ತಿಂಗಳಿನಲ್ಲಿ ನಾನು ಸುಮುಖನನ್ನು ಭಕ್ಷಿಸುವೆನು ಎಂದೂ ಹೇಳಿದ್ದಾನೆ.

ಧ್ರುವಂ ತಥಾ ತದ್ ಭವಿತಾ ಜಾನೀಮಸ್ತಸ್ಯ ನಿಶ್ಚಯಮ್ ।
ತೇನ ಹರ್ಷಃ ಪ್ರನಷ್ಟೋ ಮೇ ಸುಪರ್ಣವಚನೇನ ಚ ॥೧೯॥

ಅವನ ಮಾತು ಖಂಡಿತವಾಗಿ ನಡೆಯುವುದು. ಅವನ ನಿರ್ಧಾರವನ್ನು ನಾವು ತಿಳಿದಿದ್ದೇವೆ. ಗರುಡನ ಆ ಮಾತುಗಳಿಂದ ನನ್ನ ಸಂತೋಷವು ನಷ್ಟವಾಗಿದೆ.

ಕಣ್ವಃ

ಆರ್ಯಕಸ್ಯ ವಚಃ ಶ್ರುತ್ವಾ ಗರುಡಂ ಪ್ರತಿ ಭಾಷಿತಮ್ ।
ಮಾತಲಿಸ್ತ್ವಬ್ರವೀದೇನಂ ಬುದ್ಧಿರತ್ರ ಕೃತಾ ಮಯಾ ॥೨೦॥

ಜಾಮಾತೃಭಾವೇನ ವೃತಃ ಸುಮುಖಸ್ತವ ಪುತ್ರಜಃ ॥೨೧॥

ಸೋಽಯಂ ಮಯಾ ಚ ಸಹಿತೋ ನಾರದೇನ ಚ ಪನ್ನಗಃ ।
ತ್ರಿಲೋಕೇಶಂ ಸುರಪತಿಂ ಗತ್ವಾ ಪಶ್ಯತು ವಾಸವಮ್ ॥೨೨॥

ಕಣ್ವ– ಗರುಡನ ವಿಷಯದಲ್ಲಿ ಆರ್ಯಕನು ಆಡಿದ ಮಾತುಗಳನ್ನು ಕೇಳಿ ಮಾತಲಿಯು ಅವನನ್ನು ಕುರಿತು ಈ ವಿಷಯದಲ್ಲಿ ನಾನು ಯೋಚನೆಯನ್ನು ಮಾಡಿದ್ದೇನೆ. ನಿನ್ನ ಪೌತ್ರನಾದ ಸುಮುಖನನ್ನು ನಾನು ಅಳಿಯನಾಗಿ ವರಿಸಿದ್ದೇನೆ. ಅಂತಹ ಸುಮುಖನು ನನ್ನ ಮತ್ತು ನಾರದರ ಜೊತೆಯಲ್ಲಿ ಹೋಗಿ ಸ್ವರ್ಗಪತಿಯೂ, ತ್ರಿಲೋಕೇಶನೂ ಆದ ಇಂದ್ರನನ್ನು ನೋಡಲಿ ಎಂದು ಹೇಳಿದನು.

ಶೇಷೇಣೈವಾಸ್ಯ ಕಾರ್ಯಸ್ಯ ಪ್ರಾಪ್ತಂ ಸ್ಯಾನ್ಮಹದಾಯುಷಃ ।
ಸುಪರ್ಣಸ್ಯ ವಿಘಾತೇ ಚ ಪ್ರಯತಿಷ್ಯಾಮಿ ಸತ್ತಮ ॥೨೩॥

ಎಲೈ ಸಜ್ಜನರಲ್ಲಿ ಶ್ರೇಷ್ಠನೇ, ದೇವತಾಕಾರ್ಯವಿಶೇಷವು ಇರುವುದರಿಂದ ಇಂದ್ರನ ಅನುಗ್ರಹದಿಂದ ಇವನು ದೊಡ್ಡ ಆಯುಸ್ಸನ್ನು ಪಡೆಯುವನು. ಗರುಡನ ಸಂಕಲ್ಪವನ್ನು ವಿಘಾತಗೊಳಿಸುವುದಕ್ಕೆ ನಾನು ಪ್ರಯತ್ನಪಡುವೆನು.

ಸುಮುಖಶ್ಚ ಮಯಾ ಸಾರ್ಧಂ ದೇವೇಶಮಭಿಗಚ್ಛತು ।
ಕಾರ್ಯಸಂಸಾಧನಾರ್ಥಾಯ ಸ್ವಸ್ತಿ ತೇಽಸ್ತು ಭುಜಂಗಮ ॥೨೪॥

ಸುಮುಖನು ನನ್ನ ಜೊತೆಯಲ್ಲಿ ಕಾರ್ಯವನ್ನು ಸಾಧಿಸುವುದಕ್ಕಾಗಿ ದೇವೇಂದ್ರನ ಬಳಿಗೆ ಬರಲಿ. ಎಲೈ ಭುಜಂಗಮನೇ, ನಿನಗೆ ಮಂಗಳವಾಗಲಿ (ಎಂದು ಹೇಳಿದನು).

ಆರ್ಯಕೇಣಾಭ್ಯನುಜ್ಞಾತಾ ಗಮ್ಯತಾಮಿತಿ ಭಾರತ ॥೨೫॥

ತತಸ್ತೇ ಸುಮುಖಂ ಗೃಹ್ಯ ಸರ್ವ ಏವ ಮಹೌಜಸಃ ।
ದದೃಶುಃ ಶಕ್ರಮಾಸೀನಂ ದೇವರಾಜಂ ಮಹಾದ್ಯುತಿಮ್ ॥೨೬॥

ಎಲೈ ಭಾರತನೇ, ಆರ್ಯಕನಿಂದ ಹೋಗಿ ಬನ್ನಿ ಎಂದು ಅನುಜ್ಞೆಯನ್ನು ಪಡೆದು ಮಹಾಸಮರ್ಥರಾದ ನಾರದ ಮತ್ತು ಮಾತಲಿಗಳು ಸುಮುಖನನ್ನು ಕರೆದುಕೊಂಡು ಎಲ್ಲರೂ ಇಂದ್ರನ ಬಳಿಗೆ ಬಂದು ಆಸೀನನಾಗಿದ್ದ ಮಹಾದ್ಯುತಿಯುಳ್ಳ ದೇವರಾಜನನ್ನು ನೋಡಿದರು.

ಸಂಗತ್ಯಾ ತತ್ರ ಭಗವಾನ್ ವಿಷ್ಣುರಾಸೀಚ್ಚತುರ್ಭುಜಃ ।
ತತಸ್ತತ್ ಸರ್ವಮಾಚಖ್ಯೌ ನಾರದೋ ಮಾತಲಿಂ ಪ್ರತಿ ॥೨೭॥

ತಮ್ಮನಾದ ಕಾರಣದಿಂದ ಚತುರ್ಭುಜನಾದ ಭಗವಂತನಾದ ವಿಷ್ಣುವು ಅಲ್ಲಿದ್ದನು. ಆಗ ನಾರದರು ಮಾತಲಿಯ ವಿಷಯವನ್ನೆಲ್ಲಾ ಅವರಿಗೆ ಹೇಳಿದರು.

ತತಃ ಪುರಂದರಂ ವಿಷ್ಣುರುವಾಚ ಭುವನೇಶ್ವರಮ್ ॥೨೮॥

ಅಮೃತಂ ದೀಯತಾಮಸ್ಯೈ ಕ್ರಿಯತಾಮಮರೈಃ ಸಮಃ ॥೨೯॥

ಆಗ ತ್ರಿಲೋಕೇಶ್ವರನಾದ ಪುರಂದರನನ್ನು ಕುರಿತು ವಿಷ್ಣುವು, ಇವನಿಗೆ ಅಮೃತವನ್ನು ಕೊಟ್ಟು ದೇವತೆಗಳಿಗೆ ಸಮಾನನನ್ನಾಗಿ ಮಾಡು.

ಮಾತಲಿರ್ನಾರದಶ್ಚೈವ ಸುಮುಖಶ್ಚೈವ ವಾಸವ ।
ಲಭಂತಾಂ ಭವತಃ ಕಾಮಾತ್ ಕಾಮಮೇತಂ ಯಥೇಪ್ಸಿತಮ್ ॥೩೦॥

ಎಲೈ ಇಂದ್ರನೇ, ಮಾತಲಿ, ನಾರದ ಮತ್ತು ಸುಮುಖರು ನಿನ್ನಿಂದ ಸಂತೋಷ ಪೂರ್ವಕವಾಗಿ ಈ ತಮ್ಮ ಇಷ್ಟಾರ್ಥವನ್ನು ಪಡೆಯಲಿ (ಎಂದು ಹೇಳಿದನು).

ಕಣ್ವಃ

ಪುರಂದರೋಽಥ ಸಂಚಿತ್ಯ ವೈನತೇಯಪರಾಕ್ರಮಮ್ ।
ವಿಷ್ಣುಮೇವಾಬ್ರವೀದೇನಂ ಭವಾನೇವ ದದಾತ್ವಿತಿ ॥೩೧॥

ಕಣ್ವ– ಅನಂತರ ಪುರಂದರನು ಗರುಡನ ಪರಾಕ್ರಮವನ್ನು ಚಿಂತಿಸಿ ನೀನೇ ವರವನ್ನು ಕೊಡುವವನಾಗು ಎಂದು ವಿಷ್ಣುವಿಗೆ ಹೇಳಿದನು.

ಶ್ರೀಭಗವಾನ್

ಈಶಸ್ತ್ವಂ ಸರ್ವಲೋಕಾನಾಂ ಚರಾಣಾಮಚರಾಶ್ಚ ಯೇ ।
ತ್ವಯಾ ದತ್ತಮದತ್ತಂ ಕಃ ಕರ್ತುಮುತ್ಸಹತೇ ವಿಭೋ ॥೩೨॥

ಶ್ರೀಭಗವಾನ್– ಚರಾಚರವಾದ ಎಲ್ಲ ಲೋಕಗಳಿಗೂ ನೀನೇ ಪ್ರಭುವಾದವನು. ಎಲೈ ವಿಭುವೇ, ನೀನು ಕೊಟ್ಟಿರುವುದನ್ನು ಕೊಟ್ಟಿಲ್ಲ ಎಂದು ಮಾಡುವವರು ಯಾರು?

ಕಣ್ವಃ

ಪ್ರಾದಾತ್ ಶಕ್ರಸ್ತತಸ್ತಸ್ಮೈ ಪನ್ನಗಾಯಾಯುರುತ್ತಮಮ್ ।
ನ ತ್ವೇನಮಮೃತಪ್ರಾಶಂ ಚಕಾರ ಬಲವೃತ್ರಹಾ ॥೩೩॥

ಕಣ್ವ– ಅನಂತರ ಇಂದ್ರನು ಆ ನಾಗನಿಗೆ ಶ್ರೇಷ್ಠವಾದ ಆಯುಸ್ಸನ್ನು ಕೊಟ್ಟನು. ಆದರೆ ಬಲವೃತ್ರಹಂತಕನಾದ ಅವನು ಅವನಿಗೆ ಅಮೃತಪ್ರಾಶನವನ್ನು ಮಾಡಿಸಲಿಲ್ಲ.

ಲಬ್ಧ್ವಾ ವರಂ ತು ಸುಮುಖಃ ಸುಮುಖಃ ಸಂಬಭೂವ ಹ ।
ಕೃತದಾರೋ ಯಥಾಕಾಮಂ ಜಗಾಮ ಚ ಗೃಹಾನ್ ಪ್ರತಿ ॥೩೪॥

ವರವನ್ನು ಪಡೆದ ಸುಮುಖನು ಪ್ರಸನ್ನವದನನಾದನು. ವಿವಾಹವನ್ನು ಮಾಡಿಕೊಂಡು ತನ್ನ ಇಚ್ಛೆಗೆ ಅನುಗುಣವಾಗಿ ತನ್ನ ಮನೆಗೆ ಹೋದನು.

ನಾರದಸ್ತ್ವಾರ್ಯಕಶ್ಚೈವ ಕೃತಕಾರ್ಯೌ ಮುದಾ ಯುತೌ ।
ಪ್ರತಿಜಗ್ಮತುರಭ್ಯರ್ಚ್ಯ ದೇವರಾಜಂ ಮಹಾದ್ಯುತಿಮ್ ॥೩೫॥

ನಾರದ ಮತ್ತು ಆರ್ಯಕರಿಬ್ಬರೂ ಕೃತಕೃತ್ಯರಾಗಿ ಸಂತೋಷದಿಂದ ಕೂಡಿ ಮಹಾದ್ಯುತಿಯುಳ್ಳ ದೇವೇಂದ್ರನನ್ನು ಪೂಜಿಸಿ ಹೊರಟುಹೋದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ತ್ರ್ಯಧಿಕಶತತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ಚತುಸ್ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರಮೂರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರನಾಲ್ಕನೆಯ ಅಧ್ಯಾಯ

ಸುಮುಖನ ನಿವೃತ್ತ್ಯದಿಂದ ಗರುಡನ ಮಾನಭಂಗವನ್ನು ಹೇಳಿ, ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳುವಂತೆ ಕಣ್ವರ ಪ್ರೇರಣೆ, ದುರ್ಯೋಧನನು ತೊಡೆಯನ್ನು ತಟ್ಟುತ್ತಿರಲು ಊರುಭಂಗ ಶಾಪದಾನ.

ಕಣ್ವಃ

ಗರುಡಸ್ತತ್ರ ಶುಶ್ರಾವ ಯಥಾವೃತ್ತಂ ಮಹಾಬಲಃ ।
ಆಯುಃಪ್ರದಾನಂ ಶಕ್ರೇಣ ಸುಮುಖಸ್ಯ ತು ಭಾರತ ॥೧॥

ಕಣ್ವ– ಎಲೈ ಭಾರತನೇ, ಮಹಾಬಲನಾದ ಗರುಡನು ಇಂದ್ರನು ಸುಮುಖನಿಗೆ ಆಯುಸ್ಸನ್ನು ಪ್ರದಾನ ಮಾಡಿದ ವಿಷಯವನ್ನು ಸರಿಯಾಗಿ ಕೇಳಿದನು.

ಪಕ್ಷವಾತೇನ ಮಹತಾ ರುದ್ಧ್ವಾ ತ್ರಿಭುವನಂ ಖಗಃ ।
ಸುಪರ್ಣಃ ಪರಮಕ್ರುದ್ಧೋ ವಾಸವಂ ಸಮುಪಾದ್ರವತ್ ॥೨॥

ಪಕ್ಷಿಯಾದ ಗರುಡನು ತನ್ನ ರೆಕ್ಕೆಗಳ ದೊಡ್ಡ ವಾಯುವಿನಿಂದ ಮೂರು ಲೋಕಗಳನ್ನೂ ಹಿಂಸೆಗೆ ಒಳಪಡಿಸಿ ಬಹಳ ಕೋಪದಿಂದ ಇಂದ್ರನ ಬಳಿಗೆ ಬಂದನು.

ಗರುಡಃ

ಭಗವನ್ ಕಿಮಿವಾಜ್ಞಾನಾತ್ ಸುಧಾಂ ಪ್ರತಿ ಭಯೇ ಮಮ ।
ಕಾಮಕಾರವರಂ ದತ್ತ್ವಾ ಪುನಶ್ಚಲಿತವಾನಸಿ ॥೩॥

ಗರುಡ– ಪೂಜ್ಯನೇ, ಅಮೃತದ ರಕ್ಷಣೆಯ ವಿಷಯದಲ್ಲಿ ಭಯವಿರುವಾಗ ನನಗೆ ಅದರ ರಕ್ಷಣೆಯ ಭಾರವನ್ನು ವಹಿಸಿ, ಅದಕ್ಕಾಗಿ ನನಗೆ ಇಷ್ಟಬಂದಂತೆ ಇರಬಹುದಾದ ವರವನ್ನು ಕೊಟ್ಟು, ಈಗ ಅಜ್ಞಾನದಿಂದ ಏಕೆ ಹಿಂದೆ ಸರಿಯುತ್ತಿದ್ದೀಯೆ?

ನಿಸರ್ಗಾತ್ ಸರ್ವಭೂತಾನಾಂ ಸರ್ವಭೂತೇಶ್ವರೇಣ ಮೇ ।
ಆಹಾರೋ ವಿಹಿತೋ ಧಾತ್ರಾ ಕಿಮರ್ಥಂ ವಾರ್ಯತೇ ತ್ವಯಾ ॥೪॥

ಸರ್ವಭೂತೇಶ್ವರನಾದ ಬ್ರಹ್ಮನು ಎಲ್ಲಾ ಪ್ರಾಣಿಗಳಿಗೂ ಸ್ವಾಭಾವಿಕವಾದ ಆಹಾರವನ್ನು ಕಲ್ಪಿಸಿದ್ದಾನೆ. ನನ್ನ ಆಹಾರವನ್ನು ನೀನು ಏಕೆ ತಡೆಯುತ್ತಿದ್ದೀಯೆ?

ವೃತಶ್ಚೈಷ ಮಹಾನಾಗಃ ಸ್ಥಾಪಿತಃ ಸಮಯಶ್ಚ ಮೇ ।
ಅನೇನ ಚ ಮಯಾ ದೇವ ಭರ್ತವ್ಯಃ ಪ್ರಸವೋ ಮಹಾನ್ ॥೫॥

ಈ ಸುಮುಖ ಮಹಾನಾಗನನ್ನು ನಾನು ಆಹಾರವೆಂದು ಸ್ವೀಕರಿಸಿ ಕಾಲದ ಮಿತಿಯನ್ನು ಹೇಳಿದ್ದೆನು. ಎಲೈ ದೇವನೇ, ಇವನ ದೇಹದಿಂದ ನನ್ನ ದೊಡ್ಡ ಸಂತತಿಯನ್ನು ನಾನು ರಕ್ಷಿಸಬೇಕಾಗಿದೆ.

ಏತಸ್ಮಿಂಸ್ತ್ವನ್ಯಥಾ ಭೂತೇ ನಾನ್ಯಂ ಹಿಂಸಿತುಮುತ್ಸಹೇ ।
ಕ್ರೀಡಸೇ ಕಾಮಕಾರೇಣ ದೇವರಾಜ ಯಥೇಪ್ಸಿತಮ್ ॥೬॥

ನನ್ನ ಆಹಾರವೆಂದು ಸಂಕಲ್ಪಿತವಾಗಿದ್ದ ಒಂದುಸರ್ಪವು ಹೀಗಾದರೆ ನಾನು ಬೇರೆ ಸರ್ಪವನ್ನು ಹಿಂಸಿಸಲು ಬಯಸುವುದಿಲ್ಲ. ಎಲೈ ದೇವರಾಜನೇ, ನೀನು ನಿನ್ನ ಮನಸ್ಸಿಗೆ ಬಂದಂತೆ ಆಟವಾಡುತ್ತಿದ್ದೀಯೆ.

ಸೋಽಹಂ ಪ್ರಾಣಾನ್ ವಿಮೋಕ್ಷ್ಯಾಮಿ ತಥಾ ಪರಿಜನೋ ಮಮ ।
ಯೇ ಚ ಭೃತ್ಯಾ ಮಮ ಗೃಹೇ ಪ್ರೀತಿಮಾನ್ ಭವ ವಾಸವ ॥೭॥

ನಾನು, ನನ್ನ ಬಂಧುಗಳು ಮತ್ತು ಮನೆಯಲ್ಲಿರುವ ನನ್ನ ಸೇವಕರು ಪ್ರಾಣಗಳನ್ನು ಬಿಡುವೆವು. ಎಲೈ ಇಂದ್ರನೇ, ಸಂತೋಷದಿಂದಿರು.

ಕಣ್ವಃ

ಶ್ರುತ್ವಾ ಸುಪರ್ಣವಚನಂ ಸುಮುಖೋ ದುರ್ಮುಖಸ್ತದಾ ।
ತ್ಯಕ್ತ್ವಾ ರೂಪಂ ವಿವರ್ಣಸ್ತು ಸರ್ಪರೂಪಧರೋಽಭವತ್ ॥೮॥

ಗತ್ವಾ ವಿಷ್ಣುಸಮೀಪಂ ತು ಪಾದಪೀಠಂ ಸಮಾಶ್ಲಿಷತ್ ॥೯॥

ಕಣ್ವ– ಗರುಡನ ಮಾತುಗಳನ್ನು ಕೇಳಿ ಸುಮುಖನು ದುರ್ಮುಖನಾಗಿ, ತನ್ನ ಕಾಂತಿಯನ್ನು ಕಳೆದುಕೊಂಡು ಅಲ್ಲಿಯವರೆಗೆ ಮನುಷ್ಯಪತ್ನಿಯ ಪ್ರೀತಿಗಾಗಿ ಧರಿಸಿದ್ದ ಮನುಷ್ಯರೂಪವನ್ನು ಬಿಟ್ಟು ಸರ್ಪರೂಪವನ್ನು ಧರಿಸಿದನು. ವಿಷ್ಣುವಿನ ಸಮೀಪಕ್ಕೆ ಹೋಗಿ ವಿಷ್ಣುವಿನ ಪಾದಪೀಠವನ್ನು ಆಲಿಂಗಿಸಿದನು.

ಇಂದ್ರಃ

ನ ಮತ್ಕೃತಂ ವೈನತೇಯ ನ ಮಾಂ ಕ್ರೋದ್ಧುಂ ತ್ವಮರ್ಹಸಿ ।
ದತ್ತಾಭಯಃ ಸ ಸುಮುಖೋ ವಿಷ್ಣುನಾ ಪ್ರಭವಿಷ್ಣುನಾ ॥೧೦॥

ಇಂದ್ರ– ಗರುಡನೇ, ಇದು ನಾನು ಮಾಡಿದುದಲ್ಲ. ನನ್ನ ಮೇಲೆ ಕೋಪವನ್ನು ಮಾಡಬೇಡ. ಸರ್ವಪ್ರಭುವಾದ ವಿಷ್ಣುವು ಸುಮುಖನಿಗೆ ಅಭಯವನ್ನು ನೀಡಿದ್ದಾನೆ.

ಕಣ್ವಃ

ಶ್ರುತ್ವಾ ಪುರಂದರೇಣೋಕ್ತಮುವಾಚ ವಿನತಾಸುತಃ ॥೧೧॥

ಏತಚ್ಚೈವಾಹಮರ್ಹಾಮಿ ಭೂಯಶ್ಚ ಬಲವೃತ್ರಹನ್ ।
ತ್ರೈಲೋಕ್ಯಸ್ಯೇಶ್ವರೋ ಯೋಽಹಂ ಪರಭೃತ್ಯತ್ವಮಾಗತಃ ॥೧೨॥

ಕಣ್ವ– ಇಂದ್ರನ ಮಾತುಗಳನ್ನು ಕೇಳಿ ವಿನತಾಸುತನಾದ ಗರುಡನು ಹೀಗೆ ಹೇಳಿದನು– 'ಎಲೈ ಬಲವೃತ್ರಸೂದನನೇ, ನಾನು ಇದಕ್ಕಿಂತ ಹೆಚ್ಚಿನ ಗೌರವಕ್ಕೆ ಅರ್ಹನಾಗಿದ್ದೇನೆ. ಮೂರುಲೋಕಕ್ಕೂ ಪ್ರಭುವಾದ ನಾನು ಈಗ ಇನ್ನೊಬ್ಬರಿಗೆ ಭೃತ್ಯನಾಗಬೇಕಾಗಿ ಬಂದಿತು'.

ತ್ವಯಿ ತಿಷ್ಠತಿ ದೇವೇಶ ನ ವಿಷ್ಣುಃ ಕಾರಣಂ ಮಮ ।
ತ್ರೈಲೋಕ್ಯರಾಜರಾಜ್ಯಂ ಹಿ ತ್ವಯಿ ವಾಸವ ಶಾಶ್ವತಮ್ ॥೧೩॥

ಎಲೈ ದೇವೇಶನೇ, ನೀನಿರುವಾಗ ವಿಷ್ಣುವು ನನಗೆ ಯಾವ ಲೆಕ್ಕಕ್ಕೂ ಇಲ್ಲ. ಮೂರುಲೋಕಗಳ ರಾಜ್ಯವು ಎಲೈ ಇಂದ್ರನೇ, ನಿನ್ನಲ್ಲಿ ಶಾಶ್ವತವಾಗಿ ಪ್ರತಿಷ್ಠಿತವಾಗಿದೆಯಷ್ಟೆ!

ಮಮಾಪಿ ದಕ್ಷಸ್ಯ ಸುತಾ ಜನನೀ ಕಾಶ್ಯಪಃ ಪಿತಾ ।
ಅಹಮಪ್ಯುತ್ಸಹೇ ಲೋಕಾನ್ ಸಮಂತಾದ್ ವೋಢುಮೋಜಸಾ ॥೧೪॥

ನನಗೂ ಸಹ ದಕ್ಷನ ಮಗಳಾದ ವಿನತೆಯು ತಾಯಿ ಮತ್ತು ಕಾಶ್ಯಪನು ತಂದೆ. ನಾನೂ ಸಹ ಎಲ್ಲ ಲೋಕಗಳನ್ನೂ ನನ್ನ ಸಾಮರ್ಥ್ಯದಿಂದ ರಕ್ಷಿಸಲು ಸಿದ್ಧನಾಗಿದ್ದೇನೆ.

ಅಸಹ್ಯಂ ಸರ್ವಭೂತಾನಾಂ ಮಮಾಪಿ ವಿಪುಲಂ ಬಲಮ್ ।
ಮಯಾಪಿ ಸುಮಹತ್ ಕರ್ಮ ಕೃತಂ ದೈತೇಯವಿಗ್ರಹೇ ॥೧೫॥

ನನಗೂ ಸಹ ಯಾವ ಪ್ರಾಣಿಗಳೂ ಸಹಿಸಲಾರದ ವಿಪುಲವಾದ ಬಲವಿದೆ. ದೈತ್ಯರ ನಿಗ್ರಹವನ್ನು ಮಾಡುವಾಗ ನಾನೂ ಸಹ ದೊಡ್ಡ ಕಾರ್ಯವನ್ನು ಎಸಗಿದ್ದೇನೆ.

ಶ್ರುತಶ್ರೀಃ ಶ್ರುತಸೇನಶ್ಚ ವಿವಸ್ವಾನ್ ರೋಚನಾಮುಖಿಃ ।
ಪ್ರಸಹಃ ಕಾಲಕಾಂಕ್ಷಶ್ಚ ಮಯಾಽಪಿ ದಿತಿಜಾ ಹತಾಃ ॥೧೬॥

ಶ್ರುತಶ್ರೀ, ಶ್ರುತಸೇನ, ವಿವಸ್ವಾನ್, ರೋಚನಾಮುಖ, ಪ್ರಸಹ, ಕಾಲಕಾಂಕ್ಷ ಈ ದೈತ್ಯರು ನನ್ನಿಂದಲೇ ಹತರಾಗಿದ್ದಾರೆ.

ಯತ್ತು ಧ್ವಜಸ್ಥಾನಗತೋ ಯತ್ನಾತ್ ಪರಿಚರಾಮ್ಯಹಮ್ ।
ವಹಾಮಿ ಚೈವಾನುಜಂ ತೇ ತೇನ ಮಾಮವಮನ್ಯಸೇ ॥೧೭॥

ನಾನು ನಿನ್ನ ತಮ್ಮನ ಧ್ವಜದಲ್ಲಿದ್ದು, ಅವನ ಪರಿಚಾರಿಕೆಯನ್ನು ಮಾಡಿ, ಅವನನ್ನು ಹೊರುವ ಕಾರಣದಿಂದ ನೀನು ನನಗೆ ಅವಮಾನವನ್ನು ಮಾಡುತ್ತಿದ್ದೀಯೆ.

ಕೋಽನ್ಯೋ ಭಾರಸಹೋ ಹ್ಯಸ್ತಿ ಕೋಽನ್ಯೋಽಸ್ತಿ ಬಲವತ್ತರಃ ।
ಮಯಾ ಯೋಽಹಿ ವಿಶಿಷ್ಟಃ ಸನ್ ವಹಾಮೀಮಂ ಸಬಾಂಧವಮ್ ॥

ನನಗಿಂತ ಶ್ರೇಷ್ಠನಾದ ಭಾರವನ್ನು ಹೊರುವ ಇನ್ನೊಬ್ಬ ವ್ಯಕ್ತಿಯು ಯಾವನಿದ್ದಾನೆ? ನನಗಿಂತ ಶ್ರೇಷ್ಠನಾದ ಬಲಿಷ್ಠನು ಇನ್ನೊಬ್ಬನು ಯಾವನಿದ್ದಾನೆ? ನಾನು ಪತ್ನೀ ಸಹಿತನಾದ ವಿಷ್ಣುವನ್ನು ಹೊರುತ್ತೇನಷ್ಟೆ!

ಅವಜ್ಞಾಯ ತು ಯತ್ ತೇಽಹಂ ಭೋಜನಾದವರೋಪಿತಃ ।
ತೇನ ಮೇ ಗೌರವಂ ನಷ್ಟಂ ತತ್ತಶ್ಚಾಸ್ಮಾಚ್ಚ ವಾಸವ ॥೧೯॥

ಎಲೈ ಇಂದ್ರನೇ, ನನಗೆ ಅವಮಾನವನ್ನು ಮಾಡಿ ನೀನೂ ಮತ್ತು ಈ ವಿಷ್ಣುವು ನನ್ನ ಭೋಜನವನ್ನು ಕಳೆದುದರಿಂದ ನನ್ನ ಗೌರವವು ನಷ್ಟವಾಗಿದೆ.

ಅದಿತ್ಯಾ ಯ ಇಮೇ ಜಾತಾ ಬಲವಿಕ್ರಮಶಾಲಿನಃ ।
ತ್ವಮೇಷಾಂ ಕಿಲ ಸರ್ವೇಷಾಂ ವಿಶೇಷಾದ್ ಬಲವತ್ತರಃ ॥೨೦॥

ಅದಿತಿಯಲ್ಲಿ ಜನಿಸಿದ ಈ ಬಲವಿಕ್ರಮಶಾಲಿಗಳು ಯಾರಿದ್ದಾರೆಯೋ ಅವರೆಲ್ಲರಲ್ಲಿ ನೀನೇ (ವಿಷ್ಣುವೇ) ವಿಶೇಷವಾಗಿ ಬಲಿಷ್ಠನಾದವನಷ್ಟೆ!

ಸೋಽಹಂ ಪಕ್ಷೈಕದೇಶೇನ ವಹಾಮಿ ತ್ವಾಂ ಪರಾಕ್ರಮಾತ್ ।
ವಿಮೃಶ ತ್ವಂ ಶನೈಸ್ತಾತ ಕೋ ನ್ವತ್ರ ಬಲವಾನಿತಿ ॥೨೧॥

ನಾನು ನನ್ನ ಪರಾಕ್ರಮದಿಂದ ನನ್ನ ರೆಕ್ಕೆಯ ಒಂದು ಭಾಗದಲ್ಲಿ ನಿನ್ನನ್ನು ಹೊರುತ್ತೇನೆ. ಪ್ರೀತಿಪಾತ್ರನೇ, ಇಲ್ಲಿ ಯಾರು ಬಲಿಷ್ಠರೆಂದು ನಿಧಾನವಾಗಿ ನೀನೇ ಯೋಚನೆಯನ್ನು ಮಾಡು.

ಕಣ್ವಃ

ಸ ತಸ್ಯ ವಚನಂ ಶ್ರುತ್ವಾ ಖಗಸ್ಯೋದರ್ಕದಾರುಣಮ್ ।
ಅಕ್ಷೋಭ್ಯಂ ಕ್ಷೋಭಯಂಸ್ತಾರ್ಕ್ಷ್ಯಮುವಾಚ ರಥಚಕ್ರಭೃತ್ ॥೨೨॥

ಕಣ್ವ– ಗರುಡನ ಅಹಂಕಾರದಿಂದ ಕೂಡಿದ ದಾರುಣವಾದ ಮಾತುಗಳನ್ನು ಕೇಳಿ ಅಕ್ಷೋಭ್ಯನಾದ (ಅಲುಗಾಡಿಸಲು ಸಾಧ್ಯವಿಲ್ಲದ) ಆ ಗರುಡನನ್ನು ಕ್ಷೋಭೆಗೊಳಿಸುತ್ತಾ ರಥಚಕ್ರಧರನಾದ ವಿಷ್ಣುವು ಮಾತನಾಡಿದನು.

ಶ್ರೀಭಗವಾನ್

ಗರುತ್ಮನ್ ಮನ್ಯಸೇ ತ್ಮಾನಂ ಬಲವಂತಂ ಸುದುರ್ಬಲಮ್ ।
ಅಲಮಸ್ಮತ್ಸಮಕ್ಷಂ ತೇ ಸ್ತೋತುಮಾತ್ಮಾನಮಂಡಜ ॥೨೩॥

ಶ್ರೀಭಗವಾನ್– ಎಲೈ ಗರುಡನೇ, ದುರ್ಬಲನಾದ ನೀನು ನಿನ್ನನ್ನು ಬಲಿಷ್ಠನೆಂದು ತಿಳಿದಿದ್ದೀಯೆ. ಎಲೈ ಪಕ್ಷಿಯೇ, ನನ್ನ ಎದುರಿನಲ್ಲಿ ನಿನ್ನನ್ನು ನೀನು ಸ್ತೋತ್ರ ಮಾಡಿಕೊಳ್ಳುವುದು ಸಾಕು.

ತ್ರೈಲೋಕ್ಯಮಪಿ ಮೇ ಕೃತ್ಸ್ನಮಶಕ್ತಂ ದೇಹಧಾರಣೇ ।
ಅಹಮೇವಾತ್ಮನಾऽऽತ್ಮಾನಂ ವಹಾಮಿ ತ್ವಂ ಚ ಧಾರಯೇ ॥೨೪॥

ಮೂರುಲೋಕ ಸೇರಿದರೂ ನನ್ನ ದೇಹವನ್ನು ಹೊರಲು ಸಾಧ್ಯವಾಗುವುದಿಲ್ಲ. ನಾನೇ ನನ್ನನ್ನು ಧರಿಸುತ್ತೇನೆ, ಜೊತೆಗೆ ನಿನ್ನನ್ನೂ ಧರಿಸುತ್ತೇನೆ.

ನ ತ್ವಂ ವಹಸಿ ಮಾಂ ದೋರ್ಭ್ಯಾಂ ಮೋಘಂ ತವ ವಿಕತ್ಥನಮ್ ।
ಇಮಂ ತಾವನ್ಮಮೈಕಂ ತ್ವಂ ಬಾಹುಂ ಸವ್ಯೇತರಂ ವಹ ॥೨೫॥

ಯದ್ಯೇನಂ ಧಾರಯಸ್ಯೇಕಂ ಸಫಲಂ ತೇ ವಿಕತ್ಥನಮ್ ॥೨೬॥

ನೀನು ನನ್ನನ್ನು ನಿನ್ನ ಭುಜಗಳಿಂದ ಹೊರುವುದಿಲ್ಲ. ನಿನ್ನ ಆತ್ಮಶ್ಲಾಘನೆಯು ವ್ಯರ್ಥವಾದುದು. ಮೊದಲು ಈ ನನ್ನ ದಕ್ಷಿಣಬಾಹುವನ್ನು ಎತ್ತು. ಈ ಒಂದು ಬಾಹುವನ್ನು ನೀನು ಎತ್ತಿದರೆ ನಿನ್ನ ಆತ್ಮಶ್ಲಾಘನೆಯು ಸಫಲವಾದೀತು!

ಕಣ್ವಃ

ಇತ್ಯುಕ್ತ್ವಾ ಭಗವಾಂಸ್ತಸ್ಯ ಸ್ಕಂಧೇ ಬಾಹುಂ ಸಮಾಸಜತ್ ॥೨೭॥

ಆರೋಪಿತಂ ಸಮುದ್ವೋಢುಂ ಭುಜಂ ತಂ ನಾಶಕದ್ ಬಲಾತ್ ।
ನಿಪಪಾತ ಸ ಭಾರಾರ್ತೋ ವಿಹ್ವಲೋ ನಷ್ಟಚೇತನಃ ॥೨೮॥

ಕಣ್ವ– ಹೀಗೆ ಹೇಳಿ ಭಗವಂತನು ಅವನ ಹೆಗಲ ಮೇಲೆ ತನ್ನ ಬಾಹುವನ್ನು ಇಟ್ಟನು. ಗರುಡನು ತನ್ನ ಹೆಗಲಿನ ಮೇಲೆ (ರೆಕ್ಕೆಯ ಮೇಲೆ) ಇಟ್ಟ ಆ ಬಾಹುವನ್ನು ತನ್ನ ಎಲ್ಲಾ ಬಲದಿಂದಲೂ ಎತ್ತಲು ಸಾಧ್ಯವಾಗಲಿಲ್ಲ. ಭಾರದಿಂದ ಬಳಲಿ ವಿಹ್ವಲನಾಗಿ ಪ್ರಜ್ಞಾಹೀನನಾಗಿ ಅವನು ಕೆಳಗೆ ಬಿದ್ದನು.

ಯಾವಾನ್ ಹಿ ಭಾರಃ ಕೃತ್ಸ್ನಾಯಾಃ ಪೃಥಿವ್ಯಾಃ ಪರ್ವತೈಃ ಸಹ ।
ಏಕಸ್ಯಾ ದೇಹಶಾಖಾಯಾ ತಾವದ್ ಭಾರಮಮನ್ಯತ ॥೨೯॥

ಪರ್ವತಗಳಿಂದ ಕೂಡಿದ ಸಮಸ್ತ ಪೃಥಿವಿಯ ಭಾರವು ಎಷ್ಟಿದೆಯೋ ವಿಷ್ಣುವಿನ ಒಂದೇ ಭುಜವು ಅಷ್ಟು ಭಾರವುಳ್ಳದ್ದು ಎಂದು ಅವನು ತಿಳಿದನು.

ನ ಚೈನಂ ಪೀಡಯಾಮಾಸ ಬಲೇನ ಪುರುಷೋತ್ತಮಃ ।
ತತೋ ಹಿ ಜೀವಿತಂ ತಸ್ಯ ನ ವ್ಯನೀನಶದಚ್ಯುತಃ ॥೩೦॥

ಪುರುಷೋತ್ತಮನಾದ ವಿಷ್ಣುವು ತನ್ನ ಬಲದಿಂದ ಅವನನ್ನು ಹಿಂಸಿಸಲಿಲ್ಲ. ಆದ್ದರಿಂದ ಅಚ್ಯುತನು ಅವನ ಜೀವಿತವನ್ನು ನಾಶಮಾಡಲಿಲ್ಲ.

ವಿಪಕ್ಷಃ ಸ್ರಸ್ತಕಾಯಶ್ಚ ವಿಚೇತಾ ವಿಹ್ವಲಃ ಖಗಃ ।
ಮುಮೋಚ ಪತ್ರಾಣಿ ತದಾ ಗುರುಭಾರಪ್ರಪೀಡಿತಃ ॥೩೧॥

ದೊಡ್ಡ ಭಾರದಿಂದ ಪೀಡಿತನಾದ ಗರುಡನು ಆಗ ರೆಕ್ಕೆಯನ್ನು ಕಳೆದುಕೊಂಡು ಶಿಥಿಲವಾದ ದೇಹವುಳ್ಳವನಾಗಿ ಪ್ರಜ್ಞಾಹೀನನನಾಗಿ ವಿಹ್ವಲನಾಗಿ ತನ್ನ ರೆಕ್ಕೆಯ ಗರಿಗಳನ್ನು ಉದುರಿಸಿದನು.

ಸ ವಿಷ್ಣುಂ ಶಿರಸಾ ಪಕ್ಷೀ ಪ್ರಣಮ್ಯ ವಿನತಾಸುತಃ ।
ವಿಚೇತಾ ವಿಹ್ವಲೋ ದೀನಃ ಕಿಂಚಿದ್ ವಚನಮಬ್ರವೀತ್ ॥೩೨॥

ವಿಚೇತನನೂ, ವಿಹ್ವಲನೂ, ದೀನನೂ ಆದ ಪಕ್ಷಿಯಾದ ಆ ವಿನತಾಸುತನು ವಿಷ್ಣುವಿಗೆ ಶಿರಸಾ ಪ್ರಣಾಮವನ್ನು ಮಾಡಿ ಸ್ವಲ್ಪ ಮಾತನಾಡಿದನು.

ಭಗವನ್ ಲೋಕಸಾರಸ್ಯ ಸದೃಶೇನ ವಪುಷ್ಮತಾ ।
ಭುಜೇನ ಸ್ಫೈರಮುಕ್ತೇನ ನಿಷ್ಪಿಷ್ಟೋಽಸ್ಮಿ ಮಹೀತಳೇ ॥೩೩॥

ಭಗವಂತನೇ, ಲೋಕದ ಭಾರಕ್ಕೆ ಸದೃಶವಾದ ಭಾರವುಳ್ಳ ನೀನು ಅನಾಯಾಸವಾಗಿಟ್ಟ ಒಂದು ಭುಜದಿಂದಲೇ ನಾನು ಭೂತಳದಲ್ಲಿ ಬಿದ್ದು ಪುಡಿಪುಡಿಯಾಗಿದ್ದೇನೆ.

ಕ್ಷಂತುಮರ್ಹಸಿ ಮೇ ದೇವ ವಿಹ್ವಲಸ್ಯಾಲ್ಪಚೇತಸಃ ।
ಬಲದಾಹವಿದಗ್ಧಸ್ಯ ಪಕ್ಷಿಣೋ ಧ್ವಜವಾಸಿನಃ ॥೩೪॥

ಎಲೈ ದೇವನೇ, ಅಸುರರ ಸೈನ್ಯವನ್ನು ದಾಹ ಮಾಡುವುದರಲ್ಲಿ ನಿಪುಣನಾದ, ನಿನ್ನ ಧ್ವಜವಾಸಿಯಾದ ಪಕ್ಷಿಯಾದ ವಿಹ್ವಲನಾದ ಅಲ್ಪಜ್ಞಾನವುಳ್ಳ ನನ್ನ ಅಪರಾಧವನ್ನು ನೀನು ಸಹಿಸಬೇಕು.

ನ ಹಿ ಜ್ಞಾತಂ ಬಲಂ ದೇವ ಮಯಾ ತೇ ಪರಮಂ ವಿಭೋ ।
ತೇನ ಮನ್ಯೇ ಹ್ಯಹಂ ವೀರ್ಯಮಾತ್ಮನೋ ನ ಸಮಂ ಪರೈಃ ॥೩೫॥

ಎಲೈ ವಿಭುವೇ, ದೇವನೇ, ನಿನ್ನ ಸರ್ವೋತ್ಕೃಷ್ಟವಾದ ಬಲವನ್ನು ನಾನು ತಿಳಿಯಲಿಲ್ಲ. ಆ ಕಾರಣದಿಂದ ನಾನು ಪರಾಕ್ರಮದಲ್ಲಿ ನನ್ನ ಸಮನಾದವರು ಯಾರೂ ಇಲ್ಲ ಎಂದು ತಿಳಿದಿದ್ದೆನು.

ಕಣ್ವಃ

ತತಶ್ಚಕ್ರೇ ಸ ಭಗವಾನ್ ಪ್ರಸಾದಂ ವೈ ಗರುತ್ಮತಃ ।
ಮೈವಂ ಭೂಯ ಇತಿ ಸ್ನೇಹಾತ್ ತದಾ ಚೈನಮುವಾಚ ಹ ॥೩೬॥

ಕಣ್ವ– ಆಗ ಭಗವಂತನು ಗರುಡನಿಗೆ ಅನುಗ್ರಹವನ್ನು ಮಾಡಿ ಅವನನ್ನು ಕುರಿತು ಸ್ನೇಹದಿಂದ ಇನ್ನೊಮ್ಮೆ ಹೀಗೆ ಮಾಡಬೇಡ ಎಂದು ಹೇಳಿದನು.

ಪಾದಾಂಗುಷ್ಠೇನ ಚಿಕ್ಷೇಪ ಸುಮುಖಂ ಗರುಡೋರಸಿ ।
ತತಃ ಪ್ರಭೃತಿ ರಾಜೇಂದ್ರ ಸಹ ಸರ್ಪೇಣ ವರ್ತತೇ ॥೩೭॥

ತನ್ನ ಪಾದಾಂಗುಷ್ಠದಿಂದ ಸುಮುಖನನ್ನು ಗರುಡನ ವಕ್ಷಸ್ಥಲದಲ್ಲಿ ಚಿಮ್ಮಿದನು. ಎಲೈ ರಾಜೇಂದ್ರನೇ, ಆಗಿನಿಂದಲೂ ಗರುಡನು ಆ ಸರ್ಪದ ಜೊತೆಯಲ್ಲಿಯೇ ಇರುತ್ತಾನೆ.

ಏವಂ ವಿಷ್ಣುಬಲಾಕ್ರಾಂತೋ ಗರ್ವನಾಶಮುಪಾಗಮತ್ ।
ಗರುಡೋ ಬಲವಾನ್ ರಾಜನ್ ವೈನತೇಯೋ ಮಹಾಯಶಾಃ ॥೩೮॥

ಎಲೈ ರಾಜನಾದ ದುರ್ಯೋಧನನೇ, ಹೀಗೆ ಬಲಿಷ್ಠನೂ, ಮಹಾಕೀರ್ತಿವಂತನೂ, ವಿನುತಾಸುತನೂ ಆದ ಗರುಡನು ವಿಷ್ಣುವಿನ ಬಲಕ್ಕೆ ಒಳಗಾಗಿ ಗರ್ವನಾಶವನ್ನು ಹೊಂದಿದನು.

ತಥಾ ತ್ವಮಪಿ ಗಾಂಧಾರೇ ಯಾವತ್ ಪಾಂಡುಸುತಾನ್ ರಣೇ ।
ನಾಸಾದಯಸಿ ತಾನ್ ವೀರಾನ್ ತಾವಜ್ಜೀವಸಿ ಪುತ್ರಕ ॥೩೯॥

ಅದರಂತೆ ಎಲೈ ಗಾಂಧಾರಿ ಸುತನೇ, ಪುತ್ರನೇ, ಎಲ್ಲಿಯವರೆಗೆ ನೀನು ಯುದ್ಧದಲ್ಲಿ ವೀರರಾದ ಪಾಂಡವರನ್ನು ಸಮೀಪಿಸುವುದಿಲ್ಲವೋ ಅಲ್ಲಿಯವರೆಗೆ ಬದುಕಿರುತ್ತೀಯೆ.

ಭೀಮಃ ಪ್ರಹರತಾಂ ಶ್ರೇಷ್ಠೋ ವಾಯುಪುತ್ರೋ ಮಹಾಬಲಃ ।
ಧನಂಜಯಶ್ಚೇಂದ್ರಸುತೋ ನಿಹನ್ಯಾತ್ ತಾವಕಾನ್ ರಣೇ ॥೪೦॥

ಪ್ರಹಾರ ಮಾಡುವವರಲ್ಲಿ ಶ್ರೇಷ್ಠರಾದ ಮಹಾಬಲನಾದ ವಾಯುಪುತ್ರನಾದ ಭೀಮನೂ ಮತ್ತು ಇಂದ್ರಪುತ್ರನಾದ ಅರ್ಜುನನೂ ಯುದ್ಧದಲ್ಲಿ ನಿನ್ನವರನ್ನು ಕೊಲ್ಲುವರು.

ವಿಷ್ಣುರ್ವಾಯುಶ್ಚ ಶಕ್ರಶ್ಚ ಧರ್ಮಸ್ತಾವಶ್ವಿನಾವುಭೌ ।
ಏತೇ ದೇವಾಸ್ತ್ವಯಾ ಕೇನ ಹೇತುನಾ ವೀಕ್ಷಿತುಂ ಕ್ಷಮಾಃ ॥೪೧॥

ವಿಷ್ಣು, ವಾಯು, ಇಂದ್ರ, ಯಮ ಮತ್ತು ಆ ಇಬ್ಬರು ಅಶ್ವಿನಿದೇವತೆಗಳು- ಈ ದೇವತೆಗಳನ್ನು ನೀನು ಯಾವ ಕಾರಣದಿಂದ ನೋಡಲು ಸಮರ್ಥನಾಗುತ್ತೀಯೆ?

ತದಲಂ ತೇ ವಿರೋಧೇನ ಶಮಂ ಗಚ್ಛ ನೃಪಾತ್ಮಜ ।
ವಾಸುದೇವೇನ ತೀರ್ಥೇನ ಕುಲಂ ರಕ್ಷಿತುಮರ್ಹಸಿ ॥೪೨॥

ಎಲೈ ರಾಜಕುಮಾರನೇ, ಆದ್ದರಿಂದ ವಿರೋಧವನ್ನು ಸಾಕುಮಾಡು. ಸಂಧಿಯನ್ನು ಮಾಡಿಕೊ. ಪೂಜ್ಯನಾದ ವಾಸುದೇವನಿಂದ ನಿನ್ನ ಕುಲವನ್ನು ರಕ್ಷಿಸುವವನಾಗು.

ಪ್ರತ್ಯಕ್ಷದರ್ಶೀ ಸರ್ವಸ್ಯ ನಾರದೋಽಯಂ ಮಹಾತಪಾಃ ।
ಮಾಹಾತ್ಮ್ಯಸ್ಯ ತದಾ ವಿಷ್ಣೋಃ ಸೋಽಯಂ ಚಕ್ರಗದಾಧರಃ ॥೪೩॥

ಮಹಾತಪಸ್ವಿಗಳಾದ ಈ ನಾರದರು ವಿಷ್ಣುವಿನ ಮಹಿಮೆಯೆಲ್ಲವನ್ನೂ ಪ್ರತ್ಯಕ್ಷವಾಗಿ ನೋಡಿದವರು. ಆ ಚಕ್ರಗದಾಧರನಾದ ವಿಷ್ಣುವೇ ಈ ಕೃಷ್ಣ.

ವೈಶಂಪಾಯನಃ

ದುರ್ಯೋಧನಸ್ತು ತಚ್ಛ್ರುತ್ವಾ ನಿಃಶ್ವಸನ್ ಭ್ರುಕುಟೀಮುಖಃ ।
ರಾಧೇಯಮಭಿಸಂಪ್ರೇಕ್ಷ್ಯ ಜಹಾಸ ಸ್ವನವತ್ ತದಾ ॥೪೪॥

ಆ ಮಾತುಗಳನ್ನು ಕೇಳಿ ದುರ್ಯೋಧನನು ಹುಬ್ಬುಗಳನ್ನು ಗಂಟಿಕ್ಕಿ ನಿಟ್ಟುಸಿರು ಬಿಡುತ್ತಾ ಕರ್ಣನನ್ನು ನೋಡಿ ಆಗ ಗಟ್ಟಿಯಾಗಿ ನಕ್ಕನು.

ಕದರ್ಥೀಕೃತ್ಯ ತದ್ವಾಕ್ಯಮ್ ಋಷೇಃ ಕಣ್ವಸ್ಯ ದುರ್ಮತಿಃ ।
ಊರುಂ ಗಜಕರಾಕಾರಂ ತಾಡಯನ್ನಿದಮಬ್ರವೀತ್ ॥೪೫॥

ದುರ್ಮತಿಯಾದ ಅವನು ಕಣ್ವಋಷಿಗಳ ಆ ಮಾತುಗಳನ್ನು ಧಿಕ್ಕರಿಸಿ ಆನೆಯ ಸೊಂಡಿಲಿನಂತಿದ್ದ ತನ್ನ ತೊಡೆಯನ್ನು ತಟ್ಟಿ ಹೀಗೆ ಮಾತನಾಡಿದನು.

ಯಥೈವೇಶ್ವರಸೃಷ್ಟೋಽಸ್ಮಿ ತದ್ಭಾವಿ ಯಾ ಚ ಮೇ ಗತಿಃ ।
ತಥಾ ಮಹರ್ಷೇ ವರ್ತಾಮಿ ಕಿಂ ಪ್ರಲಾಪಃ ಕರಿಷ್ಯತಿ ॥೪೬॥

ಹೇಗೆ ಈಶ್ವರನು ನನ್ನನ್ನು ಸೃಷ್ಟಿ ಮಾಡಿದ್ದಾನೆಯೋ ನನಗೆ ಯಾವ ಗತಿಯಾಗ ಬೇಕೆಂದಿದೆಯೋ ಅದರಂತೆಯೇ ಆಗುತ್ತದೆ ಅಥವಾ ನಾನು ಅದರಂತೆಯೇ ನಡೆದುಕೊಳ್ಳುತ್ತೇನೆ. ಮಹರ್ಷಿಯೇ, ನಿನ್ನ ಪ್ರಲಾಪಗಳಿಂದ ಏನು ಪ್ರಯೋಜನ?

ವೈಶಂಪಾಯನಃ

ತತಃ ಕಣ್ವೋಽಬ್ರವೀತ್ ಕ್ರುದ್ಧೋ ದುರ್ಯೋಧನಮಪಂಡಿತಮ್ ।
ಯಸ್ಮಾದೂರುಂ ತಾಡಯಸಿ ಊರೌ ಮೃತ್ಯುರ್ಭವಿಷ್ಯತಿ ॥೪೭॥

ವೈಶಂಪಾಯನ– ಆಗ ಕೋಪಗೊಂಡ ಕಣ್ವರು ಅಪಂಡಿತನಾದ ದುರ್ಯೋಧನನನ್ನು ಕುರಿತು, ನೀನು ತೊಡೆಯನ್ನು ತಟ್ಟುತ್ತಿರುವ ಕಾರಣದಿಂದ ನಿನಗೆ ತೊಡೆಯಲ್ಲಿಯೇ ಮೃತ್ಯುವುಂಟಾಗುವುದು ಎಂದು ಹೇಳಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಚತುರಧಿಕಶತತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ಪಂಚತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐದನೆಯ ಅಧ್ಯಾಯ

ಹಠವು ಅನರ್ಥಕಾರಿ ಎಂದು ತೋರಿಸಲು ನಾರದರಿಂದ ವಿಶ್ವಾಮಿತ್ರ ಮತ್ತು ಗಾಲವರ ಕಥೆಯ ನಿರೂಪಣೆ.

ಜನಮೇಜಯಃ

ಅನರ್ಥೇ ಜಾತಿನಿರ್ಬಂಧಂ ಪರಾರ್ಥೇ ಲೋಭಮೋಹಿತಮ್ ।
ಅನಾರ್ಯಕೇಷ್ವಭಿರತಂ ಮರಣೇ ಕೃತನಿಶ್ಚಯಮ್ ॥೧॥

ಜ್ಞಾತೀನಾಂ ದುಃಖಕರ್ತಾರಂ ಬಂಧೂನಾಂ ಶೋಕವರ್ಧನಮ್ ।
ಸುಹೃದಾಂ ಕ್ಲೇಶದಾತಾರಂ ದ್ವಿಷತಾಂ ಹರ್ಷವರ್ಧನಮ್ ॥೨॥

ಕಥಂ ನೈನಂ ವಿಮಾರ್ಗಸ್ಥಂ ವಾರಯಂತೀಹ ಬಾಂಧವಾಃ ।
ಸೌಹೃದಾದ್ವಾ ಸುಹೃತ್ ಸ್ನಿಗ್ಧೋ ಭಗವಾನ್ ವಾ ಪಿತಾಮಹಃ ॥೩॥

ಜನಮೇಜಯ– ಅನರ್ಥದಲ್ಲಿ ಹಠವನ್ನು ಹಿಡಿದ, ಇನ್ನೊಬ್ಬರ ದ್ರವ್ಯದಲ್ಲಿ ಆಸೆ ಮತ್ತು ಮೋಹಗಳನ್ನು ಹೊಂದಿದ, ನೀಚರಾದ ಜನರ ಸ್ನೇಹವನ್ನು ಮಾಡಿದ, ಮರಣವನ್ನು ನಿಶ್ಚಯಿಸಿದ, ಜ್ಞಾತಿಗಳಿಗೆ ದುಃಖವನ್ನುಂಟು ಮಾಡುವ, ಬಂಧುಗಳಿಗೆ ಶೋಕವನ್ನು ಹೆಚ್ಚಿಸುವ, ಸುಹೃಜ್ಜನರಿಗೆ ಕ್ಲೇಶವನ್ನು ಕೊಡುವ, ಶತ್ರುಗಳಿಗೆ ಸಂತೋಷವನ್ನು ಹೆಚ್ಚಿಸುವ, ದುರ್ಮಾರ್ಗಚರನಾದ ಈ ದುರ್ಯೋಧನನನ್ನು ಬಾಂಧವರು ಏಕೆ ತಡೆಯಲಿಲ್ಲ? ಸೌಹಾರ್ದದ ನಿಮಿತ್ತದಿಂದ ಸುಹೃಜ್ಜನನೂ, ಸ್ನೇಹವನ್ನು ಉಳ್ಳವನೂ ಆದ ಪೂಜ್ಯಪಿತಾಮಹನಾದರೂ ಏಕೆ ನಿವಾರಿಸಲಿಲ್ಲ?

ವೈಶಂಪಾಯನಃ

ಉಕ್ತಂ ಭಗವತಾ ವಾಕ್ಯಮುಕ್ತಂ ಭೀಷ್ಮೇಣ ಯತ್ ಕ್ಷಮಮ್ ।
ಉಕ್ತಂ ಬಹುವಿಧಂ ಚೈವ ನಾರದೇನಾಪಿ ತಚ್ಛೃಣು ॥೪॥

ವೈಶಂಪಾಯನ– ಭಗವಂತನೂ ಉಪದೇಶವನ್ನು ಮಾಡಿದ್ದಾಯಿತು. ಭೀಷ್ಮರು ಏನು ಹೇಳಬಹುದೋ ಅದನ್ನು ಹೇಳಿದ್ದಾಯಿತು. ನಾರದರೂ ಸಹ ಬಹುವಿಧವಾಗಿ ಹೇಳಿದರು. ಅದನ್ನು ಕೇಳು.

ನಾರದಃ

ದುರ್ಲಭೋ ವೈ ಸುಹೃಚ್ಛ್ರೋತಾ ದುರ್ಲಭಶ್ಚ ಹಿತಃ ಸುಹೃತ್ ।
ತಿಷ್ಠತೇ ಹಿ ಸುಹೃದ್ ಯತ್ರ ನ ಬಂಧುಸ್ತತ್ರ ತಿಷ್ಠತೇ ॥೫॥

ನಾರದ– ಹೇಳಿದ ಮಾತನ್ನು ಕೇಳುವ ಸುಹೃಜ್ಜನನು ದುರ್ಲಭನಾದವನು. ಹಿತವನ್ನು ಮಾಡುವ ಸುಹೃಜ್ಜನನೂ ದುರ್ಲಭನಾದವನು. ಎಲ್ಲಿ ಸುಹೃಜ್ಜನನಿರುತ್ತಾನೆಯೋ ಅಲ್ಲಿ ಬಂಧುವು ಇರುವುದಿಲ್ಲ.

ಶ್ರೋತವ್ಯಮಪಿ ಪಶ್ಯಾಮಿ ಸುಹೃದಾಂ ಕುರುನಂದನ ।
ನ ಕರ್ತವ್ಯಶ್ಚ ನಿರ್ಬಂಧೋ ನಿರ್ಬಂಧೋ ಹಿ ಸುದಾರುಣಃ ॥೬॥

ಎಲೈ ಕುರುನಂದನನೇ, ಸುಹೃಜ್ಜನನ ಮಾತುಗಳನ್ನು ಕೇಳಬೇಕು. ಆದರೆ ಒತ್ತಾಯವನ್ನು ಮಾಡಬಾರದು. ಒತ್ತಾಯವು (ಹಠವು) ಬಹಳ ದಾರುಣವಾದುದು.

ದುರ್ಯೋಧನ ನಿಬೋಧೇದಂ ವಚನಂ ಮಮ ಭಾರತ ।
ನಿರ್ಬಂಧಶ್ಚಾಪಿ ಮಾನಶ್ಚ ತ್ವಯಾ ತ್ಯಾಜ್ಯೋ ಮಹಾಮತೇ ॥೭॥

ಎಲೈ ಭಾರತನೇ, ದುರ್ಯೋಧನನೇ, ನನ್ನ ಈ ಮಾತನ್ನು ಕೇಳು. ಮಹಾಮತಿಯೇ, ನೀನು ಹಠವನ್ನು ಮತ್ತು ಅಹಂಕಾರವನ್ನು ಬಿಡಬೇಕು.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಯಥಾ ನಿರ್ಬಂಧತಃ ಪ್ರಾಪ್ತೋ ಗಾಲವೇನ ಪರಾಜಯಃ ॥೮॥

ಗಾಲವನು ಹೇಗೆ ಹಠದಿಂದ ಪರಾಜಯವನ್ನು ಹೊಂದಿದನೆಂಬ ಪುರಾತನವಾದ ಈ ಇತಿಹಾಸವನ್ನು ತಿಳಿದವರು ಹೇಳುತ್ತಾರೆ.

ವಿಶ್ವಾಮಿತ್ರಂ ತಪಸ್ಯಂತಂ ಧರ್ಮೋ ಜಿಜ್ಞಾಸಯಾ ಪುರಾ ।
ಅಭ್ಯಾಗಚ್ಛತ್ ಸ್ವಯಂ ಭೂತ್ವಾ ವಸಿಷ್ಠೋ ಭಗವಾನೃಷಿಃ ॥೯॥

ಸಪ್ತರ್ಷೀಣಾಮನ್ಯತಮಂ ವೇಷಮಾಸ್ಥಾಯ ಭಾರತ ।
ಬುಭುಕ್ಷುಃ ಕ್ಷುಧಿತೋ ರಾಜನ್ನಾಶ್ರಮಂ ಕೌಶಿಕಸ್ಯ ತು ॥೧೦॥

ತಪಸ್ಸನ್ನು ಮಾಡುತ್ತಿದ್ದ ವಿಶ್ವಾಮಿತ್ರನನ್ನು ಚೆನ್ನಾಗಿ ತಿಳಿಯಲು ಹಿಂದೆ ಯಮಧರ್ಮನೇ ಸಪ್ತರ್ಷಿಗಳಲ್ಲಿ ಒಬ್ಬರಾದ ವಸಿಷ್ಠರ ವೇಷವನ್ನು ಧರಿಸಿ ಸ್ವಯಂ ಬಂದನು. ಎಲೈ ಭಾರತನೇ, ರಾಜನೇ, ಅವನು ಹಸಿದು, ನೀರಡಿಕೆಯಿಂದ ಕೂಡಿದವನಾಗಿ ವಿಶ್ವಾಮಿತ್ರರ ಆಶ್ರಮಕ್ಕೆ ಬಂದನು.

ವಿಶ್ವಾಮಿತ್ರೋಽಥ ಸಂಭ್ರಾಂತಃ ಶ್ರಪಯಾಮಾಸ ವೈ ಚರುಮ್ ।
ಪರಮಾನ್ನಂ ಸ ಯತ್ನೇನ ನ ಚ ತಂ ಪ್ರತ್ಯಪಾಲಯತ್ ॥೧೧॥

ಅನಂತರ ವಿಶ್ವಾಮಿತ್ರರು ಗಾಬರಿಯಿಂದ ಪ್ರಯತ್ನಪೂರ್ವಕವಾಗಿ ಚರುವನ್ನೂ ಮತ್ತು ಪರಮಾನ್ನವನ್ನೂ ಸಿದ್ಧಪಡಿಸಿದರು. ಆದರೆ ಧರ್ಮನು ಬರಲಿಲ್ಲ.

ಅನ್ನಂ ತೇನ ತದಾ ಭುಕ್ತಮನ್ಯೈರ್ದತ್ತಂ ತಪಸ್ವಿಭಿಃ ।
ಅಥ ಗೃಹ್ಯಾನ್ನಮತ್ಯುಷ್ಣಂ ವಿಶ್ವಾಮಿತ್ರೋಽಪ್ಯುಪಾಗಮತ್ ॥೧೨॥

ಧರ್ಮನು ಬೇರೆ ತಪಸ್ವಿಗಳು ಕೊಟ್ಟ ಅನ್ನವನ್ನು ಆಗ ಸ್ವೀಕಾರ ಮಾಡಿದನು. ಆ ವೇಳೆಗೆ (ಧರ್ಮನು ಭೋಜನ ಮಾಡುತ್ತಿದ್ದ ವೇಳೆಗೆ) ವಿಶ್ವಾಮಿತ್ರರು ಬಿಸಿಯಾದ ಅನ್ನವನ್ನು ತೆಗೆದುಕೊಂಡು ಬಂದರು.

ಭುಕ್ತಂ ಮೇ ತಿಷ್ಠ ತಾವತ್ ತ್ವಮ್ ಇತ್ಯುಕ್ತ್ವಾ ಭಗವಾನ್ ಯಯೌ।
ವಿಶ್ವಾಮಿತ್ರಸ್ತತೋ ರಾಜನ್ ಸ್ಥಿತ ಏವ ಮಹಾದ್ಯುತಿಃ ॥೧೩॥

ನನ್ನ ಭೋಜನವು ಮುಗಿಯಿತು. ಸ್ವಲ್ಪ ಸಮಯ ಕಾಯುತ್ತಿರು ಎಂದು ಹೇಳಿ ಪೂಜ್ಯನಾದ ಧರ್ಮನು ಹೊರಟು ಹೋದನು. ಎಲೈ ರಾಜನೇ, ಮಹಾದ್ಯುತಿಯುಳ್ಳ ವಿಶ್ವಾಮಿತ್ರರು ಹಾಗೆಯೇ ನಿಂತರು.

ಭಕ್ತಂ ಪ್ರಗೃಹ್ಯ ಮೂರ್ಧ್ನಾ ವೈ ಬಾಹುಭ್ಯಾಂ ಪಾರ್ಶ್ವತೋ ವಹನ್ ।
ಸ್ಥಿತಃ ಸ್ಥಾಣುರಿವಾಭ್ಯಾಶೇ ನಿಶ್ಚೇಷ್ಟೋ ಮರುತಾಶನಃ ॥೧೪॥

ತಲೆಯ ಮೇಲೆ ಆಹಾರವನ್ನು ಹೊತ್ತು ಆ ಪಾತ್ರೆಯನ್ನು ಎರಡು ಕೈಗಳಿಂದಲೂ ಪಕ್ಕದಲ್ಲಿ ಹಿಡಿದು ಮರದ ತುಂಡಿನಂತೆ ನಿಶ್ಚೇಷ್ಟರಾಗಿ ಕೇವಲ ವಾಯುಭಕ್ಷರಾಗಿ ನಿಂತರು.

ತಸ್ಯ ಶುಶ್ರೂಷಣೇ ಯತ್ನಮಕರೋದ್ ಗಾಲವೋ ಮುನಿಃ ।
ಗೌರವಾದ್ ಬಹುಮಾನಾಚ್ಚ ಹಾರ್ದೇನ ಪ್ರಿಯಕಾಮ್ಯಯಾ ॥೧೫॥

ಗಾಲವ ಋಷಿಗಳು ವಿಶ್ವಾಮಿತ್ರರ ಮೇಲಿನ ಗೌರವದಿಂದ ಮತ್ತು ಬಹುಮಾನದಿಂದ ಅವರಿಗೆ ಪ್ರಿಯವನ್ನು ಉಂಟುಮಾಡಬೇಕು ಎನ್ನುವ ಮನಸ್ಸಿನಿಂದಲೂ ಪ್ರಯತ್ನಪೂರ್ವಕವಾಗಿ ಅವರ ಶುಶ್ರೂಷೆಯನ್ನು ಮಾಡಿದರು.

ಅಥ ವರ್ಷಶತೇ ಪೂರ್ಣೇ ಧರ್ಮಃ ಪುನರುಪಾಗಮತ್ ।
ವಾಶಿ(ಸಿ)ಷ್ಠಂ ವೇಷಮಾಸ್ಥಾಯ ಕೌಶಿಕಂ ಭೋಜನೇಪ್ಸಯಾ ॥೧೬॥

ಒಂದು ನೂರು ವರ್ಷಗಳು ಕಳೆದ ಮೇಲೆ ಧರ್ಮನು ಪುನಃ ವಸಿಷ್ಠರೂಪವನ್ನು ಧರಿಸಿ ಭೋಜನವನ್ನು ಬಯಸಿ ವಿಶ್ವಾಮಿತ್ರರ ಬಳಿಗೆ ಬಂದನು.

ಸ ದೃಷ್ಟ್ವಾ ಶಿರಸಾ ಭಕ್ತಂ ಧ್ರಿಯಮಾಣಂ ಮಹರ್ಷಿಣಾ ।
ತಿಷ್ಠತಾ ವಾಯುಭಕ್ಷೇಣ ವಿಶ್ವಾಮಿತ್ರೇಣ ಧೀಮತಾ ॥೧೭॥

ಪ್ರತಿಗೃಹ್ಯ ತತೋ ಧರ್ಮಃ ತಥೈವೋಷ್ಣಂ ತಥಾ ನವಮ್ ।
ಭುಕ್ತ್ವಾ ಪ್ರೀತೋಽಸ್ಮಿ ವಿಪ್ರೇತಿ ತಮುಕ್ತ್ವಾ ಸ ಮುನಿರ್ಗತಃ ॥೧೮॥

ಮಹರ್ಷಿಗಳೂ, ಮೇಧಾವಿಗಳೂ ಆದ ವಿಶ್ವಾಮಿತ್ರರು ಕೇವಲ ವಾಯುಭಕ್ಷರಾಗಿ ನಿಂತು ತಲೆಯ ಮೇಲೆ ಹಿಡಿದಿದ್ದ ಆಹಾರವನ್ನು ಸ್ವೀಕರಿಸಿ ಹಾಗೆಯೇ ಹೊಸದಾಗಿಯೂ ಮತ್ತು ಬಿಸಿಯಾಗಿಯೂ ಇದ್ದ ಆ ಅನ್ನವನ್ನು ತಿಂದು ಬ್ರಾಹ್ಮಣನೇ, ನಾನು ಪ್ರಸನ್ನನಾಗಿದ್ದೇನೆ ಎಂದು ವಿಶ್ವಾಮಿತ್ರರಿಗೆ ಹೇಳಿ ಹೊರಟು ಹೋದನು.

ಕ್ಷತ್ರಭಾವಾದಪಗತೋ ಬ್ರಾಹ್ಮಣತ್ವಮುಪಾಗತಃ ।
ಧರ್ಮಸ್ಯ ವಚನಾತ್ ಪ್ರೀತೋ ವಿಶ್ವಾಮಿತ್ರಸ್ತದಾಽಭವತ್ ॥೧೯॥

ಕ್ಷತ್ರಿಯಭಾವವನ್ನು ಕಳೆದುಕೊಂಡು ಬ್ರಾಹ್ಮಣತ್ವವನ್ನು ಪಡೆದ ವಿಶ್ವಾಮಿತ್ರರು ಆಗ ಧರ್ಮನ ವಚನದಿಂದ ಸಂತೋಷಗೊಂಡರು.

ವಿಶ್ವಾಮಿತ್ರಸ್ತು ಶಿಷ್ಯಸ್ಯ ಗಾಲವಸ್ಯ ತಪಸ್ವಿನಃ ।
ಶಿಶ್ರೂಷಯಾ ಚ ಭಕ್ತ್ಯಾ ಚ ಪ್ರೀತಿಮಾನಿತ್ಯುವಾಚ ಹ ॥೨೦॥

ಅನುಜ್ಞಾತೋ ಮಯಾ ವತ್ಸ ಯಥೇಚ್ಛಂ ಗಚ್ಛ ಗಾಲವ ॥೨೧॥

ವಿಶ್ವಾಮಿತ್ರರಾದರೂ ಶಿಷ್ಯರಾದ ತಪಸ್ವಿಗಳಾದ ಗಾಲವರ ಶುಶ್ರೂಷೆಯಿಂದಲೂ ಮತ್ತು ಭಕ್ತಿಯಿಂದಲೂ ಸಂತೋಷಗೊಂಡವರಾಗಿ ಅವರನ್ನು ಕುರಿತು– 'ಎಲೈ ವತ್ಸ ಗಾಲವನೇ, ನಾನು ಅನುಮತಿಯನ್ನು ಕೊಟ್ಟಿದ್ದೇನೆ, ನೀನು ಹಿಂದಿರುಗು' ಎಂದು ಹೇಳಿದರು.

ನಾರದಃ

ಇತ್ಯುಕ್ತಃ ಪ್ರತ್ಯುವಾಚೇದಂ ಗಾಲವೋ ಮುನಿಸತ್ತಮಮ್ ।
ಪ್ರೀತೋ ಮಧುರಯಾ ವಾಚಾ ವಿಶ್ವಾಮಿತ್ರಂ ಮಹಾದ್ಯುತಿಮ್ ॥೨೨॥

ನಾರದ– ಹೀಗೆ ಹೇಳಲ್ಪಟ್ಟ ಗಾಲವರು ಮುನಿಶ್ರೇಷ್ಠರೂ, ಮಹಾಕಾಂತಿವಂತರೂ ಆದ ವಿಶ್ವಾಮಿತ್ರರನ್ನು ಕುರಿತು ಸಂತೋಷದಿಂದ ಮತ್ತು ಮಧುರವಾದ ಮಾತುಗಳಿಂದ ಹೀಗೆ ಹೇಳಿದರು.

ದಕ್ಷಿಣಾಃ ಕಾಃ ಪ್ರಯಚ್ಛಾಮಿ ಭವತೇ ಗುರುಕರ್ಮಣಿ ।
ದಕ್ಷಿಣಾಭಿರುಪೇತಂ ಹಿ ಕರ್ಮ ಸಿದ್ಧ್ಯತಿ ಮಾನವಮ್ ॥೨೩॥

ತಾವು ಮಾಡಿಸಿದ ಅಧ್ಯಯನಕ್ಕೆ ಗುರುದಕ್ಷಿಣೆಯಾಗಿ ಏನನ್ನು ಕೊಡಲಿ? ದಕ್ಷಿಣೆಗಳಿಂದ ಕೂಡಿದ ಕರ್ಮವೇ ಮನುಷ್ಯನಿಗೆ ಫಲಸಿದ್ಧಿಯನ್ನು ಉಂಟು ಮಾಡಿಕೊಡುವುದಷ್ಟೆ!

ದಕ್ಷಿಣಾನಾಂ ವಿಸೃಷ್ಟಾನಾಮ್ ಅಪವರ್ಗೇಣ ಭುಜ್ಯತೇ ।
ಸ್ವರ್ಗೇ ಕ್ರತುಫಲಂ ಸದ್ಭಿರ್ದಕ್ಷಿಣಾ ಶಾಂತಿರುಚ್ಯತೇ ॥೨೪॥

ಕಿಮಾಹರಾಮಿ ಗುರ್ವರ್ಥಂ ಬ್ರವೀತು ಭಗವಾನಿತಿ ॥೨೫॥

ದಕ್ಷಿಣೆಗಳನ್ನು ಕೊಟ್ಟವನು ಸ್ವರ್ಗದಲ್ಲಿ ಯಾಗದ ಫಲವನ್ನು ಭೋಗಿಸುತ್ತಾನೆ. ಸಜ್ಜನರು ದಕ್ಷಿಣೆಯನ್ನೇ ಶಾಂತಿ ಎಂದು ಹೇಳುತ್ತಾರೆ. ನಾನು ಗುರುದಕ್ಷಿಣೆಯನ್ನಾಗಿ ಏನನ್ನು ಕೊಡಲಿ ಎಂದು ಪೂಜ್ಯರು ಹೇಳಬೇಕು (ಎಂದು ಹೇಳಿದರು).

ನಾರದಃ

ಜಾನಮಾನಶ್ಚ ಭಗವಾನ್ ಖಿನ್ನಂ ಶಿಶ್ರೂಷಣೇನ ಚ ।
ವಿಶ್ವಾಮಿತ್ರಮಸಕೃದ್ ಗಚ್ಛ ಗಚ್ಛೇತ್ಯಚೋದಯತ್ ॥೨೬॥

ನಾರದ– ಪೂಜ್ಯರಾದ ವಿಶ್ವಾಮಿತ್ರರು, ಶಿಷ್ಯನು ತಮ್ಮ ಸೇವೆಯಿಂದ ಬಳಲಿದ್ದಾನೆಂದು ತಿಳಿದು ಅನೇಕ ಬಾರಿ ನೀನು ಸುಮ್ಮನೆ ಹೋಗು, ಹೋಗು ಎಂದು ಪ್ರೇರಿಸಿದರು.

ಅಸಕೃದ್ ಗಚ್ಛ ಗಚ್ಛೇತಿ ವಿಶ್ವಾಮಿತ್ರೇಣ ಭಾಷಿತಃ ।
ಕಿಂ ದದಾನೀತಿ ಬಹುಶೋ ಗಾಲವಃ ಪ್ರತ್ಯಭಾಷತ ॥೨೭॥

ಅನೇಕ ಬಾರಿ ವಿಶ್ವಾಮಿತ್ರರಿಂದ ನೀನು ಹೋಗು, ಹೋಗು ಎಂಬ ಮಾತನ್ನು ಕೇಳಿದರೂ ಅನೇಕ ಬಾರಿ ಏನು ಕೊಡಲಿ? ಏನು ಕೊಡಲಿ? ಎಂದೇ ಗಾಲವರು ಕೇಳಿದರು.

ನಿರ್ಬಂಧತಸ್ತು ಬಹುಶೋ ಗಾಲವಸ್ಯ ತಪಸ್ವಿನಃ ।
ಕಿಂಚಿದಾಗತಸಂರಂಭೋ ವಿಶ್ವಾಮಿತ್ರೋಽಬ್ರವೀದಿದಮ್ ॥೨೮॥

ಏಕತಃ ಶ್ಯಾಮಕರ್ಣಾನಾಂ ಹಯಾನಾಂ ಚಂದ್ರವರ್ಚಸಾಮ್ ।
ಅಷ್ಟೌ ಶತಾನಿ ಮೇ ದೇಹಿ ಗಚ್ಛ ಗಾಲವ ಮಾಚಿರಮ್ ॥೨೯॥

ತಪಸ್ವಿಗಳಾದ ಗಾಲವರು ಪುನಃ ಪುನಃ ಆಡಿದ ಒತ್ತಾಯದ ಮಾತುಗಳಿಂದ ಸ್ವಲ್ಪ ಕೋಪಗೊಂಡ ವಿಶ್ವಾಮಿತ್ರರು ಹೀಗೆ ಹೇಳಿದರು– 'ಪೂರ್ಣವಾಗಿ ಚಂದ್ರನಂತೆ ಬಿಳಿಯ ಬಣ್ಣವನ್ನು ಹೊಂದಿ ಒಂದು ಕಿವಿಯು ಮಾತ್ರ ಕಪ್ಪಾಗಿರುವ ಎಂಟುನೂರು ಅಶ್ವಗಳನ್ನು ತೆಗೆದುಕೊಂಡು ಬಂದು ಕೊಡು. ಗಾಲವನೇ, ಬೇಗ ಹೋಗು'.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪಂಚಾಧಿಕಶತತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ಷಟ್‌ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಐದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಆರನೆಯ ಅಧ್ಯಾಯ

ಅಶ್ವಗಳನ್ನು ಪಡೆಯುವ ಉಪಾಯವನ್ನು ಕಾಣದೆ ಗಾಲವರಿಂದ ವಿಷ್ಣುವಿನ ಉಪಾಸನೆಯನ್ನು ಮಾಡಲು ನಿರ್ಧಾರ. ಸ್ನೇಹಿತನಾದ ಗರುಡನಿಂದ ಅವರ ಅಭಿಮತದೇಶಪ್ರಾಪ್ತಿ.

ನಾರದಃ

ಏವಮುಕ್ತಸ್ತದಾ ತೇನ ವಿಶ್ವಾಮಿತ್ರೇಣ ಧೀಮತಾ ।
ನಾಸ್ತೇ ನ ಶೇತೇ ನಾಹಾರಂ ಕುರುತೇ ಗಾಲವಸ್ತದಾ ॥೧॥

ನಾರದ– ಮೇಧಾವಿಗಳಾದ ವಿಶ್ವಾಮಿತ್ರರಿಂದ ಹೀಗೆ ಹೇಳಲ್ಪಟ್ಟ ಗಾಲವರು ಆಗ ಕುಳಿತುಕೊಳ್ಳಲಿಲ್ಲ, ನಿದ್ರೆಯನ್ನು ಮಾಡಲಿಲ್ಲ ಮತ್ತು ಆಹಾರವನ್ನೂ ಸೇವಿಸಲಿಲ್ಲ.

ತ್ವಗಸ್ಥಿಭೂತೋ ಹರಿಣಃ ಚಿಂತಾಶೋಕಪರಾಯಣಃ ।
ಶೋಚಮಾನೋऽತಿಮಾತ್ರಂ ಸ ದಹ್ಯಮಾನಶ್ಚ ಮನ್ಯುನಾ ॥೨॥

ಗಾಲವೋ ದುಃಖಿತೋ ದುಃಖಾದ್ ವಿಲಲಾಪ ಸುಯೋಧನ ॥೩॥

ಕೇವಲ ಚರ್ಮಾಸ್ಥಿಗಳುಳ್ಳ ಶರೀರವುಳ್ಳವರಾಗಿ, ಬಿಳಿಯ ಬಣ್ಣಕ್ಕೆ ತಿರುಗಿ, ಚಿಂತಾಶೋಕ ಪರಾಯಣರಾಗಿ ಶೋಕದಿಂದಲೂ ಮತ್ತು ತಮ್ಮ ಮೇಲಿನ ಕೋಪದಿಂದಲೂ ಸುಟ್ಟುಹೋಗುತ್ತಾ ಬಹಳ ದುಃಖಿತರಾಗಿ ಎಲೈ ಸುಯೋಧನನೇ, ದುಃಖದಿಂದ ವಿಲಾಪವನ್ನು ಮಾಡಿದರು.

ಗಾಲವಃ

ಕುತಃ ಪುಷ್ಣಾನಿ ಮಿತ್ರಾಣಿ ಕುತೋऽರ್ಥಾಃ ಸಂಚಯಃ ಕುತಃ ।
ಹಯಾನಾಂ ಚಂದ್ರಶುಭ್ರಾಣಾಂ ಶತಾನ್ಯಷ್ಟೌ ಕುತೋ ಮಮ ॥೪॥

ಗಾಲವ– ನಾನು ಸ್ನೇಹಿತರನ್ನು ಹೇಗೆ ಸಂತೋಷಪಡಿಸಲಿ? ನನಗೆ ಧನವು ಎಲ್ಲಿಂದ? ಧನದ ಸಂಚಯವು ಎಲ್ಲಿಂದ? ಚಂದ್ರನಂತೆ ಶುಭ್ರವಾದ ಎಂಟುನೂರು ಕುದುರೆಗಳು ನನಗೆ ಎಲ್ಲಿಂದ?

ಕುತೋ ಮೇ ಭೋಜನೇ ಶ್ರದ್ಧಾ ಸುಖಶ್ರದ್ಧಾ ಕುತಶ್ಚ ಮೇ ।
ಶ್ರದ್ಧಾ ಮೇ ಜೀವಿತಸ್ಯಾಪಿ ಕಿಂ ಫಲಂ ಜೀವಿತೇನ ಮೇ ॥೫॥

ನಾನು ಭೋಜನವನ್ನು ಮಾಡುವುದಕ್ಕೆ ಏಕೆ ಬಯಸಬೇಕು? ನನಗೆ ಸುಖದ ಆಸೆಯಾದರೂ ಏತಕ್ಕೆ? ಬದುಕುವ ಬಯಕೆಯಾದರೂ ಏತಕ್ಕೆ? ನಾನು ಬದುಕಿ ಏನು ಪ್ರಯೋಜನ?

ಅಹಂ ಪಾರಂ ಸಮುದ್ರಸ್ಯ ಪೃಥಿವ್ಯಾ ವಾ ಪರಾತ್ ಪರಮ್ ।
ಗತ್ವಾऽऽತ್ಮಾನಂ ವಿಮುಂಚಾಮಿ ಕಿಂ ಫಲಂ ಜೀವಿತಸ್ಯ ಮೇ ॥೬॥

ನಾನು ಸಮುದ್ರದ ಅಥವಾ ಭೂಮಿಯ ದೂರದ ದಡಕ್ಕೆ ಹೋಗಿ ಶರೀರವನ್ನು ತ್ಯಜಿಸುತ್ತೇನೆ. ನಾನು ಬದುಕಿ ಏನು ಪ್ರಯೋಜನ?

ಅಧನಸ್ಯಾಕೃತಾರ್ಥಸ್ಯ ತ್ಯಕ್ತಸ್ಯ ವಿವಿಧೈಃ ಫಲೈಃ ।
ಋಣಂ ಧಾರಯಮಾಣಸ್ಯ ಕುತಃ ಸುಖಮನೀಹಯಾ ॥೭॥

ನಿರ್ಧನನಾದ, ಮಾಡಬೇಕಾದ ಕಾರ್ಯವನ್ನು ಮಾಡದಿರುವ, ವಿವಿಧ ಫಲಗಳಿಂದ ವಂಚಿತನಾದ, ಸಾಲವನ್ನು ಹೊತ್ತುಕೊಂಡಿರುವ ನನಗೆ ಅನಾಯಾಸವಾಗಿ ಸುಖವು ಎಲ್ಲಿಂದ ಬರಬೇಕು?

ಸುಹೃದಾಂ ಹಿ ಧನಂ ಭುಕ್ತ್ವಾ ಕೃತ್ವಾ ಪ್ರಣಯಮೀಪ್ಸಿತಮ್ ।
ಪ್ರತಿಕರ್ತುಮಶಕ್ತಸ್ಯ ಜೀವಿತಾನ್ಮರಣಂ ವರಮ್ ॥೮॥

ಮಿತ್ರರ ಧನವನ್ನು ಭೋಗಿಸಿ, ಇಷ್ಟವಾದ ಸ್ನೇಹವನ್ನು ಮಾಡಿ, ಪ್ರತ್ಯುಪಕಾರವನ್ನು ಮಾಡಲು ಅಸಮರ್ಥನಾದವನಿಗೆ ಜೀವನಕ್ಕಿಂತ ಮರಣವೇ ಶ್ರೇಷ್ಠವಾದುದು.

ಪ್ರತಿಶ್ರುತ್ಯ ಕರಿಷ್ಯೇತಿ ಕರ್ತವ್ಯಂ ತದಕುರ್ವತಃ ।
ಮಿಥ್ಯಾವಚನದಗ್ಧಸ್ಯ ಇಷ್ಟಾಪೂರ್ತಂ ಪ್ರಣಶ್ಯತಿ ॥೯॥

ನಾನು ಮಾಡುತ್ತೇನೆ ಎಂದು ಅತಿಶಯವಾಗಿ ಪ್ರತಿಜ್ಞೆಯನ್ನು ಮಾಡಿ ಆ ಕಾರ್ಯವನ್ನು ಮಾಡದೆ ಮಿಥ್ಯಾವಚನದಿಂದ ದಗ್ಧನಾದವನಿಗೆ ಇಷ್ಟಾಪೂರ್ತಗಳು ನಾಶವನ್ನು ಹೊಂದುತ್ತವೆ.

ನ ರೂಪಮನೃತಸ್ಯಾಸ್ತಿ ನಾನೃತಸ್ಯಾಸ್ತಿ ಸಂತತಿಃ ।
ನಾನೃತಸ್ಯಾಧಿಪತ್ಯಂ ಚ ಕುತ ಏವ ಗತಿಃ ಶುಭಾ ॥೧೦॥

ಸುಳ್ಳನ್ನು ಆಡುವ ಮನುಷ್ಯನಿಗೆ ಒಳ್ಳೆಯ ರೂಪವಿರುವುದಿಲ್ಲ, ಸಂತತಿಯು ಇರುವುದಿಲ್ಲ, ಆಧಿಪತ್ಯವು ಇರುವುದಿಲ್ಲ, ಸದ್ಗತಿಯು ಹೇಗೆ ಉಂಟಾದೀತು?

ಕುತಃ ಕೃತಘ್ನಸ್ಯ ಯಶಃ ಕುತಃ ಸ್ಥಾನಂ ಕುತಃ ಸುಖಮ್ ।
ಅಶ್ರದ್ಧೇಯಃ ಕೃತಘ್ನೋ ಹಿ ಕೃತಘ್ನೇ ನಾಸ್ತಿ ನಿಷ್ಕೃತಿಃ ॥೧೧॥

ಕೃತಘ್ನನಾದವನಿಗೆ ಕೀರ್ತಿಯು ಎಲ್ಲಿಂದ ಬಂದೀತು? ಆಶ್ರಯವು ಎಲ್ಲಿಂದ? ಸುಖವು ಎಲ್ಲಿಂದ? ಕೃತಘ್ನನ್ನು ಯಾರೂ ನಂಬುವುದಿಲ್ಲ. ಕೃತಘ್ನನಿಗೆ ಯಾವ ಪ್ರಾಯಶ್ಚಿತ್ತವೂ ಇಲ್ಲ.

ನ ಜೀವತ್ಯಧನಃ ಪಾಪಃ ಕುತಃ ಪಾಪಸ್ಯ ಸಾ ಘೃಣಾ ।
ಪಾಪೋ ಧ್ರುವಮವಾಪ್ನೋತಿ ವಿನಾಶಂ ನಾಶಯನ್ ಕೃತಮ್ ॥೧೨॥

ನಿರ್ಧನನಾದವನು ಪಾಪಿಯಾಗಿ ಜೀವಿಸುವುದಿಲ್ಲ. ಪಾಪಿಯ ಮೇಲೆ ಇನ್ನೊಬ್ಬರ ಕರುಣೆ ಹೇಗಿರುತ್ತದೆ? ಪಾಪವನ್ನು ಮಾಡುವವನು ತಾನು ಮಾಡಿದ ಪುಣ್ಯಕರ್ಮಗಳನ್ನು ನಾಶ ಮಾಡಿಕೊಂಡು ನಿಶ್ಚಯವಾಗಿ ವಿನಾಶವನ್ನು ಹೊಂದುತ್ತಾನೆ.

ಸೋಽಹಂ ಪಾಪಃ ಕೃತಘ್ನಶ್ಚ ಕೃಪಣಶ್ಚಾನೃತೋಽಪಿ ಚ ।
ಗುರೋರ್ಯಃ ಕೃತಕಾರ್ಯಃ ಸನ್ ತತ್ ಕರೋಮಿ ನ ಭಾಷಿತಮ್ ॥

ನಾನು ಪಾಪಿ, ಕೃತಘ್ನ, ಲೋಭಿ, ಸುಳ್ಳು ಮಾತನಾಡುವವನು. ಏಕೆಂದರೆ ಗುರುಗಳಿಂದ ಉಪಕಾರವನ್ನು ಪಡೆದು ಅವರಿಗೆ ಕೊಟ್ಟ ಮಾತನ್ನು ನಾನು ನಡೆಸುತ್ತಿಲ್ಲ.

ಸೋಽಹಂ ಪ್ರಾಣಾನ್ ವಿಮೋಕ್ಷ್ಯಾಮಿ ಕೃತ್ವಾ ಯತ್ನಮನುತ್ತಮಮ್ ।
ಅರ್ಥಿತಾ ನ ಮಯಾ ಕಾಚಿತ್ ಕೃತಪೂರ್ವಾ ದಿವೌಕಸಾಮ್ ॥೧೪॥

ಮಾನಯಂತಿ ಚ ಮಾಂ ಸರ್ವೇ ತ್ರಿದಶಾ ಯಜ್ಞಸಂಸ್ತರೇ ॥೧೫॥

ಆದ್ದರಿಂದ ನಾನು ಶ್ರೇಷ್ಠವಾದ ಪ್ರಯತ್ನವನ್ನು ಮಾಡಿ ಪ್ರಾಣವನ್ನು ತೊರೆಯುವೆನು. ನಾನು ಹಿಂದೆ ದೇವತೆಗಳನ್ನು ಏನನ್ನೂ ಬೇಡಲಿಲ್ಲ. ದೇವತೆಗಳೆಲ್ಲರೂ ನನ್ನನ್ನು ಯಜ್ಞಭೂಮಿಯಲ್ಲಿ ಗೌರವಿಸುತ್ತಾರೆ.

ಅಹಂ ತು ವಿಬುಧಶ್ರೇಷ್ಠಂ ದೇವಂ ತ್ರಿಭುವನೇಶ್ವರಮ್ ।
ವಿಷ್ಣುಂ ಗಚ್ಛಾಮ್ಯಹಂ ಕೃಷ್ಣಂ ಗತಿಂ ಗತಿಮತಾಂ ವರಮ್ ॥೧೬॥

ನಾನು ವಿಬುಧಶ್ರೇಷ್ಠನಾದ ತ್ರಿಭುವನೇಶ್ವರನಾದ ಗತಿಯನ್ನು ಅಪೇಕ್ಷಿಸುವವರಿಗೆ ಶ್ರೇಷ್ಠನಾದ ವಿಷ್ಣುವಾದ ಕೃಷ್ಣನನ್ನು ಶರಣು ಹೊಂದುವೆನು.

ಭೋಗಾ ಯಸ್ಮಾತ್ ಪ್ರವರ್ತಂತೇ ಪ್ರಾಪ್ಯ ಸರ್ವಾನ್ ಸುರಾಸುರಾನ್ ।
ಪ್ರಯತೋ ದ್ರಷ್ಟುಮಿಚ್ಛಾಮಿ ಕೃಷ್ಣಂ ಯೋಗಿನಮವ್ಯಯಮ್ ॥೧೭॥

ಸುರಾಸುರರೆಲ್ಲರಿಗೂ ಭೋಗಗಳು ಯಾವನ ಅನುಗ್ರಹದಿಂದ ಉಂಟಾಗುತ್ತವೆಯೋ ಅಂತಹ ಯೋಗಿಯೂ ಮತ್ತು ಶಾಶ್ವತನೂ ಆದ ಕೃಷ್ಣನನ್ನು ನಿಯಮಬದ್ಧನಾಗಿ ನೋಡಲು ಬಯಸುತ್ತೇನೆ.

ನಾರದಃ

ಏವಮುಕ್ತೇ ಸಖಾ ತಸ್ಯ ಗರುಡೋ ವಿನತಾಸುತಃ ।
ದರ್ಶಯಾಮಾಸ ತಂ ಪ್ರಾಹ ಸಂಹೃಷ್ಟಃ ಪ್ರಿಯಕಾಮ್ಯಯಾ ॥೧೮॥

ನಾರದ– ಹೀಗೆ ಅವನು ಹೇಳುತ್ತಿರಲು ಅವನ ಸ್ನೇಹಿತನಾದ ವಿನತಾಪುತ್ರನಾದ ಗರುಡನು ಅವನಿಗೆ ಪ್ರಿಯವನ್ನು ಮಾಡಲು ಬಯಸಿ ತನ್ನನ್ನು ತೋರಿಸಿಕೊಂಡು ಸಂತೋಷದಿಂದ ಈ ಮಾತುಗಳನ್ನು ಹೇಳಿದನು.

ಗರುಡಃ

ಸುಹೃದ್ಭವಾನ್ ಮಮ ಮತಃ ಸುಹೃದಾಂ ಚ ಮತಃ ಸುಹೃತ್ ।
ಈಪ್ಸಿತೇನಾಭಿಲಾಷೇಣ ಯೋಕ್ತವ್ಯೋ ವಿಭವೇ ಸತಿ ॥೧೯॥

ಗರುಡ– ನೀನು ನನ್ನ ಸ್ನೇಹಿತನಾಗಿದ್ದೀಯೆ. ಸ್ನೇಹಿತನೆಂದು ತಿಳಿಯಲ್ಪಡುವವನು ಅವನಿಗೆ ಸಾಮರ್ಥ್ಯವಿದ್ದರೆ ಸ್ನೇಹಿತನಿಗೆ ಈಪ್ಸಿತವಾದ ಫಲವನ್ನು ಉಂಟುಮಾಡಬೇಕು.

ವಿಭವಶ್ಚಾಸ್ತಿ ಮೇ ವಿಪ್ರ ವಾಸವಾವರಜೋ ದ್ವಿಜ ।
ಪೂರ್ವಮುಕ್ತಸ್ತ್ವದರ್ಥಂ ಚ ಕೃತಃ ಕಾಮಶ್ಚ ತೇನ ಮೇ ॥೨೦॥

ಎಲೈ ಬ್ರಾಹ್ಮಣನೇ, ನನಗೆ ಅಂತಹ ಸಾಮರ್ಥ್ಯವಿದೆ. ಎಲೈ ಬ್ರಾಹ್ಮಣನೇ, ವಿಷ್ಣುವು ಹಿಂದೆ ನನ್ನ ಆಸೆಗಳನ್ನು ನೆರವೇರಿಸಿದ್ದಾನೆ. ನಿನ್ನ ಸಲುವಾಗಿ ಹಿಂದೆ ನಾನು ಅವನ ಬಳಿಯಲ್ಲಿ ಮಾತನಾಡಿದ್ದೇನೆ.

ಸ ಭವಾನೇತು ಗಚ್ಛಾವ ನಯಿಷ್ಯೇ ತ್ವಾಂ ಯಥೇಪ್ಸಿತಮ್ ।
ದೇಶಂ ಪಾರಂ ಪೃಥಿವ್ಯಾ ವಾ ಗಚ್ಛ ಗಾಲವ ಮಾಚಿರಮ್ ॥೨೧॥

ಆದ್ದರಿಂದ ನೀನು ಬಾ. ನಾನು ನೀನು ಇಷ್ಟಪಟ್ಟ ದೇಶಕ್ಕೆ ಅಥವಾ ಭೂಮಿಯ ಆಚೆಯ ದಡಕ್ಕೆ ನಿನ್ನನ್ನು ಕರೆದುಕೊಂಡು ಹೋಗುವೆನು. ಗಾಲವನೇ, ನನ್ನ ಜೊತೆಯಲ್ಲಿ ಬಾ, ತಡಮಾಡಬೇಡ (ಎಂದು ಹೇಳಿದನು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಷಡಧಿಕಶತತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ಸಪ್ತತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಆರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಏಳನೆಯ ಅಧ್ಯಾಯ

ಗರುಡನಿಂದ ಗಾಲವರಿಗೆ ಪೂರ್ವದಿಕ್ಕಿನ ಗುಣವರ್ಣನೆ

ಸುಪರ್ಣಃ

ಅನುಶಿಷ್ಟೋಽಸ್ಮಿ ದೇವೇನ ಗಾಲವ ಜ್ಞಾನಯೋನಿನಾ ।
ಬ್ರೂಹಿ ಕಾಮಂ ತು ಕಾಂ ಯಾಮಿ ದ್ರಷ್ಟುಂ ಪ್ರಥಮತೋ ದಿಶಮ್ ॥

ಪೂರ್ವಾಂ ವಾ ದಕ್ಷಿಣಾಂ ವೇಮಾಮಥವಾ ಪಶ್ಚಿಮಾಂ ದಿಶಮ್ ।
ಉತ್ತರಾಂ ವಾ ದ್ವಿಜಶ್ರೇಷ್ಠ ಕುತೋ ಗಚ್ಛಾಮಿ ಗಾಲವ ॥೨॥

ಸುಪರ್ಣ– ಎಲೈ ಗಾಲವನೇ, ಜ್ಞಾನಕಾರಣನಾದ ವಿಷ್ಣುವಿನಿಂದ ನಾನು ಶಿಕ್ಷಿತನಾಗಿದ್ದೇನೆ. ನಿನ್ನ ಆಸೆಯು ಏನಿದೆ ಎಂದು ಹೇಳು. ಮೊದಲು ಯಾವ ದಿಕ್ಕನ್ನು ನೋಡಲು ಹೋಗಲಿ? ಎಲೈ ಗಾಲವನೇ, ದ್ವಿಜಶ್ರೇಷ್ಠನೇ, ಪೂರ್ವದಿಕ್ಕಿಗೋ? ಅಥವಾ ಈ ದಕ್ಷಿಣ ದಿಕ್ಕಿಗೋ? ಪಶ್ಚಿಮ ದಿಕ್ಕಿಗೋ? ಅಥವಾ ಉತ್ತರದಿಕ್ಕಿಗೋ? (ಎಂದು ಹೇಳು).

ಯಸ್ಯಾಮುದಯತೇ ಪೂರ್ವಂ ಸರ್ವಲೋಕಪ್ರಭಾವನಃ ।
ಸವಿತಾ ಯತ್ರ ಸಾಧ್ಯಾನಾಂ ಸಿದ್ಧಾನಾಂ ವರ್ಧತೇ ತಪಃ ॥೩॥

ಯಸ್ಯಾಂ ಪೂರ್ವಂ ದ್ಯುತಿರ್ಜಾತಾ ಯಯಾ ವ್ಯಾಪ್ತಮಿದಂ ಜಗತ್ ।
ಚಕ್ಷುಷೀ ಯತ್ರ ಧರ್ಮಸ್ಯ ಯತ್ರ ಧರ್ಮಃ ಪ್ರತಿಷ್ಠಿತಃ ॥೪॥

ಹುತಂ ಯತೋ ಮುಖೇ ಹವ್ಯಂ ಸರ್ಪತೇ ಸರ್ವತೋದಿಶಮ್ ।
ಏತದ್ ದ್ವಾರಂ ದ್ವಿಜಶ್ರೇಷ್ಠ ದಿವಸಸ್ಯ ತಥಾऽಧ್ವನಃ ॥೫॥

ಸರ್ವಲೋಕಕ್ಕೂ ಪ್ರಭೆಯನ್ನುಂಟು ಮಾಡುವ ಸೂರ್ಯನು ಎಲ್ಲಿ ಮೊದಲು ಉದಯಿಸುತ್ತಾನೆಯೋ, ಎಲ್ಲಿ ಸಾಧ್ಯರ ಮತ್ತು ಸಿದ್ಧರ ತಪಸ್ಸು ಅಭಿವೃದ್ಧಿಯನ್ನು ಹೊಂದುತ್ತದೆಯೋ, ಎಲ್ಲಿ ಮೊದಲು ಉಂಟಾದ ಬೆಳಕಿನಿಂದ ಈ ಜಗತ್ತೆಲ್ಲವೂ ವ್ಯಾಪ್ತವಾಗುತ್ತದೆಯೋ, ಎಲ್ಲಿ ಧರ್ಮದ ಚಕ್ಷುಸ್ಸುಗಳು ಇವೆಯೋ, ಎಲ್ಲಿ ಧರ್ಮವು ಪ್ರತಿಷ್ಠಿತವಾಗಿದೆಯೋ, ಎಲ್ಲಿ ಮುಖದಲ್ಲಿ ಹುತವಾದ ಹವಿಸ್ಸು ಎಲ್ಲ ದಿಕ್ಕುಗಳಲ್ಲಿಯೂ ಹರಡುತ್ತದೆಯೋ, ಎಲೈ ದ್ವಿಜಶ್ರೇಷ್ಠನೇ, ಅಂತಹ ಈ ಪೂರ್ವದಿಕ್ಕು ದಿವಸಕ್ಕೂ ಮತ್ತು ಮಾರ್ಗಕ್ಕೂ ದ್ವಾರವಾಗಿದೆ.

ಅತ್ರ ಪೂರ್ವಂ ಪ್ರಸೂತಾ ವೈ ದಾಕ್ಷಾಯಣ್ಯಸ್ತಥಾ ಸ್ತ್ರಿಯಃ ।
ಯಸ್ಯಾಂ ದಿಶಿ ಪ್ರವೃದ್ಧಾಶ್ಚ ಕಾಶ್ಯಪಸ್ಯಾತ್ಮಸಂಭವಾಃ ॥೬॥

ದಾಕ್ಷಾಯಿಣಿಯರಾದ ಸ್ತ್ರೀಯರೆಲ್ಲರೂ ಇಲ್ಲಿಯೇ ಮೊದಲು ಪ್ರಸೂತರಾದರು ಮತ್ತು ಕಾಶ್ಯಪರ ಮಕ್ಕಳಾಗಿ ಹುಟ್ಟಿದ ಅವರು ಈ ದಿಕ್ಕಿನಲ್ಲಿಯೇ ಬೆಳೆದರು.

ಯತೋಮೂಲಾ ಸುರಾಣಾಂ ಶ್ರೀಃ ಯತ್ರ ಶಕ್ರೋऽಭ್ಯಷಿಚ್ಯತ ।
ಸುರರಾಜೇನ ವಿಪ್ರರ್ಷೇ ದೇವೈಶ್ಚಾತ್ರ ತಪಶ್ಚಿತಮ್ ॥೭॥

ದೇವತೆಗಳ ಸಂಪತ್ತಿಗೆ ಇದೇ ಮೂಲವಾಗಿದೆ. ಇಂದ್ರನು ಇಲ್ಲಿಯೇ ಅಭಿಷಿಕ್ತನಾದನು. ವಿಪ್ರರ್ಷಿಯೇ, ದೇವೇಂದ್ರನೂ ಮತ್ತು ದೇವತೆಗಳೂ ಇಲ್ಲಿ ತಪಸ್ಸನ್ನು ಮಾಡಿದರು.

ಏತಸ್ಮಾತ್ ಕಾರಣಾತ್ ಬ್ರಹ್ಮನ್ ಪೂರ್ವೇತ್ಯೇಷಾ ದಿಗುಚ್ಯತೇ ।
ಯಸ್ಮಾತ್ ಪೂರ್ವತರೇ ಕಾಲೇ ಪೂರ್ವಮೇಷಾ ವೃತಾ ಸುರೈಃ ॥೮॥

ಎಲೈ ಬ್ರಾಹ್ಮಣರೇ, ಆ ಕಾರಣದಿಂದ ಈ ದಿಕ್ಕಿಗೆ ಪೂರ್ವ ಎಂದು ಹೆಸರು. ಏಕೆಂದರೆ ಪೂರ್ವತರವಾದ ಕಾಲದಲ್ಲಿ ಈ ದಿಕ್ಕು ದೇವತೆಗಳಿಂದ ಮೊದಲು ಆರಿಸಲ್ಪಟ್ಟಿತು.

ಅತ ಏವ ಚ ಸರ್ವೇಷಾಂ ಪೂರ್ವಮಾಶಾಮವೇಕ್ಷತಾಮ್ ।
ಪೂರ್ವಂ ಕಾರ್ಯಾಣಿ ಸರ್ವಾಣಿ ದೈವಾನಿ ಸುಖಮಿೀಪ್ಸತಾ ॥೯॥

ಆದ್ದರಿಂದಲೇ ತಮ್ಮ ಹಿಂದಿನ ಆಸೆಯನ್ನು ಗಮನಿಸಿ ಸುಖವನ್ನು ಬಯಸುವವರೆಲ್ಲರೂ ದೈವ ಕಾರ್ಯಗಳೆಲ್ಲವನ್ನೂ ಪೂರ್ವದಲ್ಲಿಯೇ ಮಾಡಬೇಕು.

ಅತ್ರ ವೇದಾನ್ ಜಗೌ ಪೂರ್ವಂ ಭಗವಾನ್ ಲೋಕಭಾವನಃ ।
ಅತ್ರೈವೋಕ್ತಾ ಸವಿತ್ರಾಽಽಸೀತ್ ಸಾವಿತ್ರೀ ಬ್ರಹ್ಮವಾದಿಷು ॥೧೦॥

ಇಲ್ಲಿ ಲೋಕಭಾವನನಾದ ವಿಷ್ಣುವು ಮೊದಲು ವೇದಗಳನ್ನು ಉಚ್ಚರಿಸಿದನು. ಇಲ್ಲಿಯೇ ಸವಿತೃವು ಬ್ರಹ್ಮವಾದಿಗಳಿಗೆ ಸಾವಿತ್ರೀ ಮಂತ್ರವನ್ನು ಉಪದೇಶ ಮಾಡಿದನು.

ಅತ್ರ ದತ್ತಾನಿ ಸೂರ್ಯೇಣ ಯಜೂಂಷಿ ದ್ವಿಜಸತ್ತಮ ।
ಅತ್ರ ಲಬ್ಧವರಃ ಸೋಮಃ ಸುರೈಃ ಕ್ರತುಷು ಪೀಯತೇ ॥೧೧॥

ಎಲೈ ದ್ವಿಜಶ್ರೇಷ್ಠರೇ, ಇಲ್ಲಿಯೇ ಸೂರ್ಯನು ಯಜುಸ್ಸುಗಳನ್ನು ನೀಡಿದನು. ಇಲ್ಲಿ ವರವನ್ನು ಪಡೆದ ಸೋಮನು (ಚಂದ್ರನಿಂದ ಅಭಿಮನ್ಯಮಾನವಾದ ಸೋಮರಸವು) ಯಜ್ಞಗಳಲ್ಲಿ ದೇವತೆಗಳಿಂದ ಪಾನಮಾಡಲ್ಪಡುತ್ತದೆ.

ಅತ್ರ ತೃಪ್ತಾ ಹುತವಹಾಃ ಸ್ವಾಂ ಯೋನಿಮುಪಭುಂಜತೇ ।
ಅತ್ರ ಪಾತಾಳಮಾಶ್ರಿತ್ಯ ವರುಣಃ ಶ್ರಿಯಮಾಪ ಚ ॥೧೨॥

ಇಲ್ಲಿ ತೃಪ್ತರಾದ ಅಗ್ನಿಗಳು ತಮ್ಮ ವೃದ್ಧಿಗೆ ಕಾರಣವಾದ ಆಜ್ಯಸೋಮಾದಿಗಳನ್ನು ಉಪಭೋಗಿಸುತ್ತಾರೆ. ಇಲ್ಲಿ ಪಾತಾಳಲೋಕದಲ್ಲಿ ವರುಣನು ಸಂಪತ್ತನ್ನು ಹೊಂದಿದನು.

ಅತ್ರ ಪೂರ್ವಂ ವಶಿ(ಸಿ)ಷ್ಠಸ್ಯ ಪೌರಾಣಸ್ಯ ದ್ವಿಜರ್ಷಭ ।
ಪ್ರಸೂತಿಶ್ಚ ಪ್ರತಿಷ್ಠಾ ಚ ಧರ್ಮಶ್ಚೈವ ಪ್ರಕಾಶತೇ ॥೧೩॥

ಎಲೈ ದ್ವಿಜಶ್ರೇಷ್ಠರೇ, ಇಲ್ಲಿಯೇ ಎಲ್ಲರನ್ನೂ ವಶೀಕರಿಸುವ ಪುರಾಣಗಳ ಉತ್ಪತ್ತಿಯೂ ಪ್ರತಿಷ್ಠೆಯೂ ಮತ್ತು ಪುರಾಣೋಕ್ತವಾದ ಧರ್ಮಗಳೂ ಪ್ರಕಾಶಿಸುತ್ತವೆ.

ಓಂಕಾರಸ್ಯಾತ್ರ ಜಾಯಂತೇ ಸೂತಯೋ ದಶತೀರ್ದಶ ।
ಪಿಬಂತಿ ಮುನಯೋ ಯತ್ರ ಹವಿರ್ಧಾನೇ ಸ್ಮ ಸೋಮಪಾಃ ॥೧೪॥

ಇಲ್ಲಿ ಓಂಕಾರದ ಸಾವಿರಾರು ಸ್ವರಜಾತಿಗಳು ಉತ್ಪನ್ನವಾಗುತ್ತವೆ. ಇಲ್ಲಿ ಸೋಮಪಾನಾರ್ಹರಾದ, ಮನನವನ್ನು ಮಾಡುವುದರಿಂದ ಮುನಿಶಬ್ದವಾಚ್ಯರಾದ ದೇವತೆಗಳು ಹವಿರ್ಧಾನದಲ್ಲಿ(ಯಜ್ಞದಲ್ಲಿ) ಸೋಮವನ್ನು ಪಾನ ಮಾಡುತ್ತಾರೆ.

ಪ್ರೋಕ್ಷಿತಾ ಯತ್ರ ಬಹವೋ ವರಾಹಾದ್ಯಾ ಮೃಗಾ ವನೇ ।
ಶಕ್ರೇಣ ಯಜ್ಞಭಾಗಾರ್ಥೇ ದೈವತೇಷು ಪ್ರಕಲ್ಪಿತಾಃ ॥೧೫॥

ಯಾವ ಈ ದಿಕ್ಕಿನಲ್ಲಿ ಕಾಡಿನಲ್ಲಿ ಪ್ರೋಕ್ಷಿತವಾದ ವರಾಹಾದಿ ಮೃಗಗಳು ದೇವತೆಗಳ ಯಜ್ಞಭಾಗವೆಂದು ಇಂದ್ರನಿಂದ ಕಲ್ಪಿತವಾದವು.

ಅತ್ರಾಹಿತಾಃ ಕೃತಘ್ನಾಶ್ಚ ಮಾನುಷಾಶ್ಚಾಸುರಾಶ್ಚ ಯೇ ।
ಉದಯಂಸ್ತಾನ್ ಹಿ ಸರ್ವಾನ್ ವೈ ಕ್ರೋಧಾದ್ದಂತಿ ವಿಭಾವಸುಃ ॥೧೬॥

ಇಲ್ಲಿ ಅಹಿತರಾದ, ಕೃತಘ್ನರಾದ ಎಲ್ಲಾ ಮನುಷ್ಯರನ್ನೂ ಮತ್ತು ಅಸುರರನ್ನೂ ಸೂರ್ಯನು ಉದಯಿಸುತ್ತಾ ಕ್ರೋಧದಿಂದ ನಾಶ ಮಾಡುತ್ತಾನೆ.

ಏತದ್ ದ್ವಾರಂ ದ್ವಿಜಶ್ರೇಷ್ಠ ಸ್ವರ್ಗಸ್ಯ ಚ ಸುಖಸ್ಯ ಚ ।
ಏಷ ಪೂರ್ವೋ ದಿಶಾಂ ಭಾಗೋ ಗಚ್ಛಾವೋಽತ್ರ ಯದೀಚ್ಛಸಿ ॥೧೭॥

ಎಲೈ ದ್ವಿಜಶ್ರೇಷ್ಠರೇ, ಇದು ಸ್ವರ್ಗಕ್ಕೂ ಮತ್ತು ಸುಖಕ್ಕೂ ದ್ವಾರವಾದುದು. ಇದು ದಿಕ್ಕುಗಳ ಪೂರ್ವಭಾಗ. ನಿನಗೆ ಇಚ್ಛೆ ಇದ್ದರೆ ಅಲ್ಲಿಗೆ ಹೋಗೋಣ.

ಪ್ರಿಯಂ ಕಾರ್ಯಂ ಹಿ ಮೇ ತಸ್ಯ ಯಸ್ಯಾಸ್ಮಿ ವಚನೇ ಸ್ಥಿತಃ ।
ಬ್ರೂಹಿ ಗಾಲವ ಯಾಸ್ಯಾಮಿ ಶೃಣು ಚಾಪ್ಯಪರಾಂ ದಿಶಮ್ ॥೧೮॥

ಯಾವ ನಿನ್ನ ಮಾತಿನಂತೆ ನಾನು ನಡೆದುಕೊಳ್ಳುತ್ತೇನೆಯೋ ಅಂತಹ ನಾನು ನಿನಗೆ ಪ್ರಿಯವನ್ನು ಮಾಡಬೇಕು. ಗಾಲವನೇ ಹೇಳು, ಹೋಗುವೆನು. ಅಥವಾ ಇನ್ನೊಂದು ದಿಕ್ಕಿನ ವರ್ಣನೆಯನ್ನಾದರೂ ಕೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಸಪ್ತೋತ್ತರಶತತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ಅಷ್ಟತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಏಳನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಟನೆಯ ಅಧ್ಯಾಯ

ಗರುಡನಿಂದ ಗಾಲವರಿಗೆ ದಕ್ಷಿಣ ದಿಕ್ಕಿನ ಗುಣವರ್ಣನೆ

ಸುಪರ್ಣಃ

ಇಯಂ ವಿವಸ್ವತಾ ಪೂರ್ವಂ ಶ್ರೌತೇನ ವಿಧಿನಾ ಕಿಲ ।
ಗುರವೇ ದಕ್ಷಿಣಾ ದತ್ತಾ ದಕ್ಷಿಣೇತ್ಯುಚ್ಯತೇ ಚ ದಿಕ್ ॥೧॥

ಸುಪರ್ಣ– ಇದನ್ನು ಹಿಂದೆ ವಿವಸ್ವಾನ್ ನಾಮಕ ಸೂರ್ಯನು ಶ್ರೌತವಿಧಾನದಿಂದ ಗುರುಗಳಿಗೆ ದಕ್ಷಿಣೆಯಾಗಿ ಕೊಟ್ಟನು. ಆದ್ದರಿಂದ ಈ ದಿಕ್ಕು ದಕ್ಷಿಣಾ ಎಂದು ಕರೆಯಲ್ಪಡುತ್ತದೆ.

ಅತ್ರ ಲೋಕತ್ರಯಸ್ಯಾಪಿ ಪಿತೃಪಕ್ಷಃ ಪ್ರತಿಷ್ಠಿತಃ ।
ಅತ್ರೋಷ್ಮಪಾಣಾಂ ದೇವಾನಾಂ ನಿವಾಸಃ ಶ್ರೂಯತೇ ದ್ವಿಜ ॥೨॥

ಇಲ್ಲಿ ಮೂರುಲೋಕಗಳ ಪಿತೃಗಣಗಳು ಪ್ರತಿಷ್ಠಿತವಾಗಿವೆ. ಎಲೈ ಬ್ರಾಹ್ಮಣನೇ, ಊಷ್ಮಪಾನವನ್ನು ಮಾಡುವ ದೇವತೆಗಳಿಗೆ ಇದು ನಿವಾಸ ಸ್ಥಾನವೆಂದು ಹೇಳಲ್ಪಡುತ್ತದೆ.

ಅತ್ರ ವಿಶ್ವೇ ಸದಾ ದೇವಾಃ ಪಿತೃಭಿಃ ಸಾರ್ಧಮಾಸತೇ ।
ಇಜ್ಯಮಾನಾಃ ಸ್ಮ ಲೋಕೇಷು ಸಂಪ್ರಾಪ್ತಾಸ್ತುಲ್ಯಭಾಗತಾಮ್ ॥೩॥

ಇಲ್ಲಿ ವಿಶ್ವೇದೇವತೆಗಳು ಪಿತೃಗಳ ಜೊತೆಯಲ್ಲಿ ವಾಸ ಮಾಡುತ್ತಾರೆ. ಅವರು ಲೋಕಗಳಲ್ಲಿ ಪೂಜಿಸಲ್ಪಟ್ಟು ಪಿತೃಗಳ ಸಮಾನ ಭಾಗವನ್ನು ಹೊಂದಿದವರಾಗಿದ್ದಾರೆ.

ಏತದ್ ದ್ವಿತೀಯಂ ಧರ್ಮಸ್ಯ ದ್ವಾರಮಾಚಕ್ಷತೇ ದ್ವಿಜ ।
ತ್ರುಟಿಶೋ ಲವಶಶ್ಚಾಪಿ ಗಣ್ಯತೇ ಕಾಲನಿಶ್ಚಯಃ ॥೪॥

ಎಲೈ ಬ್ರಾಹ್ಮಣರೇ, ಇದನ್ನು ಎರಡನೆಯ ಧರ್ಮದ್ವಾರವೆಂದು ಹೇಳುತ್ತಾರೆ. ಇಲ್ಲಿ ತ್ರುಟಿ ಮತ್ತು ಲವಗಳಲ್ಲಿ ಕಾಲವು ಎಣಿಸಲ್ಪಡುತ್ತದೆ.

ಅತ್ರ ದೇವರ್ಷಯೋ ದಿವ್ಯಾಃ ಪಿತೃಲೋಕರ್ಷಯಸ್ತಥಾ ।
ತಥಾ ರಾಜರ್ಷಯಃ ಸರ್ವೇ ನಿವಸಂತಿ ಗತವ್ಯಥಾಃ ॥೫॥

ಇಲ್ಲಿ ದಿವ್ಯರಾದ ದೇವರ್ಷಿಗಳು, ಪಿತೃಲೋಕದ ಋಷಿಗಳು, ಅದರಂತೆ ಎಲ್ಲಾ ರಾಜರ್ಷಿಗಳು ಯಾವ ವ್ಯಥೆಯೂ ಇಲ್ಲದೆ ವಾಸ ಮಾಡುತ್ತಾರೆ.

ಅತ್ರ ಧರ್ಮಶ್ಚ ಸತ್ಯಂ ಚ ಕರ್ಮ ಚಾತ್ರ ನಿಯಮ್ಯತೇ ।
ಗತಿರೇಷಾ ದ್ವಿಜಶ್ರೇಷ್ಠ ಕರ್ಮಣಾಮವಸಾಯಿನಾಮ್ ॥೬॥

ಧರ್ಮ, ಸತ್ಯ ಮತ್ತು ಕರ್ಮಗಳು ಇಲ್ಲಿ ನಿಯಂತ್ರಿಸಲ್ಪಡುತ್ತವೆ. ಎಲೈ ಬ್ರಾಹ್ಮಣರೇ, ಅಧಮ ಕರ್ಮವನ್ನು ಮಾಡಿದವರಿಗೆ ಈ ದಿಕ್ಕೇ ಗತಿ.

ಏಷಾ ದಿಕ್ ಸಾ ದ್ವಿಜಶ್ರೇಷ್ಠ ಯಾಂ ಸರ್ವಃ ಪ್ರತಿಪದ್ಯತೇ ।
ಮೃತಾತ್ಮಾಽನವಬೋಧೇನ ಸುಖಂ ತೇನ ನ ಗಮ್ಯತೇ ॥೭॥

ಎಲೈ ದ್ವಿಜಶ್ರೇಷ್ಠನೇ, ಅಜ್ಞಾನದಿಂದ ಕೂಡಿದ ಎಲ್ಲರೂ ಮರಣವನ್ನು ಹೊಂದಿ ಈ ದಿಕ್ಕಿಗೆ ಬರುತ್ತಾರೆ. ಅವರು ಇಲ್ಲಿ ಸುಖವನ್ನು ಹೊಂದುವುದಿಲ್ಲ.

ನೈರ್ಋತಾನಾಂ ಸಹಸ್ರಾಣಿ ಬಹೂನ್ಯತ್ರ ದ್ವಿಜರ್ಷಭ ।
ಸೃಷ್ಟಾನಿ ಪ್ರತಿಕೂಲಾನಿ ದ್ರಷ್ಟವ್ಯಾನ್ಯಕೃತಾತ್ಮಭಿಃ ॥೮॥

ಎಲೈ ಬ್ರಾಹ್ಮಣಶ್ರೇಷ್ಠರೇ, ಸತ್ಕರ್ಮವನ್ನು ಮಾಡದವರು ಇಲ್ಲಿ ದೇವನಿಂದ ಸೃಷ್ಟರಾದ, ತಮಗೆ ಪ್ರತಿಕೂಲರಾದ ಅನೇಕ ಸಹಸ್ರ ರಾಕ್ಷಸರನ್ನು ನೋಡಬೇಕಾಗುತ್ತದೆ.

ಅತ್ರ ಮಂದರಕುಂಜೇಷು ವಿಪ್ರರ್ಷಿಸದನೇಷು ಚ ।
ಗಾಯಂತಿ ಗಾಥಾ ಗಂಧರ್ವಾಃ ಚಿತ್ತಬುದ್ಧಿಹರಾ ದ್ವಿಜ ॥೯॥

ಎಲೈ ದ್ವಿಜರೇ, ಇಲ್ಲಿ ಮಂದರಪರ್ವತದ ಲತಾಕುಂಜಗಳಲ್ಲಿಯೂ, ಬ್ರಾಹ್ಮಣರ ಮತ್ತು ಋಷಿಗಳ ನಿವಾಸ ಸ್ಥಾನದಲ್ಲಿಯೂ ಗಂಧರ್ವರು ಮನೋಹರವಾದ ಮತ್ತು ಬುದ್ಧಿಹರವಾದ ಗಾಥೆಗಳನ್ನು ಗಾನ ಮಾಡುತ್ತಾರೆ.

ಅತ್ರ ಸಾಮಾನಿ ಗಾಥಾಭಿಃ ಶ್ರುತ್ವಾ ಗೀತಾನಿ ರೈವತಃ ।
ಗತದಾರೋ ಗತಾಮಾತ್ಯೋ ಗತರಾಜ್ಯೋ ವನಂ ಗತಃ ॥೧೦॥

ಇಲ್ಲಿ ಗಾಥೆಗಳಿಂದ ಕೂಡಿದ ಸಾಮಗಾನವನ್ನು ಕೇಳಿ ರೈವತರಾಜನು ಪತ್ನಿಯನ್ನೂ, ಅಮಾತ್ಯರನ್ನೂ ಮತ್ತು ರಾಜ್ಯವನ್ನೂ ಕಳೆದುಕೊಂಡು ಕಾಡಿಗೆ ಹೋದನು.

ಅತ್ರ ಸಾವರ್ಣಿನಾ ಚೈವ ಯವಕ್ರೀತಾತ್ಮಜೇನ ಚ ।
ಮರ್ಯಾದಾ ಸ್ಥಾಪಿತಾ ಬ್ರಹ್ಮನ್ ಯಾಂ ಸೂರ್ಯೋ ನಾತಿವರ್ತತೇ ॥

ಇಲ್ಲಿ ಸಾವರ್ಣಿ ಮನುವಿನಿಂದ ಮತ್ತು ಯವಕ್ರೀತರ ಪುತ್ರರಿಂದ ಸೂರ್ಯನಿಗೆ ಎಲ್ಲೆಯು ಸ್ಥಾಪಿಸಲ್ಪಟ್ಟಿದೆ. ಎಲೈ ಬ್ರಾಹ್ಮಣರೇ, ಸೂರ್ಯನು ಆ ಎಲ್ಲೆಯನ್ನು ಮೀರುವುದಿಲ್ಲ.

ಅತ್ರ ರಾಕ್ಷಸರಾಜೇನ ಪೌಲಸ್ತ್ಯೇನ ಮಹಾತ್ಮನಾ ।
ರಾವಣೇನ ತಪಶ್ಚರ್ತ್ವಾ ಸುರೇಭ್ಯೋಽಮರತಾ ವೃತಾ ॥೧೨॥

ಇಲ್ಲಿ ಮಹಾಪ್ರಯತ್ನಶೀಲನೂ, ಪೌಲಸ್ತ್ಯವಂಶದವನೂ, ರಾಕ್ಷಸರಾಜನೂ ಆದ ರಾವಣನು ತಪಸ್ಸನ್ನು ಆಚರಿಸಿ ದೇವತೆಗಳಿಂದ ಅಮರತ್ವವರವನ್ನು ಪ್ರಾರ್ಥಿಸಿದನು.

ಅತ್ರ ವೃತ್ತೇನ ವೃತ್ರೋಽಪಿ ಶಕ್ರಶತ್ರುತ್ವಮೇಯಿವಾನ್ ।
ಅತ್ರ ಸರ್ವಾಸವಃ ಪ್ರಾಪ್ತಾ ಪುನರ್ಗಚ್ಛಂತಿ ಪಂಚಧಾ ॥೧೩॥

ವೃತ್ರಾಸುರನೂ ಸಹ ಇಲ್ಲಿಯೇ ಇದ್ದು ಇಂದ್ರನ ಶತ್ರುವಾದನು. ಇಲ್ಲಿ ಎಲ್ಲ ಪ್ರಾಣಗಳು ಒಂದುಗೂಡಿ ಪುನಃ ಐದುಭಾಗವಾಗಿ ಹೋಗುತ್ತವೆ.

ಅತ್ರ ದುಷ್ಕೃತಕರ್ಮಾಣೋ ನರಾಃ ಪಚ್ಯಂತಿ ಗಾಲವ ।
ಅತ್ರ ವೈತರಣೀ ನಾಮ ನದೀ ಪಿತೃಗಣೈರ್ವೃತಾ ॥೧೪॥

ಎಲೈ ಗಾಲವರೇ, ಇಲ್ಲಿ ದುಷ್ಕರ್ಮವನ್ನು ಮಾಡಿದ ಮನುಷ್ಯರು ಬೇಯಿಸಲ್ಪಡುತ್ತಾರೆ. ಇಲ್ಲಿ ಪಿತೃಗಣಗಳಿಂದ ಕೂಡಿದ ವೈತರಣೀ ಎಂಬ ನದಿಯಿದೆ.

ಅತ್ರ ಗತ್ವಾ ಸುಖಸ್ಯಾಂತಂ ದುಃಖಸ್ಯಾಂತಂ ಪ್ರಪದ್ಯತೇ ।
ಅತ್ರ ವೃತ್ತೋ ದಿನಕರಃ ಸುರಸಂ ಕ್ಷರತೇ ಪಯಃ ॥೧೫॥

ಇಲ್ಲಿ ಸುಖದ ಪ್ರದೇಶಕ್ಕೆ ಹೋಗಿ ಅನಂತರ ಜೀವರು ದುಃಖದ ಪ್ರದೇಶಕ್ಕೆ ಹೋಗುತ್ತಾರೆ. ಈ ದಿಕ್ಕಿನಲ್ಲಿರುವ ಸೂರ್ಯನು ಒಳ್ಳೆಯ ರಸವುಳ್ಳ ನೀರನ್ನು (ಮಳೆಯನ್ನು ಸುರಿಸುತ್ತಾನೆ).

ಕಾಷ್ಠಾಂ ಚಾಸಾದ್ಯ ವಾಸಿಷ್ಠಾಂ ಹಿಮಮುತ್ಸೃಜತೇ ಪುನಃ ॥೧೬॥

ಅನಂತರ ವಾಸಿಷ್ಠರ ದಿಕ್ಕನ್ನು (ಪಶ್ಚಿಮ ದಿಕ್ಕನ್ನು) ತಲುಪಿದ ಸೂರ್ಯನು ಹಿಮವನ್ನು ಉಂಟುಮಾಡುತ್ತಾನೆ.

ಅತ್ರಾಹಂ ಗಾಲವ ಪುರಾ ಕ್ಷುಧಾರ್ತಃ ಪರಿಚಿಂತಯನ್ ।
ಲಬ್ಧವಾನ್ ಯುಧ್ಯಮಾನೌ ದ್ವೌ ಬೃಹಂತೌ ಗಜಕಚ್ಛಪೌ ॥೧೭॥

ಎಲೈ ಗಾಲವರೇ, ನಾನು ಹಿಂದೆ ಇಲ್ಲಿ ಹಸಿವಿನಿಂದ ಆರ್ತನಾಗಿ ಚಿಂತಿಸುತ್ತಾ ಪರಸ್ಪರ ಹೋರಾಡುತ್ತಿದ್ದ ಎರಡು ಗಜ ಮತ್ತು ಕೂರ್ಮಗಳನ್ನು ಆಹಾರವಾಗಿ ಪಡೆದೆನು.

ಅತ್ರ ಶಕ್ರಧನುರ್ನಾಮ ಸೂರ್ಯಾಜ್ಜಾತೋ ಮಹಾನೃಷಿಃ ।
ವಿದುರ್ಯಂ ಕಪಿಲಂ ದೇವಂ ಯೇನಾಸ್ತಾಃ ಸಗರಾತ್ಮಜಾಃ ॥೧೮॥

ಇಲ್ಲಿ ಸೂರ್ಯನಿಂದ ಜನಿಸಿದ ಶಕ್ರಧನುಸ್ಸೆಂಬ ದೊಡ್ಡ ಋಷಿ ಇದ್ದಾನೆ. ಅವನನ್ನು ಕಪಿಲದೇವನೆಂದು ಕರೆಯುತ್ತಾರೆ. ಅವನು ಸಗರಾತ್ಮಜರನ್ನು ಧ್ವಂಸ ಮಾಡಿದನು.

ಅತ್ರ ಸಿದ್ಧಾಃ ಶಿವಾ ನಾಮ ಬ್ರಾಹ್ಮಣಾ ವೇದಪಾರಗಾಃ ।
ಅಧೀತ್ಯ ಸಕಲಾನ್ ವೇದಾನ್ ನಾಲಭಂತ ಯಮಕ್ಷಯಮ್ ॥೧೯॥

ಇಲ್ಲಿ ಶಿವ ಎಂಬ ವೇದಪಾರಂಗತರಾದ ಬ್ರಾಹ್ಮಣರು ಸಕಲ ವೇದಗಳನ್ನೂ ಅಧ್ಯಯನವನ್ನು ಮಾಡಿ ಸಿದ್ಧರಾಗಿ ಯಮನ ಪಟ್ಟಣಕ್ಕೆ ಹೋಗಲಿಲ್ಲ.

ಅತ್ರ ಭೋಗವತೀ ನಾಮ ಪುರೀ ವಾಸುಕಿಪಾಲಿತಾ ।
ತಕ್ಷಕೇಣ ಚ ನಾಗೇನ ತಥೈವೈರಾವತೇನ ಚ ॥೨೦॥

ಇಲ್ಲಿ ವಾಸುಕಿಯಿಂದಲೂ, ತಕ್ಷಕನಿಂದಲೂ ಮತ್ತು ಐರಾವತ ನಾಗನಿಂದಲೂ ರಕ್ಷಿತವಾದ ಭೋಗವತಿ ಎಂಬ ಪಟ್ಟಣವಿದೆ.

ಅತ್ರ ನಿರ್ಯಾಣಕಾಲೇ ಹಿ ತಮಃ ಸಂಪ್ರಾಪ್ಯತೇ ಮಹತ್ ।
ಅಭೇದ್ಯಂ ಭಾಸ್ಕರೇಣಾಪಿ ಸ್ವಯಂ ವಾ ಕೃಷ್ಣವರ್ತ್ಮನಾ ॥೨೧॥

ಇಲ್ಲಿ ಮರಣವನ್ನು ಹೊಂದಿ ಪ್ರಯಾಣವನ್ನು ಮಾಡುವ ಕಾಲದಲ್ಲಿ ದೊಡ್ಡ ತಮಸ್ಸು ಸಿಗುತ್ತದೆ. ಅದನ್ನು ಸೂರ್ಯನಿಂದಾಗಲೀ ಅಥವಾ ಸ್ವಯಂ ಅಗ್ನಿಯಿಂದಾಗಲೀ ಭೇದಿಸಲು ಸಾಧ್ಯವಿಲ್ಲ.

ಏಷ ತೇ ಖ್ಯಾಪಿತೋ ಮಾರ್ಗಃ ಪರಿತಾಪಸ್ಯ ಗಾಲವ ।
ಬ್ರೂಹಿ ಮೇ ಯದಿ ಗಂತವ್ಯಂ ಪ್ರತೀಚೀಂ ಶೃಣು ವಾ ಮಮ ॥೨೨॥

ಎಲೈ ಗಾಲವರೇ, ಈ ಸಂತಾಪಮಯವಾದ ಮಾರ್ಗವನ್ನು ನಿಮಗೆ ಹೇಳಿದ್ದೇನೆ. ಪಶ್ಚಿಮ ದಿಕ್ಕಿಗೆ ಹೋಗಬೇಕೆ ಎಂದು ಹೇಳಿ ಅಥವಾ ಪಶ್ಚಿಮ ದಿಕ್ಕಿನ ಗುಣಗಳನ್ನು ನನ್ನಿಂದ ಕೇಳಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಅಷ್ಟೋತ್ತರಶತತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ಏಕೋನಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಎಂಟನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಒಂಬತ್ತನೆಯ ಅಧ್ಯಾಯ

ಗರುಡನಿಂದ ಗಾಲವರಿಗೆ ಪಶ್ಚಿಮ ದಿಕ್ಕಿನ ಗುಣವರ್ಣನೆ

ಸುಪರ್ಣಃ

ಇಯಂ ದಿಗ್ ದಯಿತಾ ರಾಜ್ಞೋ ವರುಣಸ್ಯ ತು ಗೋಪತೇಃ ।
ಸದಾ ಸಲಿಲರಾಜಸ್ಯ ಪ್ರತಿಷ್ಠಾ ಚಾದಿರೇವ ಚ ॥೧॥

ಸುಪರ್ಣ– ಇದು ಜಲಪತಿಯಾದ ವರುಣನಿಗೆ ಪ್ರಿಯವಾದ ದಿಕ್ಕು. ಸಲಿಲರಾಜನಾದ ಅವನಿಗೆ ಇದು ಉತ್ಪತ್ತಿ ಮತ್ತು ಪ್ರತಿಷ್ಠೆಯ ಸ್ಥಾನ.

ಅತ್ರ ಪಶ್ಚಾದಹಃ ಸೂರ್ಯೋ ವಿಸರ್ಜಯತಿ ಭಾಃ ಸ್ವಜಾಃ ।
ಪಶ್ಚಿಮೇತ್ಯಭಿವಿಖ್ಯಾತಾ ದಿಗಿಯಂ ದ್ವಿಜಸತ್ತಮ ॥೨॥

ಇಲ್ಲಿ ಮಧ್ಯಾಹ್ನದ ಮೇಲೆ ಸೂರ್ಯನು ತನ್ನ ಕಾಂತಿಯನ್ನು ತ್ಯಜಿಸುತ್ತಾನೆ. ಎಲೈ ದ್ವಿಜಶ್ರೇಷ್ಠನೇ, ಈ ದಿಕ್ಕು ಪಶ್ಚಿಮವೆಂದು ಪ್ರಖ್ಯಾತವಾಗಿದೆ.

ಯಾದಸಾಮತ್ರ ರಾಜ್ಯೇನ ಸಲಿಲಸ್ಯ ತು ಗುಪ್ತಯೇ ।
ಕಾಶ್ಯಪೋ ಭಗವಾನ್ ದೇವೋ ವರುಣಂ ಸ್ಮಾಭ್ಯಷೇಚಯತ್ ॥೩॥

ಜಲರಾಶಿಯ ರಕ್ಷಣೆಗಾಗಿ ಪೂಜ್ಯರಾದ ಕಶ್ಯಪರು (ಕಶ್ಯಪರ ಪುತ್ರನಾದ ಉಪೇಂದ್ರನು) ಇಲ್ಲಿ ಜಲಚರ ಪ್ರಾಣಿಗಳ ರಾಜ್ಯದಲ್ಲಿ ವರುಣನಿಗೆ ಪಟ್ಟಾಭಿಷೇಕವನ್ನು ಮಾಡಿದನು.

ಅತ್ರ ಪೀತ್ವಾ ಸಮಸ್ತಾನ್ ವೈ ವರುಣಸ್ಯ ರಸಾಂಸ್ತು ಷಟ್ ।
ಜಾಯತೇ ತರುಣಃ ಸೋಮಃ ಶುಕ್ಲಸ್ಯಾದೌ ತಮಿಸ್ರಹಾ ॥೪॥

ಇಲ್ಲಿ ಕತ್ತಲೆಯನ್ನು ನಿವಾರಿಸುವ ಚಂದ್ರನು ವರುಣನ ಎಲ್ಲಾ ಆರು ರಸಗಳನ್ನು ಪಾನ ಮಾಡಿ ಶುಕ್ಲಪಕ್ಷದ ಆದಿಯಲ್ಲಿ ತರುಣನಾಗಿ ಜನಿಸುತ್ತಾನೆ.

ಅತ್ರ ಪಶ್ಚಾತ್ ಕೃತಾ ದೈತ್ಯಾ ವಾಯುನಾ ಸಂಯುತಾಸ್ತದಾ ।
ನಿಃಶ್ವಸಂತೋ ಮಹಾನಾಗೈರರ್ದಿತಾಃ ಸುಷುಪುರ್ದ್ವಿಜ ॥೫॥

ಎಲೈ ದ್ವಿಜಶ್ರೇಷ್ಠರೇ, ಇಲ್ಲಿ ಒಟ್ಟಾದ ದೈತ್ಯರು ವಾಯುವಿನಿಂದ ಹಿಂದೆ ನೂಕಲ್ಪಟ್ಟು ನಿಟ್ಟುಸಿರನ್ನು ಬಿಡುತ್ತಾ ದೊಡ್ಡ ಸರ್ಪಗಳಿಂದ ಪೀಡಿತರಾಗಿ ಮಲಗಿದರು.

ಅತ್ರ ಪ್ರಲಂಬಿನಂ ಸೂರ್ಯಂ ಪ್ರತಿಗೃಹ್ಣಾತಿ ಪರ್ವತಃ ।
ಅಸ್ತೋ ನಾಮ ಯತಃ ಸಂಧ್ಯಾ ಪಶ್ಚಿಮಾ ಪ್ರತಿಸರ್ಪತಿ ॥೬॥

ಇಲ್ಲಿ ಇಳಿಬಿದ್ದ ಸೂರ್ಯನನ್ನು ಅಸ್ತ ಎಂಬ ಪರ್ವತವು ಹಿಡಿದುಕೊಳ್ಳುತ್ತದೆ. ಅಲ್ಲಿಂದ ಮುಂದೆ ಪಶ್ಚಿಮ ಸಂಧ್ಯೆಯು ಪ್ರಾರಂಭವಾಗುತ್ತದೆ.

ಅತೋ ರಾತ್ರಿಶ್ಚ ನಿದ್ರಾ ಚ ನಿರ್ಗತಾ ದಿವಸಕ್ಷಯೇ ।
ಜಾಯತೇ ಜೀವಲೋಕಸ್ಯ ಹರ್ತುಮರ್ಧಮಿವಾಯುಷಃ ॥೭॥

ಹಗಲಿನ ಅವಸಾನದಲ್ಲಿ ಪಶ್ಚಿಮ ದಿಕ್ಕಿನ ಮಧ್ಯಭಾಗದಿಂದ ರಾತ್ರಿ ಮತ್ತು ನಿದ್ರೆಗಳು ಉದಯಿಸಿ ಜೀವಲೋಕದ ಆಯುಸ್ಸಿನ ಅರ್ಧಭಾಗವನ್ನು ಅಪಹರಿಸುತ್ತವೆ.

ಅತ್ರ ದೇವೀಂ ದಿತಿಂ ಸುಪ್ತಾಮಾತ್ಮಪ್ರಸವಧಾರಿಣೀಮ್ ।
ವಿಗರ್ಭಾಮಕರೋಚ್ಛಕ್ರೋ ಯತ್ರ ಜಾತೋ ಮರುದ್ಗಣಃ ॥೮॥

ಇಂದ್ರನು ಇಲ್ಲಿ ತನ್ನ ಮಕ್ಕಳನ್ನು ಗರ್ಭದಲ್ಲಿ ಧರಿಸಿ ಮಲಗಿದ ದಿತಿದೇವಿಯ ಗರ್ಭವು ಹೊರಗೆ ಬರುವಂತೆ ಮಾಡಿದನು. ಆಗ ಮರುದ್ಗಣವು ಜನಿಸಿತು.

ಅತ್ರ ಮೂಲಂ ಹಿ ಮರುತೋ ಮಂದರಂ ಯಾತಿ ಶಾಶ್ವತಮ್ ।
ಅಪಿ ವರ್ಷಸಹಸ್ರೇಣ ನ ಚಾಸ್ಯಾಂತೋऽಧಿಗಮ್ಯತೇ ॥೯॥

ಇಲ್ಲಿ ವಾಯುದೇವನ ಉತ್ಪತ್ತಿಸ್ಥಾನವಿದೆ. ಶಾಶ್ವತವಾದ ಮಂದರಪರ್ವತವೂ ಇದೆ. ಒಂದು ಸಹಸ್ರವರ್ಷಗಳ ಕಾಲ ನಡೆದರೂ ಅದರ ಕೊನೆಯು ಕಾಣುವುದಿಲ್ಲ.

ಅತ್ರ ಕಾಂಚನಶೈಲಸ್ಯ ಕಾಂಚನಾಂಬುರುಹಸ್ಯ ಚ ।
ಉದಧೇಸ್ತೀರಮಾಸಾದ್ಯ ಸುರಭಿಃ ಕ್ಷರತೇ ಪಯಃ ॥೧೦॥

ಇಲ್ಲಿ ಸುವರ್ಣಶೈಲ ಮತ್ತು ಸುವರ್ಣಪದ್ಮವಿರುವ ಸಮುದ್ರದ ತೀರವನ್ನು ತಲುಪಿ ಸುರಭಿಯು ಕ್ಷೀರವನ್ನು ಸುರಿಸುತ್ತದೆ.

ಅತ್ರ ಮಧ್ಯೇ ಸಮುದ್ರಸ್ಯ ಕಬಂಧಃ ಪ್ರತಿದೃಶ್ಯತೇ ।
ಸ್ವರ್ಭಾನೋಃ ಸೂರ್ಯಕಲ್ಪಸ್ಯ ಸೋಮಸೂರ್ಯೌ ಜಿಘಾಂಸತಃ ॥೧೧॥

ಇಲ್ಲಿ ಸಮುದ್ರದ ಮಧ್ಯದಲ್ಲಿ ಸೂರ್ಯ-ಚಂದ್ರರನ್ನು ಕೊಲ್ಲಲು ಇಚ್ಛಿಸುವ ಸೂರ್ಯಸದೃಶನಾದ ರಾಹುವಿನ ಕಬಂಧವು (ರುಂಡವು) ಕಂಡುಬರುತ್ತದೆ.

ಸುವರ್ಣಶಿರಸೋಽಪ್ಯತ್ರ ಹರಿರೋಮ್ಣಃ ಪ್ರಗಾಯತಃ ।
ಅದೃಶ್ಯಸ್ಯಾಪ್ರಮೇಯಸ್ಯ ಶ್ರೂಯತೇ ವಿಪುಲೋ ಧ್ವನಿಃ ॥೧೨॥

ಇಲ್ಲಿ ಅದೃಶ್ಯನೂ ಮತ್ತು ಅಪ್ರಮೇಯನೂ ಆದ ಸುವರ್ಣಶಿರಸ್ ಮತ್ತು ಹರಿರೋಮ ಎಂಬ ಗಾನವನ್ನು ಮಾಡುವ (ಗಂಧರ್ವರ) ವಿಪುಲವಾದ ಧ್ವನಿಯು ಕೇಳಿಬರುತ್ತದೆ.

ಅತ್ರ ಧ್ವಜವತೀ ನಾಮ ಕುಮಾರೀ ಹರಿಮೇಧಸಃ ।
ಆಕಾಶೇ ತಿಷ್ಠ ತಿಷ್ಠೇತಿ ತಸ್ಥೌ ಸೂರ್ಯಸ್ಯ ಶಾಸನಾತ್ ॥೧೩॥

ಇಲ್ಲಿ ಹರಿಮೇಧಸ್ಸಿನ ಪುತ್ರಿಯಾದ ಧ್ವಜವತೀ ಎಂಬುವಳು ಆಕಾಶದಲ್ಲಿ ನಿಲ್ಲು, ನಿಲ್ಲು ಎಂಬ ಸೂರ್ಯನ ಶಾಸನದಂತೆ ಅಲ್ಲಿಯೇ ನಿಂತಿದ್ದಾಳೆ.

ಅತ್ರ ವಾಯುಸ್ತಥಾ ವಹ್ನಿರಾಪಃ ಖಂ ಚಾಪಿ ಗಾಲವ ।
ಆಹ್ನಿಕಂ ಚೈವ ನೈಶಂ ಚ ದುಃಖಸ್ಪರ್ಶಂ ವಿಮುಂಚತಿ ॥೧೪॥

ಎಲೈ ಗಾಲವರೇ, ಇಲ್ಲಿ ವಾಯು, ಅಗ್ನಿ, ಜಲ ಮತ್ತು ಆಕಾಶಗಳು ಹಗಲು ಮತ್ತು ರಾತ್ರಿಯ ಕಾಲದಲ್ಲಿ ಉಂಟಾದ ದುಃಖಸ್ಪರ್ಶವನ್ನು ಕಳೆದುಕೊಳ್ಳುತ್ತವೆ.

ಅತಃಪ್ರಭೃತಿ ಸೂರ್ಯಸ್ಯ ತಿರ್ಯಗಾವರ್ತತೇ ಗತಿಃ ।
ಅತ್ರ ಜ್ಯೋತೀಂಷಿ ಸರ್ವಾಣಿ ವಿಶಂತ್ಯಾದಿತ್ಯಮಂಡಲಮ್ ॥೧೫॥

ಇಲ್ಲಿಂದ ಮುಂದೆ ಸೂರ್ಯನ ಉತ್ತರಾಭಿಮುಖವಾದ ಗಮನವು ಪ್ರಾರಂಭವಾಗುತ್ತದೆ. ಇಲ್ಲಿ ಎಲ್ಲ ಜ್ಯೋತಿಸ್ಸುಗಳು ಆದಿತ್ಯಮಂಡಲವನ್ನು ಪ್ರವೇಶಿಸುತ್ತವೆ.

ಅಷ್ಟಾವಿಂಶತಿರಾತ್ರಂ ಚ ಚಂಕ್ರಮ್ಯ ಸಹ ಭಾನುನಾ ।
ನಿಷ್ಪತಂತಿ ಪುನಃ ಸೂರ್ಯಾತ್ ಸೋಮಸಂಯೋಗಯೋಗತಃ ॥೧೬॥

ಇಪ್ಪತ್ತೆಂಟು ದಿನಗಳ ಕಾಲ ಸೂರ್ಯನ ಜೊತೆಯಲ್ಲಿ ಸಂಚಾರ ಮಾಡಿ ಪುನಃ ಸೂರ್ಯನನ್ನು ಸೇರಿ ಚಂದ್ರನು ಇಲ್ಲಿಂದ ಸೂರ್ಯನಿಂದ ಹೊರಬರುತ್ತಾನೆ.

ಅತ್ರ ನಿತ್ಯಂ ಸ್ರವಂತೀನಾಂ ಪ್ರಭವಃ ಸಾಗರೋದಯಃ ।
ಅತ್ರ ಲೋಕತ್ರಯಸ್ಯಾಪಃ ತಿಷ್ಠಂತಿ ವರುಣಾಶ್ರಯಾಃ ॥೧೭॥

ಇಲ್ಲಿ ಸಾಗರಜಲವೃದ್ಧಿಯನ್ನು ಉಂಟುಮಾಡುವ, ನಿತ್ಯವೂ ಪ್ರವಾಹದಿಂದ ಕೂಡಿದ ನದಿಗಳ ಉತ್ಪತ್ತಿ ಸ್ಥಾನವಿದೆ. ಮೂರುಲೋಕದ ಜಲಗಳೂ ಸಹ ವರುಣನನ್ನು ಆಶ್ರಯಿಸಿ ಇರುತ್ತವೆ.

ಅತ್ರ ಪನ್ನಗರಾಜಸ್ಯಾಪ್ಯನಂತಸ್ಯ ನಿವೇಶನಮ್ ।
ಅನಾದಿನಿಧನಸ್ಯಾತ್ರ ವಿಷ್ಣೋಃ ಸ್ಥಾನಮನುತ್ತಮಮ್ ॥೧೮॥

ಇಲ್ಲಿ ಸರ್ಪರಾಜನಾದ ಅನಂತನ ವಾಸಸ್ಥಾನವಿದೆ. ಹಾಗೆಯೇ ಅನಾದಿ ನಿಧನನಾದ ವಿಷ್ಣುವಿನ ಶ್ರೇಷ್ಠವಾದ ಸ್ಥಾನವೂ ಇದೆ.

ಅತ್ರಾನಲಸಖಸ್ಯಾಪಿ ಪವನಸ್ಯ ನಿವೇಶನಮ್ ।
ಮಹರ್ಷೇಃ ಕಾಶ್ಯಪಸ್ಯಾತ್ರ ಮಾರೀಚಸ್ಯ ನಿವೇಶನಮ್ ॥೧೯॥

ಇಲ್ಲಿ ಅಗ್ನಿಸಖನಾದ ವಾಯುವಿನ ನಿವೇಶನವೂ, ಮರೀಚಿಪುತ್ರರಾದ ಕಾಶ್ಯಪ ಮಹರ್ಷಿಗಳ ನಿವೇಶನವೂ ಇದೆ.

ಏಷ ತೇ ಪಶ್ಚಿಮೋ ಮಾರ್ಗೋ ದಿಗ್‌ದ್ವಾರೇಣ ಪ್ರಕೀರ್ತಿತಃ ।
ಬ್ರೂಹಿ ಗಾಲವ ಗಚ್ಛಾವೋ ಬುದ್ಧಿಃ ಕಾ ದ್ವಿಜಸತ್ತಮ ॥೨೦॥

ಎಲೈ ದ್ವಿಜಶ್ರೇಷ್ಠರೇ, ಹೀಗೆ ಪಶ್ಚಿಮ ಮಾರ್ಗದ ದಿಗ್‌ಮಾತ್ರವನ್ನು ನಿಮಗೆ ನಿರೂಪಿಸಿದ್ದೇನೆ. ನಿಮ್ಮ ಬುದ್ಧಿ ಎಲ್ಲಿಗೆ ಹೋಗಬೇಕೆಂದಿದೆ, ಹೇಳಿ. ಎಲೈ ಗಾಲವರೇ, ಅಲ್ಲಿಗೆ ಹೋಗೋಣ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ನವೋತ್ತರಶತತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಒಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹತ್ತನೆಯ ಅಧ್ಯಾಯ

ಗರುಡನಿಂದ ಗಾಲವರಿಗೆ ಉತ್ತರ ದಿಕ್ಕಿನ ಗುಣವರ್ಣನೆ ಮತ್ತು ಇಷ್ಟವಾದ ದಿಕ್ಕಿಗೆ ಹೋಗಲು ತನ್ನ ಬೆನ್ನಿನ ಮೇಲೆ ಕುಳಿತುಕೊಳ್ಳುವಂತೆ ಆಹ್ವಾನ.

ಸುಪರ್ಣಃ

ಯಸ್ಮಾದುತ್ತಾರ್ಯತೇ ಪಾಪಾದ್ ಯಸ್ಮಾನ್ನಿಶ್ರೇಯಸೋऽಶ್ನುತೇ ।
ಅಸ್ಮಾದುತ್ತಾರಣಫಲಾದ್ ಉತ್ತರೇತ್ಯುಚ್ಯತೇ ಬುಧೈಃ ॥೧॥

ಸುಪರ್ಣ– ಇದು ಪಾಪದಿಂದ ದಾಟಿಸುವ ಕಾರಣದಿಂದ ಮತ್ತು ಶ್ರೇಯಸ್ಸನ್ನು ಹೊಂದಿಸುವ ಕಾರಣದಿಂದ, ಉತ್ತಾರಣರೂಪ ಫಲವಿರುವುದರಿಂದ ಜ್ಞಾನಿಗಳಿಂದ ಉತ್ತರವೆಂದು ಕರೆಸಿಕೊಳ್ಳಲ್ಪಡುತ್ತದೆ.

ಉತ್ತರಸ್ಯ ಹಿ ಪುಣ್ಯಸ್ಯ ಪರಿವಾಪಸ್ಯ ಗಾಲವ ।
ಮಾರ್ಗಃ ಪಶ್ಚಿಮಪೂರ್ವಾಭ್ಯಾಂ ದಿಗ್ಭ್ಯಾಂ ವೈ ಮಧ್ಯಮಃ ಸ್ಮೃತಃ ॥೨॥

ಎಲೈ ಗಾಲವರೇ, ಪುಣ್ಯವನ್ನು ಬಿತ್ತುವ ಉತ್ತರ ದಿಕ್ಕಿನ ಮಾರ್ಗವು ಪಶ್ಚಿಮ-ಪೂರ್ವ ದಿಕ್ಕುಗಳ ಮಾರ್ಗಗಳ ಮಧ್ಯದಲ್ಲಿ ಇದೆ ಎಂದು ಹೇಳಲಾಗುತ್ತದೆ.

ಅಸ್ಯಾಂ ದಿಶಿ ವರಿಷ್ಠಾಯಾಮುತ್ತರಾಯಾಂ ದ್ವಿಜರ್ಷಭ ।
ನಾಸೌಮ್ಯೋ ನಾವಿಧೇಯಾತ್ಮಾ ನಾಧರ್ಮೋ ವರ್ತತೇ ಜನಃ ॥೩॥

ಎಲೈ ದ್ವಿಜಶ್ರೇಷ್ಠರೇ, ಶ್ರೇಷ್ಠವಾದ ಈ ಉತ್ತರ ದಿಕ್ಕಿನಲ್ಲಿ ಸೌಮ್ಯನಲ್ಲದ, ವಿಧೇಯನಲ್ಲದ, ಧರ್ಮವನ್ನು ಮಾಡದ ಯಾವ ವ್ಯಕ್ತಿಯೂ ಇರುವುದಿಲ್ಲ.

ಅತ್ರ ನಾರಾಯಣಃ ಕೃಷ್ಣೋ ಜಿಷ್ಣುಶ್ಚೈವ ನರೋತ್ತಮಃ ।
ಬದರ್ಯಾಮಾಶ್ರಮಪದೇ ತಥಾ ಬ್ರಹ್ಮಾ ಚ ಶಾಶ್ವತಃ ॥೪॥

ಇಲ್ಲಿ ಬದರಿಕಾಶ್ರಮದಲ್ಲಿ ನಾರಾಯಣ, ಕೃಷ್ಣ ಮತ್ತು ಜಯಶೀಲನಾದ ನರೋತ್ತಮರೂ ಇದ್ದಾರೆ. ಹಾಗೆಯೇ ಶಾಶ್ವತನಾದ ಬ್ರಹ್ಮನೂ ಇದ್ದಾನೆ.

ಅತ್ರ ವೈ ಹಿಮವತ್‌ಪೃಷ್ಠೇ ನಿತ್ಯಮಾಸ್ತೇ ಮಹೇಶ್ವರಃ ।
ಪ್ರಕೃತ್ಯಾ ಪುರುಷಃ ಸಾರ್ಧಂ ಯುಗಾಂತಾಗ್ನಿಸಮಪ್ರಭಃ ॥೫॥

ಇಲ್ಲಿ ಹಿಮಾಲಯದ ಪೃಷ್ಠದಲ್ಲಿ ಯುಗಾಂತಾಗ್ನಿಯ ಕಾಂತಿಯನ್ನು ಹೊಂದಿರುವ ಮಹೇಶ್ವರನು ಪುರುಷರೂಪವನ್ನು ಧರಿಸಿ, ಪ್ರಕೃತಿಯಾದ ಪಾರ್ವತಿಯಿಂದ ಕೂಡಿಕೊಂಡು ನಿತ್ಯದಲ್ಲಿಯೂ ಇರುತ್ತಾನೆ.

ನ ಸಂದೃಶ್ಯೋ ಮುನಿಗಣೈಸ್ತಥಾ ದೇವೈಃ ಸವಾಸವೈಃ ।
ಗಂಧರ್ವಯಕ್ಷಸಿದ್ಧೈರ್ವಾ ನರನಾರಾಯಣಾದೃತೇ ॥೬॥

ನರ-ನಾರಾಯಣರನ್ನು ಬಿಟ್ಟು ಮುನಿಗಣಗಳಿಗಾಗಲೀ, ಇಂದ್ರನಿಂದ ಕೂಡಿದ ದೇವತೆಗಳಿಗಾಗಲೀ, ಗಂಧರ್ವಯಕ್ಷಸಿದ್ಧರಿಗಾಗಲೀ ಅವನು ಗೋಚರಿಸುವುದಿಲ್ಲ.

ಅತ್ರ ವಿಷ್ಣುಃ ಸಹಸ್ರಾಕ್ಷಃ ಸಹಸ್ರಚರಣೋಽವ್ಯಯಃ ।
ಸಹಸ್ರಶಿರಸಃ ಶ್ರೀಮಾನ್ ಏಕಃ ಪಶ್ಯತಿ ಮಾಯಯಾ ॥೭॥

ಇಲ್ಲಿ ಸಹಸ್ರಾಕ್ಷನೂ, ಸಹಸ್ರಪಾದನೂ, ಸಹಸ್ರಶಿರಸ್ಸುಳ್ಳವನೂ, ಅವ್ಯಯನೂ, ಕಾಂತಿಮಂತನೂ ಆದ ವಿಷ್ಣು ಒಬ್ಬನೇ ತನ್ನ ಸಾಮರ್ಥ್ಯದಿಂದ ಅವನನ್ನು ನೋಡುತ್ತಾನೆ.

ಅತ್ರ ರಾಜ್ಯೇನ ವಿಪ್ರಾಣಾಂ ಚಂದ್ರಮಾಶ್ಚಾಭ್ಯಷಿಚ್ಯತ ॥೮॥

ಅತ್ರ ಗಂಗಾಂ ಮಹಾದೇವಃ ಪತಂತೀಂ ಗಗನಾಚ್ಚ್ಯುತಾಮ್ ।
ಪ್ರತಿಗೃಹ್ಯ ದದೌ ಲೋಕೇ ಮಾನುಷೇ ಬ್ರಹ್ಮವಿತ್ತಮಃ ॥೯॥

ಇಲ್ಲಿ ವಿಪ್ರರಾಜ್ಯದಲ್ಲಿ ಚಂದ್ರನು ರಾಜನಾಗಿ ಅಭಿಷಿಕ್ತನಾದನು. ಇಲ್ಲಿ ಮಹಾದೇವನು ಆಕಾಶದಿಂದ ಬೀಳುತ್ತಿರುವ ಗಂಗೆಯನ್ನು ಹಿಡಿದು, ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನಾದ ಅವನು ಮನುಷ್ಯಲೋಕಕ್ಕೆ ಕೊಟ್ಟನು.

ಅತ್ರೋಮಯಾ ತಪಸ್ತಪ್ತಂ ಮಹೇಶ್ವರಪರೀಪ್ಸಯಾ ।
ಅತ್ರ ಕಾಮಶ್ಚ ರೋಷಶ್ಚ ಶೈಲಶ್ಚೋಮಾ ಚ ಸಂಬಭುಃ ॥೧೦॥

ಇಲ್ಲಿ ಪಾರ್ವತಿಯು ಮಹೇಶ್ವರನನ್ನು ಪತಿಯನ್ನಾಗಿ ಹೊಂದಲು ಬಯಸಿ ತಪಸ್ಸನ್ನು ಮಾಡಿದಳು. ಇಲ್ಲಿ ಕಾಮ, ರೋಷ, ಮೈನಾಕ ಪರ್ವತ, ಉಮಾ ಎಲ್ಲರೂ ಜನಿಸಿದರು.

ಅತ್ರ ರಾಕ್ಷಸಯಕ್ಷಾಣಾಂ ಗಂಧರ್ವಾಣಾಂ ಚ ಗಾಲವ ।
ಆಧಿಪತ್ಯೇನ ಕೈಲಾಸೇ ಧನದೋಽಪ್ಯಭಿಷೇಚಿತಃ ॥೧೧॥

ಎಲೈ ಗಾಲವರೇ, ಇಲ್ಲಿ ಯಕ್ಷ-ರಾಕ್ಷಸ-ಗಂಧರ್ವರ ಆಧಿಪತ್ಯದಲ್ಲಿ ಕೈಲಾಸ ಪರ್ವತದಲ್ಲಿ ಕುಬೇರನೂ ಅಭಿಷಿಕ್ತನಾಗಿದ್ದಾನೆ.

ಅತ್ರ ಚೈತ್ರರಥಂ ರಮ್ಯಮನು ವೈಖಾನಸಾಶ್ರಮಃ ॥೧೨॥

ಅತ್ರ ಮಂದಾಕಿನೀ ಚೈವ ಮಂದರಶ್ಚ ದ್ವಿಜರ್ಷಭ ।
ಅತ್ರ ಸೌಗಂಧಿಕವನಂ ದೈವತೈರಭಿರಕ್ಷ್ಯತೇ ॥೧೩॥

ಶಾದ್ವಲಂ ಕದಲೀಸ್ಕಂಧಮತ್ರ ಸಂತಾನಗಾ ನಗಾಃ ॥೧೪॥

ಎಲೈ ದ್ವಿಜಶ್ರೇಷ್ಠರೇ, ಇಲ್ಲಿ ವೈಖಾಸನಾಶ್ರಮ ಸಮೀಪದಲ್ಲಿ ಮನೋಹರವಾದ ಚೈತ್ರರಥವಿದೆ. ಮಂದಾಕಿನಿಯೂ ಮತ್ತು ಮಂದರಪರ್ವತವೂ ಇವೆ. ಇಲ್ಲಿರುವ ಸೌಗಂಧಿಕ ವನವು ದೇವತೆಗಳಿಂದ ರಕ್ಷಿಸಲ್ಪಡುತ್ತಿದೆ. ಇಲ್ಲಿ ಮೃದುವಾದ ಕದಲೀ ವನವೂ ಮತ್ತು ಸಾಂತಾನಿಕ ವೃಕ್ಷಗಳೂ ಇವೆ.

ಅತ್ರ ಸಂಯಮನಿತ್ಯಾನಾಂ ಸಿದ್ಧಾನಾಂ ಸ್ವೈರಚಾರಿಣಾಮ್ ।
ವಿಮಾನಾನ್ಯನುರೂಪಾಣಿ ಕಾಮಭೋಗ್ಯಾನಿ ಗಾಲವ ॥೧೫॥

ಎಲೈ ಗಾಲವರೇ, ಇಲ್ಲಿ ನಿತ್ಯವೂ ಸಂಯಮವನ್ನು ಹೊಂದಿ, ತಮ್ಮ ಇಚ್ಛೆಯಂತೆ ತಿರುಗುವ ಸಿದ್ಧರ, ಇಷ್ಟವಾದ ಭೋಗಗಳಿಂದ ಕೂಡಿದ ಅನುರೂಪವಾದ ವಿಮಾನಗಳಿವೆ.

ಅತ್ರ ತೇ ಋಷಯಃ ಸಪ್ತ ದೇವೀ ಚಾರುಂಧತೀ ತಥಾ ।
ಅತ್ರ ತಿಷ್ಠತಿ ವೈ ಸ್ವಾತಿರತ್ರಾಸ್ಯಾ ಉದಯಃ ಸ್ಮೃತಃ ॥೧೬॥

ಇಲ್ಲಿ ಸಪ್ತರ್ಷಿಗಳೂ ಮತ್ತು ಅರುಂಧತಿ ದೇವಿಯೂ ಇದ್ದಾಳೆ. ಇಲ್ಲಿ ಸ್ವಾತಿ ಇದ್ದಾಳೆ. ಇದು ಸ್ವಾತಿಯ ಉದಯಸ್ಥಾನವೆಂದು ಹೇಳಲ್ಪಡುತ್ತದೆ.

ಅತ್ರ ಯಜ್ಞಂ ಸಮಾರುಹ್ಯ ಧ್ರುವಂ ಸ್ಥಾತಾ ಪಿತಾಮಹಃ ।
ಜ್ಯೋತೀಂಷಿ ಚಂದ್ರಸೂರ್ಯೌ ಚ ಪರಿವರ್ತಂತಿ ನಿತ್ಯಶಃ ॥೧೭॥

ಇಲ್ಲಿ ಪಿತಾಮಹರಾದ ಬ್ರಹ್ಮದೇವರು ಯಜ್ಞದೀಕ್ಷಿತರಾಗಿ ಶಾಶ್ವತವಾಗಿ ಇರುತ್ತಾರೆ. ಎಲ್ಲ ಜ್ಯೋತಿಸ್ಸುಗಳು ಮತ್ತು ಚಂದ್ರ-ಸೂರ್ಯರು ಯಾವಾಗಲೂ ಈ ಉತ್ತರದಿಕ್ಕಿನಲ್ಲಿಯೇ ತಿರುಗುತ್ತವೆ.

ಅತ್ರ ಗಂಗಾಮಹಾದ್ವಾರಂ ರಕ್ಷಂತಿ ದ್ವಿಜಸತ್ತಮಾಃ ।
ಧಾಮಾ ನಾಮ ಮಹಾತ್ಮಾನೋ ಮುನಯಃ ಸತ್ಯವಾದಿನಃ ॥೧೮॥

ಇಲ್ಲಿ ಗಂಗೆಯ ಉಗಮಸ್ಥಾನವನ್ನು ಧಾಮ ಎಂಬ ಹೆಸರಿನ ಮಹಾತ್ಮರೂ, ಸತ್ಯವಾದಿಗಳೂ, ದ್ವಿಜಶ್ರೇಷ್ಠರೂ ಆದ ಮುನಿಗಳು ರಕ್ಷಿಸುತ್ತಾರೆ.

ನ ತೇಷಾಂ ಜ್ಞಾಯತೇ ಸೂತಿರ್ನಾಕೃತಿರ್ನ ತು ಪಶ್ಚಿಮಃ ।
ಪರಿವರ್ತಸಹಸ್ರಾಣಿ ಕಾಮಭೋಗ್ಯಾನಿ ಗಾಲವ ॥೧೯॥

ಎಲೈ ಗಾಲವರೇ, ಅವರ ಉತ್ಪತ್ತಿಯಾಗಲೀ, ಅವರ ಆಕೃತಿಯಾಗಲೀ, ಅವರ ದೇಹದ ಹಿಂಭಾಗವಾಗಲೀ, ಅವರ ಸಹಸ್ರಪರಿವರ್ತನೆಗಳಾಗಲೀ ಅಥವಾ ಅವರಿಗೆ ಇಷ್ಟವಾದ ಭೋಗಗಳಾಗಲೀ ಯಾರಿಗೂ ತಿಳಿಯುವುದಿಲ್ಲ.

ಯಥಾ ಯಥಾ ಪ್ರವೇಕ್ಷ್ಯಂತಿ ತಸ್ಮಾತ್ ಪರತರಂ ನರಃ ।
ತಥಾ ತಥಾ ದ್ವಿಜಶ್ರೇಷ್ಠ ಪ್ರವಿಲೀಯತಿ ಗಾಲವ ॥೨೦॥

ಎಲೈ ಗಾಲವರೇ, ಮನುಷ್ಯನು ಹೇಗೆ ಹೇಗೆ ಇಲ್ಲಿಂದ ಮುಂದಕ್ಕೆ ಹೋಗುತ್ತಾನೆಯೋ ಎಲೈ ದ್ವಿಜಶ್ರೇಷ್ಠರೇ, ಹಾಗೆ ಹಾಗೆ ಅವನು ಅದೃಶ್ಯನಾಗುತ್ತಾನೆ.

ನೈತತ್ ಕೇನಚಿದನ್ಯೇನ ಗತಪೂರ್ವಂ ದ್ವಿಜರ್ಷಭ ।
ಋತೇ ನಾರಾಯಣಂ ದೇವಂ ನರಂ ವಾ ಜಿಷ್ಣುಮವ್ಯಯಮ್ ॥೨೧॥

ಎಲೈ ದ್ವಿಜರ್ಷಭರೇ, ದೇವನಾದ ನಾರಾಯಣನನ್ನು ಬಿಟ್ಟು ಜಯಶೀಲನಾದ ಅವ್ಯಯನಾದ ನರನನ್ನು ಬಿಟ್ಟು ಬೇರೆ ಯಾವನೂ ಈ ದಿಕ್ಕಿನಲ್ಲಿ ಮುಂದೆ ಹೋಗಿಲ್ಲ.

ಅತ್ರ ಕೈಲಾಸಮಿತ್ಯುಕ್ತಂ ಸ್ಥಾನಮೈಲಬಿಲಸ್ಯ ತತ್ ।
ಅತ್ರ ವಿದ್ಯುತ್ಪ್ರಭಾ ನಾಮ ಜಜ್ಞಿರೇಽಪ್ಸರಸೋ ದಶ ॥೨೨॥

ಇಲ್ಲಿ ಕೈಲಾಸವೆಂದು ಕರೆಯುವ ಕುಬೇರನ ಸ್ಥಾನವಿದೆ. ವಿದ್ಯುತ್ಪ್ರಭಾ ಎಂಬ ಹೆಸರಿನ ಹತ್ತು ಅಪ್ಸರೆಯರು ಇಲ್ಲಿಯೇ ಜನಿಸಿದರು.

ಅತ್ರ ವಿಷ್ಣುಪದಂ ನಾಮ ಕ್ರಮತಾ ವಿಷ್ಣುನಾ ಕೃತಮ್ ।
ತ್ರಿಲೋಕವಿಕ್ರಮೇ ಬ್ರಹ್ಮನ್ನುತ್ತರಾಂ ದಿಶಮಾಶ್ರಿತಮ್ ॥೨೩॥

ಎಲೈ ಬ್ರಾಹ್ಮಣರೇ, ವಿಷ್ಣುವು ಮೂರುಲೋಕಗಳನ್ನು ಅಳೆಯುವಾಗ ಉತ್ತರ ದಿಕ್ಕಿನಲ್ಲಿ ಪಾದವನ್ನು ಇಟ್ಟಾಗ ಉಂಟಾದ ವಿಷ್ಣುಪದ ಎಂಬ ಸ್ಥಾನವು ಇಲ್ಲಿದೆ.

ಅತ್ರ ರಾಜ್ಞಾ ಮರುತ್ತೇನ ಯಜ್ಞೇನೇಷ್ಟಂ ದ್ವಿಜೋತ್ತಮ ।
ಉಶೀರಬೀಜೇ ವಿಪ್ರರ್ಷೇ ಯತ್ರ ಜಾಂಬೂನದಂ ಸರಃ ॥೨೪॥

ಎಲೈ ದ್ವಿಜೋತ್ತಮರೇ, ಇಲ್ಲಿ ಉಶೀರಬೀಜ ಎಂಬ ಕ್ಷೇತ್ರದಲ್ಲಿ ಮರುತ್ತ ರಾಜನು ಯಜ್ಞವನ್ನು ಮಾಡಿದನು. ಎಲೈ ವಿಪ್ರರ್ಷಿಗಳೇ, ಅಲ್ಲಿ ಸುವರ್ಣಮಯವಾದ ಒಂದು ಸರೋವರವಿದೆ.

ಜೀಮೂತಸ್ಯಾತ್ರ ವಿಪ್ರರ್ಷೇರುಪತಸ್ಥೇ ಮಹಾತ್ಮನಃ ।
ಸಾಕ್ಷಾದ್ಧೈಮವತಃ ಪುಣ್ಯೋ ವಿಮಲಃ ಕಮಲಾಕರಃ ॥೨೪॥

ಇಲ್ಲಿ ಮಹಾತ್ಮನಾದ ಜೀಮೂತನೆಂಬ ವಿಪ್ರರ್ಷಿಯ ಆಶ್ರಮಕ್ಕೆ ಹಿಮಾಲಯದ ಪವಿತ್ರವಾದ ನಿರ್ಮಲವಾದ ಸರೋವರವು ತಾನಾಗಿಯೇ ಬಂದಿದೆ.

ಬ್ರಾಹ್ಮಣೇಷು ಚ ಯತ್ ಕೃತ್ಸ್ನಂ ಸ್ವಕಂ ಕೃತ್ವಾ ಧನಂ ಮಹತ್ ।
ವವ್ರೇ ವನಂ ಮಹರ್ಷಿಃ ಸ ಜೈಮೂತಂ ತದ್ವನಂ ತತಃ ॥೨೬॥

ತನ್ನಲ್ಲಿದ್ದ ಮಹಾಧನವನ್ನೆಲ್ಲಾ ಬ್ರಾಹ್ಮಣರಿಗೆ ಕೊಟ್ಟು ಆ ಜೀಮೂತ ಮಹರ್ಷಿಗಳು ಈ ವನವನ್ನು ಆರಿಸಿದರು. ಆದ್ದರಿಂದ ಈ ವನಕ್ಕೆ ಜೈಮೂತವನ ಎಂದು ಹೆಸರು ಬಂದಿದೆ.

ಅತ್ರ ನಿತ್ಯಂ ದಿಶಾಂ ಪಾಲಾಃ ಸಾಯಂ ಪ್ರಾತರ್ದ್ವಿಜರ್ಷಭ ।
ಕಸ್ಯ ಕಾರ್ಯಂ ಕಿಮಿತಿ ವೈ ಪರಿಕ್ರೋಶಂತಿ ಗಾಲವ ॥೨೭॥

ಎಲೈ ದ್ವಿಜಶ್ರೇಷ್ಠರಾದ ಗಾಲವರೇ, ಇಲ್ಲಿ ನಿತ್ಯವೂ ದಿಕ್ಪಾಲಕರು ಸಾಯಂಕಾಲದಲ್ಲಿ ಮತ್ತು ಪ್ರಾತಃಕಾಲದಲ್ಲಿ ಸೇರಿ ಯಾರಿಗೆ ಏನು ಕಾರ್ಯವಾಗಬೇಕಾಗಿದೆ ಎಂದು ಗಟ್ಟಿಯಾಗಿ ಕಿರುಚುತ್ತಾರೆ.

ಏವಮೇಷಾ ದ್ವಿಜಶ್ರೇಷ್ಠ ಗುಣೈರನ್ಯೈರ್ದಿಗುತ್ತರಾ ।
ಉತ್ತರೇತಿ ಪರಿಖ್ಯಾತಾ ಸರ್ವಕರ್ಮಸು ಚೋತ್ತರಾ ॥೨೮॥

ಎಲೈ ದ್ವಿಜಶ್ರೇಷ್ಠರೇ, ಹೀಗೆ ಈ ದಿಕ್ಕು ತನ್ನ ಗುಣಗಳಿಂದ ಉಳಿದ ದಿಕ್ಕುಗಳನ್ನು ಮೀರಿದೆ. ಆದ್ದರಿಂದ ಉತ್ತರ ಎಂದೇ ಪ್ರಸಿದ್ಧವಾಗಿದೆ. ಎಲ್ಲ ಕರ್ಮಗಳಲ್ಲಿಯೂ ಉತ್ತರವಾಗಿಯೇ (ಶ್ರೇಷ್ಠವಾಗಿಯೇ) ಇದೆ.

ಏತಾ ವಿಸ್ತರಶಸ್ತಾತ ತವ ಸಂಕೀರ್ತಿತಾ ದಿಶಃ ।
ಚತಸ್ರಃ ಕ್ರಮಯೋಗೇನ ಕಾಮಾಶಾಂ ಗಂತುಮಿಚ್ಛಸಿ ॥೨೯॥

ಎಲೈ ಪ್ರೀತಿಪಾತ್ರರೇ, ಈ ನಾಲ್ಕು ದಿಕ್ಕುಗಳನ್ನು ನಾನು ಕ್ರಮವಾಗಿ, ವಿಸ್ತಾರವಾಗಿ ನಿಮಗೆ ಹೇಳಿದ್ದೇನೆ. ಯಾವ ದಿಕ್ಕಿಗೆ ಹೋಗಲು ಬಯಸುತ್ತೀರಿ?

ಉದ್ಯತೋಽಹಂ ದ್ವಿಜಶ್ರೇಷ್ಠ ತವ ದರ್ಶಯಿತುಂ ಜಗತ್ ।
ಪೃಥಿವೀಂ ಚಾಖಿಲಾಂ ಬ್ರಹ್ಮನ್ ತಸ್ಮಾದಾರೋಹ ಮಾಂ ದ್ವಿಜ ॥೩೦॥

ಎಲೈ ದ್ವಿಜಶ್ರೇಷ್ಠರೇ, ಬ್ರಾಹ್ಮಣರೇ, ನಾನು ನಿಮಗೆ ಎಲ್ಲಾ ಪೃಥಿವಿಯನ್ನು ಮತ್ತು ಜಗತ್ತನ್ನು ತೋರಿಸಲು ಉದ್ಯುಕ್ತನಾಗಿದ್ದೇನೆ. ಆದ್ದರಿಂದ ಎಲೈ ಬ್ರಾಹ್ಮಣರೇ ನನ್ನ ಬೆನ್ನಿನ ಮೇಲೆ ಕುಳಿತುಕೊಳ್ಳಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ದಶೋತ್ತರಶತತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ಏಕಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಹತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹನ್ನೊಂದನೆಯ ಅಧ್ಯಾಯ

ಗರುಡನ ವೇಗವನ್ನು ಸಹಿಸಲಾರದೆ ಗಾಲವರಿಂದ ಹಿಂದಿರುಗುವಂತೆ ಪ್ರಾರ್ಥನೆ. ವೃಷಭಾಚಲದಲ್ಲಿ ವಿಶ್ರಮಿಸಿ ಹಾಗೆ ಮಾಡುವಂತೆ ಗರುಡನ ಸಮ್ಮತಿ.

ಗಾಲವಃ

ಗರುತ್ಮನ್ ಭುಜಗೇಂದ್ರಾರೇ ಸುಪರ್ಣ ವಿನತಾತ್ಮಜ ।
ನಯ ಮಾಂ ತಾರ್ಕ್ಷ್ಯ ಪೂರ್ವೇಣ ಯತ್ರ ಧರ್ಮಸ್ಯ ಚಕ್ಷುಷೀ ॥೧॥

ಗಾಲವ– ಎಲೈ ವಿನತಾತ್ಮಜನಾದ, ಭುಜಗೇಂದ್ರಶತ್ರುವಾದ, ಒಳ್ಳೆಯ ರೆಕ್ಕೆಗಳಿಂದ ಕೂಡಿದ, ಕಶ್ಯಪರ ಪುತ್ರರಾದ ಗರುಡನೇ, ಧರ್ಮದ ಕಣ್ಣುಗಳಿರುವ ಪೂರ್ವದಿಕ್ಕಿಗೆ ನನ್ನನ್ನು ಕರೆದುಕೊಂಡು ಹೋಗು.

ಪೂರ್ವಾಮೇವ ದಿಶಂ ಗಚ್ಛ ಯಾ ಪೂರ್ವಂ ಪರಿಕೀರ್ತಿತಾ ।
ದೇವತಾನಾಂ ಹಿ ಸಾನ್ನಿಧ್ಯಮತ್ರ ಕೀರ್ತಿತವಾನಸಿ ॥೨॥

ಅತ್ರ ಸತ್ಯಂ ಚ ಧರ್ಮಶ್ಚ ತ್ವಯಾ ಸಮ್ಯಕ್ ಪ್ರಕೀರ್ತಿತೌ ॥೩॥

ನೀನು ಹೇಳಿದ ಪೂರ್ವದಿಕ್ಕಿಗೇ ಹೋಗುವವನಾಗು. ಅಲ್ಲಿ ದೇವತೆಗಳ ಸಾನ್ನಿಧ್ಯವನ್ನು ಹೇಳಿದ್ದಿಯಷ್ಟೆ! ಮತ್ತು ಅಲ್ಲಿ ಸತ್ಯ ಮತ್ತು ಧರ್ಮಗಳು ಪ್ರತಿಷ್ಠಿತವಾಗಿವೆ ಎಂದೂ ಹೇಳಿದ್ದೀಯೆ.

ಇಚ್ಛೇಯಂ ತು ಸಮಾಗಂತುಂ ಸಮಸ್ತೈರ್ದೈವತೈರಹಮ್ ।
ಭೂಯಶ್ಚ ತಾನ್ ಸುರಾನ್ ದ್ರಷ್ಟುಮಿಚ್ಛೇಯಮರುಣಾನುಜ ॥೪॥

ನಾನು ಎಲ್ಲ ದೇವತೆಗಳ ಜೊತೆಯಲ್ಲಿ ಸಮಾಗಮವನ್ನು ಹೊಂದಲು ಇಚ್ಛಿಸುತ್ತೇನೆ. ಎಲೈ ಅರುಣನ ತಮ್ಮನೇ, ಪುನಃ ಅಲ್ಲಿ ಆ ದೇವತೆಗಳನ್ನು ನೋಡಲು ಬಯಸುತ್ತೇನೆ.

ನಾರದಃ

ತಮಾಹ ವಿನತಾಸೂನುರಾರೋಹಸ್ವೇತಿ ವೈ ದ್ವಿಜಮ್ ।
ಆರುರೋಹಾಥ ಸ ಮುನಿಃ ಗರುಡಂ ಗಾಲವಸ್ತಥಾ ॥೫॥

ನಾರದ– ಗರುಡನು ಆ ಬ್ರಾಹ್ಮಣರಿಗೆ ನನ್ನ ಮೇಲೆ ಕುಳಿತುಕೊಳ್ಳಿ ಎಂದು ಹೇಳಿದನು. ಗಾಲವ ಋಷಿಗಳು ಗರುಡನ ಮೇಲೆ ಕುಳಿತರು.

ಗಾಲವಃ

ಕ್ರಮಮಾಣಸ್ಯ ತೇ ರೂಪಂ ದೃಶ್ಯತೇ ಪನ್ನಗಾಶನ ।
ಭಾಸ್ಕರಸ್ಯೇವ ಪೂರ್ವಾಹ್ಣೇ ಸಹಸ್ರಾಂಶೋರ್ವಿವಸ್ವತಃ ॥೬॥

ಗಾಲವ– ಎಲೈ ಪನ್ನಗಾಶನನೇ, ಹಾರುತ್ತಿರುವ ನಿನ್ನ ರೂಪವು ಪ್ರಾತಃಕಾಲದಲ್ಲಿ ಸಹಸ್ರಕಿರಣಗಳಿಂದ ಕೂಡಿದ ಸೂರ್ಯನ ರೂಪದಂತೆ ಕಂಡುಬರುತ್ತದೆ.

ಪಕ್ಷವಾತಪ್ರಣುನ್ನಾನಾಂ ವೃಕ್ಷಾಣಾಮನುಗಾಮಿನಾಮ್ ।
ಪ್ರಸ್ಥಿತಾನಾಮಿವ ಸಮಂ ಪಶ್ಯಾಮೀಹ ಗತಿಂ ಖಗ ॥೭॥

ನಿನ್ನ ರೆಕ್ಕೆಗಳಿಂದ ಉಂಟಾದ ವಾಯುವಿನಿಂದ ನಿನ್ನ ಹಿಂದೆ ಬರುತ್ತಿರುವ ವೃಕ್ಷಗಳು ತಾವು ಪ್ರಯಾಣಕ್ಕೆ ಹೊರಟಿರುವಂತೆ ಇರುವಂತಹ ನಿನ್ನ ಗಮನವನ್ನು ನಾನು ನೋಡುತ್ತಿದ್ದೇನೆ.

ಸಸಾಗರವನಾಮುರ್ವೀಂ ಸಶೈಲವನಕಾನನಾಮ್ ।
ಆಕರ್ಷನ್ನಿವ ಚಾಭಾಸಿ ಪಕ್ಷವಾತೇನ ಖೇಚರ ॥೮॥

ಎಲೈ ಖೇಚರನೇ (ಪಕ್ಷಿಯೇ), ಸಾಗರ-ವನಗಳಿಂದ ಶೈಲ-ವನ-ಕಾನನಗಳಿಂದ ಕೂಡಿದ ಭೂಮಿಯನ್ನು ನಿನ್ನ ರೆಕ್ಕೆಗಳ ವಾಯುವಿನಿಂದ ಎಳೆದುಕೊಂಡು ಹೋಗುವವನಂತೆ ತೋರುತ್ತಿದ್ದೀಯೆ.

ಸಮೀನನಾಗನಕ್ರಂ ಚ ಖಮಿವಾರೋಪ್ಯತೇ ಜಲಮ್ ।
ವಾಯುನಾ ಚೈವ ಮಹತಾ ಪಕ್ಷವಾತೇನ ಚಾನಿಶಮ್ ॥೯॥

ನಿನ್ನ ರೆಕ್ಕೆಗಳಿಂದ ಉಂಟಾದ ದೊಡ್ಡ ವಾಯುವಿನಿಂದ ಮತ್ಸ್ಯ-ಸರ್ಪ-ತಿಮಿಂಗಿಲಗಳಿಂದ ಕೂಡಿದ ಸಮುದ್ರದ ಜಲವು ಆಕಾಶವನ್ನು ಸತತವಾಗಿ ಏರುತ್ತಿದೆ.

ತುಲ್ಯರೂಪಾನನಾನ್ ಮತ್ಸ್ಯಾನ್ ತಥಾ ತಿಮಿತಿಮಿಂಗಿಲಾನ್ ।
ನಾಗಾಶ್ವತರವಕ್ತ್ರಾಂಶ್ಚ ಪಶ್ಯಾಮ್ಯುನ್ಮಥಿತಾನಿವ ॥೧೦॥

ಸಮಾನರೂಪವನ್ನು ಮತ್ತು ಮುಖವನ್ನು ಧರಿಸಿದ ಮೀನುಗಳನ್ನೂ, ತಿಮಿ ತಿಮಿಂಗಿಲಗಳನ್ನೂ, ಗಜ-ಹೇಸರಗತ್ತೆಗಳ ಮುಖವನ್ನು ಹೊಂದಿದ ಮೀನುಗಳನ್ನೂ ನಿನ್ನಿಂದ ಹಿಂಸೆಗೆ ಒಳಗಾದವುಗಳಂತೆ ನೋಡುತ್ತಿದ್ದೇನೆ.

ಮಹಾರ್ಣವಸ್ಯ ಚ ರವೈಃ ಶ್ರೋತ್ರೇ ಮೇ ಬಧಿರೇ ಕೃತೇ ।
ನ ಶೃಣೋಮಿ ನ ಪಶ್ಯಾಮಿ ನಾತ್ಮನೋ ವೇದ್ಮಿ ಕಾರಣಮ್ ॥೧೧॥

ಶನೈಃ ಸ ತು ಭವಾನ್ ಯಾತು ಬ್ರಹ್ಮವಧ್ಯಾಮನುಸ್ಮರನ್ ॥೧೨॥

ಮಹಾಸಮುದ್ರದ ಘೋಷಗಳಿಂದ ನನ್ನ ಕಿವಿಗಳು ಕಿವುಡಾಗಿವೆ. ನನಗೆ ಏನೂ ಕೇಳುತ್ತಿಲ್ಲ, ಏನೂ ಕಾಣುತ್ತಿಲ್ಲ. ನನ್ನ ಕಾರಣವೂ ತಿಳಿಯುತ್ತಿಲ್ಲ. ಬ್ರಹ್ಮಹತ್ಯೆಯ ಸಂಭವವನ್ನು ಯೋಚಿಸಿ ನೀನು ನಿಧಾನವಾಗಿ ಹೋಗುವವನಾಗು.

ನ ದೃಶ್ಯತೇ ರವಿಸ್ತಾತ ನ ದಿಶೋ ನ ಚ ಖಂ ಖಗ ।
ತಮ ಏವ ತು ಪಶ್ಯಾಮಿ ಶರೀರಂ ತೇ ನ ಲಕ್ಷಯೇ ॥೧೩॥

ಪ್ರೀತಿಪಾತ್ರನೇ, ಸೂರ್ಯನು ಕಾಣುತ್ತಿಲ್ಲ. ಪಕ್ಷಿಯೇ, ದಿಕ್ಕುಗಳಾಗಲೀ, ಆಕಾಶವಾಗಲೀ ಕಾಣುತ್ತಿಲ್ಲ. ಎಲ್ಲಕಡೆಯಲ್ಲಿಯೂ ಕತ್ತಲನ್ನು ನೋಡುತ್ತಿದ್ದೇನೆ. ನನ್ನ ಶರೀರವು ನನಗೆ ಕಾಣುತ್ತಿಲ್ಲ.

ಮಣೇ ವ ಜಾತ್ಯೌ ಪಶ್ಯಾಮಿ ಚಕ್ಷುಷೀ ತೇऽಹಮಂಡಜ ।
ಶರೀರಂ ತು ನ ಪಶ್ಯಾಮಿ ತವ ಚೈವಾತ್ಮನಶ್ಚ ಹ ॥೧೪॥

ಪದೇ ಪದೇ ತು ಪಶ್ಯಾಮಿ ಸಲಿಲಾದಗ್ನಿಮುತ್ಥಿತಮ್ ॥೧೫॥

ಎಲೈ ಪಕ್ಷಿಯೇ, ಜಾತಿಮಣಿಗಳಂತೆ ಇರುವ ನಿನ್ನ ಕಣ್ಣುಗಳನ್ನು ನೋಡುತ್ತಿದ್ದೇನೆ. ನಿನ್ನ ಮತ್ತು ನನ್ನ ಶರೀರಗಳು ಕಾಣುತ್ತಿಲ್ಲ. ಪುನಃ ಪುನಃ ನೀರಿನಿಂದ ಮೇಲೆ ಬರುತ್ತಿರುವ ಅಗ್ನಿಯನ್ನು ನೋಡುತ್ತಿದ್ದೇನೆ.

ಸ ಮೇ ನಿರ್ವಾಪ್ಯ ಸಹಸಾ ಚಕ್ಷುಷೀ ಶಾಮ್ಯತೇ ಪುನಃ ।
ತನ್ನಿವರ್ತ ಮಹಾನ್ ಕಾಲೋ ಗಚ್ಛತೋರ್ವಿನತಾತ್ಮಜ ॥೧೬॥

ಆ ಅಗ್ನಿಯು ನನ್ನ ಕಣ್ಣುಗಳಿಗೆ ಹಿಂಸೆಯನ್ನು ಉಂಟುಮಾಡಿ ಪುನಃ ಆರಿ ಹೋಗುತ್ತಿದೆ. ವಿನತೆಯ ಪುತ್ರನೇ, ನಾವು ಹೊರಟು ಬಹಳ ಕಾಲವಾಯಿತು. ಆದ್ದರಿಂದ ಹಿಂದಿರುಗು.

ನ ಮೇ ಪ್ರಯೋಜನಂ ಕಿಂಚಿದ್ ಗಮನೇ ಪನ್ನಗಾಶನ ।
ಸನ್ನಿವರ್ತ ಮಹಾಭಾಗ ನ ವೇಗಂ ವಿಷಹಾಮಿ ತೇ ॥೧೭॥

ಎಲೈ ಪನ್ನಗಾಶನನೇ, ನಾವು ಹೀಗೆ ಹೋಗುವುದರಿಂದ ನನಗೆ ಯಾವ ಪ್ರಯೋಜನವೂ ಕಾಣುವುದಿಲ್ಲ. ಎಲೈ ಮಹಾನುಭಾವನೇ, ಹಿಂದಿರುಗು. ನಿನ್ನ ವೇಗವನ್ನು ಸಹಿಸಲಾರೆ.

ಗುರವೇ ಮಚ್ಛುತಾನೀಹ ಶತಾನ್ಯಷ್ಟೌ ಚ ವಾಜಿನಾಮ್ ।
ಏಕತಃ ಶ್ಯಾಮಕರ್ಣಾನಾಂ ಶುಭ್ರಾಣಾಂ ಚಂದ್ರವರ್ಚಸಾಮ್ ॥೧೮॥

ನಾನು ಗುರುಗಳಿಗೆ ಒಂದು ಕಡೆ ಕಪ್ಪಾದ ಕಿವಿ ಇರುವ, ಶುಭ್ರವಾದ ಚಂದ್ರನ ಕಾಂತಿಯನ್ನು ಹೊಂದಿರುವ ಎಂಟುನೂರು ಅಶ್ವಗಳನ್ನು ಕೊಡುವುದಾಗಿ ಪ್ರತಿಜ್ಞೆ ಮಾಡಿದ್ದೇನೆ.

ತೇಷಾಂ ಚೈವಾಪವರ್ಗಾಯ ಮಾರ್ಗಂ ಪಶ್ಯಾಮಿ ನಾಂಡಜ ।
ತತೋಽಯಂ ಜೀವಿತತ್ಯಾಗೇ ದೃಷ್ಟೋ ಮಾರ್ಗೋ ಮಯಾ ದ್ವಿಜ ॥

ಎಲೈ ಪಕ್ಷಿಯೇ, ಅವುಗಳನ್ನು ಕೊಡುವ ಯಾವ ಮಾರ್ಗವೂ ಕಾಣುತ್ತಿಲ್ಲ. ಆದ್ದರಿಂದ ಎಲೈ ಪಕ್ಷಿಯೇ, ನಾನು ಜೀವಿತವನ್ನು ತ್ಯಜಿಸಲು ಈ ಮಾರ್ಗವನ್ನು ಕಂಡುಕೊಂಡಿದ್ದೇನೆ.

ನೈವ ಮೇಽಸ್ತಿ ಧನಂ ಕಿಂಚಿನ್ನ ಧನೇನಾನ್ವಿತಃ ಸುಹೃತ್ ।
ನ ಚಾರ್ಥೇನಾಪಿ ಮಹತಾ ಶಕ್ಯಮೇತದ್ ವ್ಯಪೋಹಿತುಮ್ ॥೨೦॥

ನನ್ನ ಬಳಿ ಸ್ವಲ್ಪವೂ ಧನವಿಲ್ಲ. ನನಗೆ ಧನಿಕನಾದ ಮಿತ್ರನೂ ಇಲ್ಲ. ಒಂದುಪಕ್ಷ ಮಹಾಧನವಿದ್ದರೂ ಈ ಕಷ್ಟವನ್ನು ಧನದಿಂದ ನೀಗಿಸಲು ಸಾಧ್ಯವಿಲ್ಲ.

ನಾರದಃ

ಏವಂ ಬಹು ಚ ದೀನಂ ಚ ಬ್ರುವಾಣಂ ಗಾಲವಂ ತದಾ ।
ಪ್ರತ್ಯುವಾಚ ವ್ರಜನ್ನೇವ ಪ್ರಹಸನ್ ವಿನತಾತ್ಮಜಃ ॥೨೧॥

ನಾರದ– ಹೀಗೆ ಬಹಳ ದೀನರಾಗಿ ಮಾತನಾಡುತ್ತಿದ್ದ ಗಾಲವರನ್ನು ಕುರಿತು ವಿನತಾಪುತ್ರನಾದ ಗರುಡನು ಮುಂದೆ ಸಾಗುತ್ತಲೇ ನಗುತ್ತಾ ಮಾತನಾಡಿದನು.

ನಾತಿಪ್ರಜ್ಞೋಽಸಿ ವಿಪ್ರರ್ಷೇ ಯೋ ತ್ಮಾನಂ ತ್ಯಕ್ತುಮಿಚ್ಛಸಿ ।
ನ ಚಾಪಿ ಕೃತ್ರಿಮಃ ಕಾಲಃ ಕಾಲೋ ಹಿ ಪರಮೇಶ್ವರಃ ॥೨೨॥

ಎಲೈ ವಿಪ್ರರ್ಷಿಯೇ, ದೇಹತ್ಯಾಗವನ್ನು ಮಾಡಲು ಬಯಸುವ ನೀನು ಬಹಳ ವಿವೇಕವುಳ್ಳವನಲ್ಲ. ಕ್ಷಲವಾದಿ ಕಾಲವು ಕೃತ್ರಿಮವಲ್ಲ. ಕಾಲವು ಪರಮೇಶ್ವರನ ಒಂದು ರೂಪ.

ಕಿಮಹಂ ಪೂರ್ವಮೇವೇದಂ ಭವತಾ ನಾಭಿಚೋದಿತಃ ।
ಉಪಾಯೋಽತ್ರ ಮಹಾನಸ್ತಿ ಯೇನೈತದುಪಪದ್ಯತೇ ॥೨೩॥

ಈ ವಿಷಯವನ್ನು ನೀನು ಮೊದಲೇ ನನಗೆ ಏಕೆ ಹೇಳಲಿಲ್ಲ? ಇದನ್ನು ಸಾಧಿಸುವ ಒಂದು ದೊಡ್ಡ ಉಪಾಯವು ಇಲ್ಲಿದೆ.

ತದೇವ ಋಷಭೋ ನಾಮ ಪರ್ವತಃ ಸಾಗರೋರಸಿ ।
ಅತ್ರ ವಿಶ್ರಮ್ಯ ಭುಕ್ತ್ವಾ ಚ ನಿವರ್ತಿಷ್ಯಾವ ಗಾಲವ ॥೨೪॥

ಸಾಗರದ ಸಮೀಪದಲ್ಲಿ ಋಷಭವೆಂಬ ಈ ಪರ್ವತವಿದೆ. ಎಲೈ ಗಾಲವರೇ, ಇಲ್ಲಿ ವಿಶ್ರಾಂತಿಯನ್ನು ತೆಗೆದುಕೊಂಡು ಭೋಜನವನ್ನು ಮಾಡಿ ಹಿಂದಿರುಗೋಣ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕಾದಶೋತ್ತರಶತತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ದ್ವಿಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಹನ್ನೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹನ್ನೆರಡನೆಯ ಅಧ್ಯಾಯ

ಋಷಭಾಚಲದಲ್ಲಿ ಶಾಂಡಿಲಿಯ ಜೊತೆಯಲ್ಲಿ ಸಂಭಾಷಣೆ

ನಾರದಃ

ಋಷಭಸ್ಯ ತತಃ ಶೃಂಗೇ ನಿಪತ್ಯ ದ್ವಿಜಪಕ್ಷಿಣೌ ।
ಶಾಂಡಿಲೀಂ ಬ್ರಾಹ್ಮಣೀಂ ತತ್ರ ದದೃಶಾತೇ ತಪೋನ್ವಿತಾಮ್ ॥೧॥

ನಾರದ– ಅನಂತರ ಬ್ರಾಹ್ಮಣ ಮತ್ತು ಗರುಡ ಇವರಿಬ್ಬರೂ ಋಷಭಾಚಲದ ಶಿಖರದಲ್ಲಿ ಇಳಿದು, ತಪಸ್ಸಿನಿಂದ ಕೂಡಿದ ಬ್ರಾಹ್ಮಣಿಯಾದ ಶಾಂಡಿಲಿಯನ್ನು ಅಲ್ಲಿ ನೋಡಿದರು.

ಅಭಿವಾದ್ಯ ಸುಪರ್ಣಸ್ತು ಗಾಲವಶ್ಚಾಭಿಪೂಜ್ಯ ತಾಮ್ ।
ತಯಾ ಚ ಸ್ವಾಗತೇನೋಕ್ತೌ ವಿಷ್ಟರೇ ಸನ್ನಿಷೀದತುಃ ॥೨॥

ಗಾಲವ ಮತ್ತು ಗರುಡರು ಅವಳಿಗೆ ನಮಸ್ಕಾರವನ್ನು ಮಾಡಿ ಪೂಜೆಯನ್ನು ಸಲ್ಲಿಸಿ ಅವಳಿಂದ ಸ್ವಾಗತಿಸಲ್ಪಟ್ಟು ಆಸನದಲ್ಲಿ ಕುಳಿತುಕೊಂಡರು.

ಸಿದ್ಧಮನ್ನಂ ತಯಾ ಕ್ಷಿಪ್ರಂ ಬಲಿಮಂತ್ರೋಪಬೃಂಹಿತಮ್ ।
ಭುಕ್ತ್ವಾ ತೃಪ್ತಾವುಭೌ ಭೂಮೌ ಸುಪ್ತೌ ಚೈವ ಸಮಾಹಿತೌ ॥೩॥

ಅವಳು ನೀಡಿದ ಬಲಿಮಂತ್ರಗಳಿಂದ ಸಂಸ್ಕೃತವಾದ ಅನ್ನವನ್ನು ಶೀಘ್ರವಾಗಿ ಭುಂಜಿಸಿ ತೃಪ್ತರಾಗಿ ಇಬ್ಬರೂ ಸಮಾಧಾನದಿಂದ ಭೂಮಿಯ ಮೇಲೆ ಮಲಗಿದರು.

ಮುಹೂರ್ತಾತ್ ಪ್ರತಿಬುದ್ಧಸ್ತು ಸುಪರ್ಣೋ ಗಮನೇಪ್ಸಯಾ ।
ಅಥ ಭ್ರಷ್ಟತನೂಜಾಂಗಮಾತ್ಮಾನಂ ದದೃಶೇ ಖಗಃ ॥೪॥

ಹೊರಡುವ ಇಚ್ಛೆಯಿಂದ ಒಂದುಮುಹೂರ್ತದ ಮೇಲೆ ಎಚ್ಚರಗೊಂಡ ಗರುಡನು ತನ್ನ ರೆಕ್ಕೆಗಳು ಬಿದ್ದುಹೋಗಿರುವುದನ್ನು ಗಮನಿಸಿದನು.

ಮಾಂಸಪಿಂಡೋಪಮೋಽಭೂತ್ ಸ ಮುಖಪಾದಾನ್ವಿತಃ ಖಗಃ ।
ಗಾಲವಸ್ತಂ ತಥಾ ದೃಷ್ಟ್ವಾ ವಿಷಣ್ಣಃ ಪರ್ಯಪೃಚ್ಛತ ॥೫॥

ಮುಖ-ಪಾದಗಳಿಂದ ಕೂಡಿದ ಗರುಡನು ಮಾಂಸಪಿಂಡದಂತೆ ಇದ್ದನು. ಗಾಲವರು ಅವನನ್ನು ನೋಡಿ ವಿಷಣ್ಣರಾಗಿ ಪ್ರಶ್ನೆಯನ್ನು ಮಾಡಿದರು.

ಕಿಮಿದಂ ಭವತಾ ಪ್ರಾಪ್ತಮಿಹಾಗಮನಜಂ ಫಲಮ್ ।
ವಾಸೋಽಯಮಿಹ ಕಾಲಂ ತು ಕಿಯಂತಂ ನೋ ಭವಿಷ್ಯತಿ ॥೬॥

ಇಲ್ಲಿಗೆ ಬಂದುದರ ಯಾವ ಫಲವು ನಿನಗೆ ದೊರಕಿದೆ? ನಾವು ಇಲ್ಲಿ ಎಷ್ಟು ಸಮಯ ಇರಬೇಕಾಗುವುದು?

ಕಿಂ ನು ತೇ ಮನಸಾ ಧ್ಯಾತಮಶುಭಂ ಪತತಾಂ ವರ ।
ನ ಹ್ಯಯಂ ಭವತಃ ಸ್ವಲ್ಪೋ ವ್ಯಭಿಚಾರೋ ಭವಿಷ್ಯತಿ ॥೭॥

ಎಲೈ ಪಕ್ಷಿಯೇ, ನೀನು ಯಾವ ಕೆಟ್ಟ ವಿಷಯವನ್ನು ಮನಸ್ಸಿನಲ್ಲಿ ಯೋಚಿಸಿದೆ? ನೀನು ಮನಸ್ಸಿನಲ್ಲಿ ಮಾಡಿದ ಅಪಚಾರವು ಅಲ್ಪವಾಗಿರಲಾರದು!

ನಾರದಃ

ಸುಪರ್ಣೋಽಥಾಬ್ರವೀದ್ ವಿಪ್ರಂ ಪ್ರಧ್ಯಾತಂ ವೈ ಮಯಾ ದ್ವಿಜ ।
ಇಮಾಂ ಸಿದ್ಧಾಮಿತೋ ನೇತುಂ ತತ್ರ ಯತ್ರ ಪ್ರಜಾಪತಿಃ ॥೮॥

ನಾರದ– ಗರುಡನು ಅನಂತರ ಆ ಬ್ರಾಹ್ಮಣರನ್ನು ಕುರಿತು ಮಾತನಾಡಿದನು. ಎಲೈ ಬ್ರಾಹ್ಮಣರೇ, ನಾನು ಈ ಸಿದ್ಧಸ್ತ್ರೀಯನ್ನು ಪ್ರಜಾಪತಿ ಇರುವಲ್ಲಿಗೆ ಕರೆದುಕೊಂಡು ಹೋಗಬೇಕೆಂದು ಯೋಚಿಸಿದೆ.

ಯತ್ರ ದೇವೋ ಮಹಾದೇವೋ ಯತ್ರ ವಿಷ್ಣುಃ ಸನಾತನಃ ।
ಯತ್ರ ಧರ್ಮಶ್ಚ ಯಜ್ಞಶ್ಚ ತತ್ರೇಯಂ ನಿವಸೇದಿತಿ ॥೯॥

ಎಲ್ಲಿ ದೇವನಾದ ಮಹೇಶ್ವರನು, ಸನಾತನನಾದ ವಿಷ್ಣುವು, ಧರ್ಮ ಮತ್ತು ಯಜ್ಞಗಳು ಇರುತ್ತವೆಯೋ ಅಲ್ಲಿ ಇವಳು ವಾಸ ಮಾಡಲಿ ಎಂದು (ನನ್ನ ಅಭಿಪ್ರಾಯವಾಗಿದ್ದಿತು).

ಸೋಽಹಂ ಭಗವತೀಂ ಯಾಚೇ ಪ್ರಣತಃ ಪ್ರಿಯಕಾಮ್ಯಯಾ ।
ಮಮೈತನ್ನಾಮ ಪ್ರಧ್ಯಾತಂ ಮನಸಾ ಶೋಚತಾ ಕಿಲ ॥೧೦॥

ತದೇವಂ ಬಹುಮಾನಂ ತೇ ಮಯೇಹಾನೀಪ್ಸಿತಂ ಕೃತಮ್ ।
ಸುಕೃತಂ ದುಷ್ಕೃತಂ ವಾ ತ್ವಂ ಮಾಹಾತ್ಮ್ಯಾತ್ ಕ್ಷಂತುಮರ್ಹಸಿ ॥೧೧॥

ನಾನು ಪೂಜ್ಯಳಾದ ಇವಳನ್ನು ನಮಸ್ಕರಿಸಿ ನನಗೆ ಪ್ರಿಯವನ್ನು ಮಾಡುವಂತೆ ಬೇಡುತ್ತೇನೆ. ಶೋಕಪಡುವ ನಾನು ಮನಸ್ಸಿನಲ್ಲಿ ಈ ರೀತಿ ಯೋಚಿಸಿದೆನಷ್ಟೆ! ನಿನಗೆ ಇಂತಹ ಬಹುಮಾನವನ್ನು ಮಾಡಬೇಕೆಂದು ನಾನು ನನಗೆ ಅರಿವಿಲ್ಲದೆಯೇ ಚಿಂತಿಸಿದೆ. ಅದು ಒಳ್ಳೆಯದಾಗಿರಲಿ ಅಥವಾ ಕೆಟ್ಟದಾಗಿರಲಿ, ನೀನು ನಿನ್ನ ಮಹಿಮೆಯಿಂದ ಅದನ್ನು ಕ್ಷಮಿಸಬೇಕು.

ಸಾ ತೌ ತದಾಽಬ್ರವೀತ್ ತುಷ್ಟಾ ಪನ್ನಗೇಂದ್ರದ್ವಿಜರ್ಷಭೌ ॥೧೨॥

ನ ಭೇತವ್ಯಂ ಸುಪರ್ಣೋಽಸಿ ಸುಪರ್ಣ ತ್ಯಜ ಸಂಭ್ರಮಮ್ ॥೧೩॥

ಆ ಬ್ರಾಹ್ಮಣ ಮತ್ತು ಪಕ್ಷಿ ಇಬ್ಬರನ್ನು ನೋಡಿದ ಅವಳು ಸಂತೋಷಗೊಂಡು ಎಲೈ ಗರುಡನೇ, ನೀನು ಒಳ್ಳೆಯ ರೆಕ್ಕೆಗಳಿಂದ ಕೂಡಿದವನಾಗಿದ್ದೀಯೆ. ಹೆದರಬೇಡ. ಎಲೈ ಗರುಡನೇ, ಗಾಬರಿಯನ್ನು ಬಿಡು ಎಂದು ಹೇಳಿದಳು.

ನಿಂದಿತಾऽಸ್ಮಿ ತ್ವಯಾ ವತ್ಸ ನ ಚ ನಿಂದಾಂ ಕ್ಷಮಾಮ್ಯಹಮ್ ।
ಲೋಕೇಭ್ಯಃ ಸಪದಿ ಭ್ರಶ್ಯೇದ್ ಯೋ ಮಾಂ ನಿಂದೇತ ಪಾಪಕೃತ್॥೧೪॥

ವತ್ಸನೇ, ನೀನು ನನ್ನನ್ನು ನಿಂದಿಸಿದ್ದೀಯೆ. ನಾನು ನಿಂದೆಯನ್ನು ಕ್ಷಮಿಸುವುದಿಲ್ಲ. ಯಾವ ಪಾಪಿಯು ನನ್ನನ್ನು ನಿಂದಿಸುವನೋ ಅವನು ತಾನು ಸಂಪಾದಿಸಿದ ಲೋಕವನ್ನು ಕಳೆದುಕೊಳ್ಳುವನು.

ಹೀನಯಾ ಲಕ್ಷಣೈಃ ಸರ್ವೈಃ ತಥಾ ನಿಂದಿತಯಾ ಮಯಾ ।
ಆಚಾರಂ ಪ್ರತಿಗೃಹ್ಣಂತ್ಯಾ ಸಿದ್ಧಿಃ ಪ್ರಾಪ್ತೇಯಮುತ್ತಮಾ ॥೧೫॥

ಲಕ್ಷಣಗಳಿಂದ ರಹಿತಳಾಗಿ ಎಲ್ಲರಿಂದಲೂ ಹಾಗೆ ನಿಂದಿತಳಾದ ನಾನು ಸದಾಚಾರವನ್ನು ಸ್ವೀಕರಿಸಿ ಈ ಶ್ರೇಷ್ಠವಾದ ಸಿದ್ಧಿಯನ್ನು ಪಡೆದಿದ್ದೇನೆ.

ಆಚಾರಲಕ್ಷಣೋ ಧರ್ಮೋ ಹ್ಯಾಚಾರಾಲ್ಲಭತೇ ಧನಮ್ ।
ಆಚಾರಾಚ್ಛ್ರೇಯ ಆಪ್ನೋತಿ ಆಚಾರೋ ಹಂತ್ಯಲಕ್ಷಣಮ್ ॥೧೬॥

ಆಚಾರದಿಂದ ಧರ್ಮವುಂಟಾಗುತ್ತದೆ. ಆಚಾರದಿಂದ ಧನವು ಲಭಿಸುತ್ತದೆ. ಆಚಾರದಿಂದ ಶ್ರೇಯಸ್ಸನ್ನು ಹೊಂದುತ್ತಾನೆ. ಆಚಾರವು ಅವಲಕ್ಷಣಗಳನ್ನು ನಾಶ ಮಾಡುತ್ತದೆ.

ತದಾಯುಷ್ಮನ್ ಖಗಪತೇ ಯಥೇಷ್ಟಂ ಗಮ್ಯತಾಮಿತಃ ।
ನ ಚ ತೇ ಗರ್ಹಣೀಯಾऽಸ್ಮಿ ಗರ್ಹಿತವ್ಯಾಃ ಸ್ತ್ರಿಯಃ ಕ್ವಚಿತ್ ॥೧೭॥

ಭವಿತಾಸಿ ಯಥಾ ಪೂರ್ವಂ ಬಲವೀರ್ಯಸಮನ್ವಿತಃ ॥೧೮॥

ಆದ್ದರಿಂದ ಎಲೈ ಗರುಡನೇ, ಪಕ್ಷಿರಾಜನೇ, ಆಯುಷ್ಮಂತನೇ, ನೀನು ಇಲ್ಲಿಂದ ಹೊರಡಬಹುದು. ನನ್ನನ್ನು ನಿಂದಿಸಬಾರದು. ಯಾವ ಸ್ತ್ರೀಯರನ್ನೂ ನಿಂದಿಸಬಾರದು. ನೀನು ಮೊದಲಿನಂತೆಯೇ ಬಲ, ಪರಾಕ್ರಮದಿಂದ ಕೂಡಿದವನಾಗಿರುತ್ತೀಯೆ.

ನಾರದಃ

ಬಭೂವತುಸ್ತತಸ್ತಸ್ಯ ಪಕ್ಷೌ ದ್ರವಣವತ್ತರೌ ।
ಅನುಜ್ಞಾತಸ್ತು ಶಾಂಡಿಲ್ಯಾ ಯಥಾಗತಮುಪಾಗಮತ್ ॥೧೯॥

ನೈವ ಚಾಸಾದಯಾಮಾಸ ತಥಾರೂಪಾಂಸ್ತುರಂಗಮಾನ್ ॥೨೦॥

ನಾರದ– ಆಗ ಗರುಡನಿಗೆ ವೇಗವನ್ನು ಉಂಟುಮಾಡುವುದಕ್ಕೆ ಸಮರ್ಥವಾದ ಎರಡು ರೆಕ್ಕೆಗಳು ಮೂಡಿದವು. ಶಾಂಡಿಲಿಯ ಅನುಮತಿಯನ್ನು ಪಡೆದು ಅವನು ಬಂದಂತೆಯೇ ಹಿಂದಿರುಗಿದನು. ಆದರೆ ಅಂತಹ ಕುದುರೆಗಳನ್ನು ಮಾತ್ರ ಕಾಣಲಿಲ್ಲ.

ವಿಶ್ವಾಮಿತ್ರೋಽಥ ತಂ ದೃಷ್ಟ್ವಾ ಗಾಲವಂ ಚಾಧ್ವನಿ ಸ್ಥಿತಮ್ ।
ಉವಾಚ ವದತಾಂ ಶ್ರೇಷ್ಠೋ ವೈನತೇಯಸ್ಯ ಸನ್ನಿಧೌ ॥೨೧॥

ವಿಶ್ವಾಮಿತ್ರರು ಮಾರ್ಗದಲ್ಲಿ ವೈನತೇಯನ ಜೊತೆಯಲ್ಲಿರುವ ಗಾಲವರನ್ನು ನೋಡಿ ಮಾತನಾಡುವವರಲ್ಲಿ ಶ್ರೇಷ್ಠರಾದ ಅವರು ಮಾತನಾಡಿದರು.

ವಿಶ್ವಾಮಿತ್ರಃ

ಯಸ್ತ್ವಯಾ ಸ್ವಯಮೇವಾರ್ಥಃ ಪ್ರತಿಜ್ಞಾತೋ ಮಮ ದ್ವಿಜ ।
ತಸ್ಯ ಕಾಲೋಽಪವರ್ಗಸ್ಯ ಯಥಾ ವಾ ಮನ್ಯತೇ ಭವಾನ್ ॥೨೨॥

ವಿಶ್ವಾಮಿತ್ರ– ಎಲೈ ಬ್ರಾಹ್ಮಣನೇ, ನೀನಾಗಿಯೇ ಪ್ರತಿಜ್ಞೆ ಮಾಡಿದ ಯಾವ ವಿಷಯವಿದೆಯೋ ಅದನ್ನು ನನಗೆ ಕೊಡುವ ಕಾಲವು ಬಂದಿದೆ. ನಿನ್ನ ಅಭಿಪ್ರಾಯವೇನು?

ಪ್ರತೀಕ್ಷಿಷ್ಯಾಮ್ಯಹಂ ಕಾಲಮೇತಾವಂತಂ ತಥಾ ಪರಮ್ ।
ಯಥಾ ಸಂಸಿದ್ಧ್ಯತೇ ವಿಪ್ರ ಸ ಮಾರ್ಗಃ ಪ್ರವಿಮೃಶ್ಯತಾಮ್ ॥೨೩॥

ನಾನು ಇಲ್ಲಿಯವರೆಗೆ ಅದರ ನಿರೀಕ್ಷೆಯಲ್ಲಿದ್ದೇನೆ. ಮುಂದೆಯೂ ನಿರೀಕ್ಷಿಸುವೆನು. ಆ ವಿಷಯವು ಸಿದ್ಧವಾಗುವ ಮಾರ್ಗವನ್ನು ಚಿಂತಿಸುವವನಾಗು.

ನಾರದಃ

ಸುಪರ್ಣೋಽಥಾಬ್ರವೀದ್ ದೀನಂ ಗಾಲವಂ ಭೃಶದುಃಖಿತಮ್ ॥೨೪॥

ಪ್ರತ್ಯಕ್ಷಂ ಖಲ್ವಿದಾನೀಂ ಮೇ ವಿಶ್ವಾಮಿತ್ರೋ ಯದುಕ್ತವಾನ್ ॥೨೫॥

ನಾರದ– ಆಗ ಗರುಡನು ದೀನರೂ ಮತ್ತು ಬಹಳ ದುಃಖಿತರೂ ಆದ ಗಾಲವರನ್ನು ಕುರಿತು ಈಗ ವಿಶ್ವಾಮಿತ್ರರು ನನ್ನ ಎದುರಿಗೆ ಹೇಳಿದುದೆಲ್ಲವನ್ನೂ ನಾನು ಪ್ರತ್ಯಕ್ಷವಾಗಿ ಕೇಳಿದ್ದೇನೆ.

ತದಾಗಚ್ಛ ದ್ವಿಜಶ್ರೇಷ್ಠ ಮಂತ್ರಯಿಷ್ಯಾವ ಗಾಲವ ।
ನಾದತ್ತ್ವಾ ಗುರವೇ ಶಕ್ಯಂ ಕೃತ್ಸ್ನಮರ್ಥಂ ತ್ವಯಾऽऽಸಿತುಮ್ ॥೨೬॥

ಆದ್ದರಿಂದ ದ್ವಿಜಶ್ರೇಷ್ಠರಾದ ಗಾಲವರೇ, ನನ್ನ ಜೊತೆಯಲ್ಲಿ ಬನ್ನಿ. ಆಲೋಚನೆಯನ್ನು ಮಾಡೋಣ. ಗುರುಗಳಿಗೆ ಪ್ರತಿಜ್ಞೆ ಮಾಡಿದ ಎಲ್ಲಾ ವಸ್ತುಗಳನ್ನೂ ಕೊಡದೆ ನೀವು ಇರಲು ಸಾಧ್ಯವಿಲ್ಲ ಎಂದು ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ದ್ವಾದಶೋತ್ತರಶತತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ತ್ರಿಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಹನ್ನೆರಡನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿಮೂರನೆಯ ಅಧ್ಯಾಯ

ಗರುಡನು ಯಯಾತಿಯ ಬಳಿಗೆ ಗಾಲವರನ್ನು ಕರೆದುಕೊಂಡು
ಹೋಗಿ ಗುರುದಕ್ಷಿಣೆಯ ಯಾಚನೆ.

ನಾರದಃ

ಅಥಾಹ ಗಾಲವಂ ದೀನಂ ಸುಪರ್ಣಃ ಪತತಾಂ ವರಃ ॥೧॥

ನಿರ್ಮಿತಂ ವಹ್ನಿನಾ ಭೂಮೌ ವಾಯುನಾ ವರ್ಧಿತಂ ತಥಾ ।
ಯಸ್ಮಾದ್ಧಿರಣ್ಮಯಂ ಸರ್ವಂ ಹಿರಣ್ಯಂ ತೇನ ಚೋಚ್ಯತೇ ॥೨॥

ನಾರದ– ಆಗ ದೀನರಾದ ಗಾಲವರನ್ನು ಕುರಿತು ಪಕ್ಷಿಶ್ರೇಷ್ಠನಾದ ಗರುಡನು ಮಾತನಾಡಿದನು. ಇದು ಅಗ್ನಿಯಿಂದ ನಿರ್ಮಿಸಲ್ಪಟ್ಟು ವಾಯುವಿನಿಂದ

ಅಭಿವೃದ್ಧಿಯನ್ನು ಹೊಂದಿತು. ಇದು ಎಲ್ಲಾ ರೋಗವನ್ನು ಕಳೆಯುವುದರಿಂದ ಮತ್ತು ಸುಖವನ್ನು ಕೊಡುವುದರಿಂದ ಇದನ್ನು ಹಿರಣ್ಯವೆಂದು ಕರೆಯುತ್ತಾರೆ.

ಧತ್ತೇ ಧಾರಯತೇ ಚೇದಮೇತಸ್ಮಾತ್ ಕಾರಣಾದ್ ಧನಮ್ ।
ತದೇತತ್ ತ್ರಿಷು ಲೋಕೇಷು ಧನಂ ತಿಷ್ಠತಿ ಶಾಶ್ವತಮ್ ॥೩॥

ಇದು ಸುಖವನ್ನು ಕೊಡುತ್ತದೆ ಮತ್ತು ಮನುಷ್ಯರನ್ನು ಧರಿಸುತ್ತದೆ. ಆ ಕಾರಣದಿಂದ ಇದನ್ನು ಧನವೆಂದೂ ಕರೆಯುತ್ತಾರೆ. ಅಂತಹ ಈ ಧನವು ಮೂರುಲೋಕಗಳಲ್ಲಿಯೂ ಶಾಶ್ವತವಾಗಿರುತ್ತದೆ.

ನಿತ್ಯಂ ಪ್ರೋಷ್ಠಪದಾಭ್ಯಾಂ ಚ ಚಕ್ರೇ ಧನಪತೌ ತಥಾ ।
ಮನುಷ್ಯೇಭ್ಯಃ ಸದಾऽऽದತ್ತೇ ಶಕ್ರಶ್ಚಿತ್ತಾರ್ಜಿತಂ ಧನಮ್ ॥೪॥

ಪ್ರೋಷ್ಠಪದ ನಕ್ಷತ್ರದಲ್ಲಿ ಪೂರ್ಣಿಮೆಯು ಉಂಟಾಗುವ ಭಾದ್ರಪದ ಮಾಸದಲ್ಲಿ ಎಂದರೆ ವಾಮನಾವತಾರದ ಕಾಲದಲ್ಲಿ ಈ ಧನವು ಇಂದ್ರನಲ್ಲಿರುತ್ತದೆ. ಹಾಗೆಯೇ ಕುಬೇರನಲ್ಲಿಯೂ ಇರುತ್ತದೆ. ಮನುಷ್ಯರು ಮನಃಪೂರ್ವಕವಾಗಿ ಸಂಪಾದಿಸಿದ ಈ ಧನವನ್ನು ಮನುಷ್ಯರಿಂದ ಇಂದ್ರನು ಸ್ವೀಕರಿಸುತ್ತಾನೆ.

ಅಜೈಕಪಾದಾಹಿರ್ಬುಧ್ನ್ಯೋ ರಕ್ಷೇತೇ ಧನದೇನ ಚ ।
ಏವಂ ನ ಶಕ್ಯತೇ ಲಬ್ಧುಮಲಬ್ಧವ್ಯಂ ದ್ವಿಜರ್ಷಭ ॥೫॥

ಋತೇ ನ ಧನಮಶ್ವಾನಾಮವಾಪ್ತಿರ್ವಿದ್ಯತೇ ತವ ॥೬॥

ಈ ಧನವನ್ನು ಅಜೈಕಪಾತ್, ಅಹಿರ್ಬುಧ್ನ ಎಂಬ ಇಬ್ಬರು ರುದ್ರರೂ ಮತ್ತು ಕುಬೇರನೂ ರಕ್ಷಿಸುತ್ತಾರೆ. ಎಲೈ ದ್ವಿಜಶ್ರೇಷ್ಠರೇ, ಪಡೆಯಲು ಅರ್ಹವಲ್ಲದ ಈ ಧನವನ್ನು ನೀವು ಪಡೆಯಲು ಸಾಧ್ಯವಿಲ್ಲ. ಧನವಿಲ್ಲದೆ ನಿಮಗೆ ಅಶ್ವಗಳ ಪ್ರಾಪ್ತಿ ಉಂಟಾಗುವುದಿಲ್ಲ (ಧನವನ್ನು ಯಾಚಿಸಿ ಪಡೆಯದಿರುವುದು, ಅದನ್ನು ಯಾಚಿಸಿ ಪಡೆದರೂ ಅಶ್ವಗಳು ದೊರೆಯುವುದಿಲ್ಲ ಎಂದು ಅಭಿಪ್ರಾಯ).

ಅರ್ಥಂ ಯಾಚಸ್ವ ರಾಜಾನಂ ಕಂಚಿದ್ ರಾಜರ್ಷಿವಂಶಜಮ್ ।
ಅಪೀಡ್ಯ ರಾಜಾ ಪೌರಾನ್ ಹಿ ಯೋ ನೌ ಕುರ್ಯಾತ್ ಕೃತಾರ್ಥಿನೌ ॥

ಯಾವ ರಾಜನು ಪ್ರಜೆಗಳನ್ನು ಹಿಂಸಿಸದೆ ನಮ್ಮನ್ನು ಕೃತಕೃತ್ಯರನ್ನಾಗಿ ಮಾಡಬಹುದೋ ಅಂತಹ ರಾಜರ್ಷಿವಂಶದಲ್ಲಿ ಜನಿಸಿದ ಒಬ್ಬ ರಾಜನನ್ನು ಬೇಡುವವನಾಗು.

ಅಸ್ತಿ ಸೋಮಾನ್ವವಾಯೇ ಮೇ ಜಾತಃ ಕಶ್ಚಿನ್ನೃಪಃ ಸಖಾ ।
ಅಭಿಗಚ್ಛಾವಹೇ ತಂ ವೈ ಯಸ್ಯಾಸ್ತಿ ವಿಭವೋ ಭುವಿ ॥೮॥

ಚಂದ್ರನ ವಂಶದಲ್ಲಿ ಜನಿಸಿದ ಒಬ್ಬ ರಾಜನು ನನಗೆ ಸ್ನೇಹಿತನಾಗಿದ್ದಾನೆ. ಅವನಿಗೆ ಭೂಮಿಯಲ್ಲಿ ಬಹಳ ವೈಭವವು ಇದೆ. ನಾವಿಬ್ಬರೂ ಅವನ ಬಳಿಗೆ ಹೋಗೋಣ.

ಯಯಾತಿರ್ನಾಮ ರಾಜರ್ಷಿಃ ನಾಹುಷಃ ಸತ್ಯವಿಕ್ರಮಃ ।
ಸ ದಾಸ್ಯತಿ ಮಯಾ ಚೋಕ್ತೋ ಭವತಾ ಚಾರ್ಥಿತಃ ಸ್ವಯಮ್ ॥೯॥

ಅವನು ನಹುಷನ ಮಗನಾದ, ಸತ್ಯವಿಕ್ರಮನಾದ ಯಯಾತಿ ಎಂಬ ರಾಜರ್ಷಿ. ನೀನು ಬೇಡಿದರೆ ಮತ್ತು ನಾನು ಹೇಳಿದರೆ ಅವನು ಸ್ವತಃ ಧನವನ್ನು ಕೊಡುವನು.

ವಿಭವಶ್ಚಾಸ್ಯ ಸುಮಹಾನ್ ಆಸೀದ್ ಧನಪತೇರಿವ ।
ಏವಂ ಗುರುಧನಂ ವಿದ್ವನ್ ದಾನೇನೈವ ವಿಶೋಧಯ ॥೧೦॥

ಅವನ ಬಳಿ ಹಿಂದೆ ಕುಬೇರನಿಗೆ ಇರುವಂತಹ ಐಶ್ವರ್ಯವು ಇದ್ದಿತು. ಎಲೈ ವಿದ್ವಾಂಸರೇ, ನಿಮ್ಮ ಗುರುದಕ್ಷಿಣೆಯನ್ನು ದಾನದಿಂದಲೇ ಪೂರೈಸುವವರಾಗಿ.

ನಾರದಃ

ತಥಾ ತೌ ಕಥಯಂತೌ ಚ ಚಿಂತಯಂತೌ ಚ ಯತ್ ಕ್ಷಮಮ್ ।
ಪ್ರತಿಷ್ಠಾನೇ ನರಪತಿಂ ಯಯಾತಿಂ ಪ್ರತ್ಯುಪಸ್ಥಿತೌ ॥೧೧॥

ನಾರದ– ಹಾಗೆ ಮಾತನಾಡುತ್ತಾ ಮತ್ತು ಯಾವುದನ್ನು ಮಾಡಲು ಸಾಧ್ಯವೆಂದು ಚಿಂತಿಸುತ್ತಾ ಅವರು ಪ್ರತಿಷ್ಠಾನ ನಗರದಲ್ಲಿದ್ದ ಯಯಾತಿ ರಾಜನ ಸಮೀಪಕ್ಕೆ ಬಂದರು.

ಪ್ರತಿಗೃಹ್ಯ ಚ ಸತ್ಕಾರೈರರ್ಘ್ಯಪಾದ್ಯಾದಿಕಂ ದದೌ ।
ಪೃಷ್ಟಶ್ಚಾಗಮನೇ ಹೇತುಮುವಾಚ ವಿನತಾಸುತಃ ॥೧೨॥

ಅವನು ಅವರನ್ನು ಸತ್ಕಾರಪೂರ್ವಕವಾಗಿ ಸ್ವೀಕರಿಸಿ ಅರ್ಘ್ಯಪಾದ್ಯಾದಿಗಳನ್ನು ನೀಡಿದನು. ಅವರ ಆಗಮನಕ್ಕೆ ಕಾರಣವನ್ನು ಕೇಳಿದಾಗ ಗರುಡನು ಮಾತನಾಡಿದನು.

ಅಯಂ ಮೇ ನಾಹುಷ ಸಖಾ ಗಾಲವಸ್ತಾಪಸೋ ನಿಧಿಃ ।
ವಿಶ್ವಾಮಿತ್ರಸ್ಯ ಶಿಷ್ಯೋಽಭೂತ್ ವರ್ಷಾಣ್ಯಯುತಶೋ ನೃಪ ॥೧೩॥

ಎಲೈ ನಹುಷಪುತ್ರನೇ, ಇವರು ಗಾಲವರೆಂಬ ತಪೋನಿಧಿಗಳಾದ ನನ್ನ ಸ್ನೇಹಿತರು. ಎಲೈ ರಾಜನೇ, ಹತ್ತಾರು ಸಾವಿರ ವರ್ಷಗಳ ಕಾಲ ಇವರು ವಿಶ್ವಾಮಿತ್ರರ ಶಿಷ್ಯರಾಗಿದ್ದರು.

ಸೋಽಯಂ ತೇನಾಭ್ಯನುಜ್ಞಾತ ಉಪಕಾರೇಪ್ಸಯಾ ದ್ವಿಜಃ ।
ತಮಾಹ ಭಗವನ್ ಕಿಂ ತೇ ದದಾನಿ ಗುರುದಕ್ಷಿಣಾಮ್ ॥೧೪॥

ಈ ಬ್ರಾಹ್ಮಣರು ನೀನು ಮನೆಗೆ ಹೋಗು ಎಂದು ಅವರಿಂದ ಅನುಮತಿಯನ್ನು ಪಡೆದ ಮೇಲೆ ಅವರಿಗೆ ಉಪಕಾರವನ್ನು ಮಾಡಲು ಬಯಸಿ ಪೂಜ್ಯರೇ, ನಿಮಗೆ ಯಾವ ಗುರುದಕ್ಷಿಣೆಯನ್ನು ಕೊಡಲಿ ಎಂದು ಕೇಳಿದರು.

ಅಸಕೃತ್ ತೇನ ಚೋಕ್ತೇನ ಕಿಂಚಿದಾಗತಮನ್ಯುನಾ ।
ಅಯಮುಕ್ತಃ ಪ್ರಯಚ್ಛೇತಿ ಜಾನತಾ ವಿಭವಂ ಲಘು ॥೧೫॥

ಏಕತಃ ಶ್ಯಾಮಕರ್ಣಾನಾಂ ಶುಭ್ರಾಣಾಂ ಶುದ್ಧಜನ್ಮನಾಮ್ ।
ಅಷ್ಟೌ ಶತಾನಿ ಮೇ ದೇಹಿ ಹಯಾನಾಂ ಚಂದ್ರವರ್ಚಸಾಮ್ ॥೧೬॥

ಇವರು ಅನೇಕ ಬಾರಿ ಹಾಗೆ ಕೇಳಿದುದರಿಂದ ಸ್ವಲ್ಪ ಕೋಪವನ್ನು ಹೊಂದಿದ ವಿಶ್ವಾಮಿತ್ರರು ಇವರಿಗಿರುವ ಅಲ್ಪ ಧನವನ್ನು ತಿಳಿದರೂ ಒಂದು ಕಡೆ ಕಪ್ಪು ಕಿವಿಯನ್ನು ಹೊಂದಿದ, ಶುಭ್ರವಾದ ಚಂದ್ರನ ಕಾಂತಿಯನ್ನು ಹೊಂದಿದ, ಶುದ್ಧವಾದ ಜನ್ಮವನ್ನು ಹೊಂದಿದ ಎಂಟುನೂರು ಅಶ್ವಗಳನ್ನು ಕೊಡು ಎಂದು ಹೇಳಿದರು.

ಗುರ್ವರ್ಥೋ ದೀಯತಾಮೇಷ ಯದಿ ಗಾಲವ ಮನ್ಯಸೇ ।
ಇತ್ಯೇವಮಾಹ ಸಕ್ರೋಧೋ ವಿಶ್ವಾಮಿತ್ರಸ್ತಪೋಧನಃ ॥೧೭॥

ಕ್ರೋಧದಿಂದ ಕೂಡಿದ ತಪೋಧನರಾದ ವಿಶ್ವಾಮಿತ್ರರು ಎಲೈ ಗಾಲವನೇ, ನೀನು ಕೊಡುವುದಾದರೆ ಇದನ್ನು ಗುರುದಕ್ಷಿಣೆಯಾಗಿ ಕೊಡು ಎಂದು ಹೇಳಿದರು.

ಸೋಽಯಂ ಶೋಕೇನ ಮಹತಾ ತಪ್ಯಮಾನೋ ದ್ವಿಜರ್ಷಭಃ ।
ಅಶಕ್ತಃ ಪ್ರತಿಕರ್ತುಂ ತದ್ ಭವಂತಂ ಶರಣಂ ಗತಃ ॥೧೮॥

ಅಂತಹ ಈ ಬ್ರಾಹ್ಮಣಶ್ರೇಷ್ಠರು ಬಹಳ ಶೋಕದಿಂದ ಪರಿತಪಿಸುತ್ತಾ ಗುರುದಕ್ಷಿಣೆಯನ್ನು ಕೊಡಲು ಸಾಧ್ಯವಾಗದೆ ನಿನಗೆ ಶರಣಾಗತರಾಗಿದ್ದಾರೆ.

ಪ್ರತಿಗೃಹ್ಯ ನರವ್ಯಾಘ್ರ ತತ್ತೋ ಭಿಕ್ಷಾಂ ಗತವ್ಯಥಃ ।
ಕೃತ್ವಾऽಪವರ್ಗಂ ಗುರವೇ ಚರಿಷ್ಯತಿ ಮಹತ್ ತಪಃ ॥೧೯॥

ಎಲೈ ನರವ್ಯಾಘ್ರನೇ, ನಿನ್ನಿಂದ ಭಿಕ್ಷೆಯನ್ನು ಸ್ವೀಕರಿಸಿ, ತಮ್ಮ ವ್ಯಥೆಯನ್ನು ಕಳೆದುಕೊಂಡು, ಗುರುದಕ್ಷಿಣೆಯನ್ನು ನೀಡಿ ಪುನಃ ದೊಡ್ಡ ತಪಸ್ಸನ್ನು ಮಾಡುವರು.

ತಪಸಃ ಸಂವಿಭಾಗೇನ ಭವಂತಮಪಿ ಯೋಕ್ಷ್ಯತೇ ।
ಸ್ವೇನ ರಾಜರ್ಷಿತಪಸಾ ಪೂರ್ಣಂ ತ್ವಾಂ ಪೂರಯಿಷ್ಯತಿ ॥೨೦॥

ತಮ್ಮ ರಾಜರ್ಷಿ ತಪಸ್ಸಿನಿಂದಲೇ ಪೂರ್ಣವಾಗಿರುವ ಅವರು ನಿನಗೆ ತಮ್ಮ ತಪಸ್ಸಿನ ಒಂದು ಭಾಗವನ್ನೂ ಕೊಡುವರು.

ಯಾವಂತಿ ರೋಮಾಣಿ ಹಯೇ ಭವಂತೀಹ ನರೇಶ್ವರ ।
ತಾವತೋ ವಾಜಿದಾ ಲೋಕಾನ್ ಪ್ರಾಪ್ನುವಂತಿ ಮಹೀಪತೇ ॥೨೧॥

ಎಲೈ ನರೇಶ್ವರನೇ, ಮಹೀಪತಿಯೇ, ಅಶ್ವವನ್ನು ದಾನವಾಗಿ ಕೊಡುವವನು ಅಶ್ವ ಶರೀರದಲ್ಲಿ ಎಷ್ಟು ರೋಮಗಳಿರುತ್ತವೆಯೋ ಅಷ್ಟು ಲೋಕಗಳನ್ನು ಹೊಂದುತ್ತಾನೆ.

ಪಾತ್ರಂ ಪ್ರತಿಗ್ರಹಸ್ಯಾಯಂ ದಾತುಂ ಪಾತ್ರಂ ತಥಾ ಭವಾನ್ ।
ಶಂಖೇ ಕ್ಷೀರಮಿವಾಸಕ್ತಂ ಭವತ್ವೇತತ್ ತಥೋಪಮಮ್ ॥೨೨॥

ದಾನವನ್ನು ಸ್ವೀಕಾರ ಮಾಡಲು ಇವರು ಒಳ್ಳೆಯ ಪಾತ್ರರಾಗಿದ್ದಾರೆ. ದಾನವನ್ನು ಕೊಡಲು ನೀನು ಒಳ್ಳೆಯ ಅಧಿಕಾರಿಯಾಗಿದ್ದೀಯೆ. ಶಂಖದಲ್ಲಿ ಕ್ಷೀರವು ಸೇರಿದಂತೆ ಈ ಸಮಾಗಮವು ಸಾರ್ಥಕವಾಗಲಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ತ್ರಯೋದಶಶತತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಚತುಶ್ಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಹದಿಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನಾಲ್ಕನೆಯ ಅಧ್ಯಾಯ

ನಿರ್ಧನನಾದ ಯಯಾತಿಯಿಂದ ತನ್ನ ಮಗಳಾದ ಮಾಧವಿಯ ಸಮರ್ಪಣೆ. ಗಾಲವರಿಂದ ಅವಳನ್ನು ಕರೆದುಕೊಂಡು ಹರ್ಯಶ್ವನ ಬಳಿಗೆ ಗಮನ.

ನಾರದಃ

ಏವಮುಕ್ತಃ ಸುಪರ್ಣೇನ ತಥ್ಯಂ ವಚನಮುತ್ತಮಮ್ ।
ವಿಮೃಶ್ಯಾವಹಿತೋ ರಾಜಾ ನಿಶ್ಚಿತ್ಯ ಚ ಪುನಃ ಪುನಃ ॥೧॥

ಯಷ್ಟಾ ಕ್ರತುಸಹಸ್ರಾಣಾಂ ದಾತಾ ದಾನಪತಿಃ ಪ್ರಭುಃ ।
ಯಯಾತಿಃ ಸೂರ್ಯಸಂಕಾಶ ಇದಂ ವಚನಮಬ್ರವೀತ್ ॥೨॥

ದೃಷ್ಟ್ವಾ ಪ್ರಿಯಸಖಂ ತಾರ್ಕ್ಷ್ಯಂ ಗಾಲವಂ ಚ ತಪೋನಿಧಿಮ್ ।
ನಿದರ್ಶನಂ ಚ ತಪಸೋ ಭಿಕ್ಷಾಂ ಶ್ಲಾಘ್ಯಾಂ ಚ ಕೀರ್ತಿತಾಮ್ ॥೩॥

ಅತೀತ್ಯ ಚ ನೃಪಾನನ್ಯಾನ್ ಆದಿತ್ಯಕುಲಸಂಭವಾನ್ ।
ಮತ್ಸಕಾಶಮನುಪ್ರಾಪ್ತಾವೇತಾಂ ಬುದ್ಧಿಮವೇಕ್ಷ್ಯ ಚ ॥೪॥

ನಾರದ– ಹೀಗೆ ಗರುಡನು ಹೇಳಿದ ಸತ್ಯವಾದ, ಶ್ರೇಷ್ಠವಾದ ಮಾತನ್ನು ಕೇಳಿ ರಾಜನು ಅವಧಾನದಿಂದ ಪುನಃ ಪುನಃ ವಿಮರ್ಶೆ ಮಾಡಿ, ಪುನಃ ಪುನಃ ಮನಸ್ಸಿನಲ್ಲಿ ನಿಶ್ಚಯಿಸಿ ಪ್ರಿಯ ಸ್ನೇಹಿತನಾದ ಗರುಡನನ್ನು ಮತ್ತು ತಪಸ್ಸಿಗೆ ನಿದರ್ಶನರಾಗಿದ್ದ ತಪೋನಿಧಿಯಾದ ಗಾಲವರನ್ನೂ ಅವರು ಕೇಳಿದ ಶ್ಲಾಘ್ಯವಾದ ಭಿಕ್ಷೆಯನ್ನೂ ಗಮನಿಸಿ ಸೂರ್ಯವಂಶದಲ್ಲಿ ಹುಟ್ಟಿದ ಉಳಿದ ರಾಜರ ಬಳಿಗೆ ಹೋಗದೆ ತನ್ನ ಬಳಿಗೇ ಇವರು ಬಂದಿದ್ದಾರೆಂಬ ಅವರ ಚಿಂತನೆಯನ್ನೂ ಗಮನಿಸಿ, ಸಾವಿರ ಯಾಗಗಳನ್ನು ಮಾಡಿದ ದಾನಪತಿಯೂ, ಪ್ರಭುವೂ ಆದ, ಸೂರ್ಯನಂತೆ ಪ್ರಕಾಶಮಾನನಾದ ಯಯಾತಿಯು ಈ ಮಾತುಗಳನ್ನು ಆಡಿದನು.

ಅದ್ಯ ಮೇ ಸಫಲಂ ಜನ್ಮ ತಾರಿತಂ ಚಾದ್ಯ ಮೇ ಕುಲಮ್ ।
ಅದ್ಯಾಯಂ ಪಾವಿತೋ ದೇಶೋ ಮಮ ತಾರ್ಕ್ಷ್ಯ ತ್ವಯಾऽನಘ ॥೫॥

ಈ ದಿನ ನನ್ನ ಜನ್ಮವು ಸಫಲವಾಗಿದೆ. ಈ ದಿನ ನನ್ನ ಕುಲವು ಉದ್ಧಾರವನ್ನು ಹೊಂದಿದೆ. ಎಲೈ ಅನಘನಾದ ತಾರ್ಕ್ಷ್ಯನೇ, ನಿನ್ನಿಂದ ಈ ದೇಶವು ಈ ದಿನ ಪವಿತ್ರವಾಗಿದೆ.

ವಕ್ತುಮಿಚ್ಛಾಮಿ ತು ಸಖೇ ಯಥಾ ಜಾನಾಸಿ ಮಾಂ ಪುರಾ ।
ನ ತಥಾ ವಿತ್ತವಾನಸ್ಮಿ ಕ್ಷೀಣಂ ವಿತ್ತಂ ಹಿ ಮೇ ಸಖೇ ॥೬॥

ಎಲೈ ಸ್ನೇಹಿತನೇ, ನಿನ್ನ ಜೊತೆಯಲ್ಲಿ ಮಾತನಾಡಲು ಬಯಸುತ್ತೇನೆ. ನೀನು ಹಿಂದೆ ತಿಳಿದಂತೆ ನಾನು ಈಗ ಧನವಂತನಾಗಿಲ್ಲ. ಎಲೈ ಸ್ನೇಹಿತನೇ, ನನ್ನ ಧನವು ಕ್ಷೀಣವಾಗಿದೆ.

ನ ಚ ಶಕ್ತೋಽಸ್ಮಿ ತೇ ಕರ್ತುಂ ಮೋಘಮಾಗಮನಂ ಖಗ ।
ನ ಚಾಶಾಮಸ್ಯ ವಿಪ್ರರ್ಷೇರ್ವಿತಥಾಂ ಕರ್ತುಮುತ್ಸಹೇ ॥೭॥

ಆದರೆ ಇಲ್ಲಿಗೆ ನಿನ್ನ ಆಗಮನವನ್ನು ವ್ಯರ್ಥಗೊಳಿಸಲಾರೆ ಮತ್ತು ಈ ವಿಪ್ರರ್ಷಿಯ ಆಸೆಯನ್ನೂ ಸಹ ವ್ಯರ್ಥವನ್ನಾಗಿ ಮಾಡಲು ಬಯಸುವುದಿಲ್ಲ.

ಪುತ್ರೀಂ ದಾಸ್ಯಾಮಿ ಯತ್ ಕಾರ್ಯಂ ದ್ವಯಂ ಸಂಪಾದಯಿಷ್ಯತಿ ।
ಅಭಿಗಮ್ಯ ಹತಾಶೋ ಹಿ ನಿವೃತ್ತೋ ದಹತೇ ಕುಲಮ್ ॥೮॥

ದಾತೃವಿನ ಬಳಿಗೆ ಬಂದು ಹತಾಶನಾಗಿ ಹಿಂದಿರುಗುವವನು ಅವನ ಕುಲವನ್ನು ದಹಿಸುತ್ತಾನೆ. ಆದ್ದರಿಂದ ನನ್ನ ಪುತ್ರಿಯನ್ನು ಕೊಡುವೆನು. ಅವಳು ಎರಡು ಕಾರ್ಯಗಳನ್ನೂ ಸಾಧಿಸುತ್ತಾಳೆ (ಧನಸಂಪಾದನೆ ಮತ್ತು ಅಶ್ವಪ್ರಾಪ್ತಿ).

ನಾತಃ ಪರಂ ವೈನತೇಯ ಕಿಂಚಿತ್ ಪಾಪಿಷ್ಠಮುಚ್ಯತೇ ।
ಯಥಾऽऽಶಾನಾಶನಂ ಲೋಕೇ ದೇಹಿ ನಾಸ್ತೀತಿ ವಾ ವಚಃ ॥೯॥

ಎಲೈ ವೈನತೇಯನೆ, ದೇಹಿ ಎಂದು ಬೇಡಿ ಬಂದವನಿಗೆ ನಾಸ್ತಿ ಎಂದು ಹೇಳಿ ಅವನ ಆಸೆಯನ್ನು ಕಡಿಯುವುದಕ್ಕಿಂತ ಅಧಿಕವಾದ ಪಾಪಕಾರ್ಯವು ಇನ್ನೊಂದಿಲ್ಲ.

ಹತಾಶೋ ಹ್ಯಕೃತಾರ್ಥಃ ಸನ್ ಹತಸಂಭಾವನೋ ನರಃ ।
ಹಿನಸ್ತಿ ತಸ್ಯ ಪುತ್ರಾಂಶ್ಚ ಪೌತ್ರಾಂಶ್ಚಾಕುರ್ವತೋऽರ್ಥಿತಾಮ್ ॥೧೦॥

ಯಾವ ಮನುಷ್ಯನ ಆಸೆಯು ಭಗ್ನವಾಗುತ್ತದೆಯೋ ಅವನು ಪೂಜೆಯನ್ನು ಸ್ವೀಕರಿಸದೆ ಅಕೃತಾರ್ಥನಾಗಿ ತನ್ನ ಆಸೆಯನ್ನು ನೆರವೇರಿಸದವನ ಪುತ್ರ-ಪೌತ್ರರನ್ನು ನಾಶಗೊಳಿಸುತ್ತಾನೆ.

ತಸ್ಮಾಚ್ಚತುರ್ಣಾಂ ವರ್ಣಾನಾಂ ಸ್ಥಾಪಯಿತ್ರೀ ಸುತಾ ಮಮ ।
ಮಾಧವೀ ನಾಮ ತಾಕ್ಷ್ಯೇಯಂ ಸರ್ವಧರ್ಮಪ್ರದಾಯಿನೀ ॥೧೧॥

ಆದ್ದರಿಂದ ಎಲೈ ಗರುಡನೇ, ಈ ನನ್ನ ಮಗಳು ನಾಲ್ಕುವರ್ಣದವರನ್ನೂ ಅವರ ಧರ್ಮದಲ್ಲಿ ಸ್ಥಾಪಿಸುವವಳು. ಸರ್ವಧರ್ಮಗಳನ್ನೂ ಉಂಟುಮಾಡುವವಳು. ಮಾಧವೀ ಎಂದು ಅವಳ ಹೆಸರು.

ಇಯಂ ಸುರಸುತಪ್ರಖ್ಯಾ ಸರ್ವಧರ್ಮೋಪಚಾಯಿನೀ ।
ಸದಾ ದೇವಮನುಷ್ಯಾಣಾಮಸುರಾಣಾಂ ಚ ಗಾಲವ ।
ಕಾಂಕ್ಷಿತಾ ರೂಪತೋ ಬಾಲಾ ಸುತಾ ಮೇ ಪ್ರತಿಗೃಹ್ಯತಾಮ್ ॥೧೩॥

ದೇವಕುಮಾರಿಯಂತಿರುವ ಇವಳು ಎಲ್ಲ ಧರ್ಮಗಳನ್ನೂ ಅಭಿವೃದ್ಧಿಪಡಿಸುವವಳು. ಎಲೈ ಗಾಲವರೇ, ಇವಳು ದೇವತೆಗಳಿಗೂ, ಮನುಷ್ಯರಿಗೂ ಮತ್ತು ಅಸುರರಿಗೂ ತನ್ನ ರೂಪದಿಂದ ಕಾಂಕ್ಷಿತಳಾದ ಬಾಲೆ. ಈ ನನ್ನ ಮಗಳನ್ನು ಸ್ವೀಕರಿಸಿ.

ಅಸ್ಯಾಃ ಶುಲ್ಕಂ ಪ್ರದಾಸ್ಯಂತಿ ನೃಪಾ ರಾಜ್ಯಮಪಿ ಧ್ರುವಮ್ ।
ಕಿಂ ಪುನಃ ಶ್ಯಾಮಕರ್ಣಾನಾಂ ಹಯಾನಾಂ ದ್ವೇ ಚತುಃಶತೇ ॥೧೪॥

ಇವಳ ಸಲುವಾಗಿ ರಾಜರು ಶುಲ್ಕವನ್ನು ಕೊಡುವರು. ಬೇಕಾದರೆ ರಾಜ್ಯವನ್ನೂ ಕೊಡುತ್ತಾರೆ. ಹೀಗಿರುವಾಗ ಶ್ಯಾಮಕರ್ಣವುಳ್ಳ ಎಂಟುನೂರು ಕುದುರೆಗಳು ಯಾವ ದೊಡ್ಡ ವಿಷಯ?

ಸ ಭವಾನ್ ಪ್ರತಿಗೃಹ್ಣಾತು ಮಮೈತಾಂ ಮಾಧವೀಂ ಸುತಾಮ್ ।
ದೌಹಿತ್ರಪೂತಃ ಸ್ಯಾಮೇಷ ಏಷ ಮೇ ಸ್ಯಾದ್ ವರಃ ಪ್ರಭೋ ॥೧೫॥

ಆದ್ದರಿಂದ ನೀವು ನನ್ನ ಮಗಳಾದ ಈ ಮಾಧವಿಯನ್ನು ಸ್ವೀಕರಿಸಿ. ನಾನು ದೌಹಿತ್ರರಿಂದ ಪವಿತ್ರನಾಗುವೆನು. ಪ್ರಭುಗಳೇ, ಇದೇ ನಾನು ನೀಡುವ ವರ.

ನಾರದಃ

ಸ ತಸ್ಯ ವಚನಂ ಶ್ರುತ್ವಾ ಬ್ರಾಹ್ಮಣಃ ಶಂಸಿತವ್ರತಃ ।
ಪ್ರತಿಗೃಹ್ಯ ಚ ತಾಂ ಕನ್ಯಾಂ ಗಾಲವಃ ಸಹ ಪಕ್ಷಿಣಾ ॥೧೬॥

ಪುನರ್ದರ್ಕ್ಷ್ಯವ ಇತ್ಯುಕ್ತ್ವಾ ಪ್ರತಸ್ಥೇ ಸಹ ಕನ್ಯಯಾ ॥೧೭॥

ನಾರದ– ಯಯಾತಿಯ ಆ ಮಾತುಗಳನ್ನು ಕೇಳಿದ ಶಂಸಿತವ್ರತವುಳ್ಳ ಬ್ರಾಹ್ಮಣರಾದ ಗಾಲವರು ಗರುಡನ ಜೊತೆಯಲ್ಲಿ ಆ ಕನ್ಯೆಯನ್ನು ಸ್ವೀಕರಿಸಿ ಪುನಃ ನಿನ್ನನ್ನು ನೋಡುವೆವು ಎಂದು ಹೇಳಿ ಕನ್ಯೆಯ ಜೊತೆಯಲ್ಲಿ ಹೊರಟರು.

ಉಪಲಬ್ಧಮಿದಂ ದ್ವಾರಮಶ್ವಾನಾಮಿತಿ ಚಾಂಡಜಃ ।
ಉಕ್ತ್ವಾ ಗಾಲವಮಾಪೃಚ್ಛ್ಯ ಜಗಾಮ ಭವನಂ ಪ್ರತಿ ॥೧೮॥

ಅಶ್ವಗಳನ್ನು ಪಡೆಯಲು ನಿನಗೆ ಇದೊಂದು ದ್ವಾರವು ಲಭಿಸಿತು ಎಂದು ಹೇಳಿ ಗರುಡನು ಗಾಲವರ ಅನುಮತಿಯನ್ನು ಪಡೆದು ತನ್ನ ಮನೆಗೆ ಹೋದನು.

ಗತೇ ಪತಗರಾಜೇ ತು ಗಾಲವಃ ಸಹ ಕನ್ಯಯಾ ।
ಚಿಂತಯಾನಃ ಕ್ಷಮಂ ದಾನೇ ರಾಜಾನಂ ಶುಲ್ಕತೋಽಗಮತ್ ॥೧೯॥

ಗರುಡನು ಹೊರಟು ಹೋದ ಮೇಲೆ ಕನ್ಯೆಯಿಂದ ಸಹಿತರಾದ ಗಾಲವರು ದಾನವನ್ನು ಕೊಡಲು ಸಮರ್ಥನಾದ ರಾಜನನ್ನು ಚಿಂತಿಸುತ್ತಾ ಒಬ್ಬ ರಾಜನ ಬಳಿಗೆ ಹೋದರು.

ಸೋಽಗಚ್ಛನ್ಮನಸೈಕ್ಷ್ವಾಕುಂ ಹರ್ಯಶ್ವಂ ರಾಜಸತ್ತಮಮ್ ।
ಅಯೋಧ್ಯಾಯಾಂ ಮಹಾವೀರ್ಯಂ ಚತುರಂಗಬಲಾನ್ವಿತಮ್ ॥೨೦॥

ಅವರು ಮನಸ್ಸಿನಲ್ಲಿಯೇ ಇಕ್ಷ್ವಾಕುವಂಶದ ಚತುರಂಗಬಲಾನ್ವಿತನಾದ ಮಹಾಪರಾಕ್ರಮಿಯಾದ ಅಯೋಧ್ಯೆಯ ರಾಜನಾದ ರಾಜಶ್ರೇಷ್ಠನಾದ ಹರ್ಯಶ್ವನನ್ನು ಚಿಂತಿಸಿದರು.

ಕೋಶಧಾನ್ಯಬಲೋಪೇತಂ ಪ್ರಿಯಪೌರಂ ಪ್ರಿಯದ್ವಿಜಮ್ ।
ಪ್ರಜಾಭಿಕಾಮಂ ಶಾಮ್ಯಂತಂ ಕುರ್ವಾಣಂ ತಪ ಉತ್ತಮಮ್ ॥೨೧॥

ತಮುಪಾಗಮ್ಯ ವಿಪ್ರಃ ಸ ಹರ್ಯಶ್ವಂ ಗಾಲವೋಽಬ್ರವೀತ್ ॥೨೨॥

ಕೋಶ, ಧಾನ್ಯ ಮತ್ತು ಸೈನ್ಯಗಳಿಂದ ಕೂಡಿದ, ಪೌರರಿಗೂ ಮತ್ತು ಬ್ರಾಹ್ಮಣರಿಗೂ ಪ್ರಿಯನಾದ, ಪ್ರಜೆಗಳ ಕ್ಷೇಮವನ್ನು ಬಯಸುವ, ಶಾಂತನಾಗಿ ಶ್ರೇಷ್ಠವಾದ ತಪಸ್ಸನ್ನು

ಮಾಡುವ ಆ ಹರ್ಯಶ್ವನ ಬಳಿಗೆ ಹೋಗಿ ಬ್ರಾಹ್ಮಣರಾದ ಗಾಲವರು ಹೀಗೆ ಮಾತನಾಡಿದರು.

ಕನ್ಯೇಯಂ ಮಮ ರಾಜೇಂದ್ರ ಪ್ರಸವೈಃ ಕುಲವರ್ಧಿನೀ ।
ಇಯಂ ಶುಲ್ಕೇನ ಭಾರ್ಯಾರ್ಥೇ ಹರ್ಯಶ್ವ ಪ್ರತಿಗೃಹ್ಯತಾಮ್ ॥೨೩॥

ಶುಲ್ಕಂ ತೇ ಕೀರ್ತಯಿಷ್ಯಾಮಿ ತಚ್ಛ್ರುತ್ವಾ ಸಂಪ್ರಧಾರ್ಯತಾಮ್ ॥೨೪॥

ಎಲೈ ರಾಜೇಂದ್ರನೇ, ಈ ಕನ್ಯೆಯು ತನ್ನ ಸಂತತಿಯಿಂದ ನಿನ್ನ ಕುಲವನ್ನು ಅಭಿವೃದ್ಧಿಪಡಿಸುತ್ತಾಳೆ. ಎಲೈ ಹರ್ಯಶ್ವನೇ, ಇವಳನ್ನು ಬಾಡಿಗೆಗಾಗಿ ಪತ್ನಿಯಾಗಿ ಸ್ವೀಕರಿಸು. ನಾನು ಶುಲ್ಕಧನವನ್ನು ಹೇಳುವೆನು. ಅದನ್ನು ಕೇಳಿ ನಿಶ್ಚಯವನ್ನು ಮಾಡು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಚತುರ್ದಶೋತ್ತರಶತತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಪಂಚಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಹದಿನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನೈದನೆಯ ಅಧ್ಯಾಯ

ಹರ್ಯಶ್ವನಿಂದ ಮಾಧವಿಯಲ್ಲಿ ವಸುಮನನ ಉತ್ಪತ್ತಿ.
ಮಾಧವಿಯನ್ನು ಕರೆದುಕೊಂಡು ಗಾಲವರಿಂದ ದಿವೋದಾಸನ ಬಳಿಗೆ ಗಮನ.

ನಾರದಃ

ಹರ್ಯಶ್ವಸ್ತ ಬ್ರುವೀದ್ ವಾಕ್ಯಂ ವಿಚಿಂತ್ಯ ಬಹುಧಾ ತತಃ ।
ದೀರ್ಘಕಾಲಂ ವಿನಿಃಶ್ವಸ್ಯ ಪ್ರಜಾಹೇತೋರ್ನರಪೋತ್ತಮಃ ॥೧॥

ನಾರದ– ನೃಪಶ್ರೇಷ್ಠನಾದ ಹರ್ಯಶ್ವನು ಗಾಲವರ ಮಾತುಗಳನ್ನು ಕುರಿತು ಬಹಳವಾಗಿ ಯೋಚನೆಯನ್ನು ಮಾಡಿ ಪುತ್ರನ ಸಲುವಾಗಿ ದೀರ್ಘವಾಗಿ ನಿಟ್ಟುಸಿರನ್ನು ಬಿಟ್ಟು ಮಾತನಾಡಿದನು.

ಉನ್ನತೇಷೂನ್ನತಾ ಷಟ್ಸು ಸೂಕ್ಷ್ಮಾ ಸೂಕ್ಷ್ಮೇಷು ಸಪ್ತಸು ।
ಗಂಭೀರಾ ತ್ರಿಷು ಗಂಭೀರೇಷ್ವಿಯಂ ರಕ್ತಾ ಹಿ ಪಂಚಸು ॥೨॥

ಇವಳು ಉನ್ನತಳಾಗಿರಬೇಕಾದ ಆರು ಸ್ಥಾನಗಳಲ್ಲಿ ಉನ್ನತಳೂ, ಏಳು ಸೂಕ್ಷ್ಮ ಸ್ಥಾನಗಳಲ್ಲಿ ಸೂಕ್ಷ್ಮಳೂ, ಗಂಭೀರವಾಗಿರಬೇಕಾದ ಮೂರು ಸ್ಥಾನಗಳಲ್ಲಿ ಗಂಭೀರಳೂ ಮತ್ತು ಐದು ಸ್ಥಾನಗಳಲ್ಲಿ ಕೆಂಪು ಬಣ್ಣದಿಂದ ಕೂಡಿದವಳೂ ಆಗಿದ್ದಾಳೆ.

ಶ್ರೋಣ್ಯೌ ಲಲಾಟಕಕ್ಷೌ ಚ ಘ್ರಾಣಂ ಚೇತಿ ಷಡುನ್ನತಮ್ ।
ಸೂಕ್ಷ್ಮಾಣ್ಯಂಗುಲಿಪರ್ವಾಣಿ ಕೇಶರೋಮನಖತ್ವಚಃ ॥೩॥

ಎರಡು ಕಟಿಗಳು, ಎರಡು ಪಕ್ಕಗಳು, ಹಣೆ ಮತ್ತು ನಾಸಿಕ ಈ ಸ್ಥಾನಗಳಲ್ಲಿ ಎತ್ತರವನ್ನು ಹೊಂದಿದ್ದಾಳೆ. ಅಂಗುಲಿಗಳ ಪರ್ವಗಳು, ಕೇಶ, ರೋಮ, ನಖ ಮತ್ತು ಚರ್ಮಗಳು ಮೃದುವಾಗಿವೆ.

ಸ್ವರಃ ಸತ್ವಂ ಚ ನಾಭಿಶ್ಚ ತ್ರಿಗಂಭೀರಂ ಪ್ರಚಕ್ಷತೇ ।
ಪಾಣಿಪಾದತಳೇ ರಕ್ತೇ ನೇತ್ರಾಂತಾಸ್ಯನಖಾನಿ ಚ ॥೪॥

ಸ್ವರ, ಸತ್ವ ಮತ್ತು ನಾಭಿಗಳು ಮೂರೂ ಗಂಭೀರವಾಗಿವೆ ಎಂದು ಹೇಳುತ್ತಾರೆ. ಹಸ್ತ-ಪಾದತಳಗಳು, ಕಣ್ಣಿನ ಅಂಚು, ಮುಖ ಮತ್ತು ನಖಗಳು ಕೆಂಪಾಗಿವೆ.

ಬಹುದೇವಾಸುರಾಲೋಕಾ ಬಹುಗಂಧರ್ವದರ್ಶನಾ ।
ಬಹುಲಕ್ಷಣಸಂಪನ್ನಾ ಬಹುಕಲ್ಯಾಣಚಾರಿಣೀ ॥೫॥

ದೇವತೆಗಳು ಮತ್ತು ಅಸುರರು ಹಾಗೆಯೇ ಗಂಧರ್ವರು ಬಹಳವಾಗಿ ನೋಡಲು ಇವಳು ಬಯಸಲ್ಪಡುವವಳು. ಬಹಳ ಸಲ್ಲಕ್ಷಣಗಳಿಂದ ಕೂಡಿದ್ದಾಳೆ ಮತ್ತು ಬಹಳ ಶುಭಕಾರ್ಯಗಳನ್ನು ಆಚರಿಸುವವಳು.

ಸಮರ್ಥೇಯಂ ಜನಯಿತುಂ ಚಕ್ರವರ್ತಿನಮಾತ್ಮಜಮ್ ।
ಬ್ರೂಹಿ ಶುಲ್ಕಂ ದ್ವಿಜಶ್ರೇಷ್ಠ ಸಮೀಕ್ಷ್ಯ ವಿಭವಂ ಮಮ ॥೬॥

ಇವಳು ಚಕ್ರವರ್ತಿಯಾದ ಮಗನನ್ನು ಪಡೆಯಲು ಸಮರ್ಥಳಾಗಿದ್ದಾಳೆ. ಎಲೈ ಬ್ರಾಹ್ಮಣಶ್ರೇಷ್ಠರೇ, ನನ್ನ ಸಂಪತ್ತನ್ನು ನೋಡಿ ಅದಕ್ಕೆ ಅನುಗುಣವಾಗಿ ಶುಲ್ಕವನ್ನು ಹೇಳಿ.

ಗಾಲವಃ

ಏಕತಃ ಶ್ಯಾಮಕರ್ಣಾನಾಂ ಶತಾನ್ಯಷ್ಟೌ ಚ ದೇಹಿ ಮೇ ।
ಹಯಾನಾಂ ಚಂದ್ರಶುಭ್ರಾಣಾಂ ದೇಶಜಾನಾಂ ವಪುಷ್ಮತಾಮ್ ॥೭॥

ಗಾಲವ– ಒಂದು ಕಿವಿ ಕಪ್ಪಾಗಿರುವ ಒಳ್ಳೆಯ ಶರೀರವನ್ನು ಹೊಂದಿರುವ, ಚಂದ್ರನಂತೆ ಶುಭ್ರವಾದ, ಒಳ್ಳೆಯ ದೇಶದಲ್ಲಿ ಉತ್ಪನ್ನವಾದ ಎಂಟುನೂರು ಅಶ್ವಗಳನ್ನು ನನಗೆ ಕೊಡು.

ತತಸ್ತವ ಭವಿತ್ರೀಯಂ ಪುತ್ರಾಣಾಂ ಜನನೀ ಶುಭಾ ।
ಅರಣೇವ ಹುತಾಶಾನಾಂ ಯೋನಿರಾಯತಲೋಚನಾ ॥೮॥

ಅನಂತರ ಈ ಶುಭಳಾದ ವಿಶಾಲನೇತ್ರೆಯು ಅರಣಿಯು ಅಗ್ನಿಯ ಉತ್ಪತ್ತಿಗೆ ಕಾರಣವಾದಂತೆ ನಿನ್ನ ಮಕ್ಕಳಿಗೆ ತಾಯಿಯಾಗುತ್ತಾಳೆ.

ನಾರದಃ

ಸ ತಚ್ಛ್ರುತ್ವಾ ವಚೋ ರಾಜಾ ಹರ್ಯಶ್ವಃ ಕಾಮಮೋಹಿತಃ ।
ಉವಾಚ ಗಾಲವಂ ದೀನೋ ರಾಜರ್ಷಿರ್ಋಷಿಸತ್ತಮಮ್ ॥೯॥

ಗಾಲವರ ಆ ಮಾತುಗಳನ್ನು ಕೇಳಿ ರಾಜರ್ಷಿಯಾದ ಹರ್ಯಶ್ವರಾಜನು ಕಾಮಮೋಹಿತನಾಗಿ ದೀನನಾಗಿ ಋಷಿಶ್ರೇಷ್ಠರಾದ ಗಾಲವರನ್ನು ಕುರಿತು ಮಾತನಾಡಿದನು.

ದ್ವೇ ಮೇ ಶತೇ ಸನ್ನಿಹಿತೇ ಹಯಾನಾಂ ಯದ್ವಿಧಾಸ್ತವ ।
ಏಷ್ಟವ್ಯಾಃ ಶತಶಸ್ತ್ವನ್ಯೇ ಚರಂತಿ ಮಮ ವಾಜಿನಃ ॥೧೦॥

ನಿಮಗೆ ಬೇಕಾದಂತಹ ಅಶ್ವಗಳು ನನ್ನಲ್ಲಿ ಎರಡುನೂರು ಮಾತ್ರ ಇವೆ. ನನ್ನ ಬಳಿ ಬೇರೆ ಕುದುರೆಗಳಿವೆ. ಅವುಗಳನ್ನು ಬೇಕಾದರೆ ನೀವು ಪಡೆಯಬಹುದು (ಅಥವಾ ಬೇರೆ ಆರುನೂರು ಕುದುರೆಗಳನ್ನು ನೀವು ಬೇರೆ ಕಡೆಯಿಂದ ಸಂಪಾದಿಸಬೇಕು)

ಸೋಽಹಮೇಕಮಪತ್ಯಂ ವೈ ಜನಯಿಷ್ಯಾಮಿ ಗಾಲವ ।
ಅಸ್ಯಾಮೇತಂ ಭವಾನ್ ಕಾಮಂ ಸಂಪಾದಯತು ಮೇ ವರಮ್ ॥೧೧॥

ಎಲೈ ಗಾಲವರೇ, ನಾನು ಇವಳಲ್ಲಿ ಒಬ್ಬ ಮಗನನ್ನು ಪಡೆಯುವೆನು. ನೀವು ನನ್ನ ಆಸೆಯನ್ನು ಪೂರ್ಣ ಮಾಡಿ ವರವನ್ನು ಕೊಡಬೇಕು.

ನಾರದಃ

ಏತಚ್ಛ್ರುತ್ವಾ ತು ಸಾ ಕನ್ಯಾ ಗಾಲವಂ ವಾಕ್ಯಮಬ್ರವೀತ್ ॥೧೨॥

ಮಮ ದತ್ತೋ ವರಃ ಕಶ್ಚಿತ್ ಕೇನಚಿದ್ ಬ್ರಹ್ಮವಾದಿನಾ ।
ಪ್ರಸೂತ್ಯಂತೇ ಪ್ರಸೂತ್ಯಂತೇ ಕನ್ಯೈವ ತ್ವಮಿತಿ ಪ್ರಭೋ ॥೧೩॥

ಸ ತ್ವಂ ದದಸ್ವ ಮಾಂ ರಾಜ್ಞೇ ಪರಿಗೃಹ್ಯ ಹಯೋತ್ತಮಾನ್ ॥೧೪॥

ನಾರದ– ಈ ಮಾತನ್ನು ಕೇಳಿ ಆ ಕನ್ಯೆಯು ಗಾಲವರನ್ನು ಕುರಿತು ಒಬ್ಬ ಬ್ರಹ್ಮವಾದಿಯಾದ ಬ್ರಾಹ್ಮಣನು ನನಗೆ ವರವನ್ನು ಕೊಟ್ಟಿದ್ದಾನೆ. ನಾನು ಪ್ರತಿಯೊಂದು ಪ್ರಸವವಾದ ಮೇಲೆ ಕನ್ಯೆಯೇ ಆಗುತ್ತೇನೆ. ಎಲೈ ಪ್ರಭುವೇ, ಶ್ರೇಷ್ಠವಾದ ಕುದುರೆಗಳನ್ನು ತೆಗೆದುಕೊಂಡು ನನ್ನನ್ನು ರಾಜನಿಗೆ ಕೊಡು ಎಂದು ಹೇಳಿದಳು.

ನೃಪೇಭ್ಯೋ ಹಿ ಚತುರ್ಭ್ಯಸ್ತೇ ಪೂರ್ಣಾನ್ಯಷ್ಟೌ ಶತಾನಿ ವೈ ।
ಭವಿಷ್ಯಂತಿ ತಥಾ ಪುತ್ರಾ ಮಮ ಚತ್ವಾರ ಏವ ಚ ॥೧೫॥

ಕ್ರಿಯತಾಮುಪಸಂಹಾರೋ ಗುರ್ವರ್ಥಂ ದ್ವಿಜಸತ್ತಮ ।
ಏಷಾ ತಾವನ್ಮಮ ಪ್ರಜ್ಞಾ ಯಥಾ ವಾ ಮನ್ಯಸೇ ದ್ವಿಜ ॥೧೬॥

ನಾಲ್ಕು ಜನ ರಾಜರಿಂದ ನಿನ್ನ ಎಂಟುನೂರು ಸಂಖ್ಯೆಯು ಪೂರ್ಣವಾಗುತ್ತದೆ. ಹಾಗೆಯೇ ನನಗೆ ನಾಲ್ವರು ಪುತ್ರರು ಜನಿಸುವರು. ಎಲೈ ಬ್ರಾಹ್ಮಣಶ್ರೇಷ್ಠರೇ, ಗುರುದಕ್ಷಿಣೆಯನ್ನು ಕೊಟ್ಟು ಮುಗಿಸುವವರಾಗಿ. ಇದು ನನಗೆ ತೋರುವ ಬುದ್ಧಿ. ಬ್ರಾಹ್ಮಣರೇ, ನಿಮ್ಮ ಅಭಿಪ್ರಾಯವೇನು? (ಎಂದು ಕೇಳಿದಳು)

ನಾರದಃ

ಏವಮುಕ್ತಸ್ತು ಸ ಮುನಿಃ ಕನ್ಯಯಾ ಗಾಲವಸ್ತದಾ ।
ಹರ್ಯಶ್ವಂ ಪೃಥಿವೀಪಾಲಮಿದಂ ವಚನಮಬ್ರವೀತ್ ॥೧೭॥

ಇಯಂ ಕನ್ಯಾ ನರಶ್ರೇಷ್ಠ ಹರ್ಯಶ್ವ ಪ್ರತಿಗೃಹ್ಯತಾಮ್ ।
ಚತುರ್ಭಾಗೇನ ಶುಲ್ಕಸ್ಯ ಜನಯಸ್ವೈಕಮಾತ್ಮಜಮ್ ॥೧೮॥

ನಾರದ– ಹೀಗೆ ಕನ್ಯೆಯಿಂದ ಹೇಳಲ್ಪಟ್ಟ ಆ ಗಾಲವರು ರಾಜನಾದ ಹರ್ಯಶ್ವನನ್ನು ಕುರಿತು ಹರ್ಯಶ್ವನೇ, ಶುಲ್ಕದ ನಾಲ್ಕನೆಯ ಒಂದುಭಾಗದಿಂದ ಈ ಕನ್ಯೆಯನ್ನು ಸ್ವೀಕರಿಸಿ, ಇವಳಲ್ಲಿ ಒಬ್ಬ ಪುತ್ರನನ್ನು ಪಡೆಯುವವನಾಗು ಎಂದು ಹೇಳಿದರು.

ಪರಿಗೃಹ್ಯ ಸ ತಾಂ ಕನ್ಯಾಂ ಗಾಲವಂ ಪ್ರತಿನಂದ್ಯ ಚ ।
ಸಮಯೇ ದೇಶಕಾಲೇ ಚ ಲಬ್ಧವಾನ್ ಪುತ್ರಮೀಪ್ಸಿತಮ್ ॥೧೯॥

ಹರ್ಯಶ್ವನು ಗಾಲವರನ್ನು ಅಭಿನಂದಿಸಿ ಆ ಕನ್ಯೆಯನ್ನು ಸ್ವೀಕರಿಸಿ ಯೋಗ್ಯವಾದ ದೇಶ, ಕಾಲಗಳಲ್ಲಿ ಅವಳಲ್ಲಿ ಅಭಿಪ್ರೇತನಾದ ಒಬ್ಬ ಪುತ್ರನನ್ನು ಪಡೆದನು.

ಜಾತೋ ವಸುಮನಾ ನಾಮ ವಸುಭ್ಯೋ ವಸುಸತ್ತಮಃ ।
ವಸುಪ್ರಖ್ಯೋ ನರಪತಿಃ ಸ ಬಭೂವ ವಸುಪ್ರದಃ ॥೨೦॥

ವಸುಮನಸ್ ಎಂಬ ಹೆಸರಿನ ವಸುಗಳಿಗಿಂತಲೂ ಶ್ರೀಮಂತನಾದ, ವಸುಗಳಿಗೆ ಸಮಾನನಾದ ರಾಜನು ಜನಿಸಿದನು. ಅವನು ವಸುಪ್ರದನಾದನು.

ಅಥ ಕಾಲೇ ಪುನರ್ಧೀಮಾನ್ ಗಾಲವಃ ಪ್ರತ್ಯುಪಸ್ಥಿತಃ ।
ಉಪಸಂಗಮ್ಯ ಹೋವಾಚ ಹರ್ಯಶ್ವಂ ಪ್ರೀತಮಾನಸಮ್ ॥೨೧॥

ಜಾತೋ ನೃಪ ಸುತಸ್ತೇಽಯಂ ಬಾಲೋ ಭಾಸ್ಕರಸನ್ನಿಭಃ ।
ಕಾಲೋ ಗಂತುಂ ನರಶ್ರೇಷ್ಠ ಶುಲ್ಕಾರ್ಥಮಪರಂ ನೃಪಮ್ ॥೨೨॥

ಅನಂತರ ಸ್ವಲ್ಪಕಾಲದ ಮೇಲೆ ಮೇಧಾವಿಗಳಾದ ಗಾಲವರು ಪುನಃ ರಾಜನ ಬಳಿಗೆ ಬಂದು ಸಂತೋಷದಲ್ಲಿದ್ದ ಹರ್ಯಶ್ವನನ್ನು ಕುರಿತು ಎಲೈ ರಾಜನೇ, ನಿನಗೆ ಸೂರ್ಯನಂತಿರುವ ಈ ಪುತ್ರನು ಜನಿಸಿದ್ದಾನೆ. ಎಲೈ ನರಶ್ರೇಷ್ಠನೇ, ನನ್ನ ಶುಲ್ಕದ ಸಲುವಾಗಿ ಬೇರೆ ರಾಜರ ಬಳಿಗೆ ಹೋಗುವ ಕಾಲವು ಒದಗಿದೆ ಎಂದು ಹೇಳಿದರು.

ಹರ್ಯಶ್ವಃ ಸತ್ಯವಚನೇ ತತಃ ಸ್ಥಿತ್ವಾ ಚ ಪೌರುಷೇ ।
ದುರ್ಲಭತ್ವಾದ್ಧಯಾನಾಂ ಚ ಪ್ರದದೌ ಮಾಧವೀಂ ಪುನಃ ॥೨೩॥

ಹರ್ಯಶ್ವನು ಸತ್ಯವಚನದಲ್ಲಿ ರತನಾಗಿ, ನಾರಾಯಣನ ಪ್ರೇರಣೆಯಂತೆ, ತನ್ನ ಬಳಿ ಇನ್ನೂ ಹೆಚ್ಚಿನ ಅಂತಹ ಅಶ್ವಗಳು ಇಲ್ಲದ ಕಾರಣದಿಂದ ಮಾಧವಿಯನ್ನು ಪುನಃ ಗಾಲವರಿಗೆ ಕೊಟ್ಟನು.

ಮಾಧವೀ ಚ ಪುನರ್ದೀಪ್ತಾಂ ಪರಿತ್ಯಜ್ಯ ನೃಪಶ್ರಿಯಮ್ ।
ಕುಮಾರೀ ಕಾಮತೋ ಭೂತ್ವಾ ಗಾಲವಂ ಪೃಷ್ಠತೋಽನ್ವಗಾತ್ ॥೨೪॥

ಮಾಧವಿಯು ಶೋಭಿಸುತ್ತಿದ್ದ ರಾಜನ ಸಂಪತ್ತನ್ನು ಬಿಟ್ಟು ತನ್ನ ಇಚ್ಛೆಯಿಂದಲೇ ಕುಮಾರಿಯಾಗಿ ಗಾಲವರ ಹಿಂದೆ ನಡೆದಳು.

ತ್ವಯ್ಯೇವ ತಾವತ್ ತಿಷ್ಠಂತು ಹಯಾ ಇತ್ಯುಕ್ತವಾನ್ ದ್ವಿಜಃ ।
ಪ್ರಯಯೌ ಕನ್ಯಯಾ ಸಾರ್ಧಂ ದಿವೋದಾಸಂ ಪ್ರಜೇಶ್ವರಮ್ ॥೨೫॥

ಗಾಲವ ಬ್ರಾಹ್ಮಣರು ಸದ್ಯಕ್ಕೆ ಅಶ್ವಗಳು ನಿನ್ನ ಬಳಿಯಲ್ಲಿಯೇ ಇರಲಿ ಎಂದು ಹೇಳಿ ಕನ್ಯೆಯ ಜೊತೆಯಲ್ಲಿ ದಿವೋದಾಸರಾಜನ ಬಳಿಗೆ ಹೋದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪಂಚದಶೋತ್ತರಶತತಮೋಽಧ್ಯಾಯಃ ॥

॥ ಭಗವದ್ಧ್ಯಾನಪರ್ವಣಿ ಷಟ್‌ಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಹದಿನೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನಾರನೆಯ ಅಧ್ಯಾಯ

ಹಾಗೆಯೇ ದಿವೋದಾಸನು ಮಾಧವಿಯಲ್ಲಿ ಒಬ್ಬ ಪುತ್ರನನ್ನು ಪಡೆದು ಗಾಲವರಿಗೆ ಕನ್ಯೆಯ ಅರ್ಪಣೆ.

ಗಾಲವಃ

ಮಹಾವೀರ್ಯೋ ಮಹೀಪಾಲಃ ಕಾಶೀನಾಮೀಶ್ವರಃ ಪ್ರಭುಃ ।
ದಿವೋದಾಸ ಇತಿ ಖ್ಯಾತೋ ಭೈಮಸೇನಿರ್ನರಾಧಿಪಃ ॥೧॥

ತತ್ರ ಗಚ್ಛಾವಹೇ ಭದ್ರೇ ಶನೈರಾಗಚ್ಛ ಮಾ ಶುಚಃ ।
ಧಾರ್ಮಿಕಃ ಸಂಯಮೇ ಯುಕ್ತಃ ಸತ್ಯಶ್ಚೈವ ಜನೇಶ್ವರಃ ॥೨॥

ಗಾಲವ– ಮಹಾಪರಾಕ್ರಮಿಯೂ, ಭೂಪತಿಯೂ, ಕಾಶೀದೇಶಕ್ಕೆ ಒಡೆಯನೂ, ಭೀಮಸೇನನ ಪುತ್ರನೂ ಆದ ದಿವೋದಾಸನೆಂಬ ರಾಜನಿದ್ದಾನೆ. ಎಲೈ

ಮಂಗಳಸ್ವರೂಪಳೇ, ಅಲ್ಲಿಗೆ ಹೋಗೋಣ. ನಿಧಾನವಾಗಿ ಬಾ. ಶೋಕಪಡಬೇಡ. ಆ ರಾಜನು ಧಾರ್ಮಿಕನಾದವನು, ಸಂಯಮವುಳ್ಳವನು ಮತ್ತು ಸತ್ಯವಚನನಾದವನು.

ನಾರದಃ

ತಮುಪಾಗಮ್ಯ ಸ ಮುನಿಃ ನ್ಯಾಯತಸ್ತೇನ ಸತ್ಕೃತಃ ।
ಗಾಲವಃ ಪ್ರಸವಸ್ಯಾರ್ಥೇ ತಂ ನೃಪಂ ಪ್ರತ್ಯಚೋದಯತ್ ॥೩॥

ನಾರದ– ಆ ಗಾಲವಋಷಿಗಳು ಆ ದಿವೋದಾಸನ ಬಳಿಗೆ ಹೋಗಿ, ಧಾರ್ಮಿಕವಾಗಿ ಅವನಿಂದ ಪೂಜಿಸಲ್ಪಟ್ಟು ಒಬ್ಬ ಪುತ್ರನನ್ನು ಪಡೆಯುವ ವಿಷಯದಲ್ಲಿ ರಾಜನಿಗೆ ಒತ್ತಾಯ ಪಡಿಸಿದರು.

ದಿವೋದಾಸಃ

ಶ್ರುತಮೇತನ್ಮಯಾ ಪೂರ್ವಂ ಕಿಮುಕ್ತ್ವಾ ವಿಸ್ತರಂ ದ್ವಿಜ ।
ಕಾಂಕ್ಷಿತೋ ಹಿ ಮಯೈಷೋಽರ್ಥಃ ಶ್ರುತ್ವೈವ ದ್ವಿಜಸತ್ತಮ ॥೪॥

ದಿವೋದಾಸ– ಎಲೈ ಬ್ರಾಹ್ಮಣರೇ, ಇದನ್ನು ನಾನು ಮೊದಲೇ ಕೇಳಿದ್ದೇನೆ. ವಿಸ್ತಾರವಾಗಿ ಮಾತನಾಡಿ ಏನು ಪ್ರಯೋಜನ? ಎಲೈ ದ್ವಿಜಶ್ರೇಷ್ಠರೇ, ಈ ವಿಷಯವನ್ನು ಕೇಳಿದಾಗಲೇ ನಾನೂ ಈ ಫಲವನ್ನು ಅಪೇಕ್ಷಿಸಿದೆ.

ಏತಚ್ಚ ಮೇ ಬಹುಮತಂ ಯದುತ್ಸೃಜ್ಯ ನರಾಧಿಪಾನ್ ।
ಮಾಮೇವಮುಪಯಾತೋಽಸಿ ಭಾವಿ ಚೈತದಸಂಶಯಮ್ ॥೫॥

ಉಳಿದ ರಾಜರನ್ನು ಬಿಟ್ಟು ನನ್ನ ಸಮೀಪಕ್ಕೇ ಬಂದ ಕಾರಣ ನಾನು ಬಹಳ ಸಂತೋಷಪಟ್ಟಿದ್ದೇನೆ. ನಿಮ್ಮ ಸಂಕಲ್ಪವು ನಿಸ್ಸಂಶಯವಾಗಿ ನೆರವೇರುವುದು.

ಸ ಏವ ವಿಭವೋಽಸ್ಮಾಕಮಶ್ವಾನಾಮಪಿ ಗಾಲವ ।
ಅಹಮಪ್ಯೇಕಮೇವಾಸ್ಯಾಂ ಜನಯಿಷ್ಯಾಮಿ ಪಾರ್ಥಿವಮ್ ॥೬॥

ಎಲೈ ಗಾಲವರೇ, ಅಶ್ವಗಳ ವಿಷಯದಲ್ಲಿ ನಮ್ಮದೂ ಅದೇ ಪರಿಸ್ಥಿತಿ (ಇನ್ನೂರು ಅಶ್ವಗಳು ಮಾತ್ರ ಇವೆ). ನಾನೂ ಸಹ ಇವಳಲ್ಲಿ ಒಬ್ಬ ರಾಜನನ್ನು ಪಡೆಯುವೆನು.

ನಾರದಃ

ತಥೇತ್ಯುಕ್ತ್ವಾ ದ್ವಿಜಶ್ರೇಷ್ಠಃ ಪ್ರಾದಾತ್ ಕನ್ಯಾಂ ಮಹೀಪತೇಃ ।
ವಿಧಿಪೂರ್ವಾಂ ಚ ತಾಂ ರಾಜಾ ಕನ್ಯಾಂ ಪ್ರತಿಗೃಹೀತವಾನ್ ॥೭॥

ಹಾಗೆಯೇ ಆಗಲಿ ಎಂದು ಹೇಳಿ ಆ ದ್ವಿಜಶ್ರೇಷ್ಠರು ರಾಜನಿಗೆ ಆ ಕನ್ಯೆಯನ್ನು ವಿಧಿಪೂರ್ವಕವಾಗಿ ಕೊಟ್ಟರು. ರಾಜನೂ ಸಹ ಅವಳನ್ನು ಸ್ವೀಕರಿಸಿದನು.

ರೇಮೇ ಸ ತಸ್ಯಾಂ ರಾಜರ್ಷಿಃ ಪ್ರಭಾವತ್ಯಾಂ ಯಥಾ ರವಿಃ ।
ಸ್ವಾಹಾಯಾಂ ಚ ಯಥಾ ವಹ್ನಿರ್ಯಥಾ ಶಚ್ಯಾಂ ಚ ವಾಸವಃ ॥೮॥

ಯಥಾ ಚಂದ್ರಶ್ಚ ರೋಹಿಣ್ಯಾಂ ಯಥಾ ಧೂಮೋರ್ಣಯಾ ಯಮಃ ।
ವರುಣಶ್ಚ ಯಥಾ ಗೌರ್ಯಾಂ ಯಥಾ ಚರ್ಧ್ಯಾಂ ಧನೇಶ್ವರಃ ॥೯॥

ರಾಜರ್ಷಿಯಾದ ದಿವೋದಾಸನು ಸೂರ್ಯನು ಪ್ರಭಾವತಿಯ ಜೊತೆಯಲ್ಲಿ, ಅಗ್ನಿಯು ಸ್ವಾಹಾದೇವಿಯ ಜೊತೆಯಲ್ಲಿ, ಇಂದ್ರನು ಶಚಿಯ ಜೊತೆಯಲ್ಲಿ, ಚಂದ್ರನು ರೋಹಿಣಿಯ ಜೊತೆಯಲ್ಲಿ, ಯಮನು ಧೂಮೋರ್ಣೆಯ ಜೊತೆಯಲ್ಲಿ, ವರುಣನು ಗೌರಿಯ ಜೊತೆಯಲ್ಲಿ, ಕುಬೇರನು ಋದ್ಧಿಯ ಜೊತೆಯಲ್ಲಿ ವಿಹರಿಸಿದಂತೆ ಮಾಧವಿಯ ಜೊತೆ ವಿಹರಿಸಿದನು.

ಯಥಾ ನಾರಾಯಣೋ ಲಕ್ಷ್ಮ್ಯಾಂ ಜಾಹ್ನವ್ಯಾಂ ಚ ಯಥೋದಧಿಃ ।
ಯಥಾ ರುದ್ರಶ್ಚ ರುದ್ರಾಣ್ಯಾಂ ಯಥಾ ವಾಣ್ಯಾಂ ಪಿತಾಮಹಃ ॥೧೦॥

ಅದೃಶ್ಯಂತ್ಯಾಂ ಚ ವಾಸಿಷ್ಠೋ ವಸಿಷ್ಠಶ್ಚಾಕ್ಷಮಾಲಯಾ ।
ಚ್ಯವನಶ್ಚ ಸುಕನ್ಯಾಯಾಂ ಪುಲಸ್ತ್ಯಃ ಸಂಧ್ಯಯಾ ಯಥಾ ॥೧೧॥

ನಾರಾಯಣನು ಲಕ್ಷ್ಮಿಯ ಜೊತೆಯಲ್ಲಿ, ವರುಣನು ಗಂಗೆಯ ಜೊತೆಯಲ್ಲಿ, ರುದ್ರನು ಪಾರ್ವತಿಯ ಜೊತೆಯಲ್ಲಿ, ಬ್ರಹ್ಮನು ವಾಣಿಯ ಜೊತೆಯಲ್ಲಿ, ಶಕ್ತಿ ಋಷಿಯು ಅದೃಶ್ಯಂತಿಯ ಜೊತೆಯಲ್ಲಿ, ವಸಿಷ್ಠರು ಅಕ್ಷಮಾಲೆಯ ಜೊತೆಯಲ್ಲಿ (ಅರುಂಧತಿಗೆ ಅಕ್ಷಮಾಲೆ ಎಂದು ಇನ್ನೊಂದು ಹೆಸರು), ಚ್ಯವನರು ಸುಕನ್ಯೆಯ ಜೊತೆಯಲ್ಲಿ, ಪುಲಸ್ತ್ಯರು ಸಂಧಿಯ ಜೊತೆಯಲ್ಲಿ (ವಿಹರಿಸಿದಂತೆ ವಿಹರಿಸಿದನು).

ಅಗಸ್ತ್ಯಶ್ಚಾಪಿ ವೈದರ್ಭ್ಯಾಂ ಸಾವಿತ್ರ್ಯಾಂ ಸತ್ಯವಾನ್ ಯಥಾ ।
ಯಥಾ ಭೃಗುಃ ಪುಲೋಮಾಯಾಮದಿತ್ಯಾಂ ಕಾಶ್ಯಪೋ ಯಥಾ ॥೧೨॥

ರೇಣುಕಾಯಾಂ ಯಥರ್ಚೀಕೋ ಹೈಮವತ್ಯಾಂ ಚ ಕೌಶಿಕಃ ।
ಬೃಹಸ್ಪತಿಶ್ಚ ತಾರಾಯಾಂ ಶುಕ್ರಶ್ಚ ಶತಪರ್ವಯಾ ॥೧೩॥

ಅಗಸ್ತ್ಯರು ವಿದರ್ಭರಾಜಕುಮಾರಿಯಾದ ಲೋಪಾಮುದ್ರೆಯ ಜೊತೆಯಲ್ಲಿ, ಸತ್ಯವಂತನು ಸಾವಿತ್ರಿಯ ಜೊತೆಯಲ್ಲಿ, ಭೃಗುವು ಪುಲೋಮೆಯ ಜೊತೆಯಲ್ಲಿ, ಕಾಶ್ಯಪರು ಅದಿತಿಯ ಜೊತೆಯಲ್ಲಿ, ಜಮದಗ್ನಿಗಳು ರೇಣುಕೆಯ ಜೊತೆಯಲ್ಲಿ, ವಿಶ್ವಾಮಿತ್ರರು ಮೇನಕೆಯ ಜೊತೆಯಲ್ಲಿ, ಬೃಹಸ್ಪತಿಗಳು ತಾರೆಯ ಜೊತೆಯಲ್ಲಿ, ಶುಕ್ರನು ಶತಪರ್ವಳ ಜೊತೆಯಲ್ಲಿ (ವಿಹರಿಸಿದಂತೆ ವಿಹರಿಸಿದನು).

ಯಥಾ ಭೂಮ್ಯಾಂ ಭೂಮಿಪತಿರುರ್ವಶ್ಯಾಂ ಚ ಪುರೂರವಾಃ ।
ದಧೀಚಿಃ ಸತ್ಯಧೃತ್ಯಾಂ ಚ ಸರಸ್ವತ್ಯಾಂ ಯಥಾ ಮನುಃ ॥೧೪॥

ಶಕುಂತಲಾಯಾಂ ದುಷ್ಯಂತೋ ಧೃತ್ಯಾಂ ಧರ್ಮಶ್ಚ ಶಾಶ್ವತಃ ।
ದಮಯಂತ್ಯಾಂ ನಳಶ್ಚೈವ ಸತ್ಯವತ್ಯಾಂ ಚ ಭಾರ್ಗವಃ ॥೧೫॥

ಭೂಮಿಪತಿಯು ಭೂಮಿಯ ಜೊತೆಯಲ್ಲಿ, ಪುರೂರವನು ಊರ್ವಶಿಯ ಜೊತೆಯಲ್ಲಿ, ದಧೀಚಿಯು ಸತ್ಯಧೃತಿಯ ಜೊತೆಯಲ್ಲಿ, ಮನುವು ಸರಸ್ವತಿಯ ಜೊತೆಯಲ್ಲಿ, ದುಷ್ಯಂತನು ಶಕುಂತಲೆಯಲ್ಲಿ, ಶಾಶ್ವತನಾದ ಧರ್ಮನು ಧೃತಿಯ ಜೊತೆಯಲ್ಲಿ, ನಳನು ದಮಯಂತಿಯ ಜೊತೆಯಲ್ಲಿ, ಪರಶುರಾಮನು ಸತ್ಯವತಿಯ ಜೊತೆಯಲ್ಲಿ (ವಿಹರಿಸಿದಂತೆ ಮಾಧವಿಯ ಜೊತೆ ವಿಹರಿಸಿದನು).

ಜರತ್ಕಾರುರ್ಜರತ್ಕಾರ್ವಾಂ ರತ್ಯಾಂ ಚ ಮದನೋ ಯಥಾ ।
ಮೇನಕಾಯಾಂ ಯಥೋರ್ಣಾಯುಃ ತುಂಬುರುಶ್ಚೈವ ರಂಭಯಾ॥೧೬॥

ವಾಸುಕಿಃ ಶತಶೀರ್ಷಾಯಾಂ ಕುಮಾರ್ಯಾಂ ಚ ಧನಂಜಯಃ ।
ವೈದೇಹ್ಯಾಂ ಚ ಯಥಾ ರಾಮೋ ರುಗ್ಮಿಣ್ಯಾಂ ಚ ಜನಾರ್ದನಃ ॥೧೭॥

ಜರತ್ಕಾರುವು ಜರತ್ಕಾರುವಿನ ಜೊತೆಯಲ್ಲಿ, ಮನ್ಮಥನು ರತಿಯ ಜೊತೆಯಲ್ಲಿ, ಊರ್ಣಾಯುವು ಮೇನಕೆಯ ಜೊತೆಯಲ್ಲಿ, ತುಂಬುರುವು ರಂಭೆಯ ಜೊತೆಯಲ್ಲಿ, ವಾಸುಕಿಯು ಶತಶೀರ್ಷಳ ಜೊತೆಯಲ್ಲಿ, ಧನಂಜಯನು (ಧನಂಜಯನೆಂಬ

ಸರ್ಪವು) ಕುಮಾರಿಯ ಜೊತೆಯಲ್ಲಿ, ರಾಮನು ಸೀತೆಯ ಜೊತೆಯಲ್ಲಿ, ಕೃಷ್ಣನು ರುಗ್ಮಿಣಿಯ ಜೊತೆಯಲ್ಲಿ (ವಿಹರಿಸಿದಂತೆ ಮಾಧವಿಯ ಜೊತೆ ವಿಹರಿಸಿದನು).

ತಥಾ ತು ರಮಮಾಣಸ್ಯ ದಿವೋದಾಸಸ್ಯ ಭೂಪತೇಃ ।
ಮಾಧವೀ ಜನಯಾಮಾಸ ಪುತ್ರಮೇಕಂ ಪ್ರತರ್ದನಮ್ ॥೧೮॥

ಹಾಗೆ ವಿಹರಿಸುತ್ತಿದ್ದ ದಿವೋದಾಸರಾಜನಿಂದ ಮಾಧವಿಯು ಪ್ರತರ್ದನನೆಂಬ ಒಬ್ಬ ಪುತ್ರನನ್ನು ಪಡೆದಳು.

ಅಥಾಜಗಾಮ ಭಗವಾನ್ ದಿವೋದಾಸಂ ಸ ಗಾಲವಃ ।
ಸಮಯೇ ಸಮನುಪ್ರಾಪ್ತೇ ವಚನಂ ಚೇದಮಬ್ರವೀತ್ ॥೧೯॥

ಅನಂತರ ಸೂಕ್ತವಾದ ಸಮಯದಲ್ಲಿ ಪೂಜ್ಯರಾದ ಗಾಲವರು ಬಂದು ದಿವೋದಾಸನನ್ನು ಕುರಿತು ಹೀಗೆ ಹೇಳಿದರು.

ನಿರ್ಯಾತಯತು ಮೇ ಕನ್ಯಾಂ ಭವಾಂಸ್ತಿಷ್ಠಂತು ವಾಜಿನಃ ।
ಯಾವದನ್ಯತ್ರ ಗಚ್ಛಾಮಿ ಶುಲ್ಕಾರ್ಥಂ ಪೃಥಿವೀಪತೇ ॥೨೦॥

ನನ್ನ ಕನ್ಯೆಯನ್ನು ನನಗೆ ಹಿಂದಿರುಗಿಸು. ಕುದುರೆಗಳು ನಿನ್ನ ಬಳಿಯಲ್ಲಿಯೇ ಇರಲಿ. ಎಲೈ ರಾಜನೇ, ಅಷ್ಟರಲ್ಲಿ ನಾನು ಶುಲ್ಕಾರ್ಥವಾಗಿ ಬೇರೆ ಕಡೆಗೆ ಹೋಗುತ್ತೇನೆ.

ನಾರದಃ

ದಿವೋದಾಸೋಽಥ ಧರ್ಮಾತ್ಮಾ ಸಮಯೇ ಗಾಲವಸ್ಯ ತಾಮ್ ।
ಕನ್ಯಾಂ ನಿರ್ಯಾತಯಾಮಾಸ ಸ್ಥಿತಃ ಸತ್ಯೇ ಮಹೀಪತಿಃ ॥೨೧॥

ನಾರದ– ಆಗ ಸತ್ಯವಚನನಾದ, ಧರ್ಮಾತ್ಮನಾದ ದಿವೋದಾಸರಾಜನು ತನ್ನ ಪ್ರತಿಜ್ಞೆಗೆ ಅನುಗುಣವಾಗಿ ಗಾಲವರಿಗೆ ಆ ಕನ್ಯೆಯನ್ನು ಹಿಂದಿರುಗಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಷೋಡಶೋತ್ತರಶತತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ಸಪ್ತಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಹದಿನಾರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನೇಳನೆಯ ಅಧ್ಯಾಯ

ಕನ್ಯೆಯನ್ನು ಸ್ವೀಕರಿಸಿದ ಉಶೀನರನಿಂದ ಶಿಬಿಯ ಉತ್ಪತ್ತಿ ಮತ್ತು ಗಾಲವರಿಗೆ ಪುನಃ ಕನ್ಯಾಸಮರ್ಪಣೆ

ನಾರದಃ

ತಥೈವ ತಾಂ ಶ್ರಿಯಂ ತ್ಯಕ್ತ್ವಾ ಕನ್ಯಾ ಭೂತ್ವಾ ಯಶಸ್ವಿನೀ ।
ಮಾಧವೀ ಗಾಲವಂ ವಿಪ್ರಮನ್ವಯಾತ್ ಸತ್ಯಸಂಗರಾ ॥೧॥

ನಾರದ– ಮೊದಲಿನಂತೆಯೇ ಯಶಸ್ವಿನಿಯಾದ ಮತ್ತು ಸತ್ಯಪ್ರತಿಜ್ಞೆಯುಳ್ಳ ಮಾಧವಿಯು ರಾಜಸಂಪತ್ತನ್ನು ಬಿಟ್ಟು ಕನ್ಯೆಯಾಗಿ ಬ್ರಾಹ್ಮಣರಾದ ಗಾಲವರನ್ನು ಹಿಂಬಾಲಿಸಿದಳು.

ಗಾಲವೋ ವಿಮೃಶನ್ನೇವ ಸ್ವಕಾರ್ಯಗತಮಾನಸಃ ।
ಜಗಾಮ ಭೋಜನಗರಂ ದ್ರಷ್ಟುಮೌಶೀನರಂ ನೃಪಮ್ ॥೨॥

ಗಾಲವರು ತಮ್ಮ ಕಾರ್ಯದಲ್ಲೇ ಮನಸ್ಸುಳ್ಳವರಾಗಿ ವಿಚಾರ ಮಾಡುತ್ತಾ ಉಶೀನರ ರಾಜನನ್ನು ನೋಡಲು ಭೋಜನಗರಕ್ಕೆ ಹೋದರು.

ತಮುವಾಚಾಥ ಗತ್ವಾ ತು ಭೂಪತೇ ಸತ್ಯವಿಕ್ರಮಮ್ ॥೩॥

ಇಯಂ ಕನ್ಯಾ ಸುತೌ ದ್ವೌ ತೇ ಜನಯಿಷ್ಯತಿ ಪಾರ್ಥಿವೌ ।
ಅಸ್ಯಾಂ ಭವಾನವಾಪ್ತಾರ್ಥೋ ಭವಿತಾ ಪ್ರೇತ್ಯ ಚೇಹ ಚ ॥೪॥

ಸೋಮಾರ್ಕಪ್ರತಿಸಂಕಾಶೌ ಜನಯಿತ್ವಾ ಸುತೌ ನೃಪ ॥೫॥

ಎಲೈ ಜನಮೇಜಯ ರಾಜನೇ, ಅಲ್ಲಿಗೆ ಹೋಗಿ ಸತ್ಯವಿಕ್ರಮನಾದ ಆ ರಾಜನನ್ನು ಕುರಿತು ಮಾತನಾಡಿದರು– 'ಎಲೈ ರಾಜನೇ, ಈ ಕನ್ಯೆಯು ನಿನ್ನಿಂದ ರಾಜರಾಗುವ ಎರಡು ಮಕ್ಕಳನ್ನು ಪಡೆಯುವಳು. ಚಂದ್ರ-ಸೂರ್ಯಸದೃಶರಾದ ಎರಡು ಮಕ್ಕಳನ್ನು ಇವಳಲ್ಲಿ ಪಡೆದು ನೀನು ಕೃತ್ಯಕೃತ್ಯನಾಗಿ ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಸುಖವಾಗಿರುತ್ತೀಯೆ'.

ಶುಲ್ಕಂ ತು ಸರ್ವಧರ್ಮಜ್ಞ ಹಯಾನಾಂ ಚಂದ್ರವರ್ಚಸಾಮ್ ।
ಏಕತಃ ಶ್ಯಾಮಕರ್ಣಾನಾಂ ದೇಯಂ ಮಹ್ಯಂ ಚತುಃಶತಮ್ ॥೬॥

ಸರ್ವಧರ್ಮಜ್ಞನೇ, ಚಂದ್ರನ ಕಾಂತಿಯುಳ್ಳ ಒಂದು ಕಡೆ ಕಪ್ಪಾದ ಕಿವಿಯುಳ್ಳ ನಾಲ್ನೂರು ಅಶ್ವಗಳನ್ನು ನೀನು ನನಗೆ ಶುಲ್ಕವಾಗಿ ಕೊಡಬೇಕು (ಎಂದು ಹೇಳಿದರು).

ಗುರ್ವರ್ಥೋ೭ಯಂ ಸಮಾರಂಭೋ ನ ಹಯೈಃ ಕೃತ್ಯಮಸ್ತಿ ಮೇ ।
ಯದಿ ಶಕ್ಯಂ ಮಹಾರಾಜ ಕ್ರಿಯತಾಮವಿಚಾರಿತಮ್ ॥೭॥

ನನ್ನ ಈ ಪ್ರಯತ್ನವು ಗುರುದಕ್ಷಿಣೆಯನ್ನು ಕೊಡುವುದಕ್ಕಾಗಿ. ನನಗೆ ಅಶ್ವಗಳಿಂದ ಆಗಬೇಕಾದುದೇನೂ ಇಲ್ಲ. ಎಲೈ ಮಹಾರಾಜನೇ, ಸಾಧ್ಯವಾದರೆ ವಿಚಾರ ಮಾಡದೆ ಹೀಗೆ ಮಾಡು.

ಅನಪತ್ಯೋ೭ಸಿ ರಾಜರ್ಷೇ ಸುತೌ ಜನಯ ಪಾರ್ಥಿವ ।
ಪಿತೄನ್ ಪುತ್ರಫಲೇನ ತ್ವಮಾತ್ಮಾನಂ ಚೈವ ತಾರಯ ॥೮॥

ಎಲೈ ರಾಜರ್ಷಿಯೇ, ನೀನು ಪುತ್ರಹೀನನಾಗಿದ್ದೀಯೆ. ಎಲೈ ರಾಜನೇ, ಪುತ್ರನೆಂಬ ದೋಣಿಯಿಂದ ಪಿತೃಗಳನ್ನು ಮತ್ತು ನಿನ್ನನ್ನು ಪಾರು ಮಾಡುವವನಾಗು.

ನ ಪುತ್ರಫಲಭೋಕ್ತಾ ಹಿ ರಾಜರ್ಷೇ ಪಾತ್ಯತೇ ದಿವಃ ।
ನ ಯಾತಿ ನರಕಂ ಘೋರಂ ಯತ್ರ ಗಚ್ಛಂತ್ಯನಾತ್ಮಜಾಃ ॥೯॥

ಪುತ್ರರೂಪ ಫಲವನ್ನು ಹೊಂದಿದ ಮನುಷ್ಯನು ಸ್ವರ್ಗದಿಂದ ತಳ್ಳಲ್ಪಡುವುದಿಲ್ಲ. ಎಲೈ ರಾಜರ್ಷಿಯೇ, ಪುತ್ರರಿಲ್ಲದವರು ಹೋಗುವ ಘೋರ ನರಕಕ್ಕೆ ಅವನು ಹೋಗುವುದಿಲ್ಲ.

ನಾರದಃ

ಏತಚ್ಚಾನ್ಯಚ್ಚ ವಿವಿಧಂ ಶ್ರುತ್ವಾ ಗಾಲವಭಾಷಿತಮ್ ।
ಉಶೀನರಃ ಪ್ರತಿವಚೋ ದದೌ ತಸ್ಯ ನರಾಧಿಪಃ ॥೧೦॥

ನಾರದ– ಗಾಲವರು ನುಡಿದ ಈ ಮಾತುಗಳನ್ನು ಮತ್ತು ಇನ್ನೂ ಅನೇಕ ವಿವಿಧವಾದ ಮಾತುಗಳನ್ನು ಕೇಳಿ ಉಶೀನರ ರಾಜನು ಅವರಿಗೆ ಪ್ರತಿವಚನವನ್ನು ನೀಡಿದನು.

ಶ್ರುತವಾನಸ್ಮಿ ತೇ ವಾಕ್ಯಂ ಯಥಾ ವದಸಿ ಗಾಲವ ।
ವಿಧಿಸ್ತು ಬಲವಾನ್ ಬ್ರಹ್ಮನ್ ಪ್ರವಣಂ ಹಿ ಮನೋ ಮಮ ॥೧೧॥

ಎಲೈ ಗಾಲವರೇ, ನೀವು ಹೇಳುವಂತೆ ನಿಮ್ಮ ಮಾತನ್ನು ಮೊದಲೇ ಕೇಳಿದ್ದೇನೆ. ಎಲೈ ಬ್ರಾಹ್ಮಣರೇ, ವಿಧಿಯು ಪ್ರಬಲವಾದುದು. ನನ್ನ ಮನಸ್ಸು ಅವಳಲ್ಲಿ ಲಗ್ನವಾಗಿದೆ.

ಶತೇ ದ್ವೇ ತು ಮಯಾऽಶ್ವಾನಾಮೀದೃಶಾನಾಂ ದ್ವಿಜೋತ್ತಮ ।
ಇತರೇಷಾಂ ಸಹಸ್ರಾಣಿ ಸುಬಹೂನಿ ಚರಂತಿ ಮೇ ॥೧೨॥

ಎಲೈ ದ್ವಿಜೋತ್ತಮರೇ, ನನ್ನ ಬಳಿಯೂ ಇಂತಹ ಇನ್ನೂರು ಕುದುರೆಗಳು ಮಾತ್ರ ಇವೆ. ಉಳಿದ ಸಹಸ್ರಾರು ಕುದುರೆಗಳು ಮೇಯುತ್ತಿರುತ್ತವೆ.

ಅಹಮಪ್ಯೇಕಮೇವಾಸ್ಯಾಂ ಜನಯಿಷ್ಯಾಮಿ ಗಾಲವ ।
ದ್ವಿಜ ಪುತ್ರಗತಂ ಮಾರ್ಗಂ ಗಮಿಷ್ಯಾಮಿ ಪರೈರಹಮ್ ॥೧೩॥

ಎಲೈ ಗಾಲವರೇ, ನಾನೂ ಸಹ ಇವಳಲ್ಲಿ ಒಬ್ಬ ಪುತ್ರನನ್ನು ಪಡೆಯುವೆನು. ಎಲೈ ಬ್ರಾಹ್ಮಣರೇ, ಉಳಿದವರು ಪುತ್ರ ನಿಮಿತ್ತದಿಂದ ಪಡೆಯುವ ಮಾರ್ಗವನ್ನು ನಾನೂ ಸಹ ಪಡೆಯುವೆನು.

ಮೂಲ್ಯೇನಾಪಿ ಸಮಂ ಕುರ್ಯಾಂ ತವಾಹಂ ದ್ವಿಜಸತ್ತಮ ।
ಪೌರಜಾನಪದಾರ್ಥಂ ತು ಮಮಾರ್ಥೋ ನಾತ್ಮಭೋಗತಃ ॥೧೪॥

ಎಲೈ ದ್ವಿಜಶ್ರೇಷ್ಠರೇ, ನೀವು ಕೇಳಿದ ಮೌಲ್ಯವನ್ನೂ ನಾನು ಸರಿಯಾಗಿ ಕೊಡುವೆನು. ಈ ನನ್ನ ಪ್ರಯತ್ನವು ಪೌರಜಾನಪದರ ರಕ್ಷಣೆಗಾಗಿ ಹೊರತು ನನ್ನ ಸ್ವಂತ ಭೋಗಕ್ಕಾಗಿ ಅಲ್ಲ.

ಕಾಮತೋ ಹಿ ಧನಂ ರಾಜಾ ಪಾರಕ್ಯಂ ಯಃ ಪ್ರಯಚ್ಛತಿ ।
ನ ಸ ಧರ್ಮೇಣ ಧರ್ಮಾತ್ಮನ್ ಯುಜ್ಯತೇ ಯಶಸಾऽಪಿ ಚ ॥೧೫॥

ಎಲೈ ಧರ್ಮಾತ್ಮರೇ, ಯಾವ ರಾಜನು ತನ್ನ ಪ್ರಜೆಗಳಿಗೆ ಸೇರಿದ ಧನವನ್ನು ತನ್ನ ಕಾಮಕ್ಕಾಗಿ ಕೊಡುತ್ತಾನೆಯೋ ಅವನಿಗೆ ಧರ್ಮವಾಗಲೀ, ಕೀರ್ತಿಯಾಗಲೀ ಉಂಟಾಗುವುದಿಲ್ಲ.

ಸೋಽಹಂ ಪ್ರತಿಗ್ರಹೀಷ್ಯಾಮಿ ದದಾತ್ವೇತಾಂ ಭವಾನ್ ಮಮ ।
ಕುಮಾರೀಂ ದೇವಗರ್ಭಾಭಾಮೇಕಪುತ್ರಭವಾಯ ಮೇ ॥೧೬॥

ನಾನು ಸ್ವೀಕರಿಸುವೆನು. ಒಬ್ಬ ಪುತ್ರನನ್ನು ಪಡೆಯುವ ಸಲುವಾಗಿ ನನಗೆ ದೇವಗರ್ಭದಂತಿರುವ ಈ ಕುಮಾರಿಯನ್ನು ನೀವು ಕೊಡಿ.

ನಾರದಃ

ತಥಾ ತು ಬಹುಕಲ್ಯಾಣಮುಕ್ತವಂತಂ ನರಾಧಿಪಮ್ ।
ಉಶೀನರಂ ದ್ವಿಜಶ್ರೇಷ್ಠೋ ಗಾಲವಃ ಪ್ರತ್ಯಪೂಜಯತ್ ॥೧೭॥

ನಾರದ– ಆ ರೀತಿಯಲ್ಲಿ ಕನ್ಯೆಯನ್ನು ಉದ್ದೇಶಿಸಿ ಬಹಳ ಕಲ್ಯಾಣವಾದ ಮಾತುಗಳನ್ನು ಆಡಿದ ಉಶೀನರ ರಾಜನನ್ನು ದ್ವಿಜಶ್ರೇಷ್ಠರಾದ ಗಾಲವರು ಪ್ರತಿಯಾಗಿ ಪೂಜಿಸಿದರು.

ಉಶೀನರಂ ಪ್ರತಿಗ್ರಾಹ್ಯ ಗಾಲವಃ ಪ್ರಯಯೌ ವನಮ್ ।
ರೇಮೇ ಸ ತಾಂ ಸಮಾಸಾದ್ಯ ಕೃತಪುಣ್ಯ ಇವ ಶ್ರಿಯಮ್ ॥೧೮॥

ಕಂದರೇಷು ಚ ಶೈಲಾನಾಂ ನದೀನಾಂ ನಿರ್ಝರೇಷು ಚ ।
ಉದ್ಯಾನೇಷು ವಿಚಿತ್ರೇಷು ವನೇಷೂಪವನೇಷು ಚ ॥೧೯॥

ಹಮ್ಯೇ೯ಷು ರಮಣೀಯೇಷು ಪ್ರಾಸಾದಶಿಖರೇಷು ಚ ।
ವಾತಾಯನವಿಮಾನೇಷು ತಥಾ ಗರ್ಭಗೃಹೇಷು ಚ ॥೨೦॥

ಗಾಲವರು ಉಶೀನರನಿಗೆ ಕನ್ಯೆಯನ್ನು ಕೊಟ್ಟು ಕಾಡಿಗೆ ಹೋದರು. ಪುಣ್ಯವನ್ನು ಮಾಡಿದವನು ಸಂಪತ್ತನ್ನು ಪಡೆದಂತೆ ಉಶೀನರನು ಅವಳನ್ನು ಪಡೆದು ಅವಳ ಜೊತೆಯಲ್ಲಿ ಪರ್ವತದ ಕಂದರಗಳಲ್ಲಿಯೂ, ನದಿಗಳ ಪ್ರವಾಹಗಳಲ್ಲಿಯೂ, ವಿಚಿತ್ರವಾದ ಉದ್ಯಾನಗಳಲ್ಲಿಯೂ, ವನೋಪವನಗಳಲ್ಲಿಯೂ, ಸುಂದರವಾದ ಪ್ರಾಸಾದಗಳಲ್ಲಿಯೂ, ಪ್ರಾಸಾದ ಶಿಖರಗಳಲ್ಲಿಯೂ, ಗವಾಕ್ಷಗಳಿದ್ದ ವಿಮಾನಗಳಲ್ಲಿಯೂ, ಅಂತೆಯೇ ಏಕಾಂತಗೃಹಗಳಲ್ಲಿಯೂ ವಿಹರಿಸಿದನು.

ತತೋಽಸ್ಯ ಸಮಯೇ ಜಜ್ಞೇ ಪುತ್ರೋ ಬಾಲರವಿಪ್ರಭಃ ।
ಶಿಬಿರ್ನಾಮ್ನಾತಿವಿಖ್ಯಾತೋ ಯಃ ಸ ಪಾರ್ಥಿವಸತ್ತಮಃ ॥೨೧॥

ಅನಂತರ ಸೂಕ್ತವಾದ ಸಮಯದಲ್ಲಿ ಬಾಲರವಿಯ ಕಾಂತಿಯನ್ನು ಹೊಂದಿದ ಶಿಬಿ ಎಂಬ ಅತಿವಿಖ್ಯಾತನಾದ ರಾಜಶ್ರೇಷ್ಠನಾದ ಪುತ್ರನು ಜನಿಸಿದನು.

ಉಪಸ್ಥಾಯ ಸ ತಂ ವಿಪ್ರೋ ಗಾಲವಃ ಪ್ರತಿಗೃಹ್ಯ ತಾಮ್ ।
ಕನ್ಯಾಂ ಪ್ರಾದಾಚ್ಚ ತಂ ರಾಜ್ಞೇ ದೃಷ್ಟವಾನ್ ವಿನತಾತ್ಮಜಮ್ ॥೨೨॥

ಬ್ರಾಹ್ಮಣರಾದ ಗಾಲವರು ರಾಜನ ಸಮೀಪಕ್ಕೆ ಬಂದು ಕನ್ಯೆಯನ್ನು ಸ್ವೀಕರಿಸಿ ರಾಜನಿಗೆ ಶಿಬಿಯನ್ನು ಕೊಟ್ಟು ಗರುಡನನ್ನು ನೋಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಸಪ್ತದಶೋತ್ತರಶತತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಅಷ್ಟಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಹದಿನೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹದಿನೆಂಟನೆಯ ಅಧ್ಯಾಯ

ವಿಶ್ವಾಮಿತ್ರರಿಗೆ ಗುರುದಕ್ಷಿಣೆಯನ್ನು ಕೊಟ್ಟು ಯಯಾತಿಗೆ ಮಾಧವಿಯನ್ನು ಹಿಂದಿರುಗಿಸಿ ಗಾಲವರ ವನಗಮನ.

ನಾರದಃ

ಗಾಲವಂ ವೈನತೇಯೋऽಥ ಪ್ರಹಸನ್ನಿದಮಬ್ರವೀತ್ ॥೧॥

ದಿಷ್ಟ್ಯಾ ಕೃತಾರ್ಥಂ ಪಶ್ಯಾಮಿ ಭವಂತಮಿಹ ವೈ ದ್ವಿಜ ॥೨॥

ನಾರದ– ಆಗ ಗರುಡನು ನಗುತ್ತಾ ಗಾಲವರನ್ನು ಕುರಿತು ಎಲೈ ಬ್ರಾಹ್ಮಣರೇ, ದೈವಯೋಗದಿಂದ ಕೃತಾರ್ಥರಾದ ನಿಮ್ಮನ್ನು ಇಲ್ಲಿ ನೋಡುತ್ತಿದ್ದೇನೆ ಎಂದು ಹೇಳಿದನು.

ಗಾಲವಸ್ತು ವಚಃ ಶ್ರುತ್ವಾ ವೈನತೇಯೇನ ಭಾಷಿತಮ್ ।
ಚತುರ್ಭಾಗಾವಶಿಷ್ಟಂ ತಮಾಚಖ್ಯೌ ಕಾರ್ಯಮಸ್ಯ ಹಿ ॥೩॥

ಗರುಡನ ಮಾತನ್ನು ಕೇಳಿದ ಗಾಲವರು ಅವನನ್ನು ಕುರಿತು ತಾವು ಮಾಡಬೇಕಾದ ಕಾರ್ಯದ ನಾಲ್ಕನೆಯ ಒಂದು ಭಾಗವು ಇನ್ನೂ ಹಾಗೆಯೇ ಉಳಿದಿದೆ ಎಂದು ಹೇಳಿದರು.

ಸುಪರ್ಣಸ್ತ ಬ್ರುವೀದೇನಂ ಗಾಲವಂ ಪತತಾಂ ವರಃ ॥೪॥

ಪ್ರಯತ್ನಸ್ತೇ ನ ಕರ್ತವ್ಯೋ ನೈಷ ಸಂಪತ್ಸ್ಯತೇ ತವ ॥೫॥

ಆ ಪಕ್ಷಿಶ್ರೇಷ್ಠನಾದ ಗರುಡನು ಗಾಲವರನ್ನು ಕುರಿತು ನೀವು ಪ್ರಯತ್ನ ಪಡಬೇಡಿ. ಅದು ನಿಮಗೆ ಸಿದ್ಧಿಸುವುದಿಲ್ಲ ಎಂದು ಹೇಳಿದನು.

ಪುರಾ ಹಿ ಕನ್ಯಾಕುಬ್ಜೇ ವೈ ಗಾಧೇಃ ಸತ್ಯವತೀಂ ಸುತಾಮ್ ।
ಭಾರ್ಯಾರ್ಥೇ ವರಯನ್ ಕನ್ಯಾಮ್ ಋಚೀಕಸ್ತೇನ ಭಾಷಿತಃ ॥೬॥

ಏಕತಃ ಶ್ಯಾಮಕರ್ಣಾನಾಂ ಹಯಾನಾಂ ಚಂದ್ರವರ್ಚಸಾಮ್ ।
ಭಗವನ್ ದೀಯತಾಂ ಮಹ್ಯಂ ಸಹಸ್ರಮಿತಿ ಗಾಲವ ॥೭॥

ಎಲೈ ಗಾಲವರೇ, ಹಿಂದೆ ಕನ್ಯಾಕುಬ್ಜದಲ್ಲಿ ಗಾಧಿಯ ಮಗಳಾದ ಸತ್ಯವತಿಯನ್ನು ಪತ್ನಿಯಾಗಿ ಸ್ವೀಕರಿಸಲು ಹೊರಟ ಋಚೀಕರನ್ನು ಕುರಿತು ಗಾಧಿಯು ಎಲೈ ಪೂಜ್ಯರೇ, ಒಂದು ಕಡೆ ಕಪ್ಪು ಕಿವಿ ಇರುವ ಚಂದ್ರಕಾಂತಿಯುಳ್ಳ ಸಹಸ್ರ ಅಶ್ವಗಳನ್ನು ನನಗೆ ಕೊಡಿ ಎಂದು ಕೇಳಿದನು.

ಋಚೀಕಸ್ತು ತಥೇತ್ಯುಕ್ತ್ವಾ ವರುಣಸ್ಯಾಲಯಂ ಗತಃ ।
ಅಶ್ವತೀರ್ಥೇ ಹಯಾನ್ ಲಬ್ಧ್ವಾ ದತ್ತವಾನ್ ಪಾರ್ಥಿವಾಯ ವೈ ॥೮॥

ಋಚೀಕರು ಹಾಗೆಯೇ ಆಗಲಿ ಎಂದು ಹೇಳಿ ವರುಣನ ಮನೆಗೆ ಹೋದರು. ಅಶ್ವತೀರ್ಥದಲ್ಲಿ ಆ ಅಶ್ವಗಳನ್ನು ಪಡೆದು ರಾಜನಿಗೆ ಅವುಗಳನ್ನು ಕೊಟ್ಟರು.

ಇಷ್ಟ್ವಾ ತೇ ಪುಂಡರೀಕೇಣ ದತ್ತಾ ರಾಜ್ಞಾ ದ್ವಿಜಾತಿಷು ।
ತೇಭ್ಯೋ ಮೇ ದ್ವೇ ಶತೇ ಕ್ರೀತ್ವಾ ಪ್ರಾಪ್ತಾಸ್ತೈಃ ಪಾರ್ಥಿವೈಸ್ತದಾ ॥೯॥

ರಾಜನಾದ ಗಾಧಿಯು ಪುಂಡರೀಕ ಯಾಗವನ್ನು ಮಾಡಿ ಆ ಅಶ್ವಗಳನ್ನು ದ್ವಿಜರಿಗೆ (ಕ್ಷತ್ರಿಯರಿಗೆ) ದಾನವಾಗಿ ಕೊಟ್ಟನು. ಆ ರಾಜರಿಂದ ನಾನು ಧನವನ್ನು ಕೊಟ್ಟು ಕ್ರಯಮಾಡಿ ಇನ್ನೂರು ಅಶ್ವಗಳನ್ನು ತೆಗೆದುಕೊಂಡೆ.

ಅಪರಾಣ್ಯಪಿ ಚತ್ವಾರಿ ಶತಾನಿ ದ್ವಿಜಸತ್ತಮ ।
ನೀಯಮಾನಾನಿ ಸಂತಾರೇ ಹೃತಾನ್ಯಾಸನ್ನಿತಸ್ತತಃ ॥೧೦॥

ಏವಂ ನ ಶಕ್ಯಮಪ್ರಾಪ್ಯಂ ಪ್ರಾಪ್ತುಂ ಗಾಲವ ಕರ್ಹಿಚಿತ್ ॥೧೧॥

ಎಲೈ ದ್ವಿಜಶ್ರೇಷ್ಠರೇ, ಅಲ್ಲದೇ ಇನ್ನೂ ನಾನ್ನೂರು ಕುದುರೆಗಳು ಅವುಗಳನ್ನು ಅಲ್ಲಿಂದ ಇಲ್ಲಿಗೆ ಸಾಗಿಸಲು ಕರೆದುಕೊಂಡು ಹೋಗುವಾಗ ಕದಿಯಲ್ಪಟ್ಟವು. ಆದ್ದರಿಂದ ನೀವು ಉಳಿದ ಇನ್ನೂರು ಕುದುರೆಗಳನ್ನು ಪಡೆಯಲು ಯಾವ ರೀತಿಯಿಂದಲೂ ಸಾಧ್ಯವಿಲ್ಲ.

ಇಮಾಮಶ್ವಶತಾಭ್ಯಾಂ ವೈ ದ್ವಾಭ್ಯಾಂ ತಸ್ಮೈ ನಿವೇದಯ ।
ವಿಶ್ವಾಮಿತ್ರಾಯ ಧರ್ಮಾತ್ಮನ್ ಷಡ್ಭಿರಶ್ವಶತೈಃ ಸಹ ॥೧೨॥

ತತೋಽಸಿ ಗತಸಮ್ಮೋಹಃ ಕೃತಕೃತ್ಯೋ ದ್ವಿಜೋತ್ತಮ ॥೧೩॥

ಎಲೈ ಧರ್ಮಾತ್ಮರೇ, ಈ ಮಾಧವಿಯನ್ನು ಇನ್ನೂರು ಕುದುರೆಗಳ ಸಲುವಾಗಿ ವಿಶ್ವಾಮಿತ್ರರಿಗೇ ಕೊಡಿ ಮತ್ತು ಈಗ ಸಂಪಾದಿಸಿರುವ ಆರುನೂರು ಕುದುರೆಗಳನ್ನೂ ಕೊಡಿ. ಎಲೈ ದ್ವಿಜಶ್ರೇಷ್ಠರೇ, ಅದರಿಂದ ನೀವು ಯಾವ ಸಂಮೋಹವಿಲ್ಲದೇ ಕೃತಕೃತ್ಯರಾಗುವಿರಿ.

ನಾರದಃ

ಗಾಲವಸ್ತಂ ತಥೇತ್ಯುಕ್ತ್ವಾ ಸುಪರ್ಣಸಹಿತಸ್ತತಃ ।
ಆದಾಯಾಶ್ವಾಂಶ್ಚ ಕನ್ಯಾಂ ಚ ವಿಶ್ವಾಮಿತ್ರಮುಪಾಗಮತ್ ॥೧೪॥

ನಾರದ– ಗಾಲವರು ಹಾಗೆಯೇ ಆಗಲಿ ಎಂದು ಹೇಳಿ ಆ ಅಶ್ವಗಳನ್ನೂ ಮತ್ತು ಕನ್ಯೆಯನ್ನೂ ಕರೆದುಕೊಂಡು ಗರುಡನಿಂದ ಸಹಿತರಾಗಿ ವಿಶ್ವಾಮಿತ್ರರ ಸಮೀಪಕ್ಕೆ ಬಂದರು.

ಅಶ್ವಾನಾಂ ಕಾಂಕ್ಷಿತಾರ್ಥಾನಾಂ ಷಡಿಮಾನಿ ಶತಾನಿ ವೈ ।
ಶತದ್ವಯೇನ ಕನ್ಯೇಯಂ ಭವತಾ ಪ್ರತಿಗೃಹ್ಯತಾಮ್ ॥೧೫॥

ನೀವು ಅಪೇಕ್ಷಿಸಿದ ಕುದುರೆಗಳಲ್ಲಿ ಇವು ಆರುನೂರು ಕುದುರೆಗಳು. ಉಳಿದ ಎರಡುನೂರು ಕುದುರೆಗಳ ಸಲುವಾಗಿ ಈ ಕನ್ಯೆಯನ್ನು ತಾವು ಸ್ವೀಕರಿಸಿ.

ಅಸ್ಯಾಂ ರಾಜರ್ಷಿಭಿಃ ಪುತ್ರಾ ಜಾತಾ ವೈ ಧಾರ್ಮಿಕಾಸ್ತ್ರಯಃ ।
ಚತುರ್ಥಂ ಜನಯತ್ವೇಕಂ ಭವಾನಪಿ ನರೋತ್ತಮಮ್ ॥೧೬॥

ಇವಳಲ್ಲಿ ರಾಜರ್ಷಿಗಳು ಧಾರ್ಮಿಕರಾದ ಮೂರು ಮಕ್ಕಳನ್ನು ಪಡೆದಿದ್ದಾರೆ. ನೀವೂ ಸಹ ನರಶ್ರೇಷ್ಠನಾದ ನಾಲ್ಕನೆಯ ಪುತ್ರನನ್ನು ಪಡೆಯುವವರಾಗಿರಿ.

ಪೂರ್ಣಾನ್ಯೇವಂ ಶತಾನ್ಯಷ್ಟೌ ತುರಗಾಣಾಂ ಭವಂತು ತೇ ।
ಭವತೋ ಹ್ಯನೃಣೋ ಭೂತ್ವಾ ತಪಃ ಕುರ್ಯಾಂ ಯಥಾಸುಖಮ್ ॥

ಹೀಗೆ ನಿಮ್ಮ ಎಂಟುನೂರು ಕುದುರೆಗಳು ನಿಮಗೆ ಪೂರ್ಣವಾಗುತ್ತವೆ. ನಾನು ನಿಮ್ಮಿಂದ ಋಣಮುಕ್ತನಾಗಿ ಸುಖವಾಗಿ ತಪಸ್ಸನ್ನು ಮಾಡುವೆನು.

ವಿಶ್ವಾಮಿತ್ರಸ್ತು ತಂ ದೃಷ್ಟ್ವಾ ಗಾಲವಂ ಸಹ ಪಕ್ಷಿಣಾ ।
ಕನ್ಯಾಂ ಚ ತಾಂ ವರಾರೋಹಾಮಿದಮಿತ್ಯಬ್ರವೀದ್ ವಚಃ ॥೧೮॥

ವಿಶ್ವಾಮಿತ್ರರು ಗರುಡನಿಂದ ಕೂಡಿದ ಗಾಲವರನ್ನೂ ಆ ಸುಂದರಿಯಾದ ಕನ್ಯೆಯನ್ನೂ ನೋಡಿ ಹೀಗೆ ಮಾತನಾಡಿದರು.

ಕಿಮಿಯಂ ಪೂರ್ವಮೇವೇಹ ನ ದತ್ತಾ ಮಮ ಗಾಲವ ।
ಪುತ್ರಾ ಮಮೈವ ಚತ್ವಾರೋ ಭವೇರನ್ ಕುಲಭಾವನಾಃ ॥೧೯॥

ಎಲೈ ಗಾಲವನೇ, ನೀನು ಮೊದಲೇ ಈ ವಿಷಯವನ್ನು ನನಗೆ ಏಕೆ ಹೇಳಲಿಲ್ಲ? ಹೇಳಿದ್ದರೆ ನನಗೇ ಕುಲಭಾವಕರಾದ ನಾಲ್ಕು ಮಕ್ಕಳು ಇರುತ್ತಿದ್ದರು.

ಪ್ರತಿಗೃಹ್ಣಾಮಿ ತೇ ಕನ್ಯಾಮೇಕಪುತ್ರಫಲಾಯ ವೈ ।
ಅಶ್ವಾಶ್ಚಾಶ್ರಮಮಾಸಾದ್ಯ ತಿಷ್ಠಂತು ಮಮ ಸರ್ವಶಃ ॥೨೦॥

ಒಬ್ಬ ಪುತ್ರನನ್ನು ಪಡೆಯುವುದಕ್ಕಾಗಿ ನಿನ್ನ ಕನ್ಯೆಯನ್ನು ಸ್ವೀಕರಿಸುತ್ತೇನೆ. ಎಲ್ಲಾ ಅಶ್ವಗಳು ನನ್ನ ಆಶ್ರಮದಲ್ಲಿರಲಿ.

ಸ ತಯಾ ರಮಮಾಣೋಽಥ ವಿಶ್ವಾಮಿತ್ರೋ ಮಹಾದ್ಯುತಿಃ ।
ಆತ್ಮಜಂ ಜನಯಾಮಾಸ ಮಾಧವೀಪುತ್ರಮಷ್ಟಕಮ್ ॥೨೧॥

ಮಹರ್ಷಿಗಳಾದ ವಿಶ್ವಾಮಿತ್ರರು ಅವಳ ಜೊತೆಯಲ್ಲಿ ವಿಹರಿಸುತ್ತಾ ಅವಳಲ್ಲಿ ಅಷ್ಟಕನೆಂಬ ತಮ್ಮ ಪುತ್ರನನ್ನು ಪಡೆದರು.

ಜಾತಮಾತ್ರಂ ಸುತಂ ತಂ ಚ ವಿಶ್ವಾಮಿತ್ರೋ ಮಹಾಮುನಿಃ ।
ಸಂಯೋಜ್ಯಾರ್ಥೈಸ್ತಥಾ ಧರ್ಮೈರಶ್ವೈಸ್ಚ ಸಮಯೋಜಯತ್ ॥೨೨॥

ಪುತ್ರನು ಹುಟ್ಟಿದ ಕೂಡಲೇ ಮಹಾಮುನಿಗಳಾದ ವಿಶ್ವಾಮಿತ್ರರು ಅವನನ್ನು ಅರ್ಥಗಳಿಂದಲೂ, ಧರ್ಮಗಳಿಂದಲೂ ಮತ್ತು ಆ ಅಶ್ವಗಳಿಂದಲೂ ಸಂಯುಕ್ತನಾಗಿರುವಂತೆ ಮಾಡಿದರು.

ಅಥಾಷ್ಟಕಃ ಪುರಂ ಪ್ರಾಯಾತ್ ತದಾ ಸೋಮಪುರಪ್ರಭಮ್ ।
ನಿರ್ಯಾತ್ಯ ಕನ್ಯಾಂ ಶಿಷ್ಯಾಯ ಕೌಶಿಕೋಽಪಿ ವನಂ ಯಯೌ ॥೨೩॥

ಅನಂತರ ಅಷ್ಟಕನು ಇಂದ್ರನ ಪಟ್ಟಣದಂತಿದ್ದ ತನ್ನ ಪಟ್ಟಣಕ್ಕೆ ಹೋದನು. ವಿಶ್ವಾಮಿತ್ರರೂ ಸಹ ಕನ್ಯೆಯನ್ನು ಶಿಷ್ಯನಿಗೆ ಹಿಂದಿರುಗಿಸಿ ಕಾಡಿಗೆ ಹೋದರು.

ಗಾಲವೋಽಪಿ ಸುಪರ್ಣೇನ ಸಹ ನಿರ್ಯಾತ್ಯ ದಕ್ಷಿಣಾಮ್ ।
ಮನಸಾಽಭಿಪ್ರಣೀತೇನ ಕನ್ಯಾಮಿದಮುವಾಚ ಹ ॥೨೪॥

ಗಾಲವರೂ ಸಹ ಗರುಡನ ಜೊತೆಯಲ್ಲಿ ಮನಸ್ಸಿನಲ್ಲಿ ಸಂಕಲ್ಪಿಸಿದ್ದ ಗುರುದಕ್ಷಿಣೆಯನ್ನು ಕೊಟ್ಟು ಆ ಕನ್ಯೆಯನ್ನು ಕುರಿತು ಹೀಗೆ ಹೇಳಿದರು.

ಜಾತೋ ದಾನಪತಿಃ ಪುತ್ರಃ ತ್ವಯಾ ಶೂರಸ್ತಥಾಽಪರಃ ।
ಸತ್ಯಧರ್ಮರತಶ್ಚಾನ್ಯೋ ಯಜ್ವಾ ಚಾಪಿ ತಥಾಽಪರಃ ॥೨೫॥

ನಿನಗೆ ದಾನಪತಿಯಾದ ಒಬ್ಬ ಪುತ್ರನೂ, ಶೂರನಾದ ಇನ್ನೊಬ್ಬ ಪುತ್ರನೂ, ಸತ್ಯಧರ್ಮರತನಾದ ಇನ್ನೊಬ್ಬ ಪುತ್ರನೂ ಮತ್ತು ಯಾಗವನ್ನು ಮಾಡುವ ಇನ್ನೊಬ್ಬ ಪುತ್ರನೂ ಜನಿಸಿದ್ದಾರೆ.

ತದಾಗಚ್ಛ ವರಾರೋಹೇ ತಾರಿತಸ್ತೇ ಪಿತಾ ಸುತೈಃ ।
ಚತ್ವಾರಶ್ಚೈವ ರಾಜಾನಃ ತಥಾऽಹಂ ಚ ಸುಮಧ್ಯಮೇ ॥೨೬॥

ಆದ್ದರಿಂದ ಸುಂದರಿಯೇ ಬಾ, ನಿನ್ನ ಮಕ್ಕಳಿಂದ ನಿನ್ನ ತಂದೆಯು ಸಂಕಟದಿಂದ ದಾಟಿಸಲ್ಪಟ್ಟಿದ್ದಾನೆ. ಹಾಗೆಯೇ ಸುಂದರಿಯೇ, ನಾಲ್ಕುಜನ ರಾಜರೂ ಮತ್ತು ನಾನೂ ಸಹ ಪಾರುಮಾಡಲ್ಪಟ್ಟಿದ್ದೇವೆ.

ವೈಶಂಪಾಯನಃ

ನಾರದಸ್ಯ ತು ತದ್ವಾಕ್ಯಂ ಶ್ರುತ್ವಾ ಸರ್ವೇ ಸಭಾಸದಃ ।
ಪೂಜಯಾಮಾಸುರತ್ಯರ್ಥಂ ಸರ್ವಜ್ಞಂ ನಾರದಂ ತದಾ ॥೨೭॥

ವೈಶಂಪಾಯನ– ನಾರದರ ಆ ಮಾತುಗಳನ್ನು ಕೇಳಿದ ಎಲ್ಲಾ ಸಭಾಸದರು ಆಗ ಸರ್ವಜ್ಞರಾದ ನಾರದರನ್ನು ಬಹಳವಾಗಿ ಪೂಜಿಸಿದರು.

ನಾರದಃ

ಗಾಲವಸ್ತ್ವಭ್ಯನುಜ್ಞಾಯ ಸುಪರ್ಣಂ ಪನ್ನಗಾಶನಮ್ ।
ಪಿತುರ್ನಿರ್ಯಾತ್ಯ ತಾಂ ಕನ್ಯಾಂ ಪ್ರಯಯೌ ವನಮೇವ ಹ ॥೨೮॥

ನಾರದ– ಗಾಲವರಾದರೂ ಸರ್ಪಭೋಜನನಾದ ಗರುಡನ ಅನುಮತಿಯನ್ನು ಪಡೆದು, ಆ ಕನ್ಯೆಯನ್ನು ತಂದೆಯಾದ ಯಯಾತಿಗೆ ಹಿಂದಿರುಗಿಸಿ ಕಾಡಿಗೇ ಹೊರಟು ಹೋದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಅಷ್ಟಾದಶೋತ್ತರಶತತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಏಕೋನಪಂಚಾಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಹದಿನೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಹತ್ತೊಂಬತ್ತನೆಯ ಅಧ್ಯಾಯ

ಸ್ವಯಂವರದಲ್ಲಿ ಎಲ್ಲ ವರರನ್ನೂ ಮೀರಿ ಮಾಧವಿಯಿಂದ
ವನದ ವರಣ, ತಪೋನುಷ್ಠಾನ.
ಸ್ವರ್ಗಸ್ಥನಾದ ಯಯಾತಿಯಿಂದ ಋಷಿಗಳ ಅವಮಾನ.

ನಾರದಃ

ಸ ತು ರಾಜಾ ಪುನಸ್ತಸ್ಯಾಃ ಕರ್ತುಕಾಮಃ ಸ್ವಯಂವರಮ್ ।
ಉಪಗಮ್ಯಾಶ್ರಮಪದಂ ಗಂಗಾಯಾಮುನಸಂಗಮೇ ॥೧॥

ಗೃಹೀತಮಾಲ್ಯದಾಮಾಂ ತಾಂ ರಥಮಾರೋಪ್ಯ ಮಾಧವೀಮ್ ।
ಪುರುರ್ಯದುಶ್ಚ ಭಗಿನೀಮ್ ಆಶ್ರಮೇ ಪರ್ಯಧಾವತಾಮ್ ॥೨॥

ನಾರದ– ಆ ರಾಜನು ಪುನಃ ಅವಳ ಸ್ವಯಂವರವನ್ನು ಮಾಡಲು ಉದ್ದೇಶಿಸಿ ಗಂಗಾ-ಯಮುನಾ ಸಂಗಮದಲ್ಲಿ ಒಂದು ಆಶ್ರಮಕ್ಕೆ ಬಂದು ಸ್ವಯಂವರ ಮಾಲೆಯನ್ನು ಹಿಡಿದಿದ್ದ ಆ ಮಾಧವಿಯನ್ನು ರಥದಲ್ಲಿ ಕೂಡಿಸಿದನು. ಯಯಾತಿಯ ಮಕ್ಕಳಾದ ಪುರು ಮತ್ತು ಯದು ಇವರು ತಮ್ಮ ಸಹೋದರಿಯನ್ನು ಆಶ್ರಮದಲ್ಲಿ ತಿರುಗಾಡಿಸಿದರು.

ನಾಗಯಕ್ಷಮನುಷ್ಯಾಣಾಂ ಪತತ್ರಿಮೃಗಪಕ್ಷಿಣಾಮ್ ।
ಶೈಲದ್ರುಮವನೌಕಾನಾಮಾಸೀತ್ ತತ್ರ ಸಮಾಗಮಃ ॥೩॥

ನಾಗಯಕ್ಷಮನುಷ್ಯರು, ಮೃಗಪಕ್ಷಿಗಳು, ಶೈಲದ್ರುಮಗಳು, ವನವಾಸಿಗಳು ಎಲ್ಲರೂ ಅಲ್ಲಿ ನೆರೆದಿದ್ದರು.

ನಾನಾಪುರುಷದೇಶ್ಯಾನಾಮೀಶ್ವರೈಶ್ಚ ಸಮಾಕುಲಮ್ ।
ಋಷಿಭಿಶ್ಚ ಮಹಾಭಾಗೈಃ ಸಮಂತಾದಾವೃತಂ ವನಮ್ ॥೪॥

ಅನೇಕ ದೇಶದ ರಾಜರೂ, ಮಹಾನುಭಾವರಾದ ಋಷಿಗಳೂ ಆ ವನದಲ್ಲಿ ಎಲ್ಲ ಕಡೆಗಳಲ್ಲಿಯೂ ತುಂಬಿಹೋಗಿದ್ದರು.

ನಿರ್ದಿಶ್ಯಮಾನೇಷು ತು ಸಾ ವರೇಷು ವರವರ್ಣಿನೀ ।
ವರಾನುತ್ಸೃಜ್ಯ ಸರ್ವಾಂಸ್ತಾನ್ ವರಂ ವೃತವತೀ ವನಮ್ ॥೫॥

ವರರ ಹೆಸರುಗಳನ್ನು ಹೇಳುತ್ತಿರಲು ಸುಂದರಿಯಾದ ಅವಳು ಬಂದಿದ್ದ ವರರೆಲ್ಲರನ್ನೂ ತಿರಸ್ಕರಿಸಿ ವನವನ್ನೇ ತನ್ನ ಪತಿಯಾಗಿ ವರಿಸಿದಳು.

ಅವತೀರ್ಯ ರಥಾತ್ ಕನ್ಯಾ ನಮಸೃತ್ಯ ಚ ಬಂಧುಷು ।
ಉಪಗಮ್ಯ ವನಂ ಪುಣ್ಯಂ ತಪಸ್ತೇಪೇ ಯಯಾತಿಜಾ ॥೬॥

ಯಯಾತಿಯ ಮಗಳಾದ ಆ ಕನ್ಯೆಯು ರಥದಿಂದ ಇಳಿದು ಬಂಧುಗಳಿಗೆ ನಮಸ್ಕರಿಸಿ ಪವಿತ್ರವಾದ ವನವನ್ನು ಸೇರಿ ತಪಸ್ಸನ್ನು ಮಾಡಿದಳು.

ಉಪವಾಸೈಶ್ಚ ವಿವಿಧೈಃ ದೀಕ್ಷಾಭಿರ್ನಿಯಮೈಸ್ತಥಾ ।
ಆತ್ಮನೋ ಲಘುತಾಂ ಕೃತ್ವಾ ಬಭೂವ ಮೃಗಚಾರಿಣೀ ॥೭॥

ವಿವಿಧವಾದ ಉಪವಾಸಗಳಿಂದಲೂ, ದೀಕ್ಷೆಗಳಿಂದಲೂ ಮತ್ತು ನಿಯಮಗಳಿಂದಲೂ ಶರೀರವನ್ನು ಕೃಶವನ್ನಾಗಿ ಮಾಡಿ ಅವಳು ಮೃಗಚಾರಿಣಿಯಾದಳು.

ವೈಡೂರ್ಯಾಂಕುರಕಲ್ಪಾನಿ ಮೃದೂನಿ ಹರಿತಾನಿ ಚ ।
ಚರಂತೀ ಶ್ಲಕ್ಷ್ಣಶಷ್ಪಾಣಿ ತಿಕ್ತಾನಿ ಮಧುರಾಣಿ ಚ ॥೮॥

ಸ್ರವಂತೀನಾಂ ಚ ಪುಣ್ಯಾನಾಂ ಸುರಸಾನಿ ಶುಚೀನಿ ಚ ।
ಪಿಬಂತೀ ವಾರಿಮುಖ್ಯಾನಿ ಶೀತಾನಿ ವಿಮಲಾನಿ ಚ ॥೯॥

ವನೇಷ್ವಮೃತಕಲ್ಪೇಷು ಸಿಂಹವಿಪ್ರೋಷಿತೇಷು ಚ ।
ದವಾಗ್ನಿವಿಪ್ರಮುಕ್ತೇಷು ಶೂನ್ಯೇಷು ಗಹನೇಷು ಚ ॥೧೦॥

ಚರಂತೀ ಹರಿಣೈಃ ಸಾರ್ಧಂ ಮೃಗೀವ ವನಚಾರಿಣೀ ।
ಚಚಾರ ವಿಪುಲಂ ಧರ್ಮಂ ಬ್ರಹ್ಮಚರ್ಯೇಣ ಸಂವೃತಾ ॥೧೧॥

ವೈಡೂರ್ಯದ ಕುಡಿಗಳಂತಿರುವ ಮೃದುವಾದ, ಕಹಿಯಾದ ಮತ್ತು ಸಿಹಿಯಾದ, ಹಸಿರು ಬಣ್ಣದ ಎಳೆಯ ಹುಲ್ಲುಗರಿಕೆಗಳನ್ನು ತಿನ್ನುತ್ತಾ ಪುಣ್ಯನದಿಗಳ ಶುಚಿಯಾದ, ಮಧುರವಾದ, ಸ್ವಚ್ಛವಾದ, ಶೀತವಾದ ಶ್ರೇಷ್ಠಜಲಗಳನ್ನು ಪಾನ ಮಾಡುತ್ತಾ; ದಾವಾಗ್ನಿ ಇಲ್ಲದಿರುವ ಏಕಾಂತವಾದ ಮತ್ತು ದಟ್ಟವಾದ ಅಮೃತದಂತಿರುವ ಕಂದ-ಮೂಲ

ಫಲಗಳನ್ನು ಕೊಡುವ, ಸಿಂಹಾದಿಗಳು ಇಲ್ಲದಿರುವ ಕಾಡಿನಲ್ಲಿ ಜಿಂಕೆಗಳ ಜೊತೆಯಲ್ಲಿ ಜಿಂಕೆಯಂತೆಯೇ ಸಂಚರಿಸುತ್ತಾ ಬ್ರಹ್ಮಚರ್ಯದಿಂದ ಕೂಡಿದವಳಾಗಿ ವಿಪುಲವಾದ ಧರ್ಮವನ್ನು ಆಚರಿಸಿದಳು.

ಯಯಾತಿರಪಿ ಪೂರ್ವೇಷಾಂ ರಾಜ್ಞಾಂ ವೃತ್ತಮನುಷ್ಠಿತಃ ।
ಬಹುವರ್ಷಸಾಹಸ್ರಾಯುಃ ಯುಯುಜೇ ಕಾಲಧರ್ಮಣಾ ॥೧೨॥

ಯಯಾತಿಯೂ ಕೂಡ ಹಿಂದಿನ ರಾಜರ ನಡತೆಯನ್ನೇ ಅನುಸರಿಸುವವನಾಗಿ ಅನೇಕ ಸಹಸ್ರವರ್ಷಗಳ ಕಾಲ ಆಯುಸ್ಸನ್ನು ಹೊಂದಿ ಕೊನೆಗೆ ಕಾಲವಶನಾದನು.

ಪೂರುರ್ಯದುಶ್ಚ ದ್ವೌ ವಂಶೇ ವರ್ಧಮಾನೌ ನರೋತ್ತಮೌ ।
ತಾಭ್ಯಾಂ ಪ್ರತಿಷ್ಠಿತೋ ಲೋಕೋ ಪರಲೋಕೇ ಚ ನಾಹುಷಃ ॥೧೩॥

ಪೂರು ಮತ್ತು ಯದು ಇಬ್ಬರು ಆ ವಂಶದಲ್ಲಿ ಪ್ರವರ್ಧಮಾನವಾದ ರಾಜರು. ಅವರಿಂದ ಈ ಲೋಕವೂ ಪ್ರತಿಷ್ಠಿತವಾಯಿತು ಮತ್ತು ಪರಲೋಕದಲ್ಲಿ ಯಯಾತಿಯೂ ಪ್ರತಿಷ್ಠಿತನಾದನು.

ನ ಹೀಯತೇ ನರಪತಿಃ ಯಯಾತಿಃ ಸ್ವರ್ಗಮಾಸ್ಥಿತಃ ।
ಮಹರ್ಷಿಕಲ್ಪೋ ನೃಪತಿಃ ಸ್ವರ್ಗಾಗ್ರ್ಯಫಲಭುಗ್ ವಿಭುಃ ॥೧೪॥

ಸ್ವರ್ಗದ ಶ್ರೇಷ್ಠ ಫಲಗಳನ್ನು ಅನುಭವಿಸಿ ಮಹರ್ಷಿಸದೃಶನಾದ, ವಿಭುವಾದ, ರಾಜನಾದ ಯಯಾತಿಯು ಸ್ವರ್ಗದಲ್ಲಿ ಇರುವವನಾಗಿ ಯಾವ ಭೋಗದಿಂದಲೂ ರಹಿತನಾಗಲಿಲ್ಲ.

ಅಥ ವರ್ಷಸಹಸ್ರಾಂತೇ ಕಾಲೇ ಬಹುಗುಣೇ ಗತೇ ।
ರಾಜರ್ಷಿಷು ನಿಷಣ್ಣೇಷು ಮಹೀಯಸ್ಸು ಮಹರ್ಧಿಷು ॥೧೫॥

ಅವಮೇನೇ ನರಾನ್ ಸರ್ವಾನ್ ದೇವಾನ್ ಋಷಿಗಣಾಂಸ್ತಥಾ ।
ಯಯಾತಿರ್ಮೂಢವಿಜ್ಞಾನೋ ವಿಸ್ಮಯಾವಿಷ್ಟಚೇತನಃ ॥೧೬॥

ಅನಂತರ ಹೀಗೆ ಬಹುಗುಣವುಳ್ಳ ಒಂದು ಸಹಸ್ರ ವರ್ಷದ ಕಾಲವು ಕಳೆಯುತ್ತಿರಲು ಮಹಾಸಂಪತ್ತನ್ನು ಹೊಂದಿದ ಮಹಾನುಭಾವರಾದ ರಾಜರ್ಷಿಗಳು ಕುಳಿತಿರುವಾಗ

ಮೌಢ್ಯದಿಂದ ಮತ್ತು ವಿಸ್ಮಯಾವಿಷ್ಟ ಮನಸ್ಸಿನಿಂದ ಕೂಡಿದ ಯಯಾತಿಯು ಎಲ್ಲ ಮನುಷ್ಯರನ್ನೂ, ಋಷಿಗಳನ್ನೂ ಮತ್ತು ದೇವತೆಗಳನ್ನೂ ಅವಮಾನಗೊಳಿಸಿದನು.

ತತಸ್ತಂ ಬುಬುಧೇ ದೇವಃ ಶಕ್ರೋ ಬಲನಿಷೂದನಃ ।
ತೇ ಚ ರಾಜರ್ಷಯಃ ಸರ್ವೇ ಧಿಗ್‌ಧಿಗಿತ್ಯೇವಮಬ್ರುವನ್ ॥೧೭॥

ಆಗ ಬಲನಿಷೂದನನಾದ ದೇವೇಂದ್ರನು ಅದನ್ನು ತಿಳಿದನು. ಆ ರಾಜರ್ಷಿಗಳೆಲ್ಲರೂ ಅವನಿಗೆ ಧಿಕ್ಕಾರವನ್ನು ಮಾಡಿದರು.

ವಿಚಾರಶ್ಚ ಸಮುತ್ಪನ್ನೋ ನಿರೀಕ್ಷ್ಯ ನಹುಷಾತ್ಮಜಮ್ ॥೧೮॥

ಕೋನ್ವಯಂ ಕಸ್ಯ ವಾ ರಾಜ್ಞಃ ಕಥಂ ವಾ ಸ್ವರ್ಗಮಾಗತಃ ।
ಕರ್ಮಣಾ ಕೇನ ಸಿದ್ಧೋಽಯಂ ಕ್ವ ವಾಽನೇನ ತಪಶ್ಚಿತಮ್ ॥೧೯॥

ನಹುಷ ಪುತ್ರನಾದ ಯಯಾತಿಯನ್ನು ನೋಡಿ ಇವನು ಯಾರು? ಯಾವ ರಾಜನ ಪುತ್ರ ? ಹೇಗೆ ಸ್ವರ್ಗಕ್ಕೆ ಬಂದ? ಯಾವ ಕರ್ಮದಿಂದ ಸಿದ್ಧಿಯನ್ನು ಪಡೆದಿದ್ದಾನೆ? ಇವನು ಎಲ್ಲಿ ತಪಸ್ಸನ್ನು ಮಾಡಿದನು? ಎಂಬ ವಿಚಾರವು ಉಂಟಾಯಿತು.

ಏವಂ ವಿಚಾರಯಂತಸ್ತೇ ರಾಜಾನಂ ಸ್ವರ್ಗವಾಸಿನಃ ।
ದೃಷ್ಟ್ವಾ ಪಪ್ರಚ್ಛುರನ್ಯೋನ್ಯಂ ಯಯಾತಿಂ ನೃಪತಿಂ ಪ್ರತಿ ॥೨೦॥

ಹೀಗೆ ಸ್ವರ್ಗವಾಸಿಗಳು ಯಯಾತಿಯನ್ನು ನೋಡಿ, ರಾಜನ ವಿಷಯದಲ್ಲಿ ವಿಚಾರವನ್ನು ಮಾಡುತ್ತಾ ಪರಸ್ಪರವಾಗಿ ಪ್ರಶ್ನೆಯನ್ನು ಮಾಡಿದರು.

ವಿಮಾನಪಾಲಾಃ ಶತಶಃ ಸ್ವರ್ಗದ್ವಾರಾಭಿರಕ್ಷಿಣಃ ।
ಪೃಷ್ಟಾ ಆಸನಪಾಲಾಶ್ಚ ನ ಜಾನೀಮ ಇತಿ ಬ್ರುವನ್ ॥೨೧॥

ವಿಮಾನಪಾಲಕರನ್ನೂ ಸ್ವರ್ಗದ್ವಾರವನ್ನು ಕಾಯುವ ನೂರಾರು ದೂತರನ್ನೂ, ಆಸನವನ್ನು ಪಾಲನೆ ಮಾಡುವವರನ್ನೂ ಕೇಳಿದಾಗ ನಮಗೆ ತಿಳಿದಿಲ್ಲ ಎಂದು ಹೇಳಿದರು.

ಸರ್ವೇ ತೇ ಹ್ಯಾವೃತಜ್ಞಾನಾ ನಾಭ್ಯಜಾನಂತ ತಂ ನೃಪಮ್ ।
ಸ ಮುಹೂರ್ತಾದಥ ನೃಪೋ ಹತೌಜಾಶ್ಚಾಭವತ್ ತದಾ ॥೨೨॥

ಅವರೆಲ್ಲರ ಜ್ಞಾನವು ಆವೃತವಾಗಿರಲು ಅವರು ಯಾರೂ ಯಯಾತಿಯನ್ನು ತಿಳಿಯಲಿಲ್ಲ. ಆಗ ರಾಜನಾದ ಯಯಾತಿಯು ಒಂದು ಮುಹೂರ್ತದಲ್ಲಿ ತನ್ನ ಕಾಂತಿ, ಸಾಮರ್ಥ್ಯಗಳನ್ನು ಕಳೆದುಕೊಂಡನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಉದ್ಯೋಗಪರ್ವಣಿ ಏಕೋನವಿಂಶೋತ್ತರಶತತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಹತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತನೆಯ ಅಧ್ಯಾಯ

ಸ್ವರ್ಗದಿಂದ ಯಯಾತಿಯ ಪತನ. ದೌಹಿತ್ರಪ್ರಭಾವದಿಂದ ಮತ್ತು ಮಾಧವಿಯ ತಪಸ್ಸಿನ ಪ್ರಭಾವದಿಂದ ಪುನಃ ಸ್ವರ್ಗಾರೋಹಣ.

ನಾರದಃ

ಅಥ ಪ್ರಚಲಿತಃ ಸ್ಥಾನಾದ್ ಆಸನಾಚ್ಚ ಪರಿಚ್ಯುತಃ ।
ಕಂಪಿತೇನೈವ ಮನಸಾ ಧರ್ಷಿತಃ ಶೋಕವಹ್ನಿನಾ ॥೧॥

ನಾರದ– ಆಗ ಯಯಾತಿಯು ತನ್ನ ಆಸನದಿಂದ ಚ್ಯುತನಾಗಿ ತನ್ನ ಸ್ಥಾನದಿಂದ ಭ್ರಷ್ಟನಾಗಿ ನಡುಗುತ್ತಿರುವ ಮನಸ್ಸಿನಿಂದ ಶೋಕಾಗ್ನಿಯಿಂದ ಪೀಡಿಸಲ್ಪಟ್ಟು ಅವಮಾನವನ್ನು ಹೊಂದಿದನು.

ಮ್ಲಾನಸ್ರಗ್ ಭ್ರಷ್ಟವಿಜ್ಞಾನಃ ಪ್ರಭ್ರಷ್ಟಮಕುಟಾಂಗದಃ ।
ವಿಘೂರ್ಣಸ್ರಸ್ತಸರ್ವಾಂಗಃ ಪ್ರಭ್ರಷ್ಟಾಭರಣಾಂಬರಃ ॥೨॥

ಅದೃಶ್ಯಮಾನಸ್ತಾನ್ ಪಶ್ಯನ್ ಅಪಶ್ಯಂಶ್ಚ ಪುನಃ ಪುನಃ ।
ಶೂನ್ಯಃ ಶೂನ್ಯೇನ ಮನಸಾ ಪ್ರಾಪತತ್ ಸ ಮಹೀತಳಮ್ ॥೩॥

ಬಾಡಿದ ಮಾಲೆಯುಳ್ಳವನಾಗಿ, ತನ್ನ ಜ್ಞಾನವನ್ನು ಕಳೆದುಕೊಂಡು, ತನ್ನ ಕಿರೀಟ ಅಂಗದಗಳನ್ನು ಕಳೆದುಕೊಂಡು, ಶಿಥಿಲವಾದ ಎಲ್ಲಾ ಅವಯವವುಳ್ಳವನಾಗಿ, ತನ್ನ

ವಸ್ತ್ರಾಭರಣಗಳನ್ನೂ ಕಳೆದುಕೊಂಡು, ಸ್ವರ್ಗವಾಸಿಗಳನ್ನು ಒಮ್ಮೆ ನೋಡುತ್ತಾ, ಒಮ್ಮೊಮ್ಮೆ ನೋಡಲು ಸಾಧ್ಯವಾಗದೆ, ಅವರ ದೃಷ್ಟಿಗೆ ಗೋಚರನಾಗದೆ ಎಲ್ಲವನ್ನೂ ಕಳೆದುಕೊಂಡು ಶೂನ್ಯವಾದ ಮನಸ್ಸಿನಿಂದ ಭೂಮಿಯ ಮೇಲೆ ಬಿದ್ದನು.

ಕಿಂ ಮಯಾ ಮನಸಾ ಧ್ಯಾತಮಶುಭಂ ಸ್ವರ್ಗದೂಷಣಮ್ ।
ಯೇನಾಹಂ ಚಾಲಿತಃ ಸ್ಥಾನಾದಿತಿ ರಾಜಾ ವ್ಯಚಿಂತಯತ್ ॥೪॥

ನಾನು ಸ್ವರ್ಗದಲ್ಲಿದ್ದ ನನ್ನ ಸ್ಥಾನದಿಂದ ಬೀಳುವಂತಹ ಸ್ವರ್ಗದೂಷಣವಾದ ಯಾವ ಕೆಟ್ಟ ವಿಷಯವನ್ನು ಮನಸ್ಸಿನಲ್ಲಿ ಯೋಚಿಸಿದೆ ಎಂದು ಆ ರಾಜನು ಚಿಂತಿಸಿದನು.

ತೇ ತು ತತ್ರೈವ ರಾಜಾನಃ ಸಿದ್ಧಾಶ್ಚಾಪ್ಸರಸಸ್ತಥಾ ।
ಅಪಶ್ಯಂತ ನಿರಾಲಂಬಂ ಯಯಾತಿಂ ಸ್ವರ್ಗತಶ್ಚ್ಯುತಮ್ ॥೫॥

ಅಲ್ಲಿದ್ದ ರಾಜರೂ, ಸಿದ್ಧರೂ ಮತ್ತು ಅಪ್ಸರೆಯರೂ ಯಾವ ಆಶ್ರಯವೂ ಇಲ್ಲದೆ ಸ್ವರ್ಗವನ್ನು ಕಳೆದುಕೊಂಡ ಯಯಾತಿಯನ್ನು ನೋಡಿದರು.

ಅಥೈತ್ಯ ಪುರುಷಃ ಕಶ್ಚಿತ್ ಕ್ಷೀಣಪುಣ್ಯಂ ನಿಪಾತಿತಮ್ ।
ಯಯಾತಿಮಬ್ರವೀದ್ ರಾಜನ್ ದೇವರಾಜಸ್ಯ ಶಾಸನಾತ್ ॥೬॥

ಅತೀವ ಮದಮತ್ತಸ್ತ್ವಂ ನ ಕಂಚಿನ್ನಾವಮನ್ಯಸೇ ।
ಮಾನೇನ ಭ್ರಷ್ಟಃ ಸ್ವರ್ಗಸ್ತೇ ನಾರ್ಹಸ್ತ್ವಂ ಪಾರ್ಥಿವಾತ್ಮಜ ॥೭॥

ನ ಚ ಪ್ರಜ್ಞಾಯಸೇ ಗಚ್ಛ ಪತಸ್ವೇತಿ ತಮಬ್ರವೀತ್ ॥೮॥

ಆಗ ಒಬ್ಬ ಪುರುಷನು ತನ್ನ ಪುಣ್ಯವನ್ನು ಕಳೆದುಕೊಂಡು ಕೆಳಗೆ ಬೀಳುವ ಯಯಾತಿಯನ್ನು ಸಮೀಪಿಸಿ ದೇವೇಂದ್ರನ ಅಪ್ಪಣೆಯಂತೆ ಅವನನ್ನು ಕುರಿತು ಎಲೈ ರಾಜನೇ, ನೀನು ಬಹಳ ಮದಮತ್ತನಾಗಿದ್ದೀಯೆ. ಯಾವೊಬ್ಬರನ್ನು ಅವಮಾನ ಮಾಡುವುದಿಲ್ಲ ಎಂದು ಇಲ್ಲ. ನಿನ್ನ ಅಹಂಕಾರದಿಂದ ನೀನು ಸ್ವರ್ಗದಿಂದ ಭ್ರಷ್ಟನಾಗಿದ್ದೀಯೆ. ಎಲೈ ರಾಜಪುತ್ರನೇ, ನೀನು ಸ್ವರ್ಗದಲ್ಲಿರಲು ಯೋಗ್ಯನಲ್ಲ. ಇಲ್ಲಿ ಯಾರೂ ನಿನ್ನನ್ನು ಗುರುತಿಸುವುದಿಲ್ಲ. ನೀನು ಹೋಗಿ ಭೂಮಿಯಲ್ಲಿ ಬೀಳು ಎಂದು ಹೇಳಿದನು.

ಪತೇಯಂ ಸತ್ಸ್ವಿತಿ ವಚಃ ತ್ರಿರುಕ್ತ್ವಾ ನಹುಷಾತ್ಮಜಃ ।
ಪತಿಷ್ಯಂಶ್ಚಿಂತಯಾಮಾಸ ಗತಿಂ ಗತಿಮತಾಂ ವರಃ ॥೯॥

ನಾನು ಸಜ್ಜನರ ಮಧ್ಯದಲ್ಲಿ ಬಿದ್ದೇನು ಎಂದು ಮೂರು ಬಾರಿ ಹೇಳಿದ ನಹುಷ ಪುತ್ರನಾದ ಯಯಾತಿಯು ಹಾಗೆ ಬೀಳುತ್ತಾ ಗತಿಯನ್ನು ಹೊಂದಿದವರಲ್ಲಿ ಶ್ರೇಷ್ಠನಾದ ಅವನು ತನ್ನ ಮುಂದಿನ ಗತಿಯನ್ನು ಚಿಂತಿಸಿದನು.

ಏತಸ್ಮಿನ್ನೇವ ಕಾಲೇ ತು ನೈಮಿಶೇ ಪಾರ್ಥಿವರ್ಷಭಾನ್ ।
ಚತುರೋಽಪಶ್ಯತ ನೃಪಃ ತೇಷಾಂ ಮಧ್ಯೇ ಪಪಾತ ಸಃ ॥೧೦॥

ಅದೇ ಕಾಲದಲ್ಲಿ ನೈಮಿಶಾರಣ್ಯದಲ್ಲಿ ನಾಲ್ಕುಜನ ರಾಜಶ್ರೇಷ್ಠರನ್ನು ನೋಡಿ ರಾಜನು ಅವರ ಮಧ್ಯದಲ್ಲಿ ಬಿದ್ದನು.

ಪ್ರತರ್ದನೋ ವಸುಮನಾಃ ಶಿಬಿರೌಶೀನರೋಽಷ್ಟಕಃ ।
ವಾಜಪೇಯೇನ ಯಜ್ಞೇನ ತರ್ಪಯಂತಿ ಸುರೇಶ್ವರಮ್ ॥೧೧॥

ಪ್ರತರ್ದನ, ವಸುಮನ, ಉಶೀನರನ ಮಗನಾದ ಶಿಬಿ ಮತ್ತು ಅಷ್ಟಕ ಇವರು ವಾಜಪೇಯ ಯಾಗದಿಂದ ದೇವೇಂದ್ರನನ್ನು ಸಂತೋಷಪಡಿಸುತ್ತಿದ್ದರು.

ತೇಷಾಮಧ್ವರಜಂ ಧೂಮಂ ಸ್ವರ್ಗದ್ವಾರಮುಪಸ್ಥಿತಮ್ ।
ಯಯಾತಿರುಪಜಿಘ್ರನ್ ವೈ ನಿಪಪಾತ ಮಹೀಂ ಪ್ರತಿ ॥೧೨॥

ಭೂಮೌ ಸ್ವರ್ಗೇ ಚ ಸಂಬದ್ಧಾಂ ನದೀಂ ಧೂಮಮಯೀಮಿವ ।
ಗಂಗಾಂ ಗಾಮಿವ ಗಚ್ಛಂತೀಮಾಲಂಬ್ಯ ಜಗತೀಪತಿಃ ॥೧೩॥

ಅವರ ಯಜ್ಞದಿಂದ ಉಂಟಾದ ಸ್ವರ್ಗದ್ವಾರದವರೆಗೆ ಹಬ್ಬಿದ ಹೋಮಧೂಮವು ಭೂಮಿಗೂ ಸ್ವರ್ಗಕ್ಕೂ ಸಂಬದ್ಧವಾಗಿ ಧೂಮಮಯವಾದ ನದಿಯಂತಿದ್ದಿತು. ಯಯಾತಿಯು ಆ ಧೂಮವನ್ನು ಆಘ್ರಾಣಿಸುತ್ತಾ ಸ್ವರ್ಗದಿಂದ ಭೂಮಿಗೆ ಹೋಗುವ ಗಂಗೆಯಂತಿರುವ ಆ ನದಿಯನ್ನು ಹಿಡಿದು ಭೂಮಿಯಲ್ಲಿ ಬಿದ್ದನು.

ಶ್ರೀಮತ್ಸ್ವವಭೃಥಾಗ್ರ್ಯೇಷು ಚತುರ್ಷು ಪ್ರಿಯಬಂಧುಷು ।
ಮಧ್ಯೇ ನಿಪತಿತೋ ರಾಜಾ ಲೋಕಪಾಲೋಪಮೇಷು ಸಃ ॥೧೪॥

ಕಾಂತಿಯುಕ್ತರಾದ ಶ್ರೇಷ್ಠವಾದ, ಅವಭೃಥಸ್ನಾನವನ್ನು ಮಾಡಿದ, ಲೋಕಪಾಲಕನನ್ನು ಹೋಲುವ, ಪ್ರಿಯಬಂಧುಗಳಾದ ನಾಲ್ವರ ಮಧ್ಯದಲ್ಲಿ ರಾಜನು ಬಿದ್ದನು.

ಚತುರ್ಷು ಹುತಕಲ್ಪೇಷು ರಾಜಸಿಂಹಮಹಾಗ್ನಿಷು ।
ಪಪಾತ ಮಧ್ಯೇ ರಾಜರ್ಷಿಃ ಯಯಾತಿಃ ಪುಣ್ಯಸಂಕ್ಷಯೇ ॥೧೫॥

ಹುತಪ್ರಾಯವಾದ ನಾಲ್ಕು ರಾಜಸಿಂಹಾಗ್ನಿಗಳ ಮಧ್ಯದಲ್ಲಿ ರಾಜರ್ಷಿಯಾದ ಯಯಾತಿಯು ಪುಣ್ಯವನ್ನು ಕಳೆದುಕೊಂಡು ಬಿದ್ದನು.

ತಮಾಹುಃ ಪಾರ್ಥಿವಾಃ ಸರ್ವೇ ದೀಪ್ಯಮಾನಮಿವ ಶ್ರಿಯಾ ॥೧೬॥

ಕೋ ಭವಾನ್ ಕಸ್ಯ ವಾ ಬಂಧುಃ ದೇಶಸ್ಯ ನಗರಸ್ಯ ವಾ ।
ಯಕ್ಷೋ ವಾऽಪ್ಯಥವಾ ದೇವೋ ಗಂಧರ್ವೋ ರಾಕ್ಷಸೋऽಪಿ ವಾ ॥
ನ ಹಿ ಮಾನುಷರೂಪೋऽಸಿ ಕೋ ವಾऽರ್ಥಃ ಕಾಂಕ್ಷಿತಸ್ತ್ವಯಾ ॥೧೮॥

ಕಾಂತಿಯಿಂದ ಬೆಳಗುತ್ತಿದ್ದ ಅವನನ್ನು ಕಂಡು ಆ ರಾಜರು ನೀನು ಯಾರು? ಯಾರ ಬಂಧು? ಯಾವ ದೇಶ ಅಥವಾ ನಗರಕ್ಕೆ ಸೇರಿದವನು? ನೀನು ಯಕ್ಷನೋ? ಅಥವಾ ದೇವತೆಯೋ? ಅಥವಾ ಗಂಧರ್ವನೋ? ಅಥವಾ ರಾಕ್ಷಸನೋ? ನೀನು ಮನುಷ್ಯರ ರೂಪವನ್ನು ಹೊಂದಿಲ್ಲ. ನೀನು ಏನನ್ನು ಬಯಸುತ್ತೀಯೇ? ಎಂದು ಕೇಳಿದರು.

ಯಯಾತಿಃ

ಯಯಾತಿರಸ್ಮಿ ರಾಜರ್ಷಿಃ ಕ್ಷೀಣಪುಣ್ಯಶ್ಚ್ಯುತೋ ದಿವಃ ।
ಪತೇಯಂ ಸತ್ಸ್ವಿತಿ ಧ್ಯಾಯನ್ ಭವತ್ಸು ಪತಿತಸ್ತತಃ ॥೧೯॥

ಯಯಾತಿ– ನಾನು ರಾಜರ್ಷಿಯಾದ ಯಯಾತಿ. ಪುಣ್ಯವನ್ನು ಕಳೆದುಕೊಂಡು ಸ್ವರ್ಗದಿಂದ ಬಿದ್ದಿದ್ದೇನೆ. ಸಜ್ಜನರ ಮಧ್ಯದಲ್ಲಿ ಬೀಳಬೇಕು ಎಂದು ಯೋಚಿಸುತ್ತಾ ನಿಮ್ಮ ಮಧ್ಯದಲ್ಲಿ ಬಿದ್ದಿದ್ದೇನೆ.

ರಾಜಾನಃ

ಸತ್ಯಮೇತದ್ ಭವತು ತೇ ಕಾಂಕ್ಷಿತಂ ಪುರುಷರ್ಷಭ ।
ಸರ್ವೇಷಾಂ ನಃ ಕ್ರತುಫಲಂ ಧರ್ಮಶ್ಚ ಪ್ರತಿಗೃಹ್ಯತಾಮ್ ॥೨೦॥

ರಾಜರು– ಎಲೈ ಪುರುಷಶ್ರೇಷ್ಠನೇ, ನಿನ್ನ ಆಸೆಯು ಸತ್ಯವಾಗಲಿ. ನಮ್ಮೆಲ್ಲರ ಯಾಗದ ಫಲವಾದ ಪುಣ್ಯವನ್ನೂ ಮತ್ತು ಧರ್ಮವನ್ನೂ ಸ್ವೀಕರಿಸು.

ಯಯಾತಿಃ

ನಾಹಂ ಪ್ರತಿಗ್ರಹಧನೋ ಬ್ರಾಹ್ಮಣಃ ಕ್ಷತ್ರಿಯೋ ಹ್ಯಹಮ್ ।
ನ ಚ ಮೇ ಪ್ರವಣಾ ಬುದ್ಧಿಃ ಪರಪುಣ್ಯವಿನಾಶನೇ ॥೨೧॥

ಯಯಾತಿ– ನಾನು ಪ್ರತಿಗ್ರಹವನ್ನು ಮಾಡಿ ಧನವನ್ನು ಸಂಪಾದಿಸುವ ಬ್ರಾಹ್ಮಣನಲ್ಲ. ನಾನು ಕ್ಷತ್ರಿಯ. ನನಗೆ ಇನ್ನೊಬ್ಬರ ಪುಣ್ಯವನ್ನು ನಾಶ ಮಾಡುವುದರಲ್ಲಿ ಮನಸ್ಸಿಲ್ಲ.

ನಾರದಃ

ಏತಸ್ಮಿನ್ನೇವ ಕಾಲೇ ತು ಮೃಗಚರ್ಯಾಕ್ರಮಾಗತಾಮ್ ।
ಮಾಧವೀಂ ಪ್ರೇಕ್ಷ್ಯ ರಾಜಾನಸ್ತ್ವಭಿವಾದ್ಯೇದಮಬ್ರುವನ್ ॥೨೨॥

ಕಿಮಾಗಮನಕೃತ್ಯಂ ತೇ ಕಿಂ ಕುರ್ಮಃ ಶಾಸನಂ ತವ ।
ಆಜ್ಞಾಪ್ಯಾ ಹಿ ವಯಂ ಸರ್ವೇ ತವ ಪುತ್ರಾಸ್ತಪೋಧನೇ ॥೨೩॥

ನಾರದ– ಅದೇ ಕಾಲಕ್ಕೆ ಸರಿಯಾಗಿ ಮೃಗಚರ್ಯಾಕ್ರಮದಿಂದ ಅಲ್ಲಿಗೆ ಬಂದ ಮಾಧವಿಯನ್ನು ನೋಡಿ ಆ ರಾಜರು ಅವಳಿಗೆ ನಮಸ್ಕಾರವನ್ನು ಮಾಡಿ ತಪೋಧನಳಾದವಳೇ, ಇಲ್ಲಿಗೆ ನೀನು ಬಂದ ಉದ್ದೇಶವೇನು? ನಿನ್ನ ಯಾವ ಆದೇಶವನ್ನು ನಾವು ನೆರವೇರಿಸೋಣ? ನಾವೆಲ್ಲರೂ ನಿನ್ನ ಮಕ್ಕಳು. ನೀನು ನಮಗೆ ಆಜ್ಞೆಯನ್ನು ಮಾಡು ಎಂದು ಹೇಳಿದರು.

ತೇಷಾಂ ತದ್ ಭಾಷಿತಂ ಶ್ರುತ್ವಾ ಮಾಧವೀ ಪರಯಾ ಮುದಾ ।
ಪಿತರಂ ಸಮುಪಾಗಚ್ಛದ್ ಯಯಾತಿಂ ಸಾ ವವಂದ ಚ ॥೨೪॥

ಸ್ಪೃಷ್ಟ್ವಾ ಮೂರ್ಧ್ನಿ ತಾನ್ ಪುತ್ರಾನ್ ತಾಪಸೀ ವಾಕ್ಯಮಬ್ರವೀತ್ ॥

ಅವರ ಆ ಮಾತನ್ನು ಕೇಳಿದ ಮಾಧವಿಯು ಬಹಳ ಸಂತೋಷದಿಂದ ತಂದೆಯಾದ ಯಯಾತಿಯ ಹತ್ತಿರ ಹೋಗಿ ಅವನಿಗೆ ನಮಸ್ಕರಿಸಿದಳು. ತಾಪಸಿಯಾದ ಅವಳು ತನ್ನ ಮಕ್ಕಳ ಶಿರಸ್ಸನ್ನು ಮುಟ್ಟಿ ಹೀಗೆ ಮಾತನಾಡಿದಳು.

ದೌಹಿತ್ರಾಸ್ತವ ರಾಜೇಂದ್ರ ಮಮ ಪುತ್ರಾ ನ ತೇ ಪರಾಃ ।
ಇಮೇ ತ್ವಾಂ ತಾರಯಿಷ್ಯಂತಿ ದೃಷ್ಟಮೇತತ್ ಪುರಾತನಮ್ ॥೨೬॥

ಎಲೈ ರಾಜೇಂದ್ರನೇ, ಇವರು ನಿನ್ನ ದೌಹಿತ್ರರು. ನನ್ನ ಮಕ್ಕಳು. ಬೇರೆಯವರಲ್ಲ. ಇವರು ನಿನ್ನನ್ನು ಸಂಕಟದಿಂದ ಪಾರುಮಾಡುವರು. ಇದು ಹಿಂದಿನಿಂದಲೂ ನಡೆದುಕೊಂಡು ಬಂದಿರುವುದು ಕಂಡಿದೆ.

ಅಹಂ ತೇ ದುಹಿತಾ ರಾಜನ್ ಮಾಧವೀ ಮೃಗಚಾರಿಣೀ ।
ಮಯಾऽಪ್ಯುಪಚಿತೋ ಧರ್ಮಃ ತತೋऽರ್ಧಂ ಪ್ರತಿಗೃಹ್ಯತಾಮ್ ॥

ಎಲೈ ರಾಜನೇ, ನಾನು ನಿನ್ನ ಮಗಳಾದ ಮೃಗಚಾರಿಣಿಯಾದ ಮಾಧವಿ. ನಾನೂ ಸಹ ಧರ್ಮವನ್ನು ಸಂಪಾದಿಸಿದ್ದೇನೆ. ಅದರ ಅರ್ಧಭಾಗವನ್ನು ನೀನು ಸ್ವೀಕರಿಸು.

ಯಸ್ಮಾದ್ ರಾಜನ್ ನರಾಃ ಸರ್ವೇ ಅಪತ್ಯಫಲಭಾಗಿನಃ ।
ತಸ್ಮಾದಿಚ್ಛಂತಿ ದೌಹಿತ್ರಾನ್ ಯಥಾ ತ್ವಂ ವಸುಧಾಧಿಪ ॥೨೮॥

ಎಲೈ ರಾಜನೇ, ಮನುಷ್ಯರೆಲ್ಲರೂ ಮಕ್ಕಳು ಸಂಪಾದಿಸಿದ ಪುಣ್ಯಕ್ಕೆ ಭಾಗಿಗಳಾಗುವುದರಿಂದ ಎಲೈ ರಾಜನೇ, ನಿನ್ನಂತೆ ದೌಹಿತ್ರರನ್ನು ಬಯಸುತ್ತಾರೆ (ಎಂದು ಹೇಳಿದಳು).

ತತಸ್ತೇ ಪಾರ್ಥಿವಾಃ ಸರ್ವೇ ಶಿರಸಾ ಜನನೀಂ ತದಾ ।
ಅಭಿವಾದ್ಯ ನಮಸ್ಕೃತ್ಯ ಮಾತಾಮಹಮಥಾಬ್ರುವನ್ ॥೨೯॥

ಉಚ್ಚೈರನುಪಮೈಃ ಸ್ನಿಗ್ಧೈಃ ಸ್ವರೈರಾಪೂರ್ಯ ಮೇದಿನೀಮ್ ।
ಮಾತಾಮಹಂ ನೃಪತಯಸ್ತಾರಯಂತೋ ದಿವಶ್ಚ್ಯುತಮ್ ॥೩೦॥

ರಾಜಧರ್ಮಗುಣೋಪೇತಾಃ ಸತ್ಯಧರ್ಮಪರಾಯಣಾಃ ।
ದೌಹಿತ್ರಾಸ್ತೇ ವಯಂ ರಾಜನ್ ದಿವಮಾರೋಹ ಪಾರ್ಥಿವ ॥೩೧॥

ಆಗ ಆ ರಾಜರೆಲ್ಲರೂ ತಮ್ಮ ತಾಯಿಗೆ ಶಿರಸಾ ನಮಸ್ಕಾರವನ್ನು ಮಾಡಿ ಮಾತಾಮಹನಾದ ಯಯಾತಿಯನ್ನು ಕುರಿತು ತಮ್ಮ ಉಚ್ಚವಾದ, ಅಸದೃಶವಾದ, ಗಂಭೀರವಾದ ಸ್ವರದಿಂದ ಭೂಮಿಯನ್ನೆಲ್ಲಾ ತುಂಬುತ್ತಾ ಸ್ವರ್ಗದಿಂದ ಬಿದ್ದ ಮಾತಾಮಹನನ್ನು ಸಂಕಟದಿಂದ ಪಾರು ಮಾಡುತ್ತಾ ಎಲೈ ರಾಜನೇ, ನಾವು ರಾಜಧರ್ಮಗುಣಗಳಿಂದ ಕೂಡಿದ ಸತ್ಯಧರ್ಮಪರಾಯಣರಾದ ನಿನ್ನ ದೌಹಿತ್ರರು. ಎಲೈ ರಾಜನೇ, ಆ ಕಾರಣದಿಂದ ನೀನು ಪುನಃ ಸ್ವರ್ಗಕ್ಕೆ ಹೋಗುವವನಾಗು ಎಂದು ಹೇಳಿದರು.

ಅಥಾಕಸ್ಮಾದುಪಗತೋ ಗಾಲವೋಽಪ್ಯಾಹ ಪಾರ್ಥಿವಮ್ ॥೩೨॥

ತಪಸೋ ಮೇಽಷ್ಟಭಾಗೇನ ಸ್ವರ್ಗಮಾರೋಹತಾಂ ಭವಾನ್ ॥೩೩॥

ಆಗ ಅಕಸ್ಮಾತ್ತಾಗಿ ಅಲ್ಲಿಗೆ ಬಂದ ಗಾಲವರೂ ಸಹ ರಾಜನನ್ನು ಕುರಿತು ನನ್ನ ತಪಸ್ಸಿನ ಎಂಟನೆಯ ಒಂದು ಭಾಗದಿಂದ ನೀನು ಸ್ವರ್ಗಾರೋಹಣವನ್ನು ಮಾಡು ಎಂದು ಹೇಳಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ವಿಂಶೋತ್ತರಶತತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ಏಕಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಇಪ್ಪತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತೊಂದನೆಯ ಅಧ್ಯಾಯ

ತನ್ನ ದೌಹಿತ್ರರು ಕೊಟ್ಟ ಪುಣ್ಯಫಲ ಪ್ರಭಾವದಿಂದ ಯಯಾತಿಯ ಸ್ವರ್ಗಗಮನ

ನಾರದಃ

ಪ್ರತ್ಯಭಿಜ್ಞಾತಮಾತ್ರೋಽಥ ಸದ್ಭಿಸ್ತೈರ್ನರಪುಂಗವೈಃ ।
ಯಯಾತಿರ್ದಿವ್ಯಸಂಸ್ಥಾನೋ ಬಭೂವ ವಿಗತಜ್ವರಃ ॥೧॥

ಸಮಾರುರೋಹ ನೃಪತಿರಸ್ಪೃಶನ್ ವಸುಧಾತಲಮ್ ॥೨॥

ನಾರದ– ಆ ನರಶ್ರೇಷ್ಠರಾದ ಸಜ್ಜನರು ಯಯಾತಿಯನ್ನು ಗುರುತಿಸುತ್ತಿರಲು ಯಯಾತಿಯು ದಿವ್ಯರೂಪವನ್ನು ಧರಿಸಿ ಚಿಂತಾಹೀನನಾದನು. ಭೂಮಿಯನ್ನು ಸ್ಪರ್ಶ ಮಾಡದೆ ರಾಜನು ಸ್ವರ್ಗವನ್ನು ಏರಲು ಪ್ರಾರಂಭಿಸಿದನು.

ದಿವ್ಯಮಾಲ್ಯಾಂಬರಧರೋ ದಿವ್ಯಾಭರಣಭೂಷಿತಃ ।
ದಿವ್ಯಗಂಧಗುಣೋಪೇತೋ ನ ಪೃಥ್ವೀಮಸ್ಪೃಶನ್ ಪದಾ ॥೩॥

ದಿವ್ಯಮಾಲ್ಯ, ವಸ್ತ್ರಗಳನ್ನು ಧರಿಸಿ, ದಿವ್ಯಾಭರಣಭೂಷಿತನಾಗಿ, ದಿವ್ಯಗಂಧ ಲಿಪ್ತನಾಗಿ ಆಗ ರಾಜನು ಭೂಮಿಯ ಸ್ಪರ್ಶವನ್ನು ಮಾಡದೆ ನಿಂತನು.

ತತೋ ವಸುಮನಾಃ ಪೂರ್ವಮುಚ್ಚೈರುಚ್ಚಾರಯನ್ ವಚಃ ।
ಖ್ಯಾತೋ ದಾನಪತಿರ್ಲೋಕೇ ವ್ಯಾಜಹಾರ ನೃಪಂ ತದಾ ॥೪॥

ಪ್ರಾಪ್ತವಾನಸ್ಮಿ ಯಲ್ಲೋಕೇ ಸರ್ವವರ್ಣೇಷ್ವಗರ್ಹಯಾ ।
ತದಪ್ಯಥ ಚ ದಾಸ್ಯಾಮಿ ತೇನ ಸಂಯುಜ್ಯತಾಂ ಭವಾನ್ ॥೫॥

ಯತ್ಫಲಂ ದಾನಶೀಲಸ್ಯ ಕ್ಷಮಾಶೀಲಸ್ಯ ಯತ್ ಫಲಮ್ ।
ಯಚ್ಚ ಮೇ ಫಲಮಾಧಾನೇ ತೇನ ಸಂಯುಜ್ಯತಾಂ ಭವಾನ್ ॥೬॥

ಆಗ ಲೋಕದಲ್ಲಿ ದಾನಪತಿ ಎಂದು ವಿಖ್ಯಾತನಾದ ವಸುಮನನು ಗಟ್ಟಿಯಾದ ಸ್ವರದಲ್ಲಿ ರಾಜನನ್ನು ಕುರಿತು, ನಾನು ಲೋಕದಲ್ಲಿ ಯಾವ ವರ್ಣದವರನ್ನೂ ನಿಂದಿಸದೆ ಯಾವ ಪುಣ್ಯವನ್ನು ಗಳಿಸಿದ್ದೇನೆಯೋ ಅದನ್ನು ನಿನಗೆ ಕೊಡುವೆನು. ನೀನು ಅದರಿಂದ ಯುಕ್ತನಾಗು. ದಾನಶೀಲನಾದ ನನಗೆ ಕ್ಷಮಾಶೀಲನಾದುದರಿಂದ ಮತ್ತು ಗರ್ಭಾಧಾನ ಮಾಡಿದುದರಿಂದ ಏನು ಪುಣ್ಯ ಉಂಟಾಗಿದೆಯೋ ಅದರ ಸಂಯೋಗವನ್ನೂ ಹೊಂದುವವನಾಗು ಎಂದು ಹೇಳಿದನು.

ತತಃ ಪ್ರತರ್ದನೋಽಪ್ಯಾಹ ವಾಚಂ ಕ್ಷತ್ರಿಯಪುಂಗವಃ ॥೭॥

ಯಥಾ ಧರ್ಮರತಿರ್ನಿತ್ಯಂ ನಿತ್ಯಂ ಯುದ್ಧಪರಾಯಣಃ ।
ಪ್ರಾಪ್ತವಾನಸ್ಮಿ ಯಲ್ಲೋಕೇ ಕ್ಷತ್ರವಂಶೋದ್ಭವಂ ಯಶಃ ॥೮॥

ವೀರಶಬ್ದಫಲಂ ಚೈವ ತೇನ ಸಂಯುಜ್ಯತಾಂ ಭವಾನ್ ।
ಯಥಾ ಧರ್ಮೇ ರತಿರ್ನಿತ್ಯಂ ತೇನ ಸತ್ಯೇನ ಸ್ವಂ ವ್ರಜ ॥೯॥

ಆಗ ಕ್ಷತ್ರಿಯಶ್ರೇಷ್ಠನಾದ ಪ್ರತರ್ದನನೂ ಸಹ, ಹೇಗೆ ನಾನು ನಿತ್ಯವೂ ಧರ್ಮರತನಾಗಿ ಯುದ್ಧಪರಾಯಣನಾಗಿ ಕ್ಷತ್ರಿಯ ವಂಶದಲ್ಲಿ ಉಂಟಾದ ಕೀರ್ತಿಯನ್ನು ಪಡೆದಿದ್ದೇನೆಯೋ ಮತ್ತು ವೀರಶಬ್ದವನ್ನು ಪಡೆದಿದ್ದೇನೆಯೋ ಆ ಪುಣ್ಯದಿಂದ ನೀನು ಸಂಯೋಗವನ್ನು ಹೊಂದುವವನಾಗು. ನನಗೆ ಧರ್ಮದಲ್ಲಿ ಹೇಗೆ ನಿತ್ಯವಾದ ಪ್ರೀತಿ ಇದೆಯೋ ಆ ಸತ್ಯದಿಂದ ನೀನು ಸ್ವರ್ಗಕ್ಕೆ ಹೋಗುವವನಾಗು ಎಂದು ಮಾತನಾಡಿದನು.

ಶಿಬಿರೌಶೀನರೋ ಧೀಮಾನುವಾಚ ಮಧುರಾಂ ಗಿರಮ್ ॥೧೦॥

ಉಶೀನರನ ಪುತ್ರನಾದ ಮೇಧಾವಿಯಾದ ಶಿಬಿಯು ಮಧುರವಾಗಿ ಮಾತನಾಡಿದನು.

ಯಥಾ ಬಾಲೇಷು ನಾರೀಷು ವೈವಾಹ್ಯೇಷು ತಥೈವ ಚ ।
ಸಂಗರೇಷು ನಿಪಾತೇಷು ತಥಾ ಚ ವ್ಯಸನೇಷು ಚ ॥೧೧॥

ಅನೃತಂ ನೋಕ್ತಪೂರ್ವಂ ಮೇ ತೇನ ಸತ್ಯೇನ ಸ್ವಂ ವ್ರಜ ॥೧೨॥

ನಾನು ಬಾಲಕರಲ್ಲಿ, ಸ್ತ್ರೀಯರಲ್ಲಿ, ವಿವಾಹದ ಸಂದರ್ಭದಲ್ಲಿ, ಯುದ್ಧದಲ್ಲಿ,ಸಂಕಟಗಳಲ್ಲಿ, ದುಃಸ್ಥಿತಿಗಳಲ್ಲಿ ಎಂದೂ ಸುಳ್ಳನ್ನು ಆಡಿಲ್ಲ. ಆ ಸತ್ಯದಿಂದ ನೀನು ಸ್ವರ್ಗಕ್ಕೆ ಹೋಗು.

ಯಥಾ ಪ್ರಾಣಾಂಶ್ಚ ರಾಜ್ಯಂ ಚ ರಾಜಕರ್ಮಸುಖಾನಿ ಚ ।
ತ್ಯಜೇಯಂ ನ ತ್ವಹಂ ಸತ್ಯಂ ತೇನ ಸತ್ಯೇನ ಸ್ವಂ ವ್ರಜ ॥೧೩॥

ನಾನು ಪ್ರಾಣವನ್ನಾದರೂ, ರಾಜ್ಯವನ್ನಾದರೂ, ರಾಜನ ಕಾರ್ಯ ಮತ್ತು ಸುಖವನ್ನಾದರೂ ಬಿಟ್ಟೇನು. ಆದರೆ ಸತ್ಯವನ್ನು ಮಾತ್ರ ಬಿಡುವುದಿಲ್ಲ. ಆ ಸತ್ಯದಿಂದ ನೀನು ಸ್ವರ್ಗಕ್ಕೆ ಹೋಗು.

ಯಥಾ ಸತ್ಯೇನ ಮೇ ಧರ್ಮೋ ಯಥಾ ಸತ್ಯೇನ ಮೇ ಯಮಃ ।
ಪ್ರೀತಃ ಶತಕ್ರತುಶ್ಚೈವ ತೇನ ಸತ್ಯೇನ ಸ್ವಂ ವ್ರಜ ॥೧೪॥

ಹೇಗೆ ಸತ್ಯದಿಂದ ನನ್ನ ಧರ್ಮವು, ಸತ್ಯದಿಂದ ಇಂದ್ರಿಯ ನಿಗ್ರಹವು ಪೀಡಿಸಲ್ಪಡುವುದಿಲ್ಲವೋ, ಹೇಗೆ ಇಂದ್ರನು ನನ್ನ ಮೇಲೆ ಪ್ರಸನ್ನನಾಗಿದ್ದಾನೆಯೋ ಆ ಸತ್ಯದಿಂದ ನೀನು ಸ್ವರ್ಗಕ್ಕೆ ಹೋಗು (ಎಂದು ಹೇಳಿದನು).

ಅಷ್ಟಕಸ್ತ್ವಥ ರಾಜರ್ಷಿಃ ಕೌಶಿಕೋ ಮಾಧವೀಸುತಃ ।
ಅನೇಕಶತಯಜ್ವಾನಂ ವಚನಂ ಪ್ರಾಹ ಧರ್ಮವಿತ್ ॥೧೫॥

ಶತಶಃ ಪುಂಡರೀಕಾ ಮೇ ಗೋಸವಾ ರಚಿತಾಃ ಪ್ರಭೋ ।
ಕ್ರತವೋ ವಾಜಪೇಯಾಶ್ಚ ತೇಷಾಂ ಫಲಮವಾಪ್ನುಹಿ ॥೧೬॥

ನ ಮೇ ರತ್ನಾನಿ ನ ಧನಂ ನ ತಥಾಽನ್ಯೇ ಪರಿಚ್ಛದಾಃ ।
ಕ್ರತುಷ್ವನುಪಯುಕ್ತಾನಿ ತೇನ ಸತ್ಯೇನ ಸ್ವಂ ವ್ರಜ ॥೧೭॥

ಅನಂತರ ರಾಜರ್ಷಿಯಾದ ವಿಶ್ವಾಮಿತ್ರ ಮತ್ತು ಮಾಧವಿಯ ಪುತ್ರನಾದ, ಧರ್ಮಜ್ಞನಾದ ಅಷ್ಟಕನು ನೂರಾರು ಯಾಗಗಳನ್ನು ಮಾಡಿದ ಯಯಾತಿಯನ್ನು ಕುರಿತು ಮಾತನಾಡಿದನು. ಎಲೈ ಪ್ರಭುವೇ, ನಾನು ನೂರಾರು ಪುಂಡರೀಕ ಯಾಗಗಳನ್ನು, ಗೋಸವಗಳನ್ನೂ ಆಚರಿಸಿದ್ದೇನೆ. ಕ್ರತುಗಳನ್ನೂ, ವಾಜಪೇಯಗಳನ್ನೂ ಆಚರಿಸಿದ್ದೇನೆ. ನೀನು ಅವುಗಳ ಫಲವನ್ನು ಹೊಂದುವವನಾಗು. ನನ್ನ ಬಳಿ ಯಜ್ಞಗಳಲ್ಲಿ ಉಪಯೋಗಿಸದಿದ್ದ ಯಾವ ರತ್ನವಾಗಲೀ, ಯಾವ ಧನವಾಗಲೀ ಅಥವಾ ಯಾವ ಸಲಕರಣೆಯಾಗಲೀ ಇಲ್ಲ. ಆ ಸತ್ಯದಿಂದ ನೀನು ಸ್ವರ್ಗಕ್ಕೆ ಹೋಗು (ಎಂದು ಹೇಳಿದನು).

ಯಥಾ ಯಥಾ ಹಿ ಜಲ್ಪಂತಿ ದೌಹಿತ್ರಾಸ್ತಂ ನರಾಧಿಪಮ್ ।
ತಥಾ ತಥಾ ವಸುಮತೀಂ ತ್ಯಕ್ತ್ವಾ ರಾಜಾ ದಿವಂ ಯಯೌ ॥೧೮॥

ದೌಹಿತ್ರರು ಆ ರಾಜನನ್ನು ಕುರಿತು ಮಾತನಾಡಿದಂತೆ ಅವನು ಭೂಮಿಯನ್ನು ಬಿಟ್ಟುಮೇಲೆ ಮೇಲೆ ಹೋಗಿ ಸ್ವರ್ಗವನ್ನು ಸೇರಿದನು.

ಏವಂ ಸರ್ವೈಃ ಸಮಸ್ತೈಸ್ತೈಃ ರಾಜಾನಃ ಸುಕೃತೈಸ್ತದಾ ।
ಯಯಾತಿಂ ಸ್ವರ್ಗತೋ ಭ್ರಷ್ಟಂ ತಾರಯಾಮಾಸುರಂಜಸಾ ॥೧೯॥

ಹೀಗೆ ಆ ರಾಜರೆಲ್ಲರೂ ಒಟ್ಟಿಗೆ ಸೇರಿ ತಮ್ಮ ಪುಣ್ಯಗಳಿಂದ ಸ್ವರ್ಗದಿಂದ ಭ್ರಷ್ಟನಾದ ಯಯಾತಿಯನ್ನು ಸಂಕಟದಿಂದ ಚೆನ್ನಾಗಿ ಪಾರುಮಾಡಿದರು.

ದೌಹಿತ್ರಾಃ ಸ್ವೇನ ಧರ್ಮೇಣ ಯಜ್ಞದಾನಕೃತೇನ ವೈ ।
ಚತುರ್ಷು ರಾಜವಂಶೇಷು ಸಂಭೂತಾಃ ಕುಲವರ್ಧನಾಃ ॥೨೦॥

ಮಾತಾಮಹಂ ಮಹಾಪ್ರಾಜ್ಞಂ ದಿವಮಾರೋಪಯಂತ ತೇ ॥೨೧॥

ನಾಲ್ಕು ರಾಜವಂಶಗಳಲ್ಲಿ ಜನಿಸಿದ ಕುಲವರ್ಧನರಾದ ಆ ದೌಹಿತ್ರರು ಯಜ್ಞ-ದಾನಗಳಿಂದ ಉಂಟಾದ ತಮ್ಮ ಪುಣ್ಯದಿಂದ ಮಹಾಪ್ರಾಜ್ಞನಾದ ತಮ್ಮ ಮಾತಾಮಹನನ್ನು ಸ್ವರ್ಗಕ್ಕೆ ಏರಿಸಿದರು.

ರಾಜಾನಃ

ರಾಜಧರ್ಮಗುಣೋಪೇತಾಃ ಸತ್ಯಧರ್ಮಗುಣಾನ್ವಿತಾಃ ।
ದೌಹಿತ್ರಾಸ್ತೇ ವಯಂ ರಾಜನ್ ದಿವಮಾರೋಹ ಪಾರ್ಥಿವ ॥೨೨॥

ರಾಜರು– ಎಲೈ ರಾಜನೇ, ನಾವು ರಾಜಧರ್ಮಗಳಿಂದಲೂ ಮತ್ತು ಗುಣಗಳಿಂದಲೂ ಕೂಡಿದ, ಸತ್ಯಧರ್ಮಗುಣ ಯುಕ್ತರಾದ ನಿನ್ನ ದೌಹಿತ್ರರು. ಎಲೈ ಪಾರ್ಥಿವನೇ, ಸ್ವರ್ಗಕ್ಕೆ ಹೋಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕವಿಂಶೋತ್ತರಶತತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ದ್ವಿಪಂಚಾಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಇಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತೆರಡನೆಯ ಅಧ್ಯಾಯ

ಯಯಾತಿ-ಚತುರ್ಮುಖರ ಸಂವಾದವನ್ನು ಹೇಳಿ, ದುರ್ಯೋಧನನಿಗೆ ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳಲು ನಾರದರ ಒತ್ತಾಯ.

ನಾರದಃ

ಸದ್ಭಿರಾರೋಪಿತಃ ಸ್ವರ್ಗಂ ಪಾರ್ಥಿವೈರ್ಭೂರಿದಕ್ಷಿಣೈಃ ।
ಅಭ್ಯನುಜ್ಞಾಯ ದೌಹಿತ್ರಾನ್ ಯಯಾತಿರ್ದಿವಮಾಸ್ಥಿತಃ ॥೧॥

ನಾರದ- ಭೂರಿದಕ್ಷಿಣೆಯನ್ನು ಕೊಡುವ ಸಜ್ಜನರಾದ ರಾಜರಿಂದ ಯಯಾತಿಯು ಸ್ವರ್ಗವನ್ನು ಹೊಂದಿದನು. ದೌಹಿತ್ರರ ಅನುಮತಿಯನ್ನು ಪಡೆದು ಯಯಾತಿಯು ಸ್ವರ್ಗದಲ್ಲಿ ನೆಲೆಸಿದನು.

ಅಭಿವೃಷ್ಟಶ್ಚ ವರ್ಷೇಣ ನಾನಾಪುಷ್ಪಸುಗಂಧಿನಾ ।
ಪರಿಷ್ವಕ್ತಶ್ಚ ಪುಣ್ಯೇನ ವಾಯುನಾ ಚ ಸುಗಂಧಿನಾ ॥೨॥

ನಾನಾ ಸುಗಂಧಪುಷ್ಪಗಳ ಪುಷ್ಪವೃಷ್ಟಿಯನ್ನೂ, ಸುಗಂಧಯುಕ್ತವಾದ ಪುಣ್ಯವಾದ ವಾಯುವಿನ ಆಲಿಂಗನವನ್ನೂ ಅನುಭವಿಸಿದನು.

ಅಚಲಂ ಸ್ಥಾನಮಾರುಹ್ಯ ದೌಹಿತ್ರಫಲನಿರ್ಜಿತಮ್ ।
ಕರ್ಮಭಿಃ ಸ್ವೈರುಪಚಿತೋ ಜಜ್ವಾಲ ಪರಯಾ ಶ್ರಿಯಾ ॥೩॥

ದೌಹಿತ್ರರ ಪುಣ್ಯದಿಂದ ಸಂಪಾದಿಸಿದ ಅಚಲವಾದ ಸ್ಥಾನವನ್ನು ಹೊಂದಿ, ತನ್ನ ಕರ್ಮಗಳಿಂದ ಅಭಿವೃದ್ಧಿಯನ್ನು ಹೊಂದಿ ಶ್ರೇಷ್ಠವಾದ ಕಾಂತಿಯಿಂದ ಬೆಳಗಿದನು.

ಉಪಗೀತೋಪನೃತ್ತಶ್ಚ ಗಂಧರ್ವಾಪ್ಸರಸಾಂ ಗಣೈಃ ।
ಪ್ರೀತ್ಯಾ ಪ್ರತಿಗೃಹೀತಶ್ಚ ಸ್ವರ್ಗೇ ದುಂದುಭಿನಿಸ್ವನೈಃ ॥೪॥

ಗಂಧರ್ವರ ಮತ್ತು ಅಪ್ಸರೆಯರ ಗಣಗಳು ಅವನ ಸಮೀಪದಲ್ಲಿ ನೃತ್ಯ, ಗಾನಗಳನ್ನು ಮಾಡಿದರು. ಸ್ವರ್ಗದಲ್ಲಿ ದುಂದುಭಿ ನಾದಪೂರ್ವಕವಾಗಿ ಅವನು ಪ್ರೀತಿಯಿಂದ ಸ್ವೀಕರಿಸಲ್ಪಟ್ಟನು.

ಅಭಿಷ್ಟುತಶ್ಚ ವಿವಿಧೈಃ ದೇವರಾಜರ್ಷಿಚಾರಣೈಃ ।
ಅರ್ಚಿತಶ್ಚೋತ್ತಮಾರ್ಘೇಣ ದೈವತೈರಭಿನಂದಿತಃ ॥೫॥

ದೇವರ್ಷಿಗಳಿಂದಲೂ, ರಾಜರ್ಷಿಗಳಿಂದಲೂ ಮತ್ತು ಚಾರರಿಂದಲೂ ಅನೇಕ ವಿಧವಾಗಿ ಸ್ತೋತ್ರ ಮಾಡಲ್ಪಟ್ಟು ಬೆಲೆಬಾಳುವ ವಸ್ತುಗಳಿಂದ ಪೂಜಿಸಲ್ಪಟ್ಟನು. ದೇವತೆಗಳು ಅವನನ್ನು ಅಭಿನಂದಿಸಿದರು.

ಪ್ರಾಪ್ತಃ ಸ್ವರ್ಗಫಲಂ ಚೈವ ತಮುವಾಚ ಪಿತಾಮಹಃ ।
ನಿರ್ವೃತಂ ಶಾಂತಮನಸಂ ವಚೋಭಿಸ್ತರ್ಪಯನ್ನಿವ ॥೬॥

ಸ್ವರ್ಗಫಲವನ್ನು ಪಡೆದು ಧನ್ಯನಾಗಿ, ಶಾಂತವಾದ ಮನಸ್ಸುಳ್ಳ ಅವನನ್ನು ಕುರಿತು ಪಿತಾಮಹರಾದ ಬ್ರಹ್ಮದೇವರು ತಮ್ಮ ಮಾತುಗಳಿಂದ ತೃಪ್ತಿಪಡಿಸುತ್ತಾ ಮಾತನಾಡಿದರು.

ಬ್ರಹ್ಮಾ

ಚತುಷ್ಪಾದಸ್ತ್ವಯಾ ಧರ್ಮಶ್ಚಿತೋ ಲೌಕ್ಯೇನ ಕರ್ಮಣಾ ।
ಅಕ್ಷಯಸ್ತವ ಲೋಕೋಽಯಂ ಕೀರ್ತಿಶ್ಚೈವಾಕ್ಷಯಾ ದಿವಿ ॥೭॥

ಬ್ರಹ್ಮಾ– ನೀನು ಲೋಕದಲ್ಲಿ ವಿಹಿತವಾದ ಕರ್ಮಗಳಿಂದ ನಾಲ್ಕುಪಾದವುಳ್ಳ ಧರ್ಮವನ್ನು ಸಂಪಾದಿಸಿದ್ದೀಯೆ. ನಿನಗೆ ಈ ಲೋಕವು ಅಕ್ಷಯವಾಗಿದೆ. ಸ್ವರ್ಗದಲ್ಲಿ ನಿನ್ನ ಕೀರ್ತಿಯೂ ಅಕ್ಷಯವಾಗಿದೆ.

ಪುನಸ್ತ್ವಯ್ಯೇವ ರಾಜರ್ಷೇ ಸತ್ಕೃತೇನ ವಿಘಾತಿತಮ್ ।
ಆವೃತಂ ತಮಸಾ ಚೇತಃ ಸರ್ವೇಷಾಂ ಸ್ವರ್ಗವಾಸಿನಾಮ್ ॥೮॥

ಯೇನ ತ್ವಾಂ ನಾಭಿಜಾನಂತಿ ತತೋ ಜ್ಞಾತ್ವಾವಸಿ ಪಾತಿತಃ ।
ಪ್ರೀತ್ಯೈವ ಚಾಸಿ ದೌಹಿತ್ರೈಃ ತಾರಿತಸ್ತ್ವಮಿಹಾಗತಃ ॥೯॥

ರಾಜರ್ಷಿಯೇ, ಆದರೆ ಇಂತಹ ಸತ್ಕಾರಕ್ಕೆ ಒಳಗಾದ ನೀನು ನೀನಾಗಿಯೇ ಎಲ್ಲವನ್ನೂ ನಾಶಮಾಡಿಕೊಂಡೆ. ಸ್ವರ್ಗವಾಸಿಗಳಾದ ಎಲ್ಲರ ಮನಸ್ಸು ಅಜ್ಞಾನದಿಂದ ಕೂಡಿದುದರಿಂದ ನಿನ್ನನ್ನು ಯಾರೂ ಗುರುತಿಸಲಿಲ್ಲ. ಅದನ್ನು ತಿಳಿದ ಇಂದ್ರನಿಂದ

ನೀನು ಬೀಳಿಸಲ್ಪಟ್ಟಿದ್ದೀಯೆ. ನಿನ್ನ ದೌಹಿತ್ರರು ಪ್ರೀತಿಯಿಂದ ನಿನ್ನನ್ನು ಸಂಕಟದಿಂದ ಪಾರುಮಾಡಿದ ಕಾರಣದಿಂದ ಪುನಃ ಇಲ್ಲಿಗೆ ಬಂದಿದ್ದೀಯೆ.

ಸ್ಥಾನಂ ಚ ಪ್ರತಿಪನ್ನೋಽಸಿ ಕರ್ಮಣಾ ಸ್ವೇನ ನಿರ್ಜಿತಮ್ ।
ಅಚಲಂ ಶಾಶ್ವತಂ ಪುಣ್ಯಮುತ್ತಮಂ ಧ್ರುವಮವ್ಯಯಮ್ ॥೧೦॥

ನಿನ್ನ ಕರ್ಮಗಳಿಂದಲೇ ಸಂಪಾದಿಸಿದ ಅಚಲವಾದ, ಶಾಶ್ವತವಾದ, ಪವಿತ್ರವಾದ, ಸ್ಥಿರವಾದ ಸ್ಥಾನವನ್ನು ಹೊಂದಿದ್ದೀಯೆ.

ಯಯಾತಿಃ

ಭಗವನ್ ಸಂಶಯೋ ಮೇಽಸ್ತಿ ಕಶ್ಚಿತ್ ತಂ ಛೇತ್ತುಮರ್ಹಸಿ ।
ನ ಹ್ಯನ್ಯಮಹಮರ್ಹಾಮಿ ಪ್ರಷ್ಟುಂ ಲೋಕಪಿತಾಮಹ ॥೧೧॥

ಯಯಾತಿ– ಪೂಜ್ಯನೇ, ನನಗೆ ಒಂದು ಸಂಶಯವಿದೆ. ಅದನ್ನು ನೀನು ಪರಿಹರಿಸಬೇಕು. ಎಲೈ ಲೋಕಪಿತಾಮಹನೇ, ನಿನ್ನನ್ನು ಬಿಟ್ಟು ಯಾರಿಗೂ ಅದನ್ನು ಕೇಳಲಾರೆ.

ಬಹುವರ್ಷಸಹಸ್ರಾಂತಂ ಪ್ರಜಾಪಾಲನವರ್ಧಿತಮ್ ।
ಅನೇಕಕ್ರತುದಾನೌಘೈಃ ಯನ್ಮಯೋಪಾರ್ಜಿತಂ ಫಲಮ್ ॥೧೨॥

ಕಥಂ ತದಲ್ಪಕಾಲೇನ ಕ್ಷೀಣಂ ಯೇನಾಸ್ಮಿ ಪಾತಿತಃ ।
ಭಗವನ್ ವೇತ್ಥ ಲೋಕಾಂಶ್ಚ ಶಾಶ್ವತಾನ್ ಮಮ ನಿರ್ಮಿತಾನ್ ॥

ಕಥಂ ನು ಮಮ ತತ್ ಸರ್ವಂ ವಿಪ್ರನಷ್ಟಂ ಮಹಾದ್ಯುತೇ ॥೧೪॥

ನಾನು ಅನೇಕ ಸಹಸ್ರವರ್ಷಗಳ ಕಾಲ ಪ್ರಜಾಪಾಲನೆಯನ್ನು ಮಾಡಿ ಸಂಪಾದಿಸಿದ್ದ, ಅನೇಕ ಯಾಗಗಳನ್ನೂ ಮಾಡಿ, ದಾನಗಳನ್ನೂ ಕೊಟ್ಟು ಸಂಪಾದಿಸಿದ್ದ ಪುಣ್ಯಫಲವು ಹೇಗೆ ಅಲ್ಪಕಾಲದಲ್ಲಿ ನಾಶವನ್ನು ಹೊಂದಿ ನಾನು ಕೆಳಗೆ ಬೀಳುವಂತಾಯಿತು? ಪೂಜ್ಯನೇ, ನೀನು ನಾನು ಸಂಪಾದಿಸಿದ ಶಾಶ್ವತ ಲೋಕಗಳನ್ನು ತಿಳಿದಿದ್ದೀಯೆ. ಮಹಾದ್ಯುತಿಯೇ, ಅವೆಲ್ಲವೂ ನನಗೆ ಹೇಗೆ ನಷ್ಟವಾಯಿತು? (ಎಂದು ಕೇಳಿದನು)

ಬ್ರಹ್ಮಾ

ಬಹುವರ್ಷಸಹಸ್ರಾಂತಂ ಪ್ರಜಾಪಾಲನವರ್ಧಿತಮ್ ।
ಅನೇಕಕ್ರತುದಾನೌಘೈಃ ಯತ್ ತ್ವಯೋಪಾರ್ಜಿತಂ ಫಲಮ್ ॥೧೫॥

ತದನೇನೈವ ದೋಷೇಣ ಕ್ಷೀಣಂ ಯೇನಾಸಿ ಪಾತಿತಃ ।
ಅಭಿಮಾನೇನ ರಾಜೇಂದ್ರ ಧಿಕೃತಃ ಸ್ವರ್ಗವಾಸಿಭಿಃ ॥೧೬॥

ಬ್ರಹ್ಮಾ– ಅನೇಕ ಸಹಸ್ರವರ್ಷಗಳ ಪರ್ಯಂತ ಪ್ರಜಾಪಾಲನೆಯಿಂದ ಗಳಿಸಿದ, ಅನೇಕ ಯಜ್ಞಗಳಿಂದ ಮತ್ತು ದಾನಗಳಿಂದ ನೀನು ಗಳಿಸಿದ ಫಲವೆಲ್ಲವೂ ಎಲೈ ರಾಜೇಂದ್ರನೇ, ಈ ಒಂದು ದೋಷದಿಂದಲೇ ಕ್ಷಯವನ್ನು ಹೊಂದಿ, ಅದರಿಂದ ನೀನು ಬೀಳುವಂತಾಯಿತು. ಈ ಅಹಂಕಾರದಿಂದ ನೀನು ಸ್ವರ್ಗವಾಸಿಗಳಿಂದ ಧಿಕ್ಕಾರವನ್ನು ಹೊಂದಿದೆ.

ನಾಯಂ ಮಾನೇನ ರಾಜರ್ಷೇ ನ ಬಲೇನ ನ ಹಿಂಸಯಾ ।
ನ ಶಾಠ್ಯೇನ ನ ಮಾಯಾಭಿಃ ಲೋಕೋ ಭವತಿ ಶಾಶ್ವತಃ ॥೧೭॥

ಎಲೈ ರಾಜರ್ಷಿಯೇ, ಈ ಲೋಕವು ಅಹಂಕಾರದಿಂದಾಗಲೀ, ಬಲದಿಂದಾಗಲೀ, ಹಿಂಸೆಯಿಂದಾಗಲೀ, ಶಾಠ್ಯದಿಂದಾಗಲೀ, ಕಪಟದಿಂದಾಗಲೀ ಶಾಶ್ವತವಾಗುವುದಿಲ್ಲ.

ನಾವಮಾನ್ಯಾಸ್ತ್ವಯಾ ರಾಜನ್ನಧಮೋತ್ಕೃಷ್ಟಮಧ್ಯಮಾಃ ।
ನ ಹಿ ಮಾನಪ್ರದಗ್ಧಾನಾಂ ಕಶ್ಚಿದಸ್ತಿ ಶಮಃ ಕ್ವಚಿತ್ ॥೧೮॥

ಎಲೈ ರಾಜನೇ, ನಿನಗಿಂತ ಉತ್ತಮ, ಮಧ್ಯಮ ಮತ್ತು ಅಧಮರಾದ ಜನರನ್ನು ನೀನು ಅವಮಾನ ಮಾಡಬಾರದು. ಯಾರು ತಮ್ಮ ಅಹಂಕಾರವನ್ನು ಸುಟ್ಟು ನಿರಹಂಕಾರಿಗಳಾಗಿರುತ್ತಾರೆಯೋ ಅವರಿಗೆ ತಾವು ಸಂಪಾದಿಸಿದ ಯಾವುದೂ ನಾಶವನ್ನು ಹೊಂದುವುದಿಲ್ಲ(ವಾದಿರಾಜರು).

ಪತನಾರೋಹಣಮಿದಂ ಕಥಯಿಷ್ಯಂತಿ ಯೇ ನರಾಃ ।
ವಿಷಮಾಣ್ಯಪಿ ತೇ ಪ್ರಾಪ್ತಾಃ ತರಿಷ್ಯಂತಿ ನ ಸಂಶಯಃ ॥೧೯॥

ಸ್ವರ್ಗದಿಂದ ನಿನ್ನ ಪತನ ಮತ್ತು ಪುನಃ ಸ್ವರ್ಗಾರೋಹಣವನ್ನು ಯಾವ ಮನುಷ್ಯರು ಹೇಳುತ್ತಾರೆಯೋ ಅವರು ಸಂಕಟಗಳನ್ನು ಹೊಂದಿದರೂ ಅವುಗಳನ್ನು ದಾಟುವರು. ಇದರಲ್ಲಿ ಸಂಶಯವಿಲ್ಲ.

ನಾರದಃ

ಏಷ ದೋಷೋಽಭಿಮಾನೇನ ಪುರಾ ಪ್ರಾಪ್ತೋ ಯಯಾತಿನಾ ।
ನಿರ್ಬಧ್ನತಾಽತಿಮಾತ್ರಂ ಚ ಗಾಲವೇನ ಮಹೀಪತೇ ॥೨೦॥

ನಾರದ– ಈ ಸರ್ವಕ್ಷಯರೂಪವಾದ ದೋಷವು ಯಯಾತಿಗೆ ಅಹಂಕಾರದಿಂದ ಉಂಟಾಯಿತು. ಎಲೈ ರಾಜನೇ, ಗಾಲವರಿಗೆ ಬಹಳ ಹಠ ಮಾಡುವುದರಿಂದ ಈ ದೋಷವು ಉಂಟಾಯಿತು.

ಶ್ರೋತವ್ಯಂ ಹಿತಕಾಮಾನಾಂ ಸುಹೃದಾಂ ಭೂತಿಮಿಚ್ಛತಾಮ್ ।
ನ ಕರ್ತವ್ಯೋ ಹಿ ನಿರ್ಬಂಧೋ ನಿರ್ಬಂಧೋ ಹಿ ಕ್ಷಯಾವಹಃ ॥೨೧॥

ಹಿತವನ್ನೂ ಮತ್ತು ಸಮೃದ್ಧಿಯನ್ನೂ ಬಯಸುವ ಸ್ನೇಹಿತರ ಮಾತುಗಳನ್ನು ಕೇಳಬೇಕು. ಹಠವನ್ನು ಮಾಡಬಾರದು. ಹಠವು ವಿನಾಶವನ್ನು ತಂದೊಡ್ಡುತ್ತದೆ.

ತಸ್ಮಾತ್ ತ್ವಮಪಿ ಗಾಂಧಾರೇ ಮಾನಂ ಕ್ರೋಧಂ ಚ ವರ್ಜಯ ।
ಸಂಧತ್ಸ್ವ ಪಾಂಡವೈರ್ವೀರ ಸಂರಂಭಂ ತ್ಯಜ ಪಾರ್ಥಿವ ॥೨೨॥

ಆದ್ದರಿಂದ ಎಲೈ ಗಾಂಧಾರಿ ಪುತ್ರನೇ, ನೀನೂ ಸಹ ಅಹಂಕಾರವನ್ನೂ ಮತ್ತು ಕೋಪವನ್ನೂ ತ್ಯಜಿಸು. ಎಲೈ ವೀರನೇ, ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊ. ಎಲೈ ರಾಜನೇ, ಕ್ರೋಧವನ್ನು ಬಿಡು.

ಸ ಭವಾನ್ ಸುಹೃದಾಂ ಪಥ್ಯಂ ವಚೋ ಗೃಹ್ಣಾತು ಮಾಽನೃತಮ್ ।
ಸಮರ್ಥೈರ್ವಿಗ್ರಹಂ ಕೃತ್ವಾ ವಿಷಮಸ್ಥೋ ಭವಿಷ್ಯಸಿ ॥೨೩॥

ನೀನು ಸುಹೃಜ್ಜನರ ಹಿತವಾದ ಮಾತುಗಳನ್ನು ಸ್ವೀಕರಿಸು. ಮೋಸದ ಮಾತುಗಳನ್ನು ಕೇಳಬೇಡ. ಬಲಿಷ್ಠರ ಜೊತೆಯಲ್ಲಿ ವಿರೋಧವನ್ನು ಮಾಡಿದರೆ ನೀನು ಸಂಕಟಕ್ಕೆ ಸಿಲುಕುವಿ.

ದದಾತಿ ಯತ್ ಪಾರ್ಥಿವ ಯತ್ ಕರೋತಿ
ಯದ್ವಾ ತಪಸ್ತಪ್ಯತಿ ಯಜ್ಜುಹೋತಿ ।
ನ ತಸ್ಯ ನಾಶೋಽಸ್ತಿ ನ ಚಾಪಕರ್ಷೋ
ನಾನ್ಯಸ್ತದಶ್ನಾತಿ ಸ ಏವ ಕರ್ತಾ ॥೨೪॥

ಎಲೈ ರಾಜನೇ, ದಾನವನ್ನು ಮಾಡಿದ, ಕರ್ಮವನ್ನು ಮಾಡಿದ, ತಪಸ್ಸನ್ನು ಮಾಡಿದ, ಹೋಮವನ್ನು ಮಾಡಿದ ಪುಣ್ಯವು ನಾಶವನ್ನು ಹೊಂದುವುದಿಲ್ಲ, ಕಡಿಮೆಯೂ ಆಗುವುದಿಲ್ಲ. ಅದನ್ನು ಮಾಡಿದವನೇ ಅದರ ಫಲವನ್ನು ಭೋಗಿಸುತ್ತಾನೆ. ಇನ್ನೊಬ್ಬನು ಭೋಗಿಸುವುದಿಲ್ಲ.

ಇದಂ ಮಹಾಖ್ಯಾನಮನುತ್ತಮಂ ಮತಂ
ಬಹುಶ್ರುತಾನಾಂ ಗತರೋಷರಾಗಿಣಾಮ್ ।
ಸಮೀಕ್ಷ್ಯ ಲೋಕೇ ಬಹುಧಾ ಪ್ರಧಾವತಾಂ
ತ್ರಿವರ್ಗದೃಷ್ಟಿಃ ಪೃಥಿವೀಮುಪಾಶ್ನುತೇ ॥೨೫॥

ಬಹುಶ್ರುತರ, ರಾಗ-ದ್ವೇಷಗಳನ್ನು ಪರಿತ್ಯಾಗ ಮಾಡಿದವರ ಈ ಆಖ್ಯಾನವು ಬಹಳ ಶ್ರೇಷ್ಠವಾದುದೆಂದು ಹೇಳಲ್ಪಡುತ್ತದೆ. ಇದನ್ನು ಚಿಂತನೆ ಮಾಡುವ ನಾನಾವಿಧವಾಗಿ ಓಡಾಡುವ ಜನರಿಗೆ ಧರ್ಮಾರ್ಥಕಾಮಗಳ ದೃಷ್ಟಿಯುಂಟಾಗಿ ಅದು ಭೂಮಿಯಲ್ಲಿ ವ್ಯಾಪಿಸುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ದ್ವಾವಿಂಶೋತ್ತರಶತತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ತ್ರಿಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಇಪ್ಪತ್ತೆರಡನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಅನಂತಶಕ್ತಿಃ ಪುರುಷೋತ್ತಮೋಽಸೌ
ಶಕ್ತೋಽಪಿ ದುರ್ಯೋಧನಚಿತ್ತನಿಗ್ರಹೇ ।
ನೈವ ವ್ಯಧಾದೇನಮಧೋಕ್ತಕಾರಿಣಂ
ನಿಪಾತಯನ್ನಂಧತಮಸ್ಯನಂತಃ ॥

ಅನಂತಶಕ್ತಿಯುಳ್ಳ ಪುರುಷೋತ್ತಮ ಶ್ರೀಕೃಷ್ಣ ದುರ್ಯೋಧನನ ಪಾಪಬುದ್ಧಿಯನ್ನು ಕಳೆಯಲು ಶಕ್ತನಾಗಿದ್ದರೂ ಅವನಿಗೆ ತನ್ನ ಮಾತಿನಂತೆ ನಡೆಯಲು ಒಳಗೆ ಪ್ರೇರಣೆ ಮಾಡಲಿಲ್ಲ. ಇದು ಅವನನ್ನು ಬೇಗನೆ ಅಂಧಂತಮಸ್ಸಿನಲ್ಲಿ ಹಾಕುವುದಕ್ಕಾಗಿ.

ISBN : 978-93-81807-68-2